

ಕರ್ನಾಟಕ ಸರಕು ಮತ್ತು ಸೇವೆಗಳ

ತೆರಿಗೆ ನಿಯಮಗಳು, 2017

ಅಧಿಸೂಚನೆಗಳು

ದಿನಾಂಕ: 01–07–2017 ರಿಂದ 14–02–2020

ಕರ್ನಾಟಕ ಸರಕು ಮತ್ತು ಸೇವೆಗಳ

ತೆರಿಗೆ ನಿಯಮಗಳು, 2017

ಅಧಿಸೂಚನೆಗಳು

ದಿನಾಂಕ: 01–07–2017 ರಿಂದ 14–02–2020

ಕರ್ನಾಟಕ ಸರಕು ಮತ್ತು ಸೇವೆಗಳ
ತೆರಿಗೆ ನಿಯಮಗಳು, 2017
ಅಧಿಸೂಚನೆ
ದಿನಾಂಕ 01–07–2017 ರಿಂದ 14–02–2020

ಕ್ರಮ ಸಂಖ್ಯೆ	ಅಧಿಸೂಚನೆ	ಪುಟ ಸಂಖ್ಯೆ
1	ಅಧಿಸೂಚನೆ (4/2017), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	1–302
2	ತಿದ್ದೋಲೆ	303
3	ತಿದ್ದೋಲೆ	303–304
4	ಅಧಿಸೂಚನೆ (4–ಎ/2017) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	305–367
5	ಅಧಿಸೂಚನೆ (4–ಬಿ/2017) ಸಂಖ್ಯೆ ಆ.ಇ 47ಸಿಎಸ್ ಎಲ್ 2017	367–370
6	ಅಧಿಸೂಚನೆ (4–ಸಿ/2017) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	371–376
7	ಅಧಿಸೂಚನೆ (4–ಡಿ/2017) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	377–401
8	ಅಧಿಸೂಚನೆ (4–ಇ/2017) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	402–404
9	ಅಧಿಸೂಚನೆ (4–ಎಫ್/2017) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	405–406
10	ಅಧಿಸೂಚನೆ (4–ಜಿ/2017) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	407–409
11	ಅಧಿಸೂಚನೆ (4–ಎಚ್/2017) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	410–411
12	ಅಧಿಸೂಚನೆ (4–ಐ/2017) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	412–413
13	ಅಧಿಸೂಚನೆ (4–ಜೆ/2017) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	414–418
14	ಅಧಿಸೂಚನೆ (4–ಕೆ/2017) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	419–423
15	ಅಧಿಸೂಚನೆ (4–ಎಲ್/2017) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	424–432
16	ಅಧಿಸೂಚನೆ (4ಎಮ್/2017) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	433–445
17	ಅಧಿಸೂಚನೆ (4ಎನ್/2017) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	446–460
18	ಅಧಿಸೂಚನೆ (4–ಓ/2017) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	461–463
19	ಅಧಿಸೂಚನೆ (4–ಪಿ/2017) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	464–472
20	ಅಧಿಸೂಚನೆ (4–ಕ್ಯೂ/2017) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	473–479
21	ಅಧಿಸೂಚನೆ (4–ಆರ್/2017) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	480–481
22	ಅಧಿಸೂಚನೆ (4–ಎಸ್/2017) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	482–516
23	ಅಧಿಸೂಚನೆ (4–ಟಿ/2017) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	517
24	ಅಧಿಸೂಚನೆ (4–ಯು/2017) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	518–519
25	ಅಧಿಸೂಚನೆ (4–ವಿ/2017) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	520–529

ಕ್ರಮ ಸಂಖ್ಯೆ	ಅಧಿಸೂಚನೆ	ಪುಟ ಸಂಖ್ಯೆ
26	ಅಧಿಸೂಚನೆ (4–ಡಬ್ಲ್ಯೂ/2017) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	532–586
27	ಅಧಿಸೂಚನೆ (4–ಎ/2019) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	587–597
28	ಅಧಿಸೂಚನೆ (4–ಬಿ/2019) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	598–620
29	ಅಧಿಸೂಚನೆ (4–ಸಿ/2019) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	621–624
30	ಅಧಿಸೂಚನೆ (4–ಡಿ/2019) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	625–639
31	ಅಧಿಸೂಚನೆ (4–ಡಿಎ/2019) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	640
32	ಅಧಿಸೂಚನೆ (4–ಡಿಬಿ/2019) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	641
33	ಅಧಿಸೂಚನೆ (4–ಇ/2019) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	641–647
34	ಅಧಿಸೂಚನೆ (4–ಎಫ್/2019) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	648–652
35	ಅಧಿಸೂಚನೆ (4–ಜಿ/2019) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	653–667
36	ಅಧಿಸೂಚನೆ (4–ಎಚ್/2019) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	668
37	ಅಧಿಸೂಚನೆ (4–ಐ/2019) ಸಂಖ್ಯೆ ಆ.ಇ 47 ಸಿಎಸ್ ಎಲ್ 2017	669–670

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4/2017)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ: 29.06.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 164ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಅಂದರೆ:–

ಅಧ್ಯಾಯ–I
ಪ್ರಾರಂಭಿಕ

1. ಶೀರ್ಷಿಕೆ, ವ್ಯಾಪ್ತಿ ಮತ್ತು ಪ್ರಾರಂಭ.– (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017 ಎಂದು ಕರೆಯಬಹುದು.

(2) ನಿಯಮ 1ರಿಂದ ನಿಯಮ 26ರವರೆಗಿನ ನಿಯಮಗಳು 2017ರ ಜೂನ್ 29ನೇ ದಿನದಿಂದ ಜಾರಿಗೆ ಬಂದಿವೆ ಎಂದು ಪರಿಭಾವಿಸತಕ್ಕದ್ದು.

(3) ಎಲ್ಲಾ ಇತರ ನಿಯಮಗಳು 2017ರ ಜುಲೈ ಮೊದಲನೇ ದಿನದಿಂದ ಜಾರಿಗೆ ಬರತಕ್ಕದ್ದು

2. ಪರಿಭಾಷೆಗಳು.– ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) **"ಅಧಿನಿಯಮ"**ಎಂದರೆ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27);

(ಬಿ) **"ನಮೂನೆ"** ಎಂದರೆ ಈ ನಿಯಮಗಳಿಗೆ ಲಗತ್ತಿಸಿದ ನಮೂನೆ;

(ಸಿ) **"ಪ್ರಕರಣ"** ಎಂದರೆ ಅಧಿನಿಯಮದ ಪ್ರಕರಣ;

(ಡಿ) **"ವಿಶೇಷ ಆರ್ಥಿಕ ವಲಯ"** ಎಂಬುದು **"ವಿಶೇಷ ಆರ್ಥಿಕ ವಲಯಗಳ ಅಧಿನಿಯಮ, 2005ರ (2005ರ ಕೇಂದ್ರ** ಅಧಿನಿಯಮ 28) ಪ್ರಕರಣ 2ರ ಖಂಡ (ಝಡ್ಎ)ನಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ಇ) ಇದರಲ್ಲಿ ಉಪಯೋಗಿಸಿದ ಆದರೆ ಪರಿಭಾಷಿಸದಿರುವ ಮತ್ತು ಅಧಿನಿಯಮದಲ್ಲಿ ಪರಿಭಾಷಿಸಲಾದ ಪದಗಳು ಮತ್ತು ಪದಾವಳಿಗಳು, ಅಧಿನಿಯಮದಲ್ಲಿ ಅವುಗಳಿಗೆ ಸಂಬಂಧಿಸಿದಂತೆ ನೀಡಲಾದ ಅರ್ಥಗಳನ್ನೇ ಹೊಂದಿರತಕ್ಕದ್ದು.

ಅಧ್ಯಾಯ–II
ರಾಜಿತೆರಿಗೆ ನಿಯಮಗಳು

3. **ರಾಜಿ ತೆರಿಗೆ ವಿಧಿಸುವಿಕೆಯ ತಿಳಿಸುವುದು:**(1) ನಿಯಮ 24ರ ಉಪನಿಯಮ (1)ರ ಖಂಡ (ಬಿ)ಯ ಅಡಿಯಲ್ಲಿ ತಾತ್ಕಾಲಿಕ ಆಧಾರದ ಮೇಲೆ ನೋಂದಣಿಯ ಮಂಜೂರಾತಿಯನ್ನು ಪಡೆದಿರುವ ಮತ್ತು ಪ್ರಕರಣ 10ರ ಅಡಿಯಲ್ಲಿ

ತೆರಿಗೆಯನ್ನು ಸಂದಾಯ ಮಾಡಲು ಆಯ್ಕೆ ಮಾಡಿಕೊಂಡಿರುವ ಯಾವೊಬ್ಬ ವ್ಯಕ್ತಿಯುವಿದ್ಯುನ್ಮಾನದ ರೀತಿಯಲ್ಲಿ ಯುಕ್ತವಾಗಿ ಸಹಿಮಾಡಿದ ಅಥವಾ ವಿದ್ಯುನ್ಮಾನ ಪರಿಶೀಲನಾ ಕೋಡ್ ಮುಖಾಂತರ ಪರಿಶೀಲಿಸಲಾದ, **ನಮೂನೆ ಜಿಎಸ್‌ಟಿ ಸಿಎಂಪಿ–01**ರಲ್ಲಿ ಒಂದು ತಿಳಿಸುವಿಕೆ ಪತ್ರವನ್ನು, ಸಾಮಾನ್ಯ ಪೋರ್ಟಲ್‌ನಲ್ಲಿ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ಗೊತ್ತುಪಡಿಸಲಾದ ದಿನಕ್ಕಿಂತ ಮುಂಚಿತವಾಗಿ, ಆದರೆ ಸದರಿ ದಿನದ ನಂತರದ ಮೂವತ್ತುದಿನಗಳ ತರುವಾಯವಾಗಿ ಅಲ್ಲದೆ, ಅಥವಾ ಈ ಸಂಬಂಧದಲ್ಲಿ ಆಯುಕ್ತರು ವಿಸ್ತರಿಸಬಹುದಾದ ಅಂಥ ಮುಂದಿನ ಅವಧಿಯೊಳಗಾಗಿ ಸಲ್ಲಿಸತಕ್ಕದ್ದು.

ಪರಂತು ಗೊತ್ತುಪಡಿಸಲಾದ ದಿನದ ನಂತರ **ನಮೂನೆ ಜಿಎಸ್‌ಟಿ ಸಿಎಂಪಿ–01**ರಲ್ಲಿ ತಿಳಿಸುವಿಕೆ ಪತ್ರವನ್ನು ಸಲ್ಲಿಸಿದ್ದಲ್ಲಿ, ನೋಂದಾಯಿತ ವ್ಯಕ್ತಿಯು ಗೊತ್ತುಪಡಿಸಲಾದ ದಿನದಿಂದ ಯಾವುದೇ ತೆರಿಗೆಯನ್ನು ಸಂಗ್ರಹಿಸತಕ್ಕದ್ದಲ್ಲ ಆದರೆ ಸದರಿ ದಿನದ ನಂತರ ಮಾಡಿದ ಪೂರೈಕೆಗಳಿಗಾಗಿ ಪೂರೈಕೆಯ ಬಿಲ್ಲನ್ನು ನೀಡತಕ್ಕದ್ದು.

(2) ನಿಯಮ 8ರ ಉಪನಿಯಮ (1)ರ ಅಡಿಯಲ್ಲಿ ನೋಂದಣಿಗಾಗಿ ಅರ್ಜಿಸಲ್ಲಿಸುವ ಯಾವೊಬ್ಬ ವ್ಯಕ್ತಿಯು, ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವ ಆಯ್ಕೆಯನ್ನು **ನಮೂನೆ ಜಿಎಸ್‌ಟಿ ಆರ್‌ಇಜಿ–01ರ ಭಾಗ ಬಿ** ನಲ್ಲಿ ನೀಡಬಹುದು, ಅದನ್ನು ಸದರಿ ಪ್ರಕರಣದ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವುದಕ್ಕಾಗಿನತಿಳಿಸುವಿಕೆ ಪತ್ರವೆಂದು ಪರಿಗಣಿಸತಕ್ಕದ್ದು.

(3) ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ಆಯ್ಕೆ ಮಾಡಿಕೊಂಡಿರುವ ಯಾವೊಬ್ಬ ನೋಂದಾಯಿತ ವ್ಯಕ್ತಿಯು ವಿದ್ಯುನ್ಮಾನ ರೀತಿಯಲ್ಲಿ ಯುಕ್ತವಾಗಿ ಸಹಿ ಮಾಡಿದ ಅಥವಾ ವಿದ್ಯುನ್ಮಾನ ಪರಿಶೀಲನೆಯ ಕೋಡ್ ಮುಖಾಂತರ ಪರಿಶೀಲಿಸಲಾದ, **ನಮೂನೆಜಿಎಸ್‌ಟಿ ಸಿಎಂಪಿ–02**ರಲ್ಲಿ ಒಂದು ತಿಳಿಸುವಿಕೆ ಪತ್ರವನ್ನು, ಸಾಮಾನ್ಯ ಪೋರ್ಟಲ್‌ನಲ್ಲಿ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ಮೇಲೆ ಹೇಳಲಾದ ಪ್ರಕರಣದ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವ ಆಯ್ಕೆಯನ್ನು ಚಲಾಯಿಸಲಾಗಿರುವ ಹಣಕಾಸಿನ ವರ್ಷ ಪ್ರಾರಂಭಗೊಳ್ಳುವುದಕ್ಕೆ ಮುಂಚಿತವಾಗಿ ಸಲ್ಲಿಸತಕ್ಕದ್ದು ಮತ್ತು ನಿಯಮ 44ರ ಉಪನಿಯಮ (4)ರ ಉಪಬಂಧಗಳಿಗೆ ಅನುಸಾರವಾಗಿ **ನಮೂನೆಜಿಎಸ್‌ಟಿ ಐಟಿಸಿ–03**ರಲ್ಲಿ ಒಂದು ವಿವರಪತ್ರವನ್ನು ಸಂಬಂಧಿತ ಹಣಕಾಸಿನ ವರ್ಷ ಪ್ರಾರಂಭಗೊಳ್ಳುವ ಅರವತ್ತು ದಿನಗಳ ಅವಧಿಯ ಒಳಗಾಗಿ ಒದಗಿಸತಕ್ಕದ್ದು.

(4) ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ಉಪ ನಿಯಮ (1)ರ ಅಡಿಯಲ್ಲಿ ಒಂದು ತಿಳುವಳಿಕೆ ಪತ್ರವನ್ನು ಸಲ್ಲಿಸಿರುವ ಯಾವೊಬ್ಬ ವ್ಯಕ್ತಿಯು, ಸದರಿ ಪ್ರಕರಣದ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ಆಯ್ಕೆ ಮಾಡಿಕೊಳ್ಳುವ ದಿನಾಂಕದ ನಿಕಟಪೂರ್ವ ದಿನದಂದು ಆತನು ಹೊಂದಿರುವ, ಅನೋಂದಾಯಿತ ವ್ಯಕ್ತಿಗಳಿಂದ ಸ್ವೀಕರಿಸಿರುವ ಸರಕುಗಳ ಒಳಮುಖ ಪೂರೈಕೆಗಳನ್ನು ಒಳಗೊಂಡ ದಾಸ್ತಾನು ವಿವರಗಳನ್ನು ವಿದ್ಯುನ್ಮಾನ ರೀತಿಯಲ್ಲಿ **ನಮೂನೆ ಜಿಎಸ್‌ಟಿ ಸಿಎಂಪಿ–03**ರಲ್ಲಿ ಒಂದು ತಿಳಿಸುವಿಕೆ ಪತ್ರವನ್ನು, ಸಾಮಾನ್ಯ ಪೋರ್ಟಲ್‌ನಲ್ಲಿ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ರಾಜಿ ತೆರಿಗೆ ವಿಧಿಸುವಿಕೆಯ ಆಯ್ಕೆಯನ್ನು ಚಲಾಯಿಸಲಾಗಿರುವ ದಿನಾಂಕದಿಂದ ಅರವತ್ತು ದಿನಗಳ ಅವಧಿಯ ಒಳಗಾಗಿ ಅಥವಾ ಈ ಸಂಬಂಧದಲ್ಲಿ ಆಯುಕ್ತರು ವಿಸ್ತರಿಸಬಹುದಾದ ಅಂಥ ಹೆಚ್ಚಿನ ಅವಧಿಯೊಳಗಾಗಿ ಒದಗಿಸತಕ್ಕದ್ದು.

(5) ಉಪನಿಯಮ (1) ಅಥವಾ ಉಪನಿಯಮ (3)ರ ಅಡಿಯಲ್ಲಿ ಯಾವುದೇ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿನ ಯಾವುದೇ ವ್ಯವಹಾರ ಸ್ಥಳಕ್ಕೆ ಸಂಬಂಧಿಸಿದಂತೆ ನೀಡಲಾದ ಯಾವುದೇ ತಿಳಿಸುವಿಕೆ ಪತ್ರವನ್ನು, ಅದೇ ಶಾಶ್ವತ ಖಾತೆ ಸಂಖ್ಯೆಯ ಮೇಲೆ ನೋಂದಾಯಿತವಾದ ಎಲ್ಲಾ ಇತರ ವ್ಯವಹಾರ ಸ್ಥಳಗಳಿಗೆ ಸಂಬಂಧಿಸಿದ ಒಂದು ತಿಳಿಸುವಿಕೆ ಪತ್ರ ಎಂದು ಪರಿಭಾವಿಸತಕ್ಕದ್ದು.

4. ರಾಜಿ ತೆರಿಗೆ ವಿಧಿಸುವಿಕೆಗಾಗಿ ಜಾರಿ ದಿನಾಂಕ.– (1) ಪ್ರಕರಣ 10ರ ಅಡಿಯಲ್ಲಿನತೆರಿಗೆ ಸಂದಾಯದ ಆಯ್ಕೆಯು ನಿಯಮ 3ರ ಉಪನಿಯಮ (3)ರ ಅಡಿಯಲ್ಲಿ ತಿಳಿಸುವಿಕೆ ಪತ್ರವನ್ನು ಸಲ್ಲಿಸಿದ್ದಲ್ಲಿ ಹಣಕಾಸಿನ ವರ್ಷದ ಪ್ರಾರಂಭದಿಂದ ಮತ್ತು ಸದರಿ ನಿಯಮದ ಉಪನಿಯಮ (1)ರ ಅಡಿಯಲ್ಲಿ ತಿಳಿಸುವಿಕೆ ಪತ್ರವನ್ನು ಸಲ್ಲಿಸಿದ್ದಲ್ಲಿ ಗೊತ್ತು ಪಡಿಸಲಾದ ದಿನದಿಂದ ಜಾರಿಗೊಳ್ಳತಕ್ಕದ್ದು.

(2) ನಿಯಮ 3ರ ಉಪನಿಯಮ (2)ರ ಅಡಿಯಲ್ಲಿ ತಿಳಿಸುವಿಕೆ ಪತ್ರವನ್ನು, ಅರ್ಜಿದಾರನಿಗೆ ನೋಂದಣಿಯನ್ನು ಮಂಜೂರು ಮಾಡಿದ ನಂತರ ಮಾತ್ರ ಪರಿಗಣಿಸತಕ್ಕದ್ದು ಮತ್ತು ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವ ಆತನ ಆಯ್ಕೆಯು ನಿಯಮ 10ರ ಉಪನಿಯಮ (2) ಅಥವಾ (3)ರ ಅಡಿಯಲ್ಲಿ ನಿಗಧಿಪಡಿಸಿದ ದಿನಾಂಕದಿಂದ ಜಾರಿಗೊಳ್ಳತಕ್ಕದ್ದು.

5. ರಾಜಿ ತೆರಿಗೆ ವಿಧಿಸುವಿಕೆಗಾಗಿ ಷರತ್ತುಗಳು ಮತ್ತು ನಿರ್ಬಂಧಗಳು.– (1) ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವ ಆಯ್ಕೆಯನ್ನು ಚಲಾಯಿಸುವ ವ್ಯಕ್ತಿಯು ಕೆಳಕಂಡ ಷರತ್ತುಗಳನ್ನು ಪಾಲಿಸತಕ್ಕದ್ದು, ಅಂದರೆ:–

(ಎ) ಆತನು ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿಯಾಗಲಿ ಅಥವಾ ಅನಿವಾಸಿ ತೆರಿಗೆದಾಯಕ ವ್ಯಕ್ತಿಯಾಗಲಿ ಆಗಿರಬಾರದು;

(ಬಿ) ನಿಯಮ 3ರ ಉಪನಿಯಮ (1)ರ ಅಡಿಯಲ್ಲಿನ ಆಯ್ಕೆಯನ್ನು ಬಳಸಿಕೊಂಡಲ್ಲಿ, ಗೊತ್ತುಪಡಿಸಲಾದ ದಿನದಂದು ತಾನು ದಾಸ್ತಾನಿನಲ್ಲಿ ಹೊಂದಿರುವ ಸರಕುಗಳನ್ನು ಅಂತರ ರಾಜ್ಯ ವ್ಯಾಪಾರ ಅಥವಾ ವಾಣಿಜ್ಯ ಕ್ರಮದಲ್ಲಿ ಖರೀದಿಸಿರಬಾರದು ಅಥವಾ ಭಾರತದ ಹೊರಗಿನ ಸ್ಥಳದಿಂದ ಆಮದು ಮಾಡಿಕೊಂಡಿರಬಾರದು ಅಥವಾ ರಾಜ್ಯದ ಹೊರಗಡೆ ಇರುವಆತನ ಶಾಖೆಯಿಂದ ಅಥವಾ ರಾಜ್ಯದ ಹೊರಗಡೆ ಇರುವ ತನ್ನ ಏಜೆಂಟ್ ಅಥವಾ ಪ್ರಧಾನಕರ್ತನಿಂದ ಸ್ವೀಕರಿಸಿರಬಾರದು;

(ಸಿ) ತನ್ನ ದಾಸ್ತಾನಿನಲ್ಲಿ ಹೊಂದಿರುವ ಸರಕುಗಳನ್ನು ಅನೋಂದಾಯಿತ ಪೂರೈಕೆದಾರನಿಂದ ಖರೀದಿಸಿರಬಾರದು ಮತ್ತು ಖರೀದಿಸಿದ್ದಲ್ಲಿ ಪ್ರಕರಣ 9ರ ಉಪಪ್ರಕರಣ (4)ರ ಅಡಿಯಲ್ಲಿ ಆತನು ತೆರಿಗೆ ಸಂದಾಯ ಮಾಡಿರಬೇಕು;

(ಡಿ) ಆತನು ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಒಳಮುಖ ಪೂರೈಕೆಯ ಮೇಲೆ ಪ್ರಕರಣ 9ರ ಉಪಪ್ರಕರಣ (3) ಅಥವಾ ಉಪಪ್ರಕರಣ (4)ರ ಅಡಿಯಲ್ಲಿ ತೆರಿಗೆ ಸಂದಾಯ ಮಾಡತಕ್ಕದ್ದು;

(ಇ) ಆತನು ಹಿಂದಿನ ಹಣಕಾಸು ವರ್ಷದಲ್ಲಿ, ಪ್ರಕರಣ 10ರ ಉಪಪ್ರಕರಣ (2)ರ ಖಂಡ (ಇ)ಯ ಅಡಿಯಲ್ಲಿ ಅಧಿಸೂಚಿಸಿದ ಸರಕುಗಳ ತಯಾರಿಕೆಯಲ್ಲಿ ತೊಡಗಿದ್ದಿರಬಾರದು;

(ಎಫ್) ಆತನು **"** ರಾಜಿತೆರಿಗೆಯ ತೆರಿಗೆದಾಯಕ ವ್ಯಕ್ತಿ, ಪೂರೈಕೆಗಳ ಮೇಲೆ ತೆರಿಗೆಯನ್ನು ಸಂಗ್ರಹಿಸಲು ಅರ್ಹನಲ್ಲ**"** ಎನ್ನುವ ಪದಗಳನ್ನು ತಾನು ನೀಡಿದ ಪೂರೈಕೆ ಬಿಲ್ಲಿನ ಮೇಲ್ಭಾಗದಲ್ಲಿ ನಮೂದಿಸತಕ್ಕದ್ದು;

(ಜಿ) ಆತನು ಆತನ ಪ್ರಧಾನ ವ್ಯವಹಾರ ಸ್ಥಳದ ಅಥವಾ ಪ್ರತಿಯೊಂದು ಹೆಚ್ಚುವರಿ ವ್ಯವಹಾರ ಸ್ಥಳ ಅಥವಾ ಸ್ಥಳಗಳಎದ್ದು ಕಾಣುವ ಸ್ಥಳದಲ್ಲಿ ಪ್ರದರ್ಶಿಸುವ ಪ್ರತಿಯೊಂದು ಸೂಚನಾಫಲಕ ಅಥವಾ ನಾಮಫಲಕದಲ್ಲಿ **"** ರಾಜಿತೆರಿಗೆಯ ತೆರಿಗೆದಾಯಕ ವ್ಯಕ್ತಿ**"** ಎನ್ನುವ ಪದಗಳನ್ನು ನಮೂದಿಸತಕ್ಕದ್ದು.

(2) ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವ ನೋಂದಾಯಿತ ವ್ಯಕ್ತಿಯು ಪ್ರತಿ ವರ್ಷಕ್ಕೆ ಹೊಸದಾಗಿತಿಳಿಸುವಿಕೆ ಪತ್ರವನ್ನು ಸಲ್ಲಿಸಬೇಕಾಗಿಲ್ಲ ಮತ್ತು ಆತನು ಅಧಿನಿಯಮದ ಮತ್ತು ಈ ನಿಯಮಗಳ ಉಪಬಂಧಗಳಿಗೆ ಒಳಪಟ್ಟು ಸದರಿ ಪ್ರಕರಣದ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವುದನ್ನು ಮುಂದುವರಿಸಬಹುದು.

6. ರಾಜಿ ತೆರಿಗೆ ವಿಧಿಸುವಿಕೆಯ ಸಿಂಧುತ್ವ.– (1) ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ನೋಂದಾಯಿತ ವ್ಯಕ್ತಿಯಿಂದ ಬಳಸಿಕೊಂಡ ಆಯ್ಕೆಯು ಸದರಿ ಪ್ರಕರಣ ಮತ್ತು ಈ ನಿಯಮಗಳ ಅಡಿಯಲ್ಲಿ ನಮೂದಿಸಲಾದ ಎಲ್ಲಾ ಷರತ್ತುಗಳನ್ನು ಈಡೇರಿಸುವ ವರೆಗೆ ಸಿಂಧುವಾಗಿರತಕ್ಕದ್ದು.

(2) ಉಪನಿಯಮ (1)ರಲ್ಲಿ ಉಲ್ಲೇಖಿಸಲಾದ ವ್ಯಕ್ತಿಯು, ಪ್ರಕರಣ 10ರಲ್ಲಿ ಅಥವಾ ಈ ಅಧ್ಯಾಯದ

ಉಪಬಂಧಗಳಲ್ಲಿ ನಮೂದಿಸಲಾದ ಯಾವುದೇ ಷರತ್ತುಗಳನ್ನು ನೆರವೇರಿಸುವುದನ್ನು ಆತನು ನಿಲ್ಲಿಸಿದ ದಿನದಿಂದ ಪ್ರಕರಣ 9ರ ಉಪಪ್ರಕರಣ (1)ರ ಅಡಿಯಲ್ಲಿ ತೆರಿಗೆ ಸಂದಾಯ ಮಾಡುವುದಕ್ಕೆ ಬಾಧ್ಯನಿರತಕ್ಕದ್ದು ಮತ್ತು ತದನಂತರ ಮಾಡಿದ ಪ್ರತಿಯೊಂದು ತೆರಿಗೆದಾಯಕ ಪೂರೈಕೆಗೆ ತೆರಿಗೆ ಬೆಲೆಪಟ್ಟಿಯನ್ನು ನೀಡತಕ್ಕದ್ದು ಮತ್ತು ಅಂಥ ಘಟನೆ ಸಂಭವಿಸಿದ ಏಳು ದಿನಗಳ ಒಳಗಾಗಿ **ನಮೂನೆ ಜಿಎಸ್‌ಟಿ ಸಿಎಂಪಿ–04**ರಲ್ಲಿ ಯೋಜನೆಯಿಂದ ಹಿಂದೆಸರಿಯುವಿಕೆಗಾಗಿ ಒಂದು ತಿಳಿಸುವಿಕೆ ಪತ್ರವನ್ನು ಸಹ ಸಲ್ಲಿಸತಕ್ಕದ್ದು.

(3) ರಾಜಿ ತೆರಿಗೆ ಯೋಜನೆಯಿಂದ ಹಿಂದೆ ಸರಿಯಲು ಉದ್ದೇಶಿಸಿರುವ ನೋಂದಾಯಿತ ವ್ಯಕ್ತಿಯು, ಅಂಥ ಹಿಂದೆ ಸರಿಯುವಿಕೆಯ ದಿನಾಂಕಕ್ಕಿಂತ ಮುಂಚಿತವಾಗಿ ಯುಕ್ತವಾಗಿ ಸಹಿಮಾಡಿದ ಅಥವಾ ವಿದ್ಯುನ್ಮಾನ ಪರಿಶೀಲನೆಯ ಕೋಡ್ ಮುಖಾಂತರ ಪರಿಶೀಲಿಸಿದ ಒಂದು ಅರ್ಜಿಯನ್ನು **ನಮೂನೆ ಜಿಎಸ್‌ಟಿ ಸಿಎಂಪಿ–04**ರಲ್ಲಿ, ವಿದ್ಯುನ್ಮಾನ ರೀತಿಯಲ್ಲಿ ಸಾಮಾನ್ಯ ಪೋರ್ಟಲ್‌ನಲ್ಲಿ ಸಲ್ಲಿಸತಕ್ಕದ್ದು.

(4) ನೋಂದಾಯಿತ ವ್ಯಕ್ತಿಯು ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ಅರ್ಹನಾಗಿರಲಿಲ್ಲ ಅಥವಾ ಅಧಿನಿಯಮದಉಪಬಂಧಗಳನ್ನು ಅಥವಾ ಈ ಅಧ್ಯಾಯದ ಉಪಬಂಧಗಳನ್ನು ಉಲ್ಲಂಘಿಸಿದ್ದಾನೆ ಎಂದು ನಂಬಲು ಯುಕ್ತ ಅಧಿಕಾರಿಯು ಕಾರಣಗಳನ್ನು ಹೊಂದಿದ್ದರೆ, ಆತನು ಅಂಥ ವ್ಯಕ್ತಿಗೆ, ಒಂದು ಸೂಚನಾ ಪತ್ರವನ್ನು, **ನಮೂನೆ ಜಿಎಸ್‌ಟಿ ಸಿಎಂಪಿ–05**ರಲ್ಲಿ, ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವ ಆಯ್ಕೆಯನ್ನು ಏಕೆ ನಿರಾಕರಿಸತಕ್ಕದ್ದಲ್ಲ ಎನ್ನುವುದಕ್ಕೆ ಕಾರಣಗಳನ್ನು ಅಂಥ ಸೂಚನಾ ಪತ್ರವನ್ನು ಸ್ವೀಕರಿಸಿದ ಹದಿನೈದು ದಿನಗಳ ಒಳಗಾಗಿ ತೋರಿಸುವಂತೆ ನೀಡಬಹುದು.

(5) ಉಪನಿಯಮ (4)ರ ಅಡಿಯಲ್ಲಿ ನೀಡಲಾದ ಕಾರಣ ಕೇಳುವ ಸೂಚನಾ ಪತ್ರಕ್ಕೆ, ನೋಂದಾಯಿತ ವ್ಯಕ್ತಿಯಿಂದ **ನಮೂನೆ ಜಿಎಸ್‌ಟಿ ಸಿಎಂಪಿ–06**ರಲ್ಲಿ ಉತ್ತರವನ್ನು ಸ್ವೀಕರಿಸಿದ ನಂತರ, ಯುಕ್ತ ಅಧಿಕಾರಿಯು ಅಂಥ ಉತ್ತರವನ್ನು ಸ್ವೀಕರಿಸಿದ ಮೂವತ್ತು ದಿನಗಳ ಅವಧಿಯ ಒಳಗಾಗಿ, ಸಂದರ್ಭಾನುಸಾರವಾಗಿ ಉತ್ತರವನ್ನು ಅಂಗೀಕರಿಸಿಯಾಗಲಿ, ಅಥವಾ ಆಯ್ಕೆಯ ದಿನಾಂಕದಿಂದ ಅಥವಾ ಸಂಬಂಧಪಟ್ಟ ಅಂಥ ಉಲ್ಲಂಘನೆಯ ಘಟನೆಯ ದಿನಾಂಕದಿಂದ ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವ ಆಯ್ಕೆಯನ್ನು ನಿರಾಕರಿಸಿಯಾಗಲಿಒಂದು ಆದೇಶವನ್ನು **ನಮೂನೆ ಜಿಎಸ್‌ಟಿ ಸಿಎಂಪಿ–07**ರಲ್ಲಿ ನೀಡತಕ್ಕದ್ದು

(6) ಉಪನಿಯಮ (2)ರ ಅಡಿಯಲ್ಲಿ ಒಂದು ತಿಳಿಸುವಿಕೆ ಪತ್ರವನ್ನು ಒದಗಿಸಿರುವ ಅಥವಾ ಉಪನಿಯಮ (3)ರ ಅಡಿಯಲ್ಲಿ ಹಿಂದೆಸರಿಯುವಿಕೆಯ ಒಂದು ಅರ್ಜಿಯನ್ನು ಸಲ್ಲಿಸಿರುವ ಪ್ರತಿಯೊಬ್ಬ ವ್ಯಕ್ತಿಯು ಅಥವಾ ಉಪನಿಯಮ (5)ರ ಅಡಿಯಲ್ಲಿ ಆಯ್ಕೆಯನ್ನು ಹಿಂತೆಗೆದುಕೊಳ್ಳುವ ಒಂದು ಆದೇಶವನ್ನು **ನಮೂನೆ ಜಿಎಸ್‌ಟಿ ಸಿಎಂಪಿ–07**ರಲ್ಲಿ ಹೊರಡಿಸಲಾಗಿರುವುದಕ್ಕೆ ಸಂಬಂಧಿಸಿರುವ ಒಬ್ಬ ವ್ಯಕ್ತಿಯು, ಆಯ್ಕೆಯನ್ನು ಹಿಂತೆಗೆದುಕೊಂಡಿರುವ ಅಥವಾ ನಿರಾಕರಿಸಿರುವ ದಿನಾಂಕದಂದು, ಆತನು ದಾಸ್ತಾನಿನಲ್ಲಿ ಹೊಂದಿರುವ ಹೂಡುವಳಿಗಳ ಮತ್ತು ದಾಸ್ತಾನಿನಲ್ಲಿರುವ ಅರೆ–ಸಿದ್ಧರೂಪದ ಅಥವಾ ಸಿದ್ಧರೂಪದ ಸರಕುಗಳಲ್ಲಿ ಒಳಗೊಂಡಿರುವ ಹೂಡುವಳಿಗಳ ವಿವರಗಳನ್ನು ಒಳಗೊಂಡಿರುವ ಒಂದು ವಿವರಪತ್ರವನ್ನು, ಆಯ್ಕೆಯನ್ನು ಹಿಂತೆಗೆದುಕೊಂಡ ದಿನಾಂಕದಿಂದ ಅಥವಾ ಸಂದರ್ಭಾನುಸಾರವಾಗಿ **ನಮೂನೆ ಜಿಎಸ್‌ಟಿ ಸಿಎಂಪಿ–07**ರಲ್ಲಿ ಹೊರಡಿಸಿದ ಆದೇಶದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯ ಒಳಗಾಗಿ **ನಮೂನೆ ಜಿಎಸ್‌ಟಿ ಐಟಿಸಿ–01**ರಲ್ಲಿ ಸಾಮಾನ್ಯ ಪೋರ್ಟಲ್‌ನಲ್ಲಿ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ ವಿದ್ಯುನ್ಮಾನ ರೀತಿಯಲ್ಲಿ ಒದಗಿಸತಕ್ಕದ್ದು.

(7) ಯಾವುದೇ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿನ ಯಾವುದೇ ವ್ಯವಹಾರ ಸ್ಥಳಕ್ಕೆ ಸಂಬಂಧಿಸಿದಂತೆಉಪನಿಯಮ (2) ಅಥವಾ (3)ರ ಅಡಿಯಲ್ಲಿ ಹಿಂಪಡೆಯುವಿಕೆಗಾಗಿ ಅಥವಾ ಉಪನಿಯಮ (5)ಕ್ಕೆ ಅನುಸಾರವಾಗಿ ಪ್ರಕರಣ 10ರ ಅಡಿಯಲ್ಲಿ ತೆರಿಗೆ ಸಂದಾಯದ ಆಯ್ಕೆಯನ್ನು ನಿರಾಕರಿಸುವುದಕ್ಕಾಗಿನ, ಯಾವುದೇ ತಿಳಿಸುವಿಕೆಯ ಪತ್ರ ಅಥವಾ ಅರ್ಜಿಯನ್ನು, ಅದೇ ಶಾಶ್ವತ ಖಾತೆ ಸಂಖ್ಯೆಯ ಮೇಲೆ ನೋಂದಾಯಿತವಾದ ಎಲ್ಲಾ ಇತರ ವ್ಯವಹಾರ ಸ್ಥಳಗಳಿಗೆ ಸಂಬಂಧಿಸಿದ ಒಂದು ತಿಳಿಸುವಿಕೆಯಪತ್ರ ಎಂದು ಪರಿಭಾವಿಸತಕ್ಕದ್ದು.

7. ರಾಜಿ ತೆರಿಗೆ ವಿಧಿಸುವಿಕೆಯ ತೆರಿಗೆ ದರ.– ಪ್ರಕರಣ 10 ಮತ್ತು ಈ ಅಧ್ಯಾಯದ ಉಪಬಂಧಗಳ ಅಡಿಯಲ್ಲಿ ರಾಜಿ

ತೆರಿಗೆಯನ್ನು ವಿಧಿಸುವಿಕೆಗೆಅರ್ಹರಾದ, ಕೆಳಕಂಡ ಕೋಷ್ಟಕದ ಅಂಕಣ (2)ರಲ್ಲಿ ನಿರ್ದಿಷ್ಟಪಡಿಸಿದ ನೋಂದಾಯಿತ ವ್ಯಕ್ತಿಗಳ ವರ್ಗವು, ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸದರಿ ಕೋಷ್ಟಕದ ಅಂಕಣ (3)ರಲ್ಲಿ ನಿರ್ದಿಷ್ಟಪಡಿಸಿರುವ ದರದಲ್ಲಿ ಸಂದಾಯ ಮಾಡತಕ್ಕದ್ದು:–

ಕ್ರ.ಸಂ	ನೋಂದಾಯಿತ ವ್ಯಕ್ತಿಗಳ ವರ್ಗ	ತೆರಿಗೆ ದರ
(1)	(2)	(3)
1.	ಸರ್ಕಾರವು ಅಧಿಸೂಚಿಸಬಹುದಾದ ಅಂಥ ಸರಕುಗಳ ತಯಾರಕರುಗಳನ್ನು ಹೊರತುಪಡಿಸಿದ, ತಯಾರಕರು	ಶೇಕಡಾ ಒಂದು
2.	ಅನುಸೂಚಿ IIರ ಕಂಡಿಕೆ 6ರ ಖಂಡ (ಬಿ)ದಲ್ಲಿ ಉಲ್ಲೇಖಿಸಿರುವ ಪೂರೈಕೆ ಮಾಡುವುದರಲ್ಲಿ ತೊಡಗಿರುವ ಪೂರೈಕೆದಾರರುಗಳು	ಶೇಕಡಾ ಎರಡುವರೆ
3.	ಪ್ರಕರಣ 10 ಮತ್ತು ಈ ಅಧ್ಯಾಯದ ಉಪಬಂಧಗಳ ಅಡಿಯಲ್ಲಿ ರಾಜಿ ತೆರಿಗೆ ವಿಧಿಸುವಿಕೆಗೆ ಅರ್ಹರಾದ ಯಾವುದೇ ಇತರ ಪೂರೈಕೆದಾರ	ಶೇಕಡಾ ಅರ್ಧ

ಅಧ್ಯಾಯ III
ನೋಂದಣಿ

8. ನೋಂದಣಿಗಾಗಿ ಅರ್ಜಿ.– (1) ಅನಿವಾಸಿ ತೆರಿಗೆದಾಯಕ ವ್ಯಕ್ತಿಯನ್ನು, ಪ್ರಕರಣ 51ರ ಅಡಿಯಲ್ಲಿ ಮೂಲದಲ್ಲಿ ತೆರಿಗೆಯನ್ನು ಮುರುಗಡೆ ಮಾಡಲು ಅಗತ್ಯಪಡಿಸಿದ ವ್ಯಕ್ತಿಯನ್ನು, ಪ್ರಕರಣ 52ರ ಅಡಿಯಲ್ಲಿ ಮೂಲದಲ್ಲಿ ತೆರಿಗೆಯನ್ನು ಸಂಗ್ರಹಿಸುವುದು ಮಾಡಲು ಅಗತ್ಯಪಡಿಸಿದ ವ್ಯಕ್ತಿಯನ್ನುಮತ್ತು ಭಾರತದ ಹೊರಗಡೆಯಿರುವ ಸ್ಥಳದಿಂದ, ವಿಕೀಕೃತ ಸರಕು ಮತ್ತು ಸೇವೆಗಳ ಅಧಿನಿಯಮ, 2017ರ (2017ರ ಕೇಂದ್ರ ಅಧಿನಿಯಮ 13) ಪ್ರಕರಣ 14ರಲ್ಲಿ ಉಲ್ಲೇಖಿಸಲಾದ ತೆರಿಗೆದಾಯಕನಲ್ಲದ ಆನ್‌ಲೈನ್‌ನಲ್ಲಿ ಸ್ವೀಕರಿಸುವವನಿಗೆ, ಆನ್‌ಲೈನ್ ಮಾಹಿತಿ ಮತ್ತು ದತ್ತಾಂಶ ಸಂಗ್ರಹದ ಪ್ರವೇಶಾವಕಾಶ ಅಥವಾ ಮರುಪ್ರಾಪ್ತಿ ಸೇವೆಗಳ ಪೂರೈಕೆಯನ್ನು ಮಾಡುತ್ತಿರುವ ವ್ಯಕ್ತಿಯನ್ನು ಹೊರತು ಪಡಿಸಿದಂತೆ, ಪ್ರಕರಣ 25ರ ಉಪಪ್ರಕರಣ (1)ರ ಅಡಿಯಲ್ಲಿ ನೋಂದಣಿ ಮಾಡಿಸಿಕೊಳ್ಳಲು ಬಾಧ್ಯನಿರುವ ಪ್ರತಿಯೊಬ್ಬ ವ್ಯಕ್ತಿಯು ಮತ್ತು ಪ್ರಕರಣ 25ರ ಉಪಪ್ರಕರಣ (3)ರ ಅಡಿಯಲ್ಲಿ ನೋಂದಣಿಯನ್ನು ಕೋರುವ ಪ್ರತಿಯೊಬ್ಬ ವ್ಯಕ್ತಿಯು (ಈ ಅಧ್ಯಾಯದಲ್ಲಿ ಇನ್ನು ಮುಂದೆ **"ಅರ್ಜಿದಾರ"** ಎಂದು ಉಲ್ಲೇಖಿಸಲಾಗಿದೆ) ನೋಂದಣಿಗಾಗಿ ಅರ್ಜಿ ಸಲ್ಲಿಸುವ ಮುನ್ನ, ಆತನು ಸಾಮಾನ್ಯ ಪೋರ್ಟಲ್‌ನಲ್ಲಿ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ತನ್ನ ಶಾಶ್ವತ ಖಾತೆ ಸಂಖ್ಯೆ (ಪ್ಯಾನ್), ಮೊಬೈಲ್ ಸಂಖ್ಯೆ, ಮಿಂಚೋಲೆ ವಿಳಾಸ, ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶವನ್ನು **ನಮೂನೆ ಜಿಎಸ್‌ಟಿ ಆರ್‌ಇಜಿ–01** ದ ಭಾಗ–ಎನಲ್ಲಿ ಘೋಷಿಸತಕ್ಕದ್ದು:

ಪರಂತು, ವಿಶೇಷ ಆರ್ಥಿಕ ವಲಯದಲ್ಲಿ ಘಟಕ(ಗಳನ್ನು) ವನ್ನು ಹೊಂದಿರುವ ಅಥವಾ ವಿಶೇಷ ಆರ್ಥಿಕ ವಲಯದ ಅಭಿವೃದ್ಧಿದಾರನಾದ ವ್ಯಕ್ತಿಯು ವಿಶೇಷ ಆರ್ಥಿಕ ವಲಯದ ಹೊರಗೆ ಇರುವಅವನ ಇತರ ಘಟಕಗಳಿಂದ ಭಿನ್ನವಾದ ವ್ಯವಹಾರ ಶ್ರೇಣಿನ್ನಾಗಿ ನೋಂದಣಿ ಮಾಡಿಕೊಳ್ಳಲು ಒಂದು ಪ್ರತ್ಯೇಕ ಅರ್ಜಿಯನ್ನು ಸಲ್ಲಿಸತಕ್ಕದ್ದು:

ಮತ್ತು ಪರಂತು, ಹೂಡುವಳಿ ಸೇವೆ ಹಂಚಿಕೆದಾರನಾಗಿರುವ ಪ್ರತಿಯೊಬ್ಬ ವ್ಯಕ್ತಿಯು, ಅಂಥ ಹೂಡುವಳಿ ಸೇವೆ ಹಂಚಿಕೆದಾರನಾಗಿನೋಂದಣಿ ಮಾಡಿಕೊಳ್ಳಲು ಒಂದು ಪ್ರತ್ಯೇಕ ಅರ್ಜಿಯನ್ನು ಸಲ್ಲಿಸತಕ್ಕದ್ದು:

(2) (ಎ) ಶಾಶ್ವತ ಖಾತೆ ಸಂಖ್ಯೆಯನ್ನು ನೇರ ತೆರಿಗೆಗಳ ಕೇಂದ್ರ ಮಂಡಳಿಯು ನಿರ್ವಹಿಸಿರುವ ದತ್ತಾಂಶ ಸಂಗ್ರಹದಿಂದ ಸಾಮಾನ್ಯ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಸಿಂಧುಗೊಳಿಸತಕ್ಕದ್ದು;

(ಬಿ) ಉಪನಿಯಮ (1)ರ ಅಡಿಯಲ್ಲಿ ಘೋಷಿಸಲಾದ ಮೊಬೈಲ್ ಸಂಖ್ಯೆಯನ್ನು ಸದರಿ ಮೊಬೈಲ್ ಸಂಖ್ಯೆಗೆ

ಕಳುಹಿಸಲಾದ ಒಂದು ಬಾರಿಯ ಪಾಸ್‌ವರ್ಡ್ ಮೂಲಕ ಪರಿಶೀಲಿಸತಕ್ಕದ್ದು;

(ಸಿ) ಉಪನಿಯಮ (1)ರ ಅಡಿಯಲ್ಲಿ ಘೋಷಿಸಲಾದ ಮಿಂಚೋಲೆಯ ವಿಳಾಸವನ್ನು ಸದರಿ ಮಿಂಚೋಲೆಯ ವಿಳಾಸಕ್ಕೆ ಕಳುಹಿಸಲಾದ ಪ್ರತ್ಯೇಕ ಒಂದು ಬಾರಿಯ ಪಾಸ್‌ವರ್ಡ್ ಮೂಲಕ ಪರಿಶೀಲಿಸತಕ್ಕದ್ದು;

(3) ಶಾಶ್ವತ ಖಾತೆ ಸಂಖ್ಯೆ, ಮೊಬೈಲ್ ಸಂಖ್ಯೆ, ಮತ್ತು ಮಿಂಚೋಲೆ ವಿಳಾಸಗಳ ಯಶಸ್ವಿ ಪರಿಶೀಲನೆಯ ನಂತರ, ಒಂದು ತಾತ್ಕಾಲಿಕ ಉಲ್ಲೇಖ ಸಂಖ್ಯೆಯನ್ನು ಸೃಷ್ಟಿಸತಕ್ಕದ್ದು ಮತ್ತು ಸದರಿ ಮೊಬೈಲ್ ಸಂಖ್ಯೆ ಮತ್ತು ಮಿಂಚೋಲೆಯ ವಿಳಾಸದ ಮೂಲಕ ಅರ್ಜಿದಾರನಿಗೆ ತಿಳಿಸತಕ್ಕದ್ದು.

(4) ಉಪನಿಯಮ (3)ರ ಅಡಿಯಲ್ಲಿ ಸೃಷ್ಟಿಸಲಾದ ಉಲ್ಲೇಖ ಸಂಖ್ಯೆಯನ್ನು ಉಪಯೋಗಿಸಿಕೊಂಡು ಅರ್ಜಿದಾರನು, ಯುಕ್ತವಾಗಿ ಸಹಿಮಾಡಿದ ಅಥವಾ ವಿದ್ಯುನ್ಮಾನ ಪರಿಶೀಲನಾ ಕೋಡ್‌ನ ಮುಖಾಂತರ ಪರಿಶೀಲಿಸಲಾದ, **ನಮೂನೆ ಜಿಎಸ್‌ಟಿ ಆರ್‌ಇಜಿ–01ದ ಭಾಗ–ಬಿ**ನಲ್ಲಿ ಒಂದು ಅರ್ಜಿಯನ್ನು, ಸದರಿ ನಮೂನೆಯಲ್ಲಿ ನಿರ್ದಿಷ್ಟಪಡಿಸಿದ ದಸ್ತಾವೇಜುಗಳೊಂದಿಗೆ, ಸಾಮಾನ್ಯ ಪೋರ್ಟಲ್‌ನಲ್ಲಿ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಸಲ್ಲಿಸತಕ್ಕದ್ದು.

(5) ಉಪನಿಯಮ (4)ರ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ನಂತರ, ಅರ್ಜಿದಾರನಿಗೆ ನಮೂನೆ ಜಿಎಸ್‌ಟಿ ಆರ್‌ಇಜಿ–02ರಲ್ಲಿ ಒಂದು ಸ್ವೀಕೃತಿಯನ್ನು ವಿದ್ಯುನ್ಮಾನ ರೀತಿಯಲ್ಲಿ ನೀಡತಕ್ಕದ್ದು.

(6) ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿಯಾಗಿ ನೋಂದಣಿಗೆ ಅರ್ಜಿಯನ್ನು ಸಲ್ಲಿಸುವ ಒಬ್ಬ ವ್ಯಕ್ತಿಗೆ, ಪ್ರಕರಣ 27ರ ಉಪಬಂಧಗಳಿಗೆ ಅನುಸಾರವಾಗಿ ತೆರಿಗೆಯ ಮುಂಗಡ ಠೇವಣಿಯನ್ನು ಇಡುವ ಸಲುವಾಗಿ ಒಂದು ತಾತ್ಕಾಲಿಕ ಉಲ್ಲೇಖ ಸಂಖ್ಯೆಯನ್ನು ನೀಡತಕ್ಕದ್ದು ಮತ್ತು ಉಪನಿಯಮ (5)ರ ಅಡಿಯಲ್ಲಿ ಸ್ವೀಕೃತಿಯನ್ನು ಸದರಿ ಠೇವಣಿ ಇಟ್ಟ ನಂತರ ಮಾತ್ರ ನೀಡತಕ್ಕದ್ದು.

9. ಅರ್ಜಿಯ ಪರಿಶೀಲನೆ ಮತ್ತು ಅನುಮೋದನೆ.– (1) ಅರ್ಜಿಯನ್ನು ಯುಕ್ತ ಅಧಿಕಾರಿಗೆ ಕಳುಹಿಸತಕ್ಕದ್ದು ಮತ್ತು ಆ ಅಧಿಕಾರಿಯು ಅರ್ಜಿಯನ್ನು ಮತ್ತು ಲಗತ್ತಿಸಲಾದ ದಸ್ತಾವೇಜುಗಳನ್ನು ಪರೀಕ್ಷಿಸತಕ್ಕದ್ದು ಮತ್ತು ಅವುಗಳು ಕ್ರಮ ಬದ್ಧವಾಗಿರುವುದು ಕಂಡುಬಂದರೆ ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಮೂರು ಕೆಲಸದ ದಿನಗಳ ಒಳಗಾಗಿ ಅರ್ಜಿದಾರನಿಗೆ, ನೋಂದಣಿಯ ಮಂಜೂರಾತಿಯನ್ನು ಅನುಮೋದಿಸತಕ್ಕದ್ದು.

(2) ನಿಯಮ (8)ರ ಅಡಿಯಲ್ಲಿ ಸಲ್ಲಿಸಲಾದ ಅರ್ಜಿಯು, ಯಾವುದೇ ಮಾಹಿತಿಯ ರೂಪದಲ್ಲಿಯಾಗಲಿ ಅಥವಾ ಸದರಿ ನಿಯಮಗಳ ಅಡಿಯಲ್ಲಿ ಒದಗಿಸಲು ಅಗತ್ಯವಿರುವ ಯಾವುದೇ ದಸ್ತವೇಜಿನ ರೂಪದಲ್ಲಿಯಾಗಲಿ ನ್ಯೂನ್ಯತೆಯನ್ನು ಹೊಂದಿರುವುದು ಕಂಡುಬಂದಲ್ಲಿ, ಅಥವಾ ಆ ಅರ್ಜಿಯಲ್ಲಿ ಅಥವಾ ಅದರೊಂದಿಗೆ ಒದಗಿಸಿದ ದಸ್ತಾವೇಜುಗಳಲ್ಲಿ ಒದಗಿಸಲಾದ ಯಾವುದೇ ಮಾಹಿತಿಗೆ ಸಂಬಂಧಿಸಿದಂತೆ ಯಾವುದೇ ಸ್ಪಷೀಕರಣವನ್ನು ಯುಕ್ತ ಅಧಿಕಾರಿಯು ಅಗತ್ಯಪಡಿಸಿದ್ದಲ್ಲಿ, ಅವನು ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಮೂರು ಕೆಲಸದ ದಿನಗಳ ಒಳಗಾಗಿ ಅರ್ಜಿದಾರನಿಗೆ **ನಮೂನೆ ಜಿಎಸ್‌ಟಿ ಆರ್‌ಇಜಿ–03**ರಲ್ಲಿ ಒಂದು ಸೂಚನಾಪತ್ರವನ್ನು ವಿದ್ಯುನ್ಮಾನ ರೀತಿಯಲ್ಲಿ ನೀಡತಕ್ಕದ್ದು ಮತ್ತು ಅರ್ಜಿದಾರನು ಅಂಥ ಸೂಚನಪತ್ರವನ್ನು ಸ್ವೀಕರಿಸಿದ ದಿನಾಂಕದಿಂದ ಏಳು ಕೆಲಸದ ದಿನಗಳ ಒಳಗಾಗಿ, **ನಮೂನೆ ಜಿಎಸ್‌ಟಿ ಆರ್‌ಇಜಿ–04**ರಲ್ಲಿ ಅಂಥ ಸ್ಪಷೀಕರಣ, ಮಾಹಿತಿ ಅಥವಾ ದಸ್ತಾವೇಜುಗಳನ್ನು ವಿದ್ಯುನ್ಮಾನ ರೀತಿಯಲ್ಲಿ ಒದಗಿಸತಕ್ಕದ್ದು.

ವಿವರಣೆ.– ಈ ಉಪನಿಯಮಗಳ ಉದ್ದೇಶಗಳಿಗಾಗಿ, "ಸ್ಪಷೀಕರಣ"ಎಂಬ ಪದಾವಳಿಯು **ನಮೂನೆ ಜಿಎಸ್‌ಟಿ ಆರ್‌ಇಜಿ–01ರ ಭಾಗ–ಎ** ನಲ್ಲಿ ಘೋಷಿಸಲಾದ ಶಾಶ್ವತ ಖಾತೆ ಸಂಖ್ಯೆ, ರಾಜ್ಯ, ಮೊಬೈಲ್ ಸಂಖ್ಯೆ ಮತ್ತು ಮಿಂಚೋಲೆ ವಿಳಾಸ ಇವುಗಳನ್ನು ಹೊರತುಪಡಿಸಿ ನೊಂದಣಿಯ ಅರ್ಜಿಯಲ್ಲಿ ಘೋಷಿಸಲಾದ ವಿವರಗಳ ಮಾರ್ಪಾಟು ಅಥವಾ ಸರಿಪಡಿಸುವಿಕೆಯನ್ನು ಒಳಗೊಳ್ಳುತ್ತದೆ.

(3) ಅರ್ಜಿದಾರನು ಒದಗಿಸಿದ ಸ್ಪಷ್ಟೀಕರಣ, ಮಾಹಿತಿ, ಅಥವಾ ದಸ್ತಾವೇಜುಗಳಿಂದ ಯುಕ್ತ ಅಧಿಕಾರಿಯು ತೃಪ್ತಿಹೊಂದಿದ್ದಲ್ಲಿ, ಅವನು ಅಂಥ ಸ್ಪಷ್ಟೀಕರಣ, ಮಾಹಿತಿ, ಅಥವಾ ದಸ್ತಾವೇಜುಗಳನ್ನು ಸ್ವೀಕರಿಸಿದ ದಿನಾಂಕದಿಂದ ಏಳು ಕೆಲಸದ ದಿನಗಳ ಒಳಗಾಗಿ ಅರ್ಜಿದಾರನಿಗೆ ನೋಂದಣಿಯ ಮಂಜೂರಾತಿಯನ್ನು ಅನುಮೋದಿಸಬಹುದು.

(4) ಉಪನಿಯಮ (2)ರ ಅಡಿಯಲ್ಲಿ ನೀಡಲಾದ ಸೂಚನಾಪತ್ರಕ್ಕೆ ಪ್ರತಿಯಾಗಿಅರ್ಜಿದಾರನು ಯಾವುದೇ ಉತ್ತರವನ್ನು ನೀಡದಿದ್ದಲ್ಲಿ, ಅಥವಾ ಒದಗಿಸಲಾದ ಸ್ಪಷ್ಟೀಕರಣ, ಮಾಹಿತಿ, ಅಥವಾ ದಸ್ತಾವೇಜುಗಳ ಬಗ್ಗೆ ಯುಕ್ತ ಅಧಿಕಾರಿಯು ತೃಪ್ತಿಯನ್ನು ಹೊಂದಿಲ್ಲದಿದ್ದಲ್ಲಿ, ಅವನು, ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ, ಅಂಥ ಅರ್ಜಿಯನ್ನು ತಿರಸ್ಕರಿಸತಕ್ಕದ್ದು ಮತ್ತು ಅರ್ಜಿದಾರನಿಗೆ **ನಮೂನೆ ಜಿಎಸ್‌ಟಿ ಆರ್‌ಇಜಿ–05ರಲ್ಲಿ** ವಿದ್ಯುನ್ಮಾನ ರೀತಿಯಲ್ಲಿ ತಿಳಿಸತಕ್ಕದ್ದು.

(5) ಯುಕ್ತ ಅಧಿಕಾರಿಯು,–

(ಎ) ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಮೂರು ಕೆಲಸದ ದಿನಗಳ ಒಳಗಾಗಿ, ಅಥವಾ

(ಬಿ) ಉಪನಿಯಮ (2)ರ ಅಡಿಯಲ್ಲಿ ಅರ್ಜಿದಾರನಿಂದ ಒದಗಿಸಲಾದ ಸ್ಪಷ್ಟೀಕರಣ, ಮಾಹಿತಿ, ಅಥವಾ ದಸ್ತಾವೇಜುಗಳನ್ನು ಸ್ವೀಕರಿಸಿದ ದಿನಾಂಕದಿಂದ ಏಳು ಕೆಲಸದ ದಿನಗಳ ಒಳಗಾಗಿ,

–ಯಾವುದೇ ಕ್ರಮವನ್ನು ತೆಗೆದುಕೊಳ್ಳಲು ವಿಫಲನಾದಲ್ಲಿ ನೋಂದಣಿಯ ಮಂಜುರಾತಿಯ ಅರ್ಜಿಯನ್ನು ಅನುಮೋದನೆ ಮಾಡಲಾಗಿದೆ ಎಂದು ಪರಿಭಾವಿಸತಕ್ಕದ್ದು.

10. ನೋಂದಣಿ ಪ್ರಮಾಣ ಪತ್ರ ನೀಡುವುದು.– (1) ಪ್ರಕರಣ 25ರ ಉಪಪ್ರಕರಣ (12)ರ ಉಪಬಂಧಗಳಿಗೆ ಒಳಪಟ್ಟು, ನಿಯಮ 9ರ ಅಡಿಯಲ್ಲಿ ನೋಂದಣಿ ಮಂಜೂರಾತಿಯ ಅರ್ಜಿಯನ್ನು ಅನುಮೋದಿಸಲಾಗಿದ್ದಲ್ಲಿ, **ನಮೂನೆ ಜಿಎಸ್‌ಟಿ ಆರ್‌ಇಜಿ–06ರಲ್ಲಿ** ಪ್ರಧಾನ ವ್ಯವಹಾರ ಸ್ಥಳ ಮತ್ತು ಹೆಚ್ಚುವರಿ ವ್ಯವಹಾರ ಸ್ಥಳ ಅಥವಾ ಸ್ಥಳಗಳನ್ನು ತೋರಿಸುವ ನೋಂದಣಿಯ ಪ್ರಮಾಣ ಪತ್ರವನ್ನು ಅರ್ಜಿದಾರನಿಗೆ ಸಾಮಾನ್ಯ ಪೋರ್ಟಲ್‌ನಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು ಮತ್ತು ಸರಕು ಮತ್ತು ಸೇವೆಗಳ ತೆರಿಗೆ ಗುರುತು ಸಂಖ್ಯೆಯನ್ನು ಈ ಕೆಳಕಂಡ ಅಕ್ಷರಗಳಲ್ಲಿ ನೀಡತಕ್ಕದ್ದು, ಅಂದರೆ:–

(ಎ) ರಾಜ್ಯ ಕೋಡ್‌ಗಾಗಿ ಎರಡು ಅಕ್ಷರಗಳು;

(ಬಿ) ಶಾಶ್ವತ ಖಾತೆ ಸಂಖ್ಯೆ ಅಥವಾ ತೆರಿಗೆ ಮುರುಗಡೆ ಅಥವಾ ಸಂಗ್ರಹಣಾ ಖಾತೆ ಸಂಖ್ಯೆಗಾಗಿ ಹತ್ತು ಅಕ್ಷರಗಳು;

(ಸಿ) ವ್ಯವಹಾರ ಸಂಸ್ಥೆ (ಎಂಟಿಟಿ) ಕೋಡ್‌ಗಾಗಿ ಎರಡು ಅಕ್ಷರಗಳು;

(ಡಿ) ಒಂದು ಸಂಖ್ಯಾಧಾರಿತ (ಚೆಕ್‌ಸಮ್) ಅಕ್ಷರ.

(2) ವ್ಯಕ್ತಿಯು ನೊಂದಣಿಗೆ ಬಾಧ್ಯನಾಗುವ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ನೋಂದಣಿಯ ಅರ್ಜಿಯನ್ನು ಸಲ್ಲಿಕೆ ಮಾಡಲಾಗಿದ್ದಲ್ಲಿ, ನೋಂದಣಿಯು ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(3) ಅರ್ಜಿದಾರನಿಂದ ಆತನು ನೋಂದಣಿಗೆ ಬಾಧ್ಯನಾಗುವ ದಿನಾಂಕದಿಂದ ಮೂವತ್ತು ದಿನಗಳ ನಂತರ ನೋಂದಣಿಯ ಅರ್ಜಿಯನ್ನು ಸಲ್ಲಿಕೆ ಮಾಡಲಾಗಿದ್ದಲ್ಲಿ, ನೋಂದಣಿಯ ಜಾರಿ ದಿನಾಂಕವು ನಿಯಮ 9 ರ ಉಪನಿಯಮ (1) ಅಥವಾ ಉಪನಿಯಮ (3) ಅಥವಾ ಉಪನಿಯಮ (5)ರ ಅಡಿಯಲ್ಲಿ ನೋಂದಣಿಯನ್ನು ಮಂಜೂರು ಮಾಡಿದ ದಿನಾಂಕವಾಗಿರತಕ್ಕದ್ದು.

(4) ಪ್ರತಿಯೊಂದು ನೋಂದಣಿ ಪ್ರಮಾಣಪತ್ರವು, ಈ ಅಧಿನಿಯಮದ ಅಡಿಯಲ್ಲಿನ ಯುಕ್ತ ಅಧಿಕಾರಿಯಿಂದ

ಯುಕ್ತವಾಗಿ ಸಹಿಯಾಗಿರತಕ್ಕದ್ದು ಅಥವಾ ವಿದ್ಯುನ್ಮಾನ ಪರಿಶೀಲನೆಯ ಕೋಡ್ ಮೂಲಕ ಪರಿಶೀಲಿಸಿರತಕ್ಕದ್ದು.

(5) ನಿಯಮ 9 ರ ಉಪನಿಯಮ (5)ರ ಅಡಿಯಲ್ಲಿ ನೋಂದಣಿಯನ್ನು ಮಂಜೂರು ಮಾಡಲಾಗಿದ್ದಲ್ಲಿ, ನೋಂದಣಿಯ ಸಂಖ್ಯೆಯನ್ನು ಅರ್ಜಿದಾರನಿಗೆ ತಿಳಿಸತಕ್ಕದ್ದು ಮತ್ತು ಯುಕ್ತವಾಗಿ ಸಹಿಮಾಡಿದ ಅಥವಾ ವಿದ್ಯುನ್ಮಾನ ಪರಿಶೀಲನೆಯ ಕೋಡ್ ಮೂಲಕ ಪರಿಶೀಲಿಸಿರುವ ಉಪನಿಯಮ (1) ರ ಅಡಿಯಲ್ಲಿನ ನೋಂದಣಿ ಪ್ರಮಾಣಪತ್ರವನ್ನು, ನಿಯಮ 9ರ ಉಪನಿಯಮ (5)ರಲ್ಲಿ ನಿರ್ದಿಷ್ಟಪಡಿಸಿದ ಅವಧಿಯು ಮುಗಿದ ನಂತರದ ಮೂರು ದಿನಗಳ ಒಳಗಾಗಿ ಸಾಮಾನ್ಯ ಪೋರ್ಟಲ್‌ನಲ್ಲಿ ಅವನಿಗೆ ಲಭ್ಯವಾಗುವಂತೆ ಮಾಡತಕ್ಕದ್ದು

11. ರಾಜ್ಯದ ಒಳಗೆ ಬಹು ವ್ಯವಹಾರದ ಶ್ರೇಣಿಗಳಿಗಾಗಿ ಪ್ರತ್ಯೇಕ ನೋಂದಣಿ.– (1) ರಾಜ್ಯದ ಒಳಗೆ ಬಹು ವ್ಯವಹಾರ ಶ್ರೇಣಿಗಳನ್ನು ಹೊಂದಿರುವ ಯಾವೊಬ್ಬ ವ್ಯಕ್ತಿಗೆ, ಪ್ರಕರಣ 25ರ ಉಪಪ್ರಕರಣ (2)ರ ಅಡಿಯಲ್ಲಿ ತನ್ನ ಯಾವುದೇ ವ್ಯವಹಾರ ಶ್ರೇಣಿಗಳಿಗೆ ಪ್ರತ್ಯೇಕ ನೊಂದಣಿಯು ಅಗತ್ಯವಿದ್ದಲ್ಲಿ, ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು, ಪ್ರತಿಯೊಂದು ಶ್ರೇಣಿಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ನೋಂದಣಿಯನ್ನು ಮಂಜೂರು ಮಾಡತಕ್ಕದ್ದು, ಅಂದರೆ:–

(ಎ) ಅಂಥ ವ್ಯಕ್ತಿಯು ಪ್ರಕರಣ 2ರ ಖಂಡ (18)ರಲ್ಲಿ ಪರಿಭಾಷಿಸಿದಂತೆ ಒಂದಕ್ಕಿಂತ ಹೆಚ್ಚಿನ ವ್ಯವಹಾರ ಶ್ರೇಣಿಯನ್ನು ಹೊಂದಿರಬೇಕು;

(ಬಿ) ಒಬ್ಬ ತೆರಿಗೆದಾಯಕ ವ್ಯಕ್ತಿಯ ವ್ಯವಹಾರ ಶ್ರೇಣಿಗೆ, ಅದೇ ವ್ಯಕ್ತಿಯ ಇತರೇ ವ್ಯವಹಾರ ಶ್ರೇಣಿಗಳಲ್ಲಿನ ಯಾವುದೇ ಒಂದು ಶ್ರೇಣಿಯು ಪ್ರಕರಣ 9ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುತ್ತಿದ್ದರೆ, ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ನೋಂದಣಿಯನ್ನು ಮಂಜೂರು ಮಾಡತಕ್ಕದ್ದಲ್ಲ.

(ಸಿ) ಪ್ರತ್ಯೇಕವಾಗಿ ನೋಂದಣಿಗೊಂಡಿರುವ ಅಂಥ ವ್ಯಕ್ತಿಯ ಎಲ್ಲಾ ವ್ಯವಹಾರ ಶ್ರೇಣಿಗಳು, ಅಂಥ ವ್ಯಕ್ತಿಯ ಇನ್ನಿತರ ನೋಂದಾಯಿತ ವ್ಯವಹಾರ ಶ್ರೇಣಿಗೆ ಮಾಡಲಾದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಯ ಮೇಲೆ ಅಧಿನಿಯಮದ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡತಕ್ಕದ್ದು ಮತ್ತು ಅಂಥ ಪೂರೈಕೆಗಾಗಿ ಒಂದು ತೆರಿಗೆ ಬೆಲೆಪಟ್ಟಿಯನ್ನು ನೀಡತಕ್ಕದ್ದು.

ವಿವರಣೆ.– ಖಂಡ (ಬಿ)ಯ ಉದ್ದೇಶಗಳಿಗಾಗಿ, ಪ್ರತ್ಯೇಕ ನೋಂದಣಿಯನ್ನು ಮಂಜೂರು ಮಾಡಲಾದ ಒಬ್ಬ ನೋಂದಾಯಿತ ವ್ಯಕ್ತಿಯ ಯಾವುದೇ ವ್ಯವಹಾರ ಶ್ರೇಣಿಯು ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ಅನರ್ಹವಾದಲ್ಲಿ, ಸದರಿ ವ್ಯಕ್ತಿಯ ಎಲ್ಲಾ ಇತರೇ ವ್ಯವಹಾರ ಶ್ರೇಣಿಗಳು ಸದರಿ ಪ್ರಕರಣದ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ಅನರ್ಹವಾಗತಕ್ಕದ್ದು ಎಂದು ಈ ಮೂಲಕ ಸ್ಪಷ್ಟೀಕರಿಸಲಾಗಿದೆ.

(2) ವ್ಯವಹಾರ ಶ್ರೇಣಿಗಳಿಗೆ ಪ್ರತ್ಯೇಕ ನೋಂದಣಿಯನ್ನು ಪಡೆಯಲು ಅರ್ಹನಾದ ಒಬ್ಬ ನೋಂದಾಯಿತ ವ್ಯಕ್ತಿಯು, ಅಂಥ ಪ್ರತಿಯೊಂದು ಶ್ರೇಣಿಗೆ ಸಂಬಂಧಿಸಿದಂತೆ **ನಮೂನೆ ಜಿಎಸ್‌ಟಿ ಆರ್‌ಇಜಿ–01ರಲ್ಲಿ** ಒಂದು ಪ್ರತ್ಯೇಕ ಅರ್ಜಿಯನ್ನು ಸಲ್ಲಿಸಬಹುದು.

(3) ಈ ನಿಯಮದ ಅಡಿಯಲ್ಲಿ ಸಲ್ಲಿಸಲಾದ ಒಂದು ಅರ್ಜಿಗೆ, ಪರಿಶೀಲನೆ ಮತ್ತು ನೋಂದಣಿ ಮಂಜೂರಾತಿಗೆ ಸಂಬಂದಿಸಿದ ನಿಯಮ 9 ಮತ್ತು ನಿಯಮ 10ರ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಡನೆ ಅನ್ವಯವಾಗತಕ್ಕದ್ದು.

12. ಮೂಲದಲ್ಲಿ ತೆರಿಗೆಯನ್ನು ಮುರುಗಡೆ ಮಾಡಲು ಅಥವಾ ಮೂಲದಲ್ಲಿ ತೆರಿಗೆಯನ್ನು ಸಂಗ್ರಹಿಸಲು ಅಗತ್ಯಪಡಿಸಿದ ವ್ಯಕ್ತಿಗಳಿಗೆ ನೋಂದಣಿಯ ಮಂಜೂರಾತಿ.– (1) ಪ್ರಕರಣ 51ರ ಉಪಬಂಧಗಳಿಗೆ ಅನುಸಾರವಾಗಿ ತೆರಿಗೆಯನ್ನು ಮುರುಗಡೆ ಮಾಡವುದು ಅಗತ್ಯವಿರುವ ಯಾವೊಬ್ಬ ವ್ಯಕ್ತಿಯು ಅಥವಾ ಪ್ರಕರಣ 52ರ ಉಪಬಂಧಗಳಿಗೆ ಅನುಸಾರವಾಗಿ ತೆರಿಗೆಯನ್ನು ಮೂಲದಲ್ಲಿ ಸಂಗ್ರಹಿಸುವುದು ಅಗತ್ಯವಿರುವ ಯಾವೊಬ್ಬ ವ್ಯಕ್ತಿಯು, ನೋಂದಣಿಯ ಮಂಜೂರಾತಿಗಾಗಿ, ವಿದ್ಯುನ್ಮಾನ ರೀತಿಯಲ್ಲಿ ಯುಕ್ತವಾಗಿ ಸಹಿಮಾಡಿದ ಅಥವಾ ವಿದ್ಯುನ್ಮಾನ ಪರಿಶೀಲನೆಯ ಕೋಡ್ ಮುಖಾಂತರ ಪರಿಶೀಲಿಸಲಾದ, **ನಮೂನೆ ಜಿಎಸ್‌ಟಿ ಆರ್‌ಇಜಿ–07**ರಲ್ಲಿ ಒಂದು ಅರ್ಜಿಯನ್ನು, ಸಾಮಾನ್ಯ ಪೋರ್ಟಲ್‌ನಲ್ಲಿ, ನೇರವಾಗಿಯಾಗಲಿ ಅಥವಾ

ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ಸಲ್ಲಿಸತಕ್ಕದ್ದು.

(2) ಯುಕ್ತ ಅಧಿಕಾರಿಯು, ಯುಕ್ತವಾದ ಪರಿಶೀಲನೆಯ ನಂತರ ನೋಂದಣಿಯನ್ನು ಮಂಜೂರು ಮಾಡಬಹುದು ಮತ್ತು ಅರ್ಜಿ ಸಲ್ಲಿಸಿದ ದಿನಾಂಕದಿಂದ ಮೂರು ಕೆಲಸದ ದಿನಗಳ ಒಳಗಾಗಿ **ನಮೂನೆ ಜಿಎಸ್‌ಟಿ ಆರ್‌ಇಜಿ–06**ರಲ್ಲಿ ಒಂದು ನೋಂದಣಿ ಪ್ರಮಾಣ ಪತ್ರವನ್ನು ನೀಡಬಹುದು.

(3) ಯುಕ್ತ ಅಧಿಕಾರಿಯು, ಒಂದು ವಿಚಾರಣೆಯ ಮೇಲೆ ಅಥವಾ ಅಧಿನಿಯಮದ ಯಾವುದೇ ಇತರ ನಡಾವಳಿಗೆ ಅನುಗುಣವಾಗಿ, **ನಮೂನೆ ಜಿಎಸ್‌ಟಿ ಆರ್‌ಇಜಿ–06**ರಲ್ಲಿ ನೋಂದಣಿ ಪ್ರಮಾಣ ಪತ್ರವನ್ನು ನೀಡಲಾಗಿರುವ ಒಬ್ಬ ವ್ಯಕ್ತಿಯು ಪ್ರಕರಣ 51ರ ಅಡಿಯಲ್ಲಿ ಮೂಲದಲ್ಲಿ ತೆರಿಗೆಯನ್ನು ಮುರುಗಡೆ ಮಾಡುವುದಕ್ಕೆ ಅಥವಾ ಪ್ರಕರಣ 52ರ ಅಡಿಯಲ್ಲಿ ಮೂಲದಲ್ಲಿ ತೆರಿಗೆಯನ್ನು ಸಂಗ್ರಹ ಮಾಡುವುದಕ್ಕೆ ಬಾಧ್ಯನಾಗಿ ಉಳಿದಿಲ್ಲವೆಂದು ಮನದಟ್ಟು ಮಾಡಿಕೊಂಡಿದ್ದಲ್ಲಿ, ಸದರಿ ಅಧಿಕಾರಿಯು ಉಪನಿಯಮ (2)ರ ಅಡಿಯಲ್ಲಿ ನೀಡಿದ ನೋಂದಣಿಯನ್ನು ರದ್ದುಗೊಳಿಸಬಹುದು ಮತ್ತು ಅಂಥ ರದ್ದತಿಯನ್ನು ವಿದ್ಯುನ್ಮಾನ ರೀತಿಯಲ್ಲಿ ಸದರಿ ವ್ಯಕ್ತಿಗೆ ನಮೂನೆ ಜಿಎಸ್‌ಟಿ ಆರ್‌ಇಜಿ–08ರಲ್ಲಿ ತಿಳಿಸತಕ್ಕದ್ದು.

ಪರಂತು, ಯುಕ್ತ ಅಧಿಕಾರಿಯು, ನೋಂದಣಿ ರದ್ದತಿಗಾಗಿ ನಿಯಮ 22ರಲ್ಲಿ ನಿಯಮಿಸಲಾದ ಕಾರ್ಯವಿಧಾನಗಳನ್ನು ಅನುಸರಿಸತಕ್ಕದ್ದು.

13. ಅನಿವಾಸಿ ತೆರಿಗೆದಾಯಕ ವ್ಯಕ್ತಿಗೆ ನೋಂದಣಿ ಮಂಜೂರಾತಿ.– (1) ಅನಿವಾಸಿ ತೆರಿಗೆದಾಯಕ ವ್ಯಕ್ತಿಯು, ತನ್ನ ಕಾನೂನು ಮಾನ್ಯವಾದ ಪಾಸ್‌ಪೋರ್ಟ್‌ನ ಸ್ವಯಂ–ಧೃಢೀಕೃತ ಪ್ರತಿಯೊಂದಿಗೆ, ನೋಂದಣಿಗಾಗಿ, ವಿದ್ಯುನ್ಮಾನ ರೀತಿಯಲ್ಲಿ ಯುಕ್ತವಾಗಿ ಸಹಿಮಾಡಿದ ಅಥವಾ ವಿದ್ಯುನ್ಮಾನ ಪರಿಶೀಲನೆಯ ಕೋಡ್ ಮುಖಾಂತರ ಪರಿಶೀಲಿಸಲಾದ, **ನಮೂನೆ ಜಿಎಸ್‌ಟಿ ಆರ್‌ಇಜಿ–09ರಲ್ಲಿ** ಒಂದು ಅರ್ಜಿಯನ್ನು, ವ್ಯವಹಾರದ ಪ್ರಾರಂಭಿಸುವುದಕ್ಕೆಕನಿಷ್ಠ ಪಕ್ಷ ಐದು ದಿನಗಳ ಮೊದಲು, ಸಾಮಾನ್ಯ ಪೋರ್ಟಲ್‌ನಲ್ಲಿ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ಸಲ್ಲಿಸತಕ್ಕದ್ದು.

ಪರಂತು, ಭಾರತದ ಹೊರಗಡೆ ನಿಗಮಿತವಾದ ಅಥವಾ ಸ್ಥಾಪಿತವಾದ ಒಂದು ವ್ಯವಹಾರ ಸಂಸ್ಥೆಯ ಸಂದರ್ಭದಲ್ಲಿ, ನೋಂದಣಿಗಾಗಿ ಅರ್ಜಿಯನ್ನು ಆ ದೇಶದ ಸರ್ಕಾರವು ವ್ಯವಹಾರ ಸಂಸ್ಥೆಯನ್ನು ಗುರುತಿಸಲು ಆಧಾರವಾಗಿ ಬಳಸುವ ಅದರ ತೆರಿಗೆ ಗುರುತು ಸಂಖ್ಯೆ ಅಥವಾ ವಿಶಿಷ್ಟ ಸಂಖ್ಯೆ ಅಥವಾ ಅದರ ಶಾಶ್ವತ ಖಾತೆಯುಲಭ್ಯವಿದ್ದರೆ, ಅದರೊಂದಿಗೆ ಸಲ್ಲಿಸತಕ್ಕದ್ದು.

(2) ಅನಿವಾಸಿ ತೆರಿಗೆದಾಯಕ ವ್ಯಕ್ತಿಯಾಗಿ ನೊಂದಣಿಗೆ ಅರ್ಜಿಯನ್ನು ಸಲ್ಲಿಸುತ್ತಿರುವ ಒಬ್ಬ ವ್ಯಕ್ತಿಗೆ, ಪ್ರಕರಣ 27ರ ಉಪಬಂಧಗಳಿಗೆ ಅನುಸಾರವಾಗಿ ತೆರಿಗೆಯ ಮುಂಗಡ ಠೇವಣಿಯನ್ನು ಇಡುವ ಸಲುವಾಗಿ ಒಂದು ತಾತ್ಕಾಲಿಕ ಉಲ್ಲೇಖ ಸಂಖ್ಯೆಯನ್ನು ಸಾಮಾನ್ಯ ಪೋರ್ಟಲ್ ಮೂಲಕ ನೀಡತಕ್ಕದ್ದು ಮತ್ತು ನಿಯಮ 8ರ ಉಪನಿಯಮ (5)ರ ಅಡಿಯಲ್ಲಿ ಸ್ವೀಕೃತಿಯನ್ನು, ತನ್ನ ವಿದ್ಯುನ್ಮಾನ ನಗದು ಖಾತೆಯಲ್ಲಿ ಸದರಿ ಠೇವಣಿಯನ್ನು ಇಟ್ಟ ನಂತರವೇ ವಿದ್ಯುನ್ಮಾನ ರೀತಿಯಲ್ಲಿ ನೀಡತಕ್ಕದ್ದು.

(3) ಈ ನಿಯಮದ ಅಡಿಯಲ್ಲಿ ಸಲ್ಲಿಸಲಾದ ಒಂದು ಅರ್ಜಿಗೆ, ಪರಿಶೀಲನೆ ಮತ್ತು ನೋಂದಣಿ ಮಂಜೂರಾತಿಗೆ ಸಂಬಂದಿಸಿದ ನಿಯಮ 9 ಮತ್ತು ನಿಯಮ 10ರ ಉಪಬಂಧಗಳು *ಯಥೋಚಿತ ವ್ಯತ್ಯಾಸಗಳೊಡನೆ* ಅನ್ವಯವಾಗತಕ್ಕದ್ದು.

(4) ಅನಿವಾಸಿ ತೆರಿಗೆದಾಯಕ ವ್ಯಕ್ತಿಯು ನೋಂದಣಿಗಾಗಿ ಸಲ್ಲಿಸಿದ ಅರ್ಜಿಯು, ಕಾನೂನು ಮಾನ್ಯವಾದ ಶಾಶ್ವತ ಖಾತೆಯನ್ನು ಹೊಂದಿರುವ ಭಾರತದಲ್ಲಿ ನಿವಾಸಿಯಾಗಿರತಕ್ಕ ಆತನ ಪ್ರಾಧಿಕೃತ ಸಹಿದಾರನಿಂದ ಯುಕ್ತವಾಗಿ ಸಹಿಯಾಗಿರತಕ್ಕದ್ದು ಅಥವಾ ವಿದ್ಯುನ್ಮಾನ ಪರಿಶೀಲನೆಯ ಕೋಡ್ ಮುಖಾಂತರ ಪರಿಶೀಲಿಸತಕ್ಕದ್ದು.

14. ಭಾರತದ ಹೊರಗಡೆಯಿರುವ ಒಂದು ಸ್ಥಳದಿಂದ, ತೆರಿಗೆದಾಯಕನಲ್ಲದ ಆನ್‌ಲೈನ್ ಸ್ವೀಕರಿಸುವವನಿಗೆ, ಆನ್‌ಲೈನ್ ಮಾಹಿತಿ ಮತ್ತು ದತ್ತಾಂಶ ಸಂಗ್ರಹದ ಪ್ರವೇಶಾವಕಾಶ ಅಥವಾ ಮರುಪ್ರಾಪ್ತಿ ಸೇವೆಗಳ ಪೂರೈಕೆಯನ್ನು ಮಾಡುತ್ತಿರುವ ಒಬ್ಬ ವ್ಯಕ್ತಿಗೆ ನೋಂದಣಿಯ ಮಂಜೂರಾತಿ.– (1) ಭಾರತದ ಹೊರಗಡೆಯಿರುವ ಒಂದು ಸ್ಥಳದಿಂದ, ತೆರಿಗೆದಾಯಕನಲ್ಲದ ಆನ್‌ಲೈನ್ ಸ್ವೀಕರಿಸುವವನಿಗೆ, ಆನ್‌ಲೈನ್ ಮಾಹಿತಿ ಮತ್ತು ದತ್ತಾಂಶ ಸಂಗ್ರಹದ ಪ್ರವೇಶಾವಕಾಶ ಅಥವಾ ಮರುಪ್ರಾಪ್ತಿ ಸೇವೆಗಳ ಪೂರೈಕೆಯನ್ನು ಮಾಡುತ್ತಿರುವ ಒಬ್ಬ ವ್ಯಕ್ತಿಯು, ನೋಂದಣಿಗಾಗಿ, ಯುಕ್ತವಾಗಿ ಸಹಿಮಾಡಿದ ಅಥವಾ ವಿದ್ಯುನ್ಮಾನ ಪರಿಶೀಲನೆಯ ಕೋಡ್ ಮುಖಾಂತರ ಪರಿಶೀಲಿಸಲಾದ, **ನಮೂನೆ ಜಿಎಸ್‌ಟಿ ಆರ್‌ಇಜಿ–10**ರಲ್ಲಿ ಒಂದು ಅರ್ಜಿಯನ್ನು ಸಾಮಾನ್ಯ ಪೋರ್ಟಲ್‌ನಲ್ಲಿ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಸಲ್ಲಿಸತಕ್ಕದ್ದು.

(2) ಉಪನಿಯಮ (1)ರಲ್ಲಿ ಉಲ್ಲೇಖಿಸಲಾದ ಅರ್ಜಿದಾರನಿಗೆ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರದಿಂದ ಅಧಿಸೂಚಿಸಬಹುದಾದ ಅಂಥ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು ಮತ್ತು ಅಂಥ ಅಧಿಕಾರಿಯಿಂದ **ನಮೂನೆ ಜಿಎಸ್‌ಟಿ ಆರ್‌ಇಜಿ–06ರಲ್ಲಿ** ನೋಂದಣಿಯನ್ನು ಮಂಜೂರು ಮಾಡತಕ್ಕದ್ದು.

15. ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿ ಮತ್ತು ಅನಿವಾಸಿ ತೆರಿಗೆದಾಯಕ ವ್ಯಕ್ತಿಯಿಂದ ಕಾರ್ಯಾಚರಣೆಯ ಅವಧಿಯಲ್ಲಿನ ವಿಸ್ತರಣೆ.– (1) ಒಬ್ಬ ನೋಂದಾಯಿತ ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿ ಮತ್ತು ಅನಿವಾಸಿ ತೆರಿಗೆದಾಯಕ ವ್ಯಕ್ತಿಯು, ಆತನ ನೋಂದಣಿ ಅರ್ಜಿಯಲ್ಲಿ ಸೂಚಿಸಿದ ನೋಂದಣಿಯ ಅವಧಿಯನ್ನು ವಿಸ್ತರಿಸಲು ಇಚ್ಛಿಸಿದ್ದಲ್ಲಿ, ಅಂಥ ವ್ಯಕ್ತಿಯು **ನಮೂನೆ ಜಿಎಸ್‌ಟಿ ಆರ್‌ಇಜಿ–11**ರಲ್ಲಿ ಒಂದು ಅರ್ಜಿಯನ್ನು ಸಾಮಾನ್ಯ ಪೋರ್ಟಲ್‌ನಲ್ಲಿ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ಆತನಿಗೆ ಮಂಜೂರು ಮಾಡಲಾದ ನೋಂದಣಿಯ ಸಿಂಧುತ್ವವು ಕೊನೆಗೊಳ್ಳುವ ಮುನ್ನ, ವಿದ್ಯುನ್ಮಾನ ರೀತಿಯಲ್ಲಿ ಸಲ್ಲಿಸತಕ್ಕದ್ದು.

(2) ಪ್ರಕರಣ 27ರ ಉಪಪ್ರಕರಣ (2)ರಲ್ಲಿ ನಿರ್ದಿಷ್ಟಪಡಿಸಿದ ಮೊತ್ತವನ್ನು ಸಂದಾಯ ಮಾಡಿದ ಮೇಲೆ ಮಾತ್ರ ಉಪನಿಯಮ (1)ರ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸತಕ್ಕದ್ದು.

16. ಸ್ವಪ್ರೇರಣೆಯ ನೋಂದಣಿ.– (1) ಅಧಿನಿಯಮದ ಅಡಿಯಲ್ಲಿನ ಯಾವುದೇ ಸಮೀಕ್ಷೆ, ವಿಚಾರಣೆ, ತಪಾಸಣೆ, ಶೋಧನೆ ಅಥವಾ ಯಾವುದೇ ಇತರೇ ನಡಾವಳಿಗಳಿಗೆ ಅನುಗುಣವಾಗಿ, ಈ ಅಧಿನಿಯಮದ ಅಡಿಯಲ್ಲಿ ನೋಂದಣಿಗೆ ಬಾಧ್ಯನಾಗಿರುವ ಒಬ್ಬ ವ್ಯಕ್ತಿಯು ಅಂಥ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸಲು ವಿಫಲನಾಗಿರುವುದು ಯುಕ್ತ ಅಧಿಕಾರಿಗೆ ಕಂಡುಬಂದಲ್ಲಿ, ಅಂಥ ಅಧಿಕಾರಿಯು ಸದರಿ ವ್ಯಕ್ತಿಯನ್ನು ತಾತ್ಕಾಲಿಕ ಆಧಾರದಲ್ಲಿ ನೋಂದಣಿ ಮಾಡಬಹುದು ಮತ್ತು **ನಮೂನೆ ಜಿಎಸ್‌ಟಿ ಆರ್‌ಇಜಿ–12**ರಲ್ಲಿ ಒಂದು ಆದೇಶವನ್ನು ನೀಡಬಹುದು.

(2) ಉಪನಿಯಮ (1)ರ ಅಡಿಯಲ್ಲಿ ಮಂಜೂರು ಮಾಡಲಾದ ನೋಂದಣಿಯು, ನೋಂದಣಿ ಮಂಜೂರಾತಿಯ ಆದೇಶದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(3) ಉಪನಿಯಮ (1)ರ ಅಡಿಯಲ್ಲಿ ತಾತ್ಕಾಲಿಕ ನೋಂದಣಿಯನ್ನು ಮಂಜೂರು ಮಾಡಲಾಗಿರುವ ಪ್ರತಿಯೊಬ್ಬ ವ್ಯಕ್ತಿಯು, ಅಂಥ ನೋಂದಣಿ ಮಂಜೂರಾತಿಯ ದಿನಾಂಕದಿಂದ ತೊಂಬತ್ತು ದಿನಗಳ ಒಳಗಾಗಿ ನಿಯಮ 8 ಅಥವಾ ನಿಯಮ 12ರ ಅಡಿಯಲ್ಲಿ ಉಪಬಂಧಿಸಿದ ನಮೂನೆ ಮತ್ತು ವಿಧಾನದಲ್ಲಿ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು:

ಪರಂತು ಸದರಿ ವ್ಯಕ್ತಿಯು, ತಾತ್ಕಾಲಿಕ ನೊಂದಣಿಯ ಮಂಜೂರಾತಿಯ ವಿರುದ್ಧವಾಗಿ ಅಪೀಲನ್ನು ಸಲ್ಲಿಸಿದ್ದಲ್ಲಿ, ಅಂಥ ಸಂದರ್ಭದಲ್ಲಿ, ಅಪೀಲು ಪ್ರಾಧಿಕಾರವು ನೊಂದಣಿಯ ಬಾಧ್ಯತೆಯನ್ನು ಎತ್ತಿಹಿಡಿದಿರುವ ಆದೇಶ ನೀಡುವಿಕೆಯ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

(4) ಉಪನಿಯಮ (3)ರ ಅಡಿಯಲ್ಲಿ ಸಲ್ಲಿಸಲಾದ ಒಂದು ಅರ್ಜಿಗೆ, ಪರಿಶೀಲನೆ ಮತ್ತು ನೋಂದಣಿ ಮಂಜೂರಾತಿಗೆ ಸಂಬಂದಿಸಿದ ನಿಯಮ 9 ಮತ್ತು ನಿಯಮ 10ರ ಉಪಬಂಧಗಳು *ಯಥೋಚಿತ ವ್ಯತ್ಯಾಸಗಳೊಡನೆ*

ಅನ್ವಯವಾಗತಕ್ಕದ್ದು.

(5) ಉಪನಿಯಮ (4)ರ ಅಡಿಯಲ್ಲಿನ ಪರಿಶೀಲನೆಗೆ ಅನುಗುಣವಾಗಿ ನಿಯತಗೊಳಿಸಲಾದ ಸರಕು ಮತ್ತು ಸೇವೆಗಳ ತೆರಿಗೆ ಗುರುತಿನ ಸಂಖ್ಯೆಯು, ಉಪನಿಯಮ (1)ರ ಅಡಿಯಲ್ಲಿ ನೋಂದಣಿಯನ್ನು ಮಂಜೂರು ಮಾಡಿದ ಆದೇಶದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

17. ಕೆಲವು ವಿಶೇಷ ಸಂಸ್ಥೆಗಳಿಗೆ (ಎಂಟಿಟಿ) ವಿಶಿಷ್ಟ ಗುರುತಿನ ಸಂಖ್ಯೆಯನ್ನು ನಿಯತಗೊಳಿಸುವಿಕೆ.– (1) ಪ್ರಕರಣ 25ರ ಉಪಪ್ರಕರಣ (9)ರ ಉಪಬಂಧಗಳಿಗೆ ಅನುಸಾರವಾಗಿ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಮಂಜೂರು ಮಾಡುವುದು ಅಗತ್ಯವಿರುವ ಪ್ರತಿಯೊಬ್ಬ ವ್ಯಕ್ತಿಯು, ಯುಕ್ತವಾಗಿ ಸಹಿಮಾಡಿದ ಅಥವಾ ವಿದ್ಯುನ್ಮಾನ ಪರಿಶೀಲನೆಯ ಕೋಡ್ ಮುಖಾಂತರ ಪರಿಶೀಲಿಸಲಾದ, **ನಮೂನೆ ಜಿಎಸ್‌ಟಿ ಆರ್‌ಇಜಿ–13**ರಲ್ಲಿ ಒಂದು ಅರ್ಜಿಯನ್ನು ಸಾಮಾನ್ಯ ಪೋರ್ಟಲ್‌ನಲ್ಲಿ, ನಿಯಮ 8ರಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಸಲ್ಲಿಸತಕ್ಕದ್ದು.

(2) ಯುಕ್ತ ಅಧಿಕಾರಿಯು, **ನಮೂನೆ ಜಿಎಸ್‌ಟಿ ಆರ್‌ಇಜಿ–13**ರಲ್ಲಿ ಅರ್ಜಿಯ ಸಲ್ಲಿಕೆಯಾದ ತರುವಾಯ ಅಥವಾ ಸದರಿ ಅರ್ಜಿಯನ್ನು ಭರ್ತಿ ಮಾಡಿದ ನಂತರ, ಸದರಿ ವ್ಯಕ್ತಿಗೆ ವಿಶಿಷ್ಟ ಗುರುತಿನ ಸಂಖ್ಯೆಯನ್ನು ನಿಯತಗೊಳಿಸಬಹುದು ಮತ್ತು ಅರ್ಜಿಸಲ್ಲಿಸಿದ ದಿನಾಂಕದಿಂದ ಮೂರು ಕೆಲಸದ ದಿನಗಳ ಒಳಗಾಗಿ **ನಮೂನೆ ಜಿಎಸ್‌ಟಿ ಆರ್‌ಇಜಿ–06**ರಲ್ಲಿ ಒಂದು ಪ್ರಮಾಣ ಪತ್ರವನ್ನು ನೀಡಬಹುದು.

18. ನಾಮಫಲಕದ ಮೇಲೆ ನೋಂದಣಿ ಪತ್ರ ಮತ್ತು ಸರಕು ಮತ್ತು ಸೇವೆಗಳ ತೆರಿಗೆ ಗುರುತಿನ ಸಂಖ್ಯೆಯನ್ನು ಪ್ರದರ್ಶಿಸುವುದು.– (1) ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು ತನ್ನ ನೋಂದಣಿ ಪ್ರಮಾಣಪತ್ರವನ್ನು, ತನ್ನ ಪ್ರಧಾನ ವ್ಯವಹಾರದ ಸ್ಥಳದ ಮತ್ತು ಪ್ರತಿಯೊಂದು ಹೆಚ್ಚುವರಿ ವ್ಯವಹಾರ ಸ್ಥಳ ಅಥವಾ ಸ್ಥಳಗಳ ಎದ್ದು ಕಾಣುವ ಜಾಗದಲ್ಲಿ ಪ್ರದರ್ಶಿಸತಕ್ಕದ್ದು.

(2) ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ತನ್ನ ಪ್ರಧಾನ ವ್ಯವಹಾರದ ಸ್ಥಳದ ಮತ್ತು ಪ್ರತಿಯೊಂದು ಹೆಚ್ಚುವರಿ ವ್ಯವಹಾರ ಸ್ಥಳ ಅಥವಾ ಸ್ಥಳಗಳ ಪ್ರವೇಶ ದ್ವಾರದಲ್ಲಿ ಪ್ರದರ್ಶಿಸಲಾದ ನಾಮಫಲಕ ಮೇಲೆ ತನ್ನ ಸರಕು ಮತ್ತು ಸೇವೆಗಳ ತೆರಿಗೆ ಗುರುತಿನ ಸಂಖ್ಯೆಯನ್ನು ಪ್ರದರ್ಶಿಸತಕ್ಕದ್ದು.

19. ನೋಂದಣಿಯ ತಿದ್ದುಪಡಿ.– (1) **ನಮೂನೆ ಜಿಎಸ್‌ಟಿ ಆರ್‌ಇಜಿ–01** ಅಥವಾ **ನಮೂನೆ ಜಿಎಸ್‌ಟಿ ಆರ್‌ಇಜಿ–07** ಅಥವಾ **ನಮೂನೆ ಜಿಎಸ್‌ಟಿ ಆರ್‌ಇಜಿ–09** ಅಥವಾ **ನಮೂನೆ ಜಿಎಸ್‌ಟಿ ಆರ್‌ಇಜಿ–10**ರಲ್ಲಿ ನೋಂದಣಿಗಾಗಿ ಅಥವಾ **ನಮೂನೆ ಜಿಎಸ್‌ಟಿ ಆರ್‌ಇಜಿ–13**ರಲ್ಲಿ ವಿಶಿಷ್ಟ ಗುರುತಿನ ಸಂಖ್ಯೆಗಾಗಿ ಅರ್ಜಿಯಲ್ಲಿ ಒದಗಿಸಿದ, ನೋಂದಣಿಯನ್ನು ಅಥವಾ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಪಡೆಯುವ ಸಮಯದಲ್ಲಾಗಲಿ, ಕಾಲಾನುಕಾಲಕ್ಕೆ ತಿದ್ದುಪಡಿಮಾಡಿದಂತೆ, ಯಾವುದೇ ವಿವರಗಳಲ್ಲಿ ಬದಲಾವಣೆಯಾಗಿದ್ದಲ್ಲಿ, ಅಂಥ ಬದಲಾವಣೆಯಾದ ಹದಿನೈದು ದಿನಗಳ ಒಳಗಾಗಿ ನೋಂದಾಯಿತ ವ್ಯಕ್ತಿಯು ಯುಕ್ತವಾಗಿ ಸಹಿಮಾಡಿದ ಅಥವಾ ವಿದ್ಯುನ್ಮಾನ ಪರಿಶೀಲನೆಯ ಕೋಡ್ ಮುಖಾಂತರ ಪರಿಶೀಲಿಸಲಾದ, **ನಮೂನೆ ಜಿಎಸ್‌ಟಿ ಆರ್‌ಇಜಿ–14**ರಲ್ಲಿ ಒಂದು ಅರ್ಜಿಯನ್ನು, ಅಂಥ ಬದಲಾವಣೆಗೆ ಸಂಬಂಧಿಸಿದ ದಸ್ತಾವೇಜುಗಳೊಂದಿಗೆ, ಸಾಮಾನ್ಯ ಪೋರ್ಟಲ್‌ನಲ್ಲಿ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯನ್ಮಾನ ರೀತಿಯಲ್ಲಿ ಸಲ್ಲಿಸತಕ್ಕದ್ದು.

ಪರಂತು–

(ಎ) ಪ್ರಕರಣ 29ರ ಅಡಿಯಲ್ಲಿ ನೋಂದಣಿಯ ರದ್ದತಿಗೆ ಆಧಾರವಾಗದ ಬದಲಾವಣೆಯು –

(i) ವ್ಯವಹಾರದ ಕಾನೂನು ಸಮ್ಮತ ಹೆಸರಿಗೆ;

(ii) ಪ್ರಧಾನ ವ್ಯವಹಾರದ ಸ್ಥಳದ ಅಥವಾ ಯಾವುದೇ ಹೆಚ್ಚುವರಿ ವ್ಯವಹಾರ ಸ್ಥಳದ ವಿಳಾಸಕ್ಕೆ; ಅಥವಾ

(iii) ವ್ಯವಹಾರದ ದೈನಂದಿನ ಕಾರ್ಯಗಳಿಗೆ ಜವಾಬ್ದಾರರಾಗಿರುವ ಪಾಲುದಾರರು ಅಥವಾ ನಿರ್ದೇಶಕರು, ಕರ್ತ, ನಿರ್ವಹಣಾ ಸಮಿತಿ, ಟ್ರಸ್ಟಿಗಳ ಮಂಡಳಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ತತ್ಸಮಾನರ ಸೇರ್ಪಡೆ, ಬಿಡುಗಡೆ ಅಥವಾ ನಿವೃತ್ತಿಗೆ,

–ಸಂಬಂಧಿಸಿದಲ್ಲಿ, ಯುಕ್ತ ಅಧಿಕಾರಿಯು, ಯುಕ್ತವಾದ ಪರಿಶೀಲನೆಯ ನಂತರ, **ನಮೂನೆ ಜಿಎಸ್‌ಟಿ ಆರ್‌ಇಜಿ–14ರಲ್ಲಿನ** ಅರ್ಜಿಯ ಸ್ವೀಕೃತಿಯ ದಿನಾಂಕದಿಂದ ಹದಿನೈದು ಕೆಲಸದ ದಿನಗಳ ಒಳಗಾಗಿ ತಿದ್ದುಪಡಿಯನ್ನು ಅನುಮೋದಿಸತಕ್ಕದ್ದು, ಮತ್ತು **ನಮೂನೆ ಜಿಎಸ್‌ಟಿ ಆರ್‌ಇಜಿ–15ರಲ್ಲಿ** ಆದೇಶವನ್ನು ನೀಡತಕ್ಕದ್ದು ಮತ್ತು ತಿದ್ದುಪಡಿಯನ್ನು ಅಪೇಕ್ಷಿಸುವ ಘಟನೆ ಸಂಭವಿಸಿದ ದಿನಾಂಕದಂದು ಅಂಥ ತಿದ್ದುಪಡಿಯು ಜಾರಿಗೆ ಬರತಕ್ಕದ್ದು.

(ಬಿ) ಯಾವುದೇ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿನ ಖಂಡ (ಎ)ನ ಉಪಖಂಡ (ಏ) ಮತ್ತು ಉಪಖಂಡ (ಔ)ಕ್ಕೆ ಸಂಬಂಧಿಸಿದ ಬದಲಾವಣೆಯು, ಅದೇ ಶಾಶ್ವತ ಖಾತೆ ಸಂಖ್ಯೆಯ ಮೇಲೆ ಈ ಅಧ್ಯಾಯದ ಉಪಬಂಧಗಳ ಅಡಿಯಲ್ಲಿ ನೋಂದಾಯಿತ ವ್ಯಕ್ತಿಯು ಪಡೆದ ಎಲ್ಲಾ ನೋಂದಣಿಗಳಿಗೆ ಅನ್ವಯವಾಗತಕ್ಕದ್ದು.

(ಸಿ) ಖಂಡ (ಎ)ನಲ್ಲಿ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿದಂತಹ ಯಾವುದೇ ವಿವರಗಳಿಗೆ ಬದಲಾವಣೆಯು ಸಂಬಂಧಿಸಿದಲ್ಲಿ, ಸಾಮಾನ್ಯ ಪೋರ್ಟಲ್‌ನಲ್ಲಿ **ನಮೂನೆ ಜಿಎಸ್‌ಟಿ ಆರ್‌ಇಜಿ–14**ರಲ್ಲಿ ಅರ್ಜಿಯು ಸಲ್ಲಿಕೆಯಾದ ಕೂಡಲೇ ನೋಂದಣಿಯ ಪ್ರಮಾಣಪತ್ರವು ತಿದ್ದುಪಡಿಯಾಗತಕ್ಕದ್ದು:

(ಡಿ) ಯಾವುದೇ ವ್ಯವಹಾರದ ಸಂರಚನೆಯಲ್ಲಿನ ಬದಲಾವಣೆಯು ಒಬ್ಬ ನೋಂದಾಯಿತ ವ್ಯಕ್ತಿಯ ಶಾಶ್ವತ ಖಾತೆ ಸಂಖ್ಯೆಯಲ್ಲಿನ ಬದಲಾವಣೆಗೆ ಕಾರಣವಾದಲ್ಲಿ, ಸದರಿ ವ್ಯಕ್ತಿಯು **ನಮೂನೆ ಜಿಎಸ್‌ಟಿ ಆರ್‌ಇಜಿ–1**ರಲ್ಲಿ ಹೊಸ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

ಪರಂತು, ಸದರಿ ನಿಯಮದ ಅಡಿಯಲ್ಲಿ ಸಲ್ಲಿಸಿದ, ಕಾಲ ಕಾಲಕ್ಕೆ ತಿದ್ದುಪಡಿಯಾದಂತೆ, ಪ್ರಾಧಿಕೃತ ಸಹಿದಾರನ ಮೊಬೈಲ್ ಸಂಖ್ಯೆ ಅಥವಾ ಮಿಂಚೋಲೆಯ ವಿಳಾಸದಲ್ಲಿನ ಯಾವುದೇ ಬದಲಾವಣೆಯನ್ನು, ನಿಯಮ 8ರ ಉಪನಿಯಮ (2)ರ ಅಡಿಯಲ್ಲಿ ಉಪಬಂಧಿಸಿದ ವಿಧಾನದಲ್ಲಿ ಸಾಮಾನ್ಯ ಪೋರ್ಟಲ್ ಮುಖಾಂತರ ಆನ್‌ಲೈನ್ ಪರಿಶೀಲನೆಯ ನಂತರವೇ ಮಾತ್ರ ಕಾರ್ಯಗತಗೊಳಿಸತಕ್ಕದು.

(2) ಉಪನಿಯಮ (1)ರ ಅಡಿಯಲ್ಲಿ ಕೋರಲಾದ ತಿದ್ದುಪಡಿಯು ಅಪೇಕ್ಷಣೀಯವಿಲ್ಲವೆಂದಾಗಲಿ ಅಥವಾ ಅದರೊಂದಿಗೆ ಒದಗಿಸಿದ ದಸ್ತಾವೇಜುಗಳು ಅಪೂರ್ಣ ಅಥವಾ ಸರಿಯಿಲ್ಲವೆಂದಾಗಲಿ ಎನ್ನುವ ಅಭಿಪ್ರಾಯವನ್ನು ಯುಕ್ತ ಅಧಿಕಾರಿಯು ಹೊಂದಿದ್ದಲ್ಲಿ, ಅವನು, **ನಮೂನೆ ಜಿಎಸ್‌ಟಿ ಆರ್‌ಇಜಿ–14**ರಲ್ಲಿ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ, **ನಮೂನೆ ಜಿಎಸ್‌ಟಿ ಆರ್‌ಇಜಿ–03**ರಲ್ಲಿ ಒಂದು ಸೂಚನಾ ಪತ್ರವನ್ನು, ಸದರಿ ಸೂಚನಾ ಪತ್ರ ಜಾರಿಯಾದ ಏಳು ದಿನಗಳ ಒಳಗಾಗಿ, ಉಪನಿಯಮ (1)ರ ಅಡಿಯಲ್ಲಿ ಸಲ್ಲಿಸಲಾದ ಅರ್ಜಿಯನ್ನು ಏಕೆ ತಿರಸ್ಕರಿಸಬಾರದು ಎನ್ನುವುದಕ್ಕೆ ಕಾರಣಗಳನ್ನು ತೋರಿಸುವಂತೆ ನೋಂದಾಯಿತ ವ್ಯಕ್ತಿಯನ್ನು ಅಗತ್ಯ ಪಡಿಸಿ, ಜಾರಿಗೊಳಿಸಬಹುದು.

(3) ಉಪನಿಯಮ (2)ರ ಅಡಿಯಲ್ಲಿ ಕಾರಣವನ್ನು ಕೇಳಿ ನೀಡಲಾದ ಸೂಚನಾ ಪತ್ರಕ್ಕೆ ನೋಂದಾಯಿತ ವ್ಯಕ್ತಿಯು ಉತ್ತರವನ್ನು ಸದರಿ ಸೂಚನಾ ಪತ್ರ ಜಾರಿಯಾದ ದಿನಾಂಕದಿಂದ ಏಳು ಕೆಲಸದ ದಿನಗಳ ಒಳಗಾಗಿ **ನಮೂನೆ ಜಿಎಸ್‌ಟಿ ಆರ್‌ಇಜಿ–04**ರಲ್ಲಿ ಒದಗಿಸತಕ್ಕದ್ದು.

(4) ಉಪನಿಯಮ(3)ರ ಅಡಿಯಲ್ಲಿ ಒದಗಿಸಿದ ಉತ್ತರವು, ತೃಪ್ತಿದಾಯಕವಾಗಿಲ್ಲದಿರುವುದು ಕಂಡುಬಂದಲ್ಲಿ ಅಥವಾ ಉಪನಿಯಮ (2)ರ ಅಡಿಯಲ್ಲಿ ನೀಡಿದ ಸೂಚನಾ ಪತ್ರಕ್ಕೆ ಪ್ರತಿಕ್ರಿಯೆಯಾಗಿ ಯಾವುದೇ ಉತ್ತರವನ್ನು ಉಪನಿಯಮ (3)ರ ಅಡಿಯಲ್ಲಿ ನಿಯಮಿಸಲಾದ ಅವಧಿಯ ಒಳಗಾಗಿ ಒದಗಿಸಿರದಿದ್ದಲ್ಲಿ, ಉಪನಿಯಮ (1)ರ

ಅಡಿಯಲ್ಲಿ ಸಲ್ಲಿಸಲಾದ ಅರ್ಜಿಯನ್ನು ತಿರಸ್ಕರಿಸತಕ್ಕದ್ದು ಮತ್ತು **ನಮೂನೆ ಜಿಎಸ್‌ಟಿ ಆರ್‌ಇಜಿ–05**ರಲ್ಲಿ ಒಂದು ಆದೇಶವನ್ನು ಹೊರಡಿಸತಕ್ಕದ್ದು.

(5) ಒಬ್ಬ ಯುಕ್ತ ಅಧಿಕಾರಿಯು,–

(ಎ) ಅರ್ಜಿಯನ್ನು ಸಲ್ಲಿಸಿದ ಹದಿನೈದು ಕೆಲಸದ ದಿನಗಳ ಅವಧಿಯ ಒಳಗಾಗಿ, ಅಥವಾ

(ಬಿ) ಉಪನಿಯಮ (3)ರ ಅಡಿಯಲ್ಲಿನ ಕಾರಣ ಕೇಳುವ ಸೂಚನಾ ಪತ್ರಕ್ಕೆ ಉತ್ತರವನ್ನು ಸ್ವೀಕರಿಸಿದ ದಿನಾಂಕದಿಂದ ಏಳು ಕೆಲಸದ ದಿನಗಳ ಅವಧಿಯ ಒಳಗಾಗಿ,

–ಯಾವುದೇ ಕ್ರಮವನ್ನು ತೆಗೆದುಕೊಳ್ಳಲು ವಿಫಲನಾದಲ್ಲಿ, ನೋಂದಣಿಯ ಪ್ರಮಾಣ ಪತ್ರವು, ಅರ್ಜಿಯಲ್ಲಿ ಕೋರಿರುವಷ್ಟರ ಮಟ್ಟಿಗೆ ತಿದ್ದುಪಡಿಯಾಗತಕ್ಕದ್ದು ಮತ್ತು ತಿದ್ದುಪಡಿಯಾದ ಪ್ರಮಾಣಪತ್ರವನ್ನು ಸಾಮಾನ್ಯ ಪೋರ್ಟಲ್‌ನಲ್ಲಿ ನೋಂದಾಯಿತ ವ್ಯಕ್ತಿಗೆ ಲಭ್ಯವಾಗುವಂತೆ ಮಾಡತಕ್ಕದ್ದು.

20. ನೋಂದಣಿಯ ರದ್ದತಿಗಾಗಿ ಅರ್ಜಿ.– ನಿಯಮ 12ರ ಅಡಿಯಲ್ಲಿ ಯಾರಿಗೆ ನೋಂದಣಿಯನ್ನು ಮಂಜೂರು ಮಾಡಲಾಗಿದೆಯೋ ಆ ಒಬ್ಬ ವ್ಯಕ್ತಿಯನ್ನು ಅಥವಾ ನಿಯಮ 17ರ ಅಡಿಯಲ್ಲಿ ಯಾರಿಗೆ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಮಂಜೂರು ಮಾಡಲಾಗಿದೆಯೋ ಆ ಒಬ್ಬ ವ್ಯಕ್ತಿಯನ್ನು ಹೊರತು ಪಡಿಸಿದಂತೆ, ಪ್ರಕರಣ 29ರ ಉಪಪ್ರಕರಣ (1)ರ ಅಡಿಯಲ್ಲಿ ತನ್ನ ನೋಂದಣಿಯ ರದ್ದತಿಯನ್ನು ಕೋರುವ ಒಬ್ಬ ನೋಂದಾಯಿತ ವ್ಯಕ್ತಿಯು, **ನಮೂನೆ ಜಿಎಸ್‌ಟಿ ಆರ್‌ಇಜಿ–16**ರಲ್ಲಿ ಒಂದು ಅರ್ಜಿಯನ್ನು, ಅದರಲ್ಲಿ ನೋಂದಣಿಯ ರದ್ದತಿಯನ್ನು ಕೋರಿರುವ ದಿನಾಂಕದಂದು ದಾಸ್ತಾನಿನಲ್ಲಿರುವ ಹೂಡುವಳಿಗಳು ಮತ್ತು ದಾಸ್ತಾನಿನಲ್ಲಿರುವ ಅರೆ–ಸಿದ್ಧರೂಪದ ಅಥವಾ ಸಿದ್ಧರೂಪದ ಸರಕುಗಳಲ್ಲಿ ಒಳಗೊಂಡಿರುವ ಹೂಡುವಳಿಗಳ ಮತ್ತು ದಾಸ್ತಾನಿನಲ್ಲಿರುವ ಬಂಡವಾಳ ಸರಕುಗಳ ವಿವರಗಳು, ಅವುಗಳ ಮೇಲಿನ ಬಾಧ್ಯತೆ, ಅಂಥ ಬಾಧ್ಯತೆಗೆ ಪ್ರತಿಯಾಗಿ ಸಂದಾಯ ಮಾಡಿರುವುದು ಏನಾದರೂ ಇದ್ದರೆ ಆ ವಿವರಗಳನ್ನು ಒಳಗೊಂಡು, ವಿದ್ಯುನ್ಮಾನ ರೀತಿಯಲ್ಲಿ ಸಲ್ಲಿಸತಕ್ಕದ್ದು ಮತ್ತು ಅರ್ಜಿಯ ಜೊತೆಗೆ ಅದಕ್ಕೆ ಪೂರಕವಾದ ಸಂಬಂಧಿತ ದಸ್ತಾವೇಜುಗಳನ್ನು, ರದ್ದತಿಯನ್ನು ಅಪೇಕ್ಷಿಸುವ ಘಟನೆ ಸಂಭವಿಸಿದ ಮೂವತ್ತು ದಿನಗಳ ಒಳಗಾಗಿ ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ಸಾಮಾನ್ಯ ಪೋರ್ಟಲ್‌ನಲ್ಲಿ ಒದಗಿಸಬಹುದು:

ಪರಂತು, ಸ್ವಇಚ್ಛೆಯಿಂದ ನೋಂದಾಯಿತನಾಗಿರುವ ಒಬ್ಬ ತೆರಿಗೆದಾಯಕ ವ್ಯಕ್ತಿಯ ಸಂದರ್ಭದಲ್ಲಿ, ನೋಂದಣಿ ಜಾರಿಯಾದ ದಿನಾಂಕದಿಂದ ಒಂದು ವರ್ಷ ಮುಗಿಯುವ ಮೊದಲು, ನೋಂದಣಿಯ ರದ್ದತಿಯ ಅರ್ಜಿಯನ್ನು ಪರಿಗಣಿಸತಕ್ಕದ್ದಲ್ಲ.

21. ಕೆಲವೊಂದು ಸಂದರ್ಭಗಳಲ್ಲಿ ನೋಂದಣಿಯನ್ನು ರದ್ದುಗೊಳಿಸಬೇಕಿರುವುದು.– ಒಬ್ಬ ವ್ಯಕ್ತಿಗೆ ಮಂಜೂರು ಮಾಡಿದ ನೋಂದಣಿಯು, ಸದರಿ ವ್ಯಕ್ತಿಯು,–

(ಎ) ಘೋಷಿತ ವ್ಯವಹಾರ ಸ್ಥಳದಿಂದ ಯಾವುದೇ ವ್ಯವಹಾರವನ್ನು ನಡೆಸುತ್ತಿಲ್ಲದಿದ್ದರೆ;

(ಬಿ) ಈ ಅಧಿನಿಯಮದ ಅಥವಾ ಇದರ ಅಡಿಯಲ್ಲಿ ಮಾಡಿದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸಿ ಸರಕು ಅಥವಾ ಸೇವೆಗಳ ಪೂರೈಕೆಯಿಲ್ಲದೆ ಬೆಲೆಪಟ್ಟಿ ಅಥವಾ ಬಿಲ್ಲನ್ನು ನೀಡುತ್ತಿದ್ದರೆ; ಅಥವಾ

(ಸಿ) ಅಧಿನಿಯಮದ ಪ್ರಕರಣ 171ರ ಉಪಬಂಧಗಳನ್ನು ಅಥವಾ ಇದರ ಅಡಿಯಲ್ಲಿ ಮಾಡಿದ ನಿಯಮಗಳನ್ನು ಉಲ್ಲಂಘಿಸಿದರೆ,

–ರದ್ದತಿಗೆ ಬಾಧ್ಯವಾಗಿರತಕ್ಕದ್ದು.

22. ನೋಂದಣಿಯ ರದ್ದತಿ.– (1) ಒಬ್ಬ ವ್ಯಕ್ತಿಯ ನೋಂದಣಿಯು ಪ್ರಕರಣ 29ರ ಅಡಿಯಲ್ಲಿ ರದ್ದತಿಗೆ ಬಾಧ್ಯವಾಗಿದೆ ಎಂದು ನಂಬಲು ಯುಕ್ತ ಅಧಿಕಾರಿಗೆಕಾರಣಗಳಿದ್ದಲ್ಲಿ, ಆತನು **ನಮೂನೆ ಜಿಎಸ್‌ಟಿ ಆರ್‌ಇಜಿ–17**ರಲ್ಲಿ ಒಂದು ಸೂಚನಾ ಪತ್ರವನ್ನು, ಅವನ ನೋಂದಣಿಯನ್ನು ಏಕೆ ರದ್ದುಗೊಳಿಸಬಾರದು ಎನ್ನುವುದಕ್ಕೆ ಕಾರಣಗಳನ್ನು ಸದರಿ ಸೂಚನಾ ಪತ್ರ ಜಾರಿಯಾದ ಏಳು ದಿನಗಳ ಅವಧಿಯ ಒಳಗಾಗಿ, ತೋರಿಸುವಂತೆ ಅವನನ್ನು ಅಗತ್ಯ ಪಡಿಸಿ, ನೀಡಬಹುದು.

(2) ಉಪನಿಯಮ (1)ರ ಅಡಿಯಲ್ಲಿ ನೀಡಲಾದ ಕಾರಣವನ್ನು ಕೇಳುವ ಸೂಚನಾ ಪತ್ರಕ್ಕೆ ಉತ್ತರವನ್ನು ಸದರಿ ನಿಯಮದಲ್ಲಿ ನಿರ್ದಿಷ್ಟಪಡಿಸಿದ ಅವಧಿಯ ಒಳಗಾಗಿ **ನಮೂನೆ ಜಿಎಸ್‌ಟಿ ಆರ್‌ಇಜಿ–18**ರಲ್ಲಿ ಒದಗಿಸತಕ್ಕದ್ದು.

(3) ತನ್ನ ನೋಂದಣಿಯ ರದ್ದತಿಗಾಗಿ ಅರ್ಜಿಯನ್ನು ಸಲ್ಲಿಸಿರುವ ಒಬ್ಬ ವ್ಯಕ್ತಿಯು ನೋಂದಣಿಗೆ ಬಾಧ್ಯನಾಗದೆಯಿರುವಲ್ಲಿ ಅಥವಾ ಆತನ ನೋಂದಣಿಯು ರದ್ದತಿಗೆ ಬಾಧ್ಯವಾಗಿದ್ದಲ್ಲಿ, ಯುಕ್ತ ಅಧಿಕಾರಿಯು ನಿಯಮ 20ರ ಅಡಿಯಲ್ಲಿ ಸಲ್ಲಿಸಲಾದ ಅರ್ಜಿಯ ದಿನಾಂಕದಿಂದ ಅಥವಾ ಸಂದರ್ಭಾನುಸಾರವಾಗಿ, ಉಪನಿಯಮ (1)ರ ಅಡಿಯಲ್ಲಿ ನೀಡಲಾದ ಕಾರಣವನ್ನು ಕೇಳುವ ಸೂಚನಾ ಪತ್ರದ ಉತ್ತರದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯ ಒಳಗಾಗಿ **ನಮೂನೆ ಜಿಎಸ್‌ಟಿ ಆರ್‌ಇಜಿ–19**ರಲ್ಲಿ ಒಂದು ಆದೇಶವನ್ನು ನೀಡತಕ್ಕದ್ದು, ಆತನು ನಿರ್ಧರಿಸುವ ದಿನಾಂಕದಿಂದ ಜಾರಿಗೆ ಬರುವಂತೆ ನೋಂದಣಿಯನ್ನು ರದ್ದುಗೊಳಿಸತಕ್ಕದ್ದು ಮತ್ತು ಪ್ರಕರಣ 29ರ ಉಪಪ್ರಕರಣ (5)ರ ಅಡಿಯಲ್ಲಿ ಸಂದಾಯ ಮಾಡಬೇಕಾದ ಮೊತ್ತವನ್ನು ಒಳಗೊಂಡಂತೆ, ಯಾವುದೇ ತೆರಿಗೆಯ, ಬಡ್ಡಿಯ ಅಥವಾ ದಂಡದ ಹಿಂಬಾಕಿಗಳನ್ನು ಸಂದಾಯ ಮಾಡುವಂತೆ ನಿರ್ದೇಶಿಸಿ ತೆರಿಗೆದಾಯಕ ವ್ಯಕ್ತಿಯನ್ನು ಅಧಿಸೂಚಿಸತಕ್ಕದ್ದು.

(4) ಉಪನಿಯಮ (2)ರ ಅಡಿಯಲ್ಲಿ ಒದಗಿಸಿದ ಉತ್ತರವು ತೃಪ್ತಿದಾಯಕವಾಗಿದ್ದಲ್ಲಿ, ಯುಕ್ತ ಅಧಿಕಾರಿಯು ನಡಾವಳಿಗಳನ್ನು ಕೈಬಿಡತಕ್ಕದ್ದು ಮತ್ತು ನಮೂನೆ ಜಿಎಸ್‌ಟಿ ಆರ್‌ಇಜಿ–20ರಲ್ಲಿ ಒಂದು ಆದೇಶವನ್ನು ಹೊರಡಿಸತಕ್ಕದ್ದು.

(5) ಉಪನಿಯಮ (3)ರ ಉಪಬಂಧಗಳು, ಮೃತ ಮಾಲೀಕನ ಕಾನೂನು ಸಮ್ಮತ ವಾರಸುದಾರರಿಗೆ, ಸ್ವತಃ ಮಾಲೀಕನೇ ಅರ್ಜಿಯನ್ನು ಸಲ್ಲಿಕೆ ಮಾಡಿದ ಹಾಗೆ ಯಥೋಚಿತ ವ್ಯತ್ಯಾಸಗಳೊಡನೆ ಅನ್ವಯವಾಗತಕ್ಕದ್ದು.

23. ನೋಂದಣಿಯ ರದ್ದತಿಯ ಹಿಂಪಡೆಯುವಿಕೆ.– (1) ಯಾರ ನೋಂದಣಿಯನ್ನು ಯುಕ್ತ ಅಧಿಕಾರಿಯು ತನ್ನ ಸ್ವಪ್ರೇರಣೆಯಿಂದ ರದ್ದುಗೊಳಿಸಿರುವನೋ ಆ ಒಬ್ಬ ನೋಂದಾಯಿತ ವ್ಯಕ್ತಿಯು, **ನಮೂನೆ ಜಿಎಸ್‌ಟಿ ಆರ್‌ಇಜಿ–21**ರಲ್ಲಿ ನೋಂದಣಿ ರದ್ದತಿಯ ಹಿಂಪಡೆಯುವಿಕೆಗಾಗಿ ಒಂದು ಅರ್ಜಿಯನ್ನು, ನೋಂದಣಿ ರದ್ದತಿಯ ಆದೇಶವನ್ನು ಜಾರಿಗೊಳಿಸಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯ ಒಳಗಾಗಿ, ಅಂಥ ಯುಕ್ತ ಅಧಿಕಾರಿಗೆ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ಸಾಮಾನ್ಯ ಪೋರ್ಟಲ್‌ನಲ್ಲಿ ಸಲ್ಲಿಸಬಹುದು.

ಪರಂತು, ರಿಟರ್ನಗಳನ್ನು ಒದಗಿಸಲು ನೋಂದಾಯಿತ ವ್ಯಕ್ತಿಯು ವಿಫಲವಾಗಿರುವುದಕ್ಕಾಗಿ ನೋಂದಣಿಯನ್ನು ರದ್ದು ಮಾಡಲಾಗಿದ್ದರೆ, ಅಂಥ ರಿಟರ್ನಗಳನ್ನು ಒದಗಿಸಿರುವುದನ್ನು ಮತ್ತು ಅಂಥ ರಿಟರ್ನಗಳ ನಿಬಂಧನೆಗಳಿಗೆ ಅನುಗುಣವಾಗಿ ತೆರಿಗೆಯ, ಹಾಗೆ ಬಾಕಿಯಿರುವ ಯಾವುದೇ ಮೊತ್ತವನ್ನು, ಅದಕ್ಕಾಗಿ ಸಂದಾಯ ಮಾಡಬೇಕಿರುವ ಬಡ್ಡಿ, ದಂಡದ ಯಾವುದೇ ಮೊತ್ತ ಮತ್ತು ಸದರಿ ರಿಟರ್ನಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ವಿಳಂಬ ಶುಲ್ಕದ ಜೊತೆಗೆ ಸಂದಾಯ ಮಾಡಲಾಗಿರುವುದನ್ನು ಹೊರತುಪಡಿಸಿದಂತೆ, ಹಿಂಪಡೆಯುವಿಕೆಯ ಅರ್ಜಿಯನ್ನು ಸಲ್ಲಿಸತಕ್ಕದ್ದಲ್ಲ.

(2) (ಎ) ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ, ನೋಂದಣಿಯ ರದ್ದತಿಯ ಹಿಂಪಡೆಯುವಿಕೆಗಾಗಿ ಸಾಕಷ್ಟು ಕಾರಣಾಧಾರಗಳಿವೆಯೆಂದುಯುಕ್ತ ಅಧಿಕಾರಿಗೆ ಮನವರಿಕೆಯಾದಲ್ಲಿ, ಅವನು, ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ **ನಮೂನೆ ಜಿಎಸ್‌ಟಿ ಆರ್‌ಇಜಿ–22**ರಲ್ಲಿ ಒಂದು ಆದೇಶದ ಮೂಲಕ ನೋಂದಣಿಯ ರದ್ದತಿಯನ್ನು ಹಿಂಪಡೆಯತಕ್ಕದ್ದು ಮತ್ತು ಅದನ್ನು ಅರ್ಜಿದಾರನಿಗೆ ತಿಳಿಸತಕ್ಕದ್ದು.

(ಬಿ) ಯುಕ್ತ ಅಧಿಕಾರಿಯು, ಖಂಡ (ಎ)ನಲ್ಲಿ ನಿರ್ದಿಷ್ಟಪಡಿಸಿರುವುಗಳನ್ನು ಹೊರತುಪಡಿಸಿದ ಸನ್ನಿವೇಶಗಳ ಅಡಿಯಲ್ಲಿ, ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ, **ನಮೂನೆ ಜಿಎಸ್‌ಟಿ ಆರ್‌ಇಜಿ–05**ರಲ್ಲಿ ಒಂದು ಆದೇಶದ ಮೂಲಕ ನೋಂದಣಿಯ ರದ್ದತಿಯ ಹಿಂಪಡೆಯುವಿಕೆಯ ಅರ್ಜಿಯನ್ನು ತಿರಸ್ಕರಿಸಬಹುದು ಮತ್ತು ಅದನ್ನು ಅರ್ಜಿದಾರನಿಗೆ ತಿಳಿಸಬಹುದು.

(3) ಯುಕ್ತ ಅಧಿಕಾರಿಯು, ಉಪನಿಯಮ (2)ರ ಖಂಡ (ಬಿ)ಯಲ್ಲಿ ಉಲ್ಲೇಖಿಸಲಾದ ಆದೇಶವನ್ನು ಹೊರಡಿಸುವ ಮೊದಲು, ಅರ್ಜಿದಾರನನ್ನು ಉಪನಿಯಮ (1)ರ ಅಡಿಯಲ್ಲಿ ಹಿಂಪಡೆಯುವಿಕೆಗಾಗಿ ಸಲ್ಲಿಸಿದ ಅರ್ಜಿಯನ್ನು ಏಕೆ ತಿರಸ್ಕರಿಸಬಾರದು ಎನ್ನುವುದಕ್ಕೆ ಕಾರಣಗಳನ್ನು ನೀಡುವಂತೆ ಕೋರಿ**ನಮೂನೆ ಜಿಎಸ್‌ಟಿ ಆರ್‌ಇಜಿ–23**ರಲ್ಲಿ ಒಂದು ಸೂಚನಾ ಪತ್ರವನ್ನು ನೀಡತಕ್ಕದ್ದು, ಮತ್ತು ಅರ್ಜಿದಾರನು ಸೂಚನಾ ಪತ್ರ ಜಾರಿಯಾದ ಏಳು ದಿನಗಳ ಅವಧಿಯ ಒಳಗಾಗಿ, **ನಮೂನೆ ಜಿಎಸ್‌ಟಿ ಆರ್‌ಇಜಿ–24**ರಲ್ಲಿ ಉತ್ತರವನ್ನು ಒದಗಿಸತಕ್ಕದ್ದು.

(4) **ನಮೂನೆ ಜಿಎಸ್‌ಟಿ ಆರ್‌ಇಜಿ–24**ರಲ್ಲಿ ಮಾಹಿತಿ ಅಥವಾ ಸ್ಪಷ್ಟೀಕರಣವನ್ನು ಸ್ವೀಕರಿಸಿದ ತರುವಾಯ, ಯುಕ್ತ ಅಧಿಕಾರಿಯು, ಉಪನಿಯಮ (2)ರಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ, ಅರ್ಜಿದಾರನಿಂದ ಅಂಥ ಮಾಹಿತಿ ಅಥವಾ ಸ್ಪಷ್ಟೀಕರಣವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯ ಒಳಗಾಗಿ, ಅರ್ಜಿಯನ್ನು ವಿಲೇ ಮಾಡಲು ಮುಂದುವರಿಯತಕ್ಕದ್ದು.

24. ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿನ ನೋಂದಾಯಿತ ವ್ಯಕ್ತಿಗಳ ವಲಸೆ.– (1) (ಎ) ಮೂಲದಲ್ಲಿ ತೆರಿಗೆಯನ್ನು ಮುರುಗಡೆ ಮಾಡುವ ಒಬ್ಬ ವ್ಯಕ್ತಿಯನ್ನು ಅಥವಾ ಒಬ್ಬ ಹೂಡುವಳಿ ಸೇವೆ ಹಂಚಿಕೆದಾರನನ್ನು ಹೊರತುಪಡಿಸಿದಂತೆ, ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ನೋಂದಾಯಿತನಾದ ಮತ್ತು ಆದಾಯ ತೆರಿಗೆ ಅಧಿನಿಯಮ, 1961ರ (1961ರ ಕೇಂದ್ರ ಅಧಿನಿಯಮ 43) ಉಪಬಂಧಗಳ ಅಡಿಯಲ್ಲಿ ನೀಡಲಾದ ಶಾಶ್ವತ ಖಾತೆ ಸಂಖ್ಯೆಯನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯು, ತನ್ನ ಮಿಂಚೋಲೆ ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ಸಿಂಧುಗೊಳಿಸುವಿಕೆಯ ಮೂಲಕ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ಸಾಮಾನ್ಯ ಪೋರ್ಟಲ್‌ನಲ್ಲಿ ದಾಖಲು ಮಾಡಿಕೊಳ್ಳತಕ್ಕದ್ದು.

(ಬಿ) ಖಂಡ (ಎ)ನ ಅಡಿಯಲ್ಲಿ ದಾಖಲು ಮಾಡಿಕೊಂಡ ನಂತರ, ಸದರಿ ವ್ಯಕ್ತಿಗೆ ತಾತ್ಕಾಲಿಕ ಆಧಾರದಲ್ಲಿ ನೋಂದಣಿಯನ್ನು ಮಂಜೂರು ಮಾಡತಕ್ಕದ್ದು ಮತ್ತು **ನಮೂನೆ ಜಿಎಸ್‌ಟಿ ಆರ್‌ಇಜಿ–25**ರಲ್ಲಿ ನೋಂದಣಿ ಪ್ರಮಾಣ ಪತ್ರವನ್ನು, ಅದರಲ್ಲಿ ಸರಕು ಮತ್ತು ಸೇವೆಗಳ ತೆರಿಗೆ ಗುರುತಿನ ಸಂಖ್ಯೆಯನ್ನು ಸೇರಿಸಿ, ಸಾಮಾನ್ಯ ಪೋರ್ಟಲ್‌ನಲ್ಲಿ ಅವನಿಗೆ ಲಭ್ಯವಾಗುವಂತೆ ಮಾಡತಕ್ಕದ್ದು:

ಪರಂತು, ಒಂದು ಶಾಶ್ವತ ಖಾತೆ ಸಂಖ್ಯೆಯ ಆಧಾರದ ಮೇಲೆ, ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಅನೇಕ ನೋಂದಣಿಗಳನ್ನು ಮಂಜೂರು ಮಾಡಲಾಗಿರುವ ಒಬ್ಬ ತೆರಿಗೆದಾಯಕ ವ್ಯಕ್ತಿಗೆ, ಈ ಅಧಿನಿಯಮದ ಅಡಿಯಲ್ಲಿ ಒಂದೇ ಒಂದು ತಾತ್ಕಾಲಿಕ ನೋಂದಣಿಯನ್ನು ಮಂಜೂರು ಮಾಡತಕ್ಕದ್ದು.

(2) (ಎ) ಉಪನಿಯಮ (1)ರ ಅಡಿಯಲ್ಲಿ ತಾತ್ಕಾಲಿಕ ನೋಂದಣಿಯನ್ನು ಮಂಜೂರು ಮಾಡಲಾಗಿರುವ ಪ್ರತಿಯೊಬ್ಬ ವ್ಯಕ್ತಿಯು, ಯುಕ್ತವಾಗಿ ಸಹಿಮಾಡಿದ ಅಥವಾ ವಿದ್ಯುನ್ಮಾನ ಪರಿಶೀಲನೆಯ ಕೋಡ್ ಮುಖಾಂತರ ಪರಿಶೀಲಿಸಲಾದ, ನಮೂನೆ ಜಿಎಸ್‌ಟಿ ಆರ್‌ಇಜಿ–26ರಲ್ಲಿ ಒಂದು ಅರ್ಜಿಯನ್ನು, ಸದರಿ ಅರ್ಜಿಯಲ್ಲಿ ನಿರ್ದಿಷ್ಟಪಡಿಸಿದ ದಸ್ತಾವೇಜುಗಳೊಂದಿಗೆ, ಸಾಮಾನ್ಯ ಪೋರ್ಟಲ್‌ನಲ್ಲಿ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಸಲ್ಲಿಸತಕ್ಕದ್ದು.

(ಬಿ) ಖಂಡ (ಎ)ನಲ್ಲಿ ಕೇಳಲಾದ ಮಾಹಿತಿಯನ್ನು ಮೂರು ತಿಂಗಳ ಅವಧಿಯ ಒಳಗಾಗಿ ಅಥವಾ ಈ ಸಂಬಂಧದಲ್ಲಿ ವಿಸ್ತರಿಸಬಹುದಾದ ಅಂಥ ಮುಂದುವರೆದ ಅವಧಿಯ ಒಳಗಾಗಿ ಒದಗಿಸತಕ್ಕದ್ದು.

(ಸಿ) ಅರ್ಜಿಯಲ್ಲಿ ಒದಗಿಸಲಾದ ಮಾಹಿತಿ ಮತ್ತು ವಿವರಗಳು ಯುಕ್ತ ಅಧಿಕಾರಿಗೆ ಸರಿಯಾಗಿವೆಯೆಂದು ಮತ್ತು ಸಂಪೂರ್ಣವೆಂದು ಕಂಡುಬಂದರೆ, **ನಮೂನೆ ಜಿಎಸ್‌ಟಿ ಆರ್‌ಇಜಿ–06**ರಲ್ಲಿ ನೋಂದಣಿ ಪ್ರಮಾಣ ಪತ್ರವನ್ನು, ವಿದ್ಯುನ್ಮಾನ ರೀತಿಯಲ್ಲಿ ನೋಂದಾಯಿತ ವ್ಯಕ್ತಿಗೆ ಸಾಮಾನ್ಯ ಪೋರ್ಟಲ್‌ನಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು.

(3) ಉಪನಿಯಮ (2)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ವಿವರಗಳು ಅಥವಾ ಮಾಹಿತಿಯನ್ನು ಒದಗಿಸದೆ ಇದ್ದಲ್ಲಿ ಅಥವಾ ಸರಿಯಾಗಿವೆಯೆಂದು ಮತ್ತು ಸಂಪೂರ್ಣವೆಂದು ಕಂಡುಬರದಿದ್ದಲ್ಲಿ, ಯುಕ್ತ ಅಧಿಕಾರಿಯು, **ನಮೂನೆ ಜಿಎಸ್‌ಟಿ ಆರ್‌ಇಜಿ–27**ರಲ್ಲಿ ಕಾರಣ ಕೇಳುವ ಸೂಚನಾ ಪತ್ರವನ್ನು ಜಾರಿ ಮಾಡಿದ ನಂತರ ಮತ್ತು ಸಂಬಂಧಿಸಿದ ವ್ಯಕ್ತಿಗೆ ತನ್ನ ಅಹವಾಲುಗಳನ್ನು ಹೇಳಿಕೊಳ್ಳಲು ಒಂದು ಯುಕ್ತವಾದ ಅವಕಾಶವನ್ನು ನೀಡಿದ ನಂತರ, ಉಪನಿಯಮ (1)ರ ಅಡಿಯಲ್ಲಿ ಮಂಜೂರು ಮಾಡಲಾದ ತಾತ್ಕಾಲಿ ನೋಂದಣಿಯನ್ನು ರದ್ದುಪಡಿಸತಕ್ಕದ್ದು ಮತ್ತು ನಮೂನೆ ಜಿಎಸ್‌ಟಿ ಆರ್‌ಇಜಿ–28ರಲ್ಲಿ ಒಂದು ಆದೇಶವನ್ನು ನೀಡತಕ್ಕದ್ದು.

ಪರಂತು, ಆ ವ್ಯಕ್ತಿಗೆ ತನ್ನ ಅಹವಾಲುಗಳನ್ನು ಹೇಳಿಕೊಳ್ಳಲು ಒಂದು ಯುಕ್ತವಾದ ಅವಕಾಶವನ್ನು ನೀಡಿದ ನಂತರ, ಯಾವ ಕಾರಣಕ್ಕಾಗಿ ಸೂಚನಪತ್ರವನ್ನು ನೀಡಲಾಗಿದೆಯೋ ಆ ಕಾರಣ ಅಸ್ತಿತ್ವದಲ್ಲಿಲ್ಲ ಎಂದು ಕಂಡು ಬಂದರೆ, **ನಮೂನೆ ಜಿಎಸ್‌ಟಿ ಆರ್‌ಇಜಿ–27**ರಲ್ಲಿ ನೀಡಲಾದ ಕಾರಣ ಕೇಳುವ ಸೂಚನಾ ಪತ್ರವನ್ನು, **ನಮೂನೆ ಜಿಎಸ್‌ಟಿ ಆರ್‌ಇಜಿ–20**ರಲ್ಲಿ ಒಂದು ಆದೇಶವನ್ನು ನೀಡುವುದರ ಮೂಲಕ ಹಿಂತೆಗೆದುಕೊಳ್ಳಬಹುದು.

(4) ಉಪನಿಯಮ (2)ರ ಖಂಡ (ಸಿ)ಯಲ್ಲಿ ಉಲ್ಲೇಖಿಸಿದ ಮಾಹಿತಿ ಮತ್ತು ವಿವರಗಳನ್ನು ಒದಗಿಸಿದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ನೋಂದಣಿ ಪ್ರಮಾಣಪತ್ರವನ್ನು ಸಾಮಾನ್ಯ ಪೋರ್ಟಲ್‌ನಲ್ಲಿ ಅರ್ಜಿದಾರನಿಗೆ ಲಭ್ಯವಾಗುವಂತೆ ಮಾಡಿರದಿದ್ದಲ್ಲಿ ಮತ್ತು ಉಪನಿಯಮ (3)ರ ಅಡಿಯಲ್ಲಿ ಸದರಿ ಅವಧಿಯ ಒಳಗಾಗಿ ಯಾವುದೇ ಸೂಚನಾ ಪತ್ರವನ್ನು ನೀಡಿರದಿದ್ದಲ್ಲಿ, ನೋಂದಣಿಯು ಮಂಜೂರು ಮಾಡಲಾಗಿದೆ ಎಂದು ಪರಿಭಾಸತಕ್ಕದ್ದು ಮತ್ತು ಯುಕ್ತವಾಗಿ ಸಹಿಮಾಡಿದ ಅಥವಾ ವಿದ್ಯುನ್ಮಾನ ಪರಿಶೀಲನೆಯ ಕೋಡ್ ಮುಖಾಂತರ ಪರಿಶೀಲಿಸಲಾದ ಸದರಿ ನೋಂದಣಿ ಪ್ರಮಾಣಪತ್ರವನ್ನು ನೋಂದಾಯಿತ ವ್ಯಕ್ತಿಗೆ ಸಾಮಾನ್ಯ ಪೋರ್ಟಲ್‌ನಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು.

(5) ಅಧಿನಿಯಮದ ಅಡಿಯಲ್ಲಿ, ನೋಂದಣಿಗೆ ಬಾಧ್ಯನಾಗದಿರುವ ಅಸ್ತಿತ್ವದಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ನೋಂದಾಯಿತನಾದ ಪ್ರತಿಯೊಬ್ಬ ವ್ಯಕ್ತಿಯು, ಗೊತ್ತುಪಡಿಸಲಾದ ದಿನದಿಂದ ಮೂವತ್ತು ದಿನಗಳ ಅವಧಿಯ ಒಳಗಾಗಿ, ಆತನ ಆಯ್ಕೆಯನುಸಾರ, **ನಮೂನೆ ಜಿಎಸ್‌ಟಿ ಆರ್‌ಇಜಿ–29**ರಲ್ಲಿ ವಿದ್ಯುನ್ಮಾನ ರೀತಿಯಲ್ಲಿ, ಆತನಿಗೆ ಮಂಜೂರು ಮಾಡಿದ ನೋಂದಣಿಯ ರದ್ದತಿಗಾಗಿ ಒಂದು ಅರ್ಜಿಯನ್ನು ಸಾಮಾನ್ಯ ಪೋರ್ಟಲ್‌ನಲ್ಲಿ ಸಲ್ಲಿಸಬಹುದು ಮತ್ತು ಯುಕ್ತ ಅಧಿಕಾರಿಯು ತಾನು ಸೂಕ್ತವೆಂದು ಪರಿಭಾವಿಸಿದ ಅಂಥ ವಿಚಾರಣೆಯನ್ನು ನಡೆಸಿದ ನಂತರ, ಸದರಿ ನೋಂದಣಿಯನ್ನು ರದ್ದುಪಡಿಸತಕ್ಕದ್ದು.

25. ಕೆಲವೊಂದು ಸಂದರ್ಭಗಳಲ್ಲಿ ವ್ಯವಹಾರದ ಆವರಣಗಳ ಭೌತಿಕ ಪರಿಶೀಲನೆ.– ಯುಕ್ತ ಅಧಿಕಾರಿಗೆ, ನೋಂದಣಿಯನ್ನು ಮಂಜೂರು ಮಾಡಿದ ನಂತರ, ನೋಂದಾಯಿತ ವ್ಯಕ್ತಿಯ ವ್ಯವಹಾರದ ಸ್ಥಳದ ಭೌತಿಕ ಪರಿಶೀಲನೆಯನ್ನು ಮಾಡುವುದು ಅಗತ್ಯವಿದೆ ಎಂದು ಮನವರಿಕೆಯಾದಲ್ಲಿ, ಅವನು ಅಂಥ ಪರಿಶೀಲನೆಯನ್ನು ಮಾಡಿಸಬಹುದು ಮತ್ತು ಪರಿಶೀಲನಾ ವರದಿಯನ್ನು, ಛಾಯಾಚಿತ್ರಗಳನ್ನು ಒಳಗೊಂಡಂತೆ ಇತರೇ ದಸ್ತಾವೇಜುಗಳೊಂದಿಗೆ, **ನಮೂನೆ ಜಿಎಸ್‌ಟಿ ಆರ್‌ಇಜಿ–30**ರಲ್ಲಿ, ಅಂಥ ಪರಿಶೀಲನೆಯ ದಿನಾಂಕದ ನಂತರದ ಹದಿನೈದು ಕೆಲಸದ ದಿನಗಳ ಅವಧಿಯ ಒಳಗಾಗಿ, ಸಾಮಾನ್ಯ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡತಕ್ಕದ್ದು.

26. ಅಧಿಪ್ರಮಾಣೀಕರಣದ ವಿಧಾನ.– (1) ಸೂಚನಾ ಪತ್ರಗಳಿಗೆ ಉತ್ತರಗಳೇನಾದರೂ ಇದ್ದಲ್ಲಿ ಅವುಗಳನ್ನು ಒಳಗೊಂಡಂತೆ ಎಲ್ಲಾ ಅರ್ಜಿಗಳನ್ನು, ಹೊರಮುಖ ಮತ್ತು ಒಳಮುಖ ಪೂರೈಕೆಗಳ ವಿವರಗಳನ್ನು ಒಳಗೊಂಡಂತೆ ರಿಟರ್ನಗಳನ್ನು, ಅಪೀಲುಗಳನ್ನು ಅಥವಾ ಈ ನಿಯಮಗಳ ಅಡಿಯಲ್ಲಿ ಸಲ್ಲಿಸಲು ಅಗತ್ಯವಿರುವ ಯಾವುದೇ ಇತರ ದಸ್ತಾವೇಜುಗಳನ್ನು,

ಡಿಜಿಟಲ್ ಸಹಿಯಿರುವ ಪ್ರಮಾಣಪತ್ರದೊಂದಿಗೆ ಅಥವಾ ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000ದ (2000ದ ಕೇಂದ್ರ ಅಧಿನಿಯಮ 21) ಅಡಿಯಲ್ಲಿ ನಿರ್ದಿಷ್ಟಪಡಿಸಿದ ಇ–ಸಹಿಯ ಮೂಲಕ ಅಥವಾ ಈ ಸಂಬಂಧದಲ್ಲಿ ಮಂಡಳಿಯಿಂದ ಅಧಿಸೂಚಿಸಿದ ಯಾವುದೇ ಇತರ ಬಗೆಯ ಸಹಿಯ ಅಥವಾ ಪರಿಶೀಲನಾ ಪ್ರಕಾರದ ಮೂಲಕ ಪರಿಶೀಲಿಸಿ ವಿದ್ಯುನ್ಮಾನ ರೀತಿಯಲ್ಲಿ ಸಲ್ಲಿಸತಕ್ಕದ್ದು:

ಪರಂತು, ಕಂಪನಿಗಳ ಅಧಿನಿಯಮ, 2013ರ (2013ರ ಕೇಂದ್ರ ಅಧಿನಿಯಮ 18) ಅಡಿಯಲ್ಲಿ ನೋಂದಾಯಿತನಾದ ಒಬ್ಬ ನೋಂದಾಯಿತ ವ್ಯಕ್ತಿಯು, ಡಿಜಿಟಲ್ ಸಹಿಯಿರುವಪ್ರಮಾಣಪತ್ರದ ಮೂಲಕ ಮಾತ್ರ ಪರಿಶೀಲಿಸಿದ ದಸ್ತಾವೇಜುಗಳು ಅಥವಾ ಅರ್ಜಿಯನ್ನು ಒದಗಿಸತಕ್ಕದ್ದು:

(2) ರಿಟರ್ನಗಳನ್ನು ಒಳಗೊಂಡಂತೆ ಆನ್‌ಲೈನ್‌ನಲ್ಲಿ ಒದಗಿಸಿದ ಪ್ರತಿಯೊಂದು ದಸ್ತಾವೇಜಗೆ–

(ಎ) ಒಬ್ಬ ವ್ಯಕ್ತಿಯ ಸಂದರ್ಭದಲ್ಲಿ, ಸ್ವತಃ ವ್ಯಕ್ತಿಯ ಮೂಲಕಅಥವಾ ಅವನು ಭಾರತದಲ್ಲಿಕಿ ಇರದಿದ್ದಲ್ಲಿ, ಈ ಸಂಬಂಧದಲ್ಲಿ ಅವನಿಂದ ಯುಕ್ತವಾಗಿ ಪ್ರಾಧಿಕೃತರಾದ ಕೆಲವು ಇತರ ವ್ಯಕ್ತಿಗಳ ಮೂಲಕಮತ್ತು ವ್ಯಕ್ತಿಯು ತನ್ನ ವ್ಯವಹಾರಗಳಿಗೆ ಹಾಜರಾಗಲು ಮಾನಸಿಕವಾಗಿ ಅಸಮರ್ಥನಾಗಿದ್ದಲ್ಲಿ, ಆತನ ಪೋಷಕ ಆಥವಾ ಆತನ ಪರವಾಗಿ ಕಾರ್ಯನಿರ್ವಹಿಸಲು ಸಮರ್ಥನಾದ ಯಾವುದೇ ಇತರ ವ್ಯಕ್ತಿಯಿಂದ;

(ಬಿ) ಹಿಂದೂ ಅವಿಭಾಜ್ಯ ಕುಟುಂಬದ ಸಂದರ್ಭದಲ್ಲಿ, ಒಬ್ಬ ಕರ್ತನಿಂದ ಅಥವಾ ಕರ್ತನು ಭಾರತದಲ್ಲಿ ಇರದಿದ್ದಲ್ಲಿ, ಅಥವಾ ತನ್ನ ವ್ಯವಹಾರಗಳಿಗೆ ಹಾಜರಾಗಲು ಮಾನಸಿಕವಾಗಿ ಅಸಮರ್ಥನಾಗಿದ್ದಲ್ಲಿ, ಅಂಥ ಕುಟಂಬದ ಯಾವುದೇ ಇತರ ವಯಸ್ಕ ಸದಸ್ಯನಿಂದ ಅಥವಾ ಅಂಥ ಕರ್ತನ ಪ್ರಾಧಿಕೃತ ಸಹಿದಾರನಿಂದ;

(ಸಿ) ಒಂದು ಕಂಪನಿಯ ಸಂದರ್ಭದಲ್ಲಿ, ಅದರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಪ್ರಾಧಿಕೃತ ಸಹಿದಾರನಿಂದ;

(ಡಿ) ಸರ್ಕಾರ ಅಥವಾ ಯಾವುದೇ ಸರ್ಕಾರದ ಏಜೆನ್ಸಿ ಅಥವಾ ಸ್ಥಳೀಯ ಪ್ರಾಧಿಕಾರದ ಸಂದರ್ಭದಲ್ಲಿ, ಈ ಸಂಬಂಧದಲ್ಲಿ ಪ್ರಾಧಿಕೃತನಾದ ಒಬ್ಬ ಅಧಿಕಾರಿಯಿಂದ;

(ಇ) ಒಂದು ಪಾಲುದಾರಿಕಾ ಸಂಸ್ಥೆಯ ಸಂದರ್ಭದಲ್ಲಿ, ಅದರ ಅಪ್ರಾಪ್ತ್ಯಕನಾಗಿರದ ಯಾವುದೇ ಪಾಲುದಾರನಿಂದ ಅಥವಾ ಪ್ರಾಧಿಕೃತ ಸಹಿದಾರನಿಂದ;

(ಎಫ್) ಯಾವುದೇ ಇತರೇ ಸಂಘದ ಸಂದರ್ಭದಲ್ಲಿ, ಸಂಘದ ಯಾವುದೇ ಸದಸ್ಯನಿಂದ ಅಥವಾ ವ್ಯಕ್ತಿಗಳಿಂದ ಅಥವಾ ಪ್ರಾಧಿಕೃತ ಸಹಿದಾರನಿಂದ;

(ಜಿ) ಒಂದು ಟ್ರಸ್ಟ್‌ನ ಸಂದರ್ಭದಲ್ಲಿ, ಟ್ರಸ್ಟಿಯಿಂದ ಅಥವಾ ಯಾವುದೇ ಟ್ರಸ್ಟಿಯಿಂದ ಅಥವಾ ಪ್ರಾಧಿಕೃತ ಸಹಿದಾರನಿಂದ;

(ಹೆಚ್) ಇತರೇ ಯಾವುದೇ ವ್ಯಕ್ತಿಗಳ ಸಂದರ್ಭದಲ್ಲಿ, ಆತನ ಪರವಾಗಿ ಕಾರ್ಯನಿರ್ವಹಿಸಲು ಸಮರ್ಥನಾದ ಕೆಲವು ವ್ಯಕ್ತಿಯಿಂದ, ಅಥವಾ ಪ್ರಕರಣ 48ರ ಉಪಬಂಧಗಳಿಗೆ ಅನುಸಾರವಾಗಿ ಪ್ರಾಧಕೃತನಾದ ಒಬ್ಬ ವ್ಯಕ್ತಿಯು,

– ಸಹಿಮಾಡಿರತಕ್ಕದ್ದು ಮತ್ತು ವಿದ್ಯುನ್ಮಾನ ಪರಿಶೀಲನೆಯ ಕೋಡ್ ಮುಖಾಂತರ ಪರಿಶೀಲಿಸಿರತಕ್ಕದ್ದು.

(3) ಈ ನಿಯಮಗಳ ಅಡಿಯಲ್ಲಿನ ಎಲ್ಲಾ ಸೂಚನಾಪತ್ರಗಳನ್ನು, ಪ್ರಮಾಣಪತ್ರಗಳನ್ನು ಮತ್ತು ಆದೇಶಗಳನ್ನು, ಯುಕ್ತ ಅಧಿಕಾರಿಯಿಂದ ಅಥವಾ ಅಂಥ ಸೂಚನಾಪತ್ರಗಳನ್ನು, ಪ್ರಮಾಣಪತ್ರಗಳನ್ನು ಮತ್ತು ಆದೇಶಗಳನ್ನು, ನೀಡಲು ಪ್ರಾಧಿಕೃತನಾದ ಯಾವುದೇ ಇತರೇ ಅಧಿಕಾರಿಯಿಂದ, ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000ದ (2000ದ ಕೇಂದ್ರ ಅಧಿನಿಯಮ 21) ಅಡಿಯಲ್ಲಿ ನಿರ್ದಿಷ್ಟಪಡಿಸಿದ ಡಿಜಿಟಲ್ ಸಹಿಯಿರುವಪ್ರಮಾಣಪತ್ರದೊಂದಿಗೆ ವಿದ್ಯುನ್ಮಾನ ರೀತಿಯಲ್ಲಿ ನೀಡತಕ್ಕದ್ದು.

ಅಧ್ಯಾಯ IV
ಪೂರೈಕೆಯ ಮೌಲ್ಯದ ನಿರ್ಧರಣೆ

27. ಪ್ರತಿಫಲವು ಪೂರ್ಣವಾಗಿ ಹಣದ ರೂಪದಲ್ಲಿಲ್ಲದಿರುವಾಗ ಸರಕು ಅಥವಾ ಸೇವೆಗಳ ಪೂರೈಕೆಯ ಮೌಲ್ಯ.– ಪೂರ್ಣವಾಗಿ ಹಣದಲ್ಲಿ ಇಲ್ಲದ ಪ್ರತಿಫಲಕ್ಕಾಗಿ ಮಾಡಿದ ಸರಕು ಅಥವಾ ಸೇವೆಗಳ ಪೂರೈಕೆಯಾದಲ್ಲಿ, ಪೂರೈಕೆಯ ಮೌಲ್ಯವು,

(ಎ) ಅಂಥ ಪೂರೈಕೆಯ ಮುಕ್ತ ಮಾರುಕಟ್ಟೆಯ ಮೌಲ್ಯವಾಗಿರತಕ್ಕದ್ದು;

(ಬಿ) ಮುಕ್ತ ಮಾರುಕಟ್ಟೆಯ ಮೌಲ್ಯವು ಲಭ್ಯವಿರದಿದ್ದರೆ, ಹಣದ ರೂಪದ ಪ್ರತಿಫಲದ ಮತ್ತು ಹಣದ ರೂಪದಲ್ಲಿರದ ಪ್ರತಿಫಲಕ್ಕೆ ತತ್ಸಮಾನವಾದ ಹಣದಲ್ಲಿನ ಯಾವುದೇ ಅಂಥ ಮುಂದುವರೆದ ಮೊತ್ತದ, ಪೂರೈಕೆಯ ಸಮಯದಲ್ಲಿ ಅಂಥ ಮೊತ್ತ ತಿಳಿದುಬಂದರೆ, ಒಟ್ಟು ಮೊತ್ತವಾಗಿರತಕ್ಕದ್ದು;

(ಸಿ) ಖಂಡ (ಎ) ಅಥವಾ ಖಂಡ (ಬಿ)ಯ ಅಡಿಯಲ್ಲಿ, ಪೂರೈಕೆಯ ಮೌಲ್ಯವನ್ನು ನಿರ್ಧರಿಸಲಾಗದಿದ್ದರೆ, ಅದೇ ತರಹದ ಮತ್ತು ಗುಣಮಟ್ಟದ ಸರಕು ಅಥವಾ ಸೇವೆಗಳ ಪೂರೈಕೆಯ ಮೌಲ್ಯವಾಗಿರತಕ್ಕದ್ದು;

(ಡಿ) ಖಂಡ (ಎ) ಅಥವಾ ಖಂಡ (ಬಿ) ಅಥವಾ ಖಂಡ (ಸಿ)ಯ ಅಡಿಯಲ್ಲಿ, ಮೌಲ್ಯವನ್ನು ನಿರ್ಧರಿಸಲಾಗದಿದ್ದರೆ, ನಿಯಮ 30 ಅಥವಾ ನಿಯಮ 31ನ್ನು ಅದೇ ಕ್ರಮದಲ್ಲಿ ಅನ್ವಯಿಸಿ ನಿರ್ಧರಿಸಿದಂತೆ ಹಣದ ರೂಪದ ಪ್ರತಿಫಲದ ಮತ್ತು ಹಣದ ರೂಪದಲ್ಲಿರದ ಪ್ರತಿಫಲಕ್ಕೆ ತತ್ಸಮಾನವಾದ ಹಣದಲ್ಲಿನ ಯಾವುದೇ ಅಂಥ ಮುಂದುವರೆದ ಮೊತ್ತದ ಒಟ್ಟು ಮೊತ್ತವಾಗಿರತಕ್ಕದ್ದು;

ದೃಷ್ಟಾಂತ:

(1) ಒಂದು ಹೊಸ ದೂರವಾಣಿಯನ್ನು ಒಂದು ಹಳೆಯದಾದ ದೂರವಾಣಿಯ ವಿನಿಮಯದೊಂದಿಗೆ ಇಪ್ಪತ್ತು ಸಾವಿರ ರೂಪಾಯಿಗಳಿಗೆ ಪೂರೈಕೆ ಮಾಡಿದ್ದಲ್ಲಿ ಮತ್ತು ವಿನಿಮಯರಹಿತವಾದ ಹೊಸ ದೂರವಾಣಿಯ ಬೆಲೆ ಇಪ್ಪತ್ತು ಸಾವಿರದ ನಾಲ್ಕು ಸಾವಿರ ರೂಪಾಯಿಗಳಾಗಿದ್ದರೆ, ಹೊಸ ದೂರವಾಣಿಯ ಮುಕ್ತ ಮಾರುಕಟ್ಟೆಯ ಮೌಲ್ಯವು ಇಪ್ಪತ್ತು ಸಾವಿರದ ನಾಲ್ಕು ಸಾವಿರ ರೂಪಾಯಿಗಳಾಗಿರುತ್ತದೆ.

(2) ಒಂದು ಲ್ಯಾಪ್‌ಟಾಪ್‌ಅನ್ನು ಸ್ವೀಕರಿಸುವವನಿಂದ ತಯಾರಿಕೆಯಾದ ಪ್ರಿಂಟರ್‌ನ್ನು ವಸ್ತು ವಿನಿಮಯದೊಂದಿಗೆ ನಲವತ್ತು ಸಾವಿರ ರೂಪಾಯಿಗಳಿಗೆ ಪೂರೈಕೆ ಮಾಡಿದ್ದಲ್ಲಿ ಮತ್ತು ಪೂರೈಕೆಯ ಸಮಯದಲ್ಲಿ ಪ್ರಿಂಟರ್‌ನ ಮೌಲ್ಯವು ನಾಲ್ಕು ಸಾವಿರ ರೂಪಾಯಿಗಳಾಗಿದ್ದು ಆದರೆ ಲ್ಯಾಪ್‌ಟಾಪ್‌ನ ಮುಕ್ತ ಮಾರುಕಟ್ಟೆಯ ಬೆಲೆ ಗೊತ್ತಿಲ್ಲದಿದ್ದಾಗ, ಲ್ಯಾಪ್‌ಟಾಪ್‌ನ ಪೂರೈಕೆ ಮೌಲ್ಯ ನಲವತ್ತ ನಾಲ್ಕು ಸಾವಿರ ರೂಪಾಯಿಗಳಾಗಿರುತ್ತದೆ.

28. ಏಜೆಂಟನ ಮೂಲಕವಾಗಿರುವುದನ್ನು ಹೊರತುಪಡಿಸಿದಂತೆ, ವಿಭಿನ್ನ ಅಥವಾ ಸಂಬಂಧಿತ ವ್ಯಕ್ತಿಗಳ ನಡುವೆ ನಡೆದ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯ ಮೌಲ್ಯ.– ಪ್ರಕರಣ 25ರ ಉಪಪ್ರಕರಣ (4) ಮತ್ತು (5)ರಲ್ಲಿ ನಿರ್ದಿಷ್ಟಪಡಿಸಿದ ವಿಭಿನ್ನ ವ್ಯಕ್ತಿಗಳ ನಡುವಿನ ಅಥವಾ ಏಜೆಂಟನ ಮೂಲಕ ಪೂರೈಕೆ ಮಾಡುವುದನ್ನು ಹೊರತುಪಡಿಸಿದಂತೆ ಪೂರೈಕೆದಾರ ಮತ್ತು ಸ್ವೀಕರಿಸುವವನು ಸಂಬಂಧಿತರಾಗಿದ್ದಲ್ಲಿ, ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯ ಮೌಲ್ಯವು,–

(ಎ) ಅಂಥ ಪೂರೈಕೆಯ ಮುಕ್ತ ಮಾರುಕಟ್ಟೆಯ ಮೌಲ್ಯವಾಗಿರತಕ್ಕದ್ದು;

(ಬಿ) ಮುಕ್ತ ಮಾರುಕಟ್ಟೆಯ ಮೌಲ್ಯವು ಲಭ್ಯವಿರದಿದ್ದರೆ, ಅದೇ ತರಹದ ಮತ್ತು ಗುಣಮಟ್ಟದ ಸರಕು ಅಥವಾ ಸೇವೆಗಳ ಪೂರೈಕೆಯ ಮೌಲ್ಯವಾಗಿರತಕ್ಕದ್ದು;

(ಸಿ) ಖಂಡ (ಎ) ಅಥವಾ ಖಂಡ (ಬಿ)ಯ ಅಡಿಯಲ್ಲಿ, ಮೌಲ್ಯವನ್ನು ನಿರ್ಧರಿಸಲಾಗದಿದ್ದರೆ, ನಿಯಮ 30 ಅಥವಾ ನಿಯಮ 31ನ್ನು ಅದೇ ಕ್ರಮದಲ್ಲಿ ಅನ್ವಯಿಸಿ ನಿರ್ಧರಿಸಲಾದ ಮೌಲ್ಯವಾಗಿರತಕ್ಕದ್ದು:

ಪರಂತು, ಸ್ವೀಕರಿಸುವವನು ಸರಕುಗಳನ್ನು ಹಾಗೆಯೇ ಮುಂದುವರೆದ ಪೂರೈಕೆ ಮಾಡಲು ಉದ್ದೇಶಿಸಿದ್ದಲ್ಲಿ, ಮೌಲ್ಯವು, ಪೂರೈಕೆದಾರನ ಆಯ್ಕೆಯ ಅನ್ವಯ, ಸ್ವೀಕರಿಸುವವನಿಂದ ಸಂಬಂಧಿತ ವ್ಯಕ್ತಿಯಾಗಿರದ ತನ್ನ ಗ್ರಾಹಕನಿಗೆ ಅದೇ ತರಹದ ಮತ್ತು ಗುಣಮಟ್ಟದ ಸರಕುಗಳ ಪೂರೈಕೆಗಾಗಿ ವಿಧಿಸಿದ ಬೆಲೆಯ ಶೇಕಡಾ ತೊಂಬತ್ತರಷ್ಟಕ್ಕೆ ತತ್ಸಮಾನವಾದ ಒಂದು ಮೊತ್ತವಾಗಿರತಕ್ಕದ್ದು:

ಮತ್ತು ಪರಂತು, ಸ್ವೀಕರಿಸುವವನು ಪೂರ್ಣ ಹೂಡುವಳಿ ತೆರಿಗೆ ಜಮೆಗೆ ಅರ್ಹನಾಗಿದ್ದಲ್ಲಿ, ಬೆಲೆಪಟ್ಟಿಯಲ್ಲಿ ಘೋಷಿಸಲಾದ ಮೌಲ್ಯವನ್ನು ಸರಕು ಅಥವಾ ಸೇವೆಗಳ ಮುಕ್ತ ಮಾರುಕಟ್ಟೆಯ ಮೌಲ್ಯ ಎಂದು ಪರಿಭಾವಿಸತಕ್ಕದ್ದು.

29. ಒಬ್ಬ ಏಜೆಂಟನ ಮೂಲಕ ಮಾಡಿದ ಅಥವಾ ಸ್ವೀಕರಿಸಿದ ಸರಕುಗಳ ಪೂರೈಕೆಯ ಮೌಲ್ಯ.–ಪ್ರಧಾನಕರ್ತ ಮತ್ತು ಆತನ ಏಜೆಂಟನ ನಡುವಿನ ಸರಕುಗಳ ಪೂರೈಕೆಯ ಮೌಲ್ಯವು,–

(ಎ) ಪೂರೈಕೆ ಮಾಡಲಾದ ಸರಕುಗಳ ಮುಕ್ತ ಮಾರುಕಟ್ಟೆಯ ಮೌಲ್ಯವಾಗಿರತಕ್ಕದ್ದು ಅಥವಾ ಸರಕುಗಳನ್ನು ಹಾಗೆಯೇ ಮುಂದುವರೆದ ಪೂರೈಕೆಮಾಡಲು ಉದ್ದೇಶಿಸಿದ್ದಲ್ಲಿ, ಪೂರೈಕೆದಾರನ ಆಯ್ಕೆಯ ಅನ್ವಯ, ಸ್ವೀಕರಿಸುವವನಿಂದ ಸಂಬಂಧಿತ ವ್ಯಕ್ತಿಯಾಗಿರದ ತನ್ನ ಗ್ರಾಹಕನಿಗೆ ಅದೇ ತರಹದ ಮತ್ತು ಗುಣಮಟ್ಟದ ಸರಕುಗಳ ಪೂರೈಕೆಗಾಗಿ ವಿಧಿಸಿದ ಬೆಲೆಯ ಶೇಕಡಾ ತೊಂಬತ್ತರಷ್ಟಾಗಿರತಕ್ಕದ್ದು:

ದೃಷ್ಟಾಂತ: *ಒಬ್ಬ ಪ್ರಧಾನಕರ್ತನು ನೆಲಗಡಲೆಯನ್ನು ತನ್ನ ಏಜೆಂಟನಿಗೆ ಪೂರೈಕೆ ಮಾಡಿದ್ದು ಮತ್ತು ಆ ಏಜೆಂಟನು ಆ ಪೂರೈಕೆಯ ದಿನದಂದು, ತರುವಾಯದ ಪೂರೈಕೆಯಲ್ಲಿ ಅದೇ ತರಹದ ಮತ್ತು ಗುಣಮಟ್ಟದ ನೆಲಗಡಲೆಯನ್ನು ಪ್ರತಿ ಕ್ವಿಂಟಾಲ್‌ಗೆ ಐದು ಸಾವಿರ ರೂಪಾಯಿಗಳ ಬೆಲೆಯಲ್ಲಿ ಪೂರೈಕೆ ಮಾಡುತ್ತಿರುತ್ತಾನೆ. ಮತ್ತೊಬ್ಬ ಸ್ವತಂತ್ರನಾದ ಪೂರೈಕೆದಾರ ಸದರಿ ಏಜೆಂಟನಿಗೆ ಅದೇ ತರಹದ ಮತ್ತು ಗುಣಮಟ್ಟದ ನೆಲಗಡಲೆಯನ್ನು ಪ್ರತಿ ಕ್ವಿಂಟಾಲ್‌ಗೆ ನಾಲ್ಕು ಸಾವಿರದ ಐನೂರ ಐವತ್ತು ರೂಪಾಯಿಗಳ ಬೆಲೆಯಲ್ಲಿ ಪೂರೈಕೆ ಮಾಡುತ್ತಿರುತ್ತಾನೆ. ಪ್ರಧಾನಕರ್ತನಿಂದ ಮಾಡಿದ ಪೂರೈಕೆಯ ಮೌಲ್ಯವು ಪ್ರತಿ ಕ್ವಿಂಟಾಲ್‌ಗೆ ನಾಲ್ಕು ಸಾವಿರದ ಐನೂರ ಐವತ್ತು ರೂಪಾಯಿಗಳು ಆಗಿರತಕ್ಕದ್ದು ಅಥವಾ ಆತನು ಆಯ್ಕೆಯನ್ನು ಚಲಾಯಿಸಿದ್ದಲ್ಲಿ, ಆ ಮೌಲ್ಯವು ಐದು ಸಾವಿರ ರೂಪಾಯಿಗಳ ಶೇಕಡ 90%ರಷ್ಟಾದ ನಾಲ್ಕು ಸಾವಿರದ ಐನೂರು ರೂಪಾಯಿಗಳು ಪ್ರತಿ ಕ್ವಿಂಟಾಲ್‌ಗೆ ಆಗಿರತಕ್ಕದ್ದು.*

(ಬಿ) ಪೂರೈಕೆಯ ಮೌಲ್ಯವನ್ನು ಖಂಡ (ಎ)ನ ಅಡಿಯಲ್ಲಿ, ನಿರ್ಧರಿಸಲಾಗದಿದ್ದಲ್ಲಿ, ಅದನ್ನು ನಿಯಮ 30 ಅಥವಾ ನಿಯಮ 31ನ್ನು ಅದೇ ಕ್ರಮದಲ್ಲಿ ಅನ್ವಯಿಸಿ ನಿರ್ಧರಿಸತಕ್ಕದ್ದು;

30. ಬೆಲೆಯ ಆಧಾರದಲ್ಲಿ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯ ಮೌಲ್ಯ.– ಈ ಹಿಂದಿನ ಯಾವುದೇ ನಿಯಮಗಳ ಮೂಲಕ, ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯ ಮೌಲ್ಯವನ್ನು ನಿರ್ಧರಿಸಲಾಗದಿದ್ದಲ್ಲಿ, ಮೌಲ್ಯವು, ಉತ್ಪಾದನೆ ಅಥವಾ ತಯಾರಿಕೆಯ ವೆಚ್ಚದ ಅಥವಾ ಅಂಥ ಸರಕುಗಳ ಆರ್ಜನಾ ವೆಚ್ಚದ ಅಥವಾ ಅಂಥ ಸೇವೆಗಳ ಒದಗಿಸುವಿಕೆಯ ವೆಚ್ಚದ ಶೇಕಡ ನೂರ ಹತ್ತರಷ್ಟಾಗಿರತಕ್ಕದ್ದು.

31. ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯ ಮೌಲ್ಯ ನಿರ್ಧರಣೆಗಾಗಿ ಉಳಿಕೆವಿಧಾನ.– ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯ ಮೌಲ್ಯವನ್ನು ನಿಯಮ 1 ರಿಂದ 4ರುಗಳ ಅಡಿಯಲ್ಲಿ

ನಿರ್ಧರಿಸಲಾಗದಿದ್ದಲ್ಲಿ, ಅದನ್ನು, ಪ್ರಕರಣ 15 ಮತ್ತು ಈ ಅಧ್ಯಾಯದ ಉಪಬಂಧಗಳ ತತ್ವಗಳು ಮತ್ತು ಸಾಮಾನ್ಯ ಉಪಬಂಧಗಳೊಂದಿಗೆ ಸುಸಂಗತವಾಗಿರುವ ಯುಕ್ತವಾದ ಮಾರ್ಗಗಳನ್ನು ಉಪಯೋಗಿಸಿ ನಿರ್ಧರಿಸತಕ್ಕದ್ದು:

ಪರಂತು, ಸೇವೆಗಳ ಪೂರೈಕೆಯ ಸಂದರ್ಭದಲ್ಲಿ, ಪೂರೈಕೆದಾರನು, ನಿಯಮ 30ನ್ನು ಗಣನೆಗೆ ತೆಗೆದುಕೊಳ್ಳದೆ ಈ ನಿಯಮವನ್ನು ಆಯ್ಕೆ ಮಾಡಿಕೊಳ್ಳಬಹುದು.

32. ಕೆಲವೊಂದು ಪೂರೈಕೆಗಳಿಗೆ ಸಂಬಂಧಿಸಿದಂತೆ ಮೌಲ್ಯದ ನಿರ್ಧರಣೆ.–(1) ಈ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಕೆಳಗೆ ನಿರ್ದಿಷ್ಟಪಡಿಸಿದ ಪೂರೈಕೆಗಳಿಗೆ ಸಂಬಂಧಿಸಿದಂತೆ ಮೌಲ್ಯವನ್ನು, ಪೂರೈಕೆದಾರನ ಆಯ್ಕೆಯ ಅನ್ವಯ, ಇನ್ನು ಮುಂದೆ ಒದಗಿಸಲಾದ ವಿಧಾನದಲ್ಲಿ ನಿರ್ಧರಿಸತಕ್ಕದ್ದು.

(2) ಹಣ ಬದಲಾವಣೆಯನ್ನು ಒಳಗೊಂಡಂತೆ, ವಿದೇಶಿ ಕರೆನ್ಸಿಯ ಖರೀದಿ ಅಥವಾ ಮಾರಾಟಕ್ಕೆ ಸಂಬಂಧಿಸಿದ ಸೇವೆಗಳ ಪೂರೈಕೆಯ ಮೌಲ್ಯವನ್ನು, ಸೇವೆಯ ಪೂರೈಕೆದಾರನು ಕೆಳಕಂಡ ವಿಧಾನದಲ್ಲಿ ನಿರ್ಧರಿಸತಕ್ಕದ್ದು, ಅಂದರೆ:–

(ಎ) ಒಂದು ಕರೆನ್ಸಿಯು, ಭಾರತೀಯ ರೂಪಾಯಿಗಳಿಂದ ಅಥವಾ ರೂಪಾಯಿಗಳಿಗೆ ವಿನಿಮಯವಾದಾಗ, ಮೌಲ್ಯವು, ಅದರ ಕೊಳ್ಳುವ ದರ ಅಥವಾ ಸಂದರ್ಭಾನುಸಾರವಾಗಿ ಮಾರಾಟದ ದರ ಮತ್ತು ಆ ಸಮಯದಲ್ಲಿನ ಆ ಕರೆನ್ಸಿಯ ಭಾರತೀಯ ರಿಸರ್ವ್ ಬ್ಯಾಂಕಿನ ಉಲ್ಲೇಖಿತ ದರದ ವ್ಯತ್ಯಾಸವನ್ನು, ಕರೆನ್ಸಿಯ ಒಟ್ಟು ಘಟಕಗಳಿಂದ ಗುಣಿಸಿದ ಮೊತ್ತಕ್ಕೆ ಸಮನಾಗಿರತಕ್ಕದು:

ಪರಂತು, ಕರೆನ್ಸಿಗೆ ಭಾರತೀಯ ರಿಸರ್ವ್ ಬ್ಯಾಂಕಿನ ಉಲ್ಲೇಖ ದರವು ಲಭ್ಯವಿಲ್ಲದ ಸಂದರ್ಭದಲ್ಲಿ, ಮೌಲ್ಯವು, ಹಣವನ್ನು ಬದಲಾಯಿಸುವ ವ್ಯಕ್ತಿಯು ಒದಗಿಸಿದ ಅಥವಾ ಸ್ವೀಕರಿಸಿದ ಭಾರತೀಯ ರೂಪಾಯಿಗಳ ಒಟ್ಟು ಮೊತ್ತದ ಶೇಕಡ 1ರಷ್ಟಿರತಕ್ಕದ್ದು:

ಮತ್ತು ಪರಂತು, ವಿನಿಮಯವಾದ ಎರಡು ಕರೆನ್ಸಿಗಳಲ್ಲಿ ಯಾವುದೂ ಸಹ ಭಾರತೀಯ ರೂಪಾಯಿಯಾಗಿರದಿದ್ದಲಿ, ಮೌಲ್ಯವು, ಹಣವನ್ನು ಬದಲಾಯಿಸುವ ವ್ಯಕ್ತಿಯು, ಆ ಎರಡು ಕರೆನ್ಸಿಗಳನ್ನು ಭಾರತೀಯ ರಿಸರ್ವ್ ಬ್ಯಾಂಕು ಒದಗಿಸಿದ ಉಲ್ಲೇಖಿತ ದರದಲ್ಲಿ ಆ ದಿನದಲ್ಲಿ ಭಾರತೀಯ ರೂಪಾಯಿಗೆ ವಿನಿಮಯ ಮಾಡಿದಾಗ ಸ್ವೀಕರಿಸಬಹುದಾದ ಎರಡು ಮೊತ್ತಗಳಲ್ಲಿ ಕಡಿಮೆಯಿರುವ ಮೊತ್ತದ ಶೇಕಡ 1ರಷ್ಟಕ್ಕೆ ಸಮನಾಗಿರತಕ್ಕದ್ದು.

ಅಲ್ಲದೇ ಪರಂತು, ಸೇವೆಗಳನ್ನು ಪೂರೈಕೆ ಮಾಡುವ ಒಬ್ಬ ವ್ಯಕ್ತಿಯು ಒಂದು ಹಣಕಾಸು ವರ್ಷಕ್ಕೆ ಖಂಡ (ಬಿ)ಯ ನಿಬಂಧನೆಗೆ ಅನುಸಾರವಾಗಿ ಮೌಲ್ಯವನ್ನು ನಿಶ್ಚಿತಪಡಿಸಿಕೊಳ್ಳುವ ಆಯ್ಕೆಯನ್ನು ಚಲಾಯಿಸಬಹುದು ಮತ್ತು ಅಂಥ ಆಯ್ಕೆಯನ್ನು ಆ ಹಣಕಾಸು ವರ್ಷದ ಉಳಿದ ಭಾಗದ ಅವಧಿಯಲ್ಲಿ ಹಿಂತೆಗೆದುಕೊಳ್ಳತಕ್ಕದ್ದಲ್ಲ.

(ಬಿ) ಸೇವೆಗಳ ಪೂರೈಕೆದಾರನ ಆಯ್ಕೆಯ ಅನ್ವಯ, ಹಣ ಬದಲಾವಣೆಯನ್ನು ಒಳಗೊಂಡಂತೆ, ವಿದೇಶಿ ಕರೆನ್ಸಿಯ ಪೂರೈಕೆಗೆ ಸಂಬಂಧಿಸಿದಂತೆ ಮೌಲ್ಯವನ್ನು, –

(i) ಇನ್ನೂರ ಐವತ್ತು ರೂಪಾಯಿಗಳ ಕನಿಷ್ಟ ಮೊತ್ತಕ್ಕೆ ಒಳಪಟ್ಟು, ಒಂದು ಲಕ್ಷ ರೂಪಾಯಿಗಳ ವರೆಗಿನ ಒಂದು ಮೊತ್ತಕ್ಕೆ ವಿನಿಮಯವಾದ ಕರೆನ್ಸಿಯ ಒಟ್ಟು ಮೊತ್ತದ ಶೇಕಡ ಒಂದರಷ್ಟು;

(ii) ಒಂದು ಲಕ್ಷ ರೂಪಾಯಿಗಳಿಗಿಂತ ಹೆಚ್ಚಿನದಾದ ಮತ್ತು ಹತ್ತು ಲಕ್ಷ ರೂಪಾಯಿಗಳವರೆಗಿನ ಒಂದು ಮೊತ್ತಕ್ಕೆ ವಿನಿಮಯವಾದ ಕರೆನ್ಸಿಯ ಒಟ್ಟು ಮೊತ್ತದ ಶೇಕಡ ಅರ್ಧದಷ್ಟು ಮತ್ತು ಒಂದು ಸಾವಿರ ರೂಪಾಯಿಗಳು; ಮತ್ತು

(iii) ಅರವತ್ತು ಸಾವಿರ ರೂಪಾಯಿಗಳ ಗರಿಷ್ಟ ಮೊತ್ತಕ್ಕೆ ಒಳಪಟ್ಟು, ಹತ್ತು ಲಕ್ಷ ರೂಪಾಯಿಗಳಿಗಿಂತ ಹೆಚ್ಚಿನದಾದ ಒಂದು ಮೊತ್ತಕ್ಕೆ ವಿನಿಮಯವಾದ ಕರೆನ್ಸಿಯ ಒಟ್ಟು ಮೊತ್ತದ ಶೇಕಡ ಹತ್ತನೇ ಒಂದರಷ್ಟು ಮತ್ತು ಐದು ಸಾವಿರದ ಐದುನೂರು ರೂಪಾಯಿಗಳು,

–ಎಂದು ಪರಿಭಾವಿಸತಕ್ಕದ್ದು.

(3) ವಾಯುಯಾನಕ್ಕಾಗಿ ಟಿಕೆಟುಗಳನ್ನು ಬುಕ್ ಮಾಡುವುದಕ್ಕೆ ಸಂಬಂಧಿಸಿದಂತೆ ಒಬ್ಬ ವಾಯು ಯಾನದ ಏಜೆಂಟನಿಂದ ಒದಗಿಸಿದ ಸೇವೆಗಳ ಪೂರೈಕೆಯ ಮೌಲ್ಯವನ್ನು, ದೇಶೀಯ ಬುಕಿಂಗ್‌ಗಳ ಸಂದರ್ಭದಲ್ಲಿ ಮೂಲ ಪ್ರಯಾಣದರದ ಶೇಕಡ ಐದರ ದರದಲ್ಲಿ ಲೆಕ್ಕ ಹಾಕಲಾದ ಒಂದು ಮೊತ್ತವೆಂದು ಮತ್ತು ವಾಯುಯಾನದ ಮೂಲಕ ಪ್ರಯಾಣಕ್ಕಾಗಿ ಅಂತರರಾಷ್ಟ್ರೀಯ ಬುಕಿಂಗ್‌ಗಳ ಸಂದರ್ಭದಲ್ಲಿ ಮೂಲ ಪ್ರಯಾಣದರದ ಶೇಕಡ ಹತ್ತರದರದಲ್ಲಿ ಲೆಕ್ಕ ಹಾಕಲಾದ ಒಂದು ಮೊತ್ತವೆಂದು ಪರಿಭಾವಿಸತಕ್ಕದ್ದು.

ವಿವರಣೆ:– ಈ ಉಪನಿಯಮದ ಉದ್ದೇಶಗಳಿಗಾಗಿ, ಪದಾವಳಿಯಾದ **"ಮೂಲ ಪ್ರಯಾಣದರ"** ಎಂದರೆ ವಾಯುಯಾನ ಸಂಸ್ಥೆಯು ವಾಯುಯಾನ ಏಜೆಂಟನಿಗೆ ಸಾಮಾನ್ಯವಾಗಿ ಯಾವುದರ ಮೇಲೆ ಕಮಿಷನ್‌ನನ್ನು ಸಂದಾಯ ಮಾಡುತ್ತದೆಯೋ, ಆ ವಾಯುಯಾನ ಪ್ರಯಾಣದರದ ಆ ಭಾಗ.

(4) ಜೀವ ವಿಮೆ ವ್ಯವಹಾರಕ್ಕೆ ಸಂಬಂಧಿಸಿದಂತೆ ಸೇವೆಗಳ ಪೂರೈಕೆಯ ಮೌಲ್ಯವು,–

(ಎ) ಸೇವೆಗಳ ಪೂರೈಕೆಯ ಸಮಯದಲ್ಲಿ ಪಾಲಿಸಿದಾರನಿಗೆ, ಅಂಥ ಒಂದು ಮೊತ್ತವನ್ನು ತಿಳಿಸಿದ್ದರೆ, ಪಾಲಸಿದಾರನ ಪರವಾಗಿ ಹೂಡಿಕೆ ಅಥವಾ ಉಳಿತಾಯಕ್ಕೆ ಹಂಚಿಕೆ ಮಾಡಲಾದ ಮೊತ್ತದಿಂದಕಡಿತಗೊಳಿಸಿ, ಪಾಲಿಸಿದಾರನಿಗೆ ಹೊರಿಸಿದ ಒಟ್ಟು ವಿಮಾ ಕಂತಿನ ಮೊತ್ತ;

(ಬಿ) (ಎ)ನ್ನು ಹೊರತುಪಡಿಸಿದ, ವಾರ್ಷಿಕ ವಿಕಕಂತಿನ ಪಾಲಿಸಿಗಳ ಸಂದರ್ಭಗಳಲ್ಲಿ, ಪಾಲಸಿದಾರನಿಗೆ ಹೊರಿಸಿದ ಮಾಡಿದ ವಿಕಕಂತಿನ ಶೇಕಡ ಹತ್ತರಷ್ಟು; ಅಥವಾ

(ಸಿ) ಇತರೇ ಎಲ್ಲಾ ಸಂದರ್ಭಗಳಲ್ಲಿ, ಪ್ರಥಮ ವರ್ಷದಲ್ಲಿ ಪಾಲಿಸಿದಾರನಿಗೆ ಹೊರಿಸಿದವಿಮಾಕಂತಿನ ಶೇಕಡಾ ಇಪ್ಪತ್ತೈದರಷ್ಟು ಮತ್ತು ತರುವಾಯದ ವರ್ಷಗಳಲ್ಲಿ, ಪಾಲಿಸಿದಾರನಿಗೆ ವಿಧಿಸಿದ ವಿಮಾಕಂತಿನ ಶೇಕಡಾ ಹನ್ನೆರಡೂವರೆಯಷ್ಟು ಇರತಕ್ಕದ್ದು.

ಪರಂತು, ಪಾಲಸಿದಾರನು ಜೀವ ವಿಮೆಯಲ್ಲಿನ ಗಂಡಾಂತರ ರಕ್ಷಣೆಗಾಗಿ ಮಾತ್ರವೇ ವಿಮಾಕಂತನ್ನು ಸಂದಾಯ ಮಾಡಿದ್ದಲ್ಲಿ, ಈ ಉಪ ನಿಯಮದಲ್ಲಿರುವ ಯಾವುದೂ ಅನ್ವಯವಾಗತಕ್ಕದ್ದಲ್ಲ.

(5) ಇನ್ನೊಬ್ಬನು ಉಪಯೋಗಿಸಿದ ಸರಕುಗಳನ್ನು, ಅಂದರೆ ಅವು ಇರುವ ಹಾಗೆಯೇ ಅಥವಾ ಸರಕುಗಳ ಸ್ವರೂಪವನ್ನು ಬದಲಿಸದ ಅಂಥ ಸಣ್ಣ ಪ್ರಮಾಣದ ಸಂಸ್ಕರಣೆಯ ನಂತರ, ಉಪಯೋಗಿಸಿದ ಸರಕುಗಳನ್ನು ಕೊಳ್ಳುವ ಮತ್ತು ಮಾರುವ ವ್ಯವಹಾರದಲ್ಲಿ ತೊಡಗಿರುವ ಒಬ್ಬ ವ್ಯಕ್ತಿಯು, ತೆರಿಗೆದಾಯಕ ಪೂರೈಕೆಯನ್ನು ಒದಗಿಸುತ್ತಿದ್ದಲ್ಲಿ ಮತ್ತು ಅಂಥ ಸರಕುಗಳ ಖರೀದಿಯ ಮೇಲೆ ಹೂಡುವಳಿ ತೆರಿಗೆ ಜಮೆಯನ್ನು ಪಡೆದುಕೊಂಡಿರದಿದ್ದಲ್ಲಿ, ಪೂರೈಕೆಯ ಮೌಲ್ಯವು ಮಾರಾಟದ ಬೆಲೆ ಮತ್ತು ಖರೀದಿಯ ಬೆಲೆಯ ನಡುವಿನ ವ್ಯತ್ಯಾಸವಾಗಿರತಕ್ಕದ್ದು ಮತ್ತು ಅಂಥ ಪೂರೈಕೆಯ ಮೌಲ್ಯವು ಋಣಾತ್ಮಕವಾಗಿದ್ದಲ್ಲಿ, ಅದನ್ನು ಕಡೆಗಣಿಸತಕ್ಕದ್ದು:

ಪರಂತು, ಸಾಲ ಅಥವಾ ಋಣವನ್ನು ವಸೂಲಿ ಮಾಡುವ ಉದ್ದೇಶದಿಂದ ನೋಂದಾಯಿತನಲ್ಲದ ಒಬ್ಬ ತಪ್ಪಿತ ಸಾಲಗಾರನಿಂದ ಪುನರ್ ಸ್ವಾಧೀನಪಡಿಸಿಕೊಂಡ ಸರಕುಗಳ ಖರೀದಿಯ ಮೌಲ್ಯವು, ಖರೀದಿಯ ದಿನಾಂಕ ಮತ್ತು ಅಂಥ ಪುನರ್ ಸ್ವಾಧೀನಪಡಿಸಿಕೊಳ್ಳುವ ವ್ಯಕ್ತಿಯಿಂದ ವಿಲೇವಾರಿಗೊಳ್ಳುವ ದಿನಾಂಕದ ನಡುವಿನ ಪ್ರತಿಯೊಂದು ತ್ರೈಮಾಸಿಕ ಅಥವಾ ಅದರ ಭಾಗಕ್ಕೆ ಶೇಕಡ ಐದು ಅಂಶಗಳಷ್ಟು ಇಳಿಕೆ ಮಾಡಿದ ತಪ್ಪಿತ ಸಾಲಗಾರನು ಖರೀದಿಸಿರುವ ಅಂಥ ಸರಕುಗಳ ಖರೀದಿ ಬೆಲೆ ಎಂದು ಪರಿಭಾವಿಸತಕ್ಕದ್ದು.

(6) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗೆ ಪ್ರತಿಯಾಗಿ ವಾಪಸ್ಸು ಪಡೆಯಬಹುದಾದಂಥಹ ಒಂದು ಟೋಕನ್ ಅಥವಾ ಒಂದು ವೋಚರ್, ಅಥವಾ ಒಂದು ಕೂಪನ್, ಅಥವಾ ಒಂದು ಸ್ಟಾಂಪಿನ (ಅಂಚೆ ಸ್ಟಾಂಪನ್ನು ಹೊರತುಪಡಿಸಿದಂತೆ) ಮೌಲ್ಯವು, ಅಂಥ ಟೋಕನ್, ವೋಚರ್, ಕೂಪನ್, ಸ್ಟಾಂಪಿಗೆ

ಪ್ರತಿಯಾಗಿ ವಿವಾಪಸ್ಸು ಪಡೆಯಬಹುದಾದಂಥಹ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಹಣದ ಮೌಲ್ಯಕ್ಕೆ ಸಮನಾಗಿರತಕ್ಕದ್ದು.

(7) ಹೂಡುವಳಿ ತೆರಿಗೆ ಜಮೆ ಲಭ್ಯವಿದ್ದಲ್ಲಿ, ಪ್ರಕರಣ 25ರಲ್ಲಿ ಉಲ್ಲೇಖಿಸಿದಂತಹ ಭಿನ್ನ ವ್ಯಕ್ತಿಗಳ ನಡುವೆ, ಪರಿಷತ್ತಿನ ಶಿಫಾರಸ್ಸಿನ ಅನ್ವಯ ಸರ್ಕಾರದಿಂದ ಅಧಿಸೂಚಿಸಬಹುದಾದ ಅಂಥ ಸೇವೆ ಒದಗಿಸುವವರ ವರ್ಗದಿಂದ ಒದಗಿಸಿದ ಅನುಸೂಚಿ ೪ರ ೪ಂಡಿಕೆ 2ರಲ್ಲಿ ಉಲ್ಲೇಖಿಸಲಾದ, ತೆರಿಗೆದಾಯಕ ಸೇವೆಯ ಮೌಲ್ಯವು ಶೂನ್ಯ ಎಂದು ಪರಿಭಾವಿಸತಕ್ಕದ್ದು.

33. ಶುದ್ಧ ಏಜೆಂಟನ ಸಂದರ್ಭದಲ್ಲಿ ಸೇವೆಗಳ ಪೂರೈಕೆಯ ಮೌಲ್ಯ.– ಈ ಅಧ್ಯಾಯದ ಉಪಬಂಧಗಳಲ್ಲಿ ಏನೇ ಒಳಗೊಂಡಿದ್ದರೂ, ಪೂರೈಕೆಯನ್ನು ಸ್ವೀಕರಿಸುವವನ ಶುದ್ಧ ಏಜೆಂಟನಾಗಿ ಒಬ್ಬ ಪೂರೈಕೆದಾರನು ಭರಿಸಿದ ವೆಚ್ಚ ಅಥವಾ ೪ರ್ಚುಗಳನ್ನು, ಕೆಳಕಂಡ ಎಲ್ಲಾ ಷರತ್ತುಗಳನ್ನು ಪೂರೈಸಿದ್ದರೆ ಪೂರೈಕೆಯ ಮೌಲ್ಯದಿಂದಬಿಟ್ಟು ಬಿಡತಕ್ಕದ್ದು, ಅಂದರೆ,–

(i) ಪೂರೈಕೆಯನ್ನು ಸ್ವೀಕರಿಸುವವನ ಶುದ್ಧ ಏಜೆಂಟನಂತೆ ಕಾರ್ಯನಿರ್ವಹಿಸುತ್ತಿರುವ ಪೂರೈಕೆದಾರನು, ಅಂಥ ಸ್ವೀಕರಿಸುವವನ ಅಧಿಕಾರ ಪತ್ರದ ಮೇರೆಗೆ ಮೂರನೆ ವ್ಯಕ್ತಿಗೆ ಅವನು ಸಂದಾಯ ಮಾಡಿದಾಗ;

(ii) ಪೂರೈಕೆಯನ್ನು ಸ್ವೀಕರಿಸುವವನ ಪರವಾಗಿ ಶುದ್ಧ ಏಜೆಂಟನು ಮಾಡಿದ ಸಂದಾಯವನ್ನು, ಶುದ್ಧ ಏಜಂಟನು ಸೇವೆಯನ್ನು ಸ್ವೀಕರಿಸುವನಿಗೆ ನೀಡಿದ ಬೆಲೆಪಟ್ಟಿಯಲ್ಲಿ ಪ್ರತ್ಯೇಕವಾಗಿ ಸೂಚಿಸಿರಬೇಕು; ಮತ್ತು

(iii) ಶುದ್ಧ ಏಜೆಂಟನು ಮೂರನೇ ವ್ಯಕ್ತಿಯಿಂದ ಪೂರೈಕೆಯನ್ನು ಸ್ವೀಕರಿಸುವವನ ಶುದ್ಧ ಏಜೆಂಟನಂತೆ ಪಡೆದುಕೊಳ್ಳುವ ಪೂರೈಕೆಗಳು, ತನ್ನ ೪ಾತೆಯಲ್ಲಿ ಆತನು ಪೂರೈಕೆ ಮಾಡುವ ಸೇವೆಗಳ ಜೊತೆಗೆ ಹೆಚ್ಚುವರಿಯಾಗಿರಬೇಕು.

ವಿವರಣೆ.– *ಈ ನಿಯಮದ ಉದ್ದೇಶಗಳಿಗಾಗಿ, "ಶುದ್ಧ ಏಜೆಂಟ್" ಎಂದರೆ,–*

(ಎ) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಯ ಕ್ರಮದಲ್ಲಿ, ವೆಚ್ಚ ಅಥವಾ ೪ರ್ಚುಗಳನ್ನು ಭರಿಸುವುದಕ್ಕಾಗಿ, ಶುದ್ಧ ಏಜೆಂಟನಾಗಿ ಕಾರ್ಯ ನಿರ್ವಹಿಸಲು ಪೂರೈಕೆಯನ್ನು ಸ್ವೀಕರಿಸುವವನ ಜೊತೆಯಲ್ಲಿ ಕರಾರಿನ ಒಪ್ಪಂದಕ್ಕೆ ಒಳಗಾಗುವ;

(ಬಿ) ಪೂರೈಕೆಯ ಸ್ವೀಕರಿಸುವವನ ಶುದ್ಧ ಏಜೆಂಟನಂತೆ ಪಡೆದುಕೊಂಡ ಅಥವಾ ಪೂರೈಕೆ ಮಾಡಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಯಾವುದೇ ಸ್ವಾಮ್ಯವನ್ನು ಹೊಂದಲು ಇಚ್ಛಿಸದ ಅಥವಾ ಹೊಂದಿರದ;

(ಸಿ) ಹಾಗೆ ಪಡೆದುಕೊಂಡ ಅಂಥ ಸರಕು ಅಥವಾ ಸೇವೆಗಳನ್ನು ತನ್ನ ಸ್ವಂತ ಹಿತಾಸಕ್ತಿಗೆ ಉಪಯೋಗಿಸಿಕೊಳ್ಳದ; ಮತ್ತು

(ಡಿ) ತನ್ನ ಸ್ವಂತ ೪ಾತೆಯಲ್ಲಿ ಅವನು ಒದಗಿಸುವ ಪೂರೈಕೆಗಾಗಿ ಸ್ವೀಕರಿಸುವ ಮೊತ್ತಕ್ಕೆ ಹೆಚ್ಚುವರಿಯಾಗಿ, ಅಂಥ ಸರಕು ಅಥವಾ ಸೇವೆಗಳನ್ನು ಪಡೆದುಕೊಳ್ಳಲು ಭರಿಸಿದ ವಾಸ್ತವಿಕ ಮೊತ್ತವನ್ನು ಮಾತ್ರ ಸ್ವೀಕರಿಸುವ,

–ಒಬ್ಬ ವ್ಯಕ್ತಿ.

ದೃಷ್ಟಾಂತ.– ಕಾರ್ಪೊರೇಟ್ ಸೇವೆಗಳ ಪಾಲುದಾರಿಕಾ ಸಂಸ್ಥೆಯಾದ ಎ ಯು, ಬಿ ಕಂಪನಿಯ ನಿಗಮನಕ್ಕೆ ಸಂಬಂಧಿಸಿದ ಕಾನೂನು ಕಾರ್ಯವನ್ನು ನಿರ್ವಹಿಸುವುದರಲ್ಲಿ ತೊಡಿಗಿಕೊಂಡಿರುತ್ತದೆ. ಅದರ ಸೇವಾ ಶುಲ್ಕಗಳನ್ನು ಹೊರತು ಪಡಿಸಿ, ಎ ಯು ಕಂಪನಿಯ ಹೆಸರಿಗಾಗಿ ಕಂಪನಿಗಳ ರಿಜಿಸ್ಟ್ರಾರ್‌ಗೆ ಸಂದಾಯ ಮಾಡಿದ ನೋಂದಣಿ ಶುಲ್ಕ ಮತ್ತು ಅನುಮೋದನಾ ಶುಲ್ಕವನ್ನು ಸಹ ಬಿ ಯಿಂದ ವಸೂಲಿ ಮಾಡುತ್ತದೆ. ಕಂಪನಿಗಳ ರಿಜಿಸ್ಟ್ರಾರ್‌ರಿಂದ ಚಾರ್ಜು ಮಾಡಿದ, ಹೆಸರಿನ ನೋಂದಣಿ ಮತ್ತು ಅನುಮೋದನೆಯ ಶುಲ್ಕವು ಬಿ ಯ ಮೇಲಿನ ಕಡ್ಡಾಯ ವಿಧಿಸುವಿಕೆಯಾಗಿದೆ. ಆ ಶುಲ್ಕಗಳನ್ನು ಸಂದಾಯ ಮಾಡುವಲ್ಲಿ ಎ ಯು ಕೇವಲ ಒಬ್ಬ ಶುದ್ಧ ಏಜಂಟನಂತೆ ಕಾರ್ಯನಿರ್ವಹಿಸಿದೆ. ಆದ್ದರಿಂದ, ಎ ಯ

ವಸೂಲಿಯಅಂಥ ವೆಚ್ಚಗಳ ಒಂದು ಬಟವಾಡೆಯಾಗಿದೆ ಮತ್ತು ಎ ಯಿಂದ ಬಿಗೆ ಮಾಡಿದ ಪೂರೈಕೆಯ ಮೌಲ್ಯದ ಭಾಗವಲ್ಲ.

34. ಮೌಲ್ಯದ ನಿರ್ಧರಣೆಗಾಗಿ ಭಾರತೀಯ ರೂಪಾಯಿಗಳನ್ನು ಹೊರತುಪಡಿಸಿದ ಕರೆನ್ಸಿಯ ವಿನಿಮಯ ದರ.– ತೆರಿಗೆದಾಯಕ ಸರಕುಗಳ ಅಥವಾ ಸೇವೆಗಳ ಅಥವಾ ಅವೆರಡರ ಮೌಲ್ಯದ ನಿರ್ಧರಣೆಗಾಗಿ ವಿನಿಮಯ ದರವು, ಪ್ರಕರಣ 12ರ ಅಥವಾ ಸಂದರ್ಭಾನುಸಾರವಾಗಿ ಪ್ರಕರಣ 13ರ ನಿಬಂಧನೆಗಳಿಗೆ ಅನುಸಾರವಾಗಿ ಅಂಥ ಪೂರೈಕೆಯ ಸಮಯದ ದಿನಾಂಕಕ್ಕಾಗಿ ಭಾರತೀಯ ರಿಸರ್ವ್ ಬ್ಯಾಂಕಿನಿಂದ ನಿರ್ಧರಿಸಲಾದ ಆ ಕರೆನ್ಸಿಗೆ ಅನ್ವಯವಾಗುವ ವಿನಿಮಯ ದರವಾಗಿರತಕ್ಕದ್ದು.

35. ಏಕೀಕೃತ ತೆರಿಗೆ, ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಕೇಂದ್ರಾಡಳಿತ ಪ್ರದೇಶ ತೆರಿಗೆಯನ್ನು ಒಳಗೊಂಡ ಪೂರೈಕೆಯ ಮೌಲ್ಯ.– ಪೂರೈಕೆಯ ಮೌಲ್ಯವು, ಏಕೀಕೃತ ತೆರಿಗೆ, ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಕೇಂದ್ರಾಡಳಿತ ಪ್ರದೇಶ ತೆರಿಗೆಯನ್ನು ಒಳಗೊಂಡಿದ್ದಲ್ಲಿ, ತೆರಿಗೆಯ ಮೊತ್ತವನ್ನು ಕೆಳಕಂಡ ವಿಧಾನದಲ್ಲಿ ನಿರ್ಧರಿಸತಕ್ಕದ್ದು.

ತೆರಿಗೆ ಮೊತ್ತ= ತೆರಿಗೆಗಳನ್ನು ಒಳಗೊಂಡ ಮೌಲ್ಯ×ಐಜಿಎಸ್‌ಟಿ ಅಥವಾ ಸಂದರ್ಭಾನುಸಾರವಾಗಿ ಸಿಜಿಎಸ್‌ಟಿ, ಎಸ್‌ಜಿಎಸ್‌ಟಿ ಅಥವಾ ಯುಟಿಜಿಎಸ್‌ಟಿಯ ತೆರಿಗೆದರ %ನಲ್ಲಿ

(100+ ತೆರಿಗೆದರಗಳ ಮೊತ್ತ, %ನಲ್ಲಿ, ಅನ್ವಯವಾಗುವಂತೆ)

ವಿವರಣೆ.– ಈ ಅಧ್ಯಾಯದ ಉಪಬಂಧಗಳ ಉದ್ದೇಶಗಳಿಗಳಿಗಾಗಿ,–

(ಎ) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಯ **"ಮುಕ್ತ ಮಾರುಕಟ್ಟೆ ಮೌಲ್ಯ"** ಎಂದರೆ, ಪೂರೈಕೆಯ ಪೂರೈಕೆದಾರನು ಮತ್ತು ಸ್ವೀಕರಿಸುವವನು ಸಂಬಂಧಿತರಾಗಿಲ್ಲದಿರುವಾಗ ಮತ್ತು ಬೆಲೆಯು ಏಕಮಾತ್ರ ಪ್ರತಿಫಲವಾಗಿರುವಲ್ಲಿ, ಮೌಲ್ಯೀಕರಣವಾಗಿರುವ ಪೂರೈಕೆಯು ಆಗುತ್ತಿರುವ ಅದೇ ಸಮಯದಲ್ಲಿ ಅಂಥ ಪೂರೈಕೆಯನ್ನು ಪಡೆದುಕೊಳ್ಳುವುದಕ್ಕಾಗಿ, ಒಂದು ವಹಿವಾಟಿನಲ್ಲಿ ಒಬ್ಬ ವ್ಯಕ್ತಿಯು ಸಂದಾಯ ಮಾಡಬೇಕಾದ ಏಕೀಕೃತ ತೆರಿಗೆ, ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಕೇಂದ್ರಾಡಳಿತ ಪ್ರದೇಶ ತೆರಿಗೆ ಮತ್ತು ಉಪಕರವನ್ನು ಹೊರತುಪಡಿಸಿದ ಹಣದ ರೂಪದ ಪೂರ್ಣ ಮೌಲ್ಯವಾಗಿದೆ.

(ಬಿ) **"ಅದೇ ತರಹದ ಮತ್ತು ಗುಣಮಟ್ಟದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆ"** ಎಂದರೆ, ಮೊದಲು ನಮೂದಿಸಿದ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಗುಣಲಕ್ಷಣ, ಗುಣಮಟ್ಟ, ಪ್ರಮಾಣ, ಕಾರ್ಯಸಂಬಂಧ ಘಟಕಗಳು, ಸಾಮಗ್ರಿಗಳು ಮತ್ತು ಖ್ಯಾತಿಗೆ ಸಂಬಂದಿಸಿದಂತವುಗಳಾದ, ಆ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯು ಅದೇ ರೀತಿಯಾಗಿ ಹೊಂದಿರುವ ಅಥವಾ ನಿಕಟವಾಗಿ ಅಥವಾ ಬಹುಮಟ್ಟಿಗೆ ಹೋಲುವ ಅಂತಹುದೇ ಸನ್ನಿವೇಶಗಳ ಅಡಿಯಲ್ಲಿ ಮಾಡಲಾದ ಯಾವುದೇ ಇತರ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಯಾಗಿದೆ.

ಅಧ್ಯಾಯ V
ಹೂಡುವಳಿ ತೆರಿಗೆ ಜಮೆ

36. ಹೂಡುವಳಿ ತೆರಿಗೆ ಜಮೆಯ ಕ್ಲೇಮಿಗಾಗಿ ದಸ್ತಾವೇಜಿನ ಅಗತ್ಯತೆಗಳು ಮತ್ತು ಷರತ್ತುಗಳು:–(1) ಕೆಳಕಂಡ ಯಾವುದೇ ದಸ್ತಾವೇಜುಗಳ ಆಧಾರದ ಮೇಲೆ ಹೂಡುವಳಿ ಸೇವಾ ಹಂಚಿಕೆದಾರರನ್ನೊಳಗೊಂಡಂತೆ ನೋಂದಾಯಿತ ವ್ಯಕ್ತಿಯು ಹೂಡುವಳಿ ತೆರಿಗೆ ಜಮೆಯನ್ನು ಉಪಯೋಗಿಸತಕ್ಕದ್ದು:–

(ಎ) ಪ್ರಕರಣ 31ರ ಉಪಬಂಧಗಳಿಗೆ ಅನುಸಾರವಾಗಿ ಸರಕು ಅಥವಾ ಸೇವೆಗಳ ಅಥವಾ ಅವುಗಳೆರೆಡರ ಪೊರೈಕೆದಾರನಿಂದ ನೀಡಲಾದ ಬೆಲೆಪಟ್ಟಿ;

(ಬಿ) ತೆರಿಗೆ ಸಂದಾಯಕ್ಕೆ ಒಳಪಟ್ಟು, ಪ್ರಕರಣ 31 ಉಪಪ್ರಕರಣ 3 ರ ಖಂಡ (ಎಫ್)ದ ಉಪಬಂಧಗಳಿಗೆ ಅನುಸಾರವಾಗಿನೀಡಲಾದ ಬೆಲೆಪಟ್ಟಿ;

(ಸಿ) ಪ್ರಕರಣ 34ರ ಉಪಬಂದಗಳಿಗೆ ಅನುಸಾರವಾಗಿ ಪೊರೈಕೆದಾರನುನೀಡಿದ ಖರ್ಚುಚೀಟಿ;

(ಡಿ) ಆಮದುಗಳ ಮೇಲಿನ ಏಕೀಕೃತ ತೆರಿಗೆಯ ಕರನಿರ್ಧರಣೆಗಾಗಿ ಸೀಮಾಸುಂಕ ಅಧಿನಿಯಮ, 1962 ಅಥವಾ ಇದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ನಿಯಮಿಸಲಾದ ಪ್ರವೇಶದ ಬಿಲ್ಲು ಅಥವಾ ಅದೇ ರೀತಿಯ ದಸ್ತಾವೇಜು;

(ಇ) ನಿಯಮ 54ರ ಉಪನಿಯಮ (1) ರ ಉಪಬಂಧಗಳಿಗೆ ಅನುಸಾರವಾಗಿಒಬ್ಬ ಹೂಡುವಳಿ ಸೇವೆ ಹಂಚಿಕೆದಾರನಿಂದ ನೀಡಲಾದ ಹೂಡುವಳಿ ಸೇವೆ ಹಂಚಿಕೆಯ ಬೆಲೆಪಟ್ಟಿ ಅಥವಾ ಹೂಡುವಳಿ ಸೇವೆ ಹಂಚಿಕೆಯ ಜಮೆ ಚೀಟಿ ಅಥವಾ ಯಾವುದೇ ದಸ್ತಾವೇಜು.

(2) ಅಧ್ಯಾಯ ಗಿಖ ರಲ್ಲಿ ನಿರ್ದಿಷ್ಟಪಡಿಸಿದಂತೆ ಅನ್ವಯವಾಗುವ ಎಲ್ಲ ವಿವರಗಳುಸದರಿ ದಸ್ತಾವೇಜಿನಲ್ಲಿ, ಒಳಗೊಂಡಿದ್ದರೆ ಮತ್ತು ಸದರಿ ದಸ್ತಾವೇಜಿನಲ್ಲಿನ ಸಂಬಂಧಿತ ಮಾಹಿತಿಯು ಅಂಥ ವ್ಯಕ್ತಿಯು **ನಮೂನೆ ಜಿಎಸ್‌ಟಿಆರ್–2**ರಲ್ಲಿ ಒದಗಿಸಿದ್ದಾಗ ಮಾತ್ರ ನೋಂದಾಯಿತ ವ್ಯಕ್ತಿಯು ಹೂಡುವಳಿ ತೆರಿಗೆ ಜಮೆಯನ್ನು ಉಪಯೋಗಿಸತಕ್ಕದ್ದು.

(3) ಮೋಸ ಅಥವಾ ಉದ್ದೇಶಪೂರ್ವಕವಾಗಿ ಯಾವುದೇ ಸಂಗತಿಗಳನ್ನು ತಪ್ಪಾಗಿ ಹೇಳುವುದು ಅಥವಾ ಬಚ್ಚಿಡುವುದರ ಕಾರಣದಿಂದ ಯಾವುದೇ ತಗಾದೆಯನ್ನು ಸ್ಥೀರೀಕರಿಸಲಾಗಿರುವ ಯಾವುದೇ ಆದೇಶಕ್ಕೆ ಅನುಸಾರವಾಗಿ, ಯಾವುದೇ ತೆರಿಗೆಯು ಸಂದಾಯವಾಗಿರುವುದಕ್ಕೆ ಸಂಬಂಧಿಸಿದಂತೆ ನೋಂದಾಯಿತ ವ್ಯಕ್ತಿಯು ಹೂಡುವಳಿ ತೆರಿಗೆ ಜಮೆಯನ್ನು ಉಪಯೋಗಿಸತಕ್ಕದ್ದಲ್ಲ.

37. ಪ್ರತಿಫಲವು ಸಂದಾಯವಾಗದ ಸಂದರ್ಭದಲ್ಲಿ ಹೂಡುವಳಿ ತೆರಿಗೆ ಜಮೆಯನ್ನು ಹಿಮ್ಮುಖಗೊಳಿಸುವುದು:– (1) ಸರಕು ಅಥವಾ ಸೇವೆಗಳ ಅಥವಾ ಅವುಗಳೆರೆಡರ ಯಾವುದೇ ಒಳಮುಖ ಪೊರೈಕೆಯ ಮೇಲೆ ಹೂಡುವಳಿ ತೆರಿಗೆ ಜಮೆ ಉಪಯೋಗಿಸಿಕೊಂಡಿರುವ ಆದರೆ ಪ್ರಕರಣ 16ರ ಉಪಪ್ರಕರಣ (2) ರ ಎರಡನೇ ಪರಂತುಕದಲ್ಲಿ ನಿರ್ದಿಷ್ಟಪಡಿಸಿರುವ ಕಾಲ ಮಿತಿಯ ಒಳಗಾಗಿ ಅದರ ಪೊರೈಕೆದಾರನಿಗೆ ಅಂಥ ಪೊರೈಕೆಯ ಮೌಲ್ಯವನ್ನು ಅದರ ಮೇಲೆ ಸಂದಾಯ ಮಾಡಬೇಕಾದ ತೆರಿಗೆಯೊಂದಿಗೆ ಸಂದಾಯ ಮಾಡಲು ವಿಫಲನಾಗಿರುವ, ಒಬ್ಬ ನೋಂದಾಯಿತ ವ್ಯಕ್ತಿಯು, ಅಂಥ ಪೊರೈಕೆಯ, ಸಂದಾಯ ಮಾಡದ ಮೌಲ್ಯದ ಮೊತ್ತ ಮತ್ತು ಪೂರೈಕೆದಾರನಿಗೆ ಸಂದಾಯ ಮಾಡದ ಅಂಥ ಮೊತ್ತದ ಪ್ರಮಾಣಕ್ಕನುಗುಣವಾಗಿ ಉಪಯೋಗಿಸಿಕೊಂಡ ಹೂಡುವಳಿ ತೆರಿಗೆ ಜಮೆಯ ಮೊತ್ತ ವಿವರಗಳನ್ನು, ಬೆಲೆಪಟ್ಟಿಯನ್ನು ನೀಡಿದ ದಿನಾಂಕದಿಂದ ನೂರ ಎಂಭತ್ತು ದಿನಗಳ ಅವಧಿಯ ನಿಕಟ ತರುವಾಯವಾಗಿ ಬರುವ ತಿಂಗಳಿನ **ನಮೂನೆ ಜಿಎಸ್‌ಟಿಆರ್–2**ರಲ್ಲಿ ಒದಗಿಸತಕ್ಕದ್ದು:

ಪರಂತು ಪ್ರಕರಣ 16ರ ಉಪಪ್ರಕರಣ (2)ರ ಎರಡನೇ ಪರಂತುಕದ ಉದ್ದೇಶಗಳಿಗಾಗಿ, ಸದರಿ ಅಧಿನಿಯಮದ ಅನುಸೂಚಿಖ ರಲ್ಲಿ ನಿರ್ದಿಷ್ಟಪಡಿಸಿದಂತೆ ಪ್ರತಿಫಲವಿಲ್ಲದೆ ಮಾಡಲಾದ ಪೂರೈಕೆಗಳ ಮೌಲ್ಯವು ಸಂದಾಯವಾಗಿದೆ ಎಂದು ಪರಿಭಾವಿಸತಕ್ಕದ್ದು.

(2) ಉಪನಿಯಮ (1)ರಲ್ಲಿ ಉಲ್ಲೇಖಿಸಲಾದ ಹೂಡುವಳಿ ತೆರಿಗೆ ಜಮೆಯ ಮೊತ್ತವನ್ನು, ನೋಂದಾಯಿತ ವ್ಯಕ್ತಿಯ ಹುಟ್ಟುವಳಿ ತೆರಿಗೆ ಬಾಧ್ಯತೆಗೆ, ವಿವರಗಳನ್ನು ಒದಗಿಸಿದ ತಿಂಗಳಿನಲ್ಲಿ ಸೇರಿಸತಕ್ಕದ್ದು.

(3) ನೋಂದಾಯಿತ ವ್ಯಕ್ತಿಯು,ಅಂತ ಪೂರೈಕೆಗಳ ಮೇಲೆಜಮೆಯನ್ನು ಉಪಯೋಗಿಸಿದ ದಿನಾಂಕದಿಂದ ಪ್ರಾರಂಭಗೊಂಡು, ಉಪನಿಯಮ (2) ರಲ್ಲಿ ನಮೂದಿಸಿದಂತೆ,ಹುಟ್ಟುವಳಿ ತೆರಿಗೆ ಬಾಧ್ಯತೆಗೆಆ ಮೊತ್ತವನ್ನು ಸೇರಿಸಿದ ದಿನಾಂಕದ ವರೆಗೆ ಪ್ರಕರಣ 50ರ ಉಪಪ್ರಕರಣ (1)ರ ಅಡಿಯಲ್ಲಿ ಅಧಿಸೂಚಿಸಿದ ದರದಲ್ಲಿ ಬಡ್ಡಿಯನ್ನು ಸಂದಾಯ ಮಾಡುವುದಕ್ಕೆ ಬಾಧ್ಯನಿರತಕ್ಕದ್ದು.

(4) ಪ್ರಕರಣ16ರ ಉಪಪ್ರಕರಣ (2)ರಲ್ಲಿ ನಿರ್ದಿಷ್ಟಪಡಿಸಿರುವ ಕಾಲಮಿತಿಯು, ಅಧಿನಿಯಮದ ಉಪಬಂಧಗಳಿಗೆ ಅಥವಾ ಈ ಅಧ್ಯಾಯದ ಉಪಬಂಧಗಳಿಗೆ ಅನುಸಾರವಾಗಿ ಮೊದಲೇ ಹಿಮ್ಮುಖಗೊಳಿಸಲಾಗಿರುವ ಯಾವುದೇ ಜಮೆಯ ಮರು–ಉಪಯೋಗಿಸುವಿಕೆಗಾಗಿ ಅನ್ವಯವಾಗತಕ್ಕದ್ದಲ್ಲ.

38. ಬ್ಯಾಂಕಿಂಗ್ ಕಂಪನಿ ಅಥವಾ ಹಣಕಾಸು ಸಂಸ್ಥೆಯಿಂದ ಜಮೆಯ ಕ್ಲೇಮು:– ಪ್ರಕರಣ 17ರ ಉಪಪ್ರಕರಣ (2) ರ ಉಪಬಂಧಗಳನ್ನು ಪಾಲಿಸದಿರುವುದನ್ನು, ಆ ಪ್ರಕರಣದ ಉಪಪ್ರಕರಣ (4) ರಡಿಯಲ್ಲಿ ಅನುಮತಿಸಿದ ಆಯ್ಕೆಗೆ ಅನುಸಾರವಾಗಿ, ಆಯ್ಕೆ ಮಾಡಿಕೊಂಡಿರುವ, ಠೇವಣಿಗಳನ್ನು ಸ್ವೀಕರಿಸುವ ಅಥವಾ ಸಾಲ ಅಥವಾ ಮುಂಗಡಗಳನ್ನು ನೀಡುವ ರೂಪದ ಸೇವೆಗಳ ಪೂರೈಕೆಯಲ್ಲಿ ತೊಡಗಿರುವ ಬ್ಯಾಂಕೇತರ ಹಣಕಾಸು ಕಂಪನಿಯನ್ನೊಳಗೊಂಡಂತೆ, ಬ್ಯಾಂಕಿಂಗ್ ಕಂಪನಿ ಅಥವಾ ಹಣಕಾಸಿನ ಸಂಸ್ಥೆಯು,ಕೆಳಕಂಡ ಕಾರ್ಯ ವಿಧಾನವನ್ನು ಅನುಸರಿಸತಕ್ಕದ್ದು, ಅಂದರೆ,–

(ಎ) ಸದರಿ ಕಂಪನಿ ಅಥವಾ ಸಂಸ್ಥೆಯು ಕೆಳಕಂಡ ಜಮೆಯನ್ನು ಉಪಯೋಗಿಸತಕ್ಕದ್ದಲ್ಲ,–

(i) ವ್ಯವಹಾರೇತರ ಉದ್ದೇಶಗಳಿಗಾಗಿ ಉಪಯೋಗಿಸಿದಂತಹ ಹೂಡುವಳಿಗಳು ಮತ್ತು ಹೂಡುವಳಿ ಸೇವೆಗಳ ಮೇಲೆ ಸಂದಾಯ ಮಾಡಿದ ತೆರಿಗೆ; ಮತ್ತು

(ii) ಪ್ರಕರಣ 17ರ ಉಪಪ್ರಕರಣ (5)ರಲ್ಲಿ ನಿರ್ದಿಷ್ಟಪಡಿಸಿದ ಪೂರೈಕೆಗಳಿಗೆ ಎಂದು ಹೇಳಬಹುದಾದ **ನಮೂನೆ ಜಿಎಸ್‌ಟಿಆರ್–2**ರಲ್ಲಿನ ಜಮೆ;

(ಬಿ) ಸದರಿ ಕಂಪನಿ ಅಥವಾ ಸಂಸ್ಥೆಯು ಪ್ರಕರಣ 17ರ ಉಪಪ್ರಕರಣ (4)ರ ಎರಡನೇ ಪರಂತುಕದಲ್ಲಿ ಉಲ್ಲೇಖಿಸಿದ ಮತ್ತು ಖಂಡ (ಎ)ನಲ್ಲಿ ವ್ಯಾಪಿತವಾಗದ ಹೂಡುವಳಿಗಳು ಮತ್ತು ಹೂಡುವಳಿ ಸೇವೆಗಳ ಮೇಲೆ ಸಂದಾಯ ಮಾಡಿದ ತೆರಿಗೆಯ ಜಮೆಯನ್ನು ಉಪಯೋಗಿಸತಕ್ಕದ್ದು;

(ಸಿ) ಹೂಡುವಳಿ ತೆರಿಗೆ ಜಮೆಯ ಉಳಿದ ಮೊತ್ತದ ಶೇಕಡ ಐವತ್ತರಷ್ಟನ್ನು, ಕಂಪನಿ ಅಥವಾ ಸಂಸ್ಥೆಗೆ ಅಂಗೀಕರಿಸಬಹುದಾದ ಹೂಡುವಳಿ ತೆರಿಗೆಯಾಗಿ ಜಮೆಯಾಗಿರತಕ್ಕದ್ದು ಮತ್ತು **ನಮೂನೆ ಜಿಎಸ್‌ಟಿಆರ್–2**ರಲ್ಲಿ ಒದಗಿಸತಕ್ಕದ್ದು;

(ಡಿ) ಖಂಡ (ಬಿ) ಮತ್ತು (ಸಿ)ಗಳಲ್ಲಿ ಉಲ್ಲೇಖಿಸಿದ ಮೊತ್ತವನ್ನು, ಪ್ರಕರಣ 41, 42 ಮತ್ತು 43ರ ಉಪಬಂಧಗಳಿಗೆ ಒಳಪಟ್ಟು ಸದರಿ ಕಂಪನಿ ಅಥವಾ ಸಂಸ್ಥೆಯ ವಿದ್ಯುನ್ಮಾನ ಜಮೆ ಖಾತೆಗೆ ಜಮೆಗೊಳಿಸತಕ್ಕದ್ದು.

39. ಹೂಡುವಳಿ ಸೇವೆ ಹಂಚಿಕೆದಾರನು ಹೂಡುವಳಿ ತೆರಿಗೆ ಜಮೆಯನ್ನು ಹಂಚಿಕೆ ಮಾಡುವ ಕಾರ್ಯವಿಧಾನ. (1) ಒಬ್ಬ ಹೂಡುವಳಿ ಸೇವಾ ಹಂಚಿಕೆದಾರನು ಕೆಳಕಂಡವಿಧಾನದಲ್ಲಿ ಮತ್ತು ಷರತ್ತುಗಳಿಗೆ ಒಳಪಟ್ಟು ಹೂಡುವಳಿ ತೆರಿಗೆ ಜಮೆಯನ್ನು ಹಂಚಿಕೆ ಮಾಡತಕ್ಕದ್ದು, ಅಂದರೆ,–

(ಎ) ಒಂದು ತಿಂಗಳಲ್ಲಿ ಲಭ್ಯವಿರುವ ಹೂಡುವಳಿ ತೆರಿಗೆ ಜಮೆಯನ್ನು ಅದೇ ತಿಂಗಳಲ್ಲಿ ಹಂಚಿಕೆ ಮಾಡತಕ್ಕದ್ದು ಮತ್ತು ಅದರ ವಿವರಗಳನ್ನು **ನಮೂನೆ ಜಿಎಸ್‌ಟಿಆರ್ –6**ರಲ್ಲಿ ಈ ನಿಯಮಗಳ ಅಧ್ಯಾಯ ಗಿಖಖರ ಉಪಬಂಧಗಳಿಗೆ ಅನುಸಾರವಾಗಿ ಸಲ್ಲಿಸತಕ್ಕದ್ದು.

(ಬಿ) ಹೂಡುವಳಿ ಸೇವೆ ಹಂಚಿಕೆದಾರನು, ಖಂಡ (ಡಿ)ಯ ಉಪಬಂಧಗಳಿಗೆ ಅನುಸಾರವಾಗಿ, ಅನರ್ಹ ಹೂಡುವಳಿ

ತೆರಿಗೆ ಜಮೆಯ ಮೊತ್ತವನ್ನು (ಪ್ರಕರಣ 17ರ ಉಪಪ್ರಕರಣ (5) ರಉಪಬಂಧಗಳ ಅಡಿಯಲ್ಲಿ ಅನರ್ಹವಾದದು ಅಥವಾ ಅನ್ಯಥಾ) ಮತ್ತು ಅರ್ಹ ಹೂಡುವಳಿ ತೆರಿಗೆ ಜಮೆಯ ಮೊತ್ತವನ್ನು ಪ್ರತ್ಯೇಕವಾಗಿ ಹಂಚಿಕೆ ಮಾಡತಕ್ಕದ್ದು;

(ಸಿ) ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಕೇಂದ್ರಾಡಳಿತ ಪ್ರದೇಶ ತೆರಿಗೆ ಮತ್ತು ಏಕೀಕೃತ ತೆರಿಗೆಯ ಕಾರಣದಿಂದಾದ ಹೂಡುವಳಿ ತೆರಿಗೆ ಜಮೆಯನ್ನು ಖಂಡ (ಡಿ)ಯ ಉಪಬಂಧಗಳಿಗೆ ಅನುಸಾರವಾಗಿ ಪ್ರತ್ಯೇಕವಾಗಿ ಹಂಚಿಕೆ ಮಾಡತಕ್ಕದ್ದು.

(ಡಿ) ವಿನಾಯಿತಿ ಪೂರೈಕೆಯನ್ನು ಮಾಡುವುದರಲ್ಲಿ ತೊಡಗಿರುವಂತಹ ಅಥವಾ ಅನ್ಯಥಾ ಯಾವುದೇ ಕಾರಣಗಳಿಗಾಗಿ ನೊಂದಾಯಿತನಾಗದಿರುವ ಸ್ವೀಕರಿಸುವವನ(ರ)ನ್ನು ಒಳಗೊಂಡಂತೆ, ಎಲ್ಲಾ ಸ್ವೀಕರಿಸುವವರ ಒಟ್ಟಾರೆಯ ಮಧ್ಯ ಒಬ್ಬ ಸ್ವೀಕರಿಸುವವನಿಗೆ 'ಖ1' ನೋಂದಾಯಿತವಾಗಿರಲಿ ಅಥವಾ ಇಲ್ಲದಿರಲಿ, ಪ್ರಕರಣ 20ರ ಉಪಪ್ರಕರಣ (2) ರ ಖಂಡ (ಡಿ) ಮತ್ತು (ಇ)ಯ ಉಪಬಂಧಗಳಿಗೆ ಅನುಸಾರವಾಗಿ ಹಂಚಿಕೆ ಮಾಡುವುದು ಅಗತ್ಯವಿರುವ ಹೂಡುವಳಿ ತೆರಿಗೆ ಜಮೆಯು, ಕೆಳಕಂಡ ಸೂತ್ರವನ್ನು ಅನ್ವಯಿಸಿ ಲೆಕ್ಕಹಾಕಬೇಕಾದ ಮೊತ್ತ,"ಅ1", ಆಗಿರತಕ್ಕದ್ದು–

$$\mathbf{C1 = (t1 \div T) \times C}$$

ಇದರಲ್ಲಿ,

"C" ಯು ಹಂಚಿಕೆ ಮಾಡಬೇಕಾದ ಜಮೆಯ ಮೊತ್ತವಾಗಿದೆ

"t1" ಯು *R1* ವ್ಯಕ್ತಿಯ ಸಂಬಂಧಿತ ಅವಧಿಯ ಸಮಯದಲ್ಲಿನ ಪ್ರಕರಣ 20ರಲ್ಲಿ ಉಲ್ಲೇಖಿಸಿದ ವಹಿವಾಟಾಗಿದೆ ಮತ್ತು

"T" ಯು ಪ್ರಕರಣ 20ರ ಉಪಬಂಧಗಳಿಗೆ ಅನುಸಾರವಾಗಿ,ಹೂಡುವಳಿ ಸೇವೆಗಳು ಯಾರಿಗೆ ಸಂಬಂಧಿಸಿದುದು ಎನ್ನಬಹುದೋ ಅಂಥ ಎಲ್ಲಾ ಸ್ವೀಕರಿಸುವವರ ಸಂಬಂಧಿತ ಅವಧಿಯ ಸಮಯದಲ್ಲಿನ ಸಮಗ್ರ ವಹಿವಾಟಾಗಿದೆ;

(ಇ) ಏಕೀಕೃತ ತೆರಿಗೆಯಕಾರಣದಿಂದಾದ ಹೂಡುವಳಿ ತೆರಿಗೆ ಜಮೆಯನ್ನು, ಪ್ರತಿಯೊಬ್ಬ ಸ್ವೀಕೃತಿದಾರನಿಗೆ ಏಕೀಕೃತ ತೆರಿಗೆಯ ಹೂಡುವಳಿ ತೆರಿಗೆ ಜಮೆಯಂತೆ ಹಂಚಿಕೆ ಮಾಡತಕ್ಕದ್ದು;

(ಎಫ್) ಕೇಂದ್ರ ತೆರಿಗೆ, ರಾಜ್ಯ ತೆರಿಗೆ ಅಥವಾ ಕೇಂದ್ರಾಡಳಿತ ಪ್ರದೇಶ ತೆರಿಗೆಯ ಕಾರಣದಿಂದಾದಹೂಡುವಳಿ ತೆರಿಗೆ ಜಮೆಯನ್ನು –

(i) ಹೂಡುವಳಿ ಸೇವೆ ಹಂಚಿಕೆದಾರನು ನೆಲೆಗೊಂಡಿರುವ ಅದೇ ರಾಜ್ಯದಲ್ಲಿಯೇ ಸ್ವೀಕರಿಸುವವನು ನೆಲೆಗೊಂಡಿರುವುದಕ್ಕೆ ಸಂಬಂಧಿಸಿದಂತೆ, ಅನುಕ್ರಮವಾಗಿ ಕೇಂದ್ರ ತೆರಿಗೆ, ರಾಜ್ಯ ತೆರಿಗೆ ಅಥವಾ ಕೇಂದ್ರಾಡಳಿತ ಪ್ರದೇಶ ತೆರಿಗೆಯ ಹೂಡುವಳಿ ತೆರಿಗೆ ಜಮೆಯಂತೆ ಹಂಚಿಕೆ ಮಾಡತಕ್ಕದ್ದು;

(ii) ಹೂಡುವಳಿ ಸೇವೆ ಹಂಚಿಕೆದಾರನು ನೆಲೆಗೊಂಡಿರುವುದನ್ನು ಹೊರತುಪಡಿಸಿದ ಬೇರೆ ರಾಜ್ಯದಲ್ಲಿಸ್ವೀಕರಿಸುವವನು ನೆಲೆಗೊಂಡಿರುವುದಕ್ಕೆ ಸಂಬಂಧಿಸಿದಂತೆ, ಏಕೀಕೃತ ತೆರಿಗೆಯಂತೆ ಹಂಚಿಕೆ ಮಾಡತಕ್ಕದ್ದು ಮತ್ತು ಹಾಗೆ ಹಂಚಿಕೆ ಮಾಡಬೇಕಾದ ಮೊತ್ತವು, ಖಂಡ (ಡಿ)ಗೆ ಅನುಸಾರವಾಗಿಅಂಥ ಸ್ವೀಕರಿಸುವವನಿಗೆ ಹಂಚಿಕೆ ಮಾಡಲು ಅರ್ಹವಾಗಿರುವಂತಹ ಕೇಂದ್ರ ತೆರಿಗೆ ಮತ್ತು ರಾಜ್ಯ ತೆರಿಗೆಯ ಅಥವಾ ಕೇಂದ್ರಾಡಳಿತ ಪ್ರದೇಶ ತೆರಿಗೆಯ ಹೂಡುವಳಿ ತೆರಿಗೆ ಜಮೆಯ ಸಮಗ್ರ ಮೊತ್ತಕ್ಕೆ ಸಮನಾಗಿರತಕ್ಕದ್ದು.

(ಜಿ) ಹೂಡುವಳಿ ಸೇವೆ ಹಂಚಿಕೆದಾರನು ನಿಯಮ 54ರ ಉಪನಿಯಮ (1)ರಲ್ಲಿ ನಿಯಮಿಸಲಾದಂತೆ ಹೂಡುವಳಿ ಸೇವೆ ಹಂಚಿಕೆ ಬೆಲೆಪಟ್ಟಿಯನ್ನು ಕೇವಲ ಅದನ್ನು ಹೂಡುವಳಿ ತೆರಿಗೆ ಜಮೆಯ ಹಂಚಿಕೆಗಾಗಿ ಮಾತ್ರ ನೀಡಲಾಗಿದೆ ಎಂಬುದನ್ನು ಸ್ಪಷ್ಟವಾಗಿ ಅಂಥ ಬೆಲೆ ಪಟ್ಟಿಯಲ್ಲಿ ಸೂಚಿಸಿ ನೀಡತಕ್ಕದ್ದು.

(ಹೆಚ್) ಹೂಡುವಳಿ ಸೇವೆ ಹಂಚಿಕೆದಾರನು ನಿಯಮ 54ರ ಉಪನಿಯಮ (1)ರಲ್ಲಿ ನಿಯಮಿಸಲಾದಂತೆ ಹೂಡುವಳಿ ಸೇವೆ ಹಂಚಿಕೆಯ ಜಮೆಚೀಟಿಯನ್ನು, ಈಗಾಗಲೇ ಹಂಚಿಕೆ ಮಾಡಲಾದ ಹೂಡುವಳಿ ತೆರಿಗೆ ಜಮೆಯು ಯಾವುದಾದರು ಕಾರಣಗಳಿಗಾಗಿ ಇಳಿಕೆಯಾಗಿರುವ ಸಂದರ್ಭದಲ್ಲಿ ಜಮೆಯನ್ನು ಇಳಿಕೆ ಮಾಡುವುದಕ್ಕಾಗಿ ನೀಡತಕ್ಕದ್ದು.

(ಐ) ಪೂರೈಕೆದಾರನಿಂದ ಹೂಡುವಳಿ ಸೇವೆ ಹಂಚಿಕೆದಾರನಿಗೆ ಒಂದು ಖರ್ಚುಚೀಟಿಯ ನೀಡಿಕೆಯ ಕಾರಣದಿಂದಾದ ಹೂಡುವಳಿ ತೆರಿಗೆ ಜಮೆಯಯಾವುದೇ ಹೆಚ್ಚುವರಿ ಮೊತ್ತವನ್ನು,(ಎ) ಯಿಂದ (ಎಫ್) ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ವಿಧಾನದಲ್ಲಿ ಮತ್ತು ಷರತ್ತುಗಳಿಗೆ ಒಳಪಟ್ಟು ಹಂಚಿಕೆ ಮಾಡತಕ್ಕದ್ದು ಮತ್ತು ಯಾವುದೇ ಸ್ವೀಕರಿಸುವವನಿಗೆ ಎನ್ನಬಹುದಾದ ಮೊತ್ತವನ್ನು ಖಂಡ (ಡಿ)ಯಲ್ಲಿ ಉಪಬಂಧಿಸಿದ ವಿಧಾನದಲ್ಲಿ ಲೆಕ್ಕಹಾಕತಕ್ಕದ್ದು ಮತ್ತು **ನಮೂನೆ ಜಿಎಸ್‌ಟಿಆರ್–6ರ**ಲ್ಲಿನ ರಿಟರ್ನಿನಲ್ಲಿ ಖರ್ಚು ಚೀಟಿಯನ್ನು ಸೇರಿಸಿದ ತಿಂಗಳಲ್ಲಿ ಅಂಥ ಜಮೆಯನ್ನು ಹಂಚಿಕೆ ಮಾಡತಕ್ಕದ್ದು;

(ಜೆ) ಪೂರೈಕೆದಾರನಿಂದ ಹೂಡುವಳಿ ಸೇವೆ ಹಂಚಿಕೆದಾರನಿಗೆ ಒಂದು ಜಮೆಚೀಟಿಯ ನೀಡಿಕೆಯ ಕಾರಣದಿಂದಾಗಿ ಇಳಿಕೆ ಮಾಡಬೇಕಾದ ಹೂಡುವಳಿ ತೆರಿಗೆ ಜಮೆಯನ್ನು ಖಂಡ(ಡಿ)ಯ ನಿಬಂಧನೆಗಳಿಗೆ ಅನುಸಾರವಾಗಿ ಹಂಚಲಾದ ಮೂಲ ಬೆಲೆಪಟ್ಟಿಯಲ್ಲಿ ಒಳಗೊಂಡಿರುವ ಹೂಡುವಳಿ ತೆರಿಗೆ ಜಮೆಯ ಅದೇ ಅನುಪಾತದಲ್ಲಿ ಪ್ರತಿಯೊಬ್ಬ ಸ್ವೀಕರಿಸುವವನಿಗೆಭಾಗ ಮಾಡತಕ್ಕದ್ದು ಮತ್ತು ಹಾಗೆ ಭಾಗ ಮಾಡಿದ ಮೊತ್ತವನ್ನು–

(i) **ನಮೂನೆ ಜಿಎಸ್‌ಟಿಆರ್–6ರ**ಲ್ಲಿನ ರಿಟರ್ನಿನಲ್ಲಿ ಜಮೆ ಚೀಟಿಯನ್ನು ಸೇರಿಸಿದ ತಿಂಗಳಲ್ಲಿ ಹಂಚಿಕೆ ಮಾಡಬೇಕಾದ ಮೊತ್ತದಿಂದ ಇಳಿಕೆ ಮಾಡತಕ್ಕದ್ದು; ಅಥವಾ

(ii) ಹಂಚಿಕೆಯ ಅಡಿಯಲ್ಲಿನ ಜಮೆಯ ಮೊತ್ತವು ಹೊಂದಾಣಿಕೆ ಮಾಡಬೇಕಾದ ಮೊತ್ತಕ್ಕಿಂತ ಕಡಿಮೆಯಾಗಿರುವ ಕಾರಣದಿಂದಾಗಿ ಹಾಗೆ ಭಾಗ ಮಾಡಿದ ಮೊತ್ತವು ಋಣಾತ್ಮಕವಾಗಿದ್ದಲ್ಲಿ, ಸ್ವೀಕರಿಸುವವನ ಹುಟ್ಟುವಳಿ ತೆರಿಗೆ ಬಾಧ್ಯತೆಗೆ ಸೇರಿಸತಕ್ಕದ್ದು.

(2) ಒಬ್ಬ ಹೂಡುವಳಿ ಸೇವೆ ಹಂಚಿಕೆದಾರನಿಂದ ಹಂಚಿಕೆಮಾಡಲಾದ ಹೂಡುವಳಿ ತೆರಿಗೆ ಜಮೆಯ ಮೊತ್ತವು, ಹೂಡುವಳಿ ಸೇವಾ ಹಂಚಿಕೆದಾರನಿಂದ ತಪ್ಪಾದ ಸ್ವೀಕರಿಸುವವನಿಗೆ ಹಂಚಿಕೆ ಹಾಗಿರುವುದನ್ನು ಒಳಗೊಂಡಂತೆ ಯಾವುದೇ ಇತರೇ ಕಾರಣಗಳಿಗಾಗಿ ಯಾವುದೇ ಸ್ವೀಕರಿಸುವವನಿಗೆ ನಂತರ ಇಳಿಕೆಯಾದರೆ, ಹೂಡುವಳಿ ಸೇವೆ ಜಮೆಯ ಇಳಿಕೆಗಾಗಿ, ಉಪನಿಯಮ(1)ರ ಖಂಡ (ಜೆ)ಯಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯೆಯು ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

(3) ಉಪನಿಯಮ (2)ಕ್ಕೆ ಒಳಪಟ್ಟು, ಹೂಡುವಳಿ ಸೇವೆ ಹಂಚಿಕೆದಾರನು, ಉಪನಿಯಮ (1)ರ ಖಂಡ (ಹೆಚ್)ನಲ್ಲಿ ನಿರ್ದಿಷ್ಟಪಡಿಸಿದಂತೆ ಹೂಡುವಳಿ ಸೇವೆ ಹಂಚಿಕೆ ಜಮಾ ಚೀಟಿಯ ಆಧಾರದ ಮೇಲೆ,ಅಂಥ ಜಮೆಗೆ ಹಕ್ಕುಳ್ಳಸ್ವೀಕರಿಸುವವನಿಗೆ, ಹೂಡುವಳಿ ಸೇವೆ ಹಂಚಿಕೆಬೆಲೆಪಟ್ಟಿಯನ್ನು ನೀಡತಕ್ಕದ್ದು ಮತ್ತು ಅಂಥ ಜಮಾ ಚೀಟಿ ಮತ್ತು ಬೆಲೆಪಟ್ಟಿ ನೀಡಲಾದ ತಿಂಗಳಿನ ನಮೂನೆ ಜಿಎಸ್‌ಟಿ –6 ರ ರಿಟರ್ನಿನಲ್ಲಿ ಅಂಥ ಹೂಡುವಳಿ ಸೇವೆ ಹಂಚಿಕೆ ಜಮಾ ಚೀಟಿ ಮತ್ತು ಹೂಡುವಳಿ ಸೇವೆ ಹಂಚಿಕೆ ಬೆಲೆಪಟ್ಟಿಯನ್ನು ಸೇರಿಸತಕ್ಕದ್ದು.

40. ವಿಶೇಷ ಸಂದರ್ಭಗಳಲ್ಲಿ ಜಮೆಯನ್ನು ಕ್ಲೇಮು ಮಾಡುವ ವಿಧಾನ.– (1) ದಾಸ್ತಾನಿನಲ್ಲಿರುವ ಹೂಡುವಳಿಗಳು ಮತ್ತು ದಾಸ್ತಾನಿನಲ್ಲಿರುವ ಅರೆ–ಸಿದ್ದರೂಪದ ಅಥವಾ ಸಿದ್ದರೂಪದ ಸರಕುಗಳಲ್ಲಿ ಒಳಗೊಂಡಿರುವ ಹೂಡುವಳಿಗಳ ಮೇಲೆ ಪ್ರಕರಣ 18ರ ಉಪಪ್ರಕರಣ (1) ರ ಉಪಬಂಧಗಳಿಗೆ ಅನುಸಾರವಾಗಿ ಕ್ಲೇಮು ಮಾಡಿದ ಹೂಡುವಳಿ ತೆರಿಗೆ ಜಮೆ ಅಥವಾ ಸದರಿ ಉಪಪ್ರಕರಣದ ಖಂಡ(ಸಿ) ಮತ್ತು (ಡಿ)ಗಳ ಉಪಬಂಧಗಳಿಗೆ ಅನುಸಾರವಾಗಿ ಬಂಡವಾಳ ಸರಕುಗಳ ಮೇಲೆ ಕ್ಲೇಮು ಮಾಡಿದ ಜಮೆಯು ಕೆಳಕಂಡ ಷರತ್ತುಗಳಿಗೆ ಒಳಪಡತಕ್ಕದ್ದು, ಅಂದರೆ,–

(ಎ) ಪ್ರಕರಣ 18ರ ಉಪಪ್ರಕರಣ (1) ರ ಖಂಡ (ಸಿ) ಮತ್ತು (ಡಿ)ಗಳ ನಿಬಂದನೆಗಳಿಗೆ ಅನುಸಾರವಾದ ಬಂಡವಾಳ ಸರಕುಗಳ ಮೇಲಿನ ಹೂಡುವಳಿ ತೆರಿಗೆ ಜಮೆಯನ್ನು, ತೆರಿಗೆದಾಯಕ ವ್ಯಕ್ತಿಯು ಬಂಡವಾಳ ಸರಕುಗಳನ್ನು ಸ್ವೀಕರಿಸಿದಬೆಲೆಪಟ್ಟಿ ಅಥವಾ ಅಂಥ ಇತರೇ ದಸ್ತಾವೇಜುಗಳ ದಿನಾಂಕದಿಂದ, ಒಂದು ವರ್ಷದ ಪ್ರತಿ ತ್ರೈಮಾಸಿಕಕ್ಕೆ ಶೇಕಡ

ಐದರ ಅಂಶಗಳಷ್ಟು ಅಂಥ ಬಂಡವಾಳ ಸರಕುಗಳ ಮೇಲೆ ಸಂದಾಯ ಮಾಡಿದತೆರಿಗೆಯನ್ನುಇಳಿಕೆ ಮಾಡಿದ ನಂತರ ಕ್ಲೇಮು ಮಾಡತಕ್ಕದ್ದು;

(ಬಿ) ನೋಂದಾಯಿತ ವ್ಯಕ್ತಿಯು, ಪ್ರಕರಣ 18ರ ಉಪ ಪ್ರಕರಣ (1) ರ ಅಡಿಯಲ್ಲಿ ಹೂಡುವಳಿ ತೆರಿಗೆ ಜಮೆ ಉಪಯೋಗಿಸಕೊಳ್ಳಲು ಅರ್ಹನಾದ ದಿನಾಂಕದಿಂದ ಮೊವತ್ತು ದಿನಗಳ ಒಳಗಾಗಿ, ಮೇಲೆ ಹೇಳಲಾದಂತೆ ಹೂಡುವಳಿ ತೆರಿಗೆ ಜಮೆಯನ್ನು ಉಪಯೋಗಿಸಕೊಳ್ಳಲು ತಾನು ಅರ್ಹನಾಗಿರುವೆನೆಂದು ಸಾಮಾನ್ಯ ಪೋರ್ಟಲ್‌ನಲ್ಲಿ **ನಮೂನೆ ಜಿಎಸ್‌ಟಿ ಐಟಿಸಿ–01**ರಲ್ಲಿ ವಿದ್ಯುನ್ಮಾನ ರೀತಿಯಲ್ಲಿ ಘೋಷಣೆ ಮಾಡತಕ್ಕದ್ದು:

(ಸಿ) ಖಂಡ (ಬಿ) ಅಡಿಯಲ್ಲಿನ ಘೋಷಣೆಯು ದಾಸ್ತಾನಿನಲ್ಲಿರುವ ಹೂಡುವಳಿಗಳು ಮತ್ತು ದಾಸ್ತಾನಿನಲ್ಲಿರುವ ಅರೆ–ಸಿದ್ದರೂಪದ ಅಥವಾ ಸಿದ್ದರೂಪದ ಸರಕುಗಳಲ್ಲಿ ಸಂದರ್ಭಾನುಸಾರವಾಗಿ ಬಂಡವಾಳ ಸರಕುಗಳಲ್ಲಿ ಒಳಗೊಂಡಿರುವ ಹೂಡುವಳಿಗಳ ವಿವರಗಳನ್ನು,

(i) ಪ್ರಕರಣ 18ರ ಉಪಪ್ರಕರಣ (1)ರ ಖಂಡ (ಎ) ಅಡಿಯಲ್ಲಿ ಕ್ಲೇಮು ಮಾಡಿದ್ದಸಂದರ್ಭದಲ್ಲಿ, ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಅವನು ತೆರಿಗೆಯನ್ನು ಸಂದಾಯ ಮಾಡುವುದಕ್ಕೆ ಬಾಧ್ಯನಾಗುವ ದಿನಾಂಕದ ನಿಕಟಪೂರ್ವ ದಿನದಂದು;

(ii) ಪ್ರಕರಣ 18ರ ಉಪಪ್ರಕರಣ (1)ರ ಖಂಡ (ಬಿ) ಅಡಿಯಲ್ಲಿಕ್ಲೇಮು ಮಾಡಿದ್ದಸಂದರ್ಭದಲ್ಲಿ, ನೋಂದಣಿ ಮಂಜೂರಾದ ದಿನಾಂಕದ ನಿಕಟಪೂರ್ವ ದಿನದಂದು;

(iii) ಪ್ರಕರಣ 18ರ ಉಪಪ್ರಕರಣ (1)ರ ಖಂಡ (ಸಿ) ಅಡಿಯಲ್ಲಿಕ್ಲೇಮು ಮಾಡಿದ್ದಸಂದರ್ಭದಲ್ಲಿ, ಅವನು, ಪ್ರಕರಣ 9ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವುದಕ್ಕೆ ಬಾಧ್ಯನಾಗುವ ದಿನಾಂಕದ ನಿಕಟಪೂರ್ವ ದಿನದಂದು;

(iv) ಪ್ರಕರಣ 18ರ ಉಪಪ್ರಕರಣ (1)ರ ಖಂಡ (ಡಿ) ಅಡಿಯಲ್ಲಿಕ್ಲೇಮು ಮಾಡಿದ್ದಸಂದರ್ಭದಲ್ಲಿ, ನೋಂದಾಯಿತ ವ್ಯಕ್ತಿಯಿಂದ ಮಾಡಲಾದ ಪೂರೈಕೆಯು, ತೆರಿಗೆದಾಯಕವಾಗುವ ದಿನಾಂಕದ ನಿಕಟಪೂರ್ವ ದಿನದಂದು

– ಸ್ಪಷ್ಟವಾಗಿ ನಿರ್ದಿಷ್ಟಪಡಿಸತಕ್ಕದ್ದು–

(ಡಿ) ಖಂಡ (ಬಿ) ಅಡಿಯಲ್ಲಿನ ಘೋಷಣೆಯಲ್ಲಿ ಸಲ್ಲಿಸಿದ ವಿವರಗಳು, ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಕೇಂದ್ರಾಡಳಿತ ಪ್ರದೇಶ ತೆರಿಗೆ ಮತ್ತು ಏಕೀಕೃತ ತೆರಿಗೆಯ ಕಾರಣದಿಂದಾ ಕ್ಲೇಮಿನ ಸಮಗ್ರ ಮೌಲ್ಯವು ಎರಡು ಲಕ್ಷ ರೂಪಾಯಿ ಮೀರಿದರೆ ಒಬ್ಬ ವೃತ್ತಿನಿರತ ಚಾರ್ಟರ್ಡ್ ಅಕೌಂಟೆಟ್ ಅಥವಾ ಕಾಸ್ಟ ಅಕೌಂಟಂಟನಿಂದ ಯುಕ್ತವಾಗಿ ಪ್ರಮಾಣೀಕರಿಸತಕ್ಕದ್ದು.

(ಇ) ಪ್ರಕರಣ 18ರ ಉಪಪ್ರಕರಣ (1)ರ ಖಂಡ (ಸಿ) ಮತ್ತು (ಡಿ) ಗಳ ಉಪಬಂಧಗಳಿಗೆ ಅನುಸಾರವಾಗಿಕ್ಲೇಮು ಮಾಡಲಾದ ಹೂಡುವಳಿ ತೆರಿಗೆ ಜಮೆಯನ್ನು, ಸಂಬಂಧಿತ ಪೂರೈಕೆದಾರನಿಂದ ಸಾಮಾನ್ಯ ಪೋರ್ಟಲನಲ್ಲಿ **ನಮೂನೆ ಜಿಎಸ್‌ಟಿಆರ್–1** ಅಥವಾ ಸಂದರ್ಭಾನುಸಾರವಾಗಿ **ನಮೂನೆ ಜಿಎಸ್‌ಟಿಆರ್–4ರಲ್ಲಿ** ಒದಗಿಸಿದ ಸಂವಾದಿ ವಿವರಗಳೊಂದಿಗೆ ಪರಿಶೀಲಿಸತಕ್ಕದ್ದು.

(2) ಪ್ರಕರಣ 18ರ ಉಪಪ್ರಕರಣ (6) ರ ಉದ್ದೇಶಗಳಿಗಾಗಿ, ಬಂಡವಾಳ ಸರಕುಗಳ ಅಥವಾ ಸ್ಥಾವರ ಮತ್ತು ಯಂತ್ರೋಪಕರಣಗಳ ಪೂರೈಕೆಯ ಸಂದರ್ಭದಲ್ಲಿ ಜಮೆಯ ಮೊತ್ತವನ್ನು, ಅಂಥ ಸರಕುಗಳಿಗಾಗಿ ನೀಡಲಾದ ಬೆಲೆಪಟ್ಟಿಯ ದಿನಾಂಕದಿಂದ, ಒಂದು ವರ್ಷದ ಪ್ರತಿ ತ್ರೈಮಾಸಿಕಕ್ಕೆ ಶೇಕಡ ಐದುಅಂಶಗಳಷನ್ನು ಅಂಥ ಸರಕುಗಳ ಮೇಲಿನ ಹೂಡವಳಿ ತೆರಿಗೆಯನ್ನು ಇಳಿಕೆ ಮಾಡಿ ಲೆಕ್ಕಹಾಕತಕ್ಕದ್ದು.

41. ವ್ಯವಹಾರದ ಮಾರಾಟ, ವಿಲೀನ, ಸಮ್ಮಿಲನಗೊಳ್ಳುವಿಕೆ, ಭೋಗ್ಯ ಅಥವಾ ವರ್ಗಾವಣೆ ಮೇಲಿನ ಜಮೆಯ ವರ್ಗಾವಣೆ.–

(1) ಮಾರಾಟ, ವಿಲೀನ, ಬೇರ್ಪಡೆ, ಸಮ್ಮಿಲನಗೊಳ್ಳುವಿಕೆ, ಭೋಗ್ಯ ಅಥವಾ ವರ್ಗಾವಣೆ ಅಥವಾ ಯಾವುದೇ ಕಾರಣಗಳಿಗಾಗಿವ್ಯವಹಾರದ ಮಾಲಿಕತ್ವದಲ್ಲಿ ಬದಲಾವಣೆಯಾದಾಗ, ನೋಂದಾಯಿತ ವ್ಯಕ್ತಿಯು, ವ್ಯವಹಾರದ ಮಾರಾಟ, ವಿಲೀನ, ಬೇರ್ಪಡೆ, ಸಮ್ಮಿಲನಗೊಳ್ಳುವಿಕೆ, ಭೋಗ್ಯ ಅಥವಾ ವರ್ಗಾವಣೆಯ ವಿವರಗಳನ್ನು, ಆತನ ವಿದ್ಯುನ್ಮಾನ ಜಮೆ ಖಾತೆಯಲ್ಲಿರುವ ಬಳಕೆಯಾಗದ ಹೂಡುವಳಿ ತೆರಿಗೆ ಜಮೆಯನ್ನು ವರ್ಗಾಯಿತನಿಗೆ ವರ್ಗಾಯಿಸುವ ಕೋರಿಕೆಯೊಂದಿಗೆ, **ನಮೂನೆ ಜಿಎಸ್‌ಟಿ ಐಟಿಸಿ –02** ರಲ್ಲಿ ಸಾಮಾನ್ಯ ಪೋರ್ಟಲ್‌ನಲ್ಲಿ ವಿದ್ಯುನ್ಮಾನ ರೀತಿಯಲ್ಲಿ ಸಲ್ಲಿಸತಕ್ಕದ್ದು:

ಪರಂತು, ಬೇರ್ಪಡೆಯ ಸಂದರ್ಭದಲ್ಲಿ, ಹೂಡುವಳಿ ತೆರಿಗೆ ಜಮೆಯನ್ನು, ಬೇರ್ಪಡಿಕೆ ಯೋಜನೆಯಲ್ಲಿ ನಿರ್ದಿಷ್ಟಪಡಿಸಿದ ಹೊಸ ಘಟಕಗಳ ಆಸ್ತಿಗಳ ಮೌಲ್ಯದ ಅನುಪಾತದಲ್ಲಿ ಭಾಗ ಮಾಡತಕ್ಕದ್ದು.

(2) ವರ್ಗಾವಣೆದಾರನು, ಮಾರಾಟ, ವಿಲೀನ, ಬೇರ್ಪಡೆ, ಸಮ್ಮಿಲನಗೊಳ್ಳುವಿಕೆ, ಭೋಗ್ಯ ಅಥವಾ ವರ್ಗಾವಣೆಯನ್ನು, ಬಾಧ್ಯತೆಗಳ ವರ್ಗಾವಣೆಗಾಗಿನ ನಿರ್ದಿಷ್ಟ ಉಪಬಂಧಗಳೊಂದಿಗೆ ಮಾಡಲಾಗಿದೆ ಎಂದು ಪ್ರಮಾಣೀಕರಿಸಿ, ಒಬ್ಬ ಒಬ್ಬ ವೃತ್ತಿನಿರತ ಚಾರ್ಟರ್ಡ್ ಅಕೌಂಟೆಟ್ ಅಥವಾ ಅಥವಾ ಕಾಸ್ಟ ಅಕೌಂಟಂಟನು ನೀಡಿದ ಒಂದು ಪ್ರಮಾಣ ಪತ್ರದ ಒಂದು ಪ್ರತಿಯನ್ನು ಸಹ ಸಲ್ಲಿಸತಕ್ಕದ್ದು.

(3) ವರ್ಗಾವಣೆ ಪಡೆದವನು, ವರ್ಗಾವಣೆಕಾರನು ಹಾಗೆ ಸಲ್ಲಿಸಿದ ವಿವರಗಳನ್ನು ಸಾಮಾನ್ಯ ಪೋರ್ಟಲ್‌ನಲ್ಲಿ ಒಪ್ಪಿಕೊಳ್ಳತಕ್ಕದ್ದು ಮತ್ತು ಅಂಥ ಒಪ್ಪಿಗೆಯ ಮೇರೆಗೆ, **ನಮೂನೆ ಜಿಎಸ್‌ಟಿ ಐಟಿಸಿ–02**ರಲ್ಲಿ ನಿರ್ದಿಷ್ಟಪಡಿಸಿದ ಬಳಕೆಯಾಗದ ಜಮೆಯು ಆತನ ವಿದ್ಯುನ್ಮಾನ ಜಮೆ ಖಾತೆಗೆ ಜಮೆಗೊಳ್ಳತಕ್ಕದ್ದು.

(4) ಹಾಗೆ ವರ್ಗಾವಣೆಗೊಂಡ ಹೂಡುವಳಿಗಳು ಮತ್ತು ಬಂಡವಾಳ ಸರಕುಗಳನ್ನು ವರ್ಗಾವಣೆ ಪಡೆದವನು ಯುಕ್ತವಾಗಿ ತನ್ನ ಲೆಕ್ಕ ಪುಸ್ತಕಗಳಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು.

42. ಹೂಡುವಳಿಗಳು ಅಥವಾ ಹೂಡುವಳಿ ಸೇವೆಗಳಿಗೆ ಸಂಬಂಧಿಸಿದಂತೆ ಹೂಡುವಳಿ ತೆರಿಗೆ ಜಮೆಯ ನಿರ್ಧರಣೆಯ ವಿಧಾನ ಮತ್ತು ಅದರ ಹಿಮ್ಮುಖಗೊಳಿಸುವಿಕೆ.– (1) ವ್ಯವಹಾರದ ಉದ್ದೇಶಗಳಿಗಾಗಿ ಭಾಗಶಃ ಉಪಯೋಗಿಸುತ್ತಿರುವಮತ್ತು ಭಾಗಶಃ ಇತರ ಉದ್ದೇಶಗಳಿಗಾಗಿ ಅಥವಾ ಶೂನ್ಯ–ದರದ ಪೂರೈಕೆಗಳನ್ನು ಒಳಗೊಂಡಂಥ ತೆರಿಗೆದಾಯಕ ಪೂರೈಕೆಗಳಿಗಾಗಿ ಭಾಗಶಃ ಉಪಯೋಗಿಸಿದಮತ್ತು ಭಾಗಶಃ ವಿನಾಯಿತಿ ಪೂರೈಕೆಗಳನ್ನು ಮಾಡುವುದಕ್ಕಾಗಿ ಉಪಯೋಗಿಸಲಾಗಿರುವ, ಪ್ರಕರಣ 17ರ ಉಪಪ್ರಕರಣ (1) ಅಥವಾ (2) ರ ಉಪಬಂಧಗಳನ್ನು ಆಕರ್ಷಿಸಿಸುವ, ಹೂಡುವಳಿಗಳು ಅಥವಾ ಹೂಡುವಳಿ ಸೇವೆಗಳಿಗೆ ಸಂಬಂಧಿಸಿದ ಹೂಡುವಳಿ ತೆರಿಗೆ ಜಮೆಯನ್ನು, ವ್ಯವಹಾರದ ಉದ್ದೇಶಗಳಿಗಾಗಿ ಅಥವಾ ತೆರಿಗೆದಾಯಕ ಪೂರೈಕೆಗಳನ್ನು ಮಾಡುವುದಕ್ಕೆ ಕೆಳಕಂಡ ವಿಧಾನದಲ್ಲಿ ನಿರ್ಧರಿಸತಕ್ಕದ್ದು, ಅಂದರೆ,–

(ಎ) ಒಂದು ತೆರಿಗೆ ಅವಧಿಯಲ್ಲಿನ ಹೂಡುವಳಿ ಮತ್ತು ಹೂಡುವಳಿ ಸೇವೆಗಳಲ್ಲಿ ಒಳಗೊಂಡಿರುವ ಒಟ್ಟು ಹೂಡುವಳಿ ತೆರಿಗೆಯನ್ನು 'T'ಎಂದು ಸೂಚಿತವಾಗಲಿ;

(ಬಿ) ವ್ಯವಹಾರೇತರ ಉದ್ದೇಶಗಳಿಗಾಗಿ ಪ್ರತ್ಯೇಕವಾಗಿ ಬಳಸಲು ಉದ್ದೇಶಿಸಿರುವ ಹೂಡುವಳಿ ಮತ್ತು ಹೂಡುವಳಿ ಸೇವೆಗಳಿಗೆ ಎಂದು ಹೇಳಬಹುದಾದ **"T"**ಯಲ್ಲಿನ ಹೂಡುವಳಿ ತೆರಿಗೆ ಮೊತ್ತವು **"T1"** ಎಂದು ಸೂಚಿತವಾಗಲಿ;

(ಸಿ) ವಿನಾಯಿತಿ ಪೂರೈಕೆಗಳನ್ನು ಮಾಡುವುದಕ್ಕಾಗಿ ಪ್ರತ್ಯೇಕವಾಗಿ ಬಳಸಲು ಉದ್ದೇಶಿಸಿರುವ ಹೂಡುವಳಿ ಮತ್ತು ಹೂಡುವಳಿ ಸೇವೆಗಳಿಗೆ ಎಂದು ಹೇಳಬಹುದಾದ **"T"**ಯಲ್ಲಿನ ಹೂಡುವಳಿ ತೆರಿಗೆ ಮೊತ್ತವು **"T2"** ಎಂದು ಸೂಚಿತವಾಗಲಿ;

(ಡಿ) ಅವುಗಳ ಮೇಲೆ ಪ್ರಕರಣ 17ರ ಉಪ–ಪ್ರಕರಣ (5) ರ ಅಡಿಯಲ್ಲಿ ಜಮೆಯು ಲಭ್ಯವಿಲ್ಲದ ಹೂಡುವಳಿ

ಮತ್ತು ಹೂಡುವಳಿ ಸೇವೆಗಳಿಗೆ ಸಂಬಂಧಿಸಿದಂತೆ **"T"**ಯಲ್ಲಿನ ಹೂಡುವಳಿ ತೆರಿಗೆ ಮೊತ್ತವು **"T3"** ಎಂದು ಸೂಚಿತವಾಗಲಿ;

(ಇ) ನೋಂದಾಯಿತ ವ್ಯಕ್ತಿಯ ವಿದ್ಯುನ್ಮಾನ ಜಮೆ ಖಾತೆಗೆ ಜಮೆಗೊಳಿಸಿದ ಹೂಡುವಳಿ ತೆರಿಗೆ ಜಮೆಯ ಮೊತ್ತವು **"**C1**"** ಎಂದು ಸೂಚಿತವಾಗಲಿ ಮತ್ತು ಕೆಳಕಂಡಂತೆ ಲೆಕ್ಕ ಹಾಕಲ್ಪಡಲಿ–

C1= T – (T1 + T2 + T3);

(ಎಫ್) ವಿನಾಯಿತಿಯನ್ನು ಹೊರತುಪಡಿಸಿದ ಆದರೆ ಶೂನ್ಯದರದ ಪೂರೈಕೆಗಳನ್ನು ಒಳಗೊಂಡ ಪೂರೈಕೆಗಳನ್ನು ಮಾಡುವುದಕ್ಕಾಗಿ ಪ್ರತ್ಯೇಕವಾಗಿ ಬಳಸಲು ಉದ್ದೇಶಿಸಿರುವ ಹೂಡುವಳಿ ಮತ್ತು ಹೂಡುವಳಿ ಸೇವೆಗಳಿಗೆ ಎಂದು ಹೇಳಬಹುದಾದ ಹೂಡುವಳಿ ತೆರಿಗೆ ಜಮೆಯ ಮೊತ್ತವು **"T4"** ಎಂದು ಸೂಚಿತವಾಗಲಿ.

(ಜಿ) T1 + T2 + T3 ಮತ್ತು T4 ನೋಂದಾಯಿತ ವ್ಯಕ್ತಿಯಿಂದ, ಬೆಲೆಪಟ್ಟಿಯ ಹಂತದಲ್ಲಿ ನಮೂನೆ ಜಿಎಸ್‌ಟಿಆರ್ –2ರಲ್ಲಿ ನಿರ್ಧರಿಸತಕ್ಕದ್ದು ಮತ್ತು ಘೋಷಿಸತಕ್ಕದ್ದು.

(ಹೆಚ್) ಖಂಡ (ಜಿ)ಅಡಿಯಲ್ಲಿ ಹೂಡುವಳಿ ತೆರಿಗೆ ಜಮೆಯ ನಿರ್ದಿಷ್ಟಪಡಿಸುವಿಕೆಯ ನಂತರ ಉಳಿದ ಹೂಡುವಳಿ ತೆರಿಗೆ ಜಮೆಯನ್ನು ಸಾಮಾನ್ಯ ಜಮೆ ಎಂದು ಕರೆಯತಕ್ಕದ್ದು, **"**ಅ2**"** ಎಂದು ಸೂಚಿತವಾಗಲಿ ಮತ್ತು ಕೆಳಕಂಡಂತೆ ಲೆಕ್ಕ ಹಾಕಲ್ಪಡಲಿ–

C2 = C1 - T4;

(ಐ) ವಿನಾಯಿತಿ ಪೂರೈಕೆಗಳಿಗೆ ಎಂದು ಹೇಳಬಹುದಾದ ಹೂಡುವಳಿ ತೆರಿಗೆ ಜಮೆಯ ಮೊತ್ತವು **"**ಆ1**"** ಎಂದು ಸೂಚಿತವಾಗಲಿ ಮತ್ತು ಮತ್ತು ಕೆಳಕಂಡಂತೆ ಲೆಕ್ಕ ಹಾಕಲ್ಪಡಲಿ–

D1 = (E / F) x c2

ಇದರಲ್ಲಿ,

"E"ಯು ತೆರಿಗೆ ಅವಧಿಯಲ್ಲಿನ ವಿನಾಯಿತಿಪೂರೈಕೆಗಳ ಸಮಗ್ರ ಮೌಲ್ಯವಾಗಿರುವುದು ಮತ್ತು

"F"ಯು ತರಿಗೆ ಅವಧಿಯಲ್ಲಿನ ನೋಂದಾಯಿತ ವ್ಯಕ್ತಿಯ ರಾಜ್ಯದಲ್ಲಿನ ಒಟ್ಟು ವಹಿವಾಟುವಾಗಿರುವುದು:

ಪರಂತು ನೋಂದಾಯಿತ ವ್ಯಕ್ತಿಯು ಸದರಿ ತೆರಿಗೆ ಅವಧಿಯಲ್ಲಿ ಯಾವುದೇ ವಹಿವಾಟನ್ನು ಹೊಂದಿರದಿದ್ದಲ್ಲಿ ಅಥವಾ ಮೇಲೆ ಹೇಳಲಾದ ಮಾಹಿತಿಯು ಲಭ್ಯವಿರದಿದ್ದಲ್ಲಿ, E/F ದ ಮೌಲ್ಯವನ್ನು, ಸದರಿ E/Fನ ಮೌಲ್ಯವನ್ನು ಲೆಕ್ಕಹಾಕಬೇಕಾದ ತಿಂಗಳಿನ ಹಿಂದಿನ, ಅಂಥ ವಹಿವಾಟಿನ ವಿವರಗಳು ಲಭ್ಯವಿರುವ, ಕೊನೆಯ ತೆರಿಗೆ ಅವಧಿಯ **"E"** ಮತ್ತು **"F"** ದ ಮೌಲ್ಯಗಳನ್ನು ತೆಗೆದುಕೊಂಡು ಲೆಕ್ಕ ಹಾಕತಕ್ಕದ್ದು;

ವಿವರಣೆ: ಈ ಖಂಡದ ಉದ್ದೇಶಗಳಿಗಾಗಿ, ವಿನಾಯಿತಿ ಪೂರೈಕೆಗಳ ಸಮಗ್ರ ಮೌಲ್ಯ ಮತ್ತು ಒಟ್ಟು ವಹಿವಾಟು, ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ Iರ ನಮೂದು 84ಮತ್ತು ಸದರಿ ಅನುಸೂಚಿಯ ಪಟ್ಟಿ II ರ ನಮೂದು 51 ಮತ್ತು 54 ರ ಅಡಿಯಲ್ಲಿ ವಿಧಿಸಲಾದ ಯಾವುದೇ ಸುಂಕ ಅಥವಾ ತೆರಿಗೆಯ ಮೊತ್ತವನ್ನು ಹೊರತುಪಡಿಸತಕ್ಕದ್ದು ಎಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ;

(ಜೆ) ಸಾಮಾನ್ಯ ಹೂಡುವಳಿಗಳು ಮತ್ತು ಹೂಡುವಳಿ ಸೇವೆಗಳು ಭಾಗಶಃ ವ್ಯವಹಾರದ ಉದ್ದೇಶಗಳಿಗಾಗಿ ಮತ್ತು ಭಾಗಶಃ ವ್ಯವಹಾರೇತರ ಉದ್ದೇಶಗಳಿಗಾಗಿ ಬಳಕೆಯಾದರೆ, ವ್ಯವಹಾರೇತರ ಉದ್ದೇಶಗಳಿಗಾಗಿ ಎಂದು ಹೇಳಬಹುದಾದ ಹೂಡುವಳಿ ತೆರಿಗೆ ಮೊತ್ತವು 'ಅ2' ಎಂದು ಸೂಚಿತವಾಗತಕ್ಕದ್ದು, ಮತ್ತು ಅ2ವಿನ ಶೇ.

ಐದರಷ್ಟಕ್ಕೆ ಸಮನಾಗಿರತಕ್ಕದ್ದು; ಮತ್ತು

(ಕೆ) ಸಾಮಾನ್ಯ ಜಮೆಯ ಶೇಷ ಮೊತ್ತವು, ವ್ಯವಹಾರದ ಉದ್ದೇಶಗಳಿಗಾಗಿ ಮತ್ತು ಶೂನ್ಯ–ದರದ ಪೂರೈಕೆಗಳನ್ನು ಒಳಗೊಂಡಂತೆ ತೆರಿಗೆದಾಯಕ ಪೂರೈಕೆಗಳನ್ನು ಮಾಡುವುದಕ್ಕಾಗಿ ಎಂದು ಹೇಳಬಹುದಾದ ಅರ್ಹ ಹೂಡುವಳಿ ತೆರಿಗೆ ಜಮೆಯಾಗಿರತಕ್ಕದ್ದು ಮತ್ತು 'C3' ಎಂದು ಸೂಚಿತವಾಗತಕ್ಕದ್ದು, ಇಲ್ಲಿ,–

$$C3 = C2 – (D1 + D2)$$

(ಎಲ್) 'C3' ಮೊತ್ತವನ್ನು ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಕೇಂದ್ರಾಡಳಿತ ತೆರಿಗೆ ಮತ್ತು ಸಮಗ್ರ ತೆರಿಗೆಯ ಹೂಡುವಳಿ ತೆರಿಗೆ ಜಮೆಗಾಗಿ ಪ್ರತ್ಯೇಕವಾಗಿ ಲೆಕ್ಕಹಾಕತಕ್ಕದ್ದು;

(ಎಮ್) 'D1' ಮತ್ತು 'D2'ನ ಸಮಗ್ರ ಮೊತ್ತಕ್ಕೆ ಸಮಾನವಾದ ಮೊತ್ತವನ್ನು ನೋಂದಾಯಿತ ವ್ಯಕ್ತಿಯ ಹುಟ್ಟುವಳಿ ತೆರಿಗೆ ಬಾಧ್ಯತೆಗೆ ಸೇರಿಸತಕ್ಕದ್ದು:

ಪರಂತು ಭಾಗಶಃ ವ್ಯವಹಾರೇತರ ಉದ್ದೇಶಗಳಿಗಾಗಿ ಮತ್ತು ಭಾಗಶಃ ವಿನಾಯಿತಿ ಪೂರೈಕೆಗಳನ್ನು ಮಾಡುವುದಕ್ಕಾಗಿ ಉಪಯೋಗಿಸಿದ ಹೂಡುವಳಿಗಳು ಅಥವಾ ಹೂಡುವಳಿ ಸೇವೆಗಳಿಗೆ ಸಂಬಂಧಿಸಿದ ಹೂಡುವಳಿ ತೆರಿಗೆ ಮೊತ್ತವು ನೋಂದಾಯಿತ ವ್ಯಕ್ತಿಯಿಂದ ಬೆಲೆಪಟ್ಟಿಯ ಹಂತದಲ್ಲಿ ಗುರಿತಿಸಲ್ಪಟ್ಟು ಮತ್ತು ಪ್ರತ್ಯೇಕಿಸಲ್ಪಪಟ್ಟಿದ್ದಲ್ಲಿ, ಅದನ್ನು ಅನುಕ್ರಮವಾಗಿ 'T1' ಮತ್ತು 'T2'ರಲ್ಲಿ ಸೇರಿಸತಕ್ಕದ್ದು ಮತ್ತು ಅಂಥ ಹೂಡುವಳಿ ಅಥವಾ ಹೂಡುವಳಿ ಸೇವೆಗಳ ಮೇಲೆ ಬಾಕಿ ಉಳಿದ ಜಮೆಯ ಮೊತ್ತವನ್ನು 'T4'ರಲ್ಲಿ ಸೇರಿಸತಕ್ಕದ್ದು.

(2) ಉಪ–ನಿಯಮ (1)ರ ಅಡಿಯಲ್ಲಿ ನಿರ್ಧರಿಸಲಾದ ಹೂಡುವಳಿ ತೆರಿಗೆ ಜಮೆಯನ್ನು ಹಣಕಾಸು ವರ್ಷಕ್ಕಾಗಿ, ಸದರಿ ಉಪನಿಯಮದಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ, ಅಂಥ ಜಮೆಯ ಸಂಬಂಧಿಸಿರುವ ಹಣಕಾಸು ವರ್ಷ ಮುಕ್ತಾಯದ ತರುವಾಯ ಬರುವ ಸಪ್ಟೆಂಬರ್ ತಿಂಗಳಿಗೆ ರಿಟರ್ನ್ ಸಲ್ಲಿಸಲು ಇರುವ ಗಡವು ದಿನಾಂಕಕ್ಕಿಂತ ಮುಂಚಿತವಾಗಿ, ಅಂತಿಮವಾಗಿ ಲೆಕ್ಕಹಾಕತಕ್ಕದ್ದು.

(ಎ) 'D1' ಮತ್ತು 'D2'ಗೆ ಸಂಬಂಧಿಸಿದಂತೆ ಅಂತಿಮವಾಗಿ ಲೆಕ್ಕಹಾಕಲಾದ ಸಮಗ್ರ ಮೊತ್ತಗಳು, ಉಪನಿಯಮ (1)ರ ಅಡಿಯಲ್ಲಿ 'D1' ಮತ್ತು 'D2'ಗೆ ಸಂಬಂಧಿಸಿದಂತೆ ನಿರ್ಧರಿಸಲಾದ ಸಮಗ್ರ ಮೊತ್ತಗಳನ್ನು ಮೀರಿದ್ದಲ್ಲಿ, ಅಂಥ ಹೆಚ್ಚುವರಿಯನ್ನು ಅಂಥ ಜಮೆಯು ಸಂಬಂಧಿಸಿರುವ ಹಣಕಾಸು ವರ್ಷ ಮುಗಿದ ನಂತರ ಬರುವ ಸಪ್ಟೆಂಬರ್ ತಿಂಗಳಿಗಿಂತ ತರುವಾಯವಾಗಿಯಲ್ಲದ ತಿಂಗಳಿನಲ್ಲಿ ನೋಂದಾಯಿತ ವ್ಯಕ್ತಿಯ ಹುಟ್ಟುವಳಿ ತೆರಿಗೆ ಬಾಧ್ಯತೆಗೆ ಸೇರಿಸತಕ್ಕದು ಮತ್ತು ಸದರಿ ಜಮೆಯ ಮೇಲೆ ತರುವಾಯ ಬರುವ ಹಣಕಾಸು ವರ್ಷದ ಏಪ್ರಿಲ್‌ನ ಮೊದಲನೇ ದಿನದಿಂದ ಪ್ರಾರಂಭಗೊಂಡು ಸಂದಾಯದ ದಿನಾಂಕದ ವರೆಗೆ ಪ್ರಕರಣ 50ರ ಉಪಪ್ರಕರಣ (1)ರ ಅಡಿಯಲ್ಲಿ ಅಧಿಸೂಚಿಸಿದ ದರದಲ್ಲಿ ಬಡ್ಡಿಯನ್ನು ಸಂದಾಯ ಮಾಡುವುದಕ್ಕೆ ಬಾಧ್ಯನಿರತಕ್ಕದ್ದು; ಅಥವಾ

(ಬಿ) ಉಪನಿಯಮ (1)ರ ಅಡಿಯಲ್ಲಿ 'D1' ಮತ್ತು 'D2'ಗೆ ಸಂಬಂಧಿಸಿದಂತೆ ನಿರ್ಧರಿಸಲಾದ ಸಮಗ್ರ ಮೊತ್ತಗಳು, 'D1' ಮತ್ತು 'D2'ಗೆ ಸಂಬಂಧಿಸಿದಂತೆ ಅಂತಿಮವಾಗಿ ಲೆಕ್ಕಹಾಕಲಾದ ಸಮಗ್ರ ಮೊತ್ತಗಳನ್ನು ಮೀರಿದ್ದಲ್ಲಿ, ಅಂಥ ಹೆಚ್ಚುವರಿ ಮೊತ್ತವನ್ನು ಅಂಥ ಜಮೆಯು ಸಂಬಂಧಿಸಿರುವ ಹಣಕಾಸು ವರ್ಷ ಮುಗಿದ ನಂತರ ಬರುವ ಸಪ್ಟೆಂಬರ್ ತಿಂಗಳಿಗಿಂತ ತರುವಾಯವಾಗಿಯಲ್ಲದ ತಿಂಗಳಿನ ತನ್ನ ರಿಟರ್ನಿನಲ್ಲಿ ನೋಂದಾಯಿತ ವ್ಯಕ್ತಿಯು ಜಮೆಯನ್ನಾಗಿ ಕ್ಲೇಮು ಮಾಡತಕ್ಕದ್ದು.

43. ಬಂಡವಾಳ ಸರಕುಗಳಿಗೆ ಸಂಬಂಧಿಸಿದಂತೆ ಹೂಡುವಳಿ ತೆರಿಗೆ ಜಮೆಯನ್ನು ನಿರ್ಧರಿಸುವ ವಿಧಾನ ಮತ್ತು ಕೆಲವು ಸಂದರ್ಭಗಳಲ್ಲಿ ಅದನ್ನು ಹಿಮ್ಮುಖಗೊಳಿಸುವುದು.–(1) ವ್ಯವಹಾರದ ಉದ್ದೇಶಗಳಿಗಾಗಿ ಭಾಗಶಃ ಉಪಯೋಗಿಸುತ್ತಿರುವ

ಮತ್ತು ಭಾಗಶಃ ಇತರ ಉದ್ದೇಶಗಳಿಗಾಗಿ ಅಥವಾ ಶೂನ್ಯ–ದರದ ಪೂರೈಕೆಗಳನ್ನು ಒಳಗೊಂಡಂಥ ತೆರಿಗೆದಾಯಕ ಪೂರೈಕೆಗಳಿಗಾಗಿ ಭಾಗಶಃ ಉಪಯೋಗಿಸಿದ ಮತ್ತು ಭಾಗಶಃ ವಿನಾಯಿತಿ ಪೂರೈಕೆಗಳನ್ನು ಮಾಡುವುದಕ್ಕಾಗಿ ಉಪಯೋಗಿಸಲಾಗಿರುವ,ಪ್ರಕರಣ 17ರ ಉಪಪ್ರಕರಣ (1) ಅಥವಾ (2) ರ ಉಪಬಂಧಗಳನ್ನು ಆಕರ್ಷಿಸಿಸುವ, ಬಂಡವಾಳ ಸರಕುಗಳಿಗೆ ಸಂಬಂಧಿಸಿದ ಹೂಡುವಳಿ ತೆರಿಗೆ ಜಮೆಯನ್ನು, ಪ್ರಕರಣ 16ರ ಉಪ–ಪ್ರಕರಣ(3)ರ ಉಪಬಂಧಗಳಿಗೆ ಒಳಪಟ್ಟು, ವ್ಯವಹಾರದ ಉದ್ದೇಶಗಳಿಗಾಗಿ ಅಥವಾ ತೆರಿಗೆದಾಯಕ ಪೂರೈಕೆಗಳನ್ನು ಮಾಡುವುದಕ್ಕಾಗಿ ಕೆಳಕಂಡ ವಿಧಾನದಲ್ಲಿ ನಿರ್ಧರಿಸತಕ್ಕದ್ದು, ಅಂದರೆ,–

(ಎ) ವ್ಯವಹಾರೇತರ ಉದ್ದೇಶಗಳಿಗಾಗಿ ಪ್ರತ್ಯೇಕವಾಗಿ ಬಳಸಿರುವ ಅಥವಾ ಬಳಸಲು ಉದ್ದೇಶಿಸಿರುವ ಅಥವಾ ವಿನಾಯಿತಿಪೂರೈಕೆಗಳಿಗಾಗಿ ಪ್ರತ್ಯೇಕವಾಗಿ ಬಳಸಿರುವ ಅಥವಾ ಬಳಸಲು ಉದ್ದೇಶಿಸಿರುವ ಬಂಡವಾಳ ಸರಕುಗಳಿಗೆ ಸಂಬಂಧಿಸಿದ ಹೂಡುವಳಿ ತೆರಿಗೆಯನ್ನು **ನಮೂನೆ ಜಿಎಸ್‌ಟಿಆರ್–2**ರಲ್ಲಿ ತೋರಿಸತಕ್ಕದ್ದು ಮತ್ತು ಆತನ ವಿದ್ಯುನ್ಮಾನ ಜಮೆ ಖಾತೆಗೆ ಜಮೆಗೊಳಿಸತಕ್ಕದ್ದಲ್ಲ.

(ಬಿ) ವಿನಾಯಿತಿ ಪೂರೈಕೆಗಳನ್ನು ಹೊರತುಪಡಿಸಿದ ಆದರೆ ಶೂನ್ಯ–ದರದ ಪೂರೈಕೆಗಳನ್ನೊಳಗೊಂಡಂತ ಪೂರೈಕೆಗಳನ್ನು ಮಾಡಲು ಪ್ರತ್ಯೇಕವಾಗಿ ಬಳಸಿರುವ ಅಥವಾ ಬಳಸಲು ಉದ್ದೇಶಿಸಿರುವ ಬಂಡವಾಳ ಸರಕುಗಳಿಗೆ ಸಂಬಂಧಿಸಿದ ಹೂಡುವಳಿ ತೆರಿಗೆಯನ್ನು **ನಮೂನೆ ಜಿಎಸ್‌ಟಿಆರ್–2**ರಲ್ಲಿ ತೋರಿಸತಕ್ಕದ್ದು ಮತ್ತು ವಿದ್ಯುನ್ಮಾನ ಜಮೆ ಖಾತೆಗೆ ಜಮೆಗೊಳಿಸತಕ್ಕದ್ದು.

(ಸಿ) ಖಂಡ (ಎ) ಮತ್ತು (ಬಿ)ಗಳಲ್ಲಿ ಒಳಗೊಳ್ಳದ 'ಎ' ಎಂದು ಸೂಚಿತವಾದ ಬಂಡವಾಳ ಸರಕುಗಳ ಸಂಬಂಧಿಸಿದಂತೆ ಹೂಡುವಳಿ ತೆರಿಗೆ ಮೊತ್ತವನ್ನು, ವಿದ್ಯುನ್ಮಾನ ಜಮಾ ಖಾತೆಗೆ ಜಮೆಗೊಳಿಸತಕ್ಕದ್ದು ಮತ್ತು ಅಂಥ ಸರಕುಗಳ ಉಪಯುಕ್ತ ಬಳಕೆಯ ಅವಧಿಯನ್ನು, ಅಂಥ ಸರಕುಗಳ ಬೆಲೆಪಟ್ಟಿಯ ದಿನಾಂಕದಿಂದ 5 ವರ್ಷಗಳೆಂದು ತೆಗೆದುಕೊಳ್ಳತಕ್ಕದ್ದು:

ಪರಂತು, ಯಾವುದೇ ಬಂಡವಾಳ ಸರಕುಗಳು ಮೊದಲು ಖಂಡ(ಎ) ಅಡಿಯೊಳಗೊಂಡಿದ್ದು, ತರುವಾಯವಾಗಿ ಈ ಖಂಡದ ಅಡಿಯಲ್ಲಿ ಒಳಗೊಂಡಿದ್ದಲ್ಲಿ, ಪ್ರತಿಯೊಂದು ತ್ರೈಮಾಸಿಕ ಅಥವಾ ಅದರ ಭಾಗಕ್ಕೆ ಶೇಕಡ ಐದರ ದರದಲ್ಲಿ ಹೂಡುವಳಿ ತೆರಿಗೆಯನ್ನು ಇಳಿಕೆ ಮಾಡುವ ಮೂಲಕ 'ಎ'ಯ ಮೌಲ್ಯವನ್ನು ಪಡೆಯತಕ್ಕದ್ದು ಮತ್ತು'ಎ'ಯ ಮೊತ್ತವನ್ನು ವಿದ್ಯುನ್ಮಾನ ಜಮೆ ಖಾತೆಗೆ ಜಮೆಗೊಳಿಸತಕ್ಕದ್ದು;

ವಿವರಣೆ.– ಖಂಡ (ಎ)ಯ ಅಡಿಯಲ್ಲಿ ತನ್ನ ಸ್ವೀಕೃತಿಯ ಮೇಲೆ ಘೋಷಿಸಿಸಲಾದ ಬಂಡವಾಳ ಸರಕುಗಳ ಒಂದು ಬಾಬ್ತು, ಈ ಖಂಡದ ಅಡಿಯಲ್ಲಿ ತರುವಾಯವಾಗಿ ಒಳಗೊಂಡಿದ್ದರೆ, ಪ್ರಕರಣ 18ರ ಉಪಪ್ರಕರಣ (4)ರ ಉಪಬಂಧಗಳು ಅನ್ವಯಿಸತಕ್ಕದ್ದಲ್ಲ.

(ಡಿ) ಖಂಡ (ಸಿ)ಅಡಿಯಲ್ಲಿ 'ಖಿಛಿ' ಎಂದು ಸೂಚಿಸಿ, ವಿದ್ಯುನ್ಮಾನ ಜಮಾ ಖಾತೆಗೆ ಜಮೆಗೊಳಿಸಲಾದ 'ಎ'ಯ ಮೊತ್ತದ ಜಮಾವಣೆಯು, ಒಂದು ತೆರಿಗೆ ಅವಧಿಗಾಗಿ ಬಂಡವಾಳ ಸರಕುಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ಜಮೆಯಾಗಿರತಕ್ಕದ್ದು.

ಪರಂತು, ಯಾವುದೇ ಬಂಡವಾಳ ಸರಕುಗಳು ಮೊದಲು ಖಂಡ(ಎ)ಅಡಿಯಲ್ಲಿ ವ್ಯಾಪ್ತವಾಗಿದ್ದು, ತರುವಾಯವಾಗಿ ಖಂಡ (ಸಿ) ಯ ಅಡಿಯಲ್ಲಿ ವ್ಯಾಪ್ತವಾಗಿದ್ದಲ್ಲಿ, ಪ್ರತಿಯೊಂದು ತ್ರೈಮಾಸಿಕ ಅಥವಾ ಅದರ ಭಾಗಕ್ಕೆ ಶೇಕಡ ಐದರ ದರದಲ್ಲಿ ಹೂಡುವಳಿ ತೆರಿಗೆಯನ್ನು ಇಳಿಕೆ ಮಾಡುವ ಮೂಲಕ ಪಡೆಯಲಾದ 'ಎ'ಯ ಮೌಲ್ಯವನ್ನು 'ಖಿಛಿ'ಯ ಸಮಗ್ರ ಮೌಲ್ಯಕ್ಕೆ ಸೇರಿಸತಕ್ಕದ್ದು.

(ಇ) ಅವುಗಳ ಉಪಯುಕ್ತ ಬಳಕೆ ಅವಧಿಯಲ್ಲಿ, ಸಾಮಾನ್ಯ ಬಂಡವಾಳ ಸರಕುಗಳ ಮೇಲಿನ ಒಂದು ತೆರಿಗೆ ಅವಧಿಗೆ ಎಂದು ಹೇಳಬಹುದಾದ ಹೂಡುವಳಿ ತೆರಿಗೆ ಮೊತ್ತವು 'ಖಿಟ' ಎಂದು ಸೂಚಿತವಾಗಲಿ ಮತ್ತು ಅದನ್ನು ಕೆಳಗಿನಂತೆ ಲೆಕ್ಕಮಾಡುವುದು–

Tm= Tc ÷ 60

(ಎಫ್) ಒಂದು ತೆರಿಗೆ ಅವಧಿಯ ಆರಂಭದಲ್ಲಿ, ಅವುಗಳ ಉಪಯುಕ್ತ ಬಳಕೆ ಅವಧಿ ಉಳಿದಿರುವ ಎಲ್ಲಾ ಸಾಮಾನ್ಯ ಬಂಡವಾಳ ಸರಕಗಳ ಮೇಲಿನ ಹೂಡುವಳಿ ತೆರಿಗೆ ಮೊತ್ತವು 'ಖಿಡಿ'ಎಂದು ಸೂಚಿತವಾಗಲಿ ಮತ್ತು ಅಂಥ ಬಂಡವಾಳ ಸರಕುಗಳಗಾಗಿ 'ಖಿಟ' ನ ಜಮಾವಣೆಯಾಗಿರತಕ್ಕದ್ದು;

(ಜಿ) ವಿನಾಯಿತಿ ಪೂರೈಕೆಗಳಿಗೆ ಸಂಬಂಧಿಸಿದ್ದು ಎಂದು ಹೇಳಬಹುದಾದ ಸಾಮಾನ್ಯ ಜಮೆಯ ಮೊತ್ತವು 'ಖಿಜ', ಎಂದು ಸೂಚಿತವಾಗಲಿ ಮತ್ತು ಅದನ್ನು ಕೆಳಗಿನಂತೆ ಲೆಕ್ಕಮಾಡುವುದು–

Te= (E÷ F) x Tr

ಇದರಲ್ಲಿ,

'E' ಯು ತೆರಿಗೆ ಅವಧಿಯಲ್ಲಿ ಮಾಡಲಾದ ವಿನಾಯಿತಿ ಪೂರೈಕೆಗಳ ಸಮಗ್ರ ಮೌಲ್ಯವಾಗಿರುತ್ತದೆ, ಮತ್ತು

'F' ಯು ತೆರಿಗೆ ಅವಧಿಯಲ್ಲಿ ನೋಂದಾಯಿತ ವ್ಯಕ್ತಿಯ ಒಟ್ಟು ವಹಿವಾಟುವಾಗಿರುತ್ತದೆ:

ಪರಂತು ನೋಂದಾಯಿತ ವ್ಯಕ್ತಿಯು ಸದರಿ ತೆರಿಗೆ ಅವಧಿಯಲ್ಲಿ ಯಾವುದೇ ವಹಿವಾಟುನ್ನು ಹೊಂದಿರದಿದ್ದಲ್ಲಿ ಅಥವಾ ಮೇಲೆ ಹೇಳಲಾದ ಮಾಹಿತಿಯು ಲಭ್ಯವಿರದಿದ್ದಲ್ಲಿ, E/F ದ ಮೌಲ್ಯವನ್ನು, ಸದರಿ E/Fನ ಮೌಲ್ಯವನ್ನು ಲೆಕ್ಕಹಾಕಬೇಕಾದ ತಿಂಗಳಿನ ಹಿಂದಿನ, ಅಂಥ ವಹಿವಾಟಿನ ವಿವರಗಳು ಲಭ್ಯವಿರುವ, ಕೊನೆಯ ತೆರಿಗೆ ಅವಧಿಯ **"E"** ಮತ್ತು **"F"** ದ ಮೌಲ್ಯಗಳನ್ನು ತೆಗೆದುಕೊಂಡು ಲೆಕ್ಕ ಹಾಕತಕ್ಕದ್ದು;

ವಿವರಣೆ: ಈ ಖಂಡದ ಉದ್ದೇಶಗಳಿಗಾಗಿ, ವಿನಾಯಿತಿ ಪೊರೈಕೆಗಳ ಸಮಗ್ರ ಮೌಲ್ಯ ಮತ್ತು ಒಟ್ಟು ವಹಿವಾಟು, ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ Iರ ನಮೂದು 84ರ ಅಡಿಯಲ್ಲಿ ಮತ್ತು ಸದರಿ ಅನುಸೂಚಿಯ ಪಟ್ಟಿ II ರ ನಮೂದು 51 ಮತ್ತು 54 ರ ಅಡಿಯಲ್ಲಿ ವಿಧಿಸಲಾದ ಯಾವುದೇ ಸುಂಕ ಅಥವಾ ತೆರಿಗೆಯ ಮೊತ್ತವನ್ನು ಹೊರತುಪಡಿಸತಕ್ಕದ್ದು.

(ಹೆಚ್) Te ಮೊತ್ತವನ್ನು ಅನ್ವಯವಾಗುವ ಬಡ್ಡಿಯೊಂದಿಗೆ, ಸಂಬಂಧಿತ ಬಂಡವಾಳ ಸರಕುಗಳ ಉಪಯುಕ್ತ ಬಳಕೆ ಅವಧಿಯಪ್ರತಿಯೊಂದು ತೆರಿಗೆಯ ಅವಧಿಯಲ್ಲಿ ಅಂಥ ಜಮೆಯ ಕ್ಲೇಮನ್ನು ಮಾಡುವ ವ್ಯಕ್ತಿಯ ಹುಟ್ಟುವಳಿ ತೆರಿಗೆ ಬಾಧ್ಯತೆಗೆ ಸೇರಿಸತಕ್ಕದ್ದು.

(2) Te ಮೊತ್ತವನ್ನು ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಕೇಂದ್ರಾಡಳಿತ ಪ್ರದೇಶ ತೆರಿಗೆ ಮತ್ತು ಏಕೀಕೃತ ತೆರಿಗೆಗಾಗಿ ಪ್ರತ್ಯೇಕವಾಗಿ ಲೆಕ್ಕಹಾಕತಕ್ಕದ್ದು.

44. ವಿಶೇಷ ಸನ್ನಿವೇಶಗಳ ಅಡಿಯಲ್ಲಿ ಜಮೆಯನ್ನು ಹಿಮ್ಮುಖಗೊಳಿಸುವ ವಿಧಾನ.–(1) ಪ್ರಕರಣ 18ರ ಉಪಪ್ರಕರಣ (4)ರ ಅಥವಾ ಪ್ರಕರಣ 29ರ ಉಪಪ್ರಕರಣ (5)ರ ಉದ್ದೇಶಗಳಿಗಾಗಿ, ದಾಸ್ತಾನಿನಲ್ಲಿರುವ ಹೂಡುವಳಿಗಳು ಮತ್ತು ದಾಸ್ತಾನಿನಲ್ಲಿರುವ ಅರೆ–ಸಿದ್ಧರೂಪದ ಅಥವಾ ಸಿದ್ಧರೂಪದ ಸರಕುಗಳಲ್ಲಿ ಒಳಗೊಂಡಿರುವ ಹೂಡುವಳಿಗಳ ಮತ್ತು ದಾಸ್ತಾನಿನಲ್ಲಿರುವ ಬಂಡವಾಳ ಸರಕುಗಳಿಗೆ ಸಂಬಂಧಿಸಿದ ಹೂಡುವಳಿ ತೆರಿಗೆ ಜಮೆಯ ಮೊತ್ತವನ್ನು ಕೆಳಕಂಡ ವಿಧಾನದಲ್ಲಿ ನಿರ್ಧರಿಸತಕ್ಕದ್ದು, ಅಂದರೆ,–

(ಎ) ದಾಸ್ತಾನಿನಲ್ಲಿರುವ ಹೂಡುವಳಿಗಳು ಮತ್ತು ದಾಸ್ತಾನಿನಲ್ಲಿರುವ ಅರೆ–ಸಿದ್ಧರೂಪದ ಅಥವಾ ಸಿದ್ಧರೂಪದ

ಸರಕುಗಳಲ್ಲಿ ಒಳಗೊಂಡಿರುವ ಹೂಡುವಳಿಗಳಿಗಾಗಿ, ಹೂಡುವಳಿ ತೆರಿಗೆ ಜಮೆಯನ್ನು, ನೋಂದಾಯಿತ ತೆರಿಗೆದಾಯಕ ವ್ಯಕ್ತಿಯಿಂದ ಅಂಥ ಹೂಡುವಳಿಗಳ ಮೆಲೆ ಜಮೆಯನ್ನು ಉಪಯೋಗಿಸಲಾಗಿರುವ ಸಂಬಂಧಿಸಿದ ಬೆಲೆಪಟ್ಟಿಯ ಆಧಾರದ ಮೇಲಿನ ಪ್ರಮಾಣಕ್ಕನುಗುಣವಾಗಿ ಲೆಕ್ಕಹಾಕತಕ್ಕದ್ದು;

(ಬಿ) ದಾಸ್ತಾನಿನಲ್ಲಿರುವ ಬಂಡವಾಳ ಸರಕುಗಳಿಗೆ, ತಿಂಗಳಿನಲ್ಲಿ ಉಳಿದಿರುವ ಉಪಯುಕ್ತ ಬಳಕೆಯ ಅವಧಿಯಲ್ಲಿ ಒಳಗೊಂಡಿರುವ ಹೂಡುವಳಿ ತೆರಿಗೆ ಜಮೆಯನ್ನು ಉಪಯುಕ್ತ ಬಳಕೆಯ ಅವಧಿಯನ್ನು ಐದು ವರ್ಷಗಳನ್ನಾಗಿ ಪರಿಗಣಿಸಿದ ಅನುಪಾತದ ಆಧಾರದಲ್ಲಿ ಲೆಕ್ಕಹಾಕತಕ್ಕದ್ದು.

ದೃಷ್ಟಾಂತ

ಬಂಡವಾಳ ಸರಕುಗಳು 4 ವರ್ಷ, 6 ತಿಂಗಳು ಮತ್ತು 15ದಿನಗಳವರೆಗೆ ಬಳಕೆಯಲ್ಲಿರಲಾಗಿತ್ತು.
ತಿಂಗಳುಗಳಲ್ಲಿ ಉಳಿದಿರುವ ಬಳಕೆದಾಯಕ ಜೀವಿತಾವಧಿ= 5 ತಿಂಗಳು ತಿಂಗಳಿನ ಭಾಗವನ್ನು ಕಡೆಗಣಿಸಿ
ಅಂಥ ಬಂಡವಾಳ ಸರಕುಗಳ ಮೇಲೆ ತೆಗೆದುಕೊಂಡ ಹೂಡುವಳಿ ತೆರಿಗೆ ಜಮೆ=ಸಿ
ಉಳಿದಿರುವ ಬಳಕೆದಾಯಕ ಜೀವಿತಾವಧಿಗೆ ಎಂದು ಹೇಳಬಹುದಾದ ಹೂಡುವಳಿ ತೆರಿಗೆ ಜಮೆ= 5/60 ರಿಂದ ಸಿ ಯನ್ನು ಗುಣಿಸುವುದು

(2) ಉಪನಿಯಮ (1)ರಲ್ಲಿ ನಿರ್ದಿಷ್ಟಪಡಿಸಿರುವ ಮೊತ್ತವನ್ನು ಏಕೀಕೃತ ತೆರಿಗೆ ಮತ್ತು ಕೇಂದ್ರ ತೆರಿಗೆಯ ಹೂಡುವಳಿ ತೆರಿಗೆ ಜಮೆಗಾಗಿ ಪ್ರತ್ಯೇಕವಾಗಿ ನಿರ್ಧರಿಸತಕ್ಕದ್ದು.

(3) ದಾಸ್ತಾನಿನಲ್ಲಿರುವ ಹೂಡುವಳಿಗಳಿಗೆ ಸಂಬಂಧಿಸಿದ ಬೆಲೆಪಟ್ಟಿಗಳು ಲಭ್ಯವಿರದಿದ್ದಲ್ಲಿ, ನೋಂದಾಯಿತ ವ್ಯಕ್ತಿಯು ಉಪ–ನಿಯಮ (1)ರ ಅಡಿಯಲ್ಲಿನ ಮೊತ್ತವನ್ನು, ಪ್ರಕರಣ 18ರ ಉಪಪ್ರಕರಣ (4)ರ ಅಥವಾ ಸಂದರ್ಭಾನುಸಾರವಾಗಿ ಪ್ರಕರಣ 29ರ ಉಪಪ್ರಕರಣ (5)ರಲ್ಲಿ ನಿರ್ದಿಷ್ಟಪಡಿಸಿದ ಘಟನೆಗಳು ಸಂಭವಿಸಿದ ಜಾರಿ ದಿನಾಂಕದಲ್ಲಿನ ಪ್ರಚಲಿತ ಮಾರುಕಟ್ಟೆಯ ಬೆಲೆಯ ಆಧಾರದ ಮೇಲೆ ಅಂದಾಜು ಮಾಡತಕ್ಕದ್ದು.

(4) ಉಪನಿಯಮ (1)ರ ಅಡಿಯಲ್ಲಿ ನಿರ್ಧರಿಸಲಾದ ಮೊತ್ತವು ನೊಂದಾಯಿತ ವ್ಯಕ್ತಿಯ ಹುಟ್ಟುವಳಿ ತೆರಿಗೆ ಬಾಧ್ಯತೆಯ ಭಾಗವಾಗತಕ್ಕದ್ದು ಮತ್ತು ಮೊತ್ತದ ವಿವರಗಳನ್ನು, ಅಂಥ ಮೊತ್ತವು ಪ್ರಕರಣ 18ರ ಉಪಪ್ರಕರಣ (4)ರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಘಟನೆಗೆ ಸಂಬಂಧಿಸಿದಲ್ಲಿ **ನಮೂನೆ ಜಿಎಸ್‌ಟಿ ಐಟಿಸಿ–03**ರಲ್ಲಿ ಮತ್ತು ನೋಂದಣಿಯ ರದ್ದತಿಗೆ ಸಂಬಂಧಿಸಿದಲ್ಲಿ **ನಮೂನೆ ಜಿಎಸ್‌ಟಿ ಐಟಿಸಿ–10**ರಲ್ಲಿ ಒದಗಿಸತಕ್ಕದ್ದು.

(5) ಉಪನಿಯಮ (3)ರ ಅನುಸಾರವಾಗಿ ಒದಗಿಸಿದ ವಿವರಗಳನ್ನು, ಒಬ್ಬ ಕಾರ್ಯನಿರತ ಚಾರ್ಟರ್ಡ್ ಅಕೌಂಟೆಂಟ್ ಅಥವಾ ಕಾಸ್ಟ್ ಅಕೌಂಟೆಂಟ್‌ನಿಂದ ಪ್ರಮಾಣೀಕರಿಸಿರತಕ್ಕದ್ದು.

(6) ಬಂಡವಾಳ ಸರಕುಗಳಿಗೆ ಸಂಬಂಧಿಸಿದ ಪ್ರಕರಣ 18ರ ಉಪಪ್ರಕರಣ (6)ರ ಉದ್ದೇಶಗಳಿಗಾಗಿ ಹೂಡುವಳಿ ತೆರಿಗೆ ಜಮೆಯ ಮೊತ್ತವನ್ನು ಉಪನಿಯಮ (1)ರ ಖಂಡ (ಬಿ)ಯಲ್ಲಿ ನಿರ್ದಿಷ್ಟಪಡಿಸಿರುವ ಅದೇ ವಿಧಾನದಲ್ಲಿ ನಿರ್ಧರಿಸತಕ್ಕದ್ದು ಮತ್ತು ಮೊತ್ತು ಐಜಿಎಸ್‌ಟಿ ಮತ್ತು ಸಿಜಿಎಸ್‌ಟಿಯ ಹೂಡುವಳಿ ತೆರಿಗೆಯ ಜಮೆಗಾಗಿ ಪ್ರತ್ಯೇಕವಾಗಿ ನಿರ್ಧರಿಸತಕ್ಕದ್ದು:

ಪರಂತು, ಹಾಗೆ ನಿರ್ಧರಿಸಲಾದ ಮೊತ್ತವು ಬಂಡವಾಳ ಸರಕುಗಳ ವ್ಯವಹಾರದ ಮೌಲ್ಯದ ಮೇಲೆ ನಿರ್ಧರಿಸಿದ ತೆರಿಗೆಗಿಂತ ಹೆಚ್ಚಿದ್ದಲ್ಲಿ, ನಿರ್ಧರಿಸಲಾದ ಮೊತ್ತ ಹುಟ್ಟುವಳಿ ತೆರಿಗೆ ಬಾಧ್ಯತೆಯ ಭಾಗವಾಗಿರತಕ್ಕದ್ದು ಮತ್ತು ಅದನ್ನು **ನಮೂನೆ ಜಿಎಸ್‌ಟಿಆರ್–1**ರಲ್ಲಿ ಒದಗಿಸತಕ್ಕದ್ದು.

45. ಮಜೂರಿ ಕೆಲಸಗಾರನಿಗೆ ಕಳುಹಿಸಿದ ಹೂಡುವಳಿಗಳು ಮತ್ತು ಬಂಡವಾಳ ಸರಕುಗಳಿಗೆ ಸಂಬಂಧಿಸಿದಂತೆ ಷರತ್ತುಗಳು ಮತ್ತು ನಿರ್ಬಂಧಗಳು.–(1) ಹೂಡುವಳಿಗಳು, ಅರೆ–ಸಿದ್ಧಪಡಿಸಿದ ಸರಕುಗಳು ಅಥವಾ ಬಂಡವಾಳ ಸರಕುಗಳನ್ನು, ಅಂಥ

ಸರಕುಗಳನ್ನು ಮಜೂರಿ ಕೆಲಸಗಾರನಿಗೆ ನೇರವಾಗಿ ಕಳುಹಿಸುವುದನ್ನು ಒಳಗೊಂಡಂತೆ, ಪ್ರಧಾನ ಕರ್ತನು ನೀಡಿದ ಒಂದು ಚಲನ್‌ನಿಂದ ವ್ಯಾಪ್ತಗೊಂಡಿರುವುದರ ಅಡಿಯಲ್ಲಿ ಮಜೂರಿ ಕೆಲಸಗಾರನಿಗೆ ಕಳುಹಿಸತಕ್ಕದ್ದು.

(2) ಪ್ರಧಾನಕರ್ತನಿಂದ ಮಜೂರಿ ಕೆಲಸಗಾರನಿಗೆ ನೀಡಲಾದ ಚಲನ್ ನಿಯಮ 55ರಲ್ಲಿ ನಿರ್ದಿಷ್ಟಪಡಿಸಿದ ವಿವರಗಳನ್ನು ಒಳಗೊಂಡಿರತಕ್ಕದ್ದು.

(3) ತ್ರೈಮಾಸಿಕದ ಸಮಯದಲ್ಲಿ ಮಜೂರಿ ಕೆಲಸಗಾರನಿಂದ ರವಾನಿಸಲಾದ ಅಥವಾ ಮಜೂರಿ ಕೆಲಸಗಾರನಿಂದ ಸ್ವೀಕರಿಸಿದ ಅಥವಾ ಮಜೂರಿ ಕೆಲಸಗಾರನಿಂದ ಮತ್ತೊಬ್ಬನಿಗೆ ಕಳುಹಿಸಲಾದ ಸರಕುಗಳಿಗೆ ಸಂಬಂಧಿಸಿದಂತೆ ಚಲನ್‌ನ ವಿವರಗಳನ್ನು, ಸದರಿ ತ್ರೈಮಾಸಿಕದ ತದನಂತರದ ತಿಂಗಳಿನ ಇಪ್ಪತ್ತೈದನೇ ದಿನದಂದು ಅಥವಾ ಮುಂಚಿತವಾಗಿ ಆ ಅವಧಿಗೆ ಒದಗಿಸಿದ **ನಮೂನೆ ಜಿಎಸ್‌ಟಿ ಐಟಿಸಿ–04**ರಲ್ಲಿ ಸೇರಿಸತಕ್ಕದ್ದು.

(4) ಹೂಡುವಳಿಗಳು ಅಥವಾ ಬಂಡವಾಳ ಸರಕುಗಳು ಪ್ರಕರಣ 143ರಲ್ಲಿ ಗೊತ್ತುಪಡಿಸಿದ ಸಮಯದ ಒಳಗಾಗಿ ಪ್ರಧಾನಕರ್ತನಿಗೆ ಹಿಂದಿರುಗದಿದ್ದಲ್ಲಿ, ಸದರಿ ಹೂಡುವಳಿಗಳು ಅಥವಾ ಬಂಡವಾಳ ಸರಕುಗಳು ಹೊರಕಳುಹಿಸಿದ ದಿನದಂದೇ, ಅಂಥ ಹೂಡುವಳಿಗಳು ಅಥವಾ ಬಂಡವಾಳ ಸರಕುಗಳು, ಪ್ರಧಾನ ಕರ್ತನಿಂದ ಮಜೂರಿ ಕೆಲಸಗಾರನಿಗೆ ಪೂರೈಕೆ ಮಾಡಲಾಗಿವೆ ಎಂದು ಪರಿಭಾವಿತವಾಗತಕ್ಕದ್ದು ಮತ್ತು ಸದರಿ ಪೂರೈಕೆಯನ್ನು ನಮೂನೆ ಜಿಎಸ್‌ಟಿಆರ್–1ರಲ್ಲಿ ಘೋಷಿಸತಕ್ಕದ್ದು ಮತ್ತು ಪ್ರಧಾನಕರ್ತನು ತೆರಿಗೆಯನ್ನು ಅನ್ವಯವಾಗುವ ಬಡ್ಡಿಯೊಂದಿಗೆ ಸಂದಾಯ ಮಾಡುವುದಕ್ಕೆ ಬಾಧ್ಯನಿರತಕ್ಕದ್ದು.

ವಿವರಣೆ.– ಈ ಅಧ್ಯಾಯದ ಉದ್ದೇಶಗಳಿಗಾಗಿ,–

(1) **"ಬಂಡವಾಳ ಸರಕುಗಳು"** ಎಂಬ ಪದಾವಳಿಯು ಪ್ರಕರಣ 17ರ ವಿವರಣೆಯಲ್ಲಿ ಪರಿಭಾಷಿಸಿದ **"ಸ್ಥಾವರ ಮತ್ತು ಯಂತ್ರೋಪಕರಣ"**ವನ್ನು ಒಳಗೊಂಡಿರತಕ್ಕದ್ದು;

(2) ಪ್ರಕರಣ 17ರ ಉಪಪ್ರಕರಣ (3)ರಲ್ಲಿ ಉಲ್ಲೇಖಿಸಲಾದ ಒಂದು ವಿನಾಯಿತಿ ಪೂರೈಕೆಯ ಮೌಲ್ಯವನ್ನು ನಿರ್ಧರಿಸುವುದಕ್ಕಾಗಿ–

(ಎ) ಭೂಮಿ ಮತ್ತು ಕಟ್ಟಡದ ಮೌಲ್ಯವನ್ನಾಗಿ, ಮುದ್ರಾಂಕ ಸುಂಕವನ್ನು ಸಂದಾಯ ಮಾಡುವ ಉದ್ದೇಶಕ್ಕಾಗಿ ಅಳವಡಿಸಿಕೊಂಡಿರುವುದನ್ನೇ ತೆಗೆದುಕೊಳ್ಳತಕ್ಕದ್ದು; ಮತ್ತು

(ಬಿ) ಭದ್ರತಾ ಮೌಲ್ಯವನ್ನಾಗಿ ಅಂಥ ಭದ್ರತೆಯ ಮಾರಾಟ ಮೌಲ್ಯದ ಶೇಕಡ ಒಂದರಷ್ಟನ್ನು ತೆಗೆದುಕೊಳ್ಳತಕ್ಕದ್ದು.

ಅಧ್ಯಾಯ VI

ತೆರಿಗೆ ಬೆಲೆ ಪಟ್ಟಿ, ಜಮೆ ಮತ್ತು ಖರ್ಚು ಚೀಟಿಗಳು

46. ತೆರಿಗೆ ಬೆಲೆ ಪಟ್ಟಿ.– ನಿಯಮ 54ಕ್ಕೆ ಒಳಪಟ್ಟು, ಪ್ರಕರಣ–31ರ ಅಡಿಯಲ್ಲಿ ಉಲ್ಲೇಖಿಸಲಾದ ಒಂದು ತೆರಿಗೆ ಬೆಲೆ ಪಟ್ಟಿಯನ್ನು, ನೋಂದಾಯಿತ ವ್ಯಕ್ತಿಯುಕೆಳಕಂಡ ವಿವರಗಳನ್ನು ಒಳಗೊಂಡಂತೆ ನೀಡತಕ್ಕದ್ದು, ಅಂದರೆ,–

(ಎ) ಪೂರೈಕೆದಾರನ ಹೆಸರು, ವಿಳಾಸ ಮತ್ತು ಸರಕು ಮತ್ತು ಸೇವೆಗಳ ತೆರಿಗೆಯ ಗುರುತಿನ ಸಂಖ್ಯೆ;

(ಬಿ) ಒಂದು ಹಣಕಾಸು ವರ್ಷಕ್ಕಾಗಿ ವಿಶಿಷ್ಟವಾದ, ವರ್ಣಮಾಲೆಗಳು ಅಥವಾ ಸಂಖ್ಯೆಗಳು ಅಥವಾ ವಿಶೇಷ ಅಕ್ಷರಗಳು– ಹೈಫೆನ್ ಅಥವಾ ಡ್ಯಾಶ್ ಮತ್ತು ಅನುಕ್ರಮವಾಗಿ, ಸ್ಲ್ಯಾಶ್ **"–"** ಮತ್ತು **"/"** ಮತ್ತು ಅವುಗಳ ಯಾವುದೇ ಸಂಯೋಜನೆಯನ್ನು ಒಳಗೊಂಡಿರುವ, ಒಂದು ಅಥವಾ ಬಹು ಸರಣಿಗಳಲ್ಲಿರುವ, ಹದಿನಾರು

ಅಕ್ಷರಗಳಿಗೆ ಮೀರದಿರುವ ಒಂದಾದ ಮೇಲೊಂದು ಬರುವ ಕ್ರಮ ಸಂಖ್ಯೆ;

(ಸಿ) ಅದನ್ನು ನೀಡಿದ ದಿನಾಂಕ;

(ಡಿ) ನೋಂದಾಯಿತನಾಗಿದ್ದರೆ, ಸ್ವೀಕರಿಸುವವನ ಹೆಸರು, ವಿಳಾಸ ಮತ್ತು ಸರಕು ಮತ್ತು ಸೇವೆಗಳ ತೆರಿಗೆಯ ಗುರುತಿನ ಸಂಖ್ಯೆಅಥವಾ ವಿಶಿಷ್ಟ ಗುರುತಿನ ಸಂಖ್ಯೆ;

(ಇ) ಅಂಥ ಸ್ವೀಕರಿಸುವನು ಅನೋಂದಾಯಿತನಾಗಿದ್ದರೆ ಮತ್ತು ತೆರಿಗೆದಾಯಕ ಪೂರೈಕೆಯ ಮೌಲ್ಯವು ಐವತ್ತು ಸಾವಿರ ರೂಪಾಯಿಗಳು ಅಥವಾಅದಕ್ಕಿಂತ ಹೆಚ್ಚಾಗಿದ್ದಲ್ಲಿ, ಸ್ವೀಕರಿಸುವವನ ಹೆಸರು ಮತ್ತು ವಿಳಾಸ ಮತ್ತು ರಾಜ್ಯದ ಹೆಸರು ಮತ್ತು ಅದರ ಕೋಡ್‌ನೊಂದಿಗೆ, ಬಟವಾಡೆಯ ವಿಳಾಸ;

(ಎಫ್) ಅಂಥ ಸ್ವೀಕರಿಸುವನು ಅನೋಂದಾಯಿತನಾಗಿದ್ದರೆ ಮತ್ತು ತೆರಿಗೆದಾಯಕ ಪೂರೈಕೆಯ ಮೌಲ್ಯವು ಐವತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿದ್ದಲ್ಲಿ ಸ್ವೀಕರಿಸುವವನ ಹೆಸರು ಮತ್ತು ವಿಳಾಸ ಮತ್ತು ಹಾಗೂ ರಾಜ್ಯದ ಹೆಸರು ಮತ್ತು ಅದರ ಕೋಡ್‌ನೊಂದಿಗೆ, ಬಟವಾಡೆಯ ವಿಳಾಸಮತ್ತು ಸ್ವೀಕರಿಸುವವನು ಕೋರಿದ ಅಂಥ ವಿವರಗಳನ್ನು ಬೆಲೆಪಟ್ಟಿಯಲ್ಲಿ ದಾಖಲು ಮಾಡುವುದು;

(ಜಿ) ಸರಕು ಅಥವಾ ಸೇವೆಗಳಿಗಾಗಿ ಹಾರ್ಮೊನೈಸಡ್ ಸಿಸ್ಟಂ ಆಫ್ ನೋಮಿನಕ್ಲೇಚರ್ ಕೋಡ್;

(ಹೆಚ್) ಸರಕು ಮತ್ತು ಸೇವೆಗಳ ವಿವರ;

(ಐ) ಸರಕುಗಳ ಸಂದರ್ಭದಲ್ಲಿ ಪರಿಮಾಣ ಮತ್ತು ಅವುಗಳ ಘಟಕ ಅಥವಾ ವಿಶಿಷ್ಟ ಪರಿಮಾಣ ಕೋಡ್;

(ಜೆ) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಯ ಒಟ್ಟು ಮೌಲ್ಯ;

(ಕೆ) ಸೋಡಿ ಅಥವಾ ಉಪಶಮನ, ಯಾವುದಾದರೂ ಇದ್ದರೆ, ಅದನ್ನು ಗಣನೆಗೆ ತೆಗೆದುಕೊಂಡು ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಯ ತೆರಿಗೆದಾಯಕ ಮೌಲ್ಯ;

(ಎಲ್) ತೆರಿಗೆ ದರ (ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಏಕೀಕೃತ ತೆರಿಗೆ, ಕೇಂದ್ರಾಡಳಿತ ಪ್ರದೇಶ ತೆರಿಗೆ ಅಥವಾ ಉಪಕರ);

(ಎಂ) ತೆರಿಗೆದಾಯಕ ಸರಕು ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ ವಿಧಿಸಲಾದ ತೆರಿಗೆಯ ಮೊತ್ತ(ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಏಕೀಕೃತ ತೆರಿಗೆ, ಕೇಂದ್ರಾಡಳಿತ ಪ್ರದೇಶ ತೆರಿಗೆ ಅಥವಾ ಸೆಸ್);

(ಎನ್) ಒಂದು ಪೂರೈಕೆ ಅಂತರ ರಾಜ್ಯ ವ್ಯಾಪಾರ ಅಥವಾ ವಾಣಿಜ್ಯಕ್ಕೆ ಸಂಬಂಧಿಸಿದ್ದಾದರೆ ರಾಜ್ಯದ ಹೆಸರಿನ ಜೊತೆಗೆ ಪೂರೈಕೆಯ ಸ್ಥಳ;

(ಒ) ಬಟವಾಡೆ ವಿಳಾಸ, ಅದು ಪೂರೈಕೆಯ ಸ್ಥಳದಿಂದ ಬೇರೆಯಾಗಿದ್ದರೆ;

(ಪಿ) ತೆರಿಗೆಯನ್ನು ಹಿಮ್ಮುಖ ವಿಧಿಸುವಿಕೆಯ ಆಧಾರದಲ್ಲಿ ಸಂದಾಯ ಮಾಡುವುದಿದ್ದರೆ ಅದು; ಮತ್ತು

(ಕ್ಯೂ) ಪೂರೈಕೆದಾರನ ಅಥವಾ ಆತನ ಪ್ರಾಧಿಕೃತ ಪ್ರತಿನಿಧಿಯ ಸಹಿ ಅಥವಾ ಡಿಜಿಟಲ್ ಸಹಿ:

ಪರಂತು, ಆಯುಕ್ತರು, ಕೌನ್ಸಿಲ್‌ನ ಶಿಫಾರಸ್ಸುಗಳ ಅನ್ವಯ ಅಧಿಸೂಚನೆಮೂಲಕ ಕೆಳಕಂಡವುಗಳನ್ನು ನಿರ್ದಿಷ್ಟಪಡಿಸಬಹುದು–

(i) ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ, ಅಂಥ ಅವಧಿಗೆ, ನೋಂದಾಯಿತ ವ್ಯಕ್ತಿಗಳ ಒಂದು ವರ್ಗವು, ಸರಕು ಅಥವಾ ಸೇವೆಗಳಿಗಾಗಿ ನಮೂದಿಸುವುದು ಅಗತ್ಯವಿರತಕ್ಕ ಹಾರ್ಮೊನೈಸಡ್ ಸಿಸ್ಟಂ ಆಫ್ ನೋಮಿನಕ್ಲೇಚರ್ ಕೋಡ್‌ನ ಡಿಜಿಟ್‌ಗಳ ಸಂಖ್ಯೆ; ಮತ್ತು

(ii) ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ, ಅಂಥ ಅವಧಿಗೆ, ಸರಕು ಅಥವಾ ಸೇವೆಗಳಿಗಾಗಿ ಹಾರ್ಮೊನೈಸಡ್ ಸಿಸ್ಟಂ ಆಫ್ ನೋಮಿನಕ್ಲೇಚರ್ ಕೋಡ್‌ನ ಡಿಜಿಟ್‌ಗಳ ಸಂಖ್ಯೆಯನ್ನು ನಮೂದಿಸುವುದು ಅಗತ್ಯವಿರದ ನೋಂದಾಯಿತ ವ್ಯಕ್ತಿಗಳ ಒಂದು ವರ್ಗ:

ಮತ್ತು ಪರಂತು, ಪ್ರಕರಣ 31ರ ಉಪ ಪ್ರಕರಣ (3)ರ ಖಂಡ (ಎಫ್) ಅಡಿಯಲ್ಲಿ ಒಂದು ಬೆಲೆಪಟ್ಟಿಯನ್ನು ನೀಡಬೇಕಾದಲ್ಲಿ, ಒಬ್ಬ ನೋಂದಾಯಿತ ವ್ಯಕ್ತಿಯು, ಪ್ರಕರಣ 9ರ ಉಪ ಪ್ರಕರಣ (4)ರ ಅಡಿಯಲ್ಲಿ ವ್ಯಾಪ್ತವಾಗುವ ಪೂರೈಕೆಗಳಿಗಾಗಿ, ಅಂಥ ಪೂರೈಕೆಗಳ ಸಮಗ್ರ ಮೌಲ್ಯವು ಒಂದು ದಿನದಲ್ಲಿ ಯಾವುದೇ ಅಥವಾ ಎಲ್ಲಾ ಪೂರೈಕೆದಾರರಿಂದ ಐದು ಸಾವಿರ ರೂಪಾಯಿಗಳನ್ನು ಮೀರಿದ್ದಾಗ, ತಿಂಗಳಿನ ಕೊನೆಯಲ್ಲಿ ಒಂದು ಕ್ರೋಢೀಕೃತ ಬೆಲೆಪಟ್ಟಿಯನ್ನು ನೀಡಬಹುದು:

ಅಲ್ಲದೆ ಪರಂತು, ಸರಕು ಮತ್ತು ಸೇವೆಗಳ ರಫ್ತುವಿನ ಸಂದರ್ಭದಲ್ಲಿ, ಬೆಲೆಪಟ್ಟಿಯು, "ಏಕೀಕೃತ ತೆರಿಗೆ ಸಂದಾಯದ ಮೇಲಿನ ರಫ್ತಿಗಾಗಿ ಮುಡುಪಾದ ಪೂರೈಕೆ" ಅಥವಾ ಸಂದರ್ಭಾನುಸಾರವಾಗಿ "ಏಕೀಕೃತ ತೆರಿಗೆ ಸಂದಾಯವಿಲ್ಲದೆ, ಬಾಂಡ್ ಅಥವಾ ವಾಗ್ದಾನ ಪತ್ರದ ಅಡಿಯಲ್ಲಿ ರಫ್ತಿಗಾಗಿ ಮುಡುಪಾದ ಪೂರೈಕೆ" ಎನ್ನುವ ಹಿಂಬರಹವನ್ನು ಹೊಂದಿರತಕ್ಕದ್ದು ಮತ್ತು ಖಂಡ(ಇ)ರಲ್ಲಿ ನಿರ್ದಿಷ್ಟಪಡಿಸಿದ ವಿವರಗಳಿಗೆ ಬದಲಾಗಿ, ಕೆಳಕಂಡ ವಿವರಗಳನ್ನು ಹೊಂದಿರತಕ್ಕದ್ದು, ಅಂದರೆ,–

(i) ಸ್ವೀಕರಿಸುವವನ ಹೆಸರು ಮತ್ತು ವಿಳಾಸ;

(ii) ಬಟವಾಡೆಯ ವಿಳಾಸ;

(iii) ಗಮ್ಯಸ್ಥಾನ ದೇಶದ ಹೆಸರು:

ಅಲ್ಲದೆ ಪರಂತು,ಒಬ್ಬ ನೋಂದಾಯಿತ ವ್ಯಕ್ತಿಯು, ಕೆಳಕಂಡ ಷರತ್ತುಗಳಿಗೆ ಒಳಪಟ್ಟು, ಪ್ರಕರಣ 31ರ ಉಪ ಪ್ರಕರಣ (3)ರ ಖಂಡ (ಬಿ)ನ ಉಪಬಂಧಗಳಿಗೆ ಅನುಸಾರವಾಗಿ ಬೆಲೆಪಟ್ಟಿಯನ್ನು ನೀಡದಿರಬಹುದು, ಅಂದರೆ,–

(ಎ) ಸ್ವೀಕರಿಸುವವನು, ನೋಂದಾಯಿತ ವ್ಯಕ್ತಿಯಾಗಿರಬಾರದು; ಮತ್ತು

(ಬಿ) ಸ್ವೀಕರಿಸುವವನಿಗೆ ಅಂಥ ಬೆಲೆಪಟ್ಟಿಯ ಅಗತ್ಯವಿರುವುದಿಲ್ಲ, ಮತ್ತು ಅಂಥ ಎಲ್ಲಾ ಪೂರೈಕೆಗಳಿಗೆ ಸಂಬಂಧಿಸಿದಂತೆ ಪ್ರತಿ ದಿನದ ಕೊನೆಯಲ್ಲಿ ಒಂದು ಕ್ರೋಢೀಕೃತ ತೆರಿಗೆ ಬೆಲೆಪಟ್ಟಿಯನ್ನು ಅಂಥ ಪೂರೈಕೆಗಾಗಿ ನೀಡತಕ್ಕದ್ದು.

47. ತೆರಿಗೆ ಬೆಲೆ ಪಟ್ಟಿ ನೀಡುವುದಕ್ಕಾಗಿ ಕಾಲಮಿತಿ.–ತೆರಿಗೆದಾಯಕ ಸೇವೆಗಳ ಪೂರೈಕೆಯ ಸಂದರ್ಭದಲ್ಲಿ, ನಿಯಮ (46)ರಲ್ಲಿ ಉಲ್ಲೇಖಿಸಿದ ಬೆಲೆಪಟ್ಟಿಯನ್ನು, ಸೇವೆಯ ಪೂರೈಕೆಯ ದಿನಾಂಕದಿಂದ ಮೂವತ್ತು ದಿನಗಳ ಒಂದು ಅವಧಿಯ ಒಳಗಾಗಿ ನೀಡತಕ್ಕದ್ದು:

ಪರಂತು, ಸೇವೆಗಳ ಪೂರೈಕೆದಾರನು, ಒಬ್ಬ ವಿಮೆದಾರ ಅಥವಾ ಒಂದು ಬ್ಯಾಂಕಿಂಗ್ ಕಂಪನಿ ಅಥವಾ ಒಂದು ಬ್ಯಾಂಕೇತರ ಹಣಕಾಸಿನ ಕಂಪನಿಯನ್ನು ಒಳಗೊಂಡಂತೆ ಒಂದು ಹಣಕಾಸಿನ ಸಂಸ್ಥೆಯಾಗಿದ್ದಲ್ಲಿ, ಬೆಲೆಪಟ್ಟಿ ಅಥವಾ ಅದಕ್ಕೆ ಬದಲಾಗಿ ಯಾವುದೇ ದಸ್ತಾವೇಜನ್ನು ಯಾವ ಅವಧಿಯ ಒಳಗಾಗಿ ನೀಡಬೇಕೋ ಅದು, ಸೇವೆಯ ಪೂರೈಕೆಯ ದಿನಾಂಕದಿಂದ ನಲವತ್ತೈದು ದಿನಗಳಾಗಿರತಕ್ಕದ್ದು:

ಮತ್ತು ಪರಂತು, ಪ್ರಕರಣ 25ರಲ್ಲಿ ನಿರ್ದಿಷ್ಟ ಪಡಿಸಿದಂತೆ ಭಿನ್ನ ವ್ಯಕ್ತಿಗಳ ನಡುವೆ ತೆರಿಗೆದಾಯಕ ಪೂರೈಕೆಗಳನ್ನು ಮಾಡುತ್ತಿರುವ, ಒಬ್ಬ ವಿಮೆದಾರ ಅಥವಾ ಒಂದು ಬ್ಯಾಂಕಿಂಗ್ ಕಂಪನಿ ಅಥವಾ ಒಂದು ಬ್ಯಾಂಕೇತರ ಹಣಕಾಸಿನ ಕಂಪನಿಯನ್ನು ಒಳಗೊಂಡಂತೆ ಒಂದು ಹಣಕಾಸಿನ ಸಂಸ್ಥೆ ಅಥವಾ ಟೆಲಿಕಾಂ ನಿರ್ವಾಹಕ, ಅಥವಾ ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರದಿಂದ ಅಧಿಸೂಚಿಸಬಹುದಾದ ಸೇವೆಗಳ ಯಾವುದೇ ಇತರ ವರ್ಗದ ಪೂರೈಕೆದಾರನು, ಬೆಲೆಪಟ್ಟಿಯನ್ನು ಅಂಥ ಪೂರೈಕೆದಾರನು ಅದನ್ನು ತನ್ನ ಲೆಕ್ಕಪತ್ರಗಳ ಪುಸ್ತಕಗಳಲ್ಲಿ ದಾಖಲಿಸುವುದಕ್ಕಿಂತ ಮುಂಚಿತವಾಗಿ ಅಥವಾ ಆ ಸಮಯದಲ್ಲಿ ಅಥವಾ ಆ ಪೂರೈಕೆ ಮಾಡಲಾಗಿರುವ ತ್ರೈಮಾಸಿಕವು ಮುಗಿಯುವ ಮುನ್ನ ನೀಡಬಹುದು.

48. ಬೆಲೆಪಟ್ಟಿ ನೀಡುವ ವಿಧಾನ.– (1) ಸರಕುಗಳ ಪೂರೈಕೆಯ ಸಂದರ್ಭದಲ್ಲಿ ಬೆಲೆಪಟ್ಟಿಯನ್ನು ತ್ರಿಪ್ರತಿಯಲ್ಲಿ ಕೆಳಕಂಡ ವಿಧಾನದಲ್ಲಿ, ಸಿದ್ಧಪಡಿಸತಕ್ಕದ್ದು, ಅಂದರೆ;–

(ಎ) ಮೂಲಪ್ರತಿಯು, ಸ್ವೀಕರಿಸುವವನಿಗಾಗಿನ ಮೂಲಪ್ರತಿ ಎಂದು ಗುರುತು ಮಾಡಿರಬೇಕು;

(ಬಿ) ದ್ವಿಪ್ರತಿಯು, ಸಾಗಾಣಿಕೆದಾರನಿಗಾಗಿನ ದ್ವಿಪ್ರತಿ ಎಂದು ಗುರುತು ಮಾಡಿರಬೇಕು; ಮತ್ತು

(ಸಿ) ತ್ರಿಪ್ರತಿಯು, ಪೂರೈಕೆದಾರನಿಗಾಗಿನ ತ್ರಿಪ್ರತಿ ಎಂದು ಗುರುತು ಮಾಡಿರಬೇಕು.

(2) ಸೇವೆಗಳ ಪೂರೈಕೆಯ ಸಂದರ್ಭದಲ್ಲಿ ಬೆಲೆಪಟ್ಟಿಯನ್ನು ದ್ವಿಪ್ರತಿಯಲ್ಲಿ ಕೆಳಕಂಡ ವಿಧಾನದಲ್ಲಿ, ಸಿದ್ಧಪಡಿಸತಕ್ಕದ್ದು ಅಂದರೆ;–

(ಎ) ಮೂಲಪ್ರತಿಯು, ಸ್ವೀಕರಿಸುವವನಿಗಾಗಿನ ಮೂಲಪ್ರತಿ ಎಂದು ಗುರುತು ಮಾಡಿರಬೇಕು;

(ಬಿ) ದ್ವಿಪ್ರತಿಯು, ಪೂರೈಕೆದಾರನಿಗಾಗಿನ ದ್ವಿಪ್ರತಿ ಎಂದು ಗುರುತು ಮಾಡಿರಬೇಕು; ಮತ್ತು

(3) ತೆರಿಗೆ ಅವಧಿಗೆ ನೀಡಲಾದ ಬೆಲೆಪಟ್ಟಿಯ ಕ್ರಮಸಂಖ್ಯೆಯನ್ನು **ವಮೂನೆ ಜಿಎಸ್‌ಟಿಆರ್–1**ರಲ್ಲಿ ಸಾಮಾನ್ಯ ಪೋರ್ಟಲ್‌ನಲ್ಲಿ ವಿದ್ಯುನ್ಮಾನ ರೀತಿಯಲ್ಲಿ ಸಲ್ಲಿಸತಕ್ಕದ್ದು.

49. ಪೂರೈಕೆಯ ಬಿಲ್ಲು.– ಪ್ರಕರಣ 31ರ ಉಪಪ್ರಕರಣ(3)ರ ಖಂಡ(ಸಿ)ಯಲ್ಲಿ ಉಲ್ಲೇಖಿಸಲಾದ ಒಂದು ಪೂರೈಕೆಯ ಬಿಲ್ಲನ್ನು, ಪೂರೈಕೆದಾರನು ಕೆಳಕಂಡ ವಿವರಗಳನ್ನು ಒಳಗೊಂಡಂತೆ, ನೀಡತಕ್ಕದ್ದು, ಅಂದರೆ:–

(ಎ) ಪೂರೈಕೆದಾರನ ಹೆಸರು, ವಿಳಾಸ ಮತ್ತು ಸರಕು ಮತ್ತು ಸೇವೆಗಳ ತೆರಿಗೆಯ ಗುರುತಿನ ಸಂಖ್ಯೆ;

(ಬಿ) ಒಂದು ಹಣಕಾಸು ವರ್ಷಕ್ಕಾಗಿ ವಿಶಿಷ್ಟವಾದ, ವರ್ಣಮಾಲೆಗಳು ಅಥವಾ ಸಂಖ್ಯೆಗಳು ಅಥವಾ ವಿಶೇಷ ಅಕ್ಷರಗಳು– ಹೈಫೆನ್ ಅಥವಾ ಡ್ಯಾಶ್ ಮತ್ತು ಅನುಕ್ರಮವಾಗಿ, ಸ್ಲ್ಯಾಶ್ " –"ಮತ್ತು" / "ಮತ್ತು ಅವುಗಳ ಯಾವುದೇ ಸಂಯೋಜನೆಯನ್ನು ಒಳಗೊಂಡಿರುವ, ಒಂದು ಅಥವಾ ಬಹು ಸರಣಿಗಳಲ್ಲಿರುವ, ಹದಿನಾರು ಅಕ್ಷರಗಳನ್ನು ಮೀರದಿರುವ ಒಂದಾದ ಮೇಲೊಂದು ಬರುವ ಕ್ರಮ ಸಂಖ್ಯೆ;

(ಸಿ) ಅದನ್ನು ನೀಡಿದ ದಿನಾಂಕ;

(ಡಿ) ಸ್ವೀಕರಿಸುವವನುನೋಂದಾಯಿತನಾಗಿದ್ದರೆ, ಅವನ ಹೆಸರು, ವಿಳಾಸ ಮತ್ತು ಸರಕು ಮತ್ತು ಸೇವೆಗಳ ತೆರಿಗೆಯ ಗುರುತಿನ ಸಂಖ್ಯೆಅಥವಾ ವಿಶಿಷ್ಟ ಗುರುತಿನ ಸಂಖ್ಯೆ;

(ಇ) ಸರಕು ಅಥವಾ ಸೇವೆಗಳಿಗಾಗಿ ಹಾರ್ಮೊನೈಸಡ್ ಸಿಸ್ಟಂ ಆಫ್ ನೋಮಿನಕ್ಲೇಚರ್ ಕೋಡ್;

(ಎಫ್) ಸರಕು ಮತ್ತು ಸೇವೆಗಳ ವಿವರ;

(ಜಿ) ಸೋಡಿ ಅಥವಾ ಉಪಶಮನ, ಯಾವುದಾದರೂ ಇದ್ದರೆ, ಅದನ್ನು ಗಣನೆಗೆ ತೆಗೆದುಕೊಂಡು ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಯ ತೆರಿಗೆದಾಯಕ ಮೌಲ್ಯ; ಮತ್ತು

(ಹೆಚ್) ಪೂರೈಕೆದಾರನ ಅಥವಾ ಆತನ ಪ್ರಾಧಿಕೃತ ಪ್ರತಿನಿಧಿಯ ಸಹಿ ಅಥವಾ ಡಿಜಿಟಲ್ ಸಹಿ:

ಪರಂತು, ನಿಯಮ 46ರ ಪರಂತುಕಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಈ ನಿಯಮದಡಿ ನೀಡಲಾದ ಪೂರೈಕೆಯ ಬಿಲ್ಲಿಗೆ ಅನ್ವಯಿಸತಕ್ಕದ್ದು:

ಮತ್ತು ಪರಂತು, ಯಾವುದೇ ತೆರಿಗೆದಾಯಕವಲ್ಲದ ಪೂರೈಕೆಗೆ ಸಂಬಂಧಿಸಿದಂತೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಅಧಿನಿಯಮದ ಅಡಿಯಲ್ಲಿ ನೀಡಲಾದ ಯಾವುದೇ ತೆರಿಗೆ ಬೆಲೆಪಟ್ಟಿ ಅಥವಾ ಯಾವುದೇ ಇತರೇ

ಅಂಥದೇ ದಸ್ತಾವೇಜುಗಳನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ಪೂರೈಕೆಯ ಬಿಲ್ಲು ಎಂದು ಪರಿಗಣಿಸತಕ್ಕದ್ದು.

50. ರಸೀದಿ ವೋಚರ್.– ಪ್ರಕರಣ 31ರ ಉಪಪ್ರಕರಣ(3)ರ ಖಂಡ(ಡಿ)ಯಲ್ಲಿ ಉಲ್ಲೇಖಿಸಲಾದ ಒಂದು ರಸೀದಿ ವೋಚರ್, ಕೆಳಕಂಡ ವಿವರಗಳನ್ನು ಒಳಗೊಂಡಿರತಕ್ಕದ್ದು, ಅಂದರೆ:–

(ಎ) ಪೂರೈಕೆದಾರನ ಹೆಸರು, ವಿಳಾಸ ಮತ್ತು ಸರಕು ಮತ್ತು ಸೇವೆಗಳ ತೆರಿಗೆಯ ಗುರುತಿನ ಸಂಖ್ಯೆ;

(ಬಿ) ಒಂದು ಹಣಕಾಸು ವರ್ಷಕ್ಕಾಗಿ ವಿಶಿಷ್ಟವಾದ, ವರ್ಣಮಾಲೆಗಳು ಅಥವಾ ಸಂಖ್ಯೆಗಳು ಅಥವಾ ವಿಶೇಷ ಅಕ್ಷರಗಳು– ಹೈಫೆನ್ ಅಥವಾ ಡ್ಯಾಶ್ ಮತ್ತು ಅನುಕ್ರಮವಾಗಿ ಸ್ಲ್ಯಾಶ್ **"–"** ಮತ್ತು **"/"**, ಮತ್ತು ಅವುಗಳ ಯಾವುದೇ ಸಂಯೋಜನೆಯನ್ನು ಒಳಗೊಂಡಿರುವ, ಒಂದು ಅಥವಾ ಬಹು ಸರಣಿಗಳಲ್ಲಿರುವ, ಹದಿನಾರು ಅಕ್ಷರಗಳನ್ನು ಮೀರದಿರುವ ಒಂದಾದ ಮೇಲೊಂದು ಬರುವ ಕ್ರಮ ಸಂಖ್ಯೆ;

(ಸಿ) ಅದನ್ನು ನೀಡಿದ ದಿನಾಂಕ;

(ಡಿ) ಸ್ವೀಕರಿಸುವವನು ನೋಂದಾಯಿತನಾಗಿದ್ದರೆ, ಅವನಹೆಸರು, ವಿಳಾಸ ಮತ್ತು ಸರಕು ಮತ್ತು ಸೇವೆಗಳ ತೆರಿಗೆಯ ಗುರುತಿನ ಸಂಖ್ಯೆಅಥವಾ ವಿಶಿಷ್ಟ ಗುರುತಿನ ಸಂಖ್ಯೆ;

(ಇ) ಸರಕು ಮತ್ತು ಸೇವೆಗಳ ವಿವರ;

(ಎಫ್) ಮುಂಗಡವಾಗಿ ತೆಗೆದುಕೊಂಡ ಮೊತ್ತ;

(ಜಿ) ತೆರಿಗೆ ದರ (ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಏಕೀಕೃತ ತೆರಿಗೆ, ಕೇಂದ್ರಾಡಳಿತ ಪ್ರದೇಶ ತೆರಿಗೆ ಅಥವಾ ಉಪಕರ);

(ಹೆಚ್) ತೆರಿಗೆದಾಯಕ ಸರಕು ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ ವಿಧಿಸಲಾದ ತೆರಿಗೆಯ ಮೊತ್ತ (ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಏಕೀಕೃತ ತೆರಿಗೆ, ಕೇಂದ್ರಾಡಳಿತ ಪ್ರದೇಶ ತೆರಿಗೆ ಅಥವಾ ಉಪಕರ);

(ಐ) ಒಂದು ಪೂರೈಕೆ ಅಂತರ ರಾಜ್ಯ ವ್ಯಾಪಾರ ಅಥವಾ ವಾಣಿಜ್ಯಕ್ಕೆ ಸಂಬಂಧಿಸಿದ್ದಾದರೆ ರಾಜ್ಯದ ಹೆಸರಿನ ಜೊತೆಗೆ ಪೂರೈಕೆಯ ಸ್ಥಳ;

(ಜೆ) ತೆರಿಗೆಯನ್ನು ಹಿಮ್ಮುಖ ವಿಧಿಸುವಿಕೆಯ ಆಧಾರದಲ್ಲಿ ಸಂದಾಯ ಮಾಡುವುದಿದ್ದರೆ ಅದು; ಮತ್ತು

(ಕೆ) ಪೂರೈಕೆದಾರನ ಅಥವಾ ಆತನ ಪ್ರಾಧಿಕೃತ ಪ್ರತಿನಿಧಿಯ ಸಹಿ ಅಥವಾ ಡಿಜಿಟಲ್ ಸಹಿ:

ಪರಂತು ಮುಂಗಡವನ್ನು ಸ್ವೀಕರಿಸುವ ಸಮಯದಲ್ಲಿ,–

(i) ತೆರಿಗೆಯ ದರವನ್ನು ನಿರ್ಧರಿಸಲಾಗದಿದ್ದಲ್ಲಿ, ತೆರಿಗೆಯನ್ನು ಶೇಕಡ ಹದಿನೆಂಟರ ದರದಲ್ಲಿ ಸಂದಾಯ ಮಾಡತಕ್ಕದ್ದು;

(ii) ಪೂರೈಕೆಯ ಸ್ವರೂಪವನ್ನು ನಿರ್ಧರಿಸಲಾಗದಿದ್ದಲ್ಲಿ, ಅದನ್ನು ಅಂತರ ರಾಜ್ಯ ಪೂರೈಕೆ ಎಂದು ಪರಿಗಣಿಸತಕ್ಕದ್ದು.

51. ಮರುಪಾವತಿ ವೋಚರ್.– ಪ್ರಕರಣ31ರ ಉಪಪ್ರಕರಣ(3)ರ ಖಂಡ(ಇ)ಯಲ್ಲಿ ಉಲ್ಲೇಖಿಸಲಾದ ಒಂದು ಮರುಪಾವತಿ ವೋಚರ್, ಕೆಳಕಂಡ ವಿವರಗಳನ್ನು ಒಳಗೊಂಡಿರತಕ್ಕದ್ದು, ಅಂದರೆ:–

(ಎ) ಪೂರೈಕೆದಾರನ ಹೆಸರು, ವಿಳಾಸ ಮತ್ತು ಸರಕು ಮತ್ತು ಸೇವೆಗಳ ತೆರಿಗೆಯ ಗುರುತಿನ ಸಂಖ್ಯೆ;

(ಬಿ) ಒಂದು ಹಣಕಾಸು ವರ್ಷಕ್ಕಾಗಿ ವಿಶಿಷ್ಟವಾದ, ವರ್ಣಮಾಲೆಗಳು ಅಥವಾ ಸಂಖ್ಯೆಗಳು ಅಥವಾ ವಿಶೇಷ ಅಕ್ಷರಗಳು – ಹೈಫೆನ್ ಅಥವಾ ಡ್ಯಾಶ್ ಮತ್ತು ಅನುಕ್ರಮವಾಗಿ, ಸ್ಲ್ಯಾಶ್ **"–"** ಮತ್ತು **"/"** ಮತ್ತು ಅವುಗಳ ಯಾವುದೇ ಸಂಯೋಜನೆಯನ್ನು ಒಳಗೊಂಡಿರುವ, ಒಂದು ಅಥವಾ ಬಹು ಸರಣಿಗಳಲ್ಲಿರುವ, ಹದಿನಾರು ಅಕ್ಷರಗಳನ್ನು ಮೀರದಿರುವ ಒಂದಾದ ಮೇಲೊಂದು ಬರುವ ಕ್ರಮ ಸಂಖ್ಯೆ;

(ಸಿ) ಅದನ್ನು ನೀಡಿದ ದಿನಾಂಕ;

(ಡಿ) ಸ್ವೀಕರಿಸುವವನು ನೋಂದಾಯಿತನಾಗಿದ್ದರೆ, ಅವನ ಹೆಸರು, ವಿಳಾಸ ಮತ್ತು ಸರಕು ಮತ್ತು ಸೇವೆಗಳ ತೆರಿಗೆಯ ಗುರುತಿನ ಸಂಖ್ಯೆಅಥವಾ ವಿಶಿಷ್ಟ ಗುರುತಿನ ಸಂಖ್ಯೆ;

(ಇ) ನಿಯಮ 50ರ ಉಪಬಂಧಗಳಿಗೆ ಅನುಸಾರವಾಗಿ ನೀಡಲಾದ ರಶೀದಿ ವೋಚರ್‌ನ ಸಂಖ್ಯೆ ಮತ್ತು ದಿನಾಂಕ;

(ಎಫ್) ಮರುಪಾವತಿ ಮಾಡಲಾದುದಕ್ಕೆ ಸಂಬಂಧಿಸಿದ ಸರಕು ಮತ್ತು ಸೇವೆಗಳ ವಿವರ;

(ಜಿ) ಮರುಪಾವತಿ ಮಾಡಲಾದ ಮೊತ್ತ;

(ಹೆಚ್) ತೆರಿಗೆ ದರ (ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಏಕೀಕೃತ ತೆರಿಗೆ, ಕೇಂದ್ರಾಡಳಿತ ಪ್ರದೇಶ ತೆರಿಗೆ ಅಥವಾ ಉಪಕರ);

(ಐ) ತೆರಿಗೆದಾಯಕ ಸರಕು ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ ವಿಧಿಸಲಾದ ತೆರಿಗೆಯ ಮೊತ್ತ (ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಏಕೀಕೃತ ತೆರಿಗೆ, ಕೇಂದ್ರಾಡಳಿತ ಪ್ರದೇಶ ತೆರಿಗೆ ಅಥವಾ ಉಪಕರ);

(ಜೆ) ತೆರಿಗೆಯನ್ನು ಹಿಮ್ಮುಖ ವಿಧಿಸುವಿಕೆಯ ಆಧಾರದಲ್ಲಿ ಸಂದಾಯ ಮಾಡುವುದಿದ್ದರೆ ಅದು; ಮತ್ತು

(ಕೆ) ಪೂರೈಕೆದಾರನ ಅಥವಾ ಆತನ ಪ್ರಾಧಿಕೃತ ಪ್ರತಿನಿಧಿಯ ಸಹಿ ಅಥವಾ ಡಿಜಿಟಲ್ ಸಹಿ:

52. ಸಂದಾಯ ವೋಚರ್.– ಪ್ರಕರಣ 31ರ ಉಪಪ್ರಕರಣ (3)ರ ಖಂಡ (ಜಿ)ಯಲ್ಲಿ ಉಲ್ಲೇಖಿಸಲಾದ ಒಂದು ಸಂದಾಯ ವೋಚರ್, ಕೆಳಕಂಡ ವಿವರಗಳನ್ನು ಒಳಗೊಂಡಿರತಕ್ಕದ್ದು,ಅಂದರೆ:–

(ಎ) ಪೂರೈಕೆದಾರನ ಹೆಸರು, ವಿಳಾಸ ಮತ್ತು ಸರಕು ಮತ್ತು ಸೇವೆಗಳ ತೆರಿಗೆಯ ಗುರುತಿನ ಸಂಖ್ಯೆ;

(ಬಿ) ಒಂದು ಹಣಕಾಸು ವರ್ಷಕ್ಕಾಗಿ ವಿಶಿಷ್ಟವಾದ, ವರ್ಣಮಾಲೆಗಳು ಅಥವಾ ಸಂಖ್ಯೆಗಳು ಅಥವಾ ವಿಶೇಷ ಅಕ್ಷರಗಳು– ಹೈಫೆನ್ ಅಥವಾ ಡ್ಯಾಶ್ ಮತ್ತು ಅನುಕ್ರಮವಾಗಿ, ಸ್ಲ್ಯಾಶ್ **" –"**ಮತ್ತು**" /** "ಮತ್ತು ಅವುಗಳ ಯಾವುದೇ ಸಂಯೋಜನೆಯನ್ನು ಒಳಗೊಂಡಿರುವ, ಒಂದು ಅಥವಾ ಬಹು ಸರಣಿಗಳಲ್ಲಿರುವ, ಹದಿನಾರು ಅಕ್ಷರಗಳನ್ನು ಮೀರದಿರುವ ಒಂದಾದ ಮೇಲೊಂದು ಬರುವ ಕ್ರಮ ಸಂಖ್ಯೆ;

(ಸಿ) ಅದನ್ನು ನೀಡಿದ ದಿನಾಂಕ;

(ಡಿ) ಸ್ವೀಕರಿಸುವವನ ಹೆಸರು, ವಿಳಾಸ ಮತ್ತು ಸರಕು ಮತ್ತು ಸೇವೆಗಳ ತೆರಿಗೆಯ ಗುರುತಿನ ಸಂಖ್ಯೆ;

(ಇ) ಸರಕು ಮತ್ತು ಸೇವೆಗಳ ವಿವರ;

(ಎಫ್) ಸಂದಾಯ ಮಾಡಿದ ಮೊತ್ತ;

(ಜಿ) ತೆರಿಗೆ ದರ (ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಏಕೀಕೃತ ತೆರಿಗೆ, ಕೇಂದ್ರಾಡಳಿತ ಪ್ರದೇಶ ತೆರಿಗೆ ಅಥವಾ ಉಪಕರ);

(ಹೆಚ್) ತೆರಿಗೆದಾಯಕ ಸರಕು ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ ವಿಧಿಸಲಾದ ತೆರಿಗೆಯ ಮೊತ್ತ(ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಏಕೀಕೃತ ತೆರಿಗೆ, ಕೇಂದ್ರಾಡಳಿತ ಪ್ರದೇಶ ತೆರಿಗೆ ಅಥವಾ ಉಪಕರ);

(ಐ) ಒಂದು ಪೂರೈಕೆ ಅಂತರ ರಾಜ್ಯ ವ್ಯಾಪಾರ ಅಥವಾ ವಾಣಿಜ್ಯಕ್ಕೆ ಸಂಬಂಧಿಸಿದ್ದಾದರೆ ರಾಜ್ಯದ ಹೆಸರಿನ ಜೊತೆಗೆ ಪೂರೈಕೆಯ ಸ್ಥಳ; ಮತ್ತು

(ಜೆ) ಪೂರೈಕೆದಾರನ ಅಥವಾ ಆತನ ಪ್ರಾಧಿಕೃತ ಪ್ರತಿನಿಧಿಯ ಸಹಿ ಅಥವಾ ಡಿಜಿಟಲ್ ಸಹಿ:

53. ಪರಿಷ್ಕೃತ ತೆರಿಗೆ ಬೆಲೆಪಟ್ಟಿ ಮತ್ತು ಜಮೆ ಅಥವಾ ಖರ್ಚು ಚೀಟಿಗಳು.– ಪ್ರಕರಣ 31ರಲ್ಲಿ ಉಲ್ಲೇಖಿಸಲಾದ ಒಂದು ಪರಿಷ್ಕೃತ ತೆರಿಗೆ ಬೆಲೆಪಟ್ಟಿ ಮತ್ತು ಪ್ರಕರಣ 34ರಲ್ಲಿ ಉಲ್ಲೇಖಿಸಲಾದ ಜಮೆ ಅಥವಾ ಖರ್ಚು ಚೀಟಿ ಕೆಳಕಂಡ ವಿವರಗಳನ್ನು ಒಳಗೊಂಡಿರತಕ್ಕದ್ದು, ಅಂದರೆ:–

(ಎ) "ಪರಿಷ್ಕೃತ ತೆರಿಗೆ ಬೆಲೆಪಟ್ಟಿ" ಎನ್ನುವ ಪದವನ್ನು, ಅನ್ವಯವಾಗುವಲ್ಲೆಲ್ಲ, ಎದ್ದು ಕಾಣುವಂತೆ ಸೂಚಿಸತಕ್ಕದ್ದು;

(ಬಿ) ಪೂರೈಕೆದಾರನ ಹೆಸರು, ವಿಳಾಸ ಮತ್ತು ಸರಕು ಮತ್ತು ಸೇವೆಗಳ ತೆರಿಗೆಯ ಗುರುತಿನ ಸಂಖ್ಯೆ;

(ಸಿ) ದಸ್ತಾವೇಜಿನ ಸ್ವರೂಪ;

(ಡಿ) ಒಂದು ಹಣಕಾಸು ವರ್ಷಕ್ಕಾಗಿ ವಿಶಿಷ್ಟವಾದ, ವರ್ಣಮಾಲೆಗಳು ಅಥವಾ ಸಂಖ್ಯೆಗಳು ಅಥವಾ ವಿಶೇಷ ಅಕ್ಷರಗಳು– ಹೈಫೆನ್ ಅಥವಾ ಡ್ಯಾಶ್ ಮತ್ತು ಅನುಕ್ರಮವಾಗಿ, ಸ್ಲ್ಯಾಶ್ " –"ಮತ್ತು" / "ಮತ್ತು ಅವುಗಳ ಯಾವುದೇ ಸಂಯೋಜನೆಯನ್ನು ಒಳಗೊಂಡಿರುವ, ಒಂದು ಅಥವಾ ಬಹು ಸರಣಿಗಳಲ್ಲಿರುವ, ಹದಿನಾರು ಅಕ್ಷರಗಳನ್ನು ಮೀರದಿರುವ ಒಂದಾದ ಮೇಲೊಂದು ಬರುವ ಕ್ರಮ ಸಂಖ್ಯೆ;

(ಇ) ದಸ್ತಾವೇಜನ್ನು ನೀಡಿದ ದಿನಾಂಕ;

(ಎಫ್) ಸ್ವೀಕರಿಸುವವನು ನೋಂದಾಯಿತನಾಗಿದ್ದರೆ, ಅವನ ಹೆಸರು, ವಿಳಾಸ ಮತ್ತು ಸರಕು ಮತ್ತು ಸೇವೆಗಳ ತೆರಿಗೆಯ ಗುರುತಿನ ಸಂಖ್ಯೆ ಅಥವಾ ವಿಶಿಷ್ಟ ಗುರುತಿನ ಸಂಖ್ಯೆ;

(ಜಿ) ಅಂಥ ಸ್ವೀಕರಿಸುವನು ಅನೋಂದಾಯಿತನಾಗಿದ್ದರೆ, ಸ್ವೀಕರಿಸುವವನ ಹೆಸರು ಮತ್ತು ವಿಳಾಸ ಮತ್ತು ಹಾಗೂ ರಾಜ್ಯದ ಹೆಸರು ಮತ್ತು ಅದರ ಕೋಡ್‌ನೊಂದಿಗೆ, ಬಟವಾಡೆಯ ವಿಳಾಸ;

(ಹೆಚ್) ಸಂಬಂಧಿಸಿದ ತೆರಿಗೆ ಬೆಲೆಪಟ್ಟಿ ಅಥವಾ, ಸಂದರ್ಭಾನುಸಾರವಾಗಿ, ಪೂರೈಕೆಯ ಬಿಲ್ಲಿನ ಕ್ರಮ ಸಂಖ್ಯೆ ಮತ್ತು ದಿನಾಂಕ;

(ಐ) ಸ್ವೀಕರಿಸುವವನಿಗೆ ಜಮೆಗೊಳಿಸಿದ ಅಥವಾ ಸಂದರ್ಭಾನುಸಾರವಾಗಿ, ಖರ್ಚುಹಾಕಿದ ಸರಕು ಅಥವಾ ಸೇವೆಗಳ ತೆರಿಗೆದಾಯಕ ಪೂರೈಕೆ ಮೌಲ್ಯ, ತೆರಿಗೆಯ ದರ ಮತ್ತು ತೆರಿಗೆಯ ಮೊತ್ತ; ಮತ್ತು

(ಜೆ) ಪೂರೈಕೆದಾರನ ಅಥವಾ ಆತನ ಪ್ರಾಧಿಕೃತ ಪ್ರತಿನಿಧಿಯ ಸಹಿ ಅಥವಾ ಡಿಜಿಟಲ್ ಸಹಿ.

(2) ನೋಂದಣಿ ಪ್ರಮಾಣ ಪತ್ರವನ್ನು ನೀಡುವ ದಿನಾಂಕಕ್ಕಿಂತ ಮೊದಲಿನ ದಿನಾಂಕಕ್ಕೆ ಜಾರಿಗೆ ಬರುವಂತೆ ನೋಂದಣಿಯನ್ನು ಮಂಜೂರು ಮಾಡಲಾಗಿರುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ನೋಂದಣಿ ಜಾರಿ ದಿನಾಂಕದಿಂದ ಪ್ರಾರಂಭಗೊಂಡು ನೋಂದಣಿ ಪ್ರಮಾಣ ಪತ್ರವನ್ನು ನೀಡುವ ದಿನಾಂಕದವರೆಗಿನ ಅವಧಿಯಲ್ಲಿ ಮಾಡಲಾದ ತೆರಿಗೆದಾಯಕ ಪೂರೈಕೆಗಳಿಗೆ ಸಂಬಂಧಿಸಿದಂತೆ ಪರಿಷ್ಕೃತ ಬೆಲೆಪಟ್ಟಿಗಳನ್ನು ನೀಡಬಹುದು:

ಪರಂತು, ನೋಂದಾಯಿತ ವ್ಯಕ್ತಿಯು,ಅಂಥ ಅವಧಿಯಲ್ಲಿ, ಅಧಿನಿಯಮದಅಡಿಯಲ್ಲಿ ನೋಂದಾಯಿತನಲ್ಲದ ಸ್ವೀಕರಿಸುವವನಿಗೆ ಮಾಡಿದ ಎಲ್ಲಾ ತೆರಿಗೆದಾಯಕ ಪೂರೈಕೆಗಳಿಗೆ ಸಂಬಂಧಿಸಿದಂತೆ, ಕ್ರೋಡೀಕೃತ ಪರಿಷ್ಕೃತ ಬೆಲೆಪಟ್ಟಿಯನ್ನು ನೀಡಬಹುದು:

ಮತ್ತು ಪರಂತು, ಅಂತರ್ ರಾಜ್ಯ ಪೂರೈಕೆಗಳಿಗೆ ಸಂಬಂಧಿಸಿದಂತೆ, ಪೂರೈಕೆಯ ಮೌಲ್ಯ ಎರಡುಲಕ್ಷದ ಐವತ್ತು ಸಾವಿರ ರೂಪಾಯಿಗಳನ್ನು ಮೀರದಿರುವಲ್ಲಿ, ಅಧಿನಿಯಮದ ಅಡಿಯಲ್ಲಿ ನೊಂದಾಯಿತರಾಗದ ರಾಜ್ಯದಲ್ಲಿ ನೆಲೆಗೊಂಡಿರುವ ಎಲ್ಲಾ ಸ್ವೀಕರಿಸುವವರಿಗೆ ಸಂಬಂಧಿಸಿದಂತೆ ಒಂದು ಕ್ರೋಡೀಕೃತ ಪರಿಷ್ಕೃತ ಬೆಲೆಪಟ್ಟಿಯನ್ನು ಪ್ರತ್ಯೇಕವಾಗಿ ನೀಡಬಹುದು.

(3) ಪ್ರಕರಣ74 ಅಥವಾ ಪ್ರಕರಣ129 ಅಥವಾ ಪ್ರಕರಣ 130ರ ಉಪಬಂಧಗಳಿಗೆ ಅನುಸಾರವಾಗಿ ಸಂದಾಯ ಮಾಡಬೇಕಾದ ಯಾವುದೇ ತೆರಿಗೆಗೆ ಅನುಗುಣವಾಗಿ ನೀಡಲಾದ ಯಾವುದೇ ಬೆಲೆಪಟ್ಟಿ ಅಥವಾ ಖರ್ಚು ಚೀಟಿಯು, **"ಹೂಡುವಳಿ ತೆರಿಗೆ ಜಮೆ ಅಂಗೀಕಾರಾರ್ಹವಲ್ಲ"** ಎನ್ನುವ ಪದವನ್ನು ಎದ್ದು ಕಾಣುವಂತೆ ಒಳಗೊಂಡಿರತಕ್ಕದ್ದು.

54. ವಿಶೇಷ ಪ್ರಕರಣಗಳಲ್ಲಿ ತೆರಿಗೆ ಬೆಲೆ ಪಟ್ಟಿ.– (1) ಒಬ್ಬ ಹೂಡುವಳಿ ಸೇವೆ ಹಂಚಿಕೆದಾರನಿಂದ ನೀಡಲಾದ ಹೂಡುವಳಿ ಸೇವೆ ಹಂಚಿಕೆ ಬೆಲೆಪಟ್ಟಿ ಅಥವಾ ಸಂದರ್ಭಾನುಸಾರವಾಗಿ, ಹೂಡುವಳಿ ಸೇವೆ ಹಂಚಿಕೆಯ ಜಮೆ ಚೀಟಿಯುಕೆಳಕಂಡ ವಿವರಗಳನ್ನು ಒಳಗೊಂಡಿರತಕ್ಕದ್ದು:–

(ಎ) ಪೂರೈಕೆದಾರನ ಹೆಸರು, ವಿಳಾಸ ಮತ್ತು ಸರಕು ಮತ್ತು ಸೇವೆಗಳ ತೆರಿಗೆಯ ಗುರುತಿನ ಸಂಖ್ಯೆ;

(ಬಿ) ಒಂದು ಹಣಕಾಸು ವರ್ಷಕ್ಕಾಗಿ ವಿಶಿಷ್ಟವಾದ, ವರ್ಣಮಾಲೆಗಳು ಅಥವಾ ಸಂಖ್ಯೆಗಳು ಅಥವಾ ವಿಶೇಷ ಅಕ್ಷರಗಳು– ಹೈಫೆನ್ ಅಥವಾ ಡ್ಯಾಶ್ ಮತ್ತು ಅನುಕ್ರಮವಾಗಿ, ಸ್ಲ್ಯಾಶ್ **"–"** ಮತ್ತು **"/"** ಮತ್ತು ಅವುಗಳ ಯಾವುದೇ ಸಂಯೋಜನೆಯನ್ನು ಒಳಗೊಂಡಿರುವ, ಒಂದು ಅಥವಾ ಬಹು ಸರಣಿಗಳಲ್ಲಿರುವ, ಹದಿನಾರು ಅಕ್ಷರಗಳನ್ನು ಮೀರದಿರುವ ಒಂದಾದ ಮೇಲೊಂದು ಬರುವ ಕ್ರಮ ಸಂಖ್ಯೆ;

(ಸಿ) ಅದನ್ನು ನೀಡಿದ ದಿನಾಂಕ;

(ಡಿ) ಜಮೆಯನ್ನು ಯಾರಿಗೆ ಹಂಚಿಕೆ ಮಾಡಲಾಗಿದೆಯೋ ಆ ಸ್ವೀಕರಿಸುವವನ ಹೆಸರು, ವಿಳಾಸ ಮತ್ತು ಸರಕು ಮತ್ತು ಸೇವೆಗಳ ತೆರಿಗೆಯ ಗುರುತಿನ ಸಂಖ್ಯೆ;

(ಇ) ಹಂಚಿಕೆ ಮಾಡಿದ ಜಮೆಯ ಮೊತ್ತ; ಮತ್ತು

(ಎಫ್) ಪೂರೈಕೆದಾರನ ಅಥವಾ ಆತನ ಪ್ರಾಧಿಕೃತ ಪ್ರತಿನಿಧಿಯ ಸಹಿ ಅಥವಾ ಡಿಜಿಟಲ್ ಸಹಿ:

ಪರಂತು, ಹೂಡುವಳಿ ಸೇವೆ ಹಂಚಿಕೆದಾರನು, ಒಬ್ಬ ವಿಮೆದಾರ ಅಥವಾ ಒಂದು ಬ್ಯಾಂಕಿಂಗ್ ಕಂಪನಿ ಅಥವಾ ಒಂದು ಬ್ಯಾಂಕೇತರ ಹಣಕಾಸಿನ ಕಂಪನಿಯನ್ನು ಒಳಗೊಂಡಂತೆ ಒಂದು ಹಣಕಾಸಿನ ಸಂಸ್ಥೆಯಾಗಿದ್ದಲ್ಲಿ, ಒಂದು ತೆರಿಗೆ ಬೆಲೆಪಟ್ಟಿಯು ಅದಕ್ಕೆ ಬದಲಾಗಿ, ಯಾವದಾದರು ಹೆಸರಿನಿಂದ ಕರೆಯಲಾಗುವ, ಅನುಕ್ರಮ ಸಂಖ್ಯೆಯನ್ನು ಹೊಂದಿರಲಿ ಅಥವಾ ಇಲ್ಲದಿರಲಿ ಆದರೆ ಮೇಲೆ ನಮೂದಿಸಿದ ಮಾಹಿತಿಯನ್ನು ಒಳಗೊಂಡಿರುವ ಯಾವುದೇ ದಸ್ತಾವೇಜನ್ನು ಒಳಗೊಳ್ಳತಕ್ಕದ್ದು.

(2) ಹೂಡುವಳಿ ಸೇವೆ ಹಂಚಿಕೆದಾರನು, ಒಬ್ಬ ವಿಮೆದಾರ ಅಥವಾ ಒಂದು ಬ್ಯಾಂಕಿಂಗ್ ಕಂಪನಿ ಅಥವಾ ಒಂದು ಬ್ಯಾಂಕೇತರ ಹಣಕಾಸಿನ ಕಂಪನಿಯನ್ನು ಒಳಗೊಂಡಂತೆ ಒಂದು ಹಣಕಾಸಿನ ಸಂಸ್ಥೆಯಾಗಿದ್ದಲ್ಲಿ, ಸದರಿ ಪೂರೈಕೆದಾರನು, ಒಂದು ತೆರಿಗೆ ಬೆಲೆಪಟ್ಟಿಯನ್ನು ಅಥವಾ ಅದಕ್ಕೆ ಬದಲಾಗಿ, ಯಾವದಾದರು ಹೆಸರಿನಿಂದ ಕರೆಯಲಾಗುವ, ಭೌತಿಕವಾಗಿ ಅಥವಾ ವಿದ್ಯುನ್ಮಾನ ರೀತಿಯಲ್ಲಿ ನೀಡಿರಲಿ ಅಥವಾ ಲಭ್ಯ ಮಾಡಿರಲಿ, ಅನುಕ್ರಮ ಸಂಖ್ಯೆಯನ್ನು ಹೊಂದಿರಲಿ ಅಥವಾ ಇಲ್ಲದಿರಲಿ, ಮತ್ತು ತೆರಿಗೆದಾಯಕ ಸೇವೆಯನ್ನು ಸ್ವೀಕರಿಸುವವನ ವಿಳಾಸವನ್ನು ಒಳಗೊಂಡಿರಲಿ ಅಥವಾ ಇಲ್ಲದಿರಲಿ, ಆದರೆ ನಿಯಮ 46ರ ಅಡಿಯಲ್ಲಿ, ನಮೂದಿಸಿದಂತೆ ಇತರೇ ಮಾಹಿತಿಯನ್ನು ಒಳಗೊಂಡಿರುವ ಯಾವುದೇ ದಸ್ತಾವೇಜನ್ನು ನೀಡತಕ್ಕದ್ದು.

(3) ತೆರಿಗೆದಾಯಕ ಸೇವೆಯ ಪೂರೈಕೆದಾರ, ಸರಕು ಸಾಗಾಣಿಕೆ ವಾಹನದಲ್ಲಿ ರಸ್ತೆಯಮೂಲಕ ಸರಕುಗಳ ಸಾಗಾಣಿಕೆಗೆ ಸಂಬಂಧಿಸಿದಂತೆ ಸೇವೆಯನ್ನು ಪೂರೈಕೆ ಮಾಡುತ್ತಿರುವ ಸರಕು ಸಾಗಾಣಿಕೆಯ ಏಜೆನ್ಸಿಯಾಗಿದ್ದಲ್ಲಿ, ಸದರಿ ಪೂರೈಕೆದಾರ, ಒಂದು ತೆರಿಗೆ ಬೆಲೆಪಟ್ಟಿಯನ್ನು ಅಥವಾ ಅದಕ್ಕೆ ಬದಲಾಗಿ, ರವಾನೆ ಸರಕಿನ ಒಟ್ಟುತೂಕ, ಸರಕುಗಳ ರವಾನೆದಾರರ, ಸ್ವೀಕರಿಸುವವರ ಹೆಸರು, ಸರಕುಗಳನ್ನು ಸಾಗಿಸಿದ ಸರಕು ಸಾಗಾಣಿಕೆ ವಾಹನದ ನೋಂದಣಿ ಸಂಖ್ಯೆ, ಸಾಗಾಣಿಕೆ ಮಾಡಿದ ಸರಕುಗಳ ವಿವರ, ಮೂಲಸ್ಥಳದ ಮತ್ತು ಗಮ್ಯಸ್ಥಾನದ ವಿವರಗಳು,ಸರಕುಗಳ ರವಾನೆದಾರನಾಗಿ, ಸ್ವೀಕರಿಸುವವನಾಗಿ ಅಥವಾ ಸರಕು ಸಾಗಾಣಿಕೆ ಏಜೆನ್ಸಿಯಾಗಿ ತೆರಿಗೆ ಸಂದಾಯ ಮಾಡಲು ಬಾಧ್ಯನಿರುವ ವ್ಯಕ್ತಿಯ ಸರಕು ಮತ್ತು ಸೇವೆಗಳ ತೆರಿಗೆ ಗುರುತಿನ ಸಂಖ್ಯೆಯನ್ನು ಒಳಗೊಂಡಿರುವ ಮತ್ತು ನಿಯಮ 46ರ ಅಡಿಯಲ್ಲಿ ನಮೂದಿಸಿದಂತೆ ಇತರೆ ಮಾಹಿತಿಯನ್ನೂ ಸಹ ಒಳಗೊಂಡಿರುವ ಯಾವದಾದರು ಹೆಸರಿನಿಂದ ಕರೆಯಲಾಗುವ, ದಸ್ತಾವೇಜನ್ನು ನೀಡತಕ್ಕದ್ದು.

(4) ತೆರಿಗೆದಾಯಕ ಸೇವೆಯ ಪೂರೈಕೆದಾರನು, ಪ್ರಯಾಣಿಕರ ಸಾರಿಗೆ ಸೇವೆಯನ್ನು ಪೂರೈಕೆ ಮಾಡುತ್ತಿದ್ದಲ್ಲಿ, ಒಂದು ತೆರಿಗೆ ಬೆಲೆಪಟ್ಟಿಯು, ಯಾವುದೇ ರೂಪದಲ್ಲಿ, ಯಾವದಾದರು ಹೆಸರಿನಿಂದ ಕರೆಯಲಾಗುವ, ಅನುಕ್ರಮ ಸಂಖ್ಯೆಯನ್ನು ಹೊಂದಿರಲಿ ಅಥವಾ ಇಲ್ಲದಿರಲಿ ಮತ್ತು ಸೇವೆಯನ್ನು ಸ್ವೀಕರಿಸುವವನ ವಿಳಾಸವನ್ನು ಒಳಗೊಂಡಿರಲಿ ಅಥವಾ ಇಲ್ಲದಿರಲಿ ಆದರೆ ನಿಯಮ 46ರ ಅಡಿಯಲ್ಲಿ ನಮೂದಿಸಿದಂತೆ ಇತರೆ ಮಾಹಿತಿಯನ್ನು ಒಳಗೊಂಡಿರುವ ಟಿಕೇಟನ್ನು ಒಳಗೊಂಡಿರತಕ್ಕದ್ದು.

(5) ಉಪನಿಯಮ (2) ಅಥವಾ ಉಪನಿಯಮ (4)ರ ಉಪಬಂಧಗಳು, ನಿಯಮ 49 ಅಥವಾ ನಿಯಮ 50 ಅಥವಾ ನಿಯಮ 51 ಅಥವಾ ನಿಯಮ 52 ಅಥವಾ ನಿಯಮ 53ರ ಅಡಿಯಲ್ಲಿ ನೀಡಲಾದ ದಸ್ತಾವೇಜುಗಳಿಗೆ ಯಥೋಚಿತ ವ್ಯತ್ಯಾಸಗಳೊಡನೆ ಅನ್ವಯವಾಗತಕ್ಕದ್ದು.

55. ಬೆಲೆಪಟ್ಟಿ ನೀಡದೇ ಸರಕುಗಳ ಸಾಗಾಣಿಕೆ:– (1) ಕೆಳಕಂಡ ಉದ್ದೇಶಗಳಿಗಾಗಿ–

(ಎ) ಪೂರೈಕೆದಾರನ ವ್ಯವಹಾರ ಸ್ಥಳದಿಂದ ತೆಗೆಯುವ ಸಮಯದಲ್ಲಿ ಪ್ರಮಾಣ ಗೊತ್ತಿಲ್ಲದಿರುವ, ದ್ರವ ಅನಿಲದ ಪೂರೈಕೆಗಾಗಿ,

(ಬಿ) ಮಜೂರಿ ಕೆಲಸಕ್ಕೆ ಸರಕುಗಳ ಸಾಗಾಣಿಕೆ;

(ಸಿ) ಪೂರೈಕೆಯ ರೂಪದಲ್ಲಿರುವುದನ್ನು ಹೊರತುಪಡಿಸಿದ ಇತರೇ ಕಾರಣಗಳಿಗಾಗಿ ಸರಕುಗಳ ಸಾಗಾಣಿಕೆ; ಅಥವಾ

(ಡಿ) ಮಂಡಳಿಯಿಂದ ಅಧಿಸೂಚಿಸಬಹುದಾದ ಅಂಥ ಇತರೆ ಪೂರೈಕೆಗಳಿಗಾಗಿ,

ಸರಕುಗಳ ರವಾನೆದಾರ, ಸಾಗಾಣಿಕೆಗಾಗಿ ಸರಕನ್ನು ತೆಗೆಯುವ ಸಮಯದಲ್ಲಿ, ಬೆಲೆಪಟ್ಟಿಗೆ ಬದಲಾಗಿ,ಒಂದು ಅಥವಾ ಬಹು ಶ್ರೇಣಿಗಳಲ್ಲಿರುವ ಹದಿನಾರು ಅಕ್ಷರಗಳನ್ನು ಮೀರಿಲ್ಲದ, ಅನುಕ್ರಮವಾದ ಸಂಖ್ಯೆಯನ್ನ ಹೊಂದಿರುವ, ಕೆಳಕಂಡ ವಿವರಗಳನ್ನು ಹೊಂದಿರುವ ಬಟವಾಡೆ ಚಲನನ್ನು, ನೀಡತಕ್ಕದ್ದು, ಅಂದರೆ:–

(i) ಬಟವಾಡೆ ಚಲನ್ನಿನ ದಿನಾಂಕ ಮತ್ತು ಸಂಖ್ಯೆ;
(ii) ಸರಕುಗಳ ರವಾನೆದಾರನ ನೋಂದಾಯಿತನಾಗಿದ್ದರೆ, ಅವನ ವಿಳಾಸ ಮತ್ತು ಸರಕು ಮತ್ತು ಸೇವೆಗಳ ತೆರಿಗೆಯ ಗುರುತಿನ ಸಂಖ್ಯೆ ಅಥವಾ ವಿಶಿಷ್ಟ ಗುರುತಿನ ಸಂಖ್ಯೆ;
(iii) ನೋಂದಾಯಿತನಾಗಿದ್ದರೆ, ಸರಕುಗಳ ರವಾನೆಯನ್ನು ಸ್ವೀಕರಿಸುವವನ, ವಿಳಾಸ ಮತ್ತು ಸರಕು ಮತ್ತು ಸೇವೆಗಳ ತೆರಿಗೆಯ ಗುರುತಿನ ಸಂಖ್ಯೆ ಅಥವಾ ವಿಶಿಷ್ಟ ಗುರುತಿನ ಸಂಖ್ಯೆ;
(iv) ಸರಕು ಅಥವಾ ಸೇವೆಗಳಿಗಾಗಿ ಹಾರ್ಮೊನೈಸಡ್ ಸಿಸ್ಟಂ ಆಫ್ ನೋಮಿನಕ್ಲೇಚರ್ ಕೋಡ್;
(v) ಪ್ರಮಾಣ (ತಾತ್ಕಾಲಿಕವಾಗಿ, ಮಾಡಲಾಗಿರುವ ಪೂರೈಕೆ ಸರಿಯಾದ ಪ್ರಮಾಣವು ತಿಳಿದಿಲ್ಲದಿರುವಾಗ);

(vi) ತೆರಿಗೆದಾಯಕ ಮೌಲ್ಯ;

(vii) ಸರಕುಗಳ ರವಾನೆಯನ್ನು ಸ್ವೀಕರಿಸುವವನಿಗೆ ಪೂರೈಕೆಗಾಗಿ ಸಾಗಾಣಿಕೆಯಾಗಿದ್ದಲ್ಲಿ, ತೆರಿಗೆ ದರ ಮತ್ತು ತೆರಿಗೆ ಮೊತ್ತ– ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಏಕೀಕೃತ ತೆರಿಗೆ, ಕೇಂದ್ರಾಡಳಿತ ಪ್ರದೇಶ ತೆರಿಗೆ ಅಥವಾ ಉಪಕರ;

(viii) ಅಂತರ್–ರಾಜ್ಯ ಸಾಗಾಣಿಕೆಯ ಸಂದರ್ಭದಲ್ಲಿ, ಪೂರೈಕೆಯ ಸ್ಥಳ; ಮತ್ತು

(ix) ಸಹಿ.

(2) ಸರಕುಗಳ ಪೂರೈಕೆಯ ಸಂದರ್ಭದಲ್ಲಿ, ಬಟವಾಡೆ ಚಲನನ್ನು'ಕೆಳಕಂಡ ವಿಧಾನದಲ್ಲಿ, ತ್ರಿಪ್ರತಿಯಲ್ಲಿ ಸಿದ್ಧಪಡಿಸತಕ್ಕಸತಕ್ಕದ್ದು, ಅಂದರೆ:–

(ಎ) ಮೂಲಪ್ರತಿಯು, ಸರಕುಗಳ ರವಾನೆದಾರನಿಗಾಗಿ ಮೂಲಪ್ರತಿ ಎಂದು ಗುರುತು ಮಾಡಿರಬೇಕು;

(ಬಿ) ದ್ವಿಪ್ರತಿಯು, ಸಾಗಾಣಿಕೆದಾರನಿಗಾಗಿ ದ್ವಿಪ್ರತಿ ಎಂದು ಗುರುತು ಮಾಡಿರಬೇಕು; ಮತ್ತು

(ಸಿ) ತ್ರಿಪ್ರತಿಯು, ಸರಕುಗಳ ರವಾನೆಯನ್ನು ಸ್ವೀಕರಿಸುವವನಿಗಾಗಿ ತ್ರಿಪ್ರತಿ ಎಂದು ಗುರುತು ಮಾಡಿರಬೇಕು.

(3) ಬೆಲೆಪಟ್ಟಿಗೆ ಬದಲಾಗಿ ಒಂದು ಬಟವಾಡೆ ಚಲನ್ ಮೇಲೆ ಸರಕುಗಳು ಸಾಗಾಣಿಕೆಯಾಗಿದ್ದಲ್ಲಿ, ಅದನ್ನು ನಿಯಮ 138ರಲ್ಲಿ ನಿರ್ದಿಷ್ಟಪಡಿಸಿದಂತೆ ಘೋಷಿಸತಕ್ಕದ್ದು.

(4) ಸ್ವೀಕರಿಸುವವನಿಗೆ ಪೂರೈಕೆ ಮಾಡುವ ಉದ್ದೇಶದಿಂದ ಸರಕುಗಳನ್ನು ಸಾಗಣೆ ಮಾಡುತಿದ್ದು ಆದರೆ, ಪೂರೈಕೆಯ ಉದ್ದೇಶಗಳಿಗಾಗಿ ಸರಕುಗಳನ್ನು ತೆಗೆಯುವ ಸಮಯದಲ್ಲಿ ಬೆಲೆಪಟ್ಟಿಯನ್ನು ನೀಡಲು ಸಾಧ್ಯವಾಗದಿದ್ದಲ್ಲಿ, ಪೂರೈಕೆದಾರನು, ಸರಕುಗಳು ಬಟವಾಡೆಯ ನಂತರ ಬೆಲೆಪಟ್ಟಿಯನ್ನು ನೀಡತಕ್ಕದ್ದು.

(5) ಅರೆ ಬೇರ್ಪಡಿಸಿದ ಅಥವಾಸಂಪೂರ್ಣ ಬೇರ್ಪಡಿಸಿದಸ್ಥಿತಿಯಲ್ಲಿ ಸರಕುಗಳನ್ನು ಸಾಗಾಣಿಕೆ ಮಾಡುತ್ತಿದ್ದಲ್ಲಿ–

(ಎ) ಪೂರೈಕೆದಾರನು, ಮೊದಲನೆಯ ಸರಕು ರವಾನೆಯನ್ನು ರವಾನಿಸುವ ಮೊದಲು ಸಂಪೂರ್ಣ ಬೆಲೆಪಟ್ಟಿಯನ್ನು ನೀಡತಕ್ಕದ್ದು ;

(ಬಿ) ಪೂರೈಕೆದಾರನು, ತರುವಾಯದ ಪ್ರತಿಯೊಂದು ಸರಕು ರವಾನೆಗಳಿಗಾಗಿ, ಬೆಲೆಪಟ್ಟಿಯ ಉಲ್ಲೇಖವನ್ನು ನೀಡಿ ಒಂದು ಬಟವಾಡೆ ಚಲನ್‌ನ್ನು ನೀಡತಕ್ಕದ್ದು;

(ಸಿ) ಪ್ರತಿಯೊಂದು ಸರಕು ರವಾನೆಯು, ಯುಕ್ತವಾಗಿ ಪ್ರಮಾಣೀಕರಿಸಿದ ಬೆಲೆಪಟ್ಟಿಯ ಪ್ರತಿಯ ಜೊತೆಗಿನಿ ಸಂಬಂಧಿತ ಬಟವಾಡೆ ಚಲನ್‌ನ ಪ್ರತಿಗಳಿಂದ ಜೊತೆಗೂಡಿರತಕ್ಕದ್ದು; ಮತ್ತು

(ಡಿ) ಕೊನೆಯ ಸರಕುರವಾನೆಯ ಜೊತೆಗೆ ಬೆಲೆಪಟ್ಟಿಯ ಮೂಲ ಪ್ರತಿಯನ್ನು ಕಳುಹಿಸತಕ್ಕದ್ದು.

ಅಧ್ಯಾಯ – VII
ಲೆಕ್ಕಪತ್ರಗಳು ಮತ್ತು ದಾಖಲೆಗಳು

56. ನೋಂದಾಯಿತ ವ್ಯಕ್ತಿಗಳಿಂದ ಲೆಕ್ಕಪತ್ರಗಳ ನಿರ್ವಹಣೆ.– (1) ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಪ್ರಕರಣ 35ರ ಉಪಪ್ರಕರಣ (1)ರಲ್ಲಿ ನಮೂದಿಸಿದ ವಿವರಗಳಿಗೆ ಹೆಚ್ಚುವರಿಯಾಗಿ, ಆಮದು ಮಾಡಿಕೊಂಡ ಅಥವಾ ರಫ್ತಾ ಮಾಡಿದ ಸರಕು ಅಥವಾ ಸೇವೆಗಳ ಅಥವಾ ಹಿಮ್ಮುಖ ವಿಧಿಸುವಿಕೆಯ ಆಧಾರದಲ್ಲಿ ತೆರಿಗೆ ಸಂದಾಯವನ್ನು ಆಕರ್ಷಿಸಿರುವ ಪೂರೈಕೆಗಳ ನಿಜವಾದ ಮತ್ತು ಸರಿಯಾದ ಲೆಕ್ಕವನ್ನು, ಬೆಲೆಪಟ್ಟಿಗಳು, ಪೂರೈಕೆ ಬಿಲ್ಲುಗಳು, ಬಟವಾಡೆ ಚಲನ್‌ಗಳು, ಜಮೆ ಚೀಟಿಗಳು, ಖರ್ಚು ಚೀಟಿಗಳು, ರಸೀದಿ ವೋಚರ್‌ಗಳು, ಸಂದಾಯ ವೋಚರ್‌ಗಳು ಮತ್ತು ಮರುಪಾವತಿ ವೋಚರ್‌ಗಳನ್ನು ಒಳಗೊಂಡಂತೆ, ಸಂಬಂಧಿತ ದಸ್ತಾವೇಜುಗಳೊಂದಿಗೆ ಇಡತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(2) ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವ ಒಬ್ಬ ವ್ಯಕ್ತಿಯನ್ನು ಹೊರತುಪಡಿಸಿದ,

ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಆತನಿಂದ ಸ್ವೀಕೃತವಾದ ಮತ್ತು ಪೂರೈಕೆ ಮಾಡಲಾದ ಸರಕುಗಳಿಗೆ ಸಂಬಂಧಿಸಿದಂತೆ ದಾಸ್ತಾನಿನ ಲೆಕ್ಕಪತ್ರಗಳನ್ನು ನಿರ್ವಹಿಸತಕ್ಕದ್ದು, ಮತ್ತು ಅಂಥ ಲೆಕ್ಕಪತ್ರಗಳು, ಪ್ರಾರಂಭಿಕ ಶಿಲ್ಕು, ಸ್ವೀಕೃತಿ, ಪೂರೈಕೆ, ಕಳೆದುಹೋದ, ಕಳ್ಳತನವಾದ, ನಾಶಗೊಂಡ, ಲೆಕ್ಕದಿಂದ ತೆಗೆದುಹಾಕಿದ ಅಥವಾ ಉಡುಗೊರೆಯಾಗಿ ಅಥವಾ ಉಚಿತ ಮಾದರಿಗಳಾಗಿ ವಿಲೇ ಮಾಡಲಾದ ಸರಕುಗಳು ಮತ್ತು ಕಚ್ಚಾ ಸಾಮಗ್ರಿಗಳು, ಸಿದ್ಧಪಡಿಸಿದ ಸರಕುಗಳು, ಅವುಗಳ ರದ್ದಿ ಮತ್ತು ತ್ಯಾಜ್ಯವನ್ನು ಒಳಗೊಂಡಂತೆ ದಾಸ್ತಾನಿನ ಉಳಿಕೆಯ ವಿವರಗಳನ್ನು ಒಳಗೊಂಡಿರತಕ್ಕದ್ದು.

(3) ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಮುಂಗಡಗಳ ಸ್ವೀಕೃತಿ, ಸಂದಾಯ ಮತ್ತು ಅದಕ್ಕಾಗಿ ಮಾಡಿದ ಹೊಂದಾಣಿಕೆಗಳ ಲೆಕ್ಕಗಳನ್ನು ಪ್ರತ್ಯೇಕವಾಗಿ ಇಡತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(4) ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವ ಒಬ್ಬ ವ್ಯಕ್ತಿಯನ್ನು ಹೊರತುಪಡಿಸಿದ, ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು,ಯಾವುದೇ ತೆರಿಗೆ ಅವಧಿಯಲ್ಲಿ ನೀಡಿದ ಅಥವಾ ಸ್ವೀಕರಿಸಿದ ತೆರಿಗೆ ಬೆಲೆಪಟ್ಟಿಗಳ, ಜಮೆ ಚೀಟಿಗಳು, ಖರ್ಚು ಚೀಟಿಗಳ, ಬಟವಾಡೆ ಚಲನ್‌ನ ರಿಜಿಸ್ಟರ್ ಜೊತೆಯಲ್ಲಿ ಸಂದಾಯ ಮಾಡಬೇಕಾದ ತೆರಿಗೆ (ಪ್ರಕರಣ 9ರ ಉಪಪ್ರಕರಣ (3) ಮತ್ತು ಉಪಪ್ರಕರಣ (4)ರ ಉಪಬಂಧಗಳಿಗೆ ಅನುಸಾರವಾಗಿ ಸಂದಾಯ ಮಾಡಬೇಕಾದ ತೆರಿಗೆಯನ್ನು ಒಳಗೊಂಡಂತೆ), ಸಂಗ್ರಹಿಸಿದ ಮತ್ತು ಸಂದಾಯ ಮಾಡಿದ ತೆರಿಗೆ, ಹೂಡುವಳಿ ತೆರಿಗೆ, ಉಪಯೋಗಿಸಿದ ಹೂಡುವಳಿ ತೆರಿಗೆ ಜಮೆಯ ವಿವರಗಳನ್ನು ಒಳಗೊಂಡಿರುವ ಲೆಕ್ಕವನ್ನು ಇಡತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(5) ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು,–

(ಎ) ಅಧಿನಿಯಮದ ಅಡಿಯಲ್ಲಿ ತೆರಿಗೆಯನ್ನು ವಿಧಿಸಬಹುದಾದ ಸರಕು ಅಥವಾ ಸೇವೆಗಳನ್ನು ಅವನು ಯಾರಿಂದ ಸ್ವೀಕರಿಸಿರುವನೋ ಆ ಪೂರೈಕೆದಾರರ ಹೆಸರಗಳು ಮತ್ತು ಸಂಪೂರ್ಣ ವಿಳಾಸಗಳು;

(ಬಿ) ಈ ಅಧ್ಯಾಯದ ಉಪಬಂಧಗಳ ಅಡಿಯಲ್ಲಿ ಅಗತ್ಯಪಡಿಸಿರುವಾಗ, ಅವನು ಯಾರಿಗೆ ಸರಕು ಅಥವಾ ಸೇವೆಗಳನ್ನು ಪೂರೈಕೆ ಮಾಡಿರವರೋ ಆ ವ್ಯಕ್ತಿಗಳ ಹೆಸರುಗಳು ಮತ್ತು ಸಂಪೂರ್ಣ ವಿಳಾಸಗಳು;

(ಸಿ) ಸಾಗಾಣಿಕೆಯ ಸಮಯದಲ್ಲಿ ದಾಸ್ತಾನು ಮಾಡಿರುವ ಸರಕುಗಳನ್ನು ಒಳಗೊಂಡಂತೆ, ಆತನು ಸರಕುಗಳನ್ನು ಎಲ್ಲಿ ದಾಸ್ತಾನು ಮಾಡಿರವನೋ, ಆ ಸ್ಥಳದ ಸಂಪೂರ್ಣ ವಿಳಾಸ, ಅದರಲ್ಲಿ ಸಂಗ್ರಹ ಮಾಡಿರುವ ದಾಸ್ತಾನಿನ ವಿವರಗಳನ್ನು,

–ಇಡತಕ್ಕದ್ದು.

(6) ಉಪನಿಯಮ (5)ರ ಅಡಿಯಲ್ಲಿ ಘೋಷಿಸಿದವುಗಳನ್ನು ಹೊರತುಪಡಿಸಿಇತರೇ ಯಾವುದೇ ಸ್ಥಳ(ಗಳು)ದಲ್ಲಿ ಯಾವುದೇ ತೆರಿಗೆದಾಯಕ ಸರಕುಗಳನ್ನು ಯಾವುದೇ ಸಿಂಧುವಾದ ದಸ್ತಾವೇಜುಗಳಿಲ್ಲದೆ, ದಾಸ್ತಾನು ಮಾಡಿರುವುದು ಕಂಡುಬಂದರೆ, ಯುಕ್ತ ಅಧಿಕಾರಿಯು, ಅಂಥ ಸರಕುಗಳು ನೋಂದಾಯಿತ ವ್ಯಕ್ತಿಯು ಪೂರೈಕೆ ಮಾಡಿದ್ದರೇ ಹೇಗೋ ಹಾಗೆಯೇ ಅಂಥ ಸರಕುಗಳ ಮೇಲೆ ಸಂದಾಯ ಮಾಡಬೇಕಾದ ತೆರಿಗೆಯ ಮೊತ್ತವನ್ನು ನಿರ್ಧರಿಸತಕ್ಕದ್ದು.

(7) ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ನೋಂದಣಿ ಪ್ರಮಾಣ ಪತ್ರದಲ್ಲಿ ನಮೂದಿಸಲಾದ ತನ್ನ ಪ್ರಧಾನ ವ್ಯವಹಾರದ ಸ್ಥಳದಲ್ಲಿ ಲೆಕ್ಕಪತ್ರದ ಪುಸ್ತಕಗಳನ್ನು ಮತ್ತು ವ್ಯವಹಾರದ ಹೆಚ್ಚುವರಿ ಸ್ಥಳಕ್ಕೆ ಸಂಬಂಧಿಸಿದ ಲೆಕ್ಕಪತ್ರದ ಪುಸ್ತಕಗಳನ್ನು ಇಡತಕ್ಕದ್ದು ಮತ್ತು ಅಂಥ ಲೆಕ್ಕಪತ್ರದ ಪುಸ್ತಕಗಳು ಯಾವುದೇ ವಿದ್ಯುನ್ಮಾನ ಸಾಧನಗಳಲ್ಲಿ ಸಂಗ್ರಹಿಸಿದ ಯಾವುದೇ ವಿದ್ಯುನ್ಮಾನ ರೂಪದ ದತ್ತಾಂಶವನ್ನು ಒಳಗೊಂಡಿರತಕ್ಕದ್ದು.

(8) ರಿಜಿಸ್ಟ್ರರ್‌ಗಳಲ್ಲಿ, ಲೆಕ್ಕಪತ್ರಗಳಲ್ಲಿ ಮತ್ತು ದಸ್ತಾವೇಜುಗಳಲ್ಲಿನ ಯಾವುದೇ ನಮೂದನ್ನು, ಅಳಿಸುವುದು, ಹೊಡೆದುಹಾಕುವುದು ಅಥವಾ ತಿದ್ದಿ ಬರೆಯುವುದನ್ನು ಮಾಡತಕ್ಕದ್ದಲ್ಲ ಮತ್ತು ಕೈತಪ್ಪಿನ ಸ್ವರೂಪದಲ್ಲಿರುವವುಗಳನ್ನು ಹೊರತುಪಡಿಸಿದ ಎಲ್ಲಾ ತಪ್ಪಾಗಿರುವ ನಮೂದುಗಳನ್ನು ಧೃಢೀಕರಣದ ಮೂಲಕಹೊಡೆದುಹಾಕತಕ್ಕದು ಮತ್ತು ಸರಿಯಾದ ನಮೂದನ್ನು ದಾಖಲಿಸತಕ್ಕದ್ದು ಮತ್ತು ರಿಜಿಸ್ಟರ್‌ಗಳು ಮತ್ತು ಇತರೇ ದಸ್ತಾವೇಜುಗಳನ್ನು ವಿದ್ಯುನ್ಮಾನ ರೀತಿಯಲ್ಲಿ ನಿರ್ವಹಿಸಲಾಗಿದ್ದಲ್ಲಿ, ಪ್ರತಿಯೊಂದು ನಮೂದನ್ನು ಎಡಿಟ್ ಮಾಡಿದ ಮತ್ತು ಡಿಲೀಟ್ ಮಾಡಿದ ಲಾಗ್‌ನ್ನು ನಿರ್ವಹಿಸತಕ್ಕದ್ದು.

(9) ನೋಂದಾಯಿತ ವ್ಯಕ್ತಿಯು ಕೈಯಿಂದ ನಿರ್ವಹಿಸಿದ ಲೆಕ್ಕ ಪುಸ್ತಕಗಳ ಪ್ರತಿ ಸಂಪುಟವು ಕ್ರಮ ಸಂಖ್ಯೆಯನ್ನು ಹೊಂದಿರತಕ್ಕದ್ದು.

(10) ನೋಂದಣಿ ಪ್ರಮಾಣ ಪತ್ರದಲ್ಲಿ ನಮೂದಿಸಿರುವುಗಳನ್ನು ಹೊರತುಪಡಿಸಿದ ಯಾವುದೇ ಸ್ಥಳಗಳಲ್ಲಿ, ಒಬ್ಬ ನೋಂದಾಯಿತ ವ್ಯಕ್ತಿಗೆ ಸೇರಿದ ಯಾವುದೇ ದಸ್ತಾವೇಜುಗಳು, ರಿಜಿಸ್ಟರ್‌ಗಳು, ಅಥವಾ ಯಾವುದೇ ಲೆಕ್ಕಪತ್ರ ಪುಸ್ತಗಳು ಕಂಡಬಂದರೆ, ಅನ್ಯಥಾ ಸಾಬೀತುಪಡಿಸಿದ ಹೊರತು, ಅವುಗಳು ಸದರಿ ನೋಂದಾಯಿತ ವ್ಯಕ್ತಿಯಿಂದ ನಿರ್ವಹಿಸಲ್ಪಟ್ಟಿವೆ ಎಂದು ಭಾವಿಸತಕ್ಕದ್ದು.

(11) ಪ್ರಕರಣ 2ರ ಖಂಡ (5)ರಲ್ಲಿ ಉಲ್ಲೇಖಿಸಲಾದ ಪ್ರತಿಯೊಬ್ಬ ಏಜೆಂಟನು ಕೆಳಕಂಡವುಗಳನ್ನು ನಿರೂಪಿಸುವ ಲೆಕ್ಕಪತ್ರಗಳನ್ನು ನಿರ್ವಹಿಸತಕ್ಕದ್ದು.–

(ಎ) ಅಂಥ ಪ್ರಧಾನಕರ್ತನ ಪರವಾಗಿ ಪ್ರತ್ಯೇಕವಾಗಿ ಸರಕು ಅಥವಾ ಸೇವೆಗಳನ್ನು ಸ್ವೀಕರಿಸುವುದಕ್ಕಾಗಿ ಅಥವಾ ಪೂರೈಕೆ ಮಾಡುವುದಕ್ಕಾಗಿ ಪ್ರತಿಯೊಬ್ಬ ಪ್ರಧಾನ ಕರ್ತನಿಂದ ಆತನು ಸ್ವೀಕರಿಸುವ ಪ್ರಾಧಿಕರಣದ ವಿವರಗಳು;

(ಬಿ) ಪ್ರತಿಯೊಬ್ಬ ಪ್ರಧಾನಕರ್ತನ ಪರವಾಗಿ ಸ್ವೀಕರಿಸಿದ ಸರಕು ಅಥವಾ ಸೇವೆಗಳ ವಿವರಣೆ, ಮೌಲ್ಯ ಮತ್ತು ಪ್ರಮಾಣವನ್ನು (ಅನ್ವಯವಾಗುವಲ್ಲೆಲ್ಲ) ಒಳಗೊಂಡ ವಿವರಗಳು;

(ಸಿ) ಪ್ರತಿಯೊಬ್ಬ ಪ್ರಧಾನಕರ್ತನ ಪರವಾಗಿ ಪೂರೈಕೆ ಮಾಡಿದ ಸರಕು ಅಥವಾ ಸೇವೆಗಳ ವಿವರಣೆ, ಮೌಲ್ಯ ಮತ್ತು ಪ್ರಮಾಣವನ್ನು (ಅನ್ವಯವಾಗುವಲ್ಲೆಲ್ಲ) ಒಳಗೊಂಡ ವಿವರಗಳು;

(ಡಿ) ಪ್ರತಿಯೊಬ್ಬ ಪ್ರಧಾನಕರ್ತನಿಗೆ ಒದಗಿಸಿದ ಲೆಕ್ಕಪತ್ರಗಳ ವಿವರಗಳು; ಮತ್ತು

(ಇ) ಪ್ರತಿಯೊಬ್ಬ ಪ್ರಧಾನಕರ್ತನ ಪರವಾಗಿ ಮಾಡಿದ ಸರಕು ಅಥವಾ ಸೇವೆಗಳ ಸ್ವೀಕೃತಿ ಅಥವಾ ಪೂರೈಕೆಯ ಮೇಲೆ ಸಂದಾಯ ಮಾಡಿದ ತೆರಿಗೆ.

(12) ಸರಕುಗಳನ್ನು ಉತ್ಪಾದಿಸುತ್ತಿರುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಉತ್ಪಾದನೆಯಲ್ಲಿ ಬಳಸಿದ ಕಚ್ಚಾ ಸಾಮಗ್ರಿಗಳ ಮತ್ತು ಸೇವೆಗಳ ಪರಿಮಾಣಾತ್ಮಕ ವಿವರಗಳು ಮತ್ತು ಅವುಗಳ ತ್ಯಾಜ್ಯ ಮತ್ತು ಉಪ ಉತ್ಪನ್ನಗಳನ್ನು ಒಳಗೊಂಡಂತೆ ಹಾಗೆ ಉತ್ಪಾದನೆ ಮಾಡಲಾದ ಸರಕುಗಳ, ಪರಿಮಾಣಾತ್ಮಕ ವಿವರಗಳನ್ನು ತೋರಿಸುವ ಮಾಸಿಕ ಉತ್ಪಾದನಾ ಲೆಕ್ಕಪತ್ರಗಳನ್ನು ನಿರ್ವಹಿಸತಕ್ಕದ್ದು.

(13) ಸೇವೆಗಳನ್ನು ಪೂರೈಕೆ ಮಾಡುತ್ತಿರುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಸೇವೆಗಳನ್ನು ಒದಗಿಸುವುದರಲ್ಲಿ ಬಳಸಿದ ಕಚ್ಚಾ ಸರಕುಗಳ ಪರಿಮಾಣಾತ್ಮಕ ವಿವರಗಳು ಮತ್ತು ಬಳಕೆ ಮಾಡಿದ ಹೂಡುವಳಿ ಸೇವೆಗಳು ಮತ್ತು ಪೂರೈಕೆ ಮಾಡಿದ ಸೇವೆಗಳ ವಿವರಗಳನ್ನು ತೋರಿಸುವ ಲೆಕ್ಕಪತ್ರಗಳನ್ನು ನಿರ್ವಹಿಸತಕ್ಕದ್ದು.

(14) ಗುತ್ತಿಗೆ ಕಾಮಗಾರಿಯನ್ನು ನಿರ್ವಹಿಸುತ್ತಿರುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಕೆಳಕಂಡವುಗಳನ್ನು ತೋರಿಸುವ ಪ್ರತ್ಯೇಕವಾದ ಲೆಕ್ಕಪತ್ರಗಳನ್ನು ನಿರ್ವಹಿಸತಕ್ಕದ್ದು–

(ಎ) ಯಾರ ಪರವಾಗಿ ಗುತ್ತಿಗೆ ಕಾಮಗಾರಿಯನ್ನು ನಿರ್ವಹಿಸಲಾಗಿದೆಯೋ ಆ ವ್ಯಕ್ತಿಗಳ ಹೆಸರಗಳು ಮತ್ತು ವಿಳಾಸಗಳು;

(ಬಿ) ಗುತ್ತಿಗೆ ಕಾಮಗಾರಿಗಾಗಿ ಸ್ವೀಕರಿಸಿದ ಸರಕು ಅಥವಾ ಸೇವೆಗಳ ವಿವರಣೆ, ಮೌಲ್ಯ ಮತ್ತು ಪ್ರಮಾಣವನ್ನು (ಅನ್ವಯವಾಗುವಲ್ಲೆಲ್ಲ);

(ಸಿ) ಗುತ್ತಿಗೆ ಕಾಮಗಾರಿಯಲ್ಲಿ ಬಳಕೆ ಮಾಡಿದ ಸರಕು ಅಥವಾ ಸೇವೆಗಳ ವಿವರಣೆ, ಮೌಲ್ಯ ಮತ್ತು ಪ್ರಮಾಣವನ್ನು (ಅನ್ವಯವಾಗುವಲ್ಲೆಲ್ಲ);

(ಡಿ) ಪ್ರತಿ ಗುತ್ತಿಗೆ ಕಾಮಗಾರಿಗೆ ಸಂಬಂಧಿಸಿದಂತೆ ಸ್ವೀಕರಿಸಿದ ಸಂದಾಯದ ವಿವರಗಳು; ಮತ್ತು

(ಇ) ಯಾರಿಂದ ಸರಕು ಅಥವಾ ಸೇವೆಗಳನ್ನು ಸ್ವೀಕರಿಸಲಾಗಿದೆಯೋ ಆ ಪೂರೈಕೆದಾರರ ಹೆಸರಗಳು ಮತ್ತು ವಿಳಾಸಗಳು;

(15) ಈ ಅಧ್ಯಾಯದ ಉಪಬಂಧಗಳ ಅಡಿಯಲ್ಲಿನ ದಾಖಲೆಗಳನ್ನು ವಿದ್ಯುನ್ಮಾನ ರೂಪದಲ್ಲಿ ನಿರ್ವಹಿಸತಕ್ಕದ್ದು ಮತ್ತು ಹಾಗೆ ನಿರ್ವಹಿಸಿದ ದಾಖಲೆಯನ್ನು ಡಿಜಿಟಲ್ ಸಹಿಯ ಮೂಲಕ ಅಧಿಪ್ರಮಾಣಿಸತಕ್ಕದ್ದು.

(16) ನೊಂದಾಯಿತ ವ್ಯಕ್ತಿಯಿಂದ, ದಾಸ್ತಾನುಗಳು, ಬಟವಾಡೆಗಳು, ಒಳಮುಖ ಪೂರೈಕೆ ಮತ್ತು ಹೊರಮುಖ ಪೂರೈಕೆಗೆ ಸಂಬಂಧಿಸಿದ, ತೆರಿಗೆ ಬೆಲೆಪಟ್ಟಿಗಳ, ಪೂರೈಕೆ ಬಿಲ್ಲುಗಳು, ಜಮೆ ಚೀಟಿಗಳು, ಖರ್ಚು ಚೀಟಿಗಳ, ಬಟವಾಡೆ ಚಲನ್‌ನ ಜೊತೆಯಲ್ಲಿ ನಿರ್ವಹಿಸಲಾದ ಲೆಕ್ಕಪತ್ರಗಳನ್ನು, ಪ್ರಕರಣ 36ರಲ್ಲಿ ಉಪಬಂಧಿಸಿದ ಅವಧಿಗಾಗಿ ಸಂರಕ್ಷಿಸತಕ್ಕದ್ದು ಮತ್ತು, ಅಂಥ ಲೆಕ್ಕಪತ್ರಗಳು ಮತ್ತು ದಸ್ತಾವೇಜುಗಳನ್ನು ಕೈಯ್ಯಾರೆಯಾಗಿ ನಿರ್ವಹಿಸಲಾಗಿದ್ದಲ್ಲಿ, ನೋಂದಣಿ ಪ್ರಮಾಣಪತ್ರದಲ್ಲಿ ನಮೂದಿಸಿದ ಸಂಬಂಧಿಸಿದ ಪ್ರತಿಯೊಂದು ವ್ಯವಹಾರ ಸ್ಥಳದಲ್ಲಿ ಇಡತಕ್ಕದ್ದು ಮತ್ತು ಅಂಥ ಲೆಕ್ಕಪತ್ರಗಳು ಮತ್ತು ದಸ್ತಾವೇಜುಗಳನ್ನು ಡಿಜಿಟಲ್ ಮೂಲಕ ನಿರ್ವಹಿಸಲಾಗಿದ್ದಲ್ಲಿ, ಅಂಥ ಸಂಬಂಧಿಸಿದ ಪ್ರತಿಯೊಂದು ವ್ಯವಹಾರ ಸ್ಥಳದಲ್ಲಿ ಪ್ರವೇಶಿಸುವಂತಿರತಕ್ಕದ್ದು.

(17) ಸಾಗಾಣಿಕೆದಾರ ಅಥವಾ ತೀರುವೆ ಮತ್ತು ರವಾನಿಸುವ ಏಜೆಂಟ್‌ನ ಸಾಮರ್ಥ್ಯದಲ್ಲಿ, ಅವುಗಳ ಬಟವಾಡೆ ಅಥವಾ ರವಾನೆ ಮಾಡುವುದಕ್ಕಾಗಿ ಸರಕುಗಳ ಮೇಲೆ ಅಭಿರಕ್ಷೆಯನ್ನು ಹೊಂದಿರುವ ಯಾವೊಬ್ಬ ವ್ಯಕ್ತಿಯು, ಅಂಥ ನೋಂದಾಯಿತ ವ್ಯಕ್ತಿಯ ಪರವಾಗಿ ಅವನು ನಿರ್ವಹಿಸಿದ ಅಂಥ ಸರಕುಗಳಿಗೆ ಸಂಬಂಧಿಸಿದಂತೆ ನಿಜವಾದ ಮತ್ತು ಸರಿಯಾದ ದಾಖಲೆಗಳನ್ನು ನಿರ್ವಹಿಸತಕ್ಕದ್ದು ಮತ್ತು ಯುಕ್ತಅಧಿಕಾರಿಯಿಂದ ಅಗತ್ಯಪಡಿಸಿದಾಗ ಅವುಗಳ ವಿವರಗಳನ್ನು ಹಾಜರುಪಡಿಸತಕ್ಕದ್ದು.

(18) ಕೋರಿಕೆಯ ಮೇರೆಗೆ, ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಅವನಿಗೆ ನಿರ್ವಹಿಸಲು ಅಗತ್ಯಪಡಿಸಿದ ಲೆಕ್ಕಪತ್ರ ಪುಸ್ತಕಗಳನ್ನು ಹಾಜರುಪಡಿಸತಕ್ಕದ್ದು.

57. ವಿದ್ಯುನ್ಮಾನ ದಾಖಲೆಗಳ ಸೃಜನೆ ಮತ್ತು ನಿರ್ವಹಣೆ.– (1) ಅಂಥ ದಾಖಲೆಗಳು ಅಪಘಾತಗಳಿಂದಾಗಿ ಅಥವಾ ನೈಸರ್ಗಿಕ ಕಾರಣಗಳಿಂದಾಗಿ ನಾಶಗೊಂಡಲ್ಲಿ, ಮಾಹಿತಿಯನ್ನು ಯುಕ್ತವಾದ ಸಮಯದಲ್ಲಿ ವಾಪಸ್ಸು ಪಡೆಯಬಹುದಾದ ಅಂಥ ವಿಧಾನದಲ್ಲಿ ದಾಖಲೆಗಳ ಯುಕ್ತ ವಿದ್ಯುನ್ಮಾನ ನೆರವಿನ ಪ್ರತಿಯನ್ನು (ಛಚಿಛಿಞ–ಣಠಿ) ನಿರ್ವಹಿಸತಕ್ಕದ್ದು ಮತ್ತು ಸಂರಕ್ಷಿಸತಕ್ಕದ್ದು.

(2) ವಿದ್ಯುನ್ಮಾನ ದಾಖಲೆಗಳನ್ನು ನಿರ್ವಹಿಸುತ್ತಿರುವ ನೋಂದಾಯಿತ ವ್ಯಕ್ತಿಯು, ಕೋರಿಕೆಯ ಮೇರೆಗೆ, ಆತನಿಂದ ಯುಕ್ತವಾಗಿ ಪ್ರಾಧಿಕೃತವಾದ ದಾಖಲೆಗಳು ಅಥವಾ ದಸ್ತಾವೇಜುಗಳನ್ನು, ಮುದ್ರಿತ ಪ್ರತಿಯಲ್ಲಿ ಅಥವಾ ವಿದ್ಯುನ್ಮಾನ ರೀತಿಯಲ್ಲಿ ಓದಬಹುದಾದ ಯಾವುದೇ ರೂಪದಲ್ಲಿ ಹಾಜರುಪಡಿಸತಕ್ಕದ್ದು.

(3) ಲೆಕ್ಕಪತ್ರಗಳು ಮತ್ತು ದಾಖಲೆಗಳು ನೋಂದಾಯಿತ ವ್ಯಕ್ತಿಯಿಂದ ವಿದ್ಯುನ್ಮಾನ ರೀತಿಯಲ್ಲಿ ಸಂಗ್ರಹವಾಗಿದ್ದಲ್ಲಿ, ಆತನು, ಕೋರಿಕೆಯ ಮೇರೆಗೆ, ಅಂಥ ಫೈಲ್‌ಗಳ, ಅಂಥ ಫೈಲ್‌ಗಳ ಪಾಸ್‌ವರ್ಡ್‌ಗಳ ವಿವರಗಳನ್ನು ಮತ್ತು ಸಂಪರ್ಕಾವಕಾಶಕ್ಕಾಗಿ ಅವಶ್ಯಕವಿರುವಲ್ಲಿ, ಬಳಸಲಾದ ಕೋಡ್‌ಗಳಿಗಾಗಿ ವಿವರಣೆಯನ್ನು ಮತ್ತು ಅಂಥ ಸಂಪರ್ಕಾವಕಾಶಕ್ಕಾಗಿ ಅಗತ್ಯವಿರುವ ಮಾಹಿತಿಯನ್ನು, ಅಂಥ ಫೈಲ್‌ಗಳಲ್ಲಿ ಸಂಗ್ರಹಿಸಿದ ಮಾಹಿತಿಯ ಮುದ್ರಿತ ರೂಪದಲ್ಲಿನ ಮಾದರಿ ಪ್ರತಿಯೊಂದಿಗೆ ಒದಗಿಸತಕ್ಕದ್ದು.

58. ಗೋದಾಮು ಅಥವಾ ಉಗ್ರಾಣದ ಮಾಲೀಕ ಅಥವಾ ನಿರ್ವಾಹಕ ಮತ್ತು ಸಾಗಾಣಿಕೆದಾರರುಗಳಿಂದ ನಿರ್ವಹಿಸಬೇಕಾದ ದಾಖಲೆಗಳು.– (1) ಪ್ರಕರಣ 35ರ ಉಪಪ್ರಕರಣ (2)ರ ಉಪಬಂಧಗಳಿಗೆ ಅನುಸಾರವಾಗಿ ದಾಖಲೆಗಳು ಮತ್ತು

ಲೆಕ್ಕಪತ್ರಗಳನ್ನು ನಿರ್ವಹಿಸುವುದು ಅಗತ್ಯವಿರುವ ಪ್ರತಿಯೊಬ್ಬ ವ್ಯಕ್ತಿಯು, ಈಗಾಗಲೇ ಅಧಿನಿಯಮದ ಅಡಿಯಲ್ಲಿ ನೋಂದಣಿಯಾಗಿಲ್ಲದಿದ್ದರೆ, ಆತನ ವ್ಯವಹಾರಕ್ಕೆ ಸಂಬಂಧಿಸದ ವಿವರಗಳನ್ನು, **ನಮೂನೆ ಇಎನ್‌ಆರ್–1**ರಲ್ಲಿ ಸಾಮಾನ್ಯ ಪೋರ್ಟಲ್‌ನ ಮುಖಾಂತರ ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಸಲ್ಲಿಸತಕ್ಕದ್ದು, ಒದಗಿಸಿದ ಮಾಹಿತಿಯ ಸಿಂಧುಗೊಳಿಸುವಿಕೆಯ ತರುವಾಯ, ಒಂದು ವಿಶಿಷ್ಟ ದಾಖಲಾತಿ ಸಂಖ್ಯೆಯನ್ನು ಸೃಷ್ಟಿಸತಕ್ಕದ್ದು ಮತ್ತು ಸದರಿ ವ್ಯಕ್ತಿಗೆ ತಿಳಿಸತಕ್ಕದ್ದು.

(2) ಯಾವುದೇ ಇತರ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿ ಮೇಲೆ ಹೇಳಲಾದಂತೆ, ಉಪನಿಯಮ (1)ರ ಅಡಿಯಲ್ಲಿ ದಾಖಲಾತಿಯಾದ ವ್ಯಕ್ತಿಯು, ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿ ದಾಖಲಾತಿಯಾಗಿದ್ದಾನೆ ಎಂದು ಪರಿಭಾವಿಸತಕ್ಕದ್ದು.

(3) ಉಪನಿಯಮ (1)ರ ಅಡಿಯಲ್ಲಿ ದಾಖಲಾತಿಯಾದ ಪ್ರತಿಯೊಬ್ಬ ವ್ಯಕ್ತಿಯು, **ನಮೂನೆ ಇಎನ್‌ಆರ್–1**ರಲ್ಲಿ ಒದಗಿಸಿದ ವಿವರಗಳನ್ನು, ಸಾಮಾನ್ಯ ಪೋರ್ಟಲ್‌ನ ಮುಖಾಂತರ ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಅಗತ್ಯವಿರುವಲ್ಲಿ ತಿದ್ದುಪಡಿ ಮಾಡತಕ್ಕದ್ದು.

(4) ನಿಯಮ 56ರ ಉಪಬಂಧಗಳಿಗೆ ಒಳಪಟ್ಟು,–

(ಎ) ಸರಕುಗಳ ಸಾಗಾಣಿಕೆಯ ವ್ಯವಹಾರದಲ್ಲಿ ತೊಡಗಿರುವ ಯಾವುದೇ ವ್ಯಕ್ತಿ, ಸಾಗಾಣಿಕೆ ಮಾಡಿದ, ಬಟವಾಡೆ ಮಾಡಿದ ಸರಕುಗಳ ಮತ್ತು ಆತನಿಂದ ಸಾಗಾಣಿಕೆಯಲ್ಲಿ ಸಂಗ್ರಹಿಸಿದ ಸರಕುಗಳ ದಾಖಲೆಗಳನ್ನು, ನೋಂದಾಯಿತ ಸರಕು ರವಾನೆದಾರನ ಮತ್ತು ಸ್ವೀಕರಿಸುವವನ ಆತನ ಪ್ರತಿಯೊಂದು ಶಾಖೆಗಳಿಗಾಗಿ ಸರಕು ಮತ್ತು ಸೇವೆಗಳ ತೆರಿಗೆ ಗುರುತಿನ ಸಂಖ್ಯೆಯ ಜೊತೆಯಲ್ಲಿ ನಿರ್ವಹಿಸತಕ್ಕದ್ದು.

(ಬಿ) ಒಂದು ಉಗ್ರಾಣ ಅಥವಾ ಗೋದಾಮುವಿನ ಪ್ರತಿಯೊಬ್ಬ ಮಾಲೀಕ ಅಥವಾ ನಿರ್ವಾಹಕನು, ಉಗ್ರಾಣದಲ್ಲಿ, ಸರಕುಗಳ ಉಳಿದಿದ್ದ ಅವಧಿಗೆ ಸಂಬಂಧಿಸಿದಂತೆ ಲೆಕ್ಕಪತ್ರ ಪುಸ್ತಕಗಳನ್ನು, ಅಂಥ ಸರಕುಗಳ ರವಾನೆ, ಸಾಗಾಣಿಕೆ, ಸ್ವೀಕೃತಿ ಮತ್ತು ವಿಲೇವಾರಿಯ ವಿವರಗಳನ್ನು ಒಳಗೊಂಡಂತೆ ನಿರ್ವಹಿಸತಕ್ಕದ್ದು.

(5) ಒಂದು ಉಗ್ರಾಣ ಅಥವಾ ಗೋದಾಮುವಿನ ಪ್ರತಿಯೊಬ್ಬ ಮಾಲೀಕ ಅಥವಾ ನಿರ್ವಾಹಕನು, ಸರಕುಗಳನ್ನು, ಅವುಗಳನ್ನು ವಸ್ತುವಾರು ಮತ್ತು ಮಾಲೀಕರವಾರು ಗುರುತಿಸಬಹುದಾದ ಅಂಥ ವಿಧಾನದಲ್ಲಿ ಸಂಗ್ರಹಿಸತಕ್ಕದ್ದು ಮತ್ತು ಯುಕ್ತ ಅಧಿಕಾರಿಯ ಯಾವುದೇ ಭೌತಿಕ ಪರಿಶೀಲನೆ ಅಥವಾ ತಪಾಸಣೆಗೆ ಕೋರಿಕೆಯ ಮೇರೆಗೆ ನೆರವುನೀಡತಕ್ಕದ್ದು.

ಅಧ್ಯಾಯ– VIII
ರಿಟರ್ನ್‌ಗಳು

59. ಹೊರಮುಖ ಪೂರೈಕೆಗಳ ವಿವರಗಳನ್ನು ಒದಗಿಸುವ ನಮೂನೆ ಮತ್ತು ವಿಧಾನ. (1) ಪ್ರಕರಣ 37ರ ಅಡಿಯಲ್ಲಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಹೊರ ಮುಖ ಪೂರೈಕೆಯ ವಿವರಗಳನ್ನು ಸಲ್ಲಿಸುವುದು ಅಗತ್ಯವಿರುವ, ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ ಪ್ರಕರಣ 14ರಲ್ಲಿ ಉಲ್ಲೇಖಿಸಲಾದ ವ್ಯಕ್ತಿಯನ್ನು ಹೊರತುಪಡಿಸಿದಂತಹ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಅಂಥ ವಿವರಗಳನ್ನು, **ನಮೂನೆ ಜಿಎಸ್‌ಟಿಆರ್–1**ರಲ್ಲಿ ಸಾಮಾನ್ಯ ಪೋರ್ಟಲ್‌ನ ಮುಖಾಂತರ ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಒದಗಿಸತಕ್ಕದ್ದು.

(2) ನಮೂನೆ ಜಿಎಸ್‌ಟಿಆರ್–1ರಲ್ಲಿ ಒದಗಿಸಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಹೊರಮುಖ ವಿವರಗಳು, ಇತರ ವಿಷಯಗಳೊಡನೆ, ಕೆಳಕಂಡವುಗಳನ್ನು ಒಳಗೊಂಡಿರತಕ್ಕದ್ದು,–

(ಎ) ಈ ಕೆಳಕಂಡ ಎಲ್ಲವುಗಳ ಬೆಲೆಪಟ್ಟಿವಾರು ವಿವರಗಳು,–

(i) ನೋಂದಾಯಿತ ವ್ಯಕ್ತಿಗಳಿಗೆ ಮಾಡಲಾದ ರಾಜ್ಯದೊಳಗಿನ ಮತ್ತು ಅಂತರ ರಾಜ್ಯದ ಪೂರೈಕೆಗಳು; ಮತ್ತು

(ii) ನೋಂದಾಯಿತರಲ್ಲದ ವ್ಯಕ್ತಿಗಳಿಗೆ ಮಾಡಲಾದ ಎರಡೂವರೆ ಲಕ್ಷ ರೂಪಾಯಿಗಳಿಗಿಂತ ಅಧಿಕವಾದ ಬೆಲೆಪಟ್ಟಿಯ ಮೌಲ್ಯದ ರಾಜ್ಯವಾರು ಅಂತರ್‌ರಾಜ್ಯ ಪೂರೈಕೆಗಳು.

(ಬಿ) ಈ ಕೆಳಕಂಡ ಎಲ್ಲವುಗಳ ಕ್ರೋಡೀಕೃತ ವಿವರಗಳು,–

(i) ಪ್ರತಿ ತೆರಿಗೆ ದರಕ್ಕಾಗಿ ನೋಂದಾಯಿತರಲ್ಲದ ವ್ಯಕ್ತಿಗಳಿಗೆ ಮಾಡಲಾದ ರಾಜ್ಯದೊಳಗಿನ ಪೂರೈಕೆಗಳು; ಮತ್ತು

(ii) ನೋಂದಾಯಿತರಲ್ಲದ ವ್ಯಕ್ತಿಗಳಿಗೆ ಮಾಡಲಾದ ಎರಡೂವರೆ ಲಕ್ಷ ರೂಪಾಯಿಗಳ ವರೆಗಿನ ಬೆಲೆಪಟ್ಟಿಯ ಮೌಲ್ಯದ ರಾಜ್ಯವಾರು ಅಂತರ್‌ರಾಜ್ಯ ಪೂರೈಕೆಗಳು.

(ಸಿ) ಹಿಂದೆ ನೀಡಿದ ಬೆಲೆ ಪಟ್ಟಿಗಾಗಿ, ಆ ತಿಂಗಳಿನಲ್ಲಿ ನೀಡಿದ ಖರ್ಚು ಮತ್ತು ಜಮೆ ಚೀಟಿಗಳೇನಾದರು ಇದ್ದರೆ ಅವುಗಳು.

(3) ಪೂರೈಕೆದಾರನು ಒದಗಿಸಿದ ಹೊರ ಮುಖ ಪೂರೈಕೆಯ ವಿವರಗಳನ್ನು, **ನಮೂನೆ ಜಿಎಸ್‌ಟಿಆರ್–02ಎ ನ ಭಾಗ–ಎ**ನಲ್ಲಿ, **ನಮೂನೆ ಜಿಎಸ್‌ಟಿಆರ್–4ಎ**ನಲ್ಲಿ ಮತ್ತು **ನಮೂನೆ ಜಿಎಸ್‌ಟಿಆರ್–6ಎ**ನಲ್ಲಿ, ಸಾಮಾನ್ಯ ಪೋರ್ಟಲ್ ಮೂಲಕ ಸಂಬಂಧಿತ ನೋಂದಾಯಿತ ವ್ಯಕ್ತಿಗಳಿಗೆ (ಸ್ವೀಕರಿಸುವವರು) **ನಮೂನೆ ಜಿಎಸ್‌ಟಿಆರ್–1**ನ್ನು ಸಲ್ಲಿಸುವ ಗಡುವು ದಿನಾಂಕದ ನಂತರ ವಿದ್ಯುನ್ಮಾನ ರೀತಿಯಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು.

(4) ಸ್ವೀಕರಿಸುವವನು ಪ್ರಕರಣ 38ರ ಅಡಿಯಲ್ಲಿನ ತನ್ನ **ನಮೂನೆ ಜಿಎಸ್‌ಟಿಆರ್–02**ರಲ್ಲಿ, ಅಥವಾ ಪ್ರಕರಣ 39ರ ಅಡಿಯಲ್ಲಿನ **ನಮೂನೆ ಜಿಎಸ್‌ಟಿಆರ್–4**ರಲ್ಲಿ ಅಥವಾ **ನಮೂನೆ ಜಿಎಸ್‌ಟಿಆರ್–6**ರಲ್ಲಿ, ಸೇರ್ಪಡೆ ಮಾಡಿದ, ಸರಿಪಡಿಸಿದ ಅಥವಾ ತೆಗೆದುಹಾಕಿದ ಒಳಮುಖ ಪೂರೈಕೆಗಳ ವಿವರಗಳನ್ನು, **ನಮೂನೆ ಜಿಎಸ್‌ಟಿಆರ್–1ಎ**ನಲ್ಲಿ ಪೂರೈಕೆದಾರನಿಗೆ ಸಾಮಾನ್ಯ ಪೋರ್ಟಲ್ ಮೂಲಕ ವಿದ್ಯುನ್ಮಾನ ರೀತಿಯಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು ಮತ್ತು ಅಂಥ ಪೂರೈಕೆದಾರನು ಸ್ವೀಕರಿಸುವವನಿಂದ ಮಾಡಲಾದ ಮಾರ್ಪಾಡುಗಳನ್ನು ಒಪ್ಪುವುದಾಗಲಿ ಅಥವಾ ತಿರಸ್ಕರಿಸುವುದಾಗಲಿ ಮಾಡುವುದು ಮತ್ತು ಮಾರ್ಪಾಡುಗಳನ್ನು ಒಪ್ಪಿದುದರಷ್ಟರ ಮಟ್ಟಿಗೆ ಈ ಮೊದಲು ಪೂರೈಕೆದಾರನಿಂದ ಒದಗಿಸಲಾದ **ನಮೂನೆ ಜಿಎಸ್‌ಟಿಆರ್–1** ತಿದ್ದುಪಡಿಯಾಗತಕ್ಕದ್ದು.

60. ಒಳಮುಖ ಪೂರೈಕೆಗಳ ವಿವರಗಳನ್ನು ಒದಗಿಸುವ ನಮೂನೆ ಮತ್ತು ವಿಧಾನ.– (1) ಪ್ರಕರಣ 38ರ ಉಪಪ್ರಕರಣ (2)ರ ಅಡಿಯಲ್ಲಿ ಒಂದು ತೆರಿಗೆ ಅವಧಿಯಲ್ಲಿ ಸ್ವೀಕರಿಸಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಳಮುಖ ಪೂರೈಕೆಯ ವಿವರಗಳನ್ನು ಸಲ್ಲಿಸುವುದು ಅಗತ್ಯವಿರುವ, ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ ಪ್ರಕರಣ 14ರಲ್ಲಿ ಉಲ್ಲೇಖಿಸಲಾದ ವ್ಯಕ್ತಿಯನ್ನು ಹೊರತುಪಡಿಸಿದಂತಹ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, **ನಮೂನೆ ಜಿಎಸ್‌ಟಿಆರ್–02ಎನ ಭಾಗ ಎ, ಭಾಗ ಬಿ ಮತ್ತು ಭಾಗ ಸಿ**ನಲ್ಲಿ ಒಳಗೊಂಡಿರುವ ವಿವರಗಳ ಆಧಾರದ ಮೇಲೆ, ಸದರಿ ಪ್ರಕರಣದ ಉಪ ಪ್ರಕರಣ (1)ರಲ್ಲಿ ನಿರ್ದಿಷ್ಟಪಡಿಸಿದಂತೆ ಅಂಥ ವಿವರಗಳನ್ನು ಸಿದ್ಧಪಡಿಸತಕ್ಕದ್ದು ಮತ್ತು ಪ್ರಕರಣ 38ರ ಉಪಪ್ರಕರಣ (2)ರ ಅಡಿಯಲ್ಲಿ ಒದಗಿಸಲು ಅಗತ್ಯವಿರುವ ಯಾವುದಾದರೂ ಅಂಥ ಇತರ ಒಳಮುಖ ಪೂರೈಕೆಗಳು ಏನಾದರು ಇದ್ದಲ್ಲಿ ಅದರಲ್ಲಿ ಸೇರಿಸಿದ ನಂತರ, ಅದನ್ನು **ನಮೂನೆ ಜಿಎಸ್‌ಟಿಆರ್–2**ರಲ್ಲಿ, ಸಾಮಾನ್ಯ ಪೋರ್ಟಲ್‌ನ ಮುಖಾಂತರ ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಒದಗಿಸತಕ್ಕದ್ದು.

(2) ಪ್ರಕರಣ 38ರ ಉಪಪ್ರಕರಣ (5)ರ ಅಡಿಯಲ್ಲಿ ಒದಗಿಸುವುದು ಅಗತ್ಯವಿರುವ ಯಾವುದಾದರೂ ವಿವರಗಳು ಏನಾದರು ಇದ್ದಲ್ಲಿ, ಅದನ್ನು **ನಮೂನೆ ಜಿಎಸ್‌ಟಿಆರ್–2**ರಲ್ಲಿ ವಿದ್ಯುನ್ಮಾನ ರೀತಿಯಲ್ಲಿ ಒದಗಿಸತಕ್ಕದ್ದು.

(3) ನೋಂದಾಯಿತ ವ್ಯಕ್ತಿಯು, **ನಮೂನೆ ಜಿಎಸ್‌ಟಿಆರ್–2**ರಲ್ಲಿ ಹೂಡುವಳಿ ತೆರಿಗೆ ಜಮೆಗಾಗಿ ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲಿ ಆತನು ಅರ್ಹನಾಗಿಲ್ಲದಿರುವುದಕ್ಕೆ ಸಂಬಂಧಿಸಿದ ಒಳಮುಖ ಪೂರೈಕೆಗಳನ್ನು, ಅಂಥ ಅರ್ಹತೆಯನ್ನು ಬೆಲೆಪಟ್ಟಿಯ ಮಟ್ಟದಲ್ಲಿಯೇ ನಿರ್ಧರಿಸಲು ಸಾಧ್ಯವಿದ್ದಲ್ಲಿ, ನಿರ್ದಿಷ್ಟಪಡಿಸತಕ್ಕದ್ದು.

(4) ನೋಂದಾಯಿತ ವ್ಯಕ್ತಿಯು, ತೆರಿಗೆ ರಹಿತ ಪೂರೈಕೆಗಳಿಗೆ ಅಥವಾ ವ್ಯವಹಾರವನ್ನು ಹೊರತುಪಡಿಸಿದ ಇತರ ಉದ್ದೇಶಗಳಿಗೆ ಮತ್ತು ಬೆಲೆಪಟ್ಟಿಯ ಮಟ್ಟದಲ್ಲಿಯೇ ನಿರ್ಧರಿಸಲು ಸಾಧ್ಯವಿಲ್ಲದಿರುವುದಕ್ಕೆ, ಸಂಬಂಧಿಸಬಹುದಾದ ಒಳಮುಖ ಪೂರೈಕೆಗಳ ಮೇಲಿನ ಅನರ್ಹ ಹೂಡುವಳಿ ತೆರಿಗೆ ಜಮೆಯ ಪ್ರಮಾಣವನ್ನು **ನಮೂನೆ ಜಿಎಸ್‌ಟಿಆರ್–2**ರಲ್ಲಿ ಘೋಷಿಸತಕ್ಕದ್ದು.

(5) ಒಬ್ಬ ಅನಿವಾಸಿ ತೆರಿಗೆದಾಯಕ ವ್ಯಕ್ತಿಯು, ನಿಯಮ 63ರ ಅಡಿಯಲ್ಲಿ **ನಮೂನೆ ಜಿಎಸ್‌ಟಿಆರ್–5**ರಲ್ಲಿನ ತನ್ನ ರಿಟರ್ನಿನಲ್ಲಿ ಒದಗಿಸಿದ ಬೆಲೆಪಟ್ಟಿಯ ವಿವರಗಳನ್ನು, ಸಾಮಾನ್ಯ ಪೋರ್ಟಲ್ ಮುಖಾಂತರ, ಜಮೆಯನ್ನು ಸ್ವೀಕರಿಸುವವನಿಗೆ **ನಮೂನೆ ಜಿಎಸ್‌ಟಿಆರ್–2ಎ** ಯ **ಭಾಗ ಎ** ನಲ್ಲಿ ವಿದ್ಯುನ್ಮಾನ ರೀತಿಯಲ್ಲಿ ಲಭ್ಯ ಮಾಡತಕ್ಕದ್ದು ಮತ್ತು ಸದರಿ ಸ್ವೀಕರಿಸುವವನು ಅದನ್ನು **ನಮೂನೆ ಜಿಎಸ್‌ಟಿಆರ್–2**ರಲ್ಲಿ ಸೇರಿಸಿಕೊಳ್ಳಬಹುದು.

(6) ಒಬ್ಬ ಹೂಡುವಳಿ ಸೇವೆ ಹಂಚಿಕೆದಾರನು, ನಿಯಮ 65ರ ಅಡಿಯಲ್ಲಿ **ನಮೂನೆ ಜಿಎಸ್‌ಟಿಆರ್–6**ರಲ್ಲಿನ ತನ್ನ ರಿಟರ್ನಿನಲ್ಲಿ ಒದಗಿಸಿದ ಬೆಲೆಪಟ್ಟಿಯ ವಿವರಗಳನ್ನು, ಸಾಮಾನ್ಯ ಪೋರ್ಟಲ್ ಮುಖಾಂತರ, ಜಮೆಯನ್ನು ಸ್ವೀಕರಿಸುವವನಿಗೆ **ನಮೂನೆ ಜಿಎಸ್‌ಟಿಆರ್–2ಎ**ಯ **ಭಾಗ ಬಿ** ಯಲ್ಲಿ ವಿದ್ಯುನ್ಮಾನ ರೀತಿಯಲ್ಲಿ ಲಭ್ಯ ಮಾಡತಕ್ಕದ್ದು ಮತ್ತು ಸದರಿ ಸ್ವೀಕರಿಸುವವನು ಅದನ್ನು ನಮೂನೆ ಜಿಎಸ್‌ಟಿಆರ್–2ರಲ್ಲಿ ಸೇರಿಸಿಕೊಳ್ಳಬಹುದು.

(7) ಒಬ್ಬ ಮುರುಗಡೆದಾರನು, ಪ್ರಕರಣ 39ರ ಉಪಪ್ರಕರಣ (3)ರ ಅಡಿಯಲ್ಲಿ **ನಮೂನೆ ಜಿಎಸ್‌ಟಿಆರ್–7**ರಲ್ಲಿ ಒದಗಿಸಿದ, ಮೂಲದಲ್ಲಿ ತೆರಿಗೆಯನ್ನು ಮುರುಗಡೆಗೊಳಿಸಿದ ವಿವರಗಳನ್ನು, ಸಾಮಾನ್ಯ ಪೋರ್ಟಲ್ ಮುಖಾಂತರ, ಮುರುಗಡೆಗೊಳಗಾಗುವನಿಗೆ **ನಮೂನೆ ಜಿಎಸ್‌ಟಿಆರ್–2ಎ**ಯ **ಭಾಗ ಸಿ** ಯಲ್ಲಿ ವಿದ್ಯುನ್ಮಾನ ರೀತಿಯಲ್ಲಿ ಲಭ್ಯ ಮಾಡತಕ್ಕದ್ದು ಮತ್ತು ಸದರಿ ಮುರುಗಡೆಗೊಳಗಾಗುವವನು ಅದನ್ನು **ನಮೂನೆ ಜಿಎಸ್‌ಟಿಆರ್–2**ರಲ್ಲಿ ಸೇರಿಸಿಕೊಳ್ಳಬಹುದು.

(8) ಒಬ್ಬ ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕನು, ಪ್ರಕರಣ 52ರ ಅಡಿಯಲ್ಲಿ **ನಮೂನೆ ಜಿಎಸ್‌ಟಿಆರ್–8**ರಲ್ಲಿ ಒದಗಿಸಿದ, ಮೂಲದಲ್ಲಿ ತೆರಿಗೆಯನ್ನು ಸಂಗ್ರಹಿಸಿದ ವಿವರಗಳನ್ನು, ಸಾಮಾನ್ಯ ಪೋರ್ಟಲ್ ಮುಖಾಂತರ, ಸಂಬಂಧಿಸಿದ ವ್ಯಕ್ತಿಗೆ **ನಮೂನೆ ಜಿಎಸ್‌ಟಿಆರ್–2ಎ**ಯ **ಭಾಗ ಸಿ** ಯಲ್ಲಿ ವಿದ್ಯುನ್ಮಾನ ರೀತಿಯಲ್ಲಿ ಲಭ್ಯ ಮಾಡತಕ್ಕದ್ದು ಮತ್ತು ಅಂಥ ವ್ಯಕ್ತಿಯು ಅದನ್ನು **ನಮೂನೆ ಜಿಎಸ್‌ಟಿಆರ್–2**ರಲ್ಲಿ ಸೇರಿಸಿಕೊಳ್ಳಬಹುದು.

(9) **ನಮೂನೆ ಜಿಎಸ್‌ಟಿಆರ್–2**ರಲ್ಲಿ ಒದಗಿಸಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಳಮುಖ ಪೂರೈಕೆಗಳ ವಿವರಗಳು, ಇತರ ವಿಷಯಗಳೊಡನೆ, ಕೆಳಕಂಡವುಗಳನ್ನು ಒಳಗೊಂಡಿರತಕ್ಕದ್ದು,–

(ಎ) ನೋಂದಾಯಿತ ಅಥವಾ ಅನೋಂದಾಯಿತ ವ್ಯಕ್ತಿಗಳಿಂದ ಸ್ವೀಕರಿಸಿದ ರಾಜ್ಯದೊಳಗಿನ ಮತ್ತು ಅಂತರ ರಾಜ್ಯದ ಎಲ್ಲಾ ಪೂರೈಕೆಗಳ ಬೆಲೆಪಟ್ಟಿವಾರು ವಿವರಗಳು;

(ಬಿ) ಸರಕು ಅಥವಾ ಸೇವೆಗಳನ್ನು ಆಮದು ಮಾಡಿರುವುದು; ಮತ್ತು

(ಸಿ) ಪೂರೈಕೆದಾರನಿಂದ ಸ್ವೀಕರಿಸಿದ ಖರ್ಚು ಮತ್ತು ಜಮೆ ಚೀಟಿಗಳು ಏನಾದರೂ ಇದ್ದರೆ.

61. ಮಾಸಿಕ ರಿಟರ್ನಿನ ಸಲ್ಲಿಕೆಯ ನಮೂನೆ ಮತ್ತು ವಿಧಾನ.– (1) ಏಕೀಕೃತ ಸರಕು ಮತ್ತು ಸೇವೆಗಳ ಅಧಿನಿಯಮ, 2017ರ ಪ್ರಕರಣ 14ರಲ್ಲಿ ಉಲ್ಲೇಖಿಸಲಾದ ವ್ಯಕ್ತಿ ಅಥವಾ ಒಬ್ಬ ಹೂಡುವಳಿ ಸೇವೆ ಹಂಚಿಕೆದಾರ ಅಥವಾ ಒಬ್ಬ ಅನಿವಾಸಿ ತೆರಿಗೆದಾಯಕ ವ್ಯಕ್ತಿ, ಪ್ರಕರಣ 10 ಅಥವಾ ಪ್ರಕರಣ 51ರ ಅಥವಾ ಸಂದರ್ಭಾನುಸಾರವಾಗಿ ಪ್ರಕರಣ 52 ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವ ವ್ಯಕ್ತಿಯನ್ನು ಹೊರತುಪಡಿಸಿದಂತೆ, ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಪ್ರಕರಣ 39ರ ಉಪಪ್ರಕರಣ (1)ರ ಅಡಿಯಲ್ಲಿ ನಿರ್ದಿಷ್ಟ ಪಡಿಸಿದ ಒಂದು ರಿಟರ್ನನ್ನು, **ನಮೂನೆ ಜಿಎಸ್‌ಟಿಆರ್–3**ರಲ್ಲಿ ಸಾಮಾನ್ಯ ಪೋರ್ಟಲ್‌ನ ಮುಖಾಂತರ ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ

ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಒದಗಿಸತಕ್ಕದ್ದು.

(2) ಉಪನಿಯಮ (1)ರ ಅಡಿಯಲ್ಲಿನ ರಿಟರ್ನನ ಭಾಗ ಎ ಯನ್ನು, **ನಮೂನೆ ಜಿಎಸ್‌ಟಿಆರ್–1, ನಮೂನೆ ಜಿಎಸ್‌ಟಿಆರ್–2**ರ ಮುಖಾಂತರ ಒದಗಿಸಿದ ಮಾಹಿತಿಯ ಆಧಾರದ ಮೇಲೆ ಮತ್ತು ಹಿಂದಿನ ತೆರಿಗೆ ಅವಧಿಗಳ ಇತರೇ ಬಾಧ್ಯತೆಗಳ ಆಧರಿಸಿ, ವಿದ್ಯುನ್ಮಾನ ರೀತಿಯಲ್ಲಿ ಸೃಷ್ಟಿಸತಕ್ಕದ್ದು.

(3) ಉಪನಿಯಮ (1)ರ ಅಡಿಯಲ್ಲಿ ರಿಟರ್ನನ್ನು ಒದಗಿಸುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಪ್ರಕರಣ 49ರ ಉಪಬಂಧಗಳಿಗೆ ಒಳಪಟ್ಟು, ವಿದ್ಯುನ್ಮಾನ ನಗದು ಖಾತೆಯಲ್ಲಿ ಅಥವಾ ವಿದ್ಯುನ್ಮಾನ ಜಮೆ ಖಾತೆಯಲ್ಲಿ ಖರ್ಚು ಹಾಕುವುದರ ಮೂಲಕ, ಅಧಿನಿಯಮ ಅಥವಾ ಈ ನಿಯಮಗಳ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆ, ಬಡ್ಡಿ, ದಂಡ, ಶುಲ್ಕ ಅಥವಾ ಇತರೆ ಮೊತ್ತಗಳ ಆತನ ಬಾಧ್ಯತೆಯನ್ನು ವಿಮೋಚಿಸತಕ್ಕದ್ದು ಮತ್ತು ಆ ವಿವರಗಳನ್ನು **ನಮೂನೆ ಜಿಎಸ್‌ಟಿಆರ್–3**ರ ಭಾಗ ಬಿ ಯಲ್ಲಿ ಸೇರಿಸತಕ್ಕದ್ದು.

(4) ಪ್ರಕರಣ 49ರ ಉಪಪ್ರಕರಣ (6)ರ ಉಪಬಂಧಗಳಿಗೆ ಅನುಸಾರವಾಗಿ, ವಿದ್ಯುನ್ಮಾನ ನಗದು ಖಾತೆಯಲ್ಲಿನ ಯಾವುದೇ ಉಳಿಕೆಯ ಮರುಪಾವತಿಯನ್ನು ಕ್ಲೇಮು ಮಾಡುವ ಒಬ್ಬ ನೋಂದಾಯಿತ ವ್ಯಕ್ತಿಯು, **ನಮೂನೆ ಜಿಎಸ್‌ಟಿಆರ್–3ರ ಭಾಗ ಬಿ** ಯಲ್ಲಿ ಅಂಥ ಮರುಪಾವತಿಯನ್ನು ಕ್ಲೇಮು ಮಾಡಬಹುದು ಮತ್ತು ಅಂಥ ರಿಟರ್ನನ್ನು ಪ್ರಕರಣ 54ರ ಅಡಿಯಲ್ಲಿ ಸಲ್ಲಿಸಲಾದ ಒಂದು ಅರ್ಜಿ ಎಂದು ಪರಿಭಾವಿಸತಕ್ಕದ್ದು.

(5) ಪ್ರಕರಣ 37ರ ಅಡಿಯಲ್ಲಿ **ನಮೂನೆ ಜಿಎಸ್‌ಟಿಆರ್–1** ರಲ್ಲಿ ಮತ್ತು ಪ್ರಕರಣ 38ರ ಅಡಿಯಲ್ಲಿ **ನಮೂನೆ ಜಿಎಸ್‌ಟಿಆರ್–2** ರಲ್ಲಿ ವಿವರಗಳನ್ನು ಒದಗಿಸುವುದರ ಕಾಲಮಿತಿಯನ್ನು ವಿಸ್ತರಣೆ ಮಾಡಲಾಗಿದ್ದಲ್ಲಿ ಮತ್ತು ಸನ್ನಿವೇಶಗಳು ಹಾಗೆ ಅಪೇಕ್ಷಿಸಿದ್ದಲ್ಲಿ, **ನಮೂನೆ ಜಿಎಸ್‌ಟಿಆರ್–3ಕ್ಕೆ** ಬದಲಾಗಿ ಆಯುಕ್ತರು, ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಿದ ಆ ರಿಟರ್ನನ್ನು **ನಮೂನೆ ಜಿಎಸ್‌ಟಿಆರ್–3ಬಿಯಲ್ಲಿ** ಒದಗಿಸತಕ್ಕದ್ದು.

62. ರಾಜಿ ತೆರಿಗೆಯ ಪೂರೈಕೆದಾರನಿಂದ ತ್ರೈಮಾಸಿಕ ರಿಟರ್ನಿನ ಸಲ್ಲಿಕೆಯ ನಮೂನೆ ಮತ್ತು ವಿಧಾನ.– (1) ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, **ನಮೂನೆ ಜಿಎಸ್‌ಟಿಆರ್–4ಎ** ಯಲ್ಲಿ ಒಳಗೊಂಡಿರುವ ವಿವರಗಳ ಆಧಾರದ ಮೇಲೆ ಮತ್ತು ಅಗತ್ಯವಿರುವಲ್ಲಿ, ವಿವರಗಳನ್ನು ಸೇರ್ಪಡೆ ಮಾಡುವುದು, ಸರಿಪಡಿಸುವುದು ಅಥವಾ ತೆಗೆದುಹಾಕುವುದನ್ನು ಮಾಡಿದ ನಂತರ, ತ್ರೈಮಾಸಿಕ ರಿಟರ್ನನ್ನು, ನಮೂನೆ **ಜಿಎಸ್‌ಟಿಆರ್–4ರಲ್ಲಿ** ಸಾಮಾನ್ಯ ಪೋರ್ಟಲ್‌ನ ಮುಖಾಂತರ ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಒದಗಿಸತಕ್ಕದ್ದು.

(2) ಉಪನಿಯಮ (1)ರ ಅಡಿಯಲ್ಲಿ ರಿಟರ್ನನ್ನು ಒದಗಿಸುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ವಿದ್ಯುನ್ಮಾನ ನಗದು ಖಾತೆಯಲ್ಲಿ ಖರ್ಚು ಹಾಕುವುದರ ಮೂಲಕ, ಅಧಿನಿಯಮ ಅಥವಾ ಈ ನಿಯಮಗಳ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆ, ಬಡ್ಡಿ, ದಂಡ, ಶುಲ್ಕ ಅಥವಾ ಇತರೇ ಮೊತ್ತಗಳ ಆತನ ಬಾಧ್ಯತೆಯನ್ನು ವಿಮೋಚಿಸತಕ್ಕದ್ದು.

(3) ಉಪನಿಯಮ (1)ರ ಅಡಿಯಲ್ಲಿ ಒದಗಿಸಿದ ರಿಟರ್ನು ಇತರ ವಿಷಯಗಳೊಡನೆ, ಕೆಳಕಂಡವುಗಳನ್ನು ಒಳಗೊಂಡಿರತಕ್ಕದ್ದು,–

(ಎ) ನೋಂದಾಯಿತ ಅಥವಾ ಅನೋಂದಾಯಿತ ವ್ಯಕ್ತಿಗಳಿಂದ ಸ್ವೀಕರಿಸಿದ ರಾಜ್ಯದೊಳಗಿನ ಮತ್ತು ಅಂತರ ರಾಜ್ಯದ ಎಲ್ಲಾ ಪೂರೈಕೆಗಳ ಬೆಲೆಪಟ್ಟಿವಾರು ವಿವರಗಳು; ಮತ್ತು

(ಬಿ)ಹೊರಮುಖ ಪೂರೈಕೆಗಳನ್ನು ಮಾಡಿರುವುದರ ಕ್ರೋಡೀಕೃತ ವಿವರಗಳು.

(4) ಪ್ರಕರಣ 10ರ ಅಡಿಯಲ್ಲಿ ಹಣಕಾಸು ವರ್ಷದ ಆರಂಭದಿಂದ ತೆರಿಗೆಯನ್ನು ಸಂದಾಯ ಮಾಡಲು ಆಯ್ಕೆ ಮಾಡಿಕೊಂಡಿರುವ ಒಬ್ಬ ನೋಂದಾಯಿತ ವ್ಯಕ್ತಿಯು, ಹಣಕಾಸು ವರ್ಷದ ತರುವಾಯ ಬರುವ ಸೆಪ್ಟಂಬರ್ ತಿಂಗಳಿಗೆ ರಿಟರ್ನನ್ನು ಒದಗಿಸುವುದಕ್ಕಾಗಿ ಅಥವಾ ನಿಕಟಪೂರ್ವ ಹಣಕಾಸು ವರ್ಷದ ವಾರ್ಷಿಕ ರಿಟರ್ನನ್ನು ಒದಗಿಸುವುದಕ್ಕಾಗಿ

ಇರುವ ಗಡುವು ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ, ಅಲ್ಲಿಯ ವರೆಗೆ ಅಗತ್ಯವಿರುವಲ್ಲಿ, ನಿಯಮ 59, ನಿಯಮ 60, ನಿಯಮ 61ರ ಅಡಿಯಲ್ಲಿನ ಹೊರಮುಖ ಮತ್ತು ಒಳಮುಖ ಪೂರೈಕೆಗಳ ವಿವರಗಳನ್ನು ಮತ್ತು ರಿಟರ್ನನ್ನು, ಅಂಥ ವಿವರಗಳನ್ನು ಮತ್ತು ರಿಟರ್ನುಗಳನ್ನು ವ್ಯಕ್ತಿಯು ಒದಗಿಸಲು ಬಾಧ್ಯನಿದ್ದ ಅವಧಿಗೆ ಸಂಬಂಧಿಸಿದಂತೆ ಒದಗಿಸತಕ್ಕದ್ದು.

ವಿವರಣೆ.– ಈ ಉಪನಿಯಮದ ಉದ್ದೇಶಕ್ಕಾಗಿ, ವ್ಯಕ್ತಿಯು, ತಾನು ರಾಜಿ ತೆರಿಗೆ ಯೋಜನೆಯನ್ನು ಆಯ್ಕೆ ಮಾಡಿಕೊಳ್ಳುವ ಹಿಂದಿನ ಅವಧಿಗಾಗಿ ಪೂರೈಕೆದಾರನಿಂದ ಸ್ವೀಕರಿಸಿದ ಬೆಲೆಪಟ್ಟಿಗಳು ಅಥವಾ ಖರ್ಚು ಚೀಟಿಗಳ ಮೇಲಿನ ಹೂಡುವಳಿ ತೆರಿಗೆ ಜಮೆಯನ್ನು ತೆಗೆದುಕೊಳ್ಳಲು ಅರ್ಹನಿರತಕ್ಕದ್ದಲ್ಲ ಎಂದು ಈ ಮೂಲಕ ಘೋಷಿಸಲಾಗಿದೆ.

(5) ಒಬ್ಬ ನೋಂದಾಯಿತ ವ್ಯಕ್ತಿಯು, ತನ್ನ ಸ್ವಂತ ಪ್ರೇರಣೆಯಿಂದ ರಾಜಿ ತೆರಿಗೆ ಯೋಜನೆಯಿಂದ ಹಿಂದೆ ಸರಿಯಲು ಆಯ್ಕೆ ಮಾಡಿಕೊಂಡಿದ್ದಲ್ಲಿ ಅಥವಾ ಯುಕ್ತ ಅಧಿಕಾರಿಯ ಸೂಚನೆಯ ಮೇರೆಗೆ ಆಯ್ಕೆಯನ್ನು ಹಿಂತೆಗೆದುಕೊಂಡಿದ್ದಲ್ಲಿ, ಅಗತ್ಯವಿರುವಲ್ಲಿ, ಹಣಕಾಸು ವರ್ಷದ ತರುವಾಯ ಬರುವ ಸೆಪ್ಟಂಬರ್ ತಿಂಗಳಿಗೆ ಕೊನೆಗೊಳ್ಳುವ ತ್ರೈಮಾಸಿಕಕ್ಕೆ ರಿಟರ್ನನ್ನು ಒದಗಿಸುವುದಕ್ಕಾಗಿ ಅಥವಾ ನಿಕಟಪೂರ್ವ ಹಣಕಾಸು ವರ್ಷದ ವಾರ್ಷಿಕ ರಿಟರ್ನನ್ನು ಒದಗಿಸುವುದಕ್ಕಾಗಿ ಇರುವ ಗಡುವು ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ, ಅಲ್ಲಿಯ ವರೆಗೆ ಪ್ರಕರಣ 9ರ ಅಡಿಯಲ್ಲಿನ ತೆರಿಗೆಯ ಸಂದಾಯಕ್ಕಾಗಿ ತಾನು ಆಯ್ಕೆ ಮಾಡಿಕೊಳ್ಳುವ ಹಿಂದಿನ ಅವಧಿಗೆ ಸಂಬಂಧಿಸಿದ ವಿವರಗಳನ್ನು, **ನಮೂನೆ ಜಿಎಸ್‌ಟಿಆರ್–4**ರಲ್ಲಿ ಒದಗಿಸತಕ್ಕದ್ದು.

63. ಅನಿವಾಸಿ ತೆರಿಗೆದಾಯಕ ವ್ಯಕ್ತಿಯಿಂದ ರಿಟರ್ನಿನ ಸಲ್ಲಿಕೆಯ ನಮೂನೆ ಮತ್ತು ವಿಧಾನ.– (1) ಪ್ರತಿಯೊಬ್ಬ ನೋಂದಾಯಿತ ಅನಿವಾಸಿ ತೆರಿಗೆದಾಯಕ ವ್ಯಕ್ತಿಯು, ಒಂದು ರಿಟರ್ನನ್ನು, ಅದರಲ್ಲಿ ಹೊರಮುಖ ಪೂರೈಕೆಗಳು ಮತ್ತು ಒಳಮುಖ ಪೂರೈಕೆಗಳ ವಿವರಗಳನ್ನು ಒಳಗೊಂಡು, **ನಮೂನೆ ಜಿಎಸ್‌ಟಿಆರ್–5ರ**ಲ್ಲಿ ಸಾಮಾನ್ಯ ಪೋರ್ಟಲ್‌ನ ಮುಖಾಂತರ ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಒದಗಿಸತಕ್ಕದ್ದು ಮತ್ತು ಅಧಿನಿಯಮ ಅಥವಾ ಈ ನಿಯಮಗಳ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆ, ಬಡ್ಡಿ, ದಂಡ, ಶುಲ್ಕ ಅಥವಾ ಇತರೇ ಮೊತ್ತಗಳನ್ನು ಒಂದು ತೆರಿಗೆ ಅವಧಿ ಕೊನೆಗೊಂಡ ಇಪ್ಪತ್ತು ದಿನಗಳ ಒಳಗಾಗಿ ಅಥವಾ ನೋಂದಣಿಯ ಸಿಂಧುತ್ವದ ಅವಧಿಯ ಕೊನೆಯ ದಿನದಿಂದ ಏಳು ದಿನಗಳ ಒಳಗಾಗಿ ಇವುಗಳಲ್ಲಿ ಯಾವುದು ಮೊದಲೋ, ಅದರೊಳಗಾಗಿ ಸಂದಾಯ ಮಾಡತಕ್ಕದ್ದು.

64. ಆನ್‌ಲೈನ್ ಮಾಹಿತಿ ಮತ್ತು ದತ್ತಾಂಶ ಸಂಗ್ರಹದ ಪ್ರವೇಶಾವಕಾಶ ಅಥವಾ ಮರುಪ್ರಾಪ್ತಿ ಸೇವೆಗಳನ್ನು ಒದಗಿಸುತ್ತಿರುವ ವ್ಯಕ್ತಿಗಳಿಂದ ರಿಟರ್ನಿನ ಸಲ್ಲಿಕೆಯ ನಮೂನೆ ಮತ್ತು ವಿಧಾನ.– ಭಾರತದ ಹೊರಗಡೆಯಿರುವ ಒಂದು ಸ್ಥಳದಿಂದ, ಭಾರತದಲ್ಲಿನ ಒಬ್ಬ ನೋಂದಾಯಿತ ವ್ಯಕ್ತಿಯನ್ನು ಹೊರತುಪಡಿಸಿದ ಒಬ್ಬ ವ್ಯಕ್ತಿಗೆ, ಆನ್‌ಲೈನ್ ಮಾಹಿತಿ ಮತ್ತು ದತ್ತಾಂಶ ಸಂಗ್ರಹದ ಪ್ರವೇಶಾವಕಾಶ ಅಥವಾ ಮರುಪ್ರಾಪ್ತಿ ಸೇವೆಗಳನ್ನು ಒದಗಿಸುತ್ತಿರುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, **ನಮೂನೆ ಜಿಎಸ್‌ಟಿಆರ್–5ಎ** ಯಲ್ಲಿ, ಒಂದು ರಿಟರ್ನನ್ನು, ಒಂದು ಕ್ಯಾಲೆಂಡರ್ ತಿಂಗಳ ಅಥವಾ ಅದರ ಭಾಗದ ತರುವಾಯವಾಗಿ ಬರುವ ತಿಂಗಳಿನ ಇಪ್ಪತ್ತನೇ ದಿನದಂದು ಅಥವಾ ಅದಕ್ಕಿಂತ ಮುಂಚಿತವಾಗಿ ಸಲ್ಲಿಸತಕ್ಕದ್ದು.

65. ಒಬ್ಬ ಹೂಡುವಳಿ ಸೇವೆ ಹಂಚಿಕೆದಾರನಿಂದ ರಿಟರ್ನಿನ ಸಲ್ಲಿಕೆಯ ನಮೂನೆ ಮತ್ತು ವಿಧಾನ.– (1) ಪ್ರತಿಯೊಬ್ಬ ಹೂಡುವಳಿ ಸೇವೆ ಹಂಚಿಕೆದಾರನು, **ನಮೂನೆ ಜಿಎಸ್‌ಟಿಆರ್–6ಎ** ಯಲ್ಲಿ ಒಳಗೊಂಡಿರುವ ವಿವರಗಳ ಆಧಾರದ ಮೇಲೆ ಮತ್ತು ಅಗತ್ಯವಿರುವಲ್ಲಿ, ವಿವರಗಳನ್ನು ಸೇರ್ಪಡೆ ಮಾಡುವುದು, ಸರಿಪಡಿಸುವುದು ಅಥವಾ ತೆಗೆದುಹಾಕುವುದನ್ನು ಮಾಡಿದ ನಂತರ, ಅವುಗಳ ಮೇಲೆ ಜಮೆಯನ್ನು ಸ್ವೀಕರಿಸಲಾಗಿರುವ ಮತ್ತು ಪ್ರಕರಣ 20ರ ಅಡಿಯಲ್ಲಿ ನೀಡಲಾಗಿರುವ ತೆರಿಗೆ ಬೆಲೆಪಟ್ಟಿಗಳ ವಿವರಗಳನ್ನು ಒಳಗೊಂಡಿರುವ ರಿಟರ್ನನ್ನು, **ನಮೂನೆ ಜಿಎಸ್‌ಟಿಆರ್–6**ರಲ್ಲಿ ಸಾಮಾನ್ಯ ಪೋರ್ಟಲ್‌ನ ಮುಖಾಂತರ ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಒದಗಿಸತಕ್ಕದ್ದು.

66. ಮೂಲದಲ್ಲಿ ತೆರಿಗೆಯನ್ನು ಮುರುಗಡೆ ಮಾಡುವುದು ಅಗತ್ಯವಿರುವ ಒಬ್ಬ ವ್ಯಕ್ತಿಯಿಂದ ರಿಟರ್ನಿನ ಸಲ್ಲಿಕೆಯ ನಮೂನೆ

ಮತ್ತು ವಿಧಾನ.– (1) ಪ್ರಕರಣ 51ರ ಅಡಿಯಲ್ಲಿ ಮೂಲದಲ್ಲಿ ತೆರಿಗೆಯನ್ನು ಮುರುಗಡೆ ಮಾಡುವುದು ಅಗತ್ಯವಿರುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಒಂದು ರಿಟರ್ನನ್ನು, **ನಮೂನೆ ಜಿಎಸ್‌ಟಿಆರ್–7ರಲ್ಲಿ** ಸಾಮಾನ್ಯ ಪೋರ್ಟಲ್‌ನ ಮುಖಾಂತರ ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಒದಗಿಸತಕ್ಕದ್ದು.

(2) ಉಪನಿಯಮ (1)ರ ಅಡಿಯಲ್ಲಿ ಒಬ್ಬ ಮುರುಗಡೆದಾರನು ಒದಗಿಸಿದ ವಿವರಗಳನ್ನು, ಪ್ರತಿಯೊಬ್ಬ ಪೂರೈಕೆದಾರರುಗಳಿಗೆ **ನಮೂನೆ ಜಿಎಸ್‌ಟಿಆರ್–2ಎಯ ಭಾಗ ಸಿ** ಯಲ್ಲಿ ಮತ್ತು **ನಮೂನೆ ಜಿಎಸ್‌ಟಿಆರ್–4ಎ** ಯಲ್ಲಿ ಸಾಮಾನ್ಯ ಪೋರ್ಟಲ್‌ನಲ್ಲಿ, **ನಮೂನೆ ಜಿಎಸ್‌ಟಿಆರ್–7ನ್ನು** ಸಲ್ಲಿಸಲು ಇರುವ ಗಡುವು ದಿನಾಂಕದ ನಂತರ ವಿದ್ಯುನ್ಮಾನ ರೀತಿಯಲ್ಲಿ ಲಭ್ಯ ಮಾಡತಕ್ಕದ್ದು.

(3) ಉಪನಿಯಮ (1)ರ ಅಡಿಯಲ್ಲಿ **ನಮೂನೆ ಜಿಎಸ್‌ಟಿಆರ್–7ಎ** ಯಲ್ಲಿ ಒದಗಿಸಿದ ರಿಟರ್ನಿನ ಆಧಾರದ ಮೇಲೆ, ಪ್ರಕರಣ 51ರ ಉಪಪ್ರಕರಣ (3)ರಲ್ಲಿ ಉಲ್ಲೇಖಿಸಲಾದ ಪ್ರಮಾಣ ಪತ್ರವನ್ನು, ಸಾಮಾನ್ಯ ಪೋರ್ಟಲ್‌ನಲ್ಲಿ, ವಿದ್ಯುನ್ಮಾನ ರೀತಿಯಲ್ಲಿ ನೀಡತಕ್ಕದ್ದು.

67. ಇ–ವಾಣಿಜ್ಯ ನಿರ್ವಾಹಕನ ಮೂಲಕ ಮಾಡಿರುವ ಪೂರೈಕೆಯ ವಿವರಪತ್ರದ ಸಲ್ಲಿಕೆಯ ನಮೂನೆ ಮತ್ತು ವಿಧಾನ.– (1) ಪ್ರಕರಣ 52ರ ಅಡಿಯಲ್ಲಿ ಮೂಲದಲ್ಲಿ ತೆರಿಗೆಯನ್ನು ಸಂಗ್ರಹಿಸುವುದು ಅಗತ್ಯವಿರುವ ಪ್ರತಿಯೊಬ್ಬ ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕನು, ಪ್ರಕರಣ 52ರ ಉಪಪ್ರಕರಣ (1)ರ ಅಡಿಯಲ್ಲಿ ಅಗತ್ಯವಿರುವಂತೆ ಅಂಥ ನಿರ್ವಾಹಕನ ಮುಖಾಂತರ ಮಾಡಿದ ಪೂರೈಕೆಗಳ ಮತ್ತು ಸಂಗ್ರಹಿಸಿದ ತೆರಿಗೆಯ ಮೊತ್ತದ ವಿವರಗಳನ್ನು ಒಳಗೊಂಡ ಒಂದು ವಿವರಪತ್ರವನ್ನು, **ನಮೂನೆ ಜಿಎಸ್‌ಟಿಆರ್–8**ರಲ್ಲಿ ಸಾಮಾನ್ಯ ಪೋರ್ಟಲ್‌ನ ಮುಖಾಂತರ ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಒದಗಿಸತಕ್ಕದ್ದು.

(2) ಉಪನಿಯಮ (1)ರ ಅಡಿಯಲ್ಲಿ ಒಬ್ಬ ನಿರ್ವಾಹಕನು ಒದಗಿಸಿದ ವಿವರಗಳನ್ನು, ಪ್ರತಿಯೊಬ್ಬ ಪೂರೈಕೆದಾರರುಗಳಿಗೆ **ನಮೂನೆ ಜಿಎಸ್‌ಟಿಆರ್–2ಎಯ ಭಾಗ ಸಿ** ಯಲ್ಲಿ ಸಾಮಾನ್ಯ ಪೋರ್ಟಲ್‌ನಲ್ಲಿ, **ನಮೂನೆ ಜಿಎಸ್‌ಟಿಆರ್–8**ನ್ನು ಸಲ್ಲಿಸಲು ಇರುವ ಗಡುವು ದಿನಾಂಕದ ನಂತರ ವಿದ್ಯುನ್ಮಾನ ರೀತಿಯಲ್ಲಿ ಲಭ್ಯ ಮಾಡತಕ್ಕದ್ದು.

68. ರಿಟರ್ನುಗಳನ್ನು ಸಲ್ಲಿಸದಿರುವವರಿಗೆ ಸೂಚನಾಪತ್ರ.– ಪ್ರಕರಣ 39 ಅಥವಾ ಪ್ರಕರಣ 44 ಅಥವಾ ಪ್ರಕರಣ 45 ಅಥವಾ ಪ್ರಕರಣ 52ರ ಅಡಿಯಲ್ಲಿ ರಿಟರ್ನನ್ನು ಒದಗಿಸಲು ವಿಫಲನಾದ ಒಬ್ಬ ನೋಂದಾಯಿತ ವ್ಯಕ್ತಿಗೆ ಒಂದು ಸೂಚನಾಪತ್ರವನ್ನು **ನಮೂನೆ ಜಿಎಸ್‌ಟಿಆರ್–3ಎ** ಯಲ್ಲಿ ವಿದ್ಯುನ್ಮಾನ ರೀತಿಯಲ್ಲಿ ನೀಡತಕ್ಕದ್ದು.

69. ಹೂಡುವಳಿ ತೆರಿಗೆ ಜಮೆಯ ಕ್ಲೇಮನ್ನು ಹೊಂದಾಣಿಕೆ ಮಾಡುವುದು.– ಆಮದುಗಳು, ಪ್ರಕರಣ 41ರ ಅಡಿಯಲ್ಲಿ ತಾತ್ಕಾಲಿಕವಾಗಿ ಅಂಗೀಕರಿಸಿದವುಗಳನ್ನು ಒಳಗೊಂಡಂತೆ, ಒಳಮುಖ ಪೂರೈಕೆಗಳ ಮೇಲಿನ ಹೂಡುವಳಿ ತೆರಿಗೆ ಜಮೆಯ ಕ್ಲೇಮಿಗೆ ಸಂಬಂಧಿಸಿದ ಕೆಳಕಂಡ ವಿವರಗಳನ್ನು, **ನಮೂನೆ ಜಿಎಸ್‌ಟಿಆರ್–3ನ್ನು** ಸಲ್ಲಿಸಲು ಇರುವ ಗಡುವು ದಿನಾಂಕದ ನಂತರ ಪ್ರಕರಣ 42ರ ಅಡಿಯಲ್ಲಿ ಹೊಂದಾಣಿಕೆ ಮಾಡತಕ್ಕದ್ದು.

(ಎ) ಪೂರೈಕೆದಾರನ ಜಿಎಸ್‌ಟಿಐಎನ್;

(ಬಿ) ಸ್ವೀಕರಿಸುವವನ ಜಿಎಸ್‌ಟಿಐಎನ್;

(ಸಿ) ಬೆಲೆಪಟ್ಟಿ ಅಥವಾ ಖರ್ಚು ಚೀಟಿಯ ಸಂಖ್ಯೆ;

(ಡಿ) ಬೆಲೆಪಟ್ಟಿ ಅಥವಾ ಜಮೆ ಚೀಟಿಯ ಸಂಖ್ಯೆ; ಮತ್ತು

(ಇ) ತೆರಿಗೆಯ ಮೊತ್ತ:

ಪರಂತು, ಪ್ರಕರಣ 37ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ **ನಮೂನೆ ಜಿಎಸ್‌ಟಿಆರ್–1ನ್ನು** ಮತ್ತು ಪ್ರಕರಣ 38ರ

ಅಡಿಯಲ್ಲಿ ನಿರ್ದಿಷ್ಟಪಡಿಸಿದ **ನಮೂನೆ ಜಿಎಸ್‌ಟಿಆರ್–2ನ್ನು** ಒದಗಿಸಲು ಇರುವ ಕಾಲಮಿತಿಯನ್ನು ವಿಸ್ತರಣೆ ಮಾಡಲಾಗಿದ್ದಲ್ಲಿ, ಅದಕ್ಕನುಗುಣವಾಗಿ ಹೂಡುವಳಿ ತೆರಿಗೆ ಜಮೆಗೆ ಸಂಬಂಧಿಸಿದ ಹೊಂದಾಣಿಕೆ ದಿನಾಂಕವು ಸಹ ವಿಸ್ತರಣೆಯಾಗತಕ್ಕದ್ದು:

ಮತ್ತು ಪರಂತು, ಆಯುಕ್ತರು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಹೂಡುವಳಿ ತೆರಿಗೆ ಜಮೆಯ ಹೊಂದಾಣಿಕೆಯ ದಿನಾಂಕವನ್ನು, ಆದೇಶದ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದ, ಅಂಥ ದಿನಾಂಕಕ್ಕೆ ವಿಸ್ತರಿಸಬಹುದು.

ವಿವರಣೆ.– ಈ ನಿಯಮದ ಉದ್ದೇಶಕ್ಕಾಗಿ ಈ ಮೂಲಕ ಘೋಷಿಸಿಸುವುದೇನೆಂದರೆ–

(i) ಸ್ವೀಕರಿಸುವವನಿಂದ **ನಮೂನೆ ಜಿಎಸ್‌ಟಿಆರ್–2ಎ** ಯ ಆಧಾರದ ಮೇಲೆ ತಿದ್ದುಪಡಿ ಮಾಡದೇ ಒಪ್ಪಲಾಗಿರುವ, **ನಮೂನೆ ಜಿಎಸ್‌ಟಿಆರ್–2**ರಲ್ಲಿನ ಬೆಲೆಪಟ್ಟಿಗಳು ಮತ್ತು ಖರ್ಚು ಚೀಟಿಗಳಿಗೆ ಸಂಬಂಧಿಸಿದ ಹೂಡುವಳಿ ತೆರಿಗೆ ಜಮೆಯ ಕ್ಲೇಮನ್ನು, ಸಂಬಂಧಿತ ಪೂರೈಕೆದಾರ ಒಂದು ಸಿಂಧುವಾದ ರಿಟರ್ನನ್ನು ಒದಗಿಸಿದ್ದರೆ, ಹೊಂದಾಣಿಕೆಯಾಗಿದೆ ಎಂದು ಪರಿಗಣಿಸತಕ್ಕದ್ದು;

(ii) ಹೂಡುವಳಿ ತೆರಿಗೆ ಜಮೆಯ ಕ್ಲೇಮನ್ನು, ಕ್ಲೇಮು ಮಾಡಿದ ಹೂಡುವಳಿ ತೆರಿಗೆ ಜಮೆಯ ಮೊತ್ತವು, ಅಂಥ ತೆರಿಗೆ ಬೆಲೆಪಟ್ಟಿ ಅಥವಾ ಖರ್ಚು ಚೀಟಿಯ ಮೇಲೆ ಸಂಬಂಧಿತ ಪೂರೈಕೆದಾರನು ಸಂದಾಯ ಮಾಡಿದ ಹುಟ್ಟುವಳಿ ತೆರಿಗೆಗೆ ಸಮನಾಗಿದ್ದಲ್ಲಿ ಅಥವಾ ಅದಕ್ಕಿಂತ ಕಡಿಮೆಯಿದ್ದಲ್ಲಿ, ಹೊಂದಾಣಿಕೆಯಾಗಿದೆ ಎಂದು ಪರಿಗಣಿಸತಕ್ಕದ್ದು.

70. ಹೂಡುವಳಿಗೆ ತೆರಿಗೆ ಜಮೆಯ ಅಂತಿಮ ಅಂಗೀಕಾರ ಮತ್ತು ಅದರ ತಿಳಿಸುವಿಕೆ .– (1) ಪ್ರಕರಣ 42ರ ಉಪಪ್ರಕರಣ (2)ರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ತೆರಿಗೆ ಅವಧಿಗೆ ಸಂಬಂಧಿಸಿದಂತೆ ಹೂಡುವಳಿ ತೆರಿಗೆ ಜಮೆಯ ಅಂತಿಮ ಅಂಗೀಕಾರವನ್ನು, **ನಮೂನೆ ಜಿಎಸ್‌ಟಿ ಎಂಐಎಸ್–1ರಲ್ಲಿ** ಅಂಥ ಕ್ಲೇಮು ಮಾಡುವ ನೋಂದಾಯಿತ ವ್ಯಕ್ತಿಗೆ ಸಾಮಾನ್ಯ ಪೋರ್ಟಲ್‌ನ ಮುಖಾಂತರ ವಿದ್ಯುನ್ಮಾನವಾಗಿ ಲಭ್ಯ ಮಾಡತಕ್ಕದ್ದು.

(2) ಹೊಂದಾಣಿಕೆಯಾಗಿಲ್ಲ ಎಂದು ತಿಳಿಸಲಾಗಿದ್ದ, ಆದರೆ ಪೂರೈಕೆದಾರ ಅಥವಾ ಸ್ವೀಕರಿಸುವವನಿಂದ ಸರಿಪಡಿಸುವಿಕೆಯಾದ ನಂತರ ಹೊಂದಾಣಿಕೆಯಾಗಿರುವುದು ಕಂಡುಬಂದ ಯಾವುದೇ ತೆರಿಗೆ ಅವಧಿಗೆ ಸಂಬಂಧಿಸಿದ ಹೂಡುವಳಿ ತೆರಿಗೆ ಜಮೆಯ ಕ್ಲೇಮನ್ನು ಅಂತಿಮವಾಗಿ ಅಂಗೀಕರಿಸತಕ್ಕದ್ದು ಮತ್ತು **ನಮೂನೆ ಜಿಎಸ್‌ಟಿ ಎಂಐಎಸ್–1**ರಲ್ಲಿ ಅಂಥ ಕ್ಲೇಮು ಮಾಡುವ ನೋಂದಾಯಿತ ವ್ಯಕ್ತಿಗೆ ಸಾಮಾನ್ಯ ಪೋರ್ಟಲ್‌ನ ಮುಖಾಂತರ ವಿದ್ಯುನ್ಮಾನವಾಗಿ ಲಭ್ಯ ಮಾಡತಕ್ಕದ್ದು.

71. ಹೂಡುವಳಿ ತೆರಿಗೆ ಜಮೆಯ ಕ್ಲೇಮು ಮತ್ತು ಹೂಡುವಳಿ ತೆರಿಗೆ ಜಮೆಯ ಕ್ಲೇಮಿನ ಹಿಮ್ಮುಖಗೊಳಿಸುವಿಕೆಯಲ್ಲಿನ ನ್ಯೂನತೆಯ ತಿಳಿಸುವಿಕೆ ಮತ್ತು ಸರಿಪಡಿಸುವಿಕೆ.– (1) ಪ್ರಕರಣ 42ರ ಉಪಪ್ರಕರಣ (3)ರಲ್ಲಿ ನಿರ್ದಿಷ್ಟಪಡಿಸಿದಂತೆ, ಯಾವುದೇ ತೆರಿಗೆ ಅವಧಿಗೆ ಸಂಬಂಧಿಸಿದ ಹೂಡುವಳಿ ತೆರಿಗೆ ಜಮೆಯ ಕ್ಲೇಮಿನಲ್ಲಿಯ ಯಾವುದೇ ನ್ಯೂನತೆಯನ್ನು, ಮತ್ತು ಅಂಥ ನ್ಯೂನತೆ ಮುಂದುವರೆದ ಪ್ರಯುಕ್ತ ಸದರಿ ಪ್ರಕರಣದ ಉಪಪ್ರಕರಣ (5)ರ ಅಡಿಯಲ್ಲಿ ಸೇರಿಸಬೇಕಾದ ಹುಟ್ಟುವಳಿ ತೆರಿಗೆ ಬಾಧ್ಯತೆಯ ವಿವರಗಳನ್ನು, ಅಂಥ ಕ್ಲೇಮು ಮಾಡುವ ಸ್ವೀಕರಿಸುವವನಿಗೆ ವಿದ್ಯುನ್ಮಾನವಾಗಿ **ನಮೂನೆ ಜಿಎಸ್‌ಟಿ ಎಂಐಎಸ್–1**ರಲ್ಲಿ ಮತ್ತು ಪೂರೈಕೆದಾರನಿಗೆ ವಿದ್ಯುನ್ಮಾನವಾಗಿ **ನಮೂನೆ ಜಿಎಸ್‌ಟಿ ಎಂಐಎಸ್–2**ರಲ್ಲಿ ಸಾಮಾನ್ಯ ಪೋರ್ಟಲ್‌ನ ಮುಖಾಂತರ ಹೊಂದಾಣಿಕೆಯನ್ನು ನೆರವೇರಿಸಲಾಗಿರುವ ತಿಂಗಳಿನ ಕೊನೆಯ ದಿನಾಂಕದಂದು ಅಥವಾ ಅದಕ್ಕಿಂತ ಮುಂಚಿತವಾಗಿ ಲಭ್ಯ ಮಾಡತಕ್ಕದ್ದು.

(2) ಉಪನಿಯಮ (1)ರ ಅಡಿಯಲ್ಲಿ ಯಾವುದೇ ನ್ಯೂನತೆಯನ್ನು ಲಭ್ಯ ಮಾಡಲಾಗಿರುವ ಒಬ್ಬ ಪೂರೈಕೆದಾರನು, ನ್ಯೂನ್ಯತೆಯನ್ನು ಲಭ್ಯ ಮಾಡಿದ ತಿಂಗಳಿಗಾಗಿ ಒದಗಿಸಬೇಕಿರುವ ಹೊರಮುಖ ಪೂರೈಕೆಗಳ ವಿವರಪತ್ರದಲ್ಲಿ ಸೂಕ್ತವಾದ ಸರಿಪಡಿಸುವಿಕೆಗಳನ್ನು ಮಾಡಬಹುದು.

(3) ಉಪನಿಯಮ (1)ರ ಅಡಿಯಲ್ಲಿ ಯಾವುದೇ ನ್ಯೂನತೆಯನ್ನು ಲಭ್ಯ ಮಾಡಲಾಗಿರುವ ಒಬ್ಬ ಸ್ವೀಕರಿಸುವವನು, ನ್ಯೂನ್ಯತೆಯನ್ನು ಲಭ್ಯ ಮಾಡಿದ ತಿಂಗಳಿಗಾಗಿ ಒದಗಿಸಬೇಕಿರುವ ಒಳಮುಖ ಪೂರೈಕೆಗಳ ವಿವರಪತ್ರದಲ್ಲಿ ಸೂಕ್ತವಾದ ಸರಿಪಡಿಸುವಿಕೆಗಳನ್ನು ಮಾಡಬಹುದು.

(4) ಯಾವುದೇ ನ್ಯೂನತೆಯನ್ನು ಉಪನಿಯಮ (2) ಅಥವಾ ಉಪನಿಯಮ (3)ರ ಅಡಿಯಲ್ಲಿ ಸರಿಪಡಿಸಿರದಿದ್ದಲ್ಲಿ, ನ್ಯೂನತೆಯಷ್ಟರ ಮಟ್ಟಿಗೆ ಒಂದು ಮೊತ್ತವನ್ನು, ಸ್ವೀಕರಿಸುವವನ ಹುಟ್ಟುವಳಿ ತೆರಿಗೆ ಬಾಧ್ಯತೆಗೆ, ನ್ಯೂನತೆಯನ್ನು ಲಭ್ಯ ಮಾಡಿದ ತಿಂಗಳ ತರುವಾಯವಾಗಿ ಬರುವ ತಿಂಗಳಿಗಾಗಿ **ನಮೂನೆ ಜಿಎಸ್‌ಟಿಆರ್‌–3** ರಲ್ಲಿ ಒದಗಿಸಬೇಕಿರುವ ಆತನ ರಿಟರ್ನಿನಲ್ಲಿ ಸೇರಿಸತಕ್ಕದ್ದು.

ವಿವರಣೆ .– ಈ ನಿಯಮದ ಉದ್ದೇಶಕ್ಕಾಗಿ ಈ ಮೂಲಕ ಘೋಷಿಸಿಸುವುದೇನೆಂದರೆ–

(i) ಪೂರೈಕೆದಾರನಿಂದ ಸರಿಪಡಿಸುವಿಕೆ ಎಂದರೆ, ಸ್ವೀಕರಿಸುವವನಿಂದ ಘೋಷಿಸಿದ ಸಂವಾದಿ ಒಳಮುಖ ಪೂರೈಕೆಗಳ ವಿವರಗಳಿಗೆ ಹೊಂದಾಣಿಕೆ ಮಾಡುವುದಕ್ಕಾಗಿ, ತನ್ನ ಸಿಂಧುವಾದ ರಿಟರ್ನಿನಲ್ಲಿ ಒಂದು ಹೊರಮುಖ ಪೂರೈಕೆಯ ವಿವರಗಳನ್ನು ಸೇರ್ಪಡೆ ಮಾಡುವುದು ಅಥವಾ ಸರಿ ಮಾಡುವುದಾಗಿದೆ.

(ii) ಸ್ವೀಕರಿಸುವವನಿಂದ ಸರಿಪಡಿಸುವಿಕೆ ಎಂದರೆ, ಪೂರೈಕೆದಾರನಿಂದ ಘೋಷಿಸಿದ ಸಂವಾದಿ ಹೊರಮುಖ ಪೂರೈಕೆಗಳ ವಿವರಗಳಿಗೆ ಹೊಂದಾಣಿಕೆ ಮಾಡುವುದಕ್ಕಾಗಿ, ಒಂದು ಒಳಮುಖ ಪೂರೈಕೆಯ ವಿವರಗಳನ್ನು ಸೇರ್ಪಡೆ ಮಾಡುವುದು ಅಥವಾ ಸರಿ ಮಾಡುವುದಾಗಿದೆ.

72.– ಒಂದೇ ಬೆಲೆಪಟ್ಟಿಯ ಮೇಲೆ ಒಂದಕ್ಕಿಂತ ಹೆಚ್ಚಿನ ಬಾರಿ ಹೂಡುವಳಿ ತೆರಿಗೆ ಜಮೆಯ ಕ್ಲೇಮು .– ಒಳಮುಖ ಪೂರೈಕೆಗಳ ವಿವರಗಳಲ್ಲಿಯ ಹೂಡುವಳಿ ತೆರಿಗೆ ಜಮೆಯ ದ್ವಿಗುಣೀಕರಣದ ಕ್ಲೇಮುಗಳನ್ನು ನೋಂದಾಯಿತ ವ್ಯಕ್ತಿಗೆ ಸಾಮಾನ್ಯ ಪೋರ್ಟಲ್‌ನ ಮುಖಾಂತರ **ನಮೂನೆ ಜಿಎಸ್‌ಟಿ ಎಂಐಎಸ್‌–1**ರಲ್ಲಿ ವಿದ್ಯುನ್ಮಾನ ರೀತಿಯಲ್ಲಿ ತಿಳಿಸತಕ್ಕದ್ದು.

73. ಹುಟ್ಟುವಳಿ ತೆರಿಗೆ ಬಾಧ್ಯತೆಯಲ್ಲಿನ ಇಳಿಕೆಯ ಕ್ಲೇಮನ್ನು ಹೊಂದಾಣಿಕೆ ಮಾಡುವುದು.– ಹುಟ್ಟುವಳಿ ತೆರಿಗೆ ಬಾಧ್ಯತೆಯಲ್ಲಿನ ಇಳಿಕೆಯ ಕ್ಲೇಮಿಗೆ ಸಂಬಂಧಿಸಿದ ಕೆಳಕಂಡ ವಿವರಗಳನ್ನು, **ನಮೂನೆ ಜಿಎಸ್‌ಟಿಆರ್‌–3**ನ್ನು ಸಲ್ಲಿಸಲು ಇರುವ ಗಡುವು ದಿನಾಂಕದ ನಂತರ ಪ್ರಕರಣ 43ರ ಅಡಿಯಲ್ಲಿ ಹೊಂದಾಣಿಕೆ ಮಾಡತಕ್ಕದ್ದು:–

(ಎ) ಪೂರೈಕೆದಾರನ ಜಿಎಸ್‌ಟಿಐಎನ್;
(ಬಿ) ಸ್ವೀಕರಿಸುವವನ ಜಿಎಸ್‌ಟಿಐಎನ್;
(ಸಿ) ಜಮೆ ಚೀಟಿಯ ಸಂಖ್ಯೆ;
(ಡಿ) ಜಮೆ ಚೀಟಿಯ ದಿನಾಂಕ; ಮತ್ತು
(ಇ) ತೆರಿಗೆಯ ಮೊತ್ತ:

ಪರಂತು, ಪ್ರಕರಣ 37ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ **ನಮೂನೆ ಜಿಎಸ್‌ಟಿಆರ್‌–1**ನ್ನು ಮತ್ತು ಪ್ರಕರಣ 38ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ **ನಮೂನೆ ಜಿಎಸ್‌ಟಿಆರ್‌–2**ನ್ನು ಒದಗಿಸಲು ಇರುವ ಕಾಲಮಿತಿಯನ್ನು ವಿಸ್ತರಣೆ ಮಾಡಲಾಗಿದ್ದಲ್ಲಿ, ಹುಟ್ಟುವಳಿ ತೆರಿಗೆ ಬಾಧ್ಯತೆಯಲ್ಲಿನ ಇಳಿಕೆಯ ಕ್ಲೇಮಿಗೆ ಸಂಬಂಧಿಸಿದ ಹೊಂದಾಣಿಕೆ ದಿನಾಂಕವು ಅದಕ್ಕನುಗುಣವಾಗಿ ವಿಸ್ತರಣೆಯಾಗತಕ್ಕದ್ದು:

ಮತ್ತು ಪರಂತು, ಆಯುಕ್ತರು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಹುಟ್ಟುವಳಿ ತೆರಿಗೆ ಬಾಧ್ಯತೆಯಲ್ಲಿನ ಇಳಿಕೆಯ ಕ್ಲೇಮಿಗೆ ಸಂಬಂಧಿಸಿದ ಹೊಂದಾಣಿಕೆಯ ದಿನಾಂಕವನ್ನು, ಆದೇಶದ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದ, ಅಂಥ ದಿನಾಂಕಕ್ಕೆ ವಿಸ್ತರಿಸಬಹುದು.

ವಿವರಣೆ .– ಈ ನಿಯಮದ ಉದ್ದೇಶಕ್ಕಾಗಿ ಈ ಮೂಲಕ ಘೋಷಿಸಿಸುವುದೇನೆಂದರೆ–

(i) ಸಂಬಂಧಿತ ಸ್ವೀಕರಿಸುವವನಿಂದ ನಮೂನೆ ಜಿಎಸ್‌ಟಿಆರ್‌–2ರಲ್ಲಿ ತಿದ್ದುಪಡಿ ಮಾಡದೇ ಒಪ್ಪಲಾಗಿರುವ,

ನಮೂನೆ ಜಿಎಸ್‌ಟಿಆರ್‌–1ರಲ್ಲಿ ಜಮೆ ಚೀಟಿ ನೀಡುವಿಕೆಯ ಕಾರಣದಿಂದಾದ ಹುಟ್ಟುವಳಿ ತೆರಿಗೆಯ ಇಳಿಕೆಯ ಕ್ಲೇಮನ್ನು, ಸದರಿ ಸ್ವೀಕರಿಸುವವನು ಒಂದು ಸಿಂಧುವಾದ ರಿಟರ್ನನ್ನು ಒದಗಿಸಿದ್ದರೆ, ಹೊಂದಾಣಿಕೆಯಾಗಿದೆ ಎಂದು ಪರಿಗಣಿಸತಕ್ಕದ್ದು.

(ii) ಕ್ಲೇಮು ಮಾಡಲಾದ ಇಳಿಕೆಯನ್ನು ಗಣನೆಗೆ ತೆಗೆದುಕೊಂಡ ನಂತರದ ಹುಟ್ಟುವಳಿ ತೆರಿಗೆ ಬಾಧ್ಯತೆಯ ಮೊತ್ತವು ಸಂಬಂಧಿತ ಸ್ವೀಕರಿಸುವವನು ತನ್ನ ಸಿಂಧುವಾದ ರಿಟರ್ನಿನಲ್ಲಿ, ಅಂಥ ಜಮೆ ಚೀಟಿಯ ಮೇಲೆ ಒಪ್ಪಿಕೊಂಡ ಮತ್ತು ವಿಮೋಚಿಸಿದ ಇಳಿಕೆಯನ್ನು ಗಣನೆಗೆ ತೆಗೆದುಕೊಂಡ ನಂತರ ಹೂಡುವಳಿ ತೆರಿಗೆ ಜಮೆಯ ಕ್ಲೇಮಿಗೆ ಸಮನಾಗಿದ್ದಲ್ಲಿ ಅಥವಾ ಅದಕ್ಕಿಂತ ಹೆಚ್ಚಾಗಿದ್ದಲ್ಲಿ, ಹುಟ್ಟುವಳಿ ತೆರಿಗೆ ಬಾಧ್ಯತೆಯಲ್ಲಿನ ಇಳಿಕೆಯ ಕ್ಲೇಮನ್ನು ಹೊಂದಾಣಿಕೆಯಾಗಿದೆ ಎಂದು ಪರಿಗಣಿಸತಕ್ಕದ್ದು.

74. ಹುಟ್ಟುವಳಿ ತೆರಿಗೆಯ ಬಾಧ್ಯತೆಯಲ್ಲಿನ ಇಳಿಕೆಯ ಕ್ಲೇಮಿನ ಅಂತಿಮ ಅಂಗೀಕಾರ ಮತ್ತು ಅದರ ತಿಳಿಸುವಿಕೆ .– (1) ಪ್ರಕರಣ 43ರ ಉಪಪ್ರಕರಣ (2)ರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ತೆರಿಗೆ ಅವಧಿಗೆ ಸಂಬಂಧಿಸಿದಂತೆ ಹುಟ್ಟುವಳಿ ತೆರಿಗೆ ಬಾಧ್ಯತೆಯಲ್ಲಿನ ಇಳಿಕೆಯ ಕ್ಲೇಮಿನ ಅಂತಿಮ ಅಂಗೀಕಾರವನ್ನು, **ನಮೂನೆ ಜಿಎಸ್‌ಟಿ ಎಂಐಎಸ್‌–1**ರಲ್ಲಿ ಅಂಥ ಕ್ಲೇಮು ಮಾಡುವ ನೋಂದಾಯಿತ ವ್ಯಕ್ತಿಗೆ ಸಾಮಾನ್ಯ ಪೋರ್ಟಲ್‌ನ ಮುಖಾಂತರ ವಿದ್ಯುನ್ಮಾನವಾಗಿ ಲಭ್ಯ ಮಾಡತಕ್ಕದ್ದು.

(2) ಹೊಂದಾಣಿಕೆಯಾಗಿಲ್ಲ ಎಂದು ತಿಳಿಸಲಾಗಿದ್ದ, ಆದರೆ ಪೂರೈಕೆದಾರ ಅಥವಾ ಸ್ವೀಕರಿಸುವವನಿಂದ ಸರಿಪಡಿಸುವಿಕೆಯಾದ ನಂತರ ಹೊಂದಾಣಿಕೆಯಾಗಿರುವುದು ಕಂಡುಬಂದ ಯಾವುದೇ ತೆರಿಗೆ ಅವಧಿಗೆ ಸಂಬಂಧಿಸಿದ ಹುಟ್ಟುವಳಿ ತೆರಿಗೆ ಬಾಧ್ಯತೆಯಲ್ಲಿನ ಇಳಿಕೆಯ ಕ್ಲೇಮನ್ನು ಅಂತಿಮವಾಗಿ ಅಂಗೀಕರಿಸತಕ್ಕದ್ದು ಮತ್ತು **ನಮೂನೆ ಜಿಎಸ್‌ಟಿ ಎಂಐಎಸ್‌–1**ರಲ್ಲಿ ಅಂಥ ಕ್ಲೇಮು ಮಾಡುವ ನೋಂದಾಯಿತ ವ್ಯಕ್ತಿಗೆ ಸಾಮಾನ್ಯ ಪೋರ್ಟಲ್‌ನ ಮುಖಾಂತರ ವಿದ್ಯುನ್ಮಾನ ರೀತಿಯಲ್ಲಿ ಲಭ್ಯ ಮಾಡತಕ್ಕದ್ದು.

75. ಹುಟ್ಟುವಳಿ ತೆರಿಗೆ ಬಾಧ್ಯತೆಯಲ್ಲಿನ ಇಳಿಕೆಯ ಕ್ಲೇಮು ಮತ್ತು ಹುಟ್ಟುವಳಿ ತೆರಿಗೆ ಬಾಧ್ಯತೆಯಲ್ಲಿನ ಇಳಿಕೆಯ ಕ್ಲೇಮಿನ ಹಿಮ್ಮುಖಗೊಳಿಸುವಿಕೆಯಲ್ಲಿನ ನ್ಯೂನತೆಯ ತಿಳಿಸುವಿಕೆ ಮತ್ತು ಸರಿಪಡಿಸುವಿಕೆ.– (1) ಪ್ರಕರಣ 43ರ ಉಪಪ್ರಕರಣ (3)ರಲ್ಲಿ ನಿರ್ದಿಷ್ಟಪಡಿಸಿದಂತೆ, ಯಾವುದೇ ತೆರಿಗೆ ಅವಧಿಗೆ ಸಂಬಂಧಿಸಿದ ಹುಟ್ಟುವಳಿ ತೆರಿಗೆ ಬಾಧ್ಯತೆಯಲ್ಲಿನ ಇಳಿಕೆಯ ಕ್ಲೇಮಿನಲ್ಲಿಯ ಯಾವುದೇ ನ್ಯೂನತೆಯನ್ನು, ಮತ್ತು ಅಂಥ ನ್ಯೂನತೆ ಮುಂದುವರೆದ ಪ್ರಯುಕ್ತ ಸದರಿ ಪ್ರಕರಣದ ಉಪಪ್ರಕರಣ (5)ರ ಅಡಿಯಲ್ಲಿ ಸೇರಿಸಬೇಕಾದ ಹುಟ್ಟುವಳಿ ತೆರಿಗೆ ಬಾಧ್ಯತೆಯ ವಿವರಗಳನ್ನು, ಅಂಥ ಕ್ಲೇಮು ಮಾಡುವ ನೋಂದಾಯಿತ ವ್ಯಕ್ತಿಗೆ ವಿದ್ಯುನ್ಮಾನವಾಗಿ **ನಮೂನೆ ಜಿಎಸ್‌ಟಿ ಎಂಐಎಸ್‌–1**ರಲ್ಲಿ ಮತ್ತು ಸ್ವೀಕರಿಸುವವನಿಗೆ ವಿದ್ಯುನ್ಮಾನವಾಗಿ **ನಮೂನೆ ಜಿಎಸ್‌ಟಿ ಎಂಐಎಸ್‌–2**ರಲ್ಲಿ ಸಾಮಾನ್ಯ ಪೋರ್ಟಲ್‌ನ ಮುಖಾಂತರ ಹೊಂದಾಣಿಕೆಯನ್ನು ನೆರವೇರಿಸಲಾಗಿರುವ ತಿಂಗಳಿನ ಕೊನೆಯ ದಿನಾಂಕದಂದು ಅಥವಾ ಅದಕ್ಕಿಂತ ಮುಂಚಿತವಾಗಿ ಲಭ್ಯ ಮಾಡತಕ್ಕದ್ದು.

(2) ಉಪನಿಯಮ (1)ರ ಅಡಿಯಲ್ಲಿ ಯಾವುದೇ ನ್ಯೂನತೆಯನ್ನು ಲಭ್ಯ ಮಾಡಲಾಗಿರುವ ಒಬ್ಬ ಪೂರೈಕೆದಾರನು, ನ್ಯೂನ್ಯತೆಯನ್ನು ಲಭ್ಯ ಮಾಡಿದ ತಿಂಗಳಿಗಾಗಿ ಒದಗಿಸಬೇಕಿರುವ ಹೊರಮುಖ ಪೂರೈಕೆಗಳ ವಿವರಪತ್ರದಲ್ಲಿ ಸೂಕ್ತವಾದ ಸರಿಪಡಿಸುವಿಕೆಗಳನ್ನು ಮಾಡಬಹುದು.

(3) ಉಪನಿಯಮ (1)ರ ಅಡಿಯಲ್ಲಿ ಯಾವುದೇ ನ್ಯೂನತೆಯನ್ನು ಲಭ್ಯ ಮಾಡಲಾಗಿರುವ ಒಬ್ಬ ಸ್ವೀಕರಿಸುವವನು, ನ್ಯೂನ್ಯತೆಯನ್ನು ಲಭ್ಯ ಮಾಡಿದ ತಿಂಗಳಿಗಾಗಿ ಒದಗಿಸಬೇಕಿರುವ ಒಳಮುಖ ಪೂರೈಕೆಗಳ ವಿವರಪತ್ರದಲ್ಲಿ ಸೂಕ್ತವಾದ ಸರಿಪಡಿಸುವಿಕೆಗಳನ್ನು ಮಾಡಬಹುದು.

(4) ಯಾವುದೇ ನ್ಯೂನತೆಯನ್ನು ಉಪನಿಯಮ (2) ಅಥವಾ ಉಪನಿಯಮ (3)ರ ಅಡಿಯಲ್ಲಿ ಸರಿಪಡಿಸಿರದಿದ್ದಲ್ಲಿ, ನ್ಯೂನತೆಯಷ್ಟರ ಮಟ್ಟಿಗೆ ಒಂದು ಮೊತ್ತವನ್ನು, ಸ್ವೀಕರಿಸುವವನ ಹುಟ್ಟುವಳಿ ತೆರಿಗೆ ಬಾಧ್ಯತೆಗೆ, ನ್ಯೂನತೆಯನ್ನು ಲಭ್ಯ ಮಾಡಿದ ತಿಂಗಳ ತರುವಾಯವಾಗಿ ಬರುವ ತಿಂಗಳಿಗಾಗಿ **ನಮೂನೆ ಜಿಎಸ್‌ಟಿಆರ್‌–3** ರಲ್ಲಿ ಒದಗಿಸಬೇಕಿರುವ ಆತನ ರಿಟರ್ನಿನಲ್ಲಿ ಸೇರಿಸತಕ್ಕದ್ದು.

ವಿವರಣೆ .– ಈ ನಿಯಮದ ಉದ್ದೇಶಕ್ಕಾಗಿ ಈ ಮೂಲಕ ಘೋಷಿಸಿಸುವುದೇನೆಂದರೆ–

(i) ಪೂರೈಕೆದಾರನಿಂದ ಸರಿಪಡಿಸುವಿಕೆ ಎಂದರೆ, ಸ್ವೀಕರಿಸುವವನಿಂದ ಘೋಷಿಸಿದ ಸಂವಾದಿ ಒಳಮುಖ ಪೂರೈಕೆಗಳ ವಿವರಗಳಿಗೆ ಹೊಂದಾಣಿಕೆ ಮಾಡುವುದಕ್ಕಾಗಿ, ತನ್ನ ಸಿಂಧುವಾದ ರಿಟರ್ನಿನಲ್ಲಿ ಒಂದು ಹೊರಮುಖ ಪೂರೈಕೆಯ ವಿವರಗಳನ್ನು ಸೇರ್ಪಡೆ ಮಾಡುವುದು ಅಥವಾ ಸರಿ ಮಾಡುವುದಾಗಿದೆ.

(ii) ಸ್ವೀಕರಿಸುವವನಿಂದ ಸರಿಪಡಿಸುವಿಕೆ ಎಂದರೆ, ಪೂರೈಕೆದಾರನಿಂದ ಘೋಷಿಸಿದ ಸಂವಾದಿ ಹೊರಮುಖ ಪೂರೈಕೆಗಳ ವಿವರಗಳಿಗೆ ಹೊಂದಾಣಿಕೆ ಮಾಡುವುದಕ್ಕಾಗಿ, ಒಂದು ಒಳಮುಖ ಪೂರೈಕೆಯ ವಿವರಗಳನ್ನು ಸೇರ್ಪಡೆ ಮಾಡುವುದು ಅಥವಾ ಸರಿ ಮಾಡುವುದಾಗಿದೆ.

76. ಹುಟ್ಟುವಳಿ ತೆರಿಗೆ ಬಾಧ್ಯತೆಯಲ್ಲಿ ಒಂದಕ್ಕಿಂತ ಹೆಚ್ಚಿನ ಬಾರಿ ಇಳಿಕೆಯ ಕ್ಲೇಮು.– ಹೊರಮುಖ ಪೂರೈಕೆಗಳ ವಿವರಗಳಲ್ಲಿಯ ಹುಟ್ಟುವಳಿ ತೆರಿಗೆ ಬಾಧ್ಯತೆಯಲ್ಲಿನ ದ್ವಿಗುಣೀಕರಣದ ಕ್ಲೇಮುಗಳನ್ನು, ನೋಂದಾಯಿತ ವ್ಯಕ್ತಿಗೆ ಸಾಮಾನ್ಯ ಪೋರ್ಟಲ್‌ನ ಮುಖಾಂತರ ನಮೂನೆ ಜಿಎಸ್‌ಟಿ ಎಂಐಎಸ್–1ರಲ್ಲಿ ವಿದ್ಯುನ್ಮಾನ ರೀತಿಯಲ್ಲಿ ತಿಳಿಸತಕ್ಕದ್ದು.

77.– ಹಿಮ್ಮುಖಗೊಳಿಸುವಿಕೆಗಳ ಪುನರ್‌ಕ್ಲೇಮಿನ ಮೇಲೆ ಸಂದಾಯ ಮಾಡಿದ ಬಡ್ಡಿಯ ಮರುಪಾವತಿ.– ಪ್ರಕರಣ 42ರ ಉಪಪ್ರಕರಣ (9) ಅಥವಾ ಪ್ರಕರಣ 43ರ ಉಪಪ್ರಕರಣ (9)ರ ಅಡಿಯಲ್ಲಿ ಮರುಪಾವತಿ ಮಾಡಬೇಕಾದ ಬಡ್ಡಿಯನ್ನು, ನೊಂದಾಯಿತ ವ್ಯಕ್ತಿಯು **ನಮೂನೆ ಜಿಎಸ್‌ಟಿಆರ್–3**ರಲ್ಲಿನ ತನ್ನ ರಿಟರ್ನಿನಲ್ಲಿ ಕ್ಲೇಮು ಮಾಡತಕ್ಕದ್ದು ಮತ್ತು **ನಮೂನೆ ಜಿಎಸ್‌ಟಿ ಪಿಎಂಟಿ–05**ರಲ್ಲಿನ ಅವನ ವಿದ್ಯುನ್ಮಾನ ನಗದು ಖಾತೆಗೆ ಜಮೆಗೊಳಿಸತಕ್ಕದ್ದು ಮತ್ತು ಜಮೆಗೊಳಿಸಿದ ಮೊತ್ತವು ಬಡ್ಡಿಯ ಯಾವುದೇ ಭವಿಷ್ಯದಲ್ಲಿನ ಬಾಧ್ಯತೆಯ ಸಂದಾಯಕ್ಕಾಗಿ ಲಭ್ಯವಿರತಕ್ಕದ್ದು ಅಥವಾ ತೆರಿಗೆದಾಯಕ ವ್ಯಕ್ತಿಯು ಪ್ರಕರಣ 54ರ ಅಡಿಯಲ್ಲಿ ಆ ಮೊತ್ತದ ಮರುಪಾವತಿಯನ್ನು ಕ್ಲೇಮು ಮಾಡಬಹುದು.

78. ಇ–ವಾಣಿಜ್ಯ ನಿರ್ವಾಹಕನು ಒದಗಿಸಿದ ವಿವರಗಳನ್ನು, ಪೂರೈಕೆದಾರನು ಒದಗಿಸಿದ ವಿವರಗಳೊಂದಿಗೆ ಹೊಂದಾಣಿಕೆ ಮಾಡುವುದು.–ನಮೂನೆ ಜಿಎಸ್‌ಟಿಆರ್–8ರಲ್ಲಿ ಇ–ವಾಣಿಜ್ಯ ನಿರ್ವಾಹಕನ ಮೂಲಕ ಮಾಡಲಾದ ಪೂರೈಕೆಗಳಿಗೆ ಸಂಬಂಧಿಸಿದ ಕೆಳಕಂಡ ವಿವರಗಳನ್ನು, **ನಮೂನೆ ಜಿಎಸ್‌ಟಿಆರ್–1**ರಲ್ಲಿ ಪೂರೈಕೆದಾರನು ಘೋಷಿಸಿದ ಸಂವಾದಿ ವಿವರಗಳೊಂದಿಗೆ ಹೊಂದಾಣಿಕೆ ಮಾಡತಕ್ಕದ್ದು:–

(ಎ) ಪೂರೈಕೆ ಸ್ಥಳದ ರಾಜ್ಯ; ಮತ್ತು

(ಬಿ) ನಿವ್ವಳ ತೆರಿಗೆದಾಯಕ ಮೌಲ್ಯ.

ಪರಂತು, ಪ್ರಕರಣ 37ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ **ನಮೂನೆ ಜಿಎಸ್‌ಟಿಆರ್–1**ನ್ನು ಒದಗಿಸಲು ಇರುವ ಕಾಲಮಿತಿಯನ್ನು ವಿಸ್ತರಣೆ ಮಾಡಲಾಗಿದ್ದಲ್ಲಿ, ಮೇಲೆ ನಮೂದಿಸಿದ ವಿವರಗಳ ಹೊಂದಾಣಿಕೆ ದಿನಾಂಕವು ಅದಕ್ಕನುಗುಣವಾಗಿ ವಿಸ್ತರಣೆಯಾಗತಕ್ಕದ್ದು:

ಮತ್ತು ಪರಂತು, ಆಯುಕ್ತರು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಹೊಂದಾಣಿಕೆಯ ದಿನಾಂಕವನ್ನು, ಆದೇಶದ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದ, ಅಂಥ ದಿನಾಂಕಕ್ಕೆ ವಿಸ್ತರಿಸಬಹುದು.

79. ಇ–ವಾಣಿಜ್ಯ ನಿರ್ವಾಹಕ ಮತ್ತು ಪೂರೈಕೆದಾರನು ಒದಗಿಸಿದ ವಿವರಗಳಲ್ಲಿನ ನ್ಯೂನತೆಯ ತಿಳಿಸುವಿಕೆ ಮತ್ತು ಸರಿಪಡಿಸುವಿಕೆ.– (1) ಇ–ವಾಣಿಜ್ಯ ನಿರ್ವಾಹಕನು ಒದಗಿಸಿದ ಅಥವಾ ಪೂರೈಕೆದಾರನಿಂದ ಅಂತಹ ಘೋಷಿಸಿದ ವಿವರಗಳಲ್ಲಿನ ಯಾವುದೇ ನ್ಯೂನತೆಯನ್ನು, ಪೂರೈಕೆದಾರನಿಗೆ ವಿದ್ಯುನ್ಮಾನವಾಗಿ **ನಮೂನೆ ಜಿಎಸ್‌ಟಿ ಎಂಐಎಸ್–3**ರಲ್ಲಿ ಮತ್ತು ಇ–ವಾಣಿಜ್ಯ ನಿರ್ವಾಹಕನಿಗೆ ವಿದ್ಯುನ್ಮಾನ ರೀತಿಯಲ್ಲಿ **ನಮೂನೆ ಜಿಎಸ್‌ಟಿ ಎಂಐಎಸ್–4**ರಲ್ಲಿ ಸಾಮಾನ್ಯ ಪೋರ್ಟಲ್‌ನಲ್ಲಿ ಹೊಂದಾಣಿಕೆಯನ್ನು ನೆರವೇರಿಸಲಾಗಿರುವ ತಿಂಗಳಿನ ಕೊನೆಯ ದಿನಾಂಕದಂದು ಅಥವಾ ಅದಕ್ಕಿಂತ

ಮುಂಚಿತವಾಗಿ ಲಭ್ಯ ಮಾಡತಕ್ಕದ್ದು.

(2) ಉಪನಿಯಮ (1)ರ ಅಡಿಯಲ್ಲಿ ಯಾವುದೇ ನ್ಯೂನತೆಯನ್ನು ಲಭ್ಯ ಮಾಡಲಾಗಿರುವ ಒಬ್ಬ ಪೂರೈಕೆದಾರನು, ನ್ಯೂನತೆಯನ್ನು ಲಭ್ಯ ಮಾಡಿದ ತಿಂಗಳಿಗಾಗಿ ಒದಗಿಸಬೇಕಿರುವ ಹೊರಮುಖ ಪೂರೈಕೆಗಳ ವಿವರಪತ್ರದಲ್ಲಿ ಸೂಕ್ತವಾದ ಸರಿಪಡಿಸುವಿಕೆಗಳನ್ನು ಮಾಡಬಹುದು.

(3) ಉಪನಿಯಮ (1)ರ ಅಡಿಯಲ್ಲಿ ಯಾವುದೇ ನ್ಯೂನತೆಯನ್ನು ಲಭ್ಯ ಮಾಡಲಾಗಿರುವ ಒಬ್ಬ ನಿರ್ವಾಹಕನು, ನ್ಯೂನತೆಯನ್ನು ಲಭ್ಯ ಮಾಡಿದ ತಿಂಗಳಿಗಾಗಿ ಒದಗಿಸಬೇಕಿರುವ ಒಳಮುಖ ಪೂರೈಕೆಗಳ ವಿವರಪತ್ರದಲ್ಲಿ ಸೂಕ್ತವಾದ ಸರಿಪಡಿಸುವಿಕೆಗಳನ್ನು ಮಾಡಬಹುದು.

(4) ಯಾವುದೇ ನ್ಯೂನತೆಯನ್ನು ಉಪನಿಯಮ (2) ಅಥವಾ ಉಪನಿಯಮ (3)ರ ಅಡಿಯಲ್ಲಿ ಸರಿಪಡಿಸಿರದಿದ್ದಲ್ಲಿ, ನ್ಯೂನತೆಯಷ್ಟರ ಮಟ್ಟಿಗೆ ಒಂದು ಮೊತ್ತವನ್ನು, ಪೂರೈಕೆದಾರನ ಹುಟ್ಟುವಳಿ ತೆರಿಗೆ ಬಾಧ್ಯತೆಗೆ, ನ್ಯೂನತೆಯ ವಿವರಗಳನ್ನು ಲಭ್ಯ ಮಾಡಿದ ತಿಂಗಳ ತರುವಾಯವಾಗಿ ಬರುವ ತಿಂಗಳಿಗಾಗಿ **ನಮೂನೆ ಜಿಎಸ್‌ಟಿಆರ್‌–3** ರಲ್ಲಿ ಒದಗಿಸಬೇಕಿರುವ ಆತನ ರಿಟರ್ನಿನಲ್ಲಿ ಸೇರಿಸತಕ್ಕದ್ದು ಮತ್ತು ಹುಟ್ಟುವಳಿ ತೆರಿಗೆ ಬಾಧ್ಯತೆಗೆ ಮಾಡಲಾದ ಅಂಥ ಸೇರ್ಪಡೆಯನ್ನು ಮತ್ತು ಅದರ ಮೇಲೆ ಸಂದಾಯ ಮಾಡಬೇಕಾದ ಬಡ್ಡಿಯನ್ನು, ಪೂರೈಕೆದಾರನಿಗೆ ಸಾಮಾನ್ಯ ಪೋರ್ಟಲ್‌ನಲ್ಲಿ **ನಮೂನೆ ಜಿಎಸ್‌ಟಿ ಎಂಐಎಸ್‌–3**ರಲ್ಲಿ ವಿದ್ಯುನ್ಮಾನ ರೀತಿಯಲ್ಲಿ ಲಭ್ಯ ಮಾಡತಕ್ಕದ್ದು.

80. ವಾರ್ಷಿಕ ರಿಟರ್ನ್.– (1) ಒಬ್ಬ ಹೂಡುವಳಿ ಸೇವೆ ಹಂಚಿಕೆದಾರ, ಪ್ರಕರಣ 51ರ ಅಥವಾ ಪ್ರಕರಣ 52ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವ ಒಬ್ಬ ವ್ಯಕ್ತಿ, ಒಬ್ಬ ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿ ಮತ್ತು ಒಬ್ಬ ಅನಿವಾಸಿ ತೆರಿಗೆದಾಯಕ ವ್ಯಕ್ತಿಯನ್ನು ಹೊರತುಪಡಿಸಿದಂತೆ, ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಪ್ರಕರಣ 44ರ ಉಪಪ್ರಕರಣ (1)ರ ಅಡಿಯಲ್ಲಿ ನಿರ್ದಿಷ್ಟ ಪಡಿಸಿದಂತೆ ಒಂದು ವಾರ್ಷಿಕ ರಿಟರ್ನನ್ನು, **ನಮೂನೆ ಜಿಎಸ್‌ಟಿಆರ್‌–9**ರಲ್ಲಿ ಸಾಮಾನ್ಯ ಪೋರ್ಟಲ್‌ನ ಮುಖಾಂತರ ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಒದಗಿಸತಕ್ಕದ್ದು.

ಪರಂತು ಪ್ರಕರಣ 10 ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವ ಒಬ್ಬ ವ್ಯಕ್ತಿ, ವಾರ್ಷಿಕ ರಿಟರ್ನನ್ನು, **ನಮೂನೆ ಜಿಎಸ್‌ಟಿಆರ್‌–9ಎ** ಯಲ್ಲಿ ಒದಗಿಸತಕ್ಕದ್ದು.

(2) ಪ್ರಕರಣ 52ರ ಅಡಿಯಲ್ಲಿ ಮೂಲದಲ್ಲಿ ತೆರಿಗೆಯನ್ನು ಸಂಗ್ರಹಿಸುವುದು ಅಗತ್ಯವಿರುವ ಪ್ರತಿಯೊಬ್ಬ ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕನು, ಸದರಿ ಪ್ರಕರಣದ ಉಪಪ್ರಕರಣ (5)ರಲ್ಲಿ ಉಲ್ಲೇಖಿಸಲಾದ ವಾರ್ಷಿಕ ವಿವರಪತ್ರವನ್ನು, **ನಮೂನೆ ಜಿಎಸ್‌ಟಿಆರ್‌–9ಬಿ** ಯಲ್ಲಿ ಒದಗಿಸತಕ್ಕದ್ದು.

(3) ಒಂದು ಹಣಕಾಸು ವರ್ಷದ ಸಮಯದಲ್ಲಿ ಆತನ ಸಮಗ್ರ ವಹಿವಾಟು ಎರಡು ಕೋಟಿ ರೂಪಾಯಿಗಳನ್ನು ಮೀರಿರುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಆತನ ಲೆಕ್ಕಪತ್ರಗಳನ್ನು, ಪ್ರಕರಣ 35ರ ಉಪಪ್ರಕರಣ (5)ರಲ್ಲಿ ನಿರ್ದಿಷ್ಟಪಡಿಸಿರುವಂತೆ ಲೆಕ್ಕಪರಿಶೋಧಿಸಿಕೊಳ್ಳತಕ್ಕದ್ದು ಮತ್ತು ಅವನು, ಲೆಕ್ಕಪರಿಶೋಧಿತ ವಾರ್ಷಿಕ ಲೆಕ್ಕಪತ್ರಗಳ ಮತ್ತು ಸರಿಹೊಂದಿಕೆಯ ವಿವರಪತ್ರದ ಒಂದು ಪ್ರತಿಯನ್ನು, **ನಮೂನೆ ಜಿಎಸ್‌ಟಿಆರ್‌–9ಸಿ** ಯಲ್ಲಿ ಸಾಮಾನ್ಯ ಪೋರ್ಟಲ್‌ನ ಮುಖಾಂತರ ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಒದಗಿಸತಕ್ಕದ್ದು.

81. ಅಂತಿಮ ರಿಟರ್ನ್.– (1) ಪ್ರಕರಣ 45ರ ಅಡಿಯಲ್ಲಿ ಒಂದು ಅಂತಿಮ ರಿಟರ್ನನ್ನು ಒದಗಿಸುವುದು ಅಗತ್ಯವಿರುವ, ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಅಂಥ ರಿಟರ್ನನ್ನು **ನಮೂನೆ ಜಿಎಸ್‌ಟಿಆರ್‌–10**ರಲ್ಲಿ ಸಾಮಾನ್ಯ ಪೋರ್ಟಲ್‌ನ ಮುಖಾಂತರ ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಒದಗಿಸತಕ್ಕದ್ದು.

82. ವಿಶಿಷ್ಟ ಗುರುತಿನ ಸಂಖ್ಯೆಯನ್ನು ಹೊಂದಿರುವ ವ್ಯಕ್ತಿಗಳ ಒಳಮುಖ ಪೂರೈಕೆಗಳ ವಿವರಗಳು.– (1) ಒಂದು ವಿಶಿಷ್ಟ ಗುರುತಿನ ಸಂಖ್ಯೆಯನ್ನು ನೀಡಲಾಗಿರುವ ಮತ್ತು ಆತನ ಒಳಮುಖ ಪೂರೈಕೆಗಳ ಮೇಲೆ ಸಂದಾಯ ಮಾಡಿದ ತೆರಿಗೆಗಳ ಮರುಪಾವತಿಯನ್ನು ಕ್ಲೇಮು ಮಾಡುವ, ಪ್ರತಿಯೊಬ್ಬ ವ್ಯಕ್ತಿಯು, ಅಂಥ ತೆರಿಗೆದಾಯಕ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗಳ ವಿವರಗಳನ್ನು, ಅಂಥ ಮರುಪಾವತಿ ಕ್ಲೇಮಿನ ಅರ್ಜಿಯೊಂದಿಗೆ, **ನಮೂನೆ ಜಿಎಸ್‌ಟಿಆರ್–11**ರಲ್ಲಿ ಸಾಮಾನ್ಯ ಪೋರ್ಟಲ್‌ನ ಮುಖಾಂತರ ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಒದಗಿಸತಕ್ಕದ್ದು.

(2) ತೆರಿಗೆಗಳ ಮರುಪಾವತಿಯನ್ನು ಹೊರತುಪಡಿಸಿದ ಇತರ ಉದ್ದೇಶಗಳಿಗಾಗಿ ಒಂದು ವಿಶಿಷ್ಟ ಗುರುತಿನ ಸಂಖ್ಯೆಯನ್ನು ನೀಡಲಾಗಿರುವ ಪ್ರತಿಯೊಬ್ಬ ವ್ಯಕ್ತಿಯು, ಯುಕ್ತ ಅಧಿಕಾರಿಯಿಂದ ಅಗತ್ಯಪಡಿಸಬಹುದಾಧ ತೆರಿಗೆದಾಯಕ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಒಳಮುಖ ಪೂರೈಕೆಗಳ ವಿವರಗಳನ್ನು, **ನಮೂನೆ ಜಿಎಸ್‌ಟಿಆರ್–11**ರಲ್ಲಿ ಒದಗಿಸತಕ್ಕದ್ದು.

83. ಸರಕು ಮತ್ತು ಸೇವೆಗಳ ತೆರಿಗೆ ವೃತ್ತಿದಾರನಿಗೆ ಸಂಬಂಧಿಸಿದ ಉಪಬಂಧಗಳು.– (1) ಸರಕು ಮತ್ತು ಸೇವೆಗಳ ತೆರಿಗೆ ವೃತ್ತಿದಾರನಾಗಿ ದಾಖಲಾತಿ ಮಾಡಿಕೊಳ್ಳುವುದಕ್ಕಾಗಿ, **ನಮೂನೆ ಜಿ.ಎಸ್,ಟಿ ಪಿಸಿಟಿ–1**ರಲ್ಲಿ ಸಾಮಾನ್ಯ ಪೋರ್ಟಲ್‌ನ ಮುಖಾಂತರ ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಒಂದು ಅರ್ಜಿಯನ್ನು

(ಎ) (i) ಭಾರತೀಯ ಪ್ರಜೆಯಾಗಿರುವ;

(ii) ಸ್ವಸ್ಥ ಚಿತ್ತ ವ್ಯಕ್ತಿಯಾಗಿರುವ;

(iii) ದಿವಾಳಿ ಎಂದು ನ್ಯಾಯ ನಿರ್ಣೀತನಾಗದಿರುವ;

(iv) ಸಕ್ಷಮ ನ್ಯಾಯಾಲಯದಿಂದ ಅಪರಾಧಿ ಎಂದು ನಿರ್ಣೀತನಾಗಿಲ್ಲದಿರುವ;

(ಬಿ) –ಯಾವೊಬ್ಬ ವ್ಯಕ್ತಿಯು, ಸಲ್ಲಿಸಬಹುದು ಮತ್ತು ಈ ಕೆಳಕಂಡ ಷರತ್ತುಗಳಲ್ಲಿ ಯಾವುದಾದರನ್ನು ಪೂರೈಸಿರಬೇಕು:–

(i) ಅವನು ಸರ್ಕಾರದ ಅಡಿಯಲ್ಲಿನ ತನ್ನ ಸೇವಾ ಅವಧಿಯಲ್ಲಿ ಗ್ರೂಪ್ ಬಿ ಪತ್ರಾಂಕಿತ ಅಧಿಕಾರಿಯ ಶ್ರೇಣಿಗಿಂತ ಕಡಿಮೆ ಇಲ್ಲದ ಹುದ್ದೆಯಲ್ಲಿ ಎರಡು ವರ್ಷಗಳಿಗಿಂತ ಕಡಿಮೆ ಇರದ ಒಂದು ಅವಧಿಗೆ ಕಾರ್ಯ ನಿರ್ವಹಿಸಿರುವ, ಯಾವುದೇ ರಾಜ್ಯ ಸರ್ಕಾರದ ವಾಣಿಜ್ಯ ತೆರಿಗೆ ಇಲಾಖೆಯ ಅಥವಾ ಭಾರತ ಸರ್ಕಾರದ ಅಬಕಾರಿ ಮತ್ತು ಕಸ್ಟಮ್ಸ್‌ನ ಕೇಂದ್ರ ಮಂಡಳಿ, ರಾಜಸ್ವ ಇಲಾಖೆಯ ಒಬ್ಬ ನಿವೃತ್ತಿ ಅಧಿಕಾರಿಯಾಗಿರಬೇಕು; ಅಥವಾ

(ii) ಅವನು ಕನಿಷ್ಟ ಐದು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಗಾಗಿ, ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಒಬ್ಬ ಮಾರಾಟ ತೆರಿಗೆ ವೃತ್ತಿದಾರನಾಗಿ ಅಥವಾ ತೆರಿಗೆ ರಿಟರ್ನಿನ ಸಿದ್ಧಪಡಿಸುವವನಾಗಿ ದಾಖಲಾತಿ ಮಾಡಿಕೊಂಡಿರಬೇಕು.

(ಸಿ) ಕೆಳಕಂಡವುಗಳಲ್ಲಿ ತೇರ್ಗಡೆಗೊಂಡಿರಬೇಕು:

(i) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಸ್ಥಾಪಿಸಿದ ಭಾರತೀಯ ವಿಶ್ವವಿದ್ಯಾಲಯದಿಂದ ನಡೆಸಲಾಗುವ, ವಾಣಿಜ್ಯ, ಕಾನೂನು, ಉಚ್ಚತಮ ಲೆಕ್ಕಪರಿಶೋಧನೆಯನ್ನ

ಒಳಗೊಂಡ ಬ್ಯಾಂಕಿಂಗ್, ಅಥವಾ ವ್ಯವಹಾರ ಆಡಳಿತ ಅಥವಾ ವ್ಯವಹಾರ ನಿರ್ವಹಣೆಯಲ್ಲಿ ಒಂದು ಪದವಿಯನ್ನು ಹೊಂದಿರುವ, ಸ್ನಾತಕ ಅಥವಾ ಸ್ನಾತಕೋತ್ತರ ಅಥವಾ ತತ್ಸಮಾನವಾದ ಪರೀಕ್ಷೆ; ಅಥವಾ

(ii) ಉಪಖಂಡದ (i) ರಲ್ಲಿ ನಮೂದಿಸಿರುವ ಪದವಿ ಪರೀಕ್ಷೆಗಳಿಗೆ ತತ್ಸಮಾನ ಎಂದು ಯಾವುದೇ ಭಾರತೀಯ ವಿಶ್ವವಿದ್ಯಾಲಯವು ಮಾನ್ಯತೆ ನೀಡಿರುವ ಯಾವುದೇ ವಿದೇಶಿ ವಿಶ್ವವಿದ್ಯಾಲಯದ ಒಂದು ಪದವಿ ಪರೀಕ್ಷೆ; ಅಥವಾ

(iii) ಪರಿಷತ್ತಿನ ಶಿಫಾರಸ್ಸಿನ ಅನ್ವಯ ಸರ್ಕಾರದಿಂದ ಈ ಉದ್ದೇಶಕ್ಕಾಗಿ ಅಧಿಸೂಚಿಸಿದ ಯಾವುದೇ ಇತರ ಪರೀಕ್ಷೆ; ಅಥವಾ

(iv) ಕೆಳಕಂಡ ಯಾವುದಾದರೂ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರಬೇಕು, ಅಂದರೆ.–

(ಎ) ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾದ ಅಂತಿಮ ಪರೀಕ್ಷೆ

(ಬಿ) ಇನ್ಸ್ಟಿಟ್ಯೂಟ್ ಆಫ್ ಕಾಸ್ಟ್ ಅಕೌಂಟೆಂಟ್ಸ್ ಆಫ್ ಇಂಡಿಯಾದ ಅಂತಿಮ ಪರೀಕ್ಷೆ

(ಸಿ) ಇನ್ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟೆರಿಸ್‌ನ ಅಂತಿಮ ಪರೀಕ್ಷೆ

(2) ಉಪಪ್ರಕರಣ (1)ರಲ್ಲಿ ಉಲ್ಲೇಖಿಸಲಾದ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಈ ಸಂಬಂಧದಲ್ಲಿ ಪ್ರಾಧಿಕೃತನಾದ ಅಧಿಕಾರಿಯು, ಆತನು ಅವಶ್ಯಕವೆಂದು ಪರಿಗಣಿಸಿದ ಅಂಥ ವಿಚಾರಣೆ ಮಾಡಿದ ನಂತರ, ಅರ್ಜಿದಾರನನ್ನು ಸರಕು ಮತ್ತು ಸೇವೆಗಳ ತೆರಿಗೆಯ ವೃತ್ತಿದಾರ ಎಂದು ದಾಖಲಾತಿ ಮಾಡಿಕೊಳ್ಳುವುದು ಮತ್ತು ಅದರ ಪರಿಣಾಮವಾಗಿ ಒಂದು ಪ್ರಮಾಣ ಪತ್ರವನ್ನು **ನಮೂನೆ ಜಿಎಸ್‌ಟಿ ಪಿಸಿಟಿ–2** ರಲ್ಲಿ ನೀಡುವುದಾಗಲಿ ಅಥವಾ ಅರ್ಜಿದಾರನು ಸರಕು ಮತ್ತು ಸೇವೆಗಳ ತೆರಿಗೆ ವೃತ್ತಿದಾರ ಎಂದು ದಾಖಲಾತಿ ಮಾಡಿಕೊಳ್ಳಲು ಅರ್ಹನಲ್ಲನೆಂದು ಕಂಡು ಬಂದಲ್ಲಿ, ಅವನ ಅರ್ಜಿಯನ್ನು ತಿರಸ್ಕರಿಸುವುದಾಗಲಿ ಮಾಡತಕ್ಕದ್ದು.

(3) ಉಪಪ್ರಕರಣ (3)ರ ಅಡಿಯಲ್ಲಿ ಮಾಡಲಾದ ದಾಖಲಾತಿಯು, ಅದು ರದ್ದುಗೊಳ್ಳುವವರೆಗೆ ಸಿಂಧುವಾಗಿರುತ್ತದೆ.

ಪರಂತು, ಸರಕು ಮತ್ತು ಸೇವೆಗಳ ತೆರಿಗೆಯ ವೃತ್ತಿದಾರ ಎಂದು ದಾಖಲಾತಿಯಾಗಿರುವ ಯಾವೊಬ್ಬ ವ್ಯಕ್ತಿಯು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಆಯುಕ್ತರಿಂದ ಅಧಿಸೂಚಿಸಬಹುದಾದ ಅಂಥ ಪ್ರಾಧಿಕಾರದಿಂದ ಅಂಥ ಅವಧಿಗಳಿಗೆ ನಡೆಸುವ ಅಂಥ ಪರೀಕ್ಷೆಯಲ್ಲಿ ಅವನು ತೇರ್ಗಡೆಯಾಗಿರುವ ಹೊರತು, ದಾಖಲಾಗಿ ಉಳಿಯಲು ಅರ್ಹನಿರತಕ್ಕದ್ದಲ್ಲ.

ಮತ್ತು ಪರಂತು, ಉಪಪ್ರಕರಣ (1)ರ ಖಂಡ (ಸಿ)ಯ ಉಪಬಂಧಗಳು ಅನ್ವಯವಾಗುವ ಯಾವೊಬ್ಬ ವ್ಯಕ್ತಿಯು, ಸದರಿ ಪರೀಕ್ಷೆಯನ್ನು ಗೊತ್ತು ಪಡಿಸಲಾದ ದಿನಾಂಕದಿಂದ ಒಂದು ವರ್ಷದ ಅವಧಿಯ ಒಳಗಾಗಿ ಅವನು ತೇರ್ಗಡೆಯಾಗದ ಹೊರತು, ದಾಖಲಾಗಿ ಉಳಿಯಲು ಅರ್ಹನಿರತಕ್ಕದ್ದಲ್ಲ.

(4) ಯಾವುದೇ ಸರಕು ಮತ್ತು ಸೇವೆಗಳ ವೃತ್ತಿದಾರನು, ಅಧಿನಿಯಮದ ಅಡಿಯಲ್ಲಿನ ಯಾವುದೇ ನಡಾವಳಿಗೆ ಸಂಬಂಧಿಸಿದಂತೆ, ದುರ್ನಡತೆಯ ತಪ್ಪಿತಸ್ಥನೆಂದು ಕಂಡುಬಂದಲ್ಲಿ, ಪ್ರಾಧಿಕೃತ ಅಧಿಕಾರಿಯು, **ನಮೂನೆ ಜಿಎಸ್‌ಟಿ ಪಿಸಿಟಿ–03** ರಲ್ಲಿ ಅಂಥ ದುರ್ನಡತೆಗಾಗಿ ಕಾರಣವನ್ನು ಕೇಳುವ ಒಂದು ಸೂಚನಾಪತ್ರವನ್ನು ನೀಡಿದ ನಂತರ ಮತ್ತು ಆತನಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಯುಕ್ತವಾದ ಅವಕಾಶ ನೀಡಿದ ನಂತರ, ಅಲ್ಲಿಂದ ಮುಂದೆ ಅವನು, ಸರಕು ಮತ್ತು ಸೇವೆಗಳ ವೃತ್ತಿದಾರನಾಗಿ ಪ್ರಕಾರ್ಯ ನಿರ್ವಹಿಸಲು, ಪ್ರಕರಣ 48ರ ಅಡಿಯಲ್ಲಿ ಅನರ್ಹನಾಗಿರತಕ್ಕವನು ಎಂದು **ನಮೂನೆ ಜಿಎಸ್‌ಟಿ ಪಿಸಿಟಿ–04**ರಲ್ಲಿ ಆದೇಶದ ಮೂಲಕ, ನಿರ್ದೇಶಿಸಬಹುದು.

(5) ಉಪನಿಯಮ (4)ರ ಅಡಿಯಲ್ಲಿ, ಯಾರ ವಿರುದ್ಧ ಒಂದು ಆದೇಶ ಮಾಡಲಾಗಿದೆಯೋ, ಆ ಯಾವೊಬ್ಬ ವ್ಯಕ್ತಿಯು ಅಂಥ ಆದೇಶವನ್ನು ನೀಡಲಾದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ, ಅಂಥ ಆದೇಶದ ವಿರುದ್ಧ ಆಯುಕ್ತರಿಗೆ ಅಪೀಲನ್ನು ಸಲ್ಲಿಸಬಹುದು.

(6) ಯಾವುದೇ ನೋಂದಾಯಿತ ವ್ಯಕ್ತಿಯು, ಆತನ ಆಯ್ಕೆಯಂತೆ, ಒಬ್ಬ ಸರಕು ಮತ್ತು ಸೇವೆಗಳ ತೆರಿಗೆ

ವೃತ್ತಿಗಾರನನ್ನು ಸಾಮಾನ್ಯ ಪೋರ್ಟಲ್‌ನಲ್ಲಿ **ನಮೂನೆ ಜಿಎಸ್‌ಟಿ ಪಿಸಿಟಿ–5**ರಲ್ಲಿ ಪ್ರಾಧಿಕೃತಗೊಳಿಸಬಹುದು ಅಥವಾ, ಯಾವುದೇ ಸಮಯದಲ್ಲಿ, ಅಂಥ ಪ್ರಾಧಿಕರಣವನ್ನು, **ನಮೂನೆ ಜಿಎಸ್‌ಟಿ ಪಿಸಿಟಿ–6ರ**ಲ್ಲಿ ಹಿಂತೆಗೆದುಕೊಳ್ಳಬಹುದು ಮತ್ತು ಹಾಗೆ ಪ್ರಾಧಿಕೃತನಾದ ಸರಕು ಮತ್ತು ಸೇವೆಗಳ ತೆರಿಗೆ ವೃತ್ತಿದಾರನು, ಪ್ರಾಧಿಕರಣದ ಸಮಯದಲ್ಲಿ, ಸದರಿ ಪ್ರಾಧಿಕರಣದಲ್ಲಿ ಸೂಚಿಸಿದಂತೆ, ಅಂಥ ಕಾರ್ಯಗಳನ್ನು, ಕೈಗೊಳ್ಳಲು ಅವಕಾಶ ನೀಡತಕ್ಕದ್ದು.

(7) ಒಬ್ಬ ನೋಂದಾಯಿತ ವ್ಯಕ್ತಿಯು ಒದಗಿಸುವುದು ಅಗತ್ಯವಿರುವ ವಿವರಪತ್ರವು, ಆತನಿಂದ ಪ್ರಾಧಿಕೃತನಾದ ಸರಕು ಮತ್ತು ಸೇವೆಗಳ ತೆರಿಗೆ ವೃತ್ತಿದಾರನಿಂದ ಒದಗಿಸಲಾಗಿದ್ದಲ್ಲಿ, ನೋಂದಾಯಿತ ವ್ಯಕ್ತಿಯಿಂದ ಒಂದು ಖಚಿತಪಡಿಸುವಿಕೆಯನ್ನು ಮಿಂಚೋಲೆ ಅಥವಾ ಎಸ್‌ಎಂಎಸ್ ಮೂಲಕ ಕೋರತಕ್ಕದ್ದು ಮತ್ತು ಸರಕು ಮತ್ತು ಸೇವೆಗಳ ತೆರಿಗೆ ವೃತ್ತಿದಾರನಿಂದ ಒದಗಿಸಲಾದ ವಿವರಪತ್ರವನ್ನು ನೋಂದಾಯಿತ ವ್ಯಕ್ತಿಗೆ ಸಾಮಾನ್ಯ ಪೋರ್ಟಲ್‌ನಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು.

ಪರಂತು, ನೊಂದಾಯಿತ ವ್ಯಕ್ತಿಯು ಖಚಿತಪಡಿಸುವಿಕೆಯ ಆ ಕೋರಿಕೆಗೆ, ಅಂಥ ವಿವರಪತ್ರವನ್ನು ಒದಗಿಸಲು ಇರುವ ಕೊನೆಯ ದಿನಾಂಕದ ವರೆಗೆ ಪ್ರತಿಕ್ರಿಯಿಸಲು ವಿಫಲನಾದಲ್ಲಿ, ಸರಕು ಮತ್ತು ಸೇವೆಗಳ ವೃತ್ತಿದಾರನಿಂದ ಒದಗಿಸಲಾಗಿರುವ ವಿವರಪತ್ರವನ್ನು ಅವನು ಖಚಿತಪಡಿಸಿದ್ದಾನೆ ಎಂದು ಪರಿಭಾವಿಸತಕ್ಕದ್ದು.

(8) ಒಬ್ಬ ಸರಕು ಮತ್ತು ಸೇವೆಗಳ ವೃತ್ತಿದಾರನು, ಕೆಳಕಂಡ ಯಾವುದಾದರೂ ಅಥವಾ ಎಲ್ಲಾ ಚಟುವಟಿಕೆಗಳನ್ನು ನೋಂದಾಯಿತ ವ್ಯಕ್ತಿಯ ಪರವಾಗಿ, ಹಾಗೆ ಆತನಿಂದ ಪ್ರಾಧಿಕೃತಗೊಂಡಿದ್ದರೆ, ಕೈಗೊಳ್ಳಬಹುದು.

(ಎ) ಹೊರಮುಖ ಮತ್ತು ಒಳಮುಖ ಪೂರೈಕೆಗಳ ವಿವರಗಳನ್ನು ಒದಗಿಸುವುದು;

(ಬಿ) ಮಾಸಿಕ, ತ್ರೈಮಾಸಿಕ, ವಾರ್ಷಿಕ ಅಥವಾ ಅಂತಿಮ ರಿಟರ್ನನ್ನು ಒದಗಿಸುವುದು;

(ಸಿ) ವಿದ್ಯುನ್ಮಾನ ನಗದು ಖಾತೆಯಲ್ಲಿ ಜಮೆಗಾಗಿ ಠೇವಣಿ ಮಾಡುವುದು;

(ಡಿ) ಮರುಪಾವತಿಗೆ ಒಂದು ಕ್ಲೇಮನ್ನು ಸಲ್ಲಿಸುವುದು; ಮತ್ತು

(ಇ) ನೋಂದಣಿಯ ತಿದ್ದುಪಡಿ ಅಥವಾ ರದ್ದತಿಗಾಗಿ ಒಂದು ಅರ್ಜಿಯನ್ನು ಸಲ್ಲಿಸುವುದು:

ಪರಂತು, ಮರುಪಾವತಿಗಾಗಿ ಮಾಡಿರುವ ಒಂದು ಕ್ಲೇಮು ಅಥವಾ ನೋಂದಣಿಯ ತಿದ್ದುಪಡಿ ಅಥವಾ ರದ್ದತಿಗಾಗಿ ಸಂಬಂಧಿಸಿದಂತೆ, ಒಂದು ಅರ್ಜಿಯು, ನೋಂದಾಯಿತ ವ್ಯಕ್ತಿಯಿಂದ ಪ್ರಾಧಿಕೃತನಾದ ಸರಕು ಮತ್ತು ಸೇವೆಗಳ ತೆರಿಗೆ ವೃತ್ತಿದಾರನಿಂದ ಸಲ್ಲಿಕೆಯಾಗಿದ್ದಲ್ಲಿ, ನೋಂದಾಯಿತ ವ್ಯಕ್ತಿಯಿಂದ ಒಂದು ಖಚಿತಪಡಿಸುವಿಕೆಯನ್ನು ಕೋರತಕ್ಕದ್ದು ಮತ್ತು ಸರಕು ಮತ್ತು ಸೇವೆಗಳ ತೆರಿಗೆ ವೃತ್ತಿದಾರನಿಂದ ಸಲ್ಲಿಕೆಯಾದ ಅರ್ಜಿಯನ್ನು, ನೋಂದಾಯಿತ ವ್ಯಕ್ತಿಗೆ ಸಾಮಾನ್ಯ ಪೋರ್ಟಲ್‌ನಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು ಮತ್ತು ಅಂಥ ಅರ್ಜಿಯ ಮೇಲೆ, ಅದಕ್ಕೆ ನೊಂದಾಯಿತ ವ್ಯಕ್ತಿಯು ತನ್ನ ಸಮ್ಮತಿಯನ್ನು ನೀಡುವ ವರೆಗೆ, ಮುಂದುವರೆದು ಕ್ರಮ ಕೈಗೊಳ್ಳತಕ್ಕದ್ದಲ್ಲ.

(9) ಸರಕು ಮತ್ತು ಸೇವೆಗಳ ತೆರಿಗೆ ವೃತ್ತಿದಾರನ ಮೂಲಕ ತನ್ನ ರಿಟರ್ನನ್ನು ಒದಗಿಸಲು ಆಯ್ಕೆ ಮಾಡಿಕೊಂಡಿರುವ ಯಾವೊಬ್ಬ ನೋಂದಾಯಿತ ವ್ಯಕ್ತಿಯು,–

(ಎ) ಯಾವುದೇ ಸರಕು ಮತ್ತು ಸೇವೆಗಳ ತೆರಿಗೆ ವೃತ್ತಿದಾರನಿಗೆ, ತನ್ನ ರಿಟರ್ನನ್ನು ಸಿದ್ಧಪಡಿಸಲು ಮತ್ತು ಒದಗಿಸಲು, **ನಮೂನೆ ಜಿಎಸ್‌ಟಿ ಪಿಸಿಟಿ–05**ರಲ್ಲಿ ತನ್ನ ಸಮ್ಮತಿಯನ್ನು ನೀಡತಕ್ಕದ್ದು; ಮತ್ತು

(ಬಿ) ಸರಕು ಮತ್ತು ಸೇವೆಗಳ ತೆರಿಗೆ ವೃತ್ತಿದಾರನು ಸಿದ್ಧಪಡಿಸಿದ ಯಾವುದೇ ವಿವರಪತ್ರದ ಸಲ್ಲಿಸುವಿಕೆಯನ್ನು ಖಚಿತಪಡಿಸುವ ಮೊದಲು, ರಿಟರ್ನ್‌ನಲ್ಲಿ ನಮೂದಿಸಲಾದ ಸಂಗತಿಗಳು ನಿಜವಾಗಿವೆ ಹಾಗೂ ಸರಿಯಾಗಿವೆ ಎನ್ನುವುದನ್ನು ಖಾತರಿಪಡಿಸಿಕೊಳ್ಳತಕ್ಕದ್ದು.

(10) ಸರಕು ಮತ್ತು ಸೇವೆಗಳ ತೆರಿಗೆ ವೃತ್ತಿದಾರನು.–

(ಎ) ಯುಕ್ತವಾದ ಜಾಗರೂಕತೆಯಿಂದ ವಿವರಪತ್ರಗಳನ್ನು ಸಿದ್ಧಪಡಿಸತಕ್ಕದ್ದು; ಮತ್ತು

(ಬಿ) ಆತನಿಂದ ಸಿದ್ಧಪಡಿಸಿದ ವಿವರಪತ್ರಗ ಅಂಕಿಚಿಹ್ನೆ ಸಹಿ ಹಾಕತಕ್ಕದ್ದು ಅಥವಾ ತನ್ನ ಪರಿಚಯ ಪತ್ರಗಳನ್ನು ಬಳಸಿ ವಿದ್ಯುನ್ಮಾನವಾಗಿ ದೃಢಪಡಿತಕ್ಕದ್ದು.

(11) ಯಾವುದೇ ಇತರ ರಾಜ್ಯ ಅಥವಾ ಕೆಂದ್ರಾಡಳಿತ ಪ್ರದೇಶದಲ್ಲಿ ದಾಖಲಾತಿ ಹೊಂದಿರುವ ಸರಕು ಮತ್ತು ಸೇವೆಗಳ ತೆರಿಗೆ ವೃತ್ತಿದಾರನನ್ನು, ಉಪನಿಯಮ (8)ರ ಉದ್ದೇಶಗಳಿಗಾಗಿ, ರಾಜ್ಯದಲ್ಲಿ ದಾಖಲಾತಿ ಹೊಂದಿದ್ದಾನೆ ಎಂದು ಪರಿಗಣಿಸತಕ್ಕದ್ದು.

84. ಹಾಜರಾಗುವಿಕೆಯ ಉದ್ದೇಶಗಳಿಗಾಗಿ ಷರತ್ತುಗಳು.– (1) ಯಾವೊಬ್ಬ ವ್ಯಕ್ತಿಯು, ನಿಯಮ 83ರ ಅಡಿಯಲ್ಲಿ ದಾಖಲಾತಿಯಾಗಿರುವ ಹೊರತು, ಯಾವೊಬ್ಬ ನೋಂದಾಯಿತ ವ್ಯಕ್ತಿ ಅಥವಾ ನೋಂದಾಯಿತನಲ್ಲದ ವ್ಯಕ್ತಿಯ ಪರವಾಗಿ, ಅಧಿನಿಯಮದ ಅಡಿಯಲ್ಲಿನ ಯಾವುದೇ ನಡಾವಳಿಗೆ ಸಂಬಂಧಿಸಿದಂತೆ, ಸರಕು ಮತ್ತು ಸೇವೆಗಳ ತೆರಿಗೆ ವೃತ್ತಿದಾರನಂತೆ, ಯಾವುದೇ ಪ್ರಾಧಿಕಾರದ ಮುಂದೆ ಹಾಜರಾಗಲು ಅರ್ಹನಿರತಕ್ಕದ್ದಲ್ಲ.

(2) ಅಧಿನಿಯಮದ ಅಡಿಯಲ್ಲಿನ ಯಾವುದೇ ನಡಾವಳಿಯಲ್ಲಿ, ಯಾವೊಬ್ಬ ನೋಂದಾಯಿತ ವ್ಯಕ್ತಿ ಅಥವಾ ನೋಂದಾಯಿತನಲ್ಲದ ವ್ಯಕ್ತಿಯ ಪರವಾಗಿ, ಯಾವುದೇ ಪ್ರಾಧಿಕಾರದ ಮುಂದೆ ಹಾಜರಾಗುವ ಒಬ್ಬ ಸರಕು ಮತ್ತು ಸೇವೆಗಳ ತೆರಿಗೆ ವೃತ್ತಿದಾರನು, ಅಂತಹ ಪ್ರಾಧಿಕಾರದ ಮುಂದೆ, ಅಗತ್ಯವಿದ್ದಲ್ಲಿ, ಅಂಥ ವ್ಯಕ್ತಿಯಿಂದ **ನಮೂನೆ ಜಿಎಸ್‌ಟಿ ಪಿಸಿಟಿ–05**ರಲ್ಲಿ ನೀಡಲಾದ ಪ್ರಾಧಿಕರಣ ಪತ್ರದ ಪ್ರತಿಯನ್ನು ಹಾಜರುಪಡಿಸತಕ್ಕದ್ದು.

ಅಧ್ಯಾಯ IX
ತೆರಿಗೆಯ ಸಂದಾಯ

85. ವಿದ್ಯುನ್ಮಾನ ಬಾಧ್ಯತೆ ರಿಜಿಸ್ಟರ್.– (1) ಪ್ರಕರಣ 49ರ ಉಪಪ್ರಕರಣ (7)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ವಿದ್ಯುನ್ಮಾನ ಬಾಧ್ಯತೆ ರಿಜಿಸ್ಟರನ್ನು ತೆರಿಗೆ, ಬಡ್ಡಿ, ದಂಡ ಹಾಗೂ ವಿಳಂಬ ಶುಲ್ಕ ಅಥವಾ ಯಾವುದೇ ಇತರೇ ಮೊತ್ತವನ್ನು ಸಂದಾಯ ಮಾಡಲು ಬಾಧ್ಯನಿರುವ ಪ್ರತಿಯೊಬ್ಬ ವ್ಯಕ್ತಿಯು ಸಾಮಾನ್ಯ ಪೋರ್ಟಲ್‌ನಲ್ಲಿನ **ನಮೂನೆ ಜಿಎಸ್‌ಟಿ ಪಿಎಂಟಿ–01**ರಲ್ಲಿ ನಿರ್ವಹಿಸತಕ್ಕದ್ದು ಮತ್ತು ಆತನಿಂದ ಸಂದಾಯ ಮಾಡಬೇಕಾದ ಎಲ್ಲಾ ಮೊತ್ತಗಳು ಸದರಿ ರಿಜಿಸ್ಟರ್‌ಗೆ ಖರ್ಚು ಹಾಕತಕ್ಕದ್ದು.

(2) ವ್ಯಕ್ತಿಯ ವಿದ್ಯುನ್ಮಾನ ತೆರಿಗೆ ಬಾಧ್ಯತೆ ರಿಜಿಸ್ಟರ್‌ನ್ನು ಕೆಳಕಂಡವುಗಳಿಂದ ಖರ್ಚು ಹಾಕತಕ್ಕದ್ದು–

(ಎ) ತೆರಿಗೆ ಮೊತ್ತ, ಬಡ್ಡಿ, ವಿಳಂಬ ಶುಲ್ಕಕ್ಕಾಗಿ ಸಂದಾಯ ಮಾಡಬೇಕಾದ ಮೊತ್ತ ಅಥವಾ ಸದರಿ ವ್ಯಕ್ತಿಯು ಒದಗಿಸಿದ ರಿಟರ್ನ್ ಪ್ರಕಾರ ಸಂದಾಯ ಮಾಡಬೇಕಾದ ಯಾವುದೇ ಇತರ ಮೊತ್ತ;

(ಬಿ) ಅಧಿನಿಯಮದ ಅಡಿಯಲ್ಲಿನ ಯಾವುದೇ ನಡಾವಳಿಗಳ ಅನುಸರಣೆಯಲ್ಲಿ ಯುಕ್ತ ಅಧಿಕಾರಿಯಿಂದ ನಿರ್ಧರಿಸಿದ ಅಥವಾ ಸದರಿ ವ್ಯಕ್ತಿಯಿಂದ ಖಚಿತ ಪಡಿಸಿದಂತೆ, ತೆರಿಗೆ, ಬಡ್ಡಿ, ದಂಡದ ಮೊತ್ತ, ಅಥವಾ ಸಂದಾಯ ಮಾಡಬೇಕಾದ ಯಾವುದೇ ಇತರ ಮೊತ್ತ;

(ಸಿ) ಪ್ರಕರಣ 42 ಅಥವಾ ಪ್ರಕರಣ 43 ಅಥವಾ ಪ್ರಕರಣ 50ರ ಅಡಿಯಲ್ಲಿನತಪ್ಪುಹೊಂದಾಣಿಕೆಯ ಪರಿಣಾಮವಾಗಿ ಸಂದಾಯ ಮಾಡಬೇಕಾದ ತೆರಿಗೆ ಮತ್ತು ಬಡ್ಡಿ ; ಅಥವಾ

(ಡಿ) ಕಾಲ ಕಾಲಕ್ಕೆ ಅರ್ಜಿತವಾಗುವಬಡ್ಡಿಯ ಯಾವುದೇ ಮೊತ್ತ.

(3) ಪ್ರಕರಣ 49ರ ಉಪಬಂಧಗಳಿಗೆ ಒಳಪಟ್ಟು, ನೋಂದಾಯಿತ ವ್ಯಕ್ತಿಯು ತನ್ನ ರಿಟರ್ನ್ ಪ್ರಕಾರವಾದ ಪ್ರತಿಯೊಂದು ಬಾಧ್ಯತೆಯ ಸಂದಾಯವನ್ನು, ನಿಯಮ 86ರ ಪ್ರಕಾರ ನಿರ್ವಹಿಸಲಾದ ವಿದ್ಯುನ್ಮಾನ ಜಮೆ ಖಾತೆ ಅಥವಾ ನಿಯಮ 87ರ ಪ್ರಕಾರ ನಿರ್ವಹಿಸಲಾದ ವಿದ್ಯುನ್ಮಾನ ನಗದು ಖಾತೆಗೆ ಖರ್ಚು ಹಾಕುವುದರ ಮೂಲಕ ಮಾಡತಕ್ಕದ್ದು

ಮತ್ತು ಅದರ ಪ್ರಕಾರ ವಿದ್ಯುನ್ಮಾನ ತೆರಿಗೆ ಬಾಧ್ಯತೆ ರಿಜಿಸ್ಟರ್‌ಗೆ ಜಮೆಗೊಳ್ಳತಕ್ಕದ್ದು.

(4) ಪ್ರಕರಣ 51ರ ಅಡಿಯಲ್ಲಿಮುರುಗಡೆಗೊಳಿಸಲಾದ ಮೊತ್ತ ಅಥವಾ ಪ್ರಕರಣ 52ರ ಅಡಿಯಲ್ಲಿಸಂಗ್ರಹಿಸಲಾದ ಮೊತ್ತ ಅಥವಾ ಹಿಮ್ಮುಖ ವಿಧಿಸುವಿಕೆಯ ಆಧಾರದಲ್ಲಿ ಸಂದಾಯ ಮಾಡಬೇಕಾದ ಮೊತ್ತಅಥವಾ ಪ್ರಕರಣ 10ರ ಅಡಿಯಲ್ಲಿಸಂದಾಯ ಮಾಡಬೇಕಾದ ಮೊತ್ತ ಅಥವಾ ಅಧಿನಿಯಮದ ಅಡಿಯಲ್ಲಿ ಬಡ್ಡಿ, ದಂಡ, ಶುಲ್ಕ ಅಥವಾ ಯಾವುದೇ ಇತರೇ ಮೊತ್ತಕ್ಕಾಗಿ ಸಂದಾಯ ಮಾಡಬೇಕಾದ ಯಾವುದೇ ಮೊತ್ತವನ್ನು, ನಿಯಮ 86ರ ಪ್ರಕಾರ ನಿರ್ವಹಿಸಲಾದ ವಿದ್ಯುನ್ಮಾನ ಜಮೆ ಖಾತೆ ಅಥವಾ ನಿಯಮ 87ರ ಪ್ರಕಾರ ನಿರ್ವಹಿಸಲಾದ ವಿದ್ಯುನ್ಮಾನ ನಗದು ಖಾತೆಗೆ ಖರ್ಚು ಹಾಕುವುದರ ಮೂಲಕ ಮಾಡತಕ್ಕದ್ದು ಮತ್ತು ಅದರ ಪ್ರಕಾರ ವಿದ್ಯುನ್ಮಾನ ತೆರಿಗೆ ಬಾಧ್ಯತೆ ರಿಜಿಸ್ಟರ್‌ಗೆ ಜಮೆಗೊಳ್ಳತಕ್ಕದ್ದು.

(5) ವಿದ್ಯುನ್ಮಾನ ಬಾಧ್ಯತೆ ರಿಜಿಸ್ಟರ್‌ನಲ್ಲಿ ಖರ್ಚು ಹಾಕಲಾದ ಯಾವುದೇ ತಗಾದೆಯ ಮೊತ್ತವು,ಅಪೀಲು ಪ್ರಾಧಿಕಾರ ಅಥವಾ ಅಪೀಲು ನ್ಯಾಯಾಧಿಕರಣ ಅಥವಾ ನ್ಯಾಯಾಲಯದಿಂದ ನೀಡಿದ ಪರಿಹಾರದಷ್ಟರ ಮಟ್ಟಿಗೆ ಇಳಿಕೆಯಾಗತಕ್ಕದ್ದು ಮತ್ತು ಅದರ ಪ್ರಕಾರ ವಿದ್ಯುನ್ಮಾನ ತೆರಿಗೆ ಬಾಧ್ಯತೆ ರಿಜಿಸ್ಟರ್‌ಗೆ ಜಮೆಗೊಳ್ಳತಕ್ಕದ್ದು.

(6) ತೆರಿಗೆದಾಯಕ ವ್ಯಕ್ತಿಯು ಕಾರಣ ಕೇಳುವ ನೋಟೀಸು ಅಥವಾ ತಗಾದೆ ಆದೇಶದಲ್ಲಿ ನಿರ್ದಿಷ್ಟಪಡಿಸಿದ ತೆರಿಗೆ, ಬಡ್ಡಿ ಮತ್ತು ದಂಡದ ಸಂದಾಯವನ್ನು ಮಾಡಿದರೆ, ವಿಧಿಸಲಾದ ಅಥವಾ ವಿಧಿಸುವಿಕೆಗೆ ಬಾಧ್ಯವಾದ ದಂಡದ ಮೊತ್ತವು, ಭಾಗಶಃವಾಗಿ ಅಥವಾ ಸಂದರ್ಭಾನುಸಾರವಾಗಿ ಪೂರ್ಣವಾಗಿ ಇಳಿಕೆಯಾಗತಕ್ಕದ್ದು ಅದರ ಪ್ರಕಾರ ವಿದ್ಯುನ್ಮಾನ ತೆರಿಗೆ ಬಾಧ್ಯತೆ ರಿಜಿಸ್ಟರ್‌ಗೆ ಜಮೆಗೊಳ್ಳತಕ್ಕದ್ದು.

(7) ಒಬ್ಬ ನೋಂದಾಯಿತ ವ್ಯಕ್ತಿಯು, ಆತನ ವಿದ್ಯುನ್ಮಾನ ಬಾಧ್ಯತೆ ರಿಜಿಸ್ಟರನಲ್ಲಿ ಯಾವುದೇ ನ್ಯೂನ್ಯತೆಗಳನ್ನು ಗಮನಿಸಿದ ತರುವಾಯ, ಅದನ್ನು ಈ ವಿಷಯದಲ್ಲಿನ ಅಸ್ತಿತ್ವದಲ್ಲಿರುವ ಕ್ಷೇತ್ರವ್ಯಾಪ್ತಿಯ ಅಧಿಕಾರಿಗೆ, ಸಾಮಾನ್ಯ ಪೋರ್ಟಲ್‌ನಲ್ಲಿ **ನಮೂನೆ ಜಿಎಸ್‌ಟಿ ಪಿಎಂಟಿ–04**ರಲ್ಲಿ ತಿಳಿಸತಕ್ಕದ್ದು.

86. ವಿದ್ಯುನ್ಮಾನ ಜಮೆ ಖಾತೆ.– (1) ವಿದ್ಯುನ್ಮಾನ ಜಮೆ ಖಾತೆಯನ್ನು ಅಧಿನಿಯಮದ ಅಡಿಯಲ್ಲಿ ಹೂಡುವಳಿ ತೆರಿಗೆ ಜಮೆಗೆ ಅರ್ಹನಾದ ಪ್ರತಿಯೊಬ್ಬ ವ್ಯಕ್ತಿಗೂ ಸಾಮಾನ್ಯ ಪೋರ್ಟಲ್‌ನಲ್ಲಿನ **ನಮೂನೆ ಜಿಎಸ್‌ಟಿ ಪಿಎಂಟಿ–02ರ**ಲ್ಲಿ ನಿರ್ವಹಿಸತಕ್ಕದ್ದು ಮತ್ತು ಅಧಿನಿಯಮದ ಅಡಿಯಲ್ಲಿನ ಹೂಡುವಳಿ ತೆರಿಗೆ ಜಮೆಯ ಪ್ರತಿಯೊಂದು ಕ್ಲೇಮು ಸದರಿ ಖಾತೆಗೆ ಜಮೆಗೊಳ್ಳತಕ್ಕದ್ದು.

(2) ಪ್ರಕರಣ 49ರ ಉಪಬಂಧಗಳಿಗೆ ಅನುಸಾರವಾದ ಯಾವುದೇ ಬಾಧ್ಯತೆಯನ್ನು ವಿಮೋಚಿಸಿದುದರಷ್ಟರ ಮಟ್ಟಿಗೆ ವಿದ್ಯುನ್ಮಾನ ಜಮೆ ಖಾತೆಯಲ್ಲಿ ಖರ್ಚು ಹಾಕತಕ್ಕದ್ದು.

(3) ಒಬ್ಬ ನೋಂದಾಯಿತ ವ್ಯಕ್ತಿಯು, ಪ್ರಕರಣ 54ರ ಉಪಬಂಧಗಳಿಗೆ ಅನುಸಾರವಾಗಿ ವಿದ್ಯುನ್ಮಾನ ಜಮೆ ಖಾತೆಯಿಂದ ಯಾವುದೇ ಬಳಕೆಯಾಗದ ಮೊತ್ತದ ಮರುಪಾವತಿಯನ್ನು ಕ್ಲೇಮು ಮಾಡಿದ್ದಲ್ಲಿ, ಕ್ಲೇಮು ಮಾಡಿರುವಷ್ಟರ ಮೊತ್ತದ ಮಟ್ಟಿಗೆ ಸದರಿ ಖಾತೆಯಲ್ಲಿ ಖರ್ಚುಹಾಕತಕ್ಕದ್ದು.

(4) ಹಾಗೆ ಸಲ್ಲಿಸಿದ ಮರುಪಾವತಿ, ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲಿ, ತಿರಸ್ಕೃತಗೊಂಡರೆ, ಉಪನಿಯಮ (3)ರ ಅಡಿಯಲ್ಲಿ ಖರ್ಚುಹಾಕಲಾದ ಮೊತ್ತವನ್ನು, ತಿರಸ್ಕೃತವಾದುದಷ್ಟರ ಮಟ್ಟಿಗೆ, ಯುಕ್ತ ಅಧಿಕಾರಿಯು, **ನಮೂನೆ ಜಿಎಸ್‌ಟಿ ಪಿಎಂಟಿ–03ರ**ಲ್ಲಿನ ಒಂದು ಆದೇಶದ ಮೂಲಕ ವಿದ್ಯುನ್ಮಾನ ಜಮೆ ಖಾತೆಗೆ ಪುನರ್–ಜಮೆಗೊಳಿಸತಕ್ಕದ್ದು.

(5) ಈ ಅಧ್ಯಾಯದ ಉಪಬಂಧಗಳಲ್ಲಿ ಉಪಬಂಧಿಸುದುದನ್ನು ಉಳಿದು, ಯಾವುದೇ ಸನ್ನಿವೇಶಗಳ ಅಡಿಯಲ್ಲಿ, ವಿದ್ಯುನ್ಮಾನ ಜಮೆ ಖಾತೆಗೆ ನೇರವಾಗಿ ನಮೂದು ಮಾಡತಕ್ಕದ್ದಲ್ಲ.

(6) ಒಬ್ಬ ನೋಂದಾಯಿತ ವ್ಯಕ್ತಿಯು, ಆತನ ವಿದ್ಯುನ್ಮಾನ ಜಮೆ ಖಾತೆಯಲ್ಲಿ ಯಾವುದೇ ನ್ಯೂನ್ಯತೆಗಳನ್ನು ಗಮನಿಸಿದ ತರುವಾಯ, ಅದನ್ನು ಈ ವಿಷಯದಲ್ಲಿನ ಅಸ್ತಿತ್ವದಲ್ಲಿರುವ ಕ್ಷೇತ್ರವ್ಯಾಪ್ತಿಯ ಅಧಿಕಾರಿಗೆ, ಸಾಮಾನ್ಯ ಪೋರ್ಟಲ್‌ನಲ್ಲಿ **ನಮೂನೆ ಜಿಎಸ್‌ಟಿ ಪಿಎಂಟಿ–04**ರಲ್ಲಿ ತಿಳಿಸತಕ್ಕದ್ದು.

ವಿವರಣೆ.– ಈ ನಿಯಮದ ಉದ್ದೇಶಕ್ಕಾಗಿ, ಅಪೀಲು ಅಂತಿಮವಾಗಿ ತಿರಸ್ಕೃತಗೊಂಡರೆ ಅಥವಾ ಕ್ಲೇಮುದಾರ ಯುಕ್ತ ಅಧಿಕಾರಿಗೆ ಆತನು ಅಪೀಲನ್ನು ಸಲ್ಲಿಸುವುದಿಲ್ಲ ಎನ್ನುವ ಒಂದು ವಾಗ್ದಾನವನ್ನು ನೀಡಿದರೆ, ಮರುಪಾವತಿ ತಿರಸ್ಕೃತಗೊಂಡಿದೆ ಎಂದು ಪರಿಭಾವಿಸತಕ್ಕದ್ದು, ಎಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

87. ವಿದ್ಯುನ್ಮಾನ ನಗದು ಖಾತೆ.– (1) ಪ್ರಕರಣ 49ರ ಉಪಪ್ರಕರಣ (1)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ವಿದ್ಯುನ್ಮಾನ ನಗದು ಖಾತೆಯನ್ನು ತೆರಿಗೆ, ಬಡ್ಡಿ, ದಂಡ ಹಾಗೂ ವಿಳಂಬ ಶುಲ್ಕ ಅಥವಾ ಯಾವುದೇ ಇತರೇ ಮೊತ್ತವನ್ನು ಸಂದಾಯ ಮಾಡಲು ಬಾಧ್ಯನಿರುವ ಪ್ರತಿಯೊಬ್ಬ ವ್ಯಕ್ತಿಯು, ತೇವಣಿ ಮಾಡಿದ ಮೊತ್ತವನ್ನು ಜಮೆಗೊಳಿಸುವುದಕ್ಕಾಗಿ ಮತ್ತು ಅದರಿಂದ ಸಂದಾಯವನ್ನು ತೆರಿಗೆ, ಬಡ್ಡಿ, ದಂಡ ಹಾಗೂ ವಿಳಂಬ ಶುಲ್ಕ ಅಥವಾ ಯಾವುದೇ ಇತರೇ ಮೊತ್ತಕ್ಕಾಗಿಖರ್ಚುಹಾಕುವುದಕ್ಕಾಗಿ, ಸಾಮಾನ್ಯ ಪೋರ್ಟಲ್‌ನಲ್ಲಿನ **ನಮೂನೆ ಜಿಎಸ್‌ಟಿ ಪಿಎಂಟಿ–05**ರಲ್ಲಿ ನಿರ್ವಹಿಸತಕ್ಕದ್ದು.

(2) ಯಾವುದೇ ವ್ಯಕ್ತಿಯು ಅಥವಾ ಆತನ ಪರವಾದ ಒಬ್ಬ ವ್ಯಕ್ತಿಯು, ಸಾಮಾನ್ಯ ಪೋರ್ಟಲ್‌ನಲ್ಲಿ ಒಂದು ಚಲನನ್ನು **ನಮೂನೆ ಜಿಎಸ್‌ಟಿ ಪಿಎಂಟಿ–06**ರಲ್ಲಿ ಸೃಷ್ಟಿಸತಕ್ಕದ್ದು ಮತ್ತು ತೆರಿಗೆ, ಬಡ್ಡಿ, ದಂಡ ಹಾಗೂ ವಿಳಂಬ ಶುಲ್ಕ ಅಥವಾ ಯಾವುದೇ ಇತರೇ ಮೊತ್ತಕ್ಕಾಗಿ ತೇವಣಿ ಮಾಡಬೆಕಾದ ಮೊತ್ತದ ವಿವರಗಳನ್ನು ನಮೂದಿಸತಕ್ಕದ್ದು:

(3) ಉಪ–ನಿಯಮ (2)ರ ಅಡಿಯಲ್ಲಿನ ತೇವಣಿಯನ್ನು ಕೆಳಕಂಡವುಗಳ ಯಾವುದಾದರೊಂದು ವಿಧಾನಗಳ ಮೂಲಕ ಮಾಡತಕ್ಕದ್ದು :

(i) ಪ್ರಾಧಿಕೃತ ಬ್ಯಾಂಕುಗಳ ಮೂಲಕ ಅಂತರ್ಜಾಲ ಬ್ಯಾಂಕಿಂಗ್;

(ii) ಪ್ರಾಧಿಕೃತ ಬ್ಯಾಂಕುಗಳ ಮೂಲಕ ಕ್ರಡಿಟ್‌ಕಾರ್ಡ್ ಅಥವಾ ಡೆಬಿಟ್‌ಕಾರ್ಡ್;

(iii) ಯಾವುದೇ ಬ್ಯಾಂಕಿನಿಂದ ರಾಷ್ಟ್ರೀಯ ವಿದ್ಯುನ್ಮಾನ ನಿಧಿ ವರ್ಗಾವಣೆ (ನ್ಯಾಷನಲ್ ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್) ಅಥವಾ ನೈಜ ಸಮಯದಲ್ಲಿ ಒಟ್ಟು ಇತ್ಯರ್ಥ (ರಿಯಲ್ ಟೈಮ್ ಗ್ರಾಸ್ ಸೆಟ್ಲ್‌ಮೆಂಟ್) ಅಥವಾ

(iv) ಪ್ರತಿ ತೆರಿಗೆ ಅವಧಿಗೆ ಪ್ರತಿಚಲನ್‌ಗೆ ಹತ್ತು ಸಾವಿರ ರೂಪಾಯಿವರೆಗಿನ ತೇವಣಿಗಾಗಿ, ನಗದು, ಚೆಕ್ ಅಥವಾ ಡಿಮ್ಯಾಂಡ್ ಡ್ರಾಫ್ಟ್‌ನ ಮೂಲಕ ಪ್ರಾಧಿಕೃತ ಬ್ಯಾಂಕುಗಳ ಮೂಲಕ ಕೌಂಟರ್ ಮೇಲಿನ ಸಂದಾಯ:

ಪರಂತು, ಕೌಂಟರ್ ಮೇಲಿನ ಸಂದಾಯ ಸಂದರ್ಭದಲ್ಲಿ ಪ್ರತಿ ಚಲನ್‌ಗೆ ಹತ್ತು ಸಾವಿರ ರೂಪಾಯಿಗಳ ತೇವಣಿಯ ನಿರ್ಬಂಧವು ಕೆಳಕಂಡವರು ಮಾಡುವ ತೇವಣಿಗಳಿಗೆ ಅನ್ವಯಿಸತಕ್ಕದಲ್ಲ–

(ಎ) ಸರ್ಕಾರಿ ಇಲಾಖೆಗಳು ಅಥವಾ ಆಯುಕ್ತರಿಂದ ಈ ಸಂಬಂಧದಲ್ಲಿ ಅಧಿಸೂಚಿಸಬಹುದಾದ ಯಾವುದೇ ವ್ಯಕ್ತಿಗಳಿಂದ ಮಾಡಬೇಕಾದ ಯಾವುದೇ ಇತರ ತೇವಣಿಗಳು;

(ಬಿ) ಯುಕ್ತ ಅಧಿಕಾರಿ ಅಥವಾ ನೋಂದಣಿಯಾಗಿರಲಿ ಅಥವಾ ಇಲ್ಲದಿರಲಿ, ಯಾವುದೇ ವ್ಯಕ್ತಿಯಿಂದಸಂದಾಯವಾಗೆ ಉಳಿದಿರುವ ಬಾಕಿಯನ್ನು, ಜಪ್ತಿ ಅಥವಾ ಚರಾಸ್ತಿ ಅಥವಾ ಚಿರಾಸ್ತಿಯ ಮಾರಾಟದ ಮೂಲಕ ವಸೂಲಿ ಮಾಡುವುದನ್ನು ಒಳಗೊಂಡಂತೆ, ವಸೂಲಿ ಮಾಡಲು ಪ್ರಾಧಿಕೃತನಾದ ಯಾವುದೇ ಇತರ ಅಧಿಕಾರಿ;

(ಸಿ) ಯುಕ್ತ ಅಧಿಕಾರಿ ಅಥವಾ ಯಾವುದೇ ತನಿಖೆ ಅಥವಾ ಜಾರಿ ಚಟುವಟಿಕೆ ಅಥವಾ ಮುಂಗಡ ತೇವಣಿಯ ಸಂದರ್ಭದಲ್ಲಿ ನಗದು, ಚೆಕ್ ಅಥವಾ ಡಿಮ್ಯಾಂಡ್‌ಡ್ರಾಫ್ಟ್ ರೂಪದಲ್ಲಿ ಮೊತ್ತಗಳನ್ನು ಸಂಗ್ರಹಿಸುವುದಕ್ಕಾಗಿ ಪ್ರಾಧಿಕರಣವನ್ನು ಪಡೆದಿರುವ ಯಾವುದೇ ಇತರೇ ಅಧಿಕಾರಿ;

ಮತ್ತು ಪರಂತು, ನಮೂನೆ ಜಿಎಸ್‌ಟಿ ಪಿಎಚಟಿ–6ರಲ್ಲಿ ಸಾಮಾನ್ಯ ಪೋರ್ಟಲ್‌ನಲ್ಲಿ ಜನರೇಟ್ ಮಾಡಿದ ಚಲನ್ ಹದಿನೈದು ದಿನಗಳ ಅವಧಿಯವರೆಗೆ ಚಾಲ್ತಿಯಲ್ಲಿರುತ್ತದೆ.

ವಿವರಣೆ:– ಈ ಉಪನಿಯಮದ ಉದ್ದೇಶಗಳಿಗಾಗಿ, ಚಲನ್‌ನಲ್ಲಿ ಸೂಚಿಸಲಾದ ಯಾವುದೇ ಮೊತ್ತವನ್ನು ಸಂದಾಯ ಮಾಡುವುದಕ್ಕಾಗಿ, ಅಂಥ ಸಂದಾಯಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಕಮಿಷನ್ ಯಾವುದಾದರು ಇದ್ದರೆ, ಅಂಥ ಸಂದಾಯವನ್ನು ಮಾಡುವ ವ್ಯಕ್ತಿಯಿಂದ ಅದನ್ನು ಭರಿಸತಕ್ಕದ್ದು ಎಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

(4) ಅಧಿನಿಯಮದ ಅಡಿಯಲ್ಲಿ ನೊಂದಾಯಿತನಾಗಿಲ್ಲದಿರುವ ವ್ಯಕ್ತಿಯಿಂದ ಮಾಡುವುದು ಅಗತ್ಯವಿರುವ ಯಾವುದೇ ಸಂದಾಯವನ್ನು, ಸಾಮಾನ್ಯ ಪೋರ್ಟಲ್ ಮೂಲಕ ಸೃಷ್ಟಿಸಲಾದ ತಾತ್ಕಾಲಿಕ ಗುರುತಿನ ಸಂಖ್ಯೆಯ ಆಧಾರದ ಮೇಲೆ ಮಾಡತಕ್ಕದ್ದು.

(5) ಯಾವುದೇ ಬ್ಯಾಂಕಿನಿಂದ ರಾಷ್ಟ್ರೀಯ ವಿದ್ಯುನ್ಮಾನ ನಿಧಿ ವರ್ಗಾವಣೆ (ನ್ಯಾಷನಲ್ ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್) ಅಥವಾ ನೈಜ ಸಮಯದಲ್ಲಿ ಒಟ್ಟು ಇತ್ಯರ್ಥ (ರಿಯಲ್ ಟೈಮ್ ಗ್ರಾಸ್ ಸೆಟ್ಲ್‌ಮೆಂಟ್) ರೂಪದಲ್ಲಿ ಸಂದಾಯ ಮಾಡಿದ್ದಲ್ಲಿ, ಆಜ್ಞಾಪನಾ ನಮೂನೆಯನ್ನು ಸಾಮಾನ್ಯ ಪೋರ್ಟಲ್‌ನಲ್ಲಿ ಚಲನ್‌ನೊಂದಿಗೆ ಸೃಷ್ಟಿಸತಕ್ಕದ್ದು ಮತ್ತು ಅದನ್ನು ಸಂದಾಯವನ್ನು ಎಲ್ಲಿ ಮಾಡಲಾಗಿರುತ್ತದೆಯೋ ಆ ಬ್ಯಾಂಕಿಗೆ ಸಲ್ಲಿಸತಕ್ಕದ್ದು:

ಪರಂತು, ಆಜ್ಞಾಪನಾ ನಮೂನೆಯು ಚಲನನ್ನು ಸೃಷ್ಟಿಸಿದ ದಿನಾಂಕದಿಂದ ಹದಿನೈದು ದಿನಗಳ ಒಂದು ಅವಧಿಯವರೆಗೆ ಸಿಂಧುವಾಗಿರುತಕ್ಕದ್ದು.

(6) ಪ್ರಾಧಿಕೃತ ಬ್ಯಾಂಕಿನಲ್ಲಿ ನಿರ್ವಹಿಸಲಾಗಿರುವ ಸಂಬಂಧಿತ ಸರ್ಕಾರಿ ಖಾತೆಗೆ ಮೊತ್ತವು ಯಶಸ್ವಿಯಾಗಿ ಜಮೆಗೊಂಡ ಮೇಲೆ, ಸಂಗ್ರಹಣಾ ಬ್ಯಾಂಕಿನಿಂದ ಒಂದು ಚಲನ್ ಗುರುತಿನ ಸಂಖ್ಯೆಯನ್ನು ಸೃಷ್ಟಿಸತಕ್ಕದ್ದು ಮತ್ತು ಅದನ್ನು ಚಲನ್‌ನಲ್ಲಿ ಸೂಚಿಸತಕ್ಕದ್ದು.

(7) ಸಂಗ್ರಹಣಾ ಬ್ಯಾಂಕಿನಿಂದ ಒಂದು ಚಲನ್ ಗುರುತಿನ ಸಂಖ್ಯೆಯನ್ನು ಸ್ವೀಕರಿಸಿದ ಮೇಲೆ, ಸದರಿ ಮೊತ್ತವನ್ನು, ಯಾರ ಪರವಾಗಿ ಠೇವಣಿಯನ್ನು ಮಾಡಲಾಗಿದೆಯೋ ಆ ವ್ಯಕ್ತಿಯ ವಿದ್ಯುನ್ಮಾನ ನಗದು ಖಾತೆಗೆ ಜಮ ಮಾಡತಕ್ಕದ್ದು ಮತ್ತು ಇದರ ಪರಿಣಾಮವಾಗಿ ಸಾಮಾನ್ಯ ಪೋರ್ಟಲ್ ಒಂದು ರಶೀದಿಯನ್ನು ಲಭ್ಯವಾಗುವಂತೆ ಮಾಡತಕ್ಕದ್ದು.

(8) ಸಂಬಂಧಪಟ್ಟ ವ್ಯಕ್ತಿಯ ಬ್ಯಾಂಕ್ ಖಾತೆ ಅಥವಾ ಆತನ ಪರವಾಗಿ ಠೇವಣಿ ಮಾಡುವ ವ್ಯಕ್ತಿಯ ಠೇವಣಿಗೆ ಖರ್ಚುಹಾಕಲಾಗಿದ್ದು ಆದರೆ ಚಲನ್ ಗುರುತಿನ ಸಂಖ್ಯೆ ಸೃಷ್ಟಿಯಾಗದಿದ್ದಲ್ಲಿ ಅಥವಾ ಸೃಷ್ಟಿಯಾಗಿದ್ದೂ, ಸಾಮಾನ್ಯ ಪೋರ್ಟಲ್‌ನಲ್ಲಿ ತಿಳಿಸಲಾಗದಿದ್ದಲ್ಲಿ, ಸದರಿ ವ್ಯಕ್ತಿಯು ಸಾಮಾನ್ಯ ಪೋರ್ಟಲ್‌ನಲ್ಲಿ **ನಮೂನೆ ಜಿಎಸ್‌ಟಿ ಪಿಎಂಟಿ–07**ರಲ್ಲಿ ಬ್ಯಾಂಕಿಗೆ ಅಥವಾ ಠೇವಣಿಯನ್ನು ಪ್ರಾರಂಭಿಸಿದ ವಿದ್ಯುನ್ಮಾನ ಗೇಟ್‌ವೇ ಮೂಲಕ ನಿವೇದಿಸಬಹುದು.

(9) ಪ್ರಕರಣ 51ರ ಅಡಿಯಲ್ಲಿಮುರುಗಡೆಗೊಳಿಸಲಾದ ಅಥವಾ ಪ್ರಕರಣ 52ರ ಅಡಿಯಲ್ಲಿ ಸಂಗ್ರಹಿಸಲಾದ ಮತ್ತು ತೆರಿಗೆದಾಯಕ ವ್ಯಕ್ತಿಯಿಂದ ಸದರಿ ಮೊತ್ತವನ್ನು ಮುರುಗಡೆಗೊಳಿಸಿದವನಿಂದ ಅಥವಾ ಸಂದರ್ಭಾನುಸಾರವಾಗಿ ಸಂಗ್ರಹಿಸಿದವರಿಂದ **ನಮೂನೆ ಜಿಎಸ್‌ಟಿಆರ್–02**ರಲ್ಲಿ ಕ್ಲೇಮು ಮಾಡಲಾದ ಯಾವುದೇ ಮೊತ್ತವನ್ನು ನಿಯಮ 87ರ ಉಪಬಂಧಗಳಿಗೆ ಅನುಸಾರವಾಗಿ ವಿದ್ಯುನ್ಮಾನ ನಗದು ಖಾತೆಗೆ ಜಮೆ ಮಾಡತಕ್ಕದ್ದು.

(10) ಒಬ್ಬ ವ್ಯಕ್ತಿಯವಿದ್ಯಾನ್ಮಾನ ನಗದು ಖಾತೆಯಿಂದ, ಯಾವುದೇ ಮೊತ್ತದ ಮರುಪಾವತಿಯನ್ನು ಕ್ಲೇಮ್ ಮಾಡಿದ್ದಲ್ಲಿ, ಸದರಿ ಮೊತ್ತವನ್ನು ವಿದ್ಯುನ್ಮಾನ ನಗದು ಖಾತೆಯಲ್ಲಿ ಖರ್ಚುಹಾಕತಕ್ಕದ್ದು.

(11) ಹಾಗೆ ಸಲ್ಲಿಸಿದ ಮರುಪಾವತಿ, ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲಿ, ತಿರಸ್ಕೃತಗೊಂಡರೆ, ಉಪನಿಯಮ (10)ರ ಅಡಿಯಲ್ಲಿ ಖರ್ಚುಹಾಕಲಾದ ಮೊತ್ತವನ್ನು, ತಿರಸ್ಕೃತವಾದುದಷ್ಟರ ಮಟ್ಟಿಗೆ, ಯುಕ್ತ ಅಧಿಕಾರಿಯು, **ನಮೂನೆ ಜಿಎಸ್‌ಟಿ ಪಿಎಂಟಿ–03**ರಲ್ಲಿನ ಒಂದು ಆದೇಶದ ಮೂಲಕ ವಿದ್ಯುನ್ಮಾನ ಜಮೆ ಖಾತೆಗೆ ಪುನರ್–ಜಮೆಗೊಳಿಸತಕ್ಕದ್ದು.

(12) ಒಬ್ಬ ನೋಂದಾಯಿತ ವ್ಯಕ್ತಿಯು, ಆತನ ವಿದ್ಯುನ್ಮಾನ ನಗದು ಖಾತೆಯಲ್ಲಿ ಯಾವುದೇ ನ್ಯೂನ್ಯತೆಗಳನ್ನು ಗಮನಿಸಿದ ತರುವಾಯ, ಅದನ್ನು ಈ ವಿಷಯದಲ್ಲಿನ ಅಸ್ತಿತ್ವದಲ್ಲಿರುವ ಕ್ಷೇತ್ರವ್ಯಾಪ್ತಿಯ ಅಧಿಕಾರಿಗೆ, ಸಾಮಾನ್ಯ ಪೋರ್ಟಲ್‌ನಲ್ಲಿ **ನಮೂನೆ ಜಿಎಸ್‌ಟಿ ಪಿಎಂಟಿ–04**ರಲ್ಲಿ ತಿಳಿಸತಕ್ಕದ್ದು.

ವಿವರಣೆ 1.– ಅಪೀಲು ಅಂತಿಮವಾಗಿ ತಿರಸ್ಕೃತವಾದರೆ ಮರುಪಾವತಿಯು ತಿರಸ್ಕೃತವಾಗಿದೆ ಪರಿಭಾವಿಸತಕ್ಕದ್ದು.

ವಿವರಣೆ 2.– ಈ ನಿಯಮದ ಉದ್ದೇಶಕ್ಕಾಗಿ, ಅಪೀಲು ಅಂತಿಮವಾಗಿ ತಿರಸ್ಕೃತಗೊಂಡರೆ ಅಥವಾ ಕ್ಲೇಮುದಾರ ಯುಕ್ತ ಅಧಿಕಾರಿಗೆ ಆತನು ಅಪೀಲನ್ನು ಸಲ್ಲಿಸುವುದಿಲ್ಲ ಎನ್ನುವ ಒಂದು ವಾಗ್ದಾನವನ್ನು ನೀಡಿದರೆ, ಮರುಪಾವತಿ ತಿರಸ್ಕೃತಗೊಂಡಿದೆ ಎಂದು ಪರಿಭಾವಿಸತಕ್ಕದ್ದು, ಎಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

88. ಪ್ರತಿಯೊಂದು ವ್ಯವಹಾರಕ್ಕಾಗಿ ಗುರುತಿನ ಸಂಖ್ಯೆ.– (1) ವಿದ್ಯುನ್ಮಾನ ನಗದು ಅಥವಾ ಜಮೆಖಾತೆಯಿಂದ ಪ್ರತಿ ಖರ್ಚು ಅಥವಾ ಸಂದರ್ಭಾನುಸಾರವಾಗಿ ಜಮೆಗಾಗಿ ಒಂದು ವಿಶಿಷ್ಟ ಗುರುತಿನ ಸಂಖ್ಯೆಯನ್ನು ಸಾಮಾನ್ಯ ಪೋರ್ಟಲ್‌ನಲ್ಲಿ ಸೃಷ್ಟಿಸತಕ್ಕದ್ದು.

(2) ಯಾವುದೇ ಬಾಧ್ಯತೆಯ ವಿಮೋಚನೆಗೆ ಸಂಬಂಧಿಸಿದ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಸಂಬಂಧಿಸಿದ ವಿದ್ಯುನ್ಮಾನ ಬಾಧ್ಯತೆ ರಿಜಿಸ್ಟರ್‌ನಲ್ಲಿ ಸೂಚಿಸತಕ್ಕದ್ದು.

(3) ಉಪ–ನಿಯಮ (2)ರಡಿಯಲ್ಲಿರುವುಗಳನ್ನು ಹೊರೆತುಪಡಿಸಿದ ಇತರೇ ಕಾರಣಗಳಿಗಾಗಿ ವಿದ್ಯುನ್ಮಾನ ಬಾಧ್ಯತೆಯಲ್ಲಿನ ಪ್ರತಿ ಜಮೆಗಾಗಿ ಸಾಮಾನ್ಯ ಪೋರ್ಟಲ್‌ನಲ್ಲಿ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಜನರೇಟ್ ಸೃಷ್ಟಿಸತಕ್ಕದ್ದು.

ಅಧ್ಯಾಯ – X
ಮರುಪಾವತಿ

89. ತೆರಿಗೆ, ದಂಡ, ಶುಲ್ಕಗಳು ಅಥವಾ ಯಾವುದೇ ಇತರ ಮೊತ್ತದ ಮರುಪಾವತಿಗಾಗಿ ಅರ್ಜಿ.– (1) ಭಾರತದ ಹೊರಗಡೆಗೆ ರಫ್ತಾದ ಸರಕುಗಳ ಮೇಲೆ ಸಂದಾಯ ಮಾಡಿದ ವಿಕೀಕೃತ ತೆರಿಗೆಯ ಮರುಪಾವತಿಯನ್ನು ಹೊರತುಪಡಿಸಿದಂತೆ, ಆತನಿಂದ ಸಂದಾಯವಾದ ತೆರಿಗೆ, ದಂಡ, ಶುಲ್ಕಗಳು ಅಥವಾ ಯಾವುದೇ ಇತರ ಮೊತ್ತದ ಮರುಪಾವತಿಯನ್ನು ಕ್ಲೇಮು ಮಾಡುವ ಪ್ರಕರಣ 55ರ ಅಡಿಯಲ್ಲಿ ನೀಡಲಾದ ಅಧಿಸೂಚನೆಯಿಂದ ವ್ಯಾಪ್ತವಾಗುವ ವ್ಯಕ್ತಿಗಳನ್ನು ಹೊರತು ಪಡಿಸಿದ ಯಾವೊಬ್ಬ ವ್ಯಕ್ತಿಯು, ಒಂದು ಅರ್ಜಿಯನ್ನು, **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–01**ರಲ್ಲಿ ಸಾಮಾನ್ಯ ಪೋರ್ಟಲ್‌ನ ಮುಖಾಂತರ ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಒದಗಿಸತಕ್ಕದ್ದು.

ಪರಂತು, ಪ್ರಕರಣ 49ರ ಉಪಪ್ರಕರಣ (6)ರ ಉಪಬಂಧಗಳಿಗೆ ಅನುಸಾರವಾಗಿ ವಿದ್ಯುನ್ಮಾನ ನಗದು ಖಾತೆಯಲ್ಲಿನ ಉಳಿಕೆಗೆ ಸಂಬಂಧಿಸಿದ ಮರುಪಾವತಿಯ ಯಾವುದೇ ಕ್ಲೇಮನ್ನು, ಸಂಬಂಧಿಸಿದ ತೆರಿಗೆ ಅವಧಿಗಾಗಿ, **ನಮೂನೆ ಜಿಎಸ್‌ಟಿಆರ್–3** ಅಥವಾ **ನಮೂನೆ ಜಿಎಸ್‌ಟಿಆರ್–4** ಅಥವಾ ಸಂದರ್ಭಾನುಸಾರವಾಗಿ **ನಮೂನೆ ಜಿಎಸ್‌ಟಿಆರ್–7**ರಲ್ಲಿ ಒದಗಿಸಿದ ರಿಟರ್ನಿನ ಮೂಲಕ ಮಾಡತಕ್ಕದ್ದು:

ಮತ್ತು ಪರಂತು, ವಿಶೇಷ ಆರ್ಥಿಕ ವಲಯ ಘಟಕ ಅಥವಾ ಒಂದು ವಿಶೇಷ ಆರ್ಥಿಕ ವಲಯ ಡೆವೆಲಪರ್‌ಗೆ ಸಂಬಂಧಿಸಿದಂತೆ, ಮರುಪಾವತಿಗಾಗಿ ಅರ್ಜಿಯನ್ನು ಕೆಳಕಂಡವರು ಸಲ್ಲಿಸತಕ್ಕದ್ದು–

(ಎ) ವಲಯದ ನಿರ್ಷ್ಟಪಡಿಸಿದ ಅಧಿಕಾರಿಯಿಂದ ಸಮ್ಮತಿಸಿದಂತಹ, ಪ್ರಾಧಿಕೃತ ಕಾರ್ಯಾಚರಣೆಗಳಿಗಾಗಿ ವಿಶೇಷ ಆರ್ಥಿಕ ವಲಯದಲ್ಲಿ ಅಂಥ ಸರಕುಗಳು ಪೂರ್ಣವಾಗಿ ಅಂಗೀಕಾರವಾದ ನಂತರ ಸರಕುಗಳ

ಪೂರೈಕೆದಾರ;

(ಬಿ) ವಲಯದ ನಿರ್ದಿಷ್ಟಪಡಿಸಿದ ಅಧಿಕಾರಿಯಿಂದ ಸಮ್ಮತಿಸಿದಂತಹ, ಪ್ರಾಧಿಕೃತ ಕಾರ್ಯಾಚರಣೆಗಳಿಗಾಗಿ ಸೇವೆಗಳ ಸ್ವೀಕೃತಿಗೆ ಸಂಬಂಧಿಸಿದ ಅಂಥ ಪುರಾವೆಗಳ ಜೊತೆಯಲ್ಲಿ ಸೇವೆಗಳ ಪೂರೈಕೆದಾರ

ಅಲ್ಲದೆ ಪರಂತು, ಪರಿಭಾವಿತ ರಫ್ತುಗಳು ಎಂದು ಗಣನೆಗೆ ತೆಗೆದುಕೊಳ್ಳಲಾದ ಪೂರೈಕೆಗಳಿಗೆ ಸಂಬಂಧಿಸಿದಂತೆ, ಅರ್ಜಿಯನ್ನು ಪರಿಭಾವಿತ ರಫ್ತಿನ ಪೂರೈಕಗಳನ್ನು ಸ್ವೀಕರಿಸುವವನು ಸಲ್ಲಿಸತಕ್ಕದ್ದು:

ಅಲ್ಲದೆ ಪರಂತು, ನೊಂದಣಿಯ ಸಮಯದಲ್ಲಿ ಪ್ರಕರಣ 27ರ ಅಡಿಯಲ್ಲಿ ಆತನಿಂದ ಠೇವಣಿಯಿಟ್ಟ ಮುಂಗಡ ತೆರಿಗೆಯಲ್ಲಿ, ಅರ್ಜಿದಾರನಿಂದ ಸಂದಾಯ ಮಾಡಬೇಕಾದ ತೆರಿಗೆಯನ್ನು ಹೊಂದಿಸಿದ ನಂತರದ ಯಾವುದೇ ಮೊತ್ತದ ಮರುಪಾವತಿಯನ್ನು, ಆತನಿಂದ ಒದಗಿಸುವುದು ಅಗತ್ಯವಿರುವ ಕೊನೆಯ ರಿಟರ್ನಿನಲ್ಲಿ ಕ್ಲೇಮು ಮಾಡತಕ್ಕದ್ದು.

(2) ಉಪನಿಯಮ (1)ರ ಅಡಿಯಲ್ಲಿನ ಅರ್ಜಿಯು, ಅರ್ಜಿದಾರನಿಗೆ ಮರುಪಾವತಿಯು ಬಾಕಿಯಿದೆ ಎಂದು ಸಂಸ್ಥಾಪಿಸಲು, ಅನ್ವಯವಾಗುವಂತೆ, ಕೆಳಕಂಡ ಯಾವುದಾದರೊಂದು ದಸ್ತಾವೇಜುಗಳ ಪುರಾವೆಗಳೊಂದಿಗೆ ಜೊತೆಗೂಡಿರತಕ್ಕದ್ದು:–

(ಎ) ಆದೇಶದ ಉಲ್ಲೇಖ ಸಂಖ್ಯೆ ಮತ್ತು ಅಂಥ ಮರುಪಾವತಿಗೆ ಕಾರಣವಾಗುವ ಯುಕ್ತ ಅಧಿಕಾರಿಯಿಂದ ಅಥವಾ ಒಂದು ಅಪೀಲು ಪ್ರಾಧಿಕಾರ ಅಥವಾ ಅಪೀಲು ನ್ಯಾಯಾಧಿಕರಣ ಅಥವಾ ನ್ಯಾಯಾಲಯದಿಂದ ಹೊರಡಿಸಿದ ಆದೇಶದ ಒಂದು ಪ್ರತಿ ಅಥವಾ ಪ್ರಕರಣ 107ರ ಉಪಪ್ರಕರಣ (6)ರಲ್ಲಿ ಅಥವಾ ಪ್ರಕರಣ 112ರ ಉಪಪ್ರಕರಣ (8)ರಲ್ಲಿ ನಿರ್ದಿಷ್ಟಪಡಿಸಿರುವ ಮರುಪಾವತಿಯಾಗಿ ಕ್ಲೇಮುಮಾಡಿರುವ ಸಂದಾಯದ ಉಲ್ಲೇಖ ಸಂಖ್ಯೆ;

(ಬಿ) ಶಿಪ್ಪಿಂಗ್ ಬಿಲ್ಲುಗಳ ಅಥವಾ ರಫ್ತುವಿನ ಬಿಲ್ಲುಗಳ ಸಂಖ್ಯೆ ಮತ್ತು ದಿನಾಂಕ ಮತ್ತು ಸರಕುಗಳ ರಫ್ತುವಿನ ಕಾರಣದಿಂದಾಗಿ ಮರುಪಾವತಿಯ ಸಂದರ್ಭದಲ್ಲಿ, ಸಂಬಂಧಿಸಿದ ರಫ್ತು ಬೆಲೆಪಟ್ಟಿಗಳ ಸಂಖ್ಯೆ ಮತ್ತು ದಿನಾಂಕವನ್ನು ಒಳಗೊಂಡಿರುವ ಒಂದು ವಿವರಪತ್ರ;

(ಸಿ) ಬೆಲೆಪಟ್ಟಿಗಳ ಮತ್ತು ಸೇವೆಗಳ ರಫ್ತುವಿನ ಕಾರಣದಿಂದಾಗಿ ಮರುಪಾವತಿಯ ಸಂದರ್ಭದಲ್ಲಿ, ಸಂಬಂಧಿಸಿದ ಬ್ಯಾಂಕಿನ ರಿಯಲೈಸೇಷನ್ ಪ್ರಮಾಣಪತ್ರಗಳು ಅಥವಾ ಸಂದರ್ಭಾನುಸಾರವಾಗಿ ವಿದೇಶಿ ಒಳಮುಖ ಹಣರವಾನೆ ಪ್ರಮಾಣಪತ್ರಗಳ ಸಂಖ್ಯೆ ಮತ್ತು ದಿನಾಂಕವನ್ನು ಒಳಗೊಂಡಿರುವ ಒಂದು ವಿವರಪತ್ರ;

(ಡಿ) ವಿಶೇಷ ಆರ್ಥಿಕ ವಲಯ ಘಟಕ ಅಥವಾ ವಿಶೇಷ ಆರ್ಥಿಕ ವಲಯ ಡೆವೆಲಪರ್‌ಗೆ ಮಾಡಲಾದ ಸರಕುಗಳ ಪೂರೈಕೆಯ ಸಂದರ್ಭದಲ್ಲಿ, ಉಪನಿಯಮ (1)ರ ದ್ವಿತೀಯ ಪರಂತುಕದಲ್ಲಿ ನಿರ್ದಿಷ್ಟಪಡಿಸಿದ ಹಿಂಬರಹಕ್ಕೆ ಸಂಬಂಧಿಸಿದ ಪುರಾವೆಯೊಂದಿಗೆ ನಿಯಮ 46ರಲ್ಲಿ ಉಪಬಂಧಿಸಿದಂತೆ ಬೆಲೆಪಟ್ಟಿಗಳ ಸಂಖ್ಯೆ ಮತ್ತು ದಿನಾಂಕವನ್ನು ಒಳಗೊಂಡಿರುವ ಒಂದು ವಿವರಪತ್ರ;

(ಇ) ಬೆಲೆಪಟ್ಟಿಗಳ ಸಂಖ್ಯೆ ಮತ್ತು ದಿನಾಂಕ, ಉಪನಿಯಮ (1)ರ ದ್ವಿತೀಯ ಪರಂತುಕದಲ್ಲಿ ನಿರ್ದಿಷ್ಟಪಡಿಸಿದ ಹಿಂಬರಹಕ್ಕೆ ಸಂಬಂಧಿಸಿದ ಪುರಾವೆ ಮತ್ತು ವಿಶೇಷ ಆರ್ಥಿಕ ವಲಯ ಘಟಕ ಅಥವಾ ವಿಶೇಷ ಆರ್ಥಿಕ ವಲಯ ಡೆವೆಲಪರ್‌ಗೆ ಮಾಡಲಾದ ಸರಕುಗಳ ಪೂರೈಕೆಯ ಸಂದರ್ಭದಲ್ಲಿ, ವಿಶೇಷ ಆರ್ಥಿಕ ವಲಯ ಅಧಿನಿಯಮ, 2005ರ ಅಡಿಯಲ್ಲಿ ಪರಿಭಾಷಿಸಿದಂತಹ ಪ್ರಾಧಿಕೃತ ಕಾರ್ಯಾಚರಣೆಗಳಿಗಾಗಿ, ಪೂರೈಕೆದಾರನಿಗೆ ಸ್ವೀಕರಿಸುವವನಿಂದ ಮಾಡಲಾದ, ಅವುಗಳ ಪುರಾವೆ ಜೊತೆಯಲ್ಲಿನ, ಸಂದಾಯದ ವಿವರಗಳನ್ನು ಒಳಗೊಂಡಿರುವ ಒಂದು ವಿವರಪತ್ರ;

(ಎಫ್) ವಿಶೇಷ ಆರ್ಥಿಕ ವಲಯ ಘಟಕ ಅಥವಾ ವಿಶೇಷ ಆರ್ಥಿಕ ವಲಯ ಡೆವೆಲಪರ್‌ಗೆ ಮಾಡಲಾದ ಸರಕು ಅಥವ ಸೇವೆಗಳ ಪೂರೈಕೆಯ ಸಂದರ್ಭದಲ್ಲಿ, ಸರಕು ಅಥವ ಸೇವೆಗಳ ಪೂರೈಕೆದಾರನಿಂದ ಸಂದಾಯ ಮಾಡಿದ ತೆರಿಗೆಯ ಹೂಡುವಳಿ ತೆರಿಗೆ ಜಮೆಯನ್ನು ವಿಶೇಷ ಆರ್ಥಿಕ ವಲಯ ಘಟಕ ಅಥವಾ ವಿಶೇಷ ಆರ್ಥಿಕ ವಲಯ

ಡೆವೆಲಪರ್ ಉಪಯೋಗಿಸಿಲ್ಲ ಎನ್ನುವ ಒಂದು ಘೋಷಣಾ ಪತ್ರ;

(ಜಿ) ಪರಭಾವಿತ ರಫ್ತುಗಳ ಕಾರಣದಿಂದಾಗಿ ಮರುಪಾವತಿಯ ಸಂದರ್ಭದಲ್ಲಿ, ಈ ಸಂಗಬಂಧದಲ್ಲಿ ಅಧಿಸೂಚಿಸಬಹುದಾದ ಅಂಥ ಇತರೇ ಪುರಾವೆಯ ಜೊತೆಗಿನ ಬೆಲೆಪಟ್ಟಿಗಳ ಸಂಖ್ಯೆ ಮತ್ತು ದಿನಾಂಕವನ್ನು ಒಳಗೊಂಡಿರುವ ಒಂದು ವಿವರಪತ್ರ;

(ಹೆಚ್) ದರವಿಲ್ಲದ ಅಥವಾ ಸಂಪೂರ್ಣ ವಿನಾಯಿತಿ ಪೂರೈಕೆಗಳನ್ನು ಹೊರತುಪಡಿಸಿದಂತೆ ಹುಟ್ಟುವಳಿ ಪೂರೈಕೆಗಳ ಮೇಲಿನ ತೆರಿಗೆ ದರಕ್ಕಿಂತ ಹೂಡುವಳಿಗಳ ಮೇಲಿನ ತೆರಿಗೆ ದರ ಹೆಚ್ಚಿರುವ ಕಾರಣಕ್ಕಾಗಿ ಜಮೆಯು ಸಂಚಿತಗೊಂಡಿದ್ದಲ್ಲಿ, ಪ್ರಕರಣ 54ರ ಉಪಪ್ರಕರಣ (3)ರ ಅಡಿಯಲ್ಲಿ ಬಳಕೆಯಾಗದ ಹೂಡುವಳಿ ತೆರಿಗೆ ಜಮೆಯ ಮರುಪಾವತಿಗೆ ಕ್ಲೇಮು ಸಂಬಂಧಿಸಿರುವ ಸಂದರ್ಭದಲ್ಲಿ, ಒಂದು ತೆರಿಗೆ ಅವಧಿಯಲ್ಲಿ ಸ್ವೀಕರಿಸಿದ ಮತ್ತು ನೀಡಿದ ಬೆಲೆಪಟ್ಟಿಗಳ ಸಂಖ್ಯೆ ಮತ್ತು ದಿನಾಂಕವನ್ನು ಒಳಗೊಂಡಿರುವ **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–01ರ** ಅನುಬಂಧ 1ರಲ್ಲಿ ಒಂದು ವಿವರಪತ್ರ;

(ಐ) ತಾತ್ಕಾಲಿಕ ಕರನಿರ್ಧರಣೆಯ ಅಂತಿಮಗೊಳಿಸುವಿಕೆಯ ಕಾರಣದಿಂದಾಗಿ ಮರುಪಾವತಿ ಉದ್ಭವಿಸಿದ ಸಂದರ್ಭದಲ್ಲಿ, ಅಂತಿಮ ಕರನಿರ್ಧರಣಾ ಆದೇಶದ ಉಲ್ಲೇಖ ಸಂಖ್ಯೆ ಮತ್ತು ಸದರಿ ಆದೇಶದ ಒಂದು ಪ್ರತಿ;

(ಜೆ) ರಾಜ್ಯದೊಳಗಿನ ಪೂರೈಕೆ ಎಂದು ಪರಿಗಣಿಸಲಾಗಿರುವ ಆದರೆ ತರುವಾಯವಾಗಿ ಅಂತರ–ರಾಜ್ಯ ಪೂರೈಕೆ ಎಂದಾದ ವ್ಯವಹಾರಗಳ ವಿವರಗಳನ್ನು ತೋರಿಸುವ ಒಂದು ವಿವರಪತ್ರ;

(ಕೆ) ತೆರಿಗೆಯ ಹೆಚ್ಚುವರಿ ಸಂದಾಯದ ಕಾರಣದಿಂದಾದ ಕ್ಲೇಮಿನ ಮೊತ್ರದ ವಿವರಗಳನ್ನು ತೋರಿಸುವ ಒಂದು ವಿವರಪತ್ರ;

(ಎಲ್) ಕ್ಲೇಮು ಮಾಡಿರುವ ಮರುಪಾವತಿಯ ಮೊತ್ತವು ಎರಡು ಲಕ್ಷ ರೂಪಾಯಿಗಳನ್ನು ಮೀರದಿದ್ದಲ್ಲಿ, ಮರುಪಾವತಿ ಎಂದು ಕ್ಲೇಮು ಮಾಡಿರುವ ತೆರಿಗೆ, ಬಡ್ಡಿ ಅಥವಾ ಯಾವುದೇ ಇತರ ಮೊತ್ತದೆ ಹೊರೆಯನ್ನು ಯಾವೊಬ್ಬ ಇತರ ವ್ಯಕ್ತಿಗೆ ವರ್ಗಾಯಿಸಿಲ್ಲ ಎನ್ನುವ ಒಂದ ಘೋಷಣಾ ಪತ್ರ:

ಪರಂತು, ಪ್ರಕರಣ 54ರ ಉಪಪ್ರಕರಣ (8)ರ ಖಂಡ (ಎ) ಅಥವಾ ಖಂಡ (ಬಿ) ಅಥವಾ ಖಂಡ (ಸಿ) ಅಥವಾ ಖಂಡ (ಡಿ) ಅಥವಾ ಖಂಡ (ಎಫ್)ನ ಅಡಿಯಲ್ಲಿ ವ್ಯಾಪ್ತವಾದ ಪ್ರಕರಣಗಳಿಗೆ ಸಂಬಂಧಿಸಿದಂತೆ, ಒಂದು ಘೋಷಣೆಯನ್ನು ಒದಗಿಸಬೇಕಾದ ಅಗತ್ಯತೆಯಿರುವುದಿಲ್ಲ;

(ಎಮ್) ಕ್ಲೇಮು ಮಾಡಿರುವ ಮರುಪಾವತಿಯ ಮೊತ್ತವು ಎರಡು ಲಕ್ಷ ರೂಪಾಯಿಗಳನ್ನು ಮೀರಿದ್ದಲ್ಲಿ, ಮರುಪಾವತಿ ಎಂದು ಕ್ಲೇಮು ಮಾಡಿರುವ ತೆರಿಗೆ, ಬಡ್ಡಿ ಅಥವಾ ಯಾವುದೇ ಇತರ ಮೊತ್ತದೆ ಹೊರೆಯನ್ನು ಯಾವೊಬ್ಬ ಇತರ ವ್ಯಕ್ತಿಗೆ ವರ್ಗಾಯಿಸಿಲ್ಲ ಎಂದು ಚಾರ್ಟರ್ಡ್ ಅಕೌಂಟೆಂಟ್ ಅಥವಾ ಒಬ್ಬ ಕಾಸ್ಟ್ ಅಕೌಂಟೆಂಟ್‌ನಿಂದ ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–01ರ ಅನುಬಂಧ 2ರಲ್ಲಿ ನೀಡಿರುವ ಒಂದು ಪ್ರಮಾಣಪತ್ರ:

ಪರಂತು, ಪ್ರಕರಣ 54ರ ಉಪಪ್ರಕರಣ (8)ರ ಖಂಡ (ಎ) ಅಥವಾ ಖಂಡ (ಬಿ) ಅಥವಾ ಖಂಡ (ಸಿ) ಅಥವಾ ಖಂಡ (ಡಿ) ಅಥವಾ ಖಂಡ (ಎಫ್)ನ ಅಡಿಯಲ್ಲಿ ವ್ಯಾಪ್ತವಾದ ಪ್ರಕರಣಗಳಿಗೆ ಸಂಬಂಧಿಸಿದಂತೆ, ಒಂದು ಘೋಷಣೆಯನ್ನು ಒದಗಿಸಬೇಕಾದ ಅಗತ್ಯತೆಯಿರುವುದಿಲ್ಲ;

ವಿವರಣೆ.– ಈ ನಿಯಮದ ಉದ್ದೇಶಗಳಿಗಾಗಿ–

(i) ಪ್ರಕರಣ 54ರ ಉಪಪ್ರಕರಣ (8)ರ ಖಂಡ (ಸಿ)ಯಲ್ಲಿ ಉಲ್ಲೇಖಿಸಿದ ಮರುಪಾವತಿಗಳ ಸಂದರ್ಭದಲ್ಲಿ, ಪದಾವಳಿಯಾದ **"ಬೆಲೆಪಟ್ಟಿ"** ಎಂದರೆ ಪ್ರಕರಣ 31ರಲ್ಲಿ ಒಳಗೊಂಡಿರುವ ಉಪಬಂಧಗಳನ್ನು ಧೃಢೀಕರಿಸುವ ಬೆಲೆಪಟ್ಟಿ;

(ii) ಸ್ವೀಕರಿಸುವವನಿಂದ ತೆರಿಗೆಯ ಮೊತ್ತವನ್ನು ವಸೂಲು ಮಾಡಲಾಗಿದ್ದಲ್ಲಿ, ತೆರಿಗೆಯ ಹೊರೆಯು ಅಂತಿಮ ಗ್ರಾಹಕನಿಗೆ ವರ್ಗಾಯಿಸಲಾಗಿದೆ ಎಂದು ಪರಿಭಾವಿತವಾಗತಕ್ಕದ್ದು.

(3) ಅರ್ಜಿಯು, ಹೂಡುವಳಿ ತೆರಿಗೆ ಜಮೆಯ ಮರುಪಾವತಿಗೆ ಸಂಬಂಧಿಸಿದಲ್ಲಿ, ವಿದ್ಯುನ್ಮಾನ ಜಮೆ ಖಾತೆಗೆ, ಅರ್ಜಿದಾರನಿಂದ ಹಾಗೆ ಕ್ಲೇಮು ಮಾಡಿದ ಮರುಪಾವತಿಗೆ ಸಮಾನವಾದ ಒಂದು ಮೊತ್ತವನ್ನು ಖರ್ಚುಹಾಕತಕ್ಕದ್ದು.

(4) ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕೇಂದ್ರ ಅಧಿನಿಯಮ 13)ರ ಪ್ರಕರಣ 16ರ ಉಪಪ್ರಕರಣ(3)ರ ಉಪಬಂಧಗಳಿಗೆ ಅನುಸಾರವಾಗಿ, ಬಾಂಡ್ ಅಥವಾ ವಾಗ್ದಾನ ಪತ್ರದ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡದೇ ಸರಕು ಅಥವಾ ಸೇವೆಗಳ ಅಥವಾ ಅವುಗಳೆರೆಡರ ಶೂನ್ಯ–ದರ ಪೂರೈಕೆಯ ಸಂದರ್ಭದಲ್ಲಿ, ಹೂಡುವಳಿ ತೆರಿಗೆ ಜಮೆಯ ಮರುಪಾವತಿಯನ್ನು ಕೆಳಕಂಡ ಸೂತ್ರದ ಪ್ರಕಾರ ಮಂಜೂರು ಮಾಡತಕ್ಕದ್ದು–

ಮರುಪಾವತಿ ಮೊತ್ತ= (ಶೂನ್ಯ–ದರ ಸರಕುಗಳ ಪೂರೈಕೆಯ ವಹಿವಾಟು +ಶೂನ್ಯ–ದರ ಸೇವೆಗಳ ಪೂರೈಕೆಯ ವಹಿವಾಟು) x ನಿವ್ವಳ ಐಟಿಸಿ / ಹೊಂದಿಸಿದ ಒಟ್ಟು ವಹಿವಾಟು

ಇದರಲ್ಲಿ,–

(ಎ) "ಮರುಪಾವತಿ ಮೊತ್ರ" ಎಂದರೆ, ಅಂಗೀಕರಿಸಬಹುದಾದ ಗರಿಷ್ಟ ಮರುಪಾವತಿ;

(ಬಿ) "ನಿವ್ವಳ ಐಟಿಸಿ" ಎಂದರೆ, ಸಂಬಂಧಿಸಿದ ಅವಧಿಯಲ್ಲಿನ ಹೂಡುವಳಿಗಳು ಮತ್ತು ಹೂಡುವಳಿ ಸೇವೆಗಳ ಮೇಲೆ ಉಪಯೋಗಿಸಿದ ಹೂಡುವಳಿ ತೆರಿಗೆ ಜಮೆ;

(ಸಿ) "ಶೂನ್ಯ–ದರ ಸರಕುಗಳ ಪೂರೈಕೆಯ ವಹಿವಾಟು" ಎಂದರೆ ಸಂಬಂಧಿಸಿದ ಅವಧಿಯಲ್ಲಿ, ಬಾಂಡ್ ಅಥವಾ ವಾಗ್ದಾನ ಪತ್ರದ ಅಡಿಯಲ್ಲಿ ತೆರಿಗೆಯನ್ನು ಸಂದಾಯರಹಿತವಾಗಿ ಮಾಡಿದ ಸರಕುಗಳ ಶೂನ್ಯ–ದರ ಪೂರೈಕೆ;

(ಡಿ) "ಶೂನ್ಯ–ದರ ಸೇವೆಗಳ ಪೂರೈಕೆಯ ವಹಿವಾಟು" ಎಂದರೆ ಬಾಂಡ್ ಅಥವಾ ವಾಗ್ದಾನ ಪತ್ರದ ಅಡಿಯಲ್ಲಿ ತೆರಿಗೆಯನ್ನು ಸಂದಾಯರಹಿತವಾಗಿ, ಕೆಳಕಂಡ ವಿಧಾನದಲ್ಲಿ ಲೆಕ್ಕಾಹಾಕಿ ಮಾಡಿದ ಸೇವೆಗಳ ಶೂನ್ಯ–ದರ ಪೂರೈಕೆ, ಎಂದರೆ:–

ಶೂನ್ಯ–ದರ ಸೇವೆಗಳ ಪೂರೈಕೆಯು, "ಶೂನ್ಯ–ದರ ಸೇವೆಗಳ ಪೂರೈಕೆಗಳಿಗಾಗಿ ಸಂಬಂಧಿಸಿದ ಅವಧಿಯಲ್ಲಿ ಸ್ವೀಕರಿಸಿರುವ ಮತ್ತು "ಶೂನ್ಯ–ದರ ಸೇವೆಗಳ ಪೂರೈಕೆಗಾಗಿ ಸ್ವೀಕರಿಸಿದ, ಅದಕ್ಕಾಗಿ ಸೇವೆಗಳ ಪೂರೈಕೆ ಸಂಬಂಧಿಸಿದ ಅವಧಿಯಲ್ಲಿ ಪೂರ್ಣಗೊಳ್ಳದಿರುವ, ಮುಂಗಡಗಳಷ್ಟು ಇಳಿಕೆ ಮಾಡಿ, ಪೂರೈಕೆಯು ಪೂರ್ಣಗೊಂಡಿರುವ ಅದಕ್ಕಾಗಿ ಸಂದಾಯವನ್ನು, ಸಂಬಂಧಿಸಿದ ಅವಧಿಗಿಂತ ಹಿಂದಿನ ಯಾವುದೇ ಅವಧಿಯಲ್ಲಿ "ಶೂನ್ಯ–ದರ ಸೇವೆಗಳ ಪೂರೈಕೆಗಾಗಿ ಮುಂಗಡವಾಗಿ ಸ್ವೀಕರಿಸಿರುವ ಸಂದಾಯಗಳ ಸಮಗ್ರವಾಗಿರುತ್ತದೆ;

(ಇ) "ಹೊಂದಿಸಿದ ಒಟ್ಟು ವಹಿವಾಟು" ಎಂದರೆ, ಸಂಬಂಧಿಸಿದ ಅವಧಿಯಲ್ಲಿನ "ಶೂನ್ಯ–ದರದ ಪೂರೈಕೆಗಳನ್ನು ಹೊರತುಪಡಿಸಿದ ವಿನಾಯಿತಿ ಪೂರೈಕೆಗಳನ್ನು ಹೊರತುಪಡಿಸಿ, ಪ್ರಕರಣ 2ರ ಉಪಪ್ರಕರಣ (112)ರಲ್ಲಿ ಪರಿಭಾಷಿಸಿದಂತೆ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿನ ವಹಿವಾಟು;

(ಎಫ್) "ಸಂಬಂಧಿಸಿದ ಅವಧಿ" ಎಂದರೆ ಕ್ಲೇಮನ್ನು ಸಲ್ಲಿಸಲಾಗಿರುವ ಅವಧಿ.

(5) ವಿಲೋಮ ಸುಂಕ ಸ್ವರೂಪದ ಕಾರಣದಿಂದಾಗಿ ಮರುಪಾವತಿಯ ಸಂದರ್ಭದಲ್ಲಿ, ಹೂಡುವಳಿ ತೆರಿಗೆ ಜಮೆಯ ಮರುಪಾವತಿಯನ್ನು ಕೆಳಕಂಡ ಸೂತ್ರದ ಪ್ರಕಾರ ಮಂಜೂರು ಮಾಡತಕ್ಕದ್ದು–

ಗರಿಷ್ಟ ಮರುಪಾವತಿ ಮೊತ್ರ= (ವಿಲೋಮ ದರದ ಸರಕುಗಳ ಪೂರೈಕೆಯ ವಹಿವಾಟು) x ನಿವ್ವಳ ಐಟಿಸಿ /

ಹೊಂದಿಸಿದ ಒಟ್ಟು ವಹಿವಾಟು–ಅಂಥ ವಿಲೋಮ ದರದ ಸರಕುಗಳ ಪೂರೈಕೆ ಮೇಲೆ ಸಂದಾಯ ಮಾಡಬೇಕಾದ ತೆರಿಗೆ.

ವಿವರಣೆ.– ಈ ಉಪ ನಿಯಮದ ಉದ್ದೇಶಗಳಿಗಾಗಿ ಪದಾವಳಿಯಾದ "ನಿವ್ವಳ ಐಟಿಸಿ" ಮತ್ತು "ಹೊಂದಿಸಿದ ಒಟ್ಟು ವಹಿವಾಟು" ಎನ್ನುವುದು ಉಪ ನಿಯಮ (4)ರಲ್ಲಿ ಅವುಗಳಿಗೆ ನೀಡಲಾದ ಅದೇ ಅರ್ಥವನ್ನು ಹೊಂದಿರತಕ್ಕದ್ದು.

90. ಸ್ವೀಕೃತಿ.– (1) ಅರ್ಜಿಯು, ವಿದ್ಯುನ್ಮಾನ ನಗದು ಖಾತೆಯಿಂದ ಮರುಪಾವತಿಯ ಕ್ಲೇಮಿಗೆ ಸಂಬಂಧಿಸಿದಲ್ಲಿ, ಮರುಪಾವತಿಗೆ ಕ್ಲೇಮನ್ನು ಸಲ್ಲಿಸಿದ ದಿನಾಂಕವನ್ನು ಸ್ಪಷ್ಟವಾಗಿ ಸೂಚಿಸಿದ ಒಂದು ಸ್ವೀಕೃತಿಯನ್ನು **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–02**ರಲ್ಲಿ ಅರ್ಜಿದಾರನಿಗೆ, ಸಾಮಾನ್ಯ ಪೋರ್ಟಲ್‌ನ ಮೂಲಕ, ವಿದ್ಯುನ್ಮಾನ ರೀತಿಯಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು ಮತ್ತು ಪ್ರಕರಣ 54ರ ಉಪಪ್ರಕರಣ (7)ರಲ್ಲಿ ನಿರ್ದಿಷ್ಟಪಡಿಸಿದ ಕಾಲದ ಅವಧಿಯನ್ನು ಅಂಥ ಸಲ್ಲಿಕೆಯ ದಿನಾಂಕದಿಂದ ಲೆಕ್ಕಹಾಕತಕ್ಕದ್ದು.

(2) ವಿದ್ಯುನ್ಮಾನ ನಗದು ಖಾತೆಯಿಂದ ಮರುಪಾವತಿಗಾಗಿ ಕ್ಲೇಮನ್ನು ಹೊರತುಪಡಿಸಿದ, ಮರುಪಾವತಿಯ ಅರ್ಜಿಯನ್ನು ಯುಕ್ತ ಅಧಿಕಾರಿಗೆ ರವಾನಿಸತಕ್ಕದ್ದು, ಅವರು, ಸದರಿ ಅರ್ಜಿಯನ್ನು, ಸಲ್ಲಿಸಿದ ಹದಿನೈದು ದಿನಗಳ ಅವಧಿಯ ಒಳಗಾಗಿ ಅದರ ಸಂಪೂರ್ಣತೆಗಾಗಿ ಸೂಕ್ಷ್ಮ ಪರಿಶೀಲನೆ ಮಾಡತಕ್ಕದ್ದು, ಅರ್ಜಿಯು ನಿಯಮ 89ರ ಉಪನಿಯಮ (2), (3) ಮತ್ತು (4)ರ ನಿಬಂಧನೆಗಳಿಗನುಸಾರವಾಗಿ ಪೂರ್ಣವಾಗಿರುವುದು ಕಂಡಬಂದಲ್ಲಿ, ಮರುಪಾವತಿಗೆ ಕ್ಲೇಮನ್ನು ಸಲ್ಲಿಸಿದ ದಿನಾಂಕವನ್ನು ಸ್ಪಷ್ಟವಾಗಿ ಸೂಚಿಸಿದ ಒಂದು ಸ್ವೀಕೃತಿಯನ್ನು **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–02**ರಲ್ಲಿ ಅರ್ಜಿದಾರನಿಗೆ, ಸಾಮಾನ್ಯ ಪೋರ್ಟಲ್‌ನ ಮೂಲಕ, ವಿದ್ಯುನ್ಮಾನ ರೀತಿಯಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು ಮತ್ತು ಪ್ರಕರಣ 54ರ ಉಪಪ್ರಕರಣ (7)ರಲ್ಲಿ ನಿರ್ದಿಷ್ಟಪಡಿಸಿದ ಕಾಲದ ಅವಧಿಯನ್ನು ಅಂಥ ಸಲ್ಲಕೆಯ ದಿನಾಂಕದಿಂದ ಲೆಕ್ಕಹಾಕತಕ್ಕದ್ದು.

(3) ಯಾವುದೇ ನ್ಯೂನ್ಯತೆಯನ್ನು ಗಮನಿಸಿದಲ್ಲಿ, ಯುಕ್ತ ಅಧಿಕಾರಿಯು, ಅರ್ಜಿದಾರನಿಗೆ ನ್ಯೂನ್ಯತೆಗಳನ್ನು**ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–03**ರಲ್ಲಿ ಸಾಮಾನ್ಯ ಪೋರ್ಟಲ್‌ನ ಮೂಲಕ, ವಿದ್ಯುನ್ಮಾನ ರೀತಿಯಲ್ಲಿ, ಅಂಥ ನ್ಯೂನ್ಯತೆಗಳನ್ನು ಸರಿಪಡಿಸಿದ ನಂತರ ಒಂದು ಹೊಸ ಮರುಪಾವತಿ ಅರ್ಜಿಯನ್ನು ಸಲ್ಲಿಸುವಂತೆ ಆತನನ್ನು ಅಗತ್ಯಪಡಿಸಿ ತಿಳಿಸುವುದು.

(4) ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳ ಅಡಿಯಲ್ಲಿ, **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–03**ರಲ್ಲಿ ಯಾವುದೇ ನ್ಯೂನ್ಯತೆಗಳನ್ನು ತಿಳಿಸಲಾಗಿದ್ದಲ್ಲಿ, ಉಪನಿಯಮ (3)ರ ಅಡಿಯಲ್ಲಿ ತಿಳಿಸಿದ ನ್ಯೂನ್ಯತೆಗಳೊಂದಿಗೆ ಈ ನಿಯಮದ ಅಡಿಯಲ್ಲಿ ತಿಳಿಸಲಾದ ನ್ಯೂನ್ಯತೆಗಳು ಎಂದು ಸಹ ಪರಿಭಾವಿಸತಕ್ಕದ್ದು.

(5) ಕೇಂದ್ರ ಸರಕು ಮತ್ತು ಸೇವೆಗಳ ನಿಯಮಗಳ ಅಡಿಯಲ್ಲಿ, **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–03**ರಲ್ಲಿ ಯಾವುದೇ ನ್ಯೂನ್ಯತೆಗಳನ್ನು ತಿಳಿಸಲಾಗಿದ್ದಲ್ಲಿ, ಉಪನಿಯಮ (3)ರ ಅಡಿಯಲ್ಲಿ ತಿಳಿಸಿದ ನ್ಯೂನ್ಯತೆಗಳೊಂದಿಗೆ ಈ ನಿಯಮದ ಅಡಿಯಲ್ಲಿ ತಿಳಿಸಲಾದ ನ್ಯೂನ್ಯತೆಗಳು ಎಂದು ಪರಿಭಾವಿಸತಕ್ಕದ್ದು.

91. ತಾತ್ಕಾಲಿಕ ಮರುಪಾವತಿಯ ಮಂಜೂರಾತಿ.– (1) ಪ್ರಕರಣ 54ರ ಉಪಪ್ರಕರಣ (6)ರ ಉಪಬಂಧಗಳಿಗೆ ಅನುಸಾರವಾಗಿ ತಾತ್ಕಾಲಿಕ ಮರುಪಾವತಿಯನ್ನು, ಮರುಪಾವತಿಗೆ ಸಂಬಂಧಿಸಿದ ತೆರಿಗೆ ಅವಧಿಯ ನಿಕಟ ಪೂರ್ವವಾಗಿ ಬರುವ ಐದು ವರ್ಷಗಳ ಯಾವುದೇ ತೆರಿಗೆ ಅವಧಿಯ ಸಮಯದಲ್ಲಿ, ಬಚ್ಚಿಟ್ಟ ತೆರಿಗೆಯ ಮೊತ್ತ ಇನ್ನೂರ ಐವತ್ತು ಲಕ್ಷ ರೂಪಾಯಿಗಳನ್ನು ಮೀರಿರುವಲ್ಲಿ, ಅಧಿನಿಯಮದ ಅಡಿಯಲ್ಲಿ ಅಥವಾ ಅಸ್ತಿತ್ವದಲ್ಲಿನ ಕಾನೂನಿನ ಅಡಿಯಲ್ಲಿನ ಯಾವುದೇ ಅಪರಾಧಕ್ಕಾಗಿ ಮರುಪಾವತಿಯನ್ನು ಕ್ಲೇಮು ಮಾಡಿರುವ ವ್ಯಕ್ತಿಯು ಅಭಿಯೋಜನೆಗೊಂಡಿಲ್ಲಬಾರದು ಎನ್ನುವ ಷರತ್ತಿಗೆ ಒಳಪಟ್ಟು ಮಂಜೂರು ಮಾಡತಕ್ಕದ್ದು.

(2) ಯುಕ್ತ ಅಧಿಕಾರಿಯು, ಕ್ಲೇಮನ್ನು ಮತ್ತು ಅದಕ್ಕೆ ಪೂರಕವಾಗಿ ಸಲ್ಲಿಸಲಾಗಿರುವ ಪುರಾವೆಯ ಸೂಕ್ಷ್ಮ ಪರಿಶೀಲನೆಯ ನಂತರ ಮತ್ತು ಮರುಪಾವತಿಯಂತೆ ಕ್ಲೇಮು ಮಾಡಿರುವ ಮೊತ್ತವು, ಪ್ರಕರಣ 54ರ ಉಪಪ್ರಕರಣ (6)ರ

ಉಪಬಂಧಗಳಿಗೆ ಅನುಸಾರವಾಗಿ ಅರ್ಜಿದಾರನಿಗೆ ಉಪನಿಯಮ (1)ರ ಅಡಿಯಲ್ಲಿ ಬಾಕಿ ಇದೆ ಎಂದು ಮೇಲ್ನೋಟಕ್ಕೆ ಮನದಟ್ಟು ಮಾಡಿಕೊಂಡ ನಂತರ, ನಿಯಮ 90ರ ಉಪನಿಯಮ (1) ಅಥವಾ ಉಪನಿಯಮ (2)ರ ಅಡಿಯಲ್ಲಿನ ಸ್ವೀಕೃತಿಯ ದಿನಾಂಕದಿಂದ ಏಳು ದಿನಗಳನ್ನು ಮೀರದ ಅವಧಿಯ ಒಳಗಾಗಿ ತಾತ್ಕಾಲಿಕ ಆಧಾರದ ಮೇಲೆ ಸದರಿ ಅರ್ಜಿದಾರನಿಗೆ ಬಾಕಿಯಿರುವ ಮರುಪಾವತಿಯ ಮೊತ್ತವನ್ನು ಮಂಜೂರು ಮಾಡಿ **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–04**ರಲ್ಲಿ ಒಂದು ಆದೇಶವನ್ನು ಮಾಡತಕ್ಕದ್ದು.

(3) ಯುಕ್ತ ಅಧಿಕಾರಿಯು, ಉಪನಿಯಮ (2)ರ ಅಡಿಯಲ್ಲಿ ಮಂಜೂರು ಮಾಡಿದ ಮೊತ್ತಕ್ಕಾಗಿ **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–05**ರಲ್ಲಿ ಸಂದಾಯದ ಸೂಚನೆಯನ್ನು ನೀಡತಕ್ಕದ್ದು ಮತ್ತು ಅದು, ಆತನ ನೋಂದಣಿ ವಿವರಗಳಲ್ಲಿ ನಮೂದಿಸಿದ ಅಥವಾ ಮರುಪಾವತಿಯ ಅರ್ಜಿಯಲ್ಲಿ ನಿರ್ದಿಷ್ಟಪಡಿಸಿದ ಅರ್ಜಿದಾರನ ಬ್ಯಾಂಕಿನ ಯಾವುದಾದರೊಂದು ಖಾತೆಗೆ ವಿದ್ಯುನ್ಮಾನವಾಗಿ ಜಮೆಗೊಳಿಸತಕ್ಕದ್ದು,

92. ಮರುಪಾವತಿ ಮಂಜೂರಾತಿಯ ಆದೇಶ.– (1) ಅರ್ಜಿಯನು ಪರೀಕ್ಷಿಸಿದ ನಂತರ, ಯುಕ್ತ ಅಧಿಕಾರಿಯು, ಪ್ರಕರಣ 54ರ ಉಪಪ್ರಕರಣ (5)ರ ಅಡಿಯಲ್ಲಿ ಮರುಪಾವತಿಯು ಬಾಕಿಯಿದೆ ಮತ್ತು ಅರ್ಜಿದಾರನಿಗೆ ಸಂದಾಯ ಮಾಡಬಹುದು ಎನ್ನುವುದನ್ನು ಮನದಟ್ಟು ಮಾಡಿಕೊಂಡಲ್ಲಿ, ಹಕ್ಕುಳ ಅರ್ಜಿದಾರನಿಗೆ ಮರುಪಾವತಿಯ ಮೊತ್ತವನ್ನು ಮಂಜೂರು ಮಾಡಿ **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–06**ರಲ್ಲಿ ಒಂದು ಆದೇಶವನ್ನು ಅದರಲ್ಲಿ, ಪ್ರಕರಣ 54ರ ಉಪಪ್ರಕರಣ (6)ರ ಅಡಿಯಲ್ಲಿ ತಾತ್ಕಾಲಿಕ ಆಧಾರದಲ್ಲಿ ಆತನಿಗೆ ಮರುಪಾವತಿ ಮಾಡಲಾಗಿರುವ ಮೊತ್ತ ಏನಾದರು ಇದ್ದರೆ, ಅದನ್ನು, ಅಧಿನಿಯಮದ ಅಡಿಯಲ್ಲಿ ಅಥವಾ ಅಸ್ತಿತ್ವದಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಬಾಕಿಯಿರುವ ಯಾವುದೇ ತಗಾದೆಗೆ ಪ್ರತಿಯಾಗಿ ಹೊಂದಿಸಿದ ಮೊತ್ತವನ್ನು ಮತ್ತು ಮರುಪಾವತಿ ಮಾಡಬಹುದಾದ ಉಳಿಕೆ ಮೊತ್ತವನ್ನು ನಮೂದಿಸಿ ಮಾಡತಕ್ಕದ್ದು.

ಪರಂತು, ಮರುಪಾವತಿಯ ಮೊತ್ತವನ್ನು, ಅಧಿನಿಯಮದ ಅಡಿಯಲ್ಲಿ ಅಥವಾ ಅಸ್ತಿತ್ವದಲ್ಲಿರುವಯಾವುದೇ ಕಾನೂನಿನ ಅಡಿಯಲ್ಲಿ ಬಾಕಿಯಿರುವ ಯಾವುದೇ ತಗಾದೆಗೆ ಪ್ರತಿಯಾಗಿ ಸಂಪೂರ್ಣವಾಗಿ ಹೊಂದಾಣಿಕೆ ಮಾಡಿದ್ದಲ್ಲಿ, ಹೊಂದಾಣಿಕೆಯ ವಿವರವನ್ನು ನೀಡುವ ಒಂದು ಆದೇಶವನ್ನು **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–07**ರ ಭಾಗ–ಎನಲ್ಲಿ ನೀಡತಕ್ಕದ್ದು.

(2) ಯುಕ್ತ ಅಧಿಕಾರಿ ಅಥವಾ ಆಯುಕ್ತರು, ಮರುಪಾವತಿಯ ಮೊತ್ತ ಉಪಪ್ರಕರಣ (10) ಅಥವಾ, ಸಂದರ್ಭಾನುಸಾರವಾಗಿ, ಉಪಪ್ರಕರಣ (11)ರ ಉಪಬಂಧಗಳ ಅಡಿಯಲ್ಲಿ ತಡೆಹಿಡಿಯುವಿಕೆಗೆ ಬಾಧ್ಯವಾಗುತ್ತದೆ ಎಂದು ಮನದಟ್ಟು ಮಾಡಿಕೊಂಡಿದ್ದಲ್ಲಿ, ಒಂದು ಆದೇಶವನ್ನು **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–07**ರ ಭಾಗ–ಬಿನಲ್ಲಿ ಅಂಥ ಮರುಪಾವತಿಯನ್ನು ತಡೆಹಿಡಿಯುವುದಕ್ಕಾಗಿ ಕಾರಣಗಳನ್ನು ತಿಳಿಸಿ ಮಾಹಿತಿ ನೀಡತಕ್ಕದ್ದು.

(3) ಯುಕ್ತ ಅಧಿಕಾರಿಯು, ಮರುಪಾವತಿಯಾಗಿ ಕ್ಲೇಮು ಮಾಡಿರುವ ಮೊತ್ತದ ಪೂರ್ಣ ಅಥವಾ ಯಾವುದೇ ಭಾಗ, ಅಂಗೀಕಾರಾರ್ಹವಲ್ಲ ಅಥವಾ ಅರ್ಜಿದಾರನಿಗೆ ಸಂದಾಯ ಮಾಡುವಾಗಿಲ್ಲ ಎಂದು, ಲಿಖಿತವಾಗಿ ದಾಖಲಿಸಬಹುದಾದ ಕಾರಣಗಳಿಗಾಗಿ ಮನದಟ್ಟು ಮಾಡಿಕೊಂಡರೆ, ಆತನು, ಅರ್ಜಿದಾರನಿಗೆ **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–08**ರಲ್ಲಿ ಒಂದು ಸೂಚನಾ ಪತ್ರವನ್ನು, ಅಂಥ ಸೂಚನಾ ಪತ್ರ ನೀಡಿದ ಹದಿನೈದು ದಿನಗಳ ಅವಧಿಯ ಒಳಗಾಗಿ **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–09**ರಲ್ಲಿ ಉತ್ತರವನ್ನು ನೀಡುವಂತೆ ಆತನನ್ನು ಅಗತ್ಯಪಡಿಸಿ ನೀಡತಕ್ಕದ್ದು ಮತ್ತು ಉತ್ತರವನ್ನು ಪರಿಗಣಿಸಿದ ನಂತರ, ಮರುಪಾವತಿಯ ಮೊತ್ತವನ್ನು ಪೂರ್ಣವಾಗಿ ಅಥವಾ ಭಾಗವಾಗಿ ಮಂಜೂರು ಮಾಡಿ ಅಥವಾ ಸದರಿ ಮರುಪಾವತಿ ಕ್ಲೇಮನ್ನು ತಿರಸ್ಕರಿಸಿ **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–06**ರಲ್ಲಿ ಒಂದು ಆದೇಶವನ್ನು ಮಾಡತಕ್ಕದ್ದು ಮತ್ತು ಸದರಿ ಆದೇಶವನ್ನು ಅರ್ಜಿದಾರನಿಗೆ ವಿದ್ಯುನ್ಮಾನವಾಗಿ ಲಭ್ಯ ಮಾಡತಕ್ಕದ್ದು ಮತ್ತು ಉಪನಿಯಮ (1)ರ ಉಪಬಂಧಗಳು, ಮರುಪಾವತಿ ಕ್ಲೇಮು ಮಾಡಿರುವಷ್ಟರ ಮಟ್ಟಿಗೆ ಯಥೋಚಿತ ವ್ಯತ್ಯಾಸಗಳೊಡನೆ ಅನ್ವಯವಾಗತಕ್ಕದ್ದು:

ಪರಂತು, ಅರ್ಜಿದಾರನಿಗೆ ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ನೀಡದೇ ಯಾವುದೇ ಮರುಪಾವತಿಯ ಅರ್ಜಿಯನ್ನು ತಿರಸ್ಕರಿಸತಕ್ಕದ್ದಲ್ಲ.

(4) ಯುಕ್ತ ಅಧಿಕಾರಿಯು, ಉಪನಿಯಮ (1) ಅಥವಾ ಉಪನಿಯಮ (2)ರ ಅಡಿಯಲ್ಲಿ ಮರುಪಾವತಿ ಮಾಡಬಹುದಾದ ಮೊತ್ತವನ್ನು ಪ್ರಕರಣ 54ರ ಉಪಪ್ರಕರಣ (8)ರ ಅಡಿಯಲ್ಲಿ ಅರ್ಜಿದಾರನಿಗೆ ಸಂದಾಯ ಮಾಡಬಹುದು ಎಂದು ಮನದಟ್ಟು ಮಾಡಿಕೊಂಡರೆ, ಆತನು **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–06**ರಲ್ಲಿ ಒಂದು ಆದೇಶವನ್ನು ಮಾಡತಕ್ಕದ್ದು ಮತ್ತು ಮರುಪಾವತಿಯ ಮೊತ್ತಕ್ಕಾಗಿ**ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–05**ರಲ್ಲಿ ಸಂದಾಯದ ಸೂಚನೆಯನ್ನು ನೀಡತಕ್ಕದ್ದು ಮತ್ತು ಅದನ್ನು, ತನ್ನ ನೋಂದಣಿ ವಿವರಗಳಲ್ಲಿ ನಮೂದಿಸಿದ ಮತ್ತು ಮರುಪಾವತಿಯ ಅರ್ಜಿಯಲ್ಲಿ ನಿರ್ದಿಷ್ಟಪಡಿಸಿದ ಅರ್ಜಿದಾರನ ಬ್ಯಾಂಕಿನ ಯಾವುದಾದರೊಂದು ಖಾತೆಗೆ ವಿದ್ಯುನ್ಮಾನವಾಗಿ ಜಮೆಗೊಳಿಸತಕ್ಕದ್ದು,

(5) ಯುಕ್ತ ಅಧಿಕಾರಿಯು, ಉಪನಿಯಮ (1) ಅಥವಾ ಉಪನಿಯಮ (2)ರ ಅಡಿಯಲ್ಲಿ ಮರುಪಾವತಿ ಮಾಡಬಹುದಾದ ಮೊತ್ತವನ್ನು ಪ್ರಕರಣ 54ರ ಉಪಪ್ರಕರಣ (8)ರ ಅಡಿಯಲ್ಲಿ ಅರ್ಜಿದಾರನಿಗೆ ಸಂದಾಯ ಮಾಡಲಾಗುವುದಿಲ್ಲ ಎಂದು ಮನದಟ್ಟು ಮಾಡಿಕೊಂಡರೆ, ಆತನು **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–06**ರಲ್ಲಿ ಒಂದು ಆದೇಶವನ್ನು ಮಾಡತಕ್ಕದ್ದು ಮತ್ತು ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿಗೆ ಜಮೆಗೊಳಿಸಬೇಕಾದ ಮರುಪಾವತಿಯ ಮೊತ್ತಕ್ಕಾಗಿ**ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–05**ರಲ್ಲಿ ಸೂಚನೆಯನ್ನು ನೀಡತಕ್ಕದ್ದು.

93. ತಿರಸ್ಕೃತ ಮರುಪಾವತಿ ಕ್ಲೇಮು ಮೊತ್ತದ ಜಮೆ.– (1) ನಿಯಮ 90ರ ಉಪನಿಯಮ (3)ರ ಅಡಿಯಲ್ಲಿ ಯಾವುದೇ ನ್ಯೂನ್ಯತೆಗಳನ್ನುತಿಳಸಲಾಗಿದ್ದಲ್ಲಿ, ನಿಯಮ 89ರ ಉಪನಿಯಮ (3)ರ ಅಡಿಯಲ್ಲಿ ಖರ್ಚುಹಾಕಲಾದ ಮೊತ್ತವನ್ನು ವಿದ್ಯುನ್ಮಾನ ಜಮೆ ಖಾತೆಗೆ ಪುನರ್–ಜಮೆಗೊಳಿಸತಕ್ಕದ್ದು.

(2) ಮರುಪಾವತಿಯಾಗಿ ಕ್ಲೇಮು ಮಾಡಿದ ಯಾವುದೇ ಮೊತ್ತವನ್ನು ನಿಯಮ 92ರ ಅಡಿಯಲ್ಲಿ ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲಿ ತಿರಸ್ಕರಿಸಿದ್ದಲ್ಲಿ, ತಿರಸ್ಕರಣೆಯಷ್ಟರ ಮಟ್ಟಿಗೆ ಖರ್ಚುಹಾಕಲಾದ ಮೊತ್ತವನ್ನು, **ನಮೂನೆ ಜಿಎಸ್‌ಟಿ ಪಿಎಂಟಿ–03**ರಲ್ಲಿ ಒಂದು ಆದೇಶದ ಮೂಲಕ ವಿದ್ಯುನ್ಮಾನ ಜಮೆ ಖಾತೆಗೆ ಪುನರ್–ಜಮೆಗೊಳಿಸತಕ್ಕದ್ದು.

ವಿವರಣೆ.– ಈ ನಿಯಮದ ಉದ್ದೇಶಗಳಿಗಾಗಿ, ಅಪೀಲು ಅಂತಿಮವಾಗಿ ತಿರಸ್ಕೃತಗೊಂಡರೆ ಅಥವಾ ಕ್ಲೇಮುದಾರ ಯುಕ್ತ ಅಧಿಕಾರಿಗೆ ಆತನು ಅಪೀಲನ್ನು ಸಲ್ಲಿಸುವುದಿಲ್ಲ ಎನ್ನುವ ಒಂದು ವಾಗ್ದಾನವನ್ನು ನೀಡಿದರೆ, ಮರುಪಾವತಿ ತಿರಸ್ಕೃತಗೊಂಡಿದೆ ಎಂದು ಪರಿಭಾವಿಸತಕ್ಕದ್ದು.

94. ವಿಳಂಬ ಮರುಪಾವತಿಗಳ ಮೇಲಿನ ಬಡ್ಡಿ ಮಂಜೂರಾತಿಯ ಆದೇಶ.– ಯಾವುದೇ ಬಡ್ಡಿ, ಅರ್ಜಿದಾರನಿಗೆ ಪ್ರಕರಣ 56ರ ಅಡಿಯಲ್ಲಿ ಬಾಕಿಯಿರುವಲ್ಲಿ ಮತ್ತು ಸಂದಾಯ ಮಾಡಬೇಕಿದ್ದಲ್ಲಿ, ಯುಕ್ತ ಅಧಿಕಾರಿಯು, **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–05**ರಲ್ಲಿ ಸಂದಾಯದ ಸೂಚನೆಯೊಂದಿಗೆಒಂದು ಆದೇಶವನ್ನು ಮಾಡತಕ್ಕದ್ದು, ಅದರಲ್ಲಿ, ವಿಳಂಬವಾದ ಮರುಪಾವತಿಯ ಮೊತ್ತ, ಬಡ್ಡಿಯನ್ನು ಸಂದಾಯ ಮಾಡಬೇಕಾದ ವಿಳಂಬದ ಅವಧಿ ಮತ್ತು ಸಂದಾಯ ಮಾಡಬೇಕಾದ ಬಡ್ಡಿಯ ಮೊತ್ತವನ್ನು ನಿರ್ದಿಷ್ಟ ಪಡಿಸತಕ್ಕದ್ದು, ಮತ್ತು ಅಂಥ ಬಡ್ಡಿಯ ಮೊತ್ತವನ್ನು ಆತನ ನೋಂದಣಿ ವಿವರಗಳಲ್ಲಿ ನಮೂದಿಸಿದ ಮತ್ತು ಮರುಪಾವತಿಯ ಅರ್ಜಿಯಲ್ಲಿ ನಿರ್ದಿಷ್ಟಪಡಿಸಿದ ಅರ್ಜಿದಾರನ ಬ್ಯಾಂಕಿನ ಯಾವುದಾದರೊಂದು ಖಾತೆಗೆ ವಿದ್ಯುನ್ಮಾನವಾಗಿ ಜಮೆಗೊಳಿಸತಕ್ಕದ್ದು,

95. ಕೆಲವು ವ್ಯಕ್ತಿಗಳಿಗೆ ತೆರಿಗೆಯ ಮರುಪಾವತಿ.– (1) ಪ್ರಕರಣ 55ರ ಅಡಿಯಲ್ಲಿ ನೀಡಿದ ಅಧಿಸೂಚನೆಯ ಪ್ರಕಾರ ತನ್ನ ಒಳಮುಖ ಪೂರೈಕೆಗಳ ಮೇಲೆ ಆತನಿಂದ ಸಂದಾಯ ಮಾಡಿದ ತೆರಿಗೆಯ ಮರುಪಾವತಿಯ ಕ್ಲೇಮಿಗೆ ಅರ್ಹನಿರುವ ಯಾವೊಬ್ಬ ವ್ಯಕ್ತಿಯು, ಸಂವಾದಿ ಪೂರೈಕೆದಾರರಿಂದ**ನಮೂನೆ ಜಿಎಸ್‌ಟಿಆರ್–1**ರಲ್ಲಿ ಹೊರಮುಖ ಪೂರೈಕೆಗಳಿಗಾಗಿ ಒದಗಿಸಿದ ವಿವರಪತ್ರದ ಆಧಾರದಲ್ಲಿ ಸಿದ್ಧಪಡಿಸಿದ, **ನಮೂನೆ ಜಿಎಸ್‌ಟಿಆರ್ 11**ರಲ್ಲಿನ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಳಮುಖ ಪೂರೈಕೆಗಳ ವಿವರಪತ್ರದ ಜೊತೆಯಲ್ಲಿ,ಮರುಪಾವತಿಗಾಗಿ ಅರ್ಜಿಯನ್ನು,**ನಮೂನೆ ಜಿಎಸ್‌ಟಿ**

ಆರ್ಎಫ್ಡಿ–10ರಲ್ಲಿ, ಪ್ರತಿ ತ್ರೈಮಾಸಿಕಕ್ಕೆ ಒಂದು ಬಾರಿ ಸಾಮಾನ್ಯ ಪೋರ್ಟಲ್‌ನ ಮುಖಾಂತರ ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಸಲ್ಲಿಸತಕ್ಕದ್ದು.

(2) ಮರುಪಾವತಿಯ ಅರ್ಜಿಯನ್ನು ಸ್ವೀಕರಿಸುದುದಕ್ಕಾಗಿ ಒಂದು ಸ್ವೀಕೃತಿಯನ್ನು **ನಮೂನೆ ಜಿಎಸ್‌ಟಿ ಆರ್ಎಫ್ಡಿ–02**ರಲ್ಲಿ ನೀಡತಕ್ಕದ್ದು.

(3) ಅರ್ಜಿದಾರನಿಂದ ಸಂದಾಯ ಮಾಡಿದ ತೆರಿಗೆಯ ಮರುಪಾತಿಯು ಕೆಳಕಂಡಂತಿದ್ದರೆ ಲಭ್ಯವಿರತಕ್ಕದ್ದು–

(ಎ) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಳಮುಖ ಪೂರೈಕೆಗಳನ್ನು, ಒಬ್ಬ ನೋಂದಾಯಿತ ವ್ಯಕ್ತಿಯಿಂದ ತೆರಿಗೆ ಬೆಲೆಪಟ್ಟಿಗೆ ಪ್ರತಿಯಾಗಿ ಸ್ವೀಕರಿಸಿದ್ದಾಗ ಮತ್ತು ಒಂದು ತೆರಿಗೆ ಬೆಲೆಪಟ್ಟಿಯ ಅಡಿಯಲ್ಲಿ ವ್ಯಾಪ್ತವಾದ ಪೂರೈಕೆಯ ಬೆಲೆಯು, ತೆರಿಗೆ ಸಂದಾಯ ಮಾಡಿರುವುದು ಏನಾದರು ಇದ್ದರೆ, ಅದನ್ನು ಬಿಟ್ಟು ಐದು ಸಾವಿರ ರೂಪಾಯಿಗಳನ್ನು ಮೀರಿದ್ದಾಗ;

(ಬಿ) ಅರ್ಜಿದಾರನ ಹೆಸರು ಮತ್ತು ಸರಕು ಅಥವಾ ಸೇವೆಗಳ ತೆರಿಗೆ ಗುರುತಿನ ಸಂಖ್ಯೆ ಅಥವಾ ವಿಶಿಷ್ಟ ಗುರುತಿನ ಸಂಖ್ಯೆ ಬೆಲೆಪಟ್ಟಿಯಲ್ಲಿ ನಮೂದಾಗಿದ್ದಾಗ; ಮತ್ತು

(ಸಿ) ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಇತರೇ ನಿರ್ಬಂಧಗಳು ಮತ್ತು ಷರತ್ತುಗಳನ್ನು ಪೂರೈಸಿದ್ದಾಗ.

(4) ನಿಯಮ 92ರ ಉಪಬಂಧಗಳು, ಈ ನಿಮಯದ ಅಡಿಯಲ್ಲಿ ಮರುಪಾವತಿಯ ಮಂಜೂರಾತಿ ಮತ್ತು ಸಂದಾಯಕ್ಕಾಗಿ, ಯಥೋಚಿತ ವ್ಯತ್ಯಾಸಗಳೊಡನೆ ಅನ್ವಯವಾಗತಕ್ಕದ್ದು.

(5) ಒಂದು ಕೌಲು ಅಥವಾ ಇತರೇ ಅಂತರರಾಷ್ಟ್ರೀಯ ಒಪ್ಪಂದ, ಅದರಲ್ಲಿ ರಾಷ್ಟ್ರಪತಿ ಅಥವಾ ಭಾರತ ಸರ್ಕಾರ ಪಕ್ಷಕಾರರಾಗಿರುವುದರಲ್ಲಿನ ಒಂದು ವ್ಯಕ್ತ ಉಪಬಂಧವು, ಈ ಅಧ್ಯಾಯದ ನಿಯಮಗಳ ಉಪಬಂಧಗಳೊಂದಿಗೆ ಅಸಂಗತವಾಗಿದ್ದಲ್ಲಿ, ಅಂಥ ಕೌಲು ಅಥವಾ ಅಂತರರಾಷ್ಟ್ರೀಯ ಒಪ್ಪಂದ ಚಾಲ್ತಿಯಲ್ಲಿರತಕ್ಕದ್ದು.

96. ಭಾರತದ ಹೊರಗಡೆಗೆ ರಫ್ತಾದ ಸರಕುಗಳ ಮೇಲೆ ಸಂದಾಯ ಮಾಡಿದ ಏಕೀಕೃತ ತೆರಿಗೆಯ ಮರುಪಾವತಿ.– (1) ಒಬ್ಬ ರಫ್ತುದಾರನಿಂದ ಸಲ್ಲಿಸಲಾದ ಶಿಪ್ಪಿಂಗ್ ಬಿಲ್‌ನ್ನು ಭಾರತದ ಹೊರಗಡೆಗೆ ರಫ್ತಾದ ಸರಕುಗಳ ಮೇಲೆ ಸಂದಾಯ ಮಾಡಿದ ಏಕೀಕೃತ ತೆರಿಗೆಯ ಮರುಪಾವತಿಗಾಗಿ ಸಲ್ಲಿಸಲಾದ ಅರ್ಜಿ ಎಂದು ಪರಿಭಾವಿಸತಕ್ಕದ್ದು ಮತ್ತು ಅಂಥ ಅರ್ಜಿಯನ್ನು ಕೆಳಕಂಡತೆ ಇರುವಾಗ ಮಾತ್ರ ಸಲ್ಲಿಸಲಾಗಿದೆ ಎಂದು ಪರಿಭಾವಿಸತಕ್ಕದ್ದು:–

(ಎ) ರಫ್ತು ಸರಕುಗಳನ್ನು ಸಾಗಿಸುತ್ತಿರುವ ಸಾಗಾಣಿಕೆ ವಾಹನದ ಪ್ರಭಾರದಲ್ಲಿನ ವ್ಯಕ್ತಿಯು, ಶಿಪ್ಪಿಂಗ್ ಬಿಲ್‌ಗಳ ಅಥವಾ ರಫ್ತು ಬಿಲ್‌ಗಳ ಸಂಖ್ಯೆ ಮತ್ತು ದಿನಾಂಕವನ್ನು ಹೊಂದಿರುವ ರಫ್ತು ಪ್ರಣಾಳಿಕೆ ಅಥವಾ ಒಂದು ರಫ್ತು ವರದಿಯನ್ನು ಯುಕ್ತವಾಗಿ ಸಲ್ಲಿಸಿದ್ದಾಗ; ಮತ್ತು

(ಬಿ) ಅರ್ಜಿದಾರನು, ಒಂದು ಸಿಂಧುವಾದ ರಿಟರ್ನನ್ನು **ನಮೂನೆ ಜಿಎಸ್‌ಟಿಆರ್–3**ರಲ್ಲಿ ಒದಗಿಸಿದ್ದಾಗ;

(2) **ನಮೂನೆ ಜಿಎಸ್‌ಟಿಆರ್–1**ರಲ್ಲಿ ಒಳಗೊಂಡಿರುವ ಸಂಬಂಧಿಸಿದ ರಫ್ತು ಬೆಲೆಪಟ್ಟಿಗಳ ವಿವರಗಳನ್ನು, ಸಾಮಾನ್ಯ ಪೋರ್ಟಲ್‌ನ ಮೂಲಕ ಸೀಮಾಸುಂಕ ಇಲಾಖೆಯಿಂದ ಹೆಸರಿಸಲಾದ ಸಿಸ್ಟಂಗೆ ಪ್ರಸರಣಗೊಳಿಸತಕ್ಕದ್ದು ಮತ್ತು ಸದರಿ ಸಿಸ್ಟಂ ಸಾಮಾನ್ಯ ಪೋರ್ಟಲ್‌ಗೆ, ಸದರಿ ಬೆಲೆಪಟ್ಟಿಗಳಿಂದ ವ್ಯಾಪ್ತವಾಗಿರುವ ಆ ಸರಕುಗಳು ಭಾರತದ ಹೊರಗಡೆಗೆ ರಫ್ತಾಗಿವೆ ಎನ್ನುವ ಒಂದು ಧೃಢೀಕರಣವನ್ನು ವಿದ್ಯುನ್ಮಾನ ರೀತಿಯಲ್ಲಿ ಪ್ರಸರಣಗೊಳಿಸತಕ್ಕದ್ದು.

(3) ಸಾಮಾನ್ಯ ಪೋರ್ಟಲ್‌ನಿಂದ **ನಮೂನೆ ಜಿಎಸ್‌ಟಿಆರ್–3**ರಲ್ಲಿ ಒಂದು ಸಿಂಧುವಾದ ರಿಟರ್ನನ್ನು ಒದಗಿಸಿರುವುದಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಸ್ವೀಕರಿಸಿದ ತರುವಾಯ, ಸೀಮಾಸುಂಕದಿಂದ ಹೆಸರಿಸಲಾದ ಸಿಸ್ಟಂ, ಮರುಪಾವತಿಯ ಕ್ಲೇಮನ್ನು ಪ್ರಕ್ರಿಯೆಗೊಳಿಸತಕ್ಕದ್ದು ಮತ್ತು ಪ್ರತಿ ಶಿಪ್ಪಿಂಗ್ ಬಿಲ್ ಅಥವಾ ರಫ್ತುವಿನ ಬಿಲ್‌ಗೆ ಸಂಬಂಧಿಸಿದಂತೆ ಸಂದಾಯ ಮಾಡಿದ ಏಕೀಕೃತ ತೆರಿಗೆಗೆ ಸಮಾನಾದ ಒಂದು ಮೊತ್ತವನ್ನು ತನ್ನ ನೋಂದಣಿ ವಿವರಗಳಲ್ಲಿ ನಮೂದಿಸಿದ ಮತ್ತು ಸೀಮಾ ಸುಂಕ ಪ್ರಾಧಿಕಾರಗಳಿಗೆ ತಿಳಿಸಲಾಗಿರುವಂತೆ, ಅರ್ಜಿದಾರನ ಬ್ಯಾಂಕಿನ ಖಾತೆಗೆ ವಿದ್ಯುನ್ಮಾನವಾಗಿ ಜಮೆಗೊಳಿಸತಕ್ಕದ್ದು,

(4) ಮರುಪಾವತಿಗಾಗಿ ಕ್ಲೇಮನ್ನು ಕೆಳಕಂಡಂತೆ ಇದ್ದಲ್ಲಿ ತಡೆಹಿಡಿಯತಕ್ಕದ್ದು,–

(ಎ) ಕೇಂದ್ರ ತೆರಿಗೆ, ರಾಜ್ಯ ತೆರಿಗೆ ಅಥವಾ ಕೇಂದ್ರಾಡಳಿತ ಪ್ರದೇಶ ತೆರಿಗೆಯ ಕ್ಷೇತ್ರವ್ಯಾಪ್ತಿಯ ಆಯುಕ್ತರಿಂದ ಮರುಪಾತಿಯ ಸಂದಾಯವನ್ನು, ಪ್ರಕರಣ 54ರ ಉಪಪ್ರಕರಣ (10) ಅಥವಾ ಉಪಪ್ರಕರಣ (11)ರ ಉಪಬಂಧಗಳಿಗೆ ಅನುಸಾರವಾಗಿ ವ್ಯಕ್ತಿ ಮರುಪಾವತಿಯನ್ನು ಕ್ಲೇಮು ಮಾಡುತ್ತಿರುವ ಕಾರಣದಿಂದಾಗಿ ತಡೆಹಿಡಿಯುವಂತೆ ಕೋರಿಕೆಯನ್ನು ಸ್ವೀಕರಿಸಿದ್ದಲ್ಲಿ; ಅಥವಾ

(ಬಿ) ಸೀಮಾಸುಂಕದ ಯುಕ್ತ ಅಧಿಕಾರಿಯು, ಸರಕುಗಳು ಸೀಮಾಸುಂಕಗಳ ಅಧಿನಿಯಮ, 1962ರ ಉಪಬಂಧಗಳನ್ನು ಉಲ್ಲಂಘಿಸಿ ಸರಕುಗಳನ್ನು ರಫ್ತು ಮಾಡಲಾಗಿದೆ ಎಂದು ನಿರ್ಧರಿಸಿದ್ದಲ್ಲಿ.

(5) ಉಪನಿಯಮ (4)ರ ಖಂಡ (ಎ)ಯ ಉಪಬಂಧಗಳಿಗೆ ಅನುಸಾರವಾಗಿ ಮರುಪಾವತಿಯನ್ನು ತಡೆಹಿಡಿದಿದ್ದಲ್ಲಿ, ಸೀಮಾಸುಂಕ ಠಾಣೆಯಲ್ಲಿರುವ ಏಕೀಕೃತ ತೆರಿಗೆಯ ಯುಕ್ತ ಅಧಿಕಾರಿಯು ಅರ್ಜಿದಾರನಿಗೆ ಮತ್ತು ಕೇಂದ್ರ ತೆರಿಗೆ, ರಾಜ್ಯ ತೆರಿಗೆ ಅಥವಾ ಸಂದರ್ಭಾನುಸಾರವಾಗಿ ಕೇಂದ್ರಾಡಳಿತ ಪ್ರದೇಶ ತೆರಿಗೆಯ ಕ್ಷೇತ್ರವ್ಯಾಪ್ತಿಯ ಆಯುಕ್ತರಿಗೆ ತಿಳಿಸತಕ್ಕದ್ದು, ಮತ್ತು ಅಂಥ ತಿಳುವಳಿಕೆಯ ಒಂದು ಪ್ರತಿಯನ್ನು ಸಾಮಾನ್ಯ ಪೋರ್ಟಲ್‌ಗೆ ಪ್ರಸರಣಗೊಳಿಸತಕ್ಕದ್ದು.

(6) ಉಪನಿಯಮ (5)ರ ಅಡಿಯಲ್ಲಿ ತಿಳುವಳಿಕೆ ಪತ್ರವನ್ನು ಪ್ರಸರಣಗೊಳಿಸಿದ ತರುವಾಯ, ಕೇಂದ್ರ ತೆರಿಗೆ, ರಾಜ್ಯ ತೆರಿಗೆ ಅಥವಾ ಸಂದರ್ಭಾನುಸಾರವಾಗಿ ಕೇಂದ್ರಾಡಳಿತ ಪ್ರದೇಶ ತೆರಿಗೆಯ ಯುಕ್ತ ಅಧಿಕಾರಿಯು, **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–07**ರ ಭಾಗ ಬಿನಲ್ಲಿ ಒಂದು ಆದೇಶವನ್ನು ಹೊರಡಿಸತಕ್ಕದ್ದು.

(7) ಅರ್ಜಿದಾರನು, ಉಪನಿಯಮ (4)ರ ಖಂಡ (ಎ)ಯ ಅಡಿಯಲ್ಲಿ ತಡೆಹಿಡಿದ ಮರುಪಾವತಿಯ ಮೊತ್ತಕ್ಕೆ ಹಕ್ಕುಳ್ಳವನಾಗಿರುವಲ್ಲಿ,ಕೇಂದ್ರ ತೆರಿಗೆ, ರಾಜ್ಯ ತೆರಿಗೆ ಅಥವಾ ಸಂದರ್ಭಾನುಸಾರವಾಗಿ ಕೇಂದ್ರಾಡಳಿತ ಪ್ರದೇಶ ತೆರಿಗೆಯ ಸಂಬಂಧಿಸಿದ ಕ್ಷೇತ್ರವ್ಯಾಪ್ತಿಯ ಅಧಿಕಾರಿಯು, **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–06**ರಲ್ಲಿ ಒಂದು ಆದೇಶವನ್ನು ಹೊರಡಿಸಿದ ನಂತರ ಮರುಪಾವತಿಯ ಮೊತ್ತವನ್ನು ನೀಡಲು ಮುಂದುವರಿಯತಕ್ಕದ್ದು.

(8) ಕೇಂದ್ರ ಸರ್ಕಾರವು, ಈ ಸಂಬಂಧದಲ್ಲಿ ಅಧಿಸೂಚಿಸಬಹುದಾದ ಅಂಥ ಸರಕುಗಳ ವರ್ಗಕ್ಕಾಗಿ, ಭೂತಾನ್‌ಗೆ ರಫ್ತು ಮಾಡಲಾದುವುಗಳ ಮೇಲೆ ಏಕೀಕೃತ ತೆರಿಗೆಯ ಮರುಪಾವತಿಯನ್ನು,ಭೂತಾನ್ ಸರ್ಕಾರಕ್ಕೆ ಸಂದಾಯ ಮಾಡಬಹುದು ಮತ್ತು ಅಂಥ ಮರುಪಾವತಿಯನು ಭೂತಾನ್ ಸರ್ಕಾರಕ್ಕೆ ಸಂದಾಯ ಮಾಡಿದ್ದಲ್ಲಿ, ರಫ್ತುದಾರನಿಗೆ ಏಕೀಕೃತ ತೆರಿಗೆಯ ಯಾವುದೇ ಮರುಪಾವತಿಯನ್ನು ಸಂದಾಯ ಮಾಡತಕ್ಕದ್ದಲ್ಲ.

97. ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿ.– (1) ಎಲ್ಲಾ ಜಮೆಗಳನ್ನು ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿಗೆ ನಿಯಮ 92ರ ಉಪನಿಯಮ (5)ರ ಅಡಿಯಲ್ಲಿ ಮಾಡತಕ್ಕದ್ದು.

(2) ನಿಧಿಗೆ ಜಮೆಗೊಳಿಸಲಾಗಿರುವ ಯಾವುದೇ ಮೊತ್ತವನ್ನು, ಯುಕ್ತ ಅಧಿಕಾರ, ಅಪೀಲು ಪ್ರಾಧಿಕಾರ ಅಥವಾ ಅಪೀಲು ನ್ಯಾಯಾಧಿಕರಣ ಅಥವಾ ನ್ಯಾಯಾಲಯದ ಆದೇಶದಿಂದ ಯಾವುದೇ ಕ್ಲೇಮುದಾರನಿಗೆ ಸಂದಾಯ

ಮಾಡುವಂತೆ ಆದೇಶಿಸಿರುವುದನ್ನು ಅಥವಾ ನಿರ್ದೇಶಿಸಿರುವುದನ್ನು ನಿಧಿಯಿಂದ ಸಂದಾಯ ಮಾಡತಕ್ಕದ್ದು.

(3) ಪ್ರಕರಣ 58ರ ಉಪಪ್ರಕರಣ (1)ರ ಅಡಿಯಲ್ಲಿ ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿಯಿಂದ ಮೊತ್ತದ ಯಾವುದೇ ಬಳಕೆಯನ್ನು, ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿಯಿಂದ ಖರ್ಚು ಹಾಕುವುದರ ಮತ್ತು ಮೊತ್ತವು ಬಳಕೆಗಾಗಿ ವರ್ಗಾವಣೆಯಾಗಿರುವ ಖಾತೆಗೆ ಜಮೆಗೊಳಿಸುವುದರ ಮೂಲಕ ಮಾಡತಕ್ಕದ್ದು.

(4) ಸರ್ಕಾರವು, ಒಂದು ಆದೇಶದ ಮೂಲಕ, ಛೇರ್‌ಮನ್, ಉಪ–ಛೇರ್‌ಮನ್, ಒಬ್ಬ ಸದಸ್ಯ ಕಾರ್ಯದರ್ಶಿ ಮತ್ತು ಅದು ಸೂಕ್ತ ಎಂದು ಭಾವಿಸಬಹುದಾ ದ ಅಂಥ ಇತರ ಸದಸ್ಯರುಗಳನ್ನು ಒಳಗೊಂಡ ಒಂದು ಸ್ಥಾಯಿ ಸಮಿತಿಯನ್ನು ರಚಿಸತಕ್ಕದ್ದು ಮತ್ತು ಸಮಿತಿಯು ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿಗೆ ಜಮೆಗೊಳಿಸಲಾದ ಹಣವನ್ನು ಗ್ರಾಹಕ ಕ್ಷೇಮಾಭಿವೃದ್ಧಿಗಾಗಿ ಸಮರ್ಪಕವಾದ ಬಳಕೆಗಾಗಿ ಶಿಫಾರಸ್ಸುಗಳನ್ನು ಮಾಡತಕ್ಕದ್ದು.

(5) ಸಮಿತಿಯು ಅವಶ್ಯಕತೆಯಿರುವಾಗ, ಮೂರು ತಿಂಗಳುಗಳಿಗೆ ಒಂದು ಬಾರಿ ಕಡಿಮೆಯಿಲ್ಲದಂತೆ ಸಭೆ ಸೇರತಕ್ಕದ್ದು.

(6) ಕಂಪನಿಗಳ ಅಧಿನಿಯಮ, 2013ರ (2013ರ ಕೇಂದ್ರ ಅಧಿನಿಯಮ 18) ಉಪಬಂಧಗಳ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೇ ಕಾನೂನಿನ ಅಡಿಯಲ್ಲಿ, ನೋಂದಾಯಿತವಾದ, ಮೂರು ವರ್ಷಗಳ ಅವಧಿಗಾಗಿ ಗ್ರಾಹಕರ ಕ್ಷೇಮಾಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿರುವ ಗ್ರಾಹಕರುಗಳ ವಿಶೇಷವಾಗಿ ಮಹಿಳೆ, ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ; ಗ್ರಾಮ ಅಥವಾ ಮಂಡಲ ಅಥವಾ ಸಮಿತಿ ಮಟ್ಟದ ಸಹಕಾರಿ ಸಂಘಗಳನ್ನು ಒಳಗೊಂಡಂತೆಯಾವುದೇ ಏಜನ್ಸಿ ಅಥವಾ ಸಂಘಟನೆ ಅಥವಾ ಭಾರತೀಯ ಮಾನಕಗಳ ಬ್ಯೂರೋದಿಂದ, ಐದು ವರ್ಷಗಳ ಅವಧಿಗಾಗಿ, ಸಮೂಹ ಬಳಕೆಯ ಉತ್ಪನ್ನಗಳ ಮಾನಕ ಗುರುತಿನ ರೂಪಿಸುವಿಕೆಯಲ್ಲಿ ಮಹತ್ವದ ಕೊಡುಗೆಯನ್ನು ನೀಡುವ ಅಥವಾ ನೀಡಬಹುದಾಗಿರುವ ಕಾರ್ಯಸಾಧ್ಯವಾದ ಮತ್ತು ಉಪಯೋಗಕರವಾದ ಸಂಶೋಧನಾ ಚಟುವಟಿಕೆಯಲ್ಲಿ ತೊಡಗಿಕೊಳ್ಳಬೇಕಾಗಿ ಶಿಫಾರಸ್ಸುಗೊಂಡಿರುವ, ಕೈಗಾರಿಕಾ ವ್ಯಾಜ್ಯಗಳ ಅಧಿನಿಯಮ, 1947ರ (1947ರ ಕೇಂದ್ರ ಅಧಿನಿಯಮ 18) ಅಡಿಯಲ್ಲಿ ಪರಿಭಾಷಿಸಲಾದ ಯಾವುದೇ ಕೈಗಾರಿಕೆ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿಯಿಂದ ಅನುದಾನಕ್ಕಾಗಿ ಅರ್ಜಿಯನ್ನು ಹಾಕಬಹುದು.

ಪರಂತು, ಒಬ್ಬ ಗ್ರಾಹಕನು, ಗ್ರಾಹಕರ ವ್ಯಾಜ್ಯದಲ್ಲಿನ ದೂರುದಾರನಾಗಿ ಆತನಿಂದ ಭರಿಸಿದ ಕಾನೂನು ವೆಚ್ಚಗಳ ಮರುಭರಿಸುವಿಕೆಗಾಗಿ ಅದರ ಅಂತಿಮ ನ್ಯಾಯನಿರ್ಣಯದ ನಂತರ ಅರ್ಜಿಯನ್ನು ಸಲ್ಲಿಸಬಹುದು.

(7) ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿಯಿಂದ ಅನುದಾನದ ಎಲ್ಲಾ ಅರ್ಜಿಗಳನ್ನು ಸದಸ್ಯ ಕಾರ್ಯದರ್ಶಿ ಅರ್ಜಿದಾರನಿಂದ ಸಲ್ಲಿಸತಕ್ಕದ್ದು ಆದರೆ ಸಮಿತಿಯು ಮುಖ್ಯ ವಿಷಯಗಳ ವಿವರಗಳನ್ನು ಪರಿಶೀಲಿಸಲಾಗಿರುವ ಮತ್ತು ಅದಕ್ಕನುಗುಣವಾಗಿ ಸದಸ್ಯ ಕಾರ್ಯದರ್ಶಿಯಿಂದ ಪರಿಗಣನೆಗೆ ಶಿಫಾರಸ್ಸಾಗಿರುವ ಹೊರತು ಒಂದು ಅರ್ಜಿಯನ್ನು ಪರಿಗಣಿಸತಕ್ಕದ್ದಲ್ಲ.

(8) ಸಮಿತಿಯು ಕೆಳಕಂಡ ಅಧಿಕಾರಗಳನ್ನು ಹೊಂದಿರತಕ್ಕದ್ದು–

(ಎ) ಅರ್ಜಿದಾರನ ಅಭಿರಕ್ಷೆ ಮತ್ತು ನಿಯಂತ್ರಣದಲ್ಲಿರುವ ಅಂಥ ಪುಸ್ತಕಗಳು, ಲೆಕ್ಕಪತ್ರಗಳು, ದಸ್ತಾವೇಜುಗಳು, ಪರಿಕರಗಳು ಅಥವಾ ವಸ್ತುಗಳನ್ನು, ಅರ್ಜಿಯ ಸಮರ್ಪಕವಾದ ಮೌಲ್ಯಮಾಪನಕ್ಕಾಗಿ ಅದರ ಮುಂದೆ ಅಥವಾ ಸರ್ಕಾರದ ಯುಕ್ತ ಪ್ರಾಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸುವಂತೆ ಯಾವುದೇ ಅರ್ಜಿದಾರನನ್ನು ಅಗತ್ಯಪಡಿಸುವುದು;

(ಬಿ) ಗ್ರಾಹಕರ ಕ್ಷೇಮಾಭಿವೃದ್ಧಿಗಾಗಿ ಎಂದು ಕ್ಲೇಮು ಮಾಡಲಾದ ಚಟುವಟಿಕೆಗಳು ನಡೆಯುತ್ತಿವೆ ಎಂದು ನಿರೂಪಿಸಬಹುದಾದ ಯಾವುದೇ ಸ್ಥಳಗಳ ಪ್ರವೇಶ ಮತ್ತು ತಪಾಸಣೆಗೆ, ಕೇಂದ್ರ ಸರ್ಕಾರ ಅಥವಾ, ಸಂದರ್ಭಾನುಸಾರವಾಗಿ ರಾಜ್ಯ ಸರ್ಕಾರದ ಯುಕ್ತ ಪ್ರಾಧಿಕೃತ ಅಧಿಕಾರಿಯನ್ನು ಅನುಮತಿಸುವುದಕ್ಕಾಗಿ ಯಾವುದೇ ಅರ್ಜಿದಾರನನ್ನು ಅಗತ್ಯಪಡಿಸುವುದು;

(ಸಿ) ಅನುದಾನದ ಸಮರ್ಪಕವಾದ ಬಳಕೆಯನ್ನು ಖಾತರಿಪಡಿಸಿಕೊಳ್ಳವುದಕ್ಕಾಗಿ, ಅರ್ಜಿದಾರನ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆ ಮಾಡಿಸುವುದು;

(ಡಿ) ಆತನ ಕಡೆಯಿಂದ ಮುಖ್ಯ ವಿಷಯಗಳ ಮಾಹಿತಿ ನೀಡುವಿಕೆಯಲ್ಲಿ ತಪ್ಪಿದ್ದಲ್ಲಿ ಅಥವಾ ಬಚ್ಚಿಟ್ಟಿರುವ ಸಂದರ್ಭದಲ್ಲಿ ಮಂಜೂರು ಮಾಡಿರುವ ಅನುದಾನವನ್ನು, ಒಂದೇ ಮೊತ್ತದಲ್ಲಿ ಸಮಿತಿಗೆ ಮರುಪಾವತಿ ಮಾಡಲು ಮತ್ತು ಅಧಿನಿಯಮದ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸುವುದಕ್ಕಾಗಿ ಯಾವುದೇ ಅರ್ಜಿದಾರನನ್ನು ಅಗತ್ಯಪಡಿಸುವುದು;

(ಇ) ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಯಾವೊಬ್ಬ ಅರ್ಜಿದಾರನಿಂದ ಬಾಕಿಯಿರುವ ಯಾವುದೇ ಮೊತ್ತವನ್ನು ವಸೂಲಿ ಮಾಡುವುದು;

(ಎಫ್) ಅನುದಾನದ ಸಮರ್ಪಕ ಬಳಕೆಯನ್ನು ಸೂಚಿಸುವ ಒಂದು ನಿಯತಕಾಲಿಕ ವರದಿಯನ್ನು ಸಲ್ಲಿಸುವುದಕ್ಕಾಗಿ ಯಾವುದೇ ಅರ್ಜಿದಾರನನ್ನು, ಅಥವಾ ಅರ್ಜಿದಾರನ ವರ್ಗವನ್ನು ಅಗತ್ಯಪಡಿಸುವುದು;

(ಜಿ) ಅದರ ಮುಂದೆ ಇಡಲಾದ ಒಂದು ಅರ್ಜಿಯನ್ನು, ಸಂಗತಿಗಳ ಅಸಂಗತತೆ, ಅಥವಾ ಮುಖ್ಯ ವಿಷಯಗಳ ವಿವರಗಳಲ್ಲಿ ನಿಖರತೆಯಿಲ್ಲದಿರುವ ಕಾರಣದಿಂದಾಗಿ ತಿರಸ್ಕರಿಸುವುದು;

(ಹೆಚ್) ಅರ್ಜಿದಾರನಿಗೆ, ಆತನ ಹಣಕಾಸಿನ ಸ್ಥಿತಿಗತಿಯನ್ನು ಮತ್ತು ವೃತ್ತಿಯ ಅಡಿಯಲ್ಲಿನ ಚಟುವಟಿಕೆಯ ಸ್ವರೂಪದ ಮಹತ್ವ ಮತ್ತು ಉಪಯುಕ್ತತೆಯನ್ನು ಗಮನದಲ್ಲಿಟ್ಟುಕೊಂಡು, ಒದಗಿಸಲಾದ ಹಣಕಾಸಿನ ನೆರವು ದುರುಪಯೋಗವಾಗತಕ್ಕದ್ದಲ್ಲ ಎನ್ನುವುದನ್ನು ಖಾತರಿಪಡಿಸಿಕೊಂಡ ನಂತರ ಅನುದಾನದ ರೂಪದಲ್ಲಿ, ಕನಿಷ್ಟ ಹಣಕಾಸಿನ ನೆರವನ್ನು ಶಿಫಾರಸ್ಸು ಮಾಡುವುದು;

(ಐ) ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿಯಲ್ಲಿ ಹೂಡಿಕೆಗಳನ್ನು ಮಾಡಬಹುದಾಗಿದ್ದಲ್ಲಿ, ಪ್ರಯೋಜನಕರ ಮತ್ತು ಸುರಕ್ಷಿತ ಕ್ಷೇತ್ರಗಳನ್ನು ಗುರುತಿಸುವುದು ಮತ್ತು ಅದರ ಪ್ರಕಾರವಾಗಿ ಶಿಫಾರಸ್ಸುಗಳನ್ನು ಮಾಡುವುದು;

(ಜೆ) ಒಬ್ಬ ಅರ್ಜಿದಾರನು ಗ್ರಾಹಕ ಕ್ಷೇಮಾಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಿಕೆಯ ಅವಧಿಗಾಗಿ ಅಗತ್ಯಪಡಿಸಿದ ಷರತ್ತುಗಳನ್ನು ಸಡಿಲಗೊಳಿಸುವುದು;

(ಕೆ) ಗ್ರಾಹಕ ಕ್ಷೇಮಾಭಿವೃದ್ಧಿ ನಿದಿಯ ನಿರ್ವಹಣೆ, ಆಡಳಿತ ಮತ್ತು ಲೆಕ್ಕಪರಿಶೋಧನೆಗಾಗಿ ಮಾರ್ಗದರ್ಶಿಗಳನ್ನು ರೂಪಿಸುವುದು.

(9) ಕೇಂದ್ರ ಗ್ರಾಹಕ ಸಂರಕ್ಷಣಾ ಪರಿಷತ್ ಮತ್ತು ಭಾರತೀಯ ಮಾನಕಗಳ ಬ್ಯೂರೋ, ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿಯಿಂದ ವೆಚ್ಚಗಳನ್ನು ಭರಿಸುವ ಉದ್ದೇಶಕ್ಕಾಗಿ ಯೋಜನೆಗಳು ಅಥವಾ ಪ್ರಸ್ತಾವನೆಗಳನ್ನು ಪರಿಗಣಿಸುವುದಕ್ಕಾಗಿ ವಿಶಾಲ ಮಾರ್ಗದರ್ಶಿಗಳನ್ನು, ಸರಕು ಮತ್ತು ಸೇವೆಗಳ ತೆರಿಗೆ ಪರಿಷತ್‌ಗೆ ಶಿಫಾರಸ್ಸು ಮಾಡತಕ್ಕದ್ದು.

ಅಧ್ಯಾಯ–XI
ಕರನಿರ್ಧರಣೆ ಮತ್ತು ಲೆಕ್ಕಪರಿಶೋಧನೆ

98. ತಾತ್ಕಾಲಿಕ ಕರನಿರ್ಧರಣೆ.– (1) ಪ್ರಕರಣ 60ರ ಉಪಪ್ರಕರಣ (1)ರ ಉಪಬಂಧಗಳಿಗೆ ಅನುಸಾರವಾಗಿ ತಾತ್ಕಾಲಿಕ ಆಧಾರದಲ್ಲಿ ತೆರಿಗೆಯನ್ನು ಸಂದಾಯ ಮಾಡುವುದಕ್ಕಾಗಿ ಕೋರುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಒಂದು

ಅರ್ಜಿಯನ್ನು ಆತನ ಕೋರಿಕೆಗೆ ಪೂರಕವಾದ ದಸ್ತಾವೇಜುಗಳೊಂದಿಗೆ, **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–01**ರಲ್ಲಿ, ಸಾಮಾನ್ಯ ಪೋರ್ಟಲ್‌ನ ಮುಖಾಂತರ ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಒದಗಿಸತಕ್ಕದ್ದು.

(2) ಯುಕ್ತ ಅಧಿಕಾರಿಯು, ಉಪನಿಯಮ (1)ರ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಆತನ ಕೋರೀಕೆಗೆ ಪೂರಕವಾದ ಹೆಚ್ಚುವರಿ ಮಾಹಿತಿ ಅಥವಾ ದಸ್ತಾವೇಜುಗಳನ್ನು ಒದಗಿಸುವಂತೆ ನೋಂದಾಯಿತ ವ್ಯಕ್ತಿಯನ್ನು ಅಗತ್ಯಪಡಿಸಿ **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–02**ರಲ್ಲಿ ಒಂದು ಸೂಚನಾ ಪತ್ರವನ್ನು ನೀಡಬಹುದು ಮತ್ತು ಅರ್ಜಿದಾರನು ಸೂಚನಾ ಪತ್ರಕ್ಕೆ ಉತ್ತರವನ್ನು **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–03**ರಲ್ಲಿ ಸಲ್ಲಿಸತಕ್ಕದ್ದು, ಮತ್ತು ಆತನು ಹಾಗೆ ಅಪೇಕ್ಷಿಸಿದಲ್ಲಿ ಸದರಿ ಅಧಿಕಾರಿಯ ಮುಂದೆ ಖುದ್ದಾಗಿ ಹಾಜರಾಗಬಹುದು.

(3) ಯುಕ್ತ ಅಧಿಕಾರಿಯು ತಾತ್ಕಾಲಿಕ ಆಧಾರದಲ್ಲಿ ತೆರಿಗೆ ಸಂದಾಯವನ್ನು ಅನುಮತಿಸಿ, ಯಾವ ಮೌಲ್ಯ ಅಥವಾ ದರ ಅಥವಾ ಅವುಗಳೆರಡರ ಆಧಾರದಲ್ಲಿ ಕರನಿರ್ಧರಣೆಯನ್ನು ತಾತ್ಕಾಲಿಕವಾಗಿ ಅನುಮತಿಸಬೇಕು ಮತ್ತು ಬಾಂಡ್‌ನ್ನು ಬರೆದುಕೊಡಬೇಕಾದ ಮೊತ್ತ ಮತ್ತು ಬಾಂಡ್‌ನ ಅಡಿಯಲ್ಲಿ ವ್ಯಾಪ್ತವಾದ ಮೊತ್ತದ ಶೇಕಡ ಇಪ್ಪತ್ತೈದರಷ್ಟನ್ನು ಮೀರಿದಂತೆ ಒದಗಿಸಬೇಕಾದ ಭದ್ರತೆಯನ್ನು ಸೂಚಿಸಿ, ಒಂದು ಆದೇಶವನ್ನು **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–04**ರಲ್ಲಿ ಒಂದು ಆದೇಶವನ್ನು ನೀಡತಕ್ಕದ್ದು

(4) ನೋಂದಾಯಿತ ವ್ಯಕ್ತಿಯು, ಪ್ರಕರಣ 60ರ ಉಪಪ್ರಕರಣ (2)ರ ಉಪಬಂಧಗಳಿಗೆ ಅನುಸಾರವಾಗಿ ಒಂದು ಬಾಂಡನ್ನು **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–05**ರಲ್ಲಿ, ಉಪನಿಯಮ (3)ರಲ್ಲಿ ನಿರ್ಧರಿಸಿದ ಒಂದು ಮೊತ್ತಕ್ಕಾಗಿ ಬ್ಯಾಂಕ್ ಖಾತರಿಯ ರೂಪದಲ್ಲಿ ಭದ್ರತೆಯ ಜೊತೆಗೆ ಬರೆದುಕೊಡತಕ್ಕದ್ದು.

ಪರಂತು, ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ ಅಥವಾ ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ಯುಕ್ತ ಅಧಿಕಾರಿಗೆ ಒದಗಿಸಿದ ಒಂದು ಬಾಂಡನ್ನು, ಅಧಿನಿಯಮ ಮತ್ತು ಅದರ ಅಡಿಯಲ್ಲಿ ಮಾಡಿದ ನಿಯಮಗಳ ಉಪಬಂಧಗಳ ಅಡಿಯಲ್ಲಿ ಒದಗಿಸಿದ ಒಂದು ಬಾಂಡ್ ಎಂದು ಪರಿಗಣಿಸತಕ್ಕದ್ದು.

ವಿವರಣೆ.– ಈ ನಿಯಮಗಳ ಉದ್ದೇಶಗಳಿಗಾಗಿ, **"ಮೊತ್ತ"** ಎಂಬ ಪದಾವಳಿಯು ಆ ವ್ಯವಹಾರಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಏಕೀಕೃತ ತೆರಿಗೆ, ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಅಥವಾ ಕೇಂದ್ರಾಡಳಿತ ಪ್ರದೇಶ ತೆರಿಗೆ ಮತ್ತು ಉಪಕರವನ್ನು ಒಳಗೊಳ್ಳತಕ್ಕದ್ದು.

(5) ಯುಕ್ತ ಅಧಿಕಾರಿಯು ಪ್ರಕರಣ 60ರ ಉಪಪ್ರಕರಣ (3)ರ ಅಡಿಯಲ್ಲಿ ಕರನಿರ್ಧರಣೆಯನು ಅಂತಿಮಗೊಳಿಸುವುದಕ್ಕಾಗಿ ಅಗತ್ಯವಿರುವ ಮಾಹಿತಿ ಮತ್ತು ದಾಖಲೆಗಳನ್ನು ಕರೆ ಮಾಡುವುದಕ್ಕಾಗಿ ಒಂದು ಸೂಚನಾ ಪತ್ರವನ್ನು **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–06**ರಲ್ಲಿ ನೀಡತಕ್ಕದ್ದು ಮತ್ತು ನೋಂದಾಯಿತ ವ್ಯಕ್ತಿಯಿಂದ ಸಂದಾಯ ಮಾಡಬೇಕಾದ ಮೊತ್ತ ಅಥವಾ ಮರುಪಾವತಿ ಮಾಡಬಹುದಾದ ಮೊತ್ತವೇನಾದರು ಇದ್ದಲ್ಲಿ ಅದನ್ನು ನಿರ್ದಿಷ್ಟಪಡಿಸಿ, ಒಂದು ಅಂತಿಮ ಕರನಿರ್ಧರಣಾ ಆದೇಶವನ್ನು **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–07**ರಲ್ಲಿ ನೀಡತಕ್ಕದ್ದು.

(6) ಉಪನಿಯಮ (5)ರ ಅಡಿಯಲ್ಲಿ ಆದೇಶದವನ್ನು ನೀಡಿದ ನಂತರ ಉಪನಿಯಮ (4)ರ ಅಡಿಯಲ್ಲಿ ಒದಗಿಸಿದ ಭದ್ರತೆಯನ್ನು ಬಿಡುಗಡೆಗೊಳಿಸುವುದಕ್ಕಾಗಿ ಅರ್ಜಿದಾರನು ಒಂದು ಅರ್ಜಿಯನ್ನು**ನಮೂನೆ ಜಿಎಸ್‌ಟಿ ಎಎಸ್‌ಎಂಟಿ–08**ರಲ್ಲಿ ಸಲ್ಲಿಸತಕ್ಕದ್ದು.

(7) ಯುಕ್ತ ಅಧಿಕಾರಿಯು, ಅರ್ಜಿದಾರನು ಉಪನಿಯಮ (5)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಮೊತ್ತವನ್ನು ಸಂದಾಯ ಮಾಡಿದ್ದಾನೆ ಎನ್ನುವುದನ್ನು ಖಾತರಿಪಡಿಸಿಕೊಂಡ ನಂತರ, ಉಪನಿಯಮ (4)ರ ಅಡಿಯಲ್ಲಿ ಒದಗಿಸಿದ ಭದ್ರತೆಯನ್ನು ಬಿಡುಗಡೆಗೊಳಿಸತಕ್ಕದ್ದು ಮತ್ತು ಉಪನಿಯಮ (6)ರ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಏಳು ಕೆಲಸದ ದಿನಗಳ ಅವಧಿಯ ಒಳಗಾಗಿ **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–09**ರಲ್ಲಿ ಒಂದು ಆದೇಶವನ್ನು ನೀಡತಕ್ಕದ್ದು.

99. ರಿಟರ್ನುಗಳ ಸೂಕ್ಷ್ಮಪರಿಶೀಲನೆ.– (1) ನೊಂದಾಯಿತ ವ್ಯಕ್ತಿಯಿಂದ ಒದಗಿಸಲಾದ ಯಾವುದೇ ರಿಟರ್ನನ್ನು ಸೂಕ್ಷ್ಮಪರಿಶೀಲನೆಗಾಗಿ ಆಯ್ಕೆ ಮಾಡಿಕೊಂಡಿದ್ದಲ್ಲಿ, ಯುಕ್ತ ಅಧಿಕಾರಿಯು, ಅದನ್ನು ತನ್ನಲ್ಲಿ ಲಭ್ಯವಿರುವ ಮಾಹಿತಿಯ ಉಲ್ಲೇಖದೊಂದಿಗೆ, ಪ್ರಕರಣ 61ರ ಉಪಬಂಧಗಳಿಗೆ ಅನುಸಾರವಾಗಿ ಸೂಕ್ಷ್ಮಪರಿಶೀಲನೆ ಮಾಡತಕ್ಕದ್ದು, ಯಾವುದೇ ನ್ಯೂನ್ಯತೆಯ ಸಂದರ್ಭದಲ್ಲಿ, ಅಂಥ ನ್ಯೂನ್ಯತೆಯನ್ನು ಆತನಿಗೆ ತಿಳಿಸಿ ಮತ್ತು ಅದಕ್ಕಾಗಿ ಸೂಚನಾ ಪತ್ರವನ್ನು ಜಾರಿಗೊಳಿಸಿದ ದಿನಾಂಕದಿಂದ ಮೂವತ್ತು ದಿನಗಳನ್ನು ಅಥವಾ ಆತನಿಂದ ಅನುಮತಿಸಬಹುದಾದ ಅಂಥ ಹೆಚ್ಚಿನ ಅವಧಿಯನ್ನು ಮೀರದಂತ ಅಂಥ ಸಮಯದ ಒಳಗಾಗಿ, ಆತನಿಂದ ವಿವರಣೆಯನ್ನು ಬಯಸಿ, ಸಾಧ್ಯವಾಗುವಲ್ಲಿ, ಅಂಥ ನ್ಯೂನ್ಯತೆಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ತೆರಿಗೆ, ಬಡ್ಡಿ ಮತ್ತು ಯಾವುದೇ ಇತರೇ ಮೊತ್ತವನ್ನು ಪರಿಮಾಣೀಕರಿಸಿ ಆತನು ಸದರಿ ವ್ಯಕ್ತಿಗೆ ಒಂದು ಸೂಚನಾ ಪತ್ರವನ್ನು, **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–10**ರಲ್ಲಿ ನೀಡತಕ್ಕದ್ದು.

(2) ನೋಂದಾಯಿತ ವ್ಯಕ್ತಿಯು ಉಪನಿಯಮ (1)ರ ಅಡಿಯಲ್ಲಿ ನೀಡಿದ ಸೂಚನಾಪತ್ರದಲ್ಲಿ ನಮೂದಿಸಲಾದ ನ್ಯೂನ್ಯತೆಯನ್ನ ಒಪ್ಪಿಕೊಳ್ಳಬಹುದ ಮತ್ತು ಅಂಥ ನ್ಯೂನ್ಯತೆಯಿಂದ ಉದ್ಭವಿಸಿದ ತೆರಿಗೆ, ಬಡ್ಡಿ ಮತ್ತು ಯಾವುದೇ ಇತರೇ ಮೊತ್ತವನ್ನು ಸಂದಾಯ ಮಾಡಬಹದು ಮತ್ತು ಅದನ್ನು ತಿಳಿಸಬಹುದು ಅಥವಾ ಯುಕ್ತ ಅಧಿಕಾರಿಗೆ ನ್ಯೂನತೆಗೆ ಒಂದು ವಿವರಣೆಯನ್ನು **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–11**ರಲ್ಲಿ ಒದಗಿಸಬಹುದು.

(3) ನೊಂದಾಯಿತ ವ್ಯಕ್ತಿಯಿಂದ ಉಪನಿಯಮ (2)ರ ಅಡಿಯಲ್ಲಿ ಒದಗಿಸಿದ ವಿವರಣೆ ಅಥವಾ ಸಲ್ಲಿಸಿದ ಮಾಹಿತಿ ಅಂಗೀಕಾರಾರ್ಹ ಎಂದು ಕಂಡುಬಂದಲ್ಲಿ, ಯುಕ್ತ ಅಧಿಕಾರಿಯು ಅದಕ್ಕನುಸಾರವಾಗಿ ಆತನಿಗೆ **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–12**ರಲ್ಲಿ ಮಾಹಿತಿ ನೀಡತಕ್ಕದ್ದು.

100. ಕೆಲವೊಂದು ಪ್ರಕರಣಗಳಲ್ಲಿ ಕರನಿರ್ಧರಣೆ.– (1) ಪ್ರಕರಣ 62ರ ಉಪಪ್ರಕರಣದ ಅಡಿಯಲ್ಲಿನ ಕರನಿರ್ಧರಣಾ ಆದೇಶವನ್ನು **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–13**ರಲ್ಲಿ ನೀಡತಕ್ಕದ್ದು.

(2) ಯುಕ್ತ ಅಧಿಕಾರಿಯು, ತೆರಿಗೆದಾಯಕ ವ್ಯಕ್ತಿಗೆ ಪ್ರಕರಣ 63ರ ಉಪಬಂಧಗಳಿಗೆ ಅನುಸಾರವಾಗಿ ಒಂದು ಸೂಚನಾ ಪತ್ರವನ್ನು **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–14**ರಲ್ಲಿ, ಅತ್ಯುತ್ತಮ ವಿವೇಚನಾ ನಿರ್ಣಯದ ಮೇರೆಗೆ ಕರನಿರ್ಧರಣೆಯನ್ನು ಮಾಡಲು ಪ್ರಸ್ತಾಪಿಸಿಲು ಇರುವ ಆಧಾರಾಂಶಗಳನ್ನು ಒಳಗೊಂಡಂತೆ ನೀಡತಕ್ಕದ್ದು ಮತ್ತು ಅಂಥ ವ್ಯಕ್ತಿಗೆ ತನ್ನ ಉತ್ತರವನ್ನು ನೀಡಲು ಹದಿನೈದು ದಿನಗಳ ಕಾಲಾವಕಾಶವನ್ನು ನೀಡಿದ ನಂತರ ಒಂದು ಆದೇಶವನ್ನು **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–15**ರಲ್ಲಿ ಹೊರಡಿಸತಕ್ಕದ್ದು.

(3) ಪ್ರಕರಣ 64ರ ಉಪಪ್ರಕರಣ (1)ರ ಅಡಿಯಲ್ಲಿನ ಕ್ಷಿಪ್ರ ಕರನಿರ್ಧರಣೆ ಆದೇಶವನ್ನು **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–16**ರಲ್ಲಿ ನೀಡತಕ್ಕದ್ದು.

(4) ಪ್ರಕರಣ 64ರ ಉಪಪ್ರಕರಣ (2)ರ ಅಡಿಯಲ್ಲಿ ಉಲ್ಲೇಖಿಸಲಾದ ವ್ಯಕ್ತಿಯು, ಕ್ಷಿಪ್ರ ಕರನಿರ್ಧರಣೆ ಆದೇಶದ ಹಿಂಪಡೆಯುವಿಕೆಗಾಗಿ ಒಂದು ಅರ್ಜಿಯನ್ನು **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–17**ರಲ್ಲಿಸಲ್ಲಿಸಬಹುದು.

(5) ಹಿಂಪಡೆಯುವಿಕೆಯ ಅಥವಾ ಸಂದರ್ಭಾನುಸಾರವಾಗಿ ಪ್ರಕರಣ 64ರ ಉಪಪ್ರಕರಣ (2)ರ ಅಡಿಯಲ್ಲಿನ ಅರ್ಜಿಯ ತಿರಸ್ಕರಣೆಯಆದೇಶವನ್ನು **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–18**ರಲ್ಲಿ ನೀಡತಕ್ಕದ್ದು.

101. ಲೆಕ್ಕಪರಿಶೋಧನೆ.– ಪ್ರಕರಣ 65ರ ಉಪಪ್ರಕರಣ (1)ರ ಅಡಿಯಲ್ಲಿ ನಡೆಸಬೇಕಾದ ಲೆಕ್ಕಪರಿಶೋಧನೆಯ ಅವಧಿ ಒಂದು ಹಣಕಾಸಿನ ವರ್ಷ ಅಥವಾ ಅದರ ಗುಣಕಗಳಾಗಿರತಕ್ಕದ್ದು.

(2) ಪ್ರಕರಣ 65ರ ಉಪಬಂಧಗಳಿಗೆ ಅನುಸಾರವಾಗಿ ಒಬ್ಬ ನೋಂದಾಯಿತ ವ್ಯಕ್ತಿಯ ಲೆಕ್ಕಪರಿಶೋಧನೆಯನ್ನು

ಕೈಗೊಳ್ಳಲು ನಿರ್ಧರಿಸಲಾಗಿದ್ದಲ್ಲಿ, ಯುಕ್ತ ಅಧಿಕಾರಿಯು, ಸದರಿ ಪ್ರಕರಣದ ಉಪಪ್ರಕರಣ (3)ರ ಉಪಬಂಧಗಳಿಗೆ ಅನುಸಾರವಾಗಿ ಒಂದು ಸೂಚನಾ ಪತ್ರವನ್ನು **ನಮೂನೆ ಜಿಎಸ್‌ಟಿ ಎಡಿಟಿ–01**ರಲ್ಲಿ ನೀಡತಕ್ಕದ್ದು.

(3) ನೋಂದಾಯಿತ ವ್ಯಕ್ತಿಯ ದಾಖಲೆಗಳು ಮತ್ತು ಲೆಕ್ಕಪತ್ರ ಪುಸ್ತಕಗಳ ಲೆಕ್ಕಪರಿಶೋಧನೆಯನ್ನು ನಡೆಸಲು ಪ್ರಾಧಿಕೃತನಾದ ಯುಕ್ತ ಅಧಿಕಾರಿಯು, ಆತನ ಜೊತೆಯಲ್ಲಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ತಂಡದ ನೆರವಿನೊಂದಿಗೆ ಲೆಕ್ಕಪತ್ರ ಪುಸ್ತಕಗಳನ್ನು ಅದರ ಆಧಾರದಲ್ಲಿ ನಿರ್ವಹಿಸಲಾಗಿರುವ ದಸ್ತಾವೇಜುಗಳನ್ನು ಮತ್ತು ಅಧಿನಿಯಮದ ಮತ್ತು ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಉಪಬಂಧಗಳ ಅಡಿಯಲ್ಲಿ ಒದಗಿಸಿದ ರಿಟರ್ನುಗಳು ಮತ್ತು ವಿವರ ಪತ್ರಗಳನ್ನು, ವಹಿವಾಟಿನ ಸರಿತನವನ್ನು, ಕ್ಲೇಮು ಮಾಡಿರುವ ವಿನಾಯಿತಿಗಳು ಮತ್ತು ಕಡಿತಗಳನ್ನು, ಸರಕು ಮತ್ತು ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ ಅನ್ವಯಿಸಿರುವ ತೆರಿಗೆ ದರ, ಉಪಯೋಗಿಸಿದ ಮತ್ತು ಬಳಕೆ ಮಾಡಿದ ಹೂಡುವಳಿ ತೆರಿಗೆ ಜಮೆ, ಕ್ಲೇಮು ಮಾಡಿರುವ ಮರುಪಾವತಿ, ಮತ್ತು ಇತರೇ ಸಂಬಂಧಪಟ್ಟ ವಿಷಯಗಳನ್ನು ಪರಿಶೀಲಿಸತಕ್ಕದ್ದು ಮತ್ತು ಅಭಿಪ್ರಾಯೋಕ್ತಿಗಳನ್ನು ತನ್ನ ಲೆಕ್ಕಪರಿಶೋಧನೆಯ ಟಿಪ್ಪಣಿಗಳಲ್ಲಿ ದಾಖಲಿಸತಕ್ಕದ್ದು.

(4) ಯುಕ್ತ ಅಧಿಕಾರಿಯು, ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಂತೆ, ಗಮನಿಸಿದ ನ್ಯೂನತೆಗಳನ್ನು ನೋಂದಾಯಿತ ವ್ಯಕ್ತಿಗೆ ತಿಳಿಸಬಹುದು ಮತ್ತು ಸದರಿ ವ್ಯಕ್ತಿಯು ತನ್ನ ಉತ್ತರವನ್ನು ಸಲ್ಲಿಸಬಹುದು ಮತ್ತು ಒದಗಿಸಿದ ಉತ್ತರವನ್ನು ಯುಕ್ತ ಅಧಿಕಾರಿಯು ಸೂಕ್ತವಾಗಿ ಪರಿಗಣಿಸಿದ ನಂತರ ಲೆಕ್ಕಪರಿಶೋಧನೆಯ ನಿರ್ಣಯಗಳನ್ನು ಅಂತಿಮಗೊಳಿಸತಕ್ಕದ್ದು.

(5) ಲೆಕ್ಕಪರಿಶೋಧನೆಯ ಮುಕ್ತಾಯದ ನಂತರ, ಯುಕ್ತ ಅಧಿಕಾರಿಯು, ಲೆಕ್ಕಪರಿಶೋಧನೆಯ ನಿರ್ಣಯಗಳನ್ನು, ಪ್ರಕರಣ 65ರ ಉಪಪ್ರಕರಣ (6)ರ ಉಪಬಂಧಗಳಿಗೆ ಅನುಸಾರವಾಗಿ ನೋಂದಾಯಿತ ವ್ಯಕ್ತಿಗೆ **ನಮೂನೆ ಜಿಎಸ್‌ಟಿ ಎಡಿಟಿ–02**ರಲ್ಲಿ ತಿಳಿಸತಕ್ಕದ್ದು.

102. ವಿಶೇಷ ಲೆಕ್ಕಪರಿಶೋಧನೆ.– (1) ಪ್ರಕರಣ 66ರ ಉಪಬಂಧಗಳಿಗೆ ಅನುಸಾರವಾಗಿ ವಿಶೇಷ ಲೆಕ್ಕಪರಿಶೋಧನೆಯನ್ನು ನಡೆಸುವುದು ಅಗತ್ಯವಿದ್ದಲ್ಲಿ, ಸದರಿ ಪ್ರಕರಣದಲ್ಲಿ ಉಲ್ಲೇಖಿಸಲಾದ ಅಧಿಕಾರಿಯು, ನೋಂದಾಯಿತ ವ್ಯಕ್ತಿಗೆ, **ನಮೂನೆ ಜಿಎಸ್‌ಟಿ ಎಡಿಟಿ–03**ರಲ್ಲಿ, ಒಂದು ನಿರ್ದೇಶನವನ್ನು, ಆತನ ಸದರಿ ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಿದ ಒಬ್ಬ ಚಾರ್ಟರ್ಡ್ ಅಕೌಂಟೆಂಟ್ ಅಥವಾ ಒಬ್ಬ ಕಾಸ್ಟ್ ಅಕೌಂಟೆಂಟ್‌ನಿಂದ ಲೆಕ್ಕಪರಿಶೋಧನೆ ಮಾಡಿಸಿಕೊಳ್ಳುವಂತೆ ನೀಡತಕ್ಕದ್ದು.

(2) ವಿಶೇಷ ಲೆಕ್ಕಪರಿಶೋಧನೆಯ ಮುಕ್ತಾಯದ ನಂತರ, ನೋಂದಾಯಿತ ವ್ಯಕ್ತಿಗೆ ವಿಶೇಷ ಲೆಕ್ಕಪರಿಶೋಧನೆಯ ನಿರ್ಣಯಗಳನ್ನು, **ನಮೂನೆ ಜಿಎಸ್‌ಟಿ ಎಡಿಟಿ–04**ರಲ್ಲಿ ತಿಳಿಸತಕ್ಕದ್ದು.

ಅಧ್ಯಾಯ –XII
ಪೂರ್ವಭಾವಿ ನಿರ್ಣಯ

103. ಪೂರ್ವಭಾವಿ ನಿರ್ಣಯದ ಪ್ರಾಧಿಕಾರದ ಸದಸ್ಯರುಗಳ ಅರ್ಹತೆ ಮತ್ತು ನೇಮಕಾತಿ.– ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಜಂಟಿ ಆಯುಕ್ತರ ಶ್ರೇಣಿಯ ಅಧಿಕಾರಿಯನ್ನು ಪೂರ್ವಭಾವಿ ನಿರ್ಣಯದ ಪ್ರಾಧಿಕಾರದ ಸದಸ್ಯನನ್ನಾಗಿ ನೇಮಕಾತಿ ಮಾಡತಕ್ಕದ್ದು.

104. ಪೂರ್ವಭಾವಿ ನಿರ್ಣಯದ ಪ್ರಾಧಿಕಾರಕ್ಕೆ ಅರ್ಜಿಯ ನಮೂನೆ ಮತ್ತು ವಿಧಾನ.– (1) ಪ್ರಕರಣ 97ರ ಉಪಪ್ರಕರಣ (1)ರ ಅಡಿಯಲ್ಲಿ ಪೂರ್ವಭಾವಿ ನಿರ್ಣಯಕ್ಕಾಗಿ **ನಮೂನೆ ಜಿಎಸ್‌ಟಿ ಎಆರ್‌ಎ–1ರಲ್ಲಿ** ಒಂದು ಅರ್ಜಿಯನ್ನು ಸಾಮಾನ್ಯ ಪೋರ್ಟಲ್‌ನಲ್ಲಿ ಹಾಕತಕ್ಕದ್ದು ಮತ್ತು ಅದು ಪ್ರಕರಣ 49ರಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ ಠೇವಣಿ ಮಾಡಬೆಕಾದ ಐದು ಸಾವಿರ ರೂಪಾಯಿಗಳ ಶುಲ್ಕದಿಂದ ಜೊತೆಗೂಡಿರತಕ್ಕದ್ದು.

(2) ಉಪನಿಯಮ (1)ರಲ್ಲಿ ಉಲ್ಲೇಖಿಸಲಾದ ಅರ್ಜಿಯು, ಅದರಲ್ಲಿ ಒಳಗೊಂಡಿರುವ ಪರಿಶೀಲನೆ ಮತ್ತು ಅಂಥ ಅರ್ಜಿಯ ಜೊತೆಯಲ್ಲಿರುವ ಎಲ್ಲಾ ಸಂಬಂಧಪಟ್ಟ ದಸ್ತಾವೇಜುಗಳಿಗೆ ನಿಯಮ 26ರಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ ಸಹಿಯಾಗಿರತಕ್ಕದ್ದು.

105. ಪ್ರಾಧಿಕಾರದಿಂದ ಉಚ್ಚರಿತವಾದ ಪೂರ್ವಭಾವಿ ನಿರ್ಣಯಗಳ ಪ್ರತಿಗಳ ಪ್ರಮಾಣೀಕರಣ.– ಪೂರ್ವಭಾವಿ ನಿರ್ಣಯದ ಒಂದು ಪ್ರತಿಯನ್ನು, ಅದರ ಮೂಲಪ್ರತಿಯ ಯಥಾಪ್ರತಿ ಎಂದು ಪೂರ್ವಭಾವಿ ನಿರ್ಣಯದ ಪ್ರಾಧಿಕಾರದ ಯಾವೊಬ್ಬ ಸದಸ್ಯನಿಂದ ಪ್ರಮಾಣೀಕರಿಸತಕ್ಕದ್ದು.

106. ಪೂರ್ವಭಾವಿ ನಿರ್ಣಯದ ಅಪೀಲು ಪ್ರಾಧಿಕಾರಕ್ಕೆ ಅಪೀಲಿನ ನಮೂನೆ ಮತ್ತು ವಿಧಾನ.– (1) ಪ್ರಕರಣ 98ರ ಉಪಪ್ರಕರಣ (6)ರ ಅಡಿಯಲ್ಲಿ ನೀಡಲಾದ ಪೂರ್ವಭಾವಿ ನಿರ್ಣಯದ ವಿರುದ್ಧವಾಗಿ ಒಂದು ಅಪೀಲನ್ನು, ಅರ್ಜಿದಾರನು, **ನಮೂನೆ ಜಿಎಸ್‌ಟಿ ಎಆರ್‌ಎ–2ರಲ್ಲಿ** ಸಾಮಾನ್ಯ ಪೋರ್ಟಲ್‌ನಲ್ಲಿ ಹಾಕತಕ್ಕದ್ದು ಮತ್ತು ಅದು ಪ್ರಕರಣ 49ರಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ ತೇವಣಿ ಮಾಡಬೇಕಾದ ಹತ್ತು ಸಾವಿರ ರೂಪಾಯಿಗಳ ಶುಲ್ಕದಿಂದ ಜೊತೆಗೂಡಿರತಕ್ಕದ್ದು.

(2) ಪ್ರಕರಣ 98ರ ಉಪಪ್ರಕರಣ (6)ರ ಅಡಿಯಲ್ಲಿ ನೀಡಲಾದ ಪೂರ್ವಭಾವಿ ನಿರ್ಣಯದ ವಿರುದ್ಧವಾಗಿ ಒಂದು ಅಪೀಲನ್ನು, ಸಂಬಂದಪಟ್ಟ ಅಧಿಕಾರಿ ಅಥವಾ ಪ್ರಕರಣ 100ರಲ್ಲಿ ಉಲ್ಲೇಖಿಸಲಾದ ಕ್ಷೇತ್ರವ್ಯಾಪ್ತಿಯ ಅಧಿಕಾರಿಯು **ನಮೂನೆ ಜಿಎಸ್‌ಟಿ ಎಆರ್‌ಎ–3ರಲ್ಲಿ** ಸಾಮಾನ್ಯ ಪೋರ್ಟಲ್‌ನಲ್ಲಿ ಹಾಕತಕ್ಕದ್ದು ಮತ್ತು ಅಪೀಲನ್ನು ಸಲ್ಲಿಸುವುದಕ್ಕಾಗಿ ಸದರಿ ಅಧಿಕಾರಿಯು ಯಾವುದೇ ಶುಲ್ಕವನ್ನು ಸಂದಾಯ ಮಾಡತಕ್ಕದ್ದಲ್ಲ.

(3) ಉಪನಿಯಮ (1)ರಲ್ಲಿ ಅಥವಾ ಉಪನಿಯಮ (2)ರಲ್ಲಿ ಉಲ್ಲೇಖಿಸಲಾದ ಅಪೀಲು, ಅದರಲ್ಲಿ ಒಳಗೊಂಡಿರುವ ಪರಿಶೀಲನೆ ಮತ್ತು ಅಂಥ ಅಪೀಲಿನ ಜೊತೆಯಲ್ಲಿರುವ ಎಲ್ಲಾ ಸಂಬಂಧಪಟ್ಟ ದಸ್ತಾವೇಜುಗಳನ್ನು ಕೆಳಕಂಡಂತೆ ಸಹಿಯಾಗಿರತಕ್ಕದ್ದು,–

(ಎ) ಸಂಬಂದಪಟ್ಟ ಅಧಿಕಾರಿ ಅಥವಾ ಕ್ಷೇತ್ರವ್ಯಾಪ್ತಿಯ ಅಧಿಕಾರಿಯ ಸಂದರ್ಭದಲ್ಲಿ, ಅಂಥ ಅಧಿಕಾರಿಯಿಂದ ಲಿಖಿತವಾಗಿ ಪ್ರಾಧಿಕೃತನಾದ ಒಬ್ಬ ಅಧಿಕಾರಿಯಿಂದ; ಮತ್ತು

(ಬಿ) ಅರ್ಜಿದಾರನ ಸಂದರ್ಭದಲ್ಲಿ, ನಿಯಮ 26ರಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ

107. ಪ್ರಾಧಿಕಾರದಿಂದ ಉಚ್ಚರಿತವಾದ ಪೂರ್ವಭಾವಿ ನಿರ್ಣಯಗಳ ಪ್ರತಿಗಳ ಪ್ರಮಾಣೀಕರಣ.– ಪೂರ್ವಭಾವಿ ನಿರ್ಣಯದ ಅಪೀಲು ಪ್ರಾಧಿಕಾರದಿಂದ ಉಚ್ಚರಿತವಾದ ಮತ್ತು ಸದಸ್ಯರುಗಳಿಂದ ಯುಕ್ತವಾಗಿ ಸಹಿ ಮಾಡಿದ ಪೂರ್ವಭಾವಿ ನಿರ್ಣಯದ ಒಂದು ಪ್ರತಿಯನ್ನು, ಅಧಿನಿಯಮದ ಪ್ರಕರಣ 101ರ ಉಪಪ್ರಕರಣ (4)ರ ಉಪಬಂಧಗಳಿಗೆ ಅನುಸಾರವಾಗಿ ಕೆಳಕಂಡವರುಗಳಿಗೆ ಕಳುಹಿಸಿಕೊಡತಕ್ಕದ್ದು–

(ಎ) ಅರ್ಜಿದಾರ ಮತ್ತು ಅಪೀಲುದಾರ;

(ಬಿ) ಕೇಂದ್ರ ತೆರಿಗೆ ಮತ್ತು ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶ ತೆರಿಗೆಯ ಸಂಬಂಧಪಟ್ಟ ಅಧಿಕಾರಿ;

(ಸಿ) ಕೇಂದ್ರ ತೆರಿಗೆ ಮತ್ತು ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶ ತೆರಿಗೆಯ ಕ್ಷೇತ್ರವ್ಯಾಪ್ತಿಯ ಅಧಿಕಾರಿ; ಮತ್ತು

(ಡಿ) ಪ್ರಾಧಿಕಾರ.

ಅಧ್ಯಾಯ–XIII
ಅಪೀಲುಗಳು ಮತ್ತು ಪುನರೀಕ್ಷಣೆ

108. ಅಪೀಲು ಪ್ರಾಧಿಕಾರಕ್ಕೆ ಅಪೀಲು.– (1) ಪ್ರಕರಣ 107ರ ಉಪಪ್ರಕರಣ (1)ರ ಅಡಿಯಲ್ಲಿ ಅಪೀಲು ಪ್ರಾಧಿಕಾರಕ್ಕೆ ಒಂದು ಅಪೀಲನ್ನು **ನಮೂನೆ ಜಿಎಸ್‌ಟಿ ಎಪಿಎಲ್–01**ರಲ್ಲಿ, ಸಂಬಂಧಪಟ್ಟ ದಸ್ತಾವೇಜುಗಳೊಂದಿಗೆ, ವಿದ್ಯುನ್ಮಾನ

ರೀತಿಯಾಗಲಿ ಅಥವಾ ಆಯುಕ್ತರು ಅಧಿಸೂಚಸಬಹುದಾದಂತೆ ಅನ್ಯಥಾ ರೀತಿಯಲ್ಲಾಗಲಿ ಸಲ್ಲಿಸತಕ್ಕದ್ದು, ಮತ್ತು ಅಪೀಲುದಾರನಿಗೆ ಕೂಡಲೇ ಒಂದು ತಾತ್ಕಾಲಿಕ ಸ್ವೀಕೃತಿಯನ್ನು ನೀಡತಕ್ಕದ್ದು.

(2) **ನಮೂನೆ ಜಿಎಸ್‌ಟಿ ಎಪಿಎಲ್‌–01**ರಲ್ಲಿ ಒಳಗೊಂಡಂತೆ ಅಪೀಲಿನ ಕಾರಣಾಧಾರಗಳು ಮತ್ತು ಪರಿಶೀಲನೆಯ ನಮೂನೆಯನ್ನು ನಿಯಮ 26ರಲ್ಲಿ ನಿರ್ದಿಷ್ಟಪಡಿಸಿರುವ ವಿಧಾನದಲ್ಲಿ ಸಹಿಮಾಡಿರತಕ್ಕದ್ದು.

(3) ಅದರ ವಿರುದ್ಧವಾಗಿ ಅಪೀಲು ಮಾಡಲಾಗಿರುವ ನಿರ್ಣಯ ಅಥವಾ ಆದೇಶದ ಪ್ರಮಾಣೀಕರಿಸಿದ ಪ್ರತಿಯನ್ನು ಉಪನಿಯಮ (1)ರ ಅಡಿಯಲ್ಲಿ ಅಪೀಲನ್ನು ಸಲ್ಲಿಸಿದ ಏಳು ದಿನಗಳ ಒಳಗಾಗಿ ಸಲ್ಲಿಸತಕ್ಕದ್ದು ಮತ್ತು ತದನಂತರ ಅಪೀಲು ಪ್ರಾಧಿಕಾರ ಅಥವಾ ಆತನಿಂದ ಈ ಸಂಬಂಧದಲ್ಲಿ ಪ್ರಾಧಿಕೃತಗೊಳಿಸಿದ ಒಬ್ಬ ಅಧಿಕಾರಿಯು, ಅಪೀಲು ಸಂಖ್ಯೆಯನ್ನು ಸೂಚಿಸಿದ ಒಂದು ಅಂತಿಮ ಸ್ವೀಕೃತಿಯನ್ನು, **ನಮೂನೆ ಜಿಎಸ್‌ಟಿ ಎಪಿಎಲ್‌–02**ರಲ್ಲಿ ನೀಡತಕ್ಕದ್ದು.

ಪರಂತು, ನಿರ್ಣಯ ಅಥವಾ ಆದೇಶದ ಪ್ರಮಾಣೀಕರಿಸಿದ ಪ್ರತಿಯನ್ನು **ನಮೂನೆ ಜಿಎಸ್‌ಟಿ ಎಪಿಎಲ್‌–01**ನ್ನು ಸಲ್ಲಿಸಿದ ಏಳು ದಿನಗಳ ಒಳಗಾಗಿ ಸಲ್ಲಿಸಿದ್ದಲ್ಲಿ, ಅಪೀಲಿನ ಸಲ್ಲಿಸುವಿಕೆಯ ದಿನಾಂಕವು ತಾತ್ಕಾಲಿಕ ಸ್ವೀಕೃತಿಯನ್ನು ನೀಡಿದ ದಿನಾಂಕವಾಗಿರತಕ್ಕದ್ದು ಮತ್ತು ಸದರಿ ಪ್ರತಿಯನ್ನು ಏಳು ದಿನಗಳ ನಂತರ ಸಲ್ಲಿಸಿದ್ದಲ್ಲಿ, ಅಪೀಲಿನ ಸಲ್ಲಿಸುವಿಕೆಯದಿನಾಂಕವು ಅಂಥ ಪ್ರತಿಯನ್ನು ಸಲ್ಲಿಸಿದ ದಿನಾಂಕವಾಗಿರತಕ್ಕದ್ದು

ವಿವರಣೆ.– ಈ ನಿಯಮದ ಉಪಬಂಧಗಳಿಗಾಗಿ, ಅಪೀಲು ಸಂಖ್ಯೆಯನ್ನು ಸೂಚಿಸಿದ ಒಂದು ಅಂತಿಮ ಸ್ವೀಕೃತಿಯನ್ನು ನೀಡಿದಾಗ ಮಾತ್ರ ಅಪೀಲು ಸಲ್ಲಿಕೆಯಾಗಿದೆ ಎಂದು ಪರಿಗಣಿಸತಕ್ಕದ್ದು.

109. **ಅಪೀಲು ಪ್ರಾಧಿಕಾರಕ್ಕೆ ಅರ್ಜಿ**.– (1) ಪ್ರಕರಣ 107ರ ಉಪಪ್ರಕರಣ (2)ರ ಅಡಿಯಲ್ಲಿ ಅಪೀಲು ಪ್ರಾಧಿಕಾರಕ್ಕೆ ಒಂದು ಅರ್ಜಿಯನ್ನು **ನಮೂನೆ ಜಿಎಸ್‌ಟಿ ಎಪಿಎಲ್‌–03**ರಲ್ಲಿ, ಸಂಬಂಧಪಟ್ಟ ದಸ್ತಾವೇಜುಗಳೊಂದಿಗೆ, ವಿದ್ಯುನ್ಮಾನ ರೀತಿಯಾಗಲಿ ಅಥವಾ ಆಯುಕ್ತರು ಅಧಿಸೂಚಸಬಹುದಾದಂತೆ ಅನ್ಯಥಾ ರೀತಿಯಲ್ಲಾಗಲಿ ಸಲ್ಲಿಸತಕ್ಕದ್ದು,

(2) ಅದರ ವಿರುದ್ಧವಾಗಿ ಅಪೀಲು ಮಾಡಲಾಗಿರುವ ನಿರ್ಣಯ ಅಥವಾ ಆದೇಶದ ಪ್ರಮಾಣೀಕರಿಸಿದ ಪ್ರತಿಯನ್ನು ಉಪನಿಯಮ (1)ರ ಅಡಿಯಲ್ಲಿ ಅಪೀಲನ್ನು ಸಲ್ಲಿಸಿದ ಏಳು ದಿನಗಳ ಒಳಗಾಗಿ ಸಲ್ಲಿಸತಕ್ಕದ್ದು ಮತ್ತು ತದನಂತರ ಅಪೀಲು ಪ್ರಾಧಿಕಾರ ಅಥವಾ ಆತನಿಂದ ಈ ಸಂಬಂಧದಲ್ಲಿ ಪ್ರಾಧಿಕೃತಗೊಳಿಸಿದ ಒಬ್ಬ ಅಧಿಕಾರಿಯಿಂದ, ಅಪೀಲು ಸಂಖ್ಯೆಯನ್ನು ಸೃಷ್ಟಿಸತಕ್ಕದ್ದು.

110. **ಅಪೀಲು ನ್ಯಾಯಾಧಿಕರಣಕ್ಕೆ ಅಪೀಲು**.– (1) ಪ್ರಕರಣ 112ರ ಉಪಪ್ರಕರಣ (1)ರ ಅಡಿಯಲ್ಲಿ ಅಪೀಲು ನ್ಯಾಯಾಧಿಕರಣಕ್ಕೆ ಒಂದು ಅಪೀಲನ್ನು **ನಮೂನೆ ಜಿಎಸ್‌ಟಿ ಎಪಿಎಲ್‌–05**ರಲ್ಲಿ, ಸಂಬಂಧಪಟ್ಟ ದಸ್ತಾವೇಜುಗಳೊಂದಿಗೆ, ವಿದ್ಯುನ್ಮಾನ ರೀತಿಯಾಗಲಿ ಅಥವಾ ರಿಜಿಸ್ಟ್ರಾರ್‌ರಿಂದ ಅಧಿಸೂಚಸಬಹುದಾದಂತೆ ಅನ್ಯಥಾ ರೀತಿಯಲ್ಲಾಗಲಿ, ಸಾಮಾನ್ಯ ಪೋರ್ಟಲ್‌ನಲ್ಲಿ ಸಲ್ಲಿಸತಕ್ಕದ್ದು, ಮತ್ತು ಅಪೀಲುದಾರನಿಗೆ ಕೂಡಲೇ ಒಂದು ತಾತ್ಕಾಲಿಕ ಸ್ವೀಕೃತಿಯನ್ನು ನೀಡತಕ್ಕದ್ದು.

(2) ಪ್ರಕರಣ 112ರ ಉಪಪ್ರಕರಣ (5)ರ ಅಡಿಯಲ್ಲಿ ಅಪೀಲು ನ್ಯಾಯಾಧಿಕರಣಕ್ಕೆ ಒಂದು ಎದುರು ಆಕ್ಷೇಪಣೆಗಳ ವಿವರಣ ಪತ್ರವನ್ನು **ನಮೂನೆ ಜಿಎಸ್‌ಟಿ ಎಪಿಎಲ್‌–06**ರಲ್ಲಿ, ವಿದ್ಯುನ್ಮಾನ ರೀತಿಯಾಗಲಿ ಅಥವಾ ರಿಜಿಸ್ಟ್ರಾರ್‌ರಿಂದ ಅಧಿಸೂಚಸಬಹುದಾದಂತೆ ಅನ್ಯಥಾ ರೀತಿಯಲ್ಲಾಗಲಿ, ಸಲ್ಲಿಸತಕ್ಕದ್ದು,

(3) ಅಪೀಲು ಮತ್ತು ಎದುರು ಆಕ್ಷೇಪಣೆಗಳ ವಿವರಣ ಪತ್ರವನ್ನು, ನಿಯಮ 26ರಲ್ಲಿ ನಿರ್ದಿಷ್ಟಪಡಿಸಿರುವ ವಿಧಾನದಲ್ಲಿ ಸಹಿಮಾಡಿರತಕ್ಕದ್ದು.

(4) ಅದರ ವಿರುದ್ಧವಾಗಿ ಅಪೀಲು ಮಾಡಲಾಗಿರುವ ನಿರ್ಣಯ ಅಥವಾ ಆದೇಶದ ಪ್ರಮಾಣೀಕರಿಸಿದ ಪ್ರತಿಯನ್ನು

ಉಪನಿಯಮ (5)ರಲ್ಲಿ ನಿರ್ದಿಷ್ಟಪಡಿಸಿದ ಶುಲ್ಕದೊಂದಿಗೆ, ಉಪನಿಯಮ (1)ರ ಅಡಿಯಲ್ಲಿ, ಅಪೀಲನ್ನು ಸಲ್ಲಿಸಿದ ಏಳು ದಿನಗಳ ಒಳಗಾಗಿ ರಿಜಿಸ್ಟ್ರಾರ್‌ಗೆ ಸಲ್ಲಿಸತಕ್ಕದ್ದು ಮತ್ತು ತದನಂತರ ರಿಜಿಸ್ಟ್ರಾರ್‌ರಿಂದ, ಅಪೀಲು ಸಂಖ್ಯೆಯನ್ನು ಸೂಚಿಸಿರುವ ಒಂದು ಅಂತಿಮ ಸ್ವೀಕೃತಿಯನ್ನು, **ನಮೂನೆ ಜಿಎಸ್‌ಟಿ ಎಪಿಎಲ್–02**ರಲ್ಲಿ ನೀಡತಕ್ಕದ್ದು.

ಪರಂತು, ನಿರ್ಣಯ ಅಥವಾ ಆದೇಶದ ಪ್ರಮಾಣೀಕರಿಸಿದ ಪ್ರತಿಯನ್ನು **ನಮೂನೆ ಜಿಎಸ್‌ಟಿ ಎಪಿಎಲ್–05**ನ್ನು ಸಲ್ಲಿಸಿದ ಏಳುದಿನಗಳ ಒಳಗಾಗಿ ಸಲ್ಲಿಸಿದ್ದಲ್ಲಿ, ಅಪೀಲಿನ ಸಲ್ಲಿಸುವಿಕೆಯ ದಿನಾಂಕವು ತಾತ್ಕಾಲಿಕ ಸ್ವೀಕೃತಿಯನ್ನು ನೀಡಿದ ದಿನಾಂಕವಾಗಿರತಕ್ಕದ್ದು ಮತ್ತು ಸದರಿ ಪ್ರತಿಯನ್ನು ಏಳು ದಿನಗಳ ನಂತರ ಸಲ್ಲಿಸಿದ್ದಲ್ಲಿ, ಅಪೀಲಿನ ಸಲ್ಲಿಸುವಿಕೆಯ ದಿನಾಂಕವು ಅಂಥ ಪ್ರತಿಯನ್ನು ಸಲ್ಲಿಸಿದ ದಿನಾಂಕವಾಗಿರತಕ್ಕದ್ದು

ವಿವರಣೆ.– ಈ ನಿಯಮದ ಉಪಬಂಧಗಳಿಗಾಗಿ, ಅಪೀಲು ಸಂಖ್ಯೆಯನ್ನು ಸೂಚಿಸಿದ ಒಂದು ಅಂತಿಮ ಸ್ವೀಕೃತಿಯನ್ನು ನೀಡಿದಾಗ ಮಾತ್ರ ಅಪೀಲು ಸಲ್ಲಿಕೆಯಾಗಿದೆ ಎಂದು ಪರಿಗಣಿಸತಕ್ಕದ್ದು.

(5) ಅಪೀಲು ಅಥವಾ ಒಂದು ಅಪೀಲಿನ ಪುನಃಸ್ಥಾಪನೆಗಾಗಿ ಶುಲ್ಕವು, ಗರಿಷ ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ಒಳಪಟ್ಟು ಅದರ ವಿರುದ್ಧವಾಗಿ ಅಪೀಲು ಮಾಡಲಾಗಿರುವ ಆದೇಶದಲ್ಲಿ, ನಿರ್ಧರಿಸಲಾಗಿರುವ ತೆರಿಗೆ ಅಥವಾ ಒಳಗೊಂಡ ಹೂಡುವಳಿ ತೆರಿಗೆ ಜಮೆ, ಅಥವಾ ಒಳಗೊಂಡಿರುವ ತೆರಿಗೆ ಅಥವಾ ಹೂಡುವಳಿ ತೆರಿಗೆ ಜಮೆಯಲ್ಲಿನ ವ್ಯತ್ಯಾಸ ಅಥವಾ ಜುಲ್ಮಾನೆ, ಶುಲ್ಕ ಅಥವಾ ದಂಡದ ಮೊತ್ತದ ಪ್ರತಿ ಒಂದು ಲಕ್ಷ ರೂಪಾಯಿಗಳಿಗೆ ಒಂದು ಸಾವಿರ ರೂಪಾಯಿಗಳಾಗಿರತಕ್ಕದ್ದು.

(6) ಪ್ರಕರಣ 112ರ ಉಪಪ್ರಕರಣ (10)ರ ಅಡಿಯಲ್ಲಿ ಉಲ್ಲೇಖಿಸಲಾದ ತಪ್ಪುಗಳ ಸರಿಪಡಿಸುವಿಕೆಗಾಗಿ ಅಪೀಲು ನ್ಯಾಯಾಧಿಕರಣದ ಮುಂದೆ ಸಲ್ಲಿಸಿರುವ ಅರ್ಜಿಗಾಗಿ ಯಾವುದೇ ಶುಲ್ಕವಿರತಕ್ಕದ್ದಲ್ಲ;

111. ಅಪೀಲು ನ್ಯಾಯಾಧಿಕರಣಕ್ಕೆ ಅರ್ಜಿ.– (1) ಪ್ರಕರಣ 112ರ ಉಪಪ್ರಕರಣ (3)ರ ಅಡಿಯಲ್ಲಿ ಅಪೀಲು ನ್ಯಾಯಾಧಿಕರಣಕ್ಕೆ ಒಂದು ಅರ್ಜಿಯನ್ನು **ನಮೂನೆ ಜಿಎಸ್‌ಟಿ ಎಪಿಎಲ್–07**ರಲ್ಲಿ, ಸಂಬಂಧಪಟ್ಟ ದಸ್ತಾವೇಜುಗಳೊಂದಿಗೆ, ವಿದ್ಯುನ್ಮಾನ ರೀತಿಯಾಗಲಿ ಅಥವಾ ಅನ್ಯಥಾ ಸಾಮಾನ್ಯ ಪೋರ್ಟಲ್‌ನಲ್ಲಿ ಸಲ್ಲಿಸತಕ್ಕದ್ದು,

(2) ಅದರ ವಿರುದ್ಧವಾಗಿ ಅಪೀಲು ಮಾಡಲಾಗಿರುವ ನಿರ್ಣಯ ಅಥವಾ ಆದೇಶದ ಪ್ರಮಾಣೀಕರಿಸಿದ ಪ್ರತಿಯನ್ನು ಉಪನಿಯಮ (1)ರ ಅಡಿಯಲ್ಲಿ ಅಪೀಲನ್ನು ಸಲ್ಲಿಸಿದ ಏಳು ದಿನಗಳ ಒಳಗಾಗಿ ಸಲ್ಲಿಸತಕ್ಕದ್ದು ಮತ್ತು ರಿಜಿಸ್ಟ್ರಾರ್‌ರಿಂದ ಒಂದು ಅಪೀಲು ಸಂಖ್ಯೆಯನ್ನು ಸೃಷ್ಟಿಸತಕ್ಕದ್ದು.

112. ಅಪೀಲು ಪ್ರಾಧಿಕಾರ ಅಥವಾ ಅಪೀಲು ನ್ಯಾಯಾಧಿಕರಣದ ಮುಂದೆ ಹೆಚ್ಚುವರಿ ಪುರಾವೆಯನ್ನು ಹಾಜರುಪಡಿಸುವುದು.– (1) ಅಪೀಲುದಾರ ಅಪೀಲು ಪ್ರಾಧಿಕಾರ ಅಥವಾ ಅಪೀಲು ನ್ಯಾಯಾಧಿಕರಣದ ಮುಂದೆ, ನ್ಯಾಯನಿರ್ಣಯ ಪ್ರಾಧಿಕಾರ ಅಥವಾ ಸಂದರ್ಭಾನುಸಾರವಾಗಿ ಅಪೀಲು ಪ್ರಾಧಿಕಾರದ ಮುಂದೆ ನಡಾವಳಿಗಳ ಸಮಯದಲ್ಲಿ ಆತನಿಂದ ಹಾಜರುಪಡಿಸಿದ ಪುರಾವೆಯನ್ನು ಹೊರತುಪಡಿಸಿದ ಯಾವುದೇ ಪುರಾವೆಯನ್ನು, ಮೌಖಿಕವಾಗಿಯಾಗಲಿ ಅಥವಾ ದಸ್ತಾವೇಜುಗಳ ರೂಪದಲ್ಲಾಗಲಿ, ಹಾಜರುಪಡಿಸಲು, ಕೆಳಕಂಡ ಸನ್ನಿವೇಶಗಳನ್ನು ಬಿಟ್ಟು ಅನುಮತಿಸತಕ್ಕದ್ದಲ್ಲ, ಅಂದರೆ:–

(ಎ) ನ್ಯಾಯನಿರ್ಣಯ ಪ್ರಾಧಿಕಾರ ಅಥವಾ ಸಂದರ್ಭಾನುಸಾರವಾಗಿ ಅಪೀಲು ಪ್ರಾಧಿಕಾರವು, ಅಂಗೀಕರಿಸಬೇಕಾಗಿದ್ದ ಪುರಾವೆಯನ್ನು ಅಂಗೀಕರಿಸಲು ನಿರಾಕರಿಸಿದ್ದಲ್ಲಿ; ಅಥವಾ

(ಬಿ) ನ್ಯಾಯನಿರ್ಣಯ ಪ್ರಾಧಿಕಾರ ಅಥವಾ ಸಂದರ್ಭಾನುಸಾರವಾಗಿ ಅಪೀಲು ಪ್ರಾಧಿಕಾರದಿಂದ ಕರೆಯಲಾಗಿದ್ದ ಪುರಾವೆಯನ್ನು ಹಾಜರು ಪಡಿಸಲು ಸಾಕಷ್ಟು ಕಾರಣಗಳಿಂದ ಅಪೀಲುದಾರನುಪ್ರತಿಬಂಧಿತನಾಗಿದ್ದಲ್ಲಿ; ಅಥವಾ

(ಸಿ) ನ್ಯಾಯನಿರ್ಣಯ ಪ್ರಾಧಿಕಾರ ಅಥವಾ ಸಂದರ್ಭಾನುಸಾರವಾಗಿ ಅಪೀಲು ಪ್ರಾಧಿಕಾರದ ಮುಂದೆ, ಅಪೀಲಿನ

ಯಾವುದೇ ಕಾರಣಾಧಾರಕ್ಕೆ ಸಂಬಂಧಪಟ್ಟಿರುವ ಪುರಾವೆಯನ್ನು ಹಾಜರು ಪಡಿಸಲು ಸಾಕಷ್ಟು ಕಾರಣಗಳಿಂದ ಅಪೀಲುದಾರನು ಪ್ರತಿಬಂಧಿತನಾಗಿದ್ದಲ್ಲಿ; ಅಥವಾ

(ಡಿ) ನ್ಯಾಯನಿರ್ಣಯ ಪ್ರಾಧಿಕಾರ ಅಥವಾ ಸಂದರ್ಭಾನುಸಾರವಾಗಿ ಅಪೀಲು ಪ್ರಾಧಿಕಾರ ಅದರ ವಿರುದ್ಧವಾಗಿ ಅಪೀಲು ಮಾಡಲಾಗಿರುವ ಆದೇಶವನ್ನು, ಅಪೀಲಿನ ಯಾವುದೇ ಕಾರಣಾಧಾರಕ್ಕೆ ಸಂಬಂಧಪಟ್ಟಿರುವ ಪುರಾವೆಯನ್ನು ಮುಂದಿಡಲು ಸಾಕಷ್ಟು ಅವಕಾಶವನ್ನು ಅಪೀಲುದಾರನಿಗೆ ನೀಡದೇ ಆದೇಶವನ್ನು ಮಾಡಿದ್ದಲ್ಲಿ.

(2) ಉಪನಿಯಮ (1)ರ ಅಡಿಯಲ್ಲಿ ಯಾವುದೇ ಪುರವಾವೆಯನ್ನು, ಅಪೀಲು ಪ್ರಾಧಿಕಾರ ಅಥವಾ ಅಪೀಲು ನ್ಯಾಯಾಧಿಕರಣ ಅದನ್ನು ಅಂಗೀಕರಿಸುವುದಕ್ಕಾಗಿ ಕಾರಣಗಳು ಲಿಖಿತವಾಗಿ ದಾಖಲಿಸಿದ ಹೊರತು, ಅಂಗೀಕರಿಸತಕ್ಕದ್ದಲ್ಲ.

(3) ಅಪೀಲು ಪ್ರಾಧಿಕಾರ ಅಥವಾ ಅಪೀಲು ನ್ಯಾಯಾಧಿಕರಣವು, ನ್ಯಾಯನಿರ್ಣಯ ಪ್ರಾಧಿಕಾರ ಅಥವಾ ಸದರಿ ಅಧಿಕಾರಿಯಿಂದ ಈ ಸಂಬಂಧದಲ್ಲಿ ಪ್ರಾಧಿಕೃತನಾದ ಒಬ್ಬ ಅಧಿಕಾರಿಗೆ ಕೆಳಕಂಡವುಗಳಿಗಾಗಿ ಯುಕ್ತ ಅವಕಾಶವನ್ನು ನೀಡಿದ ಹೊರತು ಉಪನಿಯಮ (1)ರ ಅಡಿಯಲ್ಲಿ ಹಾಜರುಪಡಿಸಿದ ಯಾವುದೇ ಪುರವಾವೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ–

(ಎ) ಪುರಾವೆ ಅಥವಾ ದಸ್ತಾವೇಜನ್ನು ಪರೀಕ್ಷಿಸಲು ಅಥವಾ ಅಪೀಲುದಾರನಿಂದ ಹಾಜರುಪಡಿಸಿದ ಯಾವುದೇ ಸಾಕ್ಷಿದಾರನನ್ನು ಪಾಟಿ ಸವಾಲು ಮಾಡಲು; ಅಥವಾ

(ಬಿ) ಉಪನಿಯಮ (1)ರ ಅಡಿಯಲ್ಲಿ ಅಪೀಲುದಾರನಿಂದ ಹಾಜರುಪಡಿಸಿದ ಪುರಾವೆಯನ್ನು ಖಂಡಿಸುವಲ್ಲಿ ಯಾವುದೇ ಪುರಾವೆ ಅಥವಾ ಯಾವುದೇ ಸಾಕ್ಷಿಯನ್ನು ಹಾಜರುಪಡಿಸುವುದು.

(4) ಅಪೀಲನ್ನು ವಿಲೇ ಮಾಡುವುದನ್ನು ಸಾಧ್ಯಗೊಳಿಸುವುದಕ್ಕಾಗಿ, ಯಾವುದೇ ದಸ್ತಾವೇಜನ್ನು ಹಾಜರುಪಡಿಸುವುದಕ್ಕೆ ನಿರ್ದೇಶನ ನೀಡುವ, ಅಥವಾ ಯಾವುದೇ ಸಾಕ್ಷಿದಾರನನ್ನು ಪರೀಕ್ಷಿಸುವ, ಅಪೀಲು ಪ್ರಾಧಿಕಾರ ಅಥವಾ ಅಪೀಲು ನ್ಯಾಯಾಧಿಕರಣದ ಅಧಿಕಾರಕ್ಕೆ ಈ ನಿಯಮದಲ್ಲಿರುವ ಯಾವುದೂ ಬಾಧಕ ಉಂಟು ಮಾಡತಕ್ಕದ್ದಲ್ಲ.

113. ಅಪೀಲು ಪ್ರಾಧಿಕಾರ ಅಥವಾ ಅಪೀಲು ನ್ಯಾಯಾಧಿಕರಣದ ಆದೇಶ.– (1) ಅಪೀಲು ಪ್ರಾಧಿಕಾರವು, ಪ್ರಕರಣ 107ರ ಉಪಪ್ರಕರಣ (11)ರ ಅಡಿಯಲ್ಲಿನ ತನ್ನ ಆದೇಶದ ಜೊತೆಯಲ್ಲಿ, **ನಮೂನೆ ಜಿಎಸ್‌ಟಿ ಎಪಿಎಲ್–04**ರಲ್ಲಿ ಆದೇಶದ ಸಾರಾಂಶವನ್ನು, ಸ್ಥಿರೀಕರಿಸಿದ ತಗಾದೆಯ ಅಂತಿಮ ಮೊತ್ತವನ್ನು ಸ್ಪಷ್ಟವಾಗಿ ಸೂಚಿಸಿ ನೀಡತಕ್ಕದ್ದು.

(2) ಕ್ಷೇತ್ರವ್ಯಾಪ್ತಿಯ ಅಧಿಕಾರಿಯು, ಅಪೀಲು ನ್ಯಾಯಾಧಿಕರಣದಿಂದ ಸ್ಥಿರೀಕರಿಸಿದ ತಗಾದೆಯ ಅಂತಿಮ ಮೊತ್ತವನ್ನು ಸ್ಪಷ್ಟವಾಗಿ ಸೂಚಿಸಿ ಒಂದು ವಿವರಪತ್ರವನ್ನು **ನಮೂನೆ ಜಿಎಸ್‌ಟಿ ಎಪಿಎಲ್–04**ರಲ್ಲಿ ನೀಡತಕ್ಕದ್ದು.

114. ಉಚ್ಚ ನ್ಯಾಯಾಲಯಕ್ಕೆ ಅಪೀಲು.– (1) ಪ್ರಕರಣ 117ರ ಉಪಪ್ರಕರಣ (1)ರ ಅಡಿಯಲ್ಲಿ ಉಚ್ಚ ನ್ಯಾಯಾಲಯಕ್ಕೆ ಒಂದು ಅಪೀಲನ್ನು **ನಮೂನೆ ಜಿಎಸ್‌ಟಿ ಎಪಿಎಲ್–08**ರಲ್ಲಿ ಸಲ್ಲಿಸತಕ್ಕದ್ದು.

(2) **ನಮೂನೆ ಜಿಎಸ್‌ಟಿ ಎಪಿಎಲ್–08**ರಲ್ಲಿ ಒಳಗೊಂಡಂತೆ ಅಪೀಲಿನ ಕಾರಣಾಧಾರಗಳು ಮತ್ತು ಪರಿಶೀಲನೆಯ ನಮೂನೆಯನ್ನು ನಿಯಮ 26ರಲ್ಲಿ ನಿರ್ದಿಷ್ಟಪಡಿಸಿರುವ ವಿಧಾನದಲ್ಲಿ ಸಹಿಮಾಡಿರತಕ್ಕದ್ದು.

115. ನ್ಯಾಯಾಲಯದಿಂದ ಸ್ಥಿರೀಕರಿಸಿದ ತಗಾದೆ.– ಕ್ಷೇತ್ರವ್ಯಾಪ್ತಿಯ ಅಧಿಕಾರಿಯು, ಉಚ್ಚ ನ್ಯಾಯಾಲಯ ಅಥವಾ, ಸಂದರ್ಭಾನುಸಾರವಾಗಿ ಸರ್ವೋಚ್ಚ ನ್ಯಾಯಾಲಯದಿಂದ ಸ್ಥಿರೀಕರಿಸಿದ ತಗಾದೆಯ ಅಂತಿಮ ಮೊತ್ತವನ್ನು ಸ್ಪಷ್ಟವಾಗಿ ಸೂಚಿಸಿ ಒಂದು ವಿವರಪತ್ರವನ್ನು **ನಮೂನೆ ಜಿಎಸ್‌ಟಿ ಎಪಿಎಲ್–04**ರಲ್ಲಿ ನೀಡತಕ್ಕದ್ದು.

116. ಒಬ್ಬ ಪ್ರಾಧಿಕೃತ ಪ್ರತಿನಿಧಿಯ ದುರ್ನಡತೆಗಾಗಿ ಅನರ್ಹತೆ.– ಒಬ್ಬ ಪ್ರಾಧಿಕೃತ ಪ್ರತಿನಿಧಿಯು, ಪ್ರಕರಣ 116ರ ಉಪಪ್ರಕರಣ (2)ರ ಖಂಡ (ಬಿ) ಅಥವಾ ಖಂಡ (ಸಿ)ಯಲ್ಲಿ ಉಲ್ಲೇಖಿಸಿರುವವುಗಳನ್ನು ಹೊರತುಪಡಿಸಿದಂತೆ, ಅಧಿನಿಯಮದ ಅಡಿಯಲ್ಲಿನ ಯಾವುದೇ ನಡಾವಳಿಗಳಿಗೆ ಸಂಬಂಧಿಸಿದಂತೆ ದುರ್ನಡತೆಯ ತಪ್ಪಿತಸ್ಥ ಎಂದು, ಆ ವಿಷಯದಲ್ಲಿನ ವಿಚಾರಣೆಯ ತರುವಾಯ ಕಂಡುಬಂದಲ್ಲಿ, ಆಯುಕ್ತರು, ಆತನಿಗೆ ವಯಕ್ತಿಕವಾಗಿ ಆಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶ ನೀಡಿದ ನಂತರ, ಒಬ್ಬ ಪ್ರಾಧಿಕೃತ ಪ್ರತಿನಿಧಿಯಾಗಿ ಹಾಜರಾಗುವಿಕೆಯಿಂದ ಆತನನ್ನು ಅನರ್ಹಗೊಳಿಸಬಹುದು.

ಅಧ್ಯಾಯ –XIV
ಸ್ಥಿತ್ಯಂತರಕಾಲೀನ ಉಪಬಂಧಗಳು

117. ಅಸ್ತಿತ್ವದಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಅಥವಾ ಗೊತ್ತುಪಡಿಸಿದ ದಿನದಂದು ದಾಸ್ತಾನಿನಲ್ಲಿರುವ ಸರಕುಗಳ ಮೇಲಿನ ತೆರಿಗೆ ಅಥವಾ ಸುಂಕದ ಜಮೆಯನ್ನು ಮುಂದಕ್ಕೆ ಸಾಗಿಸಲಾಗಿರುವುದು.– (1) ಪ್ರಕರಣ 140ರ ಅಡಿಯಲ್ಲಿ ಹೂಡುವಳಿ ತೆರಿಗೆ ಜಮೆಯನ್ನು ತೆಗೆದುಕೊಳ್ಳಲು ಹಕ್ಕುಳ್ಳ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಗೊತ್ತುಪಡಿಸಿದ ದಿನದಿಂದ ತೊಂಬತ್ತು ದಿನಗಳ ಒಳಗಾಗಿ, **ನಮೂನೆ ಜಿಎಸಟಿ ಟಿಆರ್‌ಎಎನ್–1**ರಲ್ಲಿ ಒಂದು ಘೋಷಣೆಯನ್ನು, ಯುಕ್ತವಾಗಿ ಸಹಿಮಾಡಿ, ಅದರಲ್ಲಿ ಸದರಿ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಆತನು ಹಕ್ಕುಳ್ಳಂತಹ ಹೂಡುವಳಿ ತೆರಿಗೆ ಜಮೆಯನ್ನು ಪ್ರತ್ಯೇಕವಾಗಿ ನಿರ್ದಿಷ್ಟಪಡಿಸಿ, ವಿದ್ಯುನ್ಮಾನ ರೀತಿಯಲ್ಲಿ ಸಲ್ಲಿಸತಕ್ಕದ್ದು:

ಪರಂತು, ಆಯುಕ್ತರು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ತೊಂಬತ್ತು ದಿನಗಳ ಅವಧಿಯನ್ನು, ತೊಂಬತ್ತು ದಿನಗಳನ್ನು ಮೀರಿಲ್ಲದ ಮುಂದಿನ ಅವಧಿಗೆ ವಿಸ್ತರಿಸಬಹುದು.

(2) ಉಪನಿಯಮ (1)ರ ಅಡಿಯಲ್ಲಿನ ಪ್ರತಿಯೊಂದು ಘೋಷಣೆಯು–

(ಎ) ಪ್ರಕರಣ 140ರ ಉಪಪ್ರಕರಣ (2)ರ ಅಡಿಯಲ್ಲಿನ ಕ್ಲೇಮಿನ ಸಂದರ್ಭದಲ್ಲಿ, ಗೊತ್ತುಪಡಿಸಿದ ದಿನದಂದು ಬಂಡವಾಳ ಸರಕುಗಳ ಪ್ರತಿಯೊಂದು ವಸ್ತುವಿಗೆ ಸಂಬಂಧಿಸಿದಂತೆ, ಕೆಳಕಂಡ ವಿವರಗಳನ್ನು ಪ್ರತ್ಯೇಕವಾಗಿ ನಿರ್ದಿಷ್ಟಪಡಿಸತಕ್ಕದ್ದು–

(i) ಗೊತ್ತುಪಡಿಸಿದ ದಿನದವರೆವಿಗೂ ಪ್ರತಿ ಅಸ್ತಿತ್ವದಲ್ಲಿನ ಕಾನೂನುಗಳ ಅಡಿಯಲ್ಲಿ ಹೂಡುವಳಿ ತೆರಿಗೆ ಜಮೆಯ ರೂಪದಲ್ಲಿ, ಉಪಯೋಗಿಸಿದ ಅಥವಾ ಬಳಕೆ ಮಾಡಿದ ತೆರಿಗೆಯ ಮೊತ್ತ; ಮತ್ತು

(ii) ಗೊತ್ತುಪಡಿಸಿದ ದಿನದವರೆವಿಗೂ ಪ್ರತಿ ಅಸ್ತಿತ್ವದಲ್ಲಿನ ಕಾನೂನುಗಳ ಅಡಿಯಲ್ಲಿ ಹೂಡುವಳಿ ತೆರಿಗೆ ಜಮೆಯ ರೂಪದಲ್ಲಿ, ಉಪಯೋಗಿಸಬೇಕಾಗಿರುವ ಅಥವಾ ಬಳಕೆ ಮಾಡಬೇಕಾಗಿರುವ ತೆರಿಗೆಯ ಮೊತ್ತ;

(ಬಿ) ಪ್ರಕರಣ 140ರ ಉಪಪ್ರಕರಣ (3)ರ ಅಥವಾ ಉಪಪ್ರಕರಣ (4)ರ ಖಂಡ (ಬಿ) ಅಥವಾ ಉಪಪ್ರಕರಣ (6)ರ ಅಥವಾ ಉಪಪ್ರಕರಣ (8)ರ ಅಡಿಯಲ್ಲಿನ ಕ್ಲೇಮಿನ ಸಂದರ್ಭದಲ್ಲಿ, ಗೊತ್ತುಪಡಿಸಿದ ದಿನದಂದು ಹೊಂದಿರುವ ದಾಸ್ತಾನಿನ ವಿವರಗಳನ್ನು ಪ್ರತ್ಯೇಕವಾಗಿ ನಿರ್ದಿಷ್ಟಪಡಿಸತಕ್ಕದ್ದು;

(ಸಿ) ಪ್ರಕರಣ 140ರ ಉಪಪ್ರಕರಣ (5)ರ ಅಡಿಯಲ್ಲಿನ ಕ್ಲೇಮಿನ ಸಂದರ್ಭದಲ್ಲಿ, ಕೆಳಕಂಡ ವಿವರಗಳನ್ನು ನಿರ್ದಿಷ್ಟಪಡಿಸತಕ್ಕದ್ದು–

(i) ಪೂರೈಕೆದಾರನ ಹೆಸರು, ಪೂರೈಕೆದಾರನಿಂದ ನೀಡಿದ ಬೆಲೆಪಟ್ಟಿಯ ಅಥವಾ ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಅದರ ಆಧಾರದ ಮೇಲೆ ಹೂಡುವಳಿ ತೆರಿಗೆಯ ಜಮೆಯನ್ನು ಅನುಮತಿಸಬಹುದಾದ ಯಾವುದೇ ದಸ್ತಾವೇಜಿನ ಕ್ರಮ ಸಂಖ್ಯೆ ಅಥವಾ ನೀಡಿಕೆ ದಿನಾಂಕ;

(ii) ಸರಕು ಅಥವಾ ಸೇವೆಗಳ ವಿವರಣೆ ಮತ್ತು ಮೌಲ್ಯ;

(iii) ಸರಕುಗಳ ಸಂದರ್ಭದಲ್ಲಿ ಪ್ರಮಾಣ ಮತ್ತು ಅವುಗಳ ಘಟಕ ಅಥವಾ ಘಟಕ ಪ್ರಮಾಣದ ಕೋಡ್;

(iv) ಅರ್ಹದಾಯಕ ತೆರಿಗೆಗಳ ಮತ್ತು ಸುಂಕಗಳ ಅಥವಾ ಸಂದರ್ಭಾನುಸಾರವಾಗಿ ಸರಕು ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ಪೂರೈಕೆದಾರನಿಂದ ವಿಧಿಸಿದ ಮೌಲ್ಯವರ್ಧಿತ ತೆರಿಗೆಯ ಮೊತ್ತ; ಮತ್ತು

(v) ಸ್ವೀಕರಿಸುವವನ ಲೆಕ್ಕಪತ್ರ ಪುಸ್ತಕಗಳಲ್ಲಿ ಸರಕು ಅಥವಾ ಸೇವೆಗಳ ಸ್ವೀಕೃತಿಯು ನಮೂದಾದ ದಿನಾಂಕ.

(3) **ನಮೂನೆ ಜಿಎಸಟಿ ಟಿಆರ್‌ಎಎನ್–1**ರಲ್ಲಿನ ಅರ್ಜಿಯಲ್ಲಿ ನಿರ್ದಿಷ್ಟಪಡಿಸಿದ ಜಮೆಯ ಮೊತ್ತವು, ಸಾಮಾನ್ಯ ಪೋರ್ಟಲ್‌ನಲ್ಲಿ **ನಮೂನೆ ಜಿಎಸಟಿ ಪಿಎಂಟಿ–2**ರಲ್ಲಿ ನಿರ್ವಹಿಸಲಾದ ಅರ್ಜಿದಾರನ ವಿದ್ಯುನ್ಮಾನ ಜಮೆ ಖಾತೆಗೆ ಜಮೆಗೊಳ್ಳತಕ್ಕದ್ದು.

	ಪ್ರಾರ್ಥನೆ ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಾಜ್ಞ ಅಪೀಲು ಪ್ರಾಧಿಕಾರವು <ಸ್ಥಳ>ಗೌರವಪೂರ್ವಕವಾಗಿ ಈ ಕೆಳಕಂಡವುಗಳಿಗಾಗಿ ಪ್ರಾರ್ಥಿಸುತ್ತದೆ. ಅ) ಮೇಲೆ ಪ್ರಾರ್ಥಿಸಿದಂತೆ, ಪೂರ್ವಭಾವಿ ನಿರ್ಣಯ ಪ್ರಾಧಿಕಾರದಿಂದ ಹೊರಡಿಸಿದ ಆಕ್ಷೇಪಿತ ಪೂರ್ವಭಾವಿ ನಿರ್ಣಯವನ್ನು ರದ್ದುಗೊಳಿಸುವುದು/ಮಾರ್ಪಾಡು ಮಾಡುವುದು; ಆ) ವೈಯಕ್ತಿಕ ಅಹವಾಲನ್ನು ಮಂಜೂರು ಮಾಡುವುದು; ಮತ್ತು ಇ) ಸೂಕ್ತ ಎಂದು ಭಾವಿಸಿದಂತೆ ಮತ್ತು ಸಂಗತಿಗಳಲ್ಲಿನ ಸಮರ್ಪಕತೆ ಹಾಗೂ ಪ್ರಕರಣಗಳ ಸನ್ನಿವೇಶದಂತೆ ಅಂಥ ಯಾವುದೇ ಮುಂದುವರೆದ ಆದೇಶ (ಗಳು) ವನ್ನು ಹೊರಡಿಸುವುದು. ಮತ್ತು ಈ ದಯಾಪರತೆಯ ಕ್ರಿಯೆಗೆ, ಅಪೀಲುದಾರನು, ಪ್ರತಿಯೊಂದು ಪ್ರಾರ್ಥನೆಗೆ ಕರ್ತವ್ಯಬದ್ದನಾಗಿರತಕ್ಕದ್ದು.	

ಪರಿಶೀಲನೆ

_____ಇವರ ಮಗ/ಮಗಳು/ಹೆಂಡತಿ_____(ದಪ್ಪ ಅಕ್ಷರಗಳಲ್ಲಿ ಪೂರ್ಣ ಹೆಸರು), ಆದ ನಾನು ಈ ಮೂಲಕ ವಿದ್ಯುಕ್ತವಾಗಿ ಘೋಷಿಸುವುದೇನೆಂದರೆ, ಮೇಲೆ ಮತ್ತು ಅನುಬಂಧದಲ್ಲಿ(ಗಳು), ದಾಸ್ತಾವೇಜುಗಳನ್ನು ಒಳಗೊಂಡಂತೆ ನಿರೂಪಿಸಿರುವುದು, ನನ್ನ ತಿಳುವಳಿಕೆಗೆ ಮತ್ತು ನಂಬಿಕೆಯ ಪ್ರಕಾರ ಸರಿಯಾಗಿರುತ್ತದೆ. ನಾನು ಈ ಅರ್ಜಿಯನ್ನು ನನ್ನ _____(ಹುದ್ದೆ) ಸಾಮರ್ಥ್ಯದಲ್ಲಿ ಸಲ್ಲಿಸಿರುತ್ತೇನೆ ಮತ್ತು ನಾನು ಈ ಅರ್ಜಿಯನ್ನು ಸಲ್ಲಿಸಲು ಹಾಗೂ ಪರಿಶೀಲಿಸಲು ಸಕ್ಷಮನಿರುತ್ತೇನೆ.

ಸ್ಥಳ :
ದಿನಾಂಕ :

ಸಹಿ
ಅರ್ಜಿದಾರರ ಹೆಸರು/ಪ್ರಾಧಿಕೃತ ಪ್ರತಿನಿಧಿಯ ಸಹಿ
ಪದನಾಮ/ ಸ್ಥಾನ

ನಮೂನೆ ಜಿಎಸ್‌ಟಿ ಎಪಿಎಲ್–01

[ನಿಯಮ 108(1) ನೋಡಿ]

ಅಪೀಲು ಪ್ರಾಧಿಕಾರಕ್ಕೆ ಅಪೀಲು

1. ಜಿ.ಎಸ್.ಟಿ.ಐ.ಎನ್/ತಾತ್ಕಾಲಿಕ ಐಡಿ/ ಯುಐಎನ್ –
2. ಅಪೀಲುದಾರನ ಕಾನೂನಾತ್ಮಕ ಹೆಸರು–
3. ವ್ಯಾಪಾರದ ಹೆಸರು ಯವುದಾದರು ಇದ್ದರೆ–
4. ವಿಳಾಸ–
5. ಆದೇಶ ಸಂಖ್ಯೆ– ಆದೇಶ ದಿನಾಂಕ–
6. ಯಾವ ಅಧಿಕಾರಿಯ ಆದೇಶದ ವಿರುದ್ಧ ಅಪೀಲು ಮಾಡಲಾಗಿದೆಯೋ ಅಂತಹ ಅಧಿಕಾರಿಯ ಪದನಾಮ ಮತ್ತು ವಿಳಾಸ–
7. ಅಪೀಲಿಗೆ ಕಾರಣವಾದ ಆದೇಶ ಜಾರಿಯಾದ ದಿನಾಂಕ–
8. ಪ್ರಾಧಿಕೃತ ಪ್ರತಿನಿಧಿಯ ಹೆಸರು–
9. ವ್ಯಾಜ್ಯದಲ್ಲಿರುವ ಪ್ರಕರಣದ ವಿವರಗಳು–
   i. ವ್ಯಾಜ್ಯದಲ್ಲಿರುವ ಪ್ರಕರಣದ ಸಂಕ್ಷಿಪ್ತ ವಿವಾದಾಂಶ–
   ii. ವ್ಯಾಜ್ಯದಲ್ಲಿರುವಸರಕುಗಳ/ಸೇವೆಗಳ ವಿವರಣೆಮತ್ತು ವರ್ಗೀಕರಣಗಳು
   iii. ವ್ಯಾಜ್ಯದ ಅವಧಿ–
   iv. ವ್ಯಾಜ್ಯದಅಡಿಯಲ್ಲಿರುವ ಮೊತ್ತ:

ವಿವರಣೆ	ಕೇಂದ್ರಿಯ ತೆರಿಗೆ	ರಾಜ್ಯ/ಕೇಂ.ಪ್ರ ತೆರಿಗೆ	ಏಕೀಕೃತ ತೆರಿಗೆ	ಉಪಕರ
ಎ) ತೆರಿಗೆ/ ಉಪಕರ				
ಬಿ) ಬಡ್ಡಿ				
ಸಿ) ದಂಡ				
ಡಿ) ಶುಲ್ಕ				
ಇ) ಇತರೇ ವೆಚ್ಚಗಳು				

   v. ವಶಕ್ಕೆ ತೆಗೆದುಕೊಂಡ ಸರಕುಗಳ ಮಾರುಕಟ್ಟೆ ಮೌಲ್ಯ

10. ಅಪೀಲುದಾರರ ವೈಯಕ್ತಿಕ ಅಹವಾಲಿಗಾಗಿ ಇಚ್ಛಿಸುತಾರೆಯೇ ?– ಹೌದು/ಇಲ್ಲ :

11. ಸಂಗತಿಗಳ ನಿರೂಪಣೆ :–

12. ಅಪೀಲಿನ ಕಾರಣಾಧಾರಗಳು:–

13. ಪ್ರಾರ್ಥನೆ :–

14. ಸೃಷ್ಟಿಸಿದ, ಒಪ್ಪಿದ ಹಾಗೂ ವ್ಯಾಜ್ಯದಲ್ಲಿರುವತಗಾದೆ ಮೊತ್ತ :–

	ವಿವರಗಳು		ಕೇಂದ್ರ ತೆರಿಗೆ	ರಾಜ್ಯ/ಕೇಂ.ಪ್ರ ತೆರಿಗೆ	ಏಕೀಕೃತ ತೆರಿಗೆ	ಉಪಕರ	ಒಟ್ಟು ಮೊತ್ತ	
ತಗಾದೆ/ ಮರು ಪಾವತಿ ವಿವರಗಳು	ಸೃಷ್ಟಿಸಿದ ತಗಾದೆಯ ಮೊತ್ತ (ಎ)	ಎ) ತೆರಿಗೆ/ ಉಪಕರ					<ಒಟ್ಟು>	<ಒಟ್ಟು>
		ಬಿ) ಬಡ್ಡಿ					<ಒಟ್ಟು>	
		ಸಿ) ದಂಡ					<ಒಟ್ಟು>	
		ಡಿ) ಶುಲ್ಕಗಳು					<ಒಟ್ಟು>	
		ಇ) ಇತರೇ ವೆಚ್ಚಗಳು					<ಒಟ್ಟು>	
	ಒಪ್ಪಿಕೊಂಡ	ಎ) ತೆರಿಗೆ/ ಉಪಕರ					<ಒಟ್ಟು>	<ಒಟ್ಟು>

	ತಗಾದೆಯ ಮೊತ್ತ (ಬಿ)	ಬಿ) ಬಡ್ಡಿ					<ಒಟ್ಟು>	
		ಸಿ) ದಂಡ					<ಒಟ್ಟು>	
		ಡಿ) ಶುಲ್ಕಗಳು					<ಒಟ್ಟು>	
		ಇ) ಇತರೇ ವೆಚ್ಚಗಳು					<ಒಟ್ಟು>	
	ವ್ಯಾಜ್ಯದ ತಗಾದೆ ಮೊತ್ತ (ಸಿ)	ಎ) ತೆರಿಗೆ/ ಉಪಕರ					<ಒಟ್ಟು>	<ಒಟ್ಟು>
		ಬಿ) ಬಡ್ಡಿ					<ಒಟ್ಟು>	
		ಸಿ) ದಂಡ					<ಒಟ್ಟು>	
		ಡಿ) ಶುಲ್ಕಗಳು					<ಒಟ್ಟು>	
		ಇ) ಇತರೇ ವೆಚ್ಚಗಳು					<ಒಟ್ಟು>	

15. ಒಪ್ಪಿಕೊಂಡ ಮೊತ್ತದ ಮತ್ತು ಪೂರ್ವ ಠೇವಣಿಯ ಸಂದಾಯದ ವಿವರಗಳು :–

(ಎ) ಸಂದಾಯ ಮಾಡಬೇಕಾದ ಮೊತ್ತದ ವಿವರಗಳು:

	ವಿವರಗಳು		ಕೇಂದ್ರ ತೆರಿಗೆ	ರಾಜ್ಯ/ಕೇಂ.ಪ್ರ ತೆರಿಗೆ	ಏಕೀಕೃತ ತೆರಿಗೆ	ಉಪಕರ	ಒಟ್ಟು ಮೊತ್ತ	
	ಎ) ಒಪ್ಪಿಕೊಂಡ ಮೊತ್ತ	ಎ) ತೆರಿಗೆ/ ಉಪಕರ					<ಒಟ್ಟು>	
		ಬಿ) ಬಡ್ಡಿ					<ಒಟ್ಟು>	
		ಸಿ) ದಂಡ					<ಒಟ್ಟು>	<ಒಟ್ಟು>
		ಡಿ) ಶುಲ್ಕಗಳು					<ಒಟ್ಟು>	
		ಇ) ಇತರೇ ವೆಚ್ಚಗಳು					<ಒಟ್ಟು>	
	ಬಿ) ಪೂರ್ವ ಠೇವಣಿ (ವ್ಯಾಜ್ಯದ ತೆರಿಗೆಯ ಶೇಕಡ 10%)	ಎ) ತೆರಿಗೆ / ಉಪಕರ					<ಒಟ್ಟು>	

(ಬಿ) ಒಪ್ಪಿಕೊಂಡ ಮೊತ್ತ ಮತ್ತು ಪೂರ್ವ ಠೇವಣಿ ಸಂದಾಯದ ವಿವರಗಳು (ವ್ಯಾಜ್ಯದ ತೆರಿಗೆ ಮತ್ತು ಉಪಕರದ ಪೂರ್ವ ಠೇವಣಿಯ10%)

ಕ್ರ.ಸಂ.	ವಿವರಣೆ	ಸಂದಾಯ ಮಾಡಬೇಕಾದ ತೆರಿಗೆ	ನಗದು/ಜಮೆ ಮೂಲಕ ಸಂದಾಯ ಮಾಡಿದೆ	ಖರ್ಚು ನಮೂದು ಸಂಖ್ಯೆ	ಸಂದಾಯ ಮಾಡಿದ ತೆರಿಗೆ ಮೊತ್ತ			
					ಕೇಂದ್ರ ತೆರಿಗೆ	ರಾಜ್ಯ/ಕೇಂ.ಪ್ರ ತೆರಿಗೆ	ಏಕೀಕೃತ ತೆರಿಗೆ	ಉಪಕರ
1	**2**	**3**	**4**	**5**	**6**	**7**	**8**	**9**
1	ಏಕೀಕೃತ ತೆರಿಗೆ		ನಗದು ಖಾತೆ					
			ಜಮೆ ಖಾತೆ					
2	ಕೇಂದ್ರ ತೆರಿಗೆ		ನಗದು ಖಾತೆ					
			ಜಮೆ ಖಾತೆ					
3	ರಾಜ್ಯ/ಕೇಂ.ಪ್ರ ತೆರಿಗೆ		ನಗದು ಖಾತೆ					
			ಜಮೆ ಖಾತೆ					
4	ಉಪಕರ		ನಗದು ಖಾತೆ					
			ಜಮೆ ಖಾತೆ					

(ಸಿ) ಸಂದಾಯ ಮಾಡಬೇಕಾದ ಮತ್ತು ಸಂದಾಯ ಮಾಡಿದ ಬಡ್ಡಿ, ದಂಡ, ವಿಳಂಬ ಶುಲ್ಕ ಮತ್ತು ಯಾವುದೇ ಇತರ ಮೊತ್ತ

ಕ್ರ.ಸಂ.	ವಿವರಣೆ	ಸಂದಾಯ ಮಾಡಬೇಕಾದ ಮೊತ್ತ				ಖರ್ಚು ನಮೂದು ಸಂಖ್ಯೆ	ಸಂದಾಯ ಮಾಡಿದಮೊತ್ತ			
		ಏಕೀಕೃತ ತೆರಿಗೆ	ಕೇಂದ್ರ ತೆರಿಗೆ	ರಾಜ್ಯ/ ಕೇಂ.ಪ್ರ ತೆರಿಗೆ	ಉಪಕರ		ಕೇಂದ್ರ ತೆರಿಗೆ	ರಾಜ್ಯ/ ಕೇಂ.ಪ್ರ ತೆರಿಗೆ	ಏಕೀಕೃತ ತೆರಿಗೆ	ಉಪಕರ
1	2	3	4	5	6	7	8	9	10	11
1	ಬಡ್ಡಿ									
2	ದಂಡ									
3	ವಿಳಂಬ ಶುಲ್ಕ									
4	ಇತರೆ (ನಿರ್ದಿಷ್ಟ ಪಡಿಸಿ)									

16. ನಿಯಮಿಸಲಾದ ಅವಧಿಯ ನಂತರ ಅಪೀಲನ್ನು ಸಲ್ಲಿಸಲಾಗಿದೆಯೇ – ಹೌದು / ಇಲ್ಲ.

17. ಹೌದಾದರೇ, ಬಾಬ್ತು 17ರಲ್ಲಿ

(ಅ) ವಿಳಂಬದ ಅವಧಿ –

(ಬ) ವಿಳಂಬಕ್ಕೆ ಕಾರಣಗಳು –

ಪರಿಶೀಲನೆ

ಮೇಲೆ ನೀಡಲಾದ ಮಾಹಿತಿಯು ನನ್ನ ತಿಳುವಳಿಕೆಗೆ ಮತ್ತು ನಂಬಿಕೆಯ ಪ್ರಕಾರ ಸತ್ಯವಾಗಿರುತ್ತದೆ ಮತ್ತು ಸರಿಯಾಗಿರುತ್ತದೆ ಹಾಗೂ ಯಾವುದೇ ಮಾಹಿತಿಯನ್ನು ಇದರಿಂದ ಮರೆಮಾಚಿರುವುದಿಲ್ಲ ಎಂದು ನಾನು ----------ಈ ಮೂಲಕ ವಿದ್ಯುಕ್ತವಾಗಿ ಪ್ರಮಾಣೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

ಸ್ಥಳ: <ಸಹಿ>

ದಿನಾಂಕ: ಅರ್ಜಿದಾರರ ಹೆಸರು

ನಮೂನೆ ಜಿಎಸ್‌ಟಿ. ಎಪಿಎಲ್‌–02

[ನಿಯಮ 108(3) ನೋಡಿ]

ಅಪೀಲು ಸಲ್ಲಿಸಿರುವುದಕ್ಕೆ ಸ್ವೀಕೃತಿ

<ಅರ್ಜಿದಾರನ ಹೆಸರು><ಜಿಎಸ್‌ಟಿಐಎನ್‌/ತಾತ್ಕಾಲಿಕ ಐಡಿ/ಯುಐಎನ್‌/ದಿನಾಂಕ ಸಹಿತ ಉಲ್ಲೇಖ ಸಂಖ್ಯೆ >

<ಅರ್ಜಿ ಉಲ್ಲೇಖ ಸಂಖ್ಯೆ>ಗೆ ಪ್ರತಿಯಾಗಿ ನಿಮ್ಮ ಅಪೀಲು ಯಶಸ್ವಿಯಾಗಿ ಸಲ್ಲಿಕೆಯಾಗಿದೆ.

1. ಉಲ್ಲೇಖ ಸಂಖ್ಯೆ–
2. ಸಲ್ಲಿಕೆ ದಿನಾಂಕ–
3. ಸಲ್ಲಿಕೆ ಸಮಯ–
4. ಸಲ್ಲಿಕೆ ಸ್ಥಳ–
5. ಅಪೀಲು ಸಲ್ಲಿಸುವ ವ್ಯಕ್ತಿಯ ಹೆಸರು–
6. ಪೂರ್ವ ಠೇವಣಿ ಮೊತ್ತ–
7. ಅಪೀಲು ಸ್ವೀಕೃತಿ/ತಿರಸ್ಕೃತಗೊಂಡ ದಿನಾಂಕ–

8. ಹಾಜರಾದ ದಿನಾಂಕ– ದಿನಾಂಕ: ಸಮಯ:
9. ನ್ಯಾಯಾಲಯ ಸಂಖ್ಯೆ/ನ್ಯಾಯಪೀಠ ನ್ಯಾಯಾಲಯ/ನ್ಯಾಯಪೀಠ:

ಸ್ಥಳ:
ದಿನಾಂಕ:

<ಸಹಿ>
ಹೆಸರು:
ಹುದ್ದೆ:

ಅಪೀಲು ಪ್ರಾಧಿಕಾರ/ಅಪೀಲು ನ್ಯಾಯಾಧೀಕರಣ/ಆಯುಕ್ತರು/
ಅಪರ ಅಥವಾ ಜಂಟಿ ಆಯುಕ್ತರ ಪರವಾಗಿ

ನಮೂನೆ ಜಿಎಸ್‌ಟಿ. ಎಪಿಎಲ್‌–03

[ನಿಯಮ 109(1) ನೋಡಿ]

ಪ್ರಕರಣ 107ರ ಉಪಪ್ರಕರಣ (2)ರ ಅಡಿಯಲ್ಲಿ ಅಪೀಲು ಪ್ರಾಧಿಕಾರಕ್ಕೆ ಅರ್ಜಿ

1. ಅಪೀಲುದಾರರ ಹೆಸರು ಮತ್ತು ಹುದ್ದೆ ಹೆಸರು–
   ಹುದ್ದೆ–
   ಕ್ಷೇತ್ರವ್ಯಾಪ್ತಿ–
   ರಾಜ್ಯ/ಕೇಂದ್ರ–
   ರಾಜ್ಯದ ಹೆಸರು–

2. ಜಿ.ಎಸ್.ಟಿ.ಐ.ಎನ್/ತಾತ್ಕಲಿಕ ಐಡಿ/ ಯುಐಎನ್
3. ಆದೇಶ ಸಂಖ್ಯೆ. ದಿನಾಂಕ–
4. ಯಾವ ಅಧಿಕಾರಿಯ ಆದೇಶದ ವಿರುದ್ಧ ಅಪೀಲು ಮಾಡಲಾಗಿದೆಯೋ ಅಂತಹ ಅಧಿಕಾರಿ ಪದನಾಮ ಮತ್ತು ವಿಳಾಸ
5. ಯಾವ ಆದೇಶದ ವಿರುದ್ದವಾಗಿ ಅಪೀಲು ಮಾಡಲಾಗಿದೆಯೋ ಅಂತಹ ಆದೇಶ ಜಾರಿಯಾದ ದಿನಾಂಕ
6. ವ್ಯಾಜ್ಯದಲ್ಲಿರುವ ಪ್ರಕರಣದ ವಿವರಗಳು–
   i. ವ್ಯಾಜ್ಯದಲ್ಲಿರುವ ಪ್ರಕರಣದ ಸಂಕ್ಷಿಪ್ತ ವಿವಾದಾಂಶ–
   ii. ವ್ಯಾಜ್ಯದಲ್ಲಿರುವ ಸರಕುಗಳ/ಸೇವೆಗಳ ವಿವರಣೆಮತ್ತು ವರ್ಗೀಕರಣಗಳು
   iii. ವ್ಯಾಜ್ಯದ ಅವಧಿ–
   iv. ವ್ಯಾಜ್ಯದಅಡಿಯಲ್ಲಿರುವ ಮೊತ್ತ:

ವಿವರಣೆ	ಕೇಂದ್ರ ತೆರಿಗೆ	ರಾಜ್ಯ/ಕೇಂ.ಪ್ರ ತೆರಿಗೆ	ಏಕೀಕೃತ ತೆರಿಗೆ	ಉಪಕರ
ಎ) ತೆರಿಗೆ/ಉಪಕರ				
ಬಿ) ಬಡ್ಡಿ				
ಸಿ) ದಂಡ				
ಡಿ) ಶುಲ್ಕಗಳು				
ಇ) ಇತರೇ ವೆಚ್ಚಗಳು				

7. ಸಂಗತಿಗಳ ನಿರೂಪಣೆ :–
8. ಅಪೀಲಿನ ಕಾರಣಾಧಾರಗಳು:–
9. ಪ್ರಾರ್ಥನೆ :–
10. ವ್ಯಾಜ್ಯದಲ್ಲಿರುವ ತಗಾದೆ ಮೊತ್ತ, ಯಾವುದಾದರೂ ಇದ್ದಲ್ಲಿ

	ವಿವರಗಳು		ಕೇಂದ್ರ ತೆರಿಗೆ	ರಾಜ್ಯ/ ಕೇಂ.ಪ್ರ ತೆರಿಗೆ	ಏಕೀಕೃತ ತೆರಿಗೆ	ಉಪಕರ	ಒಟ್ಟು ಮೊತ್ತ	
ತಗಾದೆ/ ಮರುಪಾವತಿಯ ವಿವರಗಳು ಯಾವುದಾದರು ಇದ್ದಲ್ಲಿ	ಸೃಷ್ಟಿಸಿದ ತಗಾದೆ ಮೊತ್ತ ಯಾವುದಾದರೂ ಇದ್ದಲ್ಲಿ (ಎ)	ಎ) ತೆರಿಗೆ/ ಉಪಕರ					<ಒಟ್ಟು>	<ಒಟ್ಟು>
		ಬಿ) ಬಡ್ಡಿ					<ಒಟ್ಟು>	
		ಸಿ) ದಂಡ					<ಒಟ್ಟು>	
		ಡಿ) ಶುಲ್ಕಗಳು					<ಒಟ್ಟು>	
		ಇ) ಇತರೇ ವೆಚ್ಚಗಳು					<ಒಟ್ಟು>	
	ವ್ಯಾಜ್ಯದ ಅಡಿಯಲ್ಲಿರುವ ಮೊತ್ತ (ಬಿ)	ಎ) ತೆರಿಗೆ/ಉಪಕರ					<ಒಟ್ಟು>	<ಒಟ್ಟು>
		ಬಿ) ಬಡ್ಡಿ					<ಒಟ್ಟು>	
		ಸಿ) ದಂಡ					<ಒಟ್ಟು>	

		ಡಿ) ಶುಲ್ಕಗಳು					<ಒಟ್ಟು>	
		ಇ) ಇತರೇ ವೆಚ್ಚಗಳು					<ಒಟ್ಟು>	

ಸ್ಥಳ:
ದಿನಾಂಕ:

<**ಸಹಿ**>
ಅರ್ಜಿದಾರ ಅಧಿಕಾರಿಯ ಹೆಸರು:
ಪದನಾಮ:
ಕ್ಷೇತ್ರವ್ಯಾಪ್ತಿ:

ನಮೂನೆ ಜಿಎಸ್‌ಟಿ. ಎಪಿಎಲ್–04

(ನಿಯಮ 113(1) & 115 ನೋಡಿ)

ಅಪೀಲುಪ್ರಾಧಿಕಾರ, ನ್ಯಾಯಾಧಿಕರಣ ಅಥವಾ ನ್ಯಾಯಾಲಯದ ಆದೇಶದ ನೀಡಿಕೆಯ ನಂತರದ ತಗಾದೆಯ ಸಾರಾಂಶ

ಕ್ರ.ಸಂ	**ಆದೇಶ ಸಂಖ್ಯೆ:**		**ಆದೇಶ ದಿನಾಂಕ:**
1	ಜಿಎಸ್‌ಟಿಐನ್/ತಾತ್ಕಾಲಿಕ ಐಡಿ /ಯುಐನ್		
2	ಅಪೀಲುದಾರರ ಹೆಸರು		
3	ಅಪೀಲುದಾರರವಿಳಾಸ		
4	ಯಾವ ಆದೇಶದ ವಿರುದ್ದ ಮಾಡಿದ ಅಪೀಲು		ಸಂಖ್ಯೆ ದಿನಾಂಕ
5	ಅಪೀಲುಸಂಖ್ಯೆ :	ದಿನಾಂಕ:	
6	ವೈಯಕ್ತಿಕ ಅಹವಾಲು		
7	ಆದೇಶಸಂಕ್ಷಿಪ್ತದಲ್ಲಿ–		
8	ಆದೇಶದ ಸ್ಥಿತಿಗತಿ	ಸ್ಥಿರೀಕರಿಸಿದ/ ಮಾರ್ಪಾಡಿಸಿದ/ ಮಾಡಿದ/ ತಿರಸ್ಕರಿಸಿದ	
9	ಸ್ಥಿರೀಕರಿಸಿದ ತಗಾದೆ ಮೊತ್ತ		

ವಿವರಗಳು	ಕೇಂದ್ರ ತೆರಿಗೆ		ರಾಜ್ಯ/ ಕೇಂ.ಪ್ರ.ತೆರಿಗೆ		ಏಕೀಕೃತ ತೆರಿಗೆ		ಉಪಕರ		ಒಟ್ಟು	
	ವ್ಯಾಜ್ಯದ ಮೊತ್ತ	ನಿರ್ಧರಿಸಿದ ಮೊತ್ತ	ವ್ಯಾಜ್ಯದ ಮೊತ್ತ	ನಿರ್ಧರಿಸಿದ ಮೊತ್ತ	ವ್ಯಾಜ್ಯದ ಮೊತ್ತ	ನಿರ್ಧರಿಸಿದ ಮೊತ್ತ	ವ್ಯಾಜ್ಯದ ಮೊತ್ತ	ನಿರ್ಧರಿಸಿದ ಮೊತ್ತ	ವ್ಯಾಜ್ಯದ ಮೊತ್ತ	ನಿರ್ಧರಿಸಿದ ಮೊತ್ತ
1	**2**	**3**	**4**	**5**	**6**	**7**	**8**	**9**	**10**	**11**
(ಅ)ತೆರಿಗೆ										
(ಆ) ಬಡ್ಡಿ										
(ಇ)ದಂಡ										
(ಈ) ಶುಲ್ಕ										
(ಉ) ಇತರೆ										
(ಊ) ಮರುಪಾವತಿ										

ಸ್ಥಳ :
ದಿನಾಂಕ:

ಸಹಿ
<ಅಪೀಲು ಪ್ರಾಧಿಕಾರದ ಹೆಸರು>
ಪದನಾಮ:
ಕ್ಷೇತ್ರ ವ್ಯಾಪ್ತಿ

ನಮೂನೆ ಜಿಎಸ್‌ಟಿ ಎಪಿಎಲ್‌–05

[ನಿಯಮ 110(1) ನೋಡಿ]

ಅಪೀಲು ನ್ಯಾಯಾಧಿಕರಣಕ್ಕೆ ಅಪೀಲು

1. ಜಿ.ಎಸ್.ಟಿ.ಐ.ಎನ್/ತಾತ್ಕಾಲಿಕ ಐಡಿ/ ಯುಐಎನ್ –
2. ಅಪೀಲುದಾರನ ಹೆಸರು–
3. ಅಪೀಲುದಾರನ ವಿಳಾಸ–
4. ಆದೇಶದ ಸಂಖ್ಯೆ– ಆದೇಶದ ದಿನಾಂಕ–
5. ಯಾವ ಆದೇಶದ ವಿರುದ್ಧ ಅಪೀಲುಹೂಡಲಾಗಿದೆಯೋ ಆ ಆದೇಶವನ್ನು ಹೊರಡಿಸಿದ ಅಧಿಕಾರಿಯ ಪದನಾಮ ಮತ್ತು ವಿಳಾಸ–
6. ಅಪೀಲಿಗೆ ಕಾರಣವಾದ ಆದೇಶ ಜಾರಿಯಾದ ದಿನಾಂಕ–
7. ಪ್ರಾಧಿಕೃತ ಪ್ರತಿನಿಧಿಯ ಹೆಸರು–
8. ವ್ಯಾಜ್ಯದಲ್ಲಿರುವ ಪ್ರಕರಣದ ವಿವರಗಳು–
   i. ವ್ಯಾಜ್ಯದಲ್ಲಿರುವ ಪ್ರಕರಣದ ಸಂಕ್ಷಿಪ್ತ ವಿವಾದಾಂಶ–
   ii. ವ್ಯಾಜ್ಯದಲ್ಲಿರುವ ಸರಕುಗಳ/ಸೇವೆಗಳ ವಿವರಣೆಮತ್ತು ವರ್ಗೀಕರಣಗಳು
   iii. ವ್ಯಾಜ್ಯದ ಅವಧಿ–
   iv. ವ್ಯಾಜ್ಯದಅಡಿಯಲ್ಲಿರುವ ಮೊತ್ತ:

ವಿವರಣೆ	ಕೇಂದ್ರ ತೆರಿಗೆ	ರಾಜ್ಯ/ಕೇಂ.ಪ್ರ ತೆರಿಗೆ	ಏಕೀಕೃತ ತೆರಿಗೆ	ಉಪಕರ
ಎ) ತೆರಿಗೆ/ ಉಪಕರ				
ಬಿ) ಬಡ್ಡಿ				
ಸಿ) ದಂಡ				
ಡಿ) ಶುಲ್ಕ				
ಇ) ಇತರೇ ವೆಚ್ಚಗಳು				

   v. ವಶಕ್ಕೆ ತೆಗೆದುಕೊಂಡ ಸರಕುಗಳ ಮಾರುಕಟ್ಟೆ ಮೌಲ್ಯ

	ವಿವರಗಳು		ಕೇಂದ್ರ ತೆರಿಗೆ	ರಾಜ್ಯ/ ಕೇಂ.ಪ್ರ ತೆರಿಗೆ	ಏಕೀಕೃತ ತೆರಿಗೆ	ಉಪಕರ	ಒಟ್ಟು ಮೊತ್ತ	
ತಗಾದೆಯ ವಿವರಗಳು	ತಗಾದೆ ಮಾಡಿದ/ತಿರಸ್ಕರಿಸಿದ ಮೊತ್ತ ಯಾವುದಾದರು ಇದ್ದಲ್ಲಿ ಆ ಮೊತ್ತ (ಎ)	ಎ) ತೆರಿಗೆ/ ಉಪಕರ					<ಒಟ್ಟು>	<ಒಟ್ಟು>
		ಬಿ) ಬಡ್ಡಿ					<ಒಟ್ಟು>	
		ಸಿ) ದಂಡ					<ಒಟ್ಟು>	
		ಡಿ) ಶುಲ್ಕಗಳು					<ಒಟ್ಟು>	
		ಇ) ಇತರೇ ವೆಚ್ಚಗಳು					<ಒಟ್ಟು>	
	ವ್ಯಾಜ್ಯದ ಅಡಿಯಲ್ಲಿರುವ ಮೊತ್ತ (ಬಿ)	ಎ) ತೆರಿಗೆ/ ಉಪಕರ					<ಒಟ್ಟು>	<ಒಟ್ಟು>
		ಬಿ) ಬಡ್ಡಿ					<ಒಟ್ಟು>	
		ಸಿ) ದಂಡ					<ಒಟ್ಟು>	
		ಡಿ) ಶುಲ್ಕಗಳು					<ಒಟ್ಟು>	
		ಇ) ಇತರೇ ವೆಚ್ಚಗಳು					<ಒಟ್ಟು>	
	ಒಪ್ಪಿಕೊಂಡ ಮೊತ್ತ(ಸಿ)	ಎ) ತೆರಿಗೆ/ ಉಪಕರ					<ಒಟ್ಟು>	<ಒಟ್ಟು>

		ಬಿ) ಬಡ್ಡಿ					<ಒಟ್ಟು>	
		ಸಿ) ದಂಡ					<ಒಟ್ಟು>	
		ಡಿ) ಶುಲ್ಕಗಳು					<ಒಟ್ಟು>	
		ಇ) ಇತರೇ ವೆಚ್ಚಗಳು					<ಒಟ್ಟು>	

9. ಅಪೀಲುದಾರರ ವೈಯಕ್ತಿಕ ಅಹವಾಲಿಗಾಗಿ ಇಚ್ಛಿಸುತಾರೆಯೇ ?– ಹೌದು/ಇಲ್ಲ :
10. ಸಂಗತಿಗಳ ನಿರೂಪಣೆ :–
11. ಅಪೀಲಿನ ಕಾರಣಾಧಾರಗಳು:–
12. ಪ್ರಾರ್ಥನೆ :–
13. ಸೃಜನೆಯಾದ, ವ್ಯಾಜ್ಯದಲ್ಲಿರುವ ಹಾಗೂ ಒಪ್ಪಿದ ತಗಾದೆ ಮೊತ್ತ :–
14. ಒಪ್ಪಿಕೊಂಡ ಮೊತ್ತದ ಮತ್ತು ಪೂರ್ವ ಠೇವಣಿಯ ಸಂದಾಯದ ವಿವರಗಳು :–

(ಎ) ಸಂದಾಯ ಮಾಡಬೇಕಾದ ಮೊತ್ತದ ವಿವರಗಳು:

	ವಿವರಗಳು		ಕೇಂದ್ರ ತೆರಿಗೆ	ರಾಜ್ಯ/ ಕೇಂ.ಪ್ರ ತೆರಿಗೆ	ಏಕೀಕೃತ ತೆರಿಗೆ	ಉಪಕರ	ಒಟ್ಟು ಮೊತ್ತ	
	ಎ) ಒಪ್ಪಿಕೊಂಡ ಮೊತ್ತ	ಎ) ತೆರಿಗೆ/ ಉಪಕರ					<ಒಟ್ಟು>	<ಒಟ್ಟು>
		ಬಿ) ಬಡ್ಡಿ					<ಒಟ್ಟು>	
		ಸಿ) ದಂಡ					<ಒಟ್ಟು>	
		ಡಿ) ಶುಲ್ಕಗಳು					<ಒಟ್ಟು>	
		ಇ) ಇತರೇ ವೆಚ್ಚಗಳು					<ಒಟ್ಟು>	
	ಬಿ) ಪೂರ್ವ ಠೇವಣಿ (ವ್ಯಾಜ್ಯದ ತೆರಿಗೆಯ ಶೇಕಡ 20%)	ಎ) ತೆರಿಗೆ / ಉಪಕರ					<ಒಟ್ಟು>	

(ಬಿ) ಒಪ್ಪಿಕೊಂಡ ಮೊತ್ತ ಮತ್ತು ಪೂರ್ವ ಠೇವಣಿ ಸಂದಾಯದ ವಿವರಗಳು (ವ್ಯಾಜ್ಯದ ತೆರಿಗೆ ಮತ್ತು ಉಪಕರದಪೂರ್ವ ಠೇವಣಿಯ 20% ರಷ್ಟು)

ಕ್ರ.ಸಂ.	ವಿವರಣೆ	ಸಂದಾಯ ಮಾಡಬೇಕಾದ ತೆರಿಗೆ	ನಗದು/ಜಮೆಖಾತೆ ಮೂಲಕ ಸಂದಾಯ ಮಾಡಿದೆ	ಖರ್ಚು ನಮೂದು ಸಂಖ್ಯೆ	ಸಂದಾಯ ಮಾಡಿದ ತೆರಿಗೆ ಮೊತ್ತ			
					ಏಕೀಕೃತ ತೆರಿಗೆ	ಕೇಂದ್ರ ತೆರಿಗೆ	ರಾಜ್ಯ/ಕೇಂ.ಪ್ರ ತೆರಿಗೆ	ಉಪಕರ
1	**2**	**3**	**4**	**5**	**6**	**7**	**8**	**9**
1	ಏಕೀಕೃತ ತೆರಿಗೆ		ನಗದು ಖಾತೆ					
			ಜಮೆ ಖಾತೆ					
2	ಕೇಂದ್ರ ತೆರಿಗೆ		ನಗದು ಖಾತೆ					
			ಜಮೆ ಖಾತೆ					
3	ರಾಜ್ಯ/ಕೇಂ.ಪ್ರ ತೆರಿಗೆ		ನಗದು ಖಾತೆ					
			ಜಮೆ ಖಾತೆ					
4	ಉಪಕರ		ನಗದು ಖಾತೆ					
			ಜಮೆ ಖಾತೆ					

(ಸಿ) ಸಂದಾಯ ಮಾಡಬೇಕಾದ ಮತ್ತು ಸಂದಾಯ ಮಾಡಿದ ಬಡ್ಡಿ, ದಂಡ, ವಿಳಂಬ ಶುಲ್ಕ ಮತ್ತು ಯಾವುದೇ ಇತರ ಮೊತ್ತ

ಕ್ರ.ಸಂ.	ವಿವರಣೆ	ಸಂದಾಯ ಮಾಡಬೇಕಾದ ಮೊತ್ತ				ಖರ್ಚು ನಮೂದು ಸಂಖ್ಯೆ	ಸಂದಾಯ ಮಾಡಿದ ಮೊತ್ತ			
		ಏಕೀಕೃತ ತೆರಿಗೆ	ಕೇಂದ್ರ ತೆರಿಗೆ	ರಾಜ್ಯ/ಕೇಂ.ಪ್ರ	ಉಪಕರ		ಏಕೀಕೃತ ತೆರಿಗೆ	ಕೇಂದ್ರ ತೆರಿಗೆ	ರಾಜ್ಯ/ಕೇಂ.ಪ್ರ ತೆರಿಗೆ	ಉಪಕರ

				ತೆರಿಗೆ						
1	2	3	4	5	6	7	8	9	10	11
1	ಬಡ್ಡಿ									
2	ದಂಡ									
3	ವಿಳಂಬ ಶುಲ್ಕ									
4	ಇತರೆ (ನಿರ್ದಿಷ್ಟಪಡಿಸಿ)									

ಪರಿಶೀಲನೆ

ಮೇಲೆ ನೀಡಲಾದ ಮಾಹಿತಿಯು ನನ್ನ ತಿಳುವಳಿಕೆಗೆ ಮತ್ತು ನಂಬಿಕೆಯ ಪ್ರಕಾರ ಸತ್ಯವಾಗಿರುತ್ತದೆ ಮತ್ತು ಸರಿಯಾಗಿರುತ್ತದೆ ಹಾಗೂ ಯಾವುದೇ ಮಾಹಿತಿಯನ್ನು ಇದರಿಂದ ಮರೆಮಾಚಿರುವುದಿಲ್ಲ ಎಂದು ನಾನು ----------ಈ ಮೂಲಕ ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

ಸ್ಥಳ: <ಸಹಿ>

ದಿನಾಂಕ: ಅರ್ಜಿದಾರರ ಹೆಸರು

ಪದನಾಮ/ಸ್ಥಾನ

ನಮೂನೆ ಜಿಎಸ್‌ಟಿ ಎಪಿಎಲ್–06

[ನಿಯಮ 110 (2)2ನೋಡಿ]

ಅಪೀಲು ಪ್ರಾಧಿಕಾರ/ ಅಪೀಲು ನ್ಯಾಯಾಧಿಕರಣದ ಮುಂದೆ ಸಲ್ಲಿಸಿದ ಎದುರು ಆಕ್ಷೇಪಣೆಗಳು

ಕ್ರಸಂ	ವಿವರಗಳು				
1	ಅಪೀಲು ಸಂಖ್ಯೆ: ಸಲ್ಲಿಸಿದ ದಿನಾಂಕ				
2	ಜಿಎಸ್‌ಟಿಎನ್/ ತಾತ್ಕಾಲಿಕ ಐಡಿ /ಯುಐಎನ್				
3	ಅಪೀಲುದಾರನ ಹೆಸರು				
4	ಅಪೀಲುದಾರನ ಖಾಯಂ ವಿಳಾಸ				
5	ಸಂಪರ್ಕಿಸಲು ವಿಳಾಸ				
6	ಆದೇಶ ಸಂಖ್ಯೆ	ದಿನಾಂಕ			
7	ಯಾವ ಆದೇಶದ ವಿರುದ್ಧ ಅಪೀಲು ಹೂಡಲಾಗಿದೆಯೋ ಆ ಆದೇಶವನ್ನು ಹೊರಡಿಸಿದ ಅಧಿಕಾರಿಯ ಪದನಾಮ ಮತ್ತು ವಿಳಾಸ–				
8	ಅಪೀಲು ಸಲ್ಲಿಸಲಾದ ಆದೇಶವನ್ನು ಜಾರಿಗೊಳಿಸಿದ ದಿನಾಂಕ.				
9	ಪ್ರಾಧಿಕೃತ ವ್ಯಕ್ತಿಯ ಹೆಸರು				
10	ವ್ಯಾಜ್ಯದಲ್ಲಿರುವ ಪ್ರಕರಣದ ವಿವರಗಳು–				
	i. ವ್ಯಾಜ್ಯದಲ್ಲಿರುವ ಪ್ರಕರಣದ ಸಂಕ್ಷಿಪ್ತ ವಿವಾದಾಂಶ–				
	ii. ವ್ಯಾಜ್ಯದಲ್ಲಿರುವ ಸರಕುಗಳ/ಸೇವೆಗಳ ವರ್ಗೀಕರಣ ಮತ್ತು ವಿವರಣೆಗಳು				
	iii. ವ್ಯಾಜ್ಯದ ಅವಧಿ–				
	iv. ವ್ಯಾಜ್ಯದ ಅಡಿಯಲ್ಲಿರುವ ಮೊತ್ತದ ವಿವರ:	ಕೇಂದ್ರ ತೆರಿಗೆ	ರಾಜ್ಯ/ಕೇಂ.ಪ್ರ ತೆರಿಗೆ	ಏಕೀಕೃತ ತೆರಿಗೆ	ಉಪಕರ

	ಎ) ತೆರಿಗೆ				
	ಬಿ) ಬಡ್ಡಿ				
	ಸಿ) ದಂಡ				
	ಡಿ) ಶುಲ್ಕ				
	ಇ) ಇತರೆ ವೆಚ್ಚಗಳು (ನಿರ್ದಿಷ್ಟಪಡಿಸಿ)				
	. ವಶಪಡಿಸಿಕೊಂಡ ಸರಕಿನ ಮಾರುಕಟ್ಟೆ ಮೌಲ್ಯ				

11	ಆದೇಶ ಅಥವಾ ನಿರ್ಣಯವನ್ನು ಹೊರಡಿಸಿದ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶ ಮತ್ತು ಆಯುಕ್ತರ ಕಛೇರಿ(ಕೇಂದ್ರ) (ಕ್ಷೇತ್ರ ವ್ಯಾಪ್ತಿಯ ವಿವರಗಳು)
12	ಅಪೀಲಿನ ಸೂಚನಾಪತ್ರದ ಸ್ವೀಕೃತಿಯ ಅಥವಾ ಅಪೀಲು ನ್ಯಾಯಾಧೀಕರಣದಲ್ಲಿ ಅಪೀಲುದಾರ ಅಥವಾ ಸಂದರ್ಭಾನುಸಾರವಾಗಿ, ರಾಜ್ಯ ತೆರಿಗೆ/ ಕೇಂದ್ರ ತೆರಿಗೆ /ಕೇಂ.ಪ್ರ ತೆರಿಗೆ ಆಯುಕ್ತರಿಂದ ಅರ್ಜಿ ಸಲ್ಲಿಸಿದ ದಿನಾಂಕ
13	ಯಾವ ನಿರ್ಣಯ ಅಥವಾ ಆದೇಶದ ವಿರುದ್ಧವಾಗಿ ಅಪೀಲು ಮಾಡಲಾಗಿದೆಯೋ, ಅದು ಪೂರೈಕೆಯ ಸ್ಥಳಕ್ಕೆ ಸಂಬಂಧಿಸಿದಂತೆ ಯಾವುದಾದರೂ ಪ್ರಶ್ನೆಗಳನ್ನು ಒಳಗೊಂಡಿರುವುದೇ ಹೌದು ಇಲ್ಲ
14	ರಾಜ್ಯ ತೆರಿಗೆ/ ಕೇಂದ್ರ ತೆರಿಗೆ /ಕೇಂ.ಪ್ರ ತೆರಿಗೆ ಆಯುಕ್ತರನ್ನು ಹೊರತುಪಡಿಸಿದ ಇತರೇ ವ್ಯಕ್ತಿಯಿಂದ ಎದರು ಆಕ್ಷೇಪಣೆಗಳು ಸಲ್ಲಿಕೆಯಾಗಿರುವ ಸಂದರ್ಭದಲ್ಲಿ

	ನ್ಯಾಯನಿರ್ಣಯ ಪ್ರಾಧಿಕಾರದ ಹೆಸರು						
	ಆದೇಶದ ಸಂಖ್ಯೆ ಮತ್ತು ಆದೇಶದ ದಿನಾಂಕ						
	ಜಿಎಸ್‌ಟಿಎನ್/ ಯುಐಎನ್/ತಾತ್ಕಾಲಿಕ ಐಡಿ						
	ಒಳಗೊಂಡ ಮೊತ್ತ						
	ಶೀರ್ಷಿಕೆ	ತೆರಿಗೆ	ಬಡ್ಡಿ	ದಂಡ	ಮರುಪಾವತಿ	ಒಟ್ಟು	
	ಏಕೀಕೃತ ತೆರಿಗೆ						
	ಕೇಂದ್ರ ತೆರಿಗೆ						
	ರಾಜ್ಯ / ಕೇಂ.ಪ್ರ. ತೆರಿಗೆ						
	ಉಪಕರ						
15	ಸಂದಾಯದ ವಿವರಗಳು						
	ಶೀರ್ಷಿಕೆ	ತೆರಿಗೆ	ಬಡ್ಡಿ	ದಂಡ	ಮರುಪಾವತಿ	ಒಟ್ಟು	
	ಕೇಂದ್ರ ತೆರಿಗೆ						
	ರಾಜ್ಯ / ಕೇಂ.ಪ್ರ. ತೆರಿಗೆ						
	ಏಕೀಕೃತ ತೆರಿಗೆ						
	ಉಪಕರ						
	ಒಟ್ಟು						

16	ರಾಜ್ಯ ತೆರಿಗೆ/ ಕೇಂದ್ರ ತೆರಿಗೆ /ಕೇಂ.ಪ್ರ ತೆರಿಗೆ ಆಯುಕ್ತರಿಂದ ಎದರು ಆಕ್ಷೇಪಣೆಗಳು ಸಲ್ಲಿಕೆಯಾಗಿರುವ ಸಂದರ್ಭದಲ್ಲಿ						

	1. ವ್ಯಾಜ್ಯದ ಅವಧಿಯಲ್ಲಿ ಕೈಬಿಡಲಾದ ಅಥವಾ ಕಡಿಮೆ ಮಾಡಿದ ತಗಾದೆಯ ತೆರಿಗೆ ಮೊತ್ತ						
	2. ವ್ಯಾಜ್ಯದ ಅವಧಿಯಲ್ಲಿ ಕೈಬಿಡಲಾದ ಅಥವಾ ಕಡಿಮೆ ಮಾಡಿದ ತಗಾದೆಯಬಡ್ಡಿ ಮೊತ್ತ						
	3. ವ್ಯಾಜ್ಯದ ಅವಧಿಯಲ್ಲಿ ಮಂಜೂರು ಮಾಡಿದ ಅಥವಾ ಅನುಮತಿಸಿದ ಮರುಪಾವತಿ ಮೊತ್ತ						
	4. ದಂಡವನ್ನು ವಿಧಿಸಿಲಾಗಿಲ್ಲವೇ ಅಥವಾ ಕಡಿಮೆ ದಂಡವನ್ನು ವಿಧಿಸಲಾಗಿದೆಯೇ						
	ಒಟ್ಟು						
17	ಎದುರು ಆಕ್ಷೇಪಣಾ ವಿವರಣಾ ಪತ್ರದಲ್ಲಿ ಕ್ಲೇಮು ಮಾಡಿರುವ ಪರಿಹಾರ						
18	ಎದರು ಆಕ್ಷೇಪಣೆಗಳ ಕಾರಣಾಧಾರಗಳು						

ಪರಿಶೀಲನೆ

ಪ್ರತಿವಾದಿಯಾಗಿರುವ_____,ಆದ ನಾನು ಮೇಲೆ ಏನನ್ನು ನಿರೂಪಿಸಿರುವನೋ, ಅದು ನನ್ನ ಮಾಹಿತಿ ಹಾಗು ನಂಬಿಕೆಯ ಮಟ್ಟಿಗೆ ಸರಿಯಾಗಿದೆ ಎಂಬುದಾಗಿ ಈ ಮೂಲಕ ಘೋಷಿಸುತ್ತೇನೆ.

ಇಂದುದಿನಾಂಕ

_____2017ರಂದು_____ಪರಿಶೀಲಿಸಲಾಗಿದೆ.

ಸ್ಥಳ:

ದಿನಾಂಕ: **<ಸಹಿ>**

ಅರ್ಜಿದಾನ/ಅಧಿಕಾರಿಯ ಹೆಸರು
ಅರ್ಜಿದಾರರ/ಅಧಿಕಾರಿಯ
ಪದನಾಮ/ಸ್ಥಾನ

ನಮೂನೆ ಜಿಎಸ್‌ಟಿ ಎಪಿಎಲ್–07

[ನಿಯಮ 111(1) ನೋಡಿ]

ಪ್ರಕರಣ 112ರ ಉಪಪ್ರಕರಣ (3)ರ ಅಡಿಯಲ್ಲಿ ಅಪೀಲು ನ್ಯಾಯಾಧಿಕರಣಕ್ಕೆ ಅರ್ಜಿ

1. ಅಪೀಲುದಾರನ ಹೆಸರು ಮತ್ತು ಪದನಾಮ – ಹೆಸರು:
   ಹುದ್ದೆ:
   ಕ್ಷೇತ್ರ ವ್ಯಾಪ್ತಿ:
   ರಾಜ್ಯ/ ಕೇಂದ್ರ:
   ರಾಜ್ಯದ ಹೆಸರು:

2. ಜಿಎಸ್‌ಟಿಎನ್/ ತಾತ್ಕಾಲಿಕ ಐಡಿ /ಯುಐಎನ್
3. ಆದೇಶ ಸಂಖ್ಯೆ– ಆದೇಶ ದಿನಾಂಕ–
4. ಯಾವ ಆದೇಶದ ವಿರುದ್ಧ ಅಪೀಲು ಹೂಡಲಾಗಿದೆಯೋ ಆ ಆದೇಶವನ್ನು ಹೊರಡಿಸಿದ ಅಪೀಲು ಪ್ರಾಧಿಕಾರದ ಪದನಾಮ ಮತ್ತು ವಿಳಾಸ–
5. ಅಪೀಲಿಗೆ ಕಾರಣವಾದ ಆದೇಶವನ್ನು ಜಾರಿ ಮಾಡಿದ ದಿನಾಂಕ–
6. ವ್ಯಾಜ್ಯದಲ್ಲಿರುವ ಪ್ರಕರಣದ ವಿವರಗಳು–
   i. ವ್ಯಾಜ್ಯದಲ್ಲಿರುವ ಪ್ರಕರಣದ ಸಂಕ್ಷಿಪ್ತ ವಿವಾದಾಂಶ–
   ii. ವ್ಯಾಜ್ಯದಲ್ಲಿರುವ ಸರಕುಗಳ/ಸೇವೆಗಳ ವರ್ಗೀಕರಣ ಮತ್ತು ವಿವರಣೆಗಳು
   iii. ವ್ಯಾಜ್ಯದ ಅವಧಿ–

iv. ವ್ಯಾಜ್ಯದ ಅಡಿಯಲ್ಲಿರುವ ಮೊತ್ತ:

ವಿವರಣೆ	ಕೇಂದ್ರ ತೆರಿಗೆ	ರಾಜ್ಯ/ಕೇಂ.ಪ್ರ ತೆರಿಗೆ	ಏಕೀಕೃತ ತೆರಿಗೆ	ಉಪಕರ
ಎ) ತೆರಿಗೆ/ ಉಪಕರ				
ಬಿ) ಬಡ್ಡಿ				
ಸಿ) ದಂಡ				
ಡಿ) ಶುಲ್ಕ				
ಇ) ಇತರೇ ಚಾರ್ಜುಗಳು				

7. ಸಂಗತಿಗಳ ನಿರೂಪಣೆ :–

8. ಅಪೀಲಿನ ಕಾರಣಾಧಾರಗಳು:–

9. ಪ್ರಾರ್ಥನೆ :–

10. ತಗಾದೆ ಮಾಡಿದ, ವ್ಯಾಜ್ಯದಲ್ಲಿರುವ ಹಾಗೂ ಒಪ್ಪಿದ ತಗಾದೆ ಮೊತ್ತ :–

	ವಿವರಗಳು		ಕೇಂದ್ರ ತೆರಿಗೆ	ರಾಜ್ಯ/ಕೇಂ.ಪ್ರ ತೆರಿಗೆ	ಏಕೀಕೃತ ತೆರಿಗೆ	ಉಪಕರ	ಒಟ್ಟು ಮೊತ್ತ	
ತಗಾದೆ ಯಾವುದಾದರು ಇದ್ದರೇ, ಅದರ ವಿವರಗಳು	ಸೃಜಿಸಿದ ತಗಾದೆ ಮೊತ್ತ ಯಾವುದಾದರು ಇದ್ದಲ್ಲಿ ಆ ಮೊತ್ತ (ಎ)	ಎ) ತೆರಿಗೆ/ ಉಪಕರ					<ಒಟ್ಟು>	<ಒಟ್ಟು>
		ಬಿ) ಬಡ್ಡಿ					<ಒಟ್ಟು>	
		ಸಿ) ದಂಡ					<ಒಟ್ಟು>	
		ಡಿ) ಶುಲ್ಕಗಳು					<ಒಟ್ಟು>	
		ಇ) ಇತರೇ ಚಾರ್ಜುಗಳು					<ಒಟ್ಟು>	
	ವ್ಯಾಜ್ಯದ ಅಡಿಯಲ್ಲಿರುವ ಮೊತ್ತ (ಬಿ)	ಎ) ತೆರಿಗೆ/ ಉಪಕರ					<ಒಟ್ಟು>	<ಒಟ್ಟು>
		ಬಿ) ಬಡ್ಡಿ					<ಒಟ್ಟು>	
		ಸಿ) ದಂಡ					<ಒಟ್ಟು>	
		ಡಿ) ಶುಲ್ಕಗಳು					<ಒಟ್ಟು>	
		ಇ) ಇತರೇ ಚಾರ್ಜುಗಳು					<ಒಟ್ಟು>	

ಸ್ಥಳ: <**ಸಹಿ**>

ದಿನಾಂಕ: ಅಧಿಕಾರಿಯ ಹೆಸರು:

ಪದನಾಮ:

ಕ್ಷೇತ್ರವ್ಯಾಪಿ

ನಮೂನೆ ಜಿಎಸ್‌ಟಿ ಎಪಿಎಲ್‌–08

[ನಿಯಮ 114(1) ನೋಡಿ]

ಪ್ರಕರಣ 117ರ ಅಡಿಯಲ್ಲಿ ಉಚ್ಚ ನ್ಯಾಯಾಲಯಕ್ಕೆ ಅಪೀಲು

1. ಅಪೀಲು ಸಲ್ಲಿಸಿದವರು...../..... ತೆರಿಗೆದಾಯಕ ವ್ಯಕ್ತಿ/ <––>ಸರಕಾರ
2. ಜಿ.ಎಸ್.ಟಿ.ಐ.ಎನ್/ತಾತ್ಕಾಲಿಕ ಐಡಿ/ ಯುಐಎನ್ –ಅಪೀಲುದಾರನ/ಅಧಿಕಾರಿಯ ಹೆಸರು– ಪದನಾಮ/ಕ್ಷೇತ್ರವ್ಯಾಪ್ತಿ
3. ಅಪೀಲುದಾರನಖಾಯಂ ವಿಳಾಸ, ಅನ್ವಯಿಸಿದ್ದಲ್ಲಿ–
4. ಸಂಪರ್ಕಕ್ಕಾಗಿ ವಿಳಾಸ–
5. ಆದೇಶ ಸಂಖ್ಯೆ– ಆದೇಶ ದಿನಾಂಕ–
6. ಅಪೀಲು ಮಾಡಲಾಗಿರುವ ಆದೇಶವನ್ನು ಹೊರಡಿಸಿರುವ ಅಪೀಲು ನ್ಯಾಯಾಧಿಕರಣದ ಹೆಸರು ಮತ್ತು ವಿಳಾಸ–

7. ಅಪೀಲಿಗೆ ಕಾರಣವಾದ ಆದೇಶ ಜಾರಿಯಾದ ದಿನಾಂಕ–
8. ಪ್ರಾಧಿಕೃತ ಪ್ರತಿನಿಧಿಯ ಹೆಸರು–
9. ವ್ಯಾಜ್ಯದಲ್ಲಿರುವ ಪ್ರಕರಣದ ವಿವರಗಳು–
   i. ವ್ಯಾಜ್ಯದಲ್ಲಿರುವ ಪ್ರಕರಣದ ಸಂಕ್ಷಿಪ್ತ ವಿವಾದಾಂಶ–
   ii. ವ್ಯಾಜ್ಯದಲ್ಲಿರುವ ಸರಕುಗಳ/ಸೇವೆಗಳ ವರ್ಗೀಕರಣ ಮತ್ತು ವಿವರಣೆಗಳು
   iii. ವ್ಯಾಜ್ಯದ ಅವಧಿ–
   iv. ವ್ಯಾಜ್ಯದಅಡಿಯಲ್ಲಿರುವ ಮೊತ್ತ:

ವಿವರಣೆ	ಕೇಂದ್ರ ತೆರಿಗೆ	ರಾಜ್ಯ/ಕೇಂ.ಪ್ರ ತೆರಿಗೆ	ಏಕೀಕೃತ ತೆರಿಗೆ	ಉಪಕರ
ಎ) ತೆರಿಗೆ/ ಉಪಕರ				
ಬಿ) ಬಡ್ಡಿ				
ಸಿ) ದಂಡ				
ಡಿ) ಶುಲ್ಕ				
ಇ) ಇತರೇ ವೆಚ್ಚಗಳು				

   v. ವಶಕ್ಕೆ ತೆಗೆದುಕೊಂಡ ಸರಕುಗಳ ಮಾರುಕಟ್ಟೆ ಮೌಲ್ಯ

10. ಸಂಗತಿಗಳ ನಿರೂಪಣೆ :–
11. ಅಪೀಲಿನ ಕಾರಣಾಧಾರಗಳು:–
12. ಪ್ರಾರ್ಥನೆ :–
13. ಕಾರಣಾಧಾರಗಳಿಗೆ ಸಂಬಂಧಿಸಿದ ಅನುಬಂಧ(ಗಳು)

ಪರಿಶೀಲನೆ

ಮೇಲೆ ನೀಡಲಾದ ಮಾಹಿತಿಯು ನನ್ನ ತಿಳುವಳಿಕೆಗೆ ಮತ್ತು ನಂಬಿಕೆಯ ಪ್ರಕಾರ ಸತ್ಯವಾಗಿರುತ್ತದೆ ಮತ್ತು ಸರಿಯಾಗಿರುತ್ತದೆ ಹಾಗೂ ಯಾವುದೇ ಮಾಹಿತಿಯನ್ನು ಇದರಿಂದ ಮರೆಮಾಚಿರುವುದಿಲ್ಲ ಎಂದು ---------- ಎಂಬ ನಾನು ಈ ಮೂಲಕ ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

ಸ್ಥಳ: <ಸಹಿ>

ದಿನಾಂಕ: ಹೆಸರು

ಪದನಾಮ/ಸ್ಥಾನ

ನಮೂನೆ ಜಿಎಸ್‌ಟಿ ಟಿಆರ್‌ಎಎನ್‌–1

[ನಿಯಮ 117(1), 118, 119 ಮತ್ತು 120 ನೋಡಿ]

ಸ್ಥಿತ್ಯಂತರ ಕಾಲೀನ ಐಟಿಸಿ/ ದಾಸ್ತಾನು ವಿವರಪತ್ರ

1. ಜಿಎಸ್‌ಟಿಐಎನ್‌–

2. ನೋಂದಾಯಿತ ವ್ಯಕ್ತಿಯ ಕಾನೂನು ʻಮ್ಮತ ಹೆಸರು–

3. ವ್ಯಾಪಾರದ ಹೆಸರು, ಯಾವುದಾದರು ಇದ್ದಲ್ಲಿ–

4. ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಗೊತ್ತುಪಡಿಸಲಾದ ದಿನದ ನಿಕಟಪೂರ್ವ ದಿನಾಂಕದವರೆಗೆ ಆರು ತಿಂಗಳವರೆಗಿನ ಎಲ್ಲಾ ರಿಟರ್ನ್‌ಗಳನ್ನು ಸಲ್ಲಿಸಲಾಗಿದೆಯೇ? ಹೌದು/ಇಲ್ಲ

5. ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಸಲ್ಲಿಸಲಾದ ರಿಟರ್ನ್‌ನಲ್ಲಿ ಮುಂದಕ್ಕೆ ಸಾಗಿಸಲಾದ ತೆರಿಗೆಯ ಮೊತ್ತದ ಜಮೆ:

(ಎ) ಕೇಂದ್ರ ತೆರಿಗೆಯಾಗಿ ವಿದ್ಯುನ್ಮಾನ ಜಮೆ ಖಾತೆಯಲ್ಲಿ ಮುಂದಕ್ಕೆ ಸಾಗಿಸಲಾದ ಸೆನ್‌ವ್ಯಾಟ್ ಜಮೆಯ ಮೊತ್ತ (ಪ್ರಕರಣ 140 (1))

ಕ್ರಮ ಸಂಖ್ಯೆ	ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ನೋಂದಣಿ ಸಂಖ್ಯೆ (ಕೇಂದ್ರ ಅಬಕಾರಿ ಮತ್ತು ಸೇವಾ ತೆರಿಗೆ)	ಅಸ್ತಿತ್ವದಲ್ಲಿರುವ ಕಾನೂನಿಗೆ ಸಂಬಂಧಿಸಿದಂತೆ ಕೊನೆಯ ರಿಟರ್ನ್ ಸಲ್ಲಿಸಿದ ತೆರಿಗೆಯ ಅವಧಿ	ಅಂಕಣ 3 ರಲ್ಲಿ ನಿರ್ದಿಷ್ಟಪಡಿಸಿದ ರಿಟರ್ನ್ ಸಲ್ಲಿಸಿದ ದಿನಾಂಕ	ಸದರಿ ಕೊನೆಯ ರಿಟರ್ನ್‌ನಲ್ಲಿ ಮುಂದಕ್ಕೆ ಸಾಗಿಸಲಾದ ಸೆನ್‌ವ್ಯಾಟ್ ಜಮೆಯ ಮೊತ್ತ	ಸ್ಥಿತ್ಯಂತರಕಾಲೀನ ಉಪಬಂಧಗಳ ಪ್ರಕಾರ ಕೇಂದ್ರ ತೆರಿಗೆಯಐಟಿಸಿಯಾಗಿ ಅಂಗೀಕಾರಾರಹ್ ಸೆನ್‌ವ್ಯಾಟ್ ಜಮೆ
1	2	3	4	5	6
	ಒಟ್ಟು				

(ಬಿ) ಮುಂದಕ್ಕೆ ಸಾಗಿಸಲಾದ ಜಮೆಗೆ ಸಂಬಂಧಪಟ್ಟಂತೆ ಸ್ವೀಕರಿಸಿದ ಶಾಸನಬದ್ಧ ನಮೂನೆಗಳ ವಿವರ

ಅವಧಿ: 01ನೇ ಏಪ್ರಿಲ್ 2015 ರಿಂದ 30ನೇ ಜೂನ್ 2017ರವರೆಗೆ

ನೀಡುವವನ ಟಿನ್	ನೀಡುವವನ ಹೆಸರು	ನಮೂನೆಯ ಕ್ರಮ ಸಂಖ್ಯೆ	ಮೊತ್ತ	ಅನ್ವಯಿಸುವ ವ್ಯಾಟ್ ದರ
ನಮೂನೆ–ಸಿ				
ಒಟ್ಟು				
ನಮೂನೆ–ಎಫ್				
ಒಟ್ಟು				
ನಮೂನೆ ಹೆಚ್/ ಐ				
ಒಟ್ಟು				

(ಸಿ) ವಿದ್ಯುನ್ಮಾನ ಜಮೆ ಖಾತೆಗೆ ರಾಜ್ಯ/ ಕೇಂ.ಪ್ರ ತೆರಿಗೆಯಾಗಿ ಮುಂದಕ್ಕೆ ಸಾಗಿಸಲಾದ ತೆರಿಗೆ ಜಮೆಯ ಮೊತ್ತ (ಒಂದೇ ರಾಜ್ಯದಲ್ಲಿರುವ ಒಂದೇ ಪ್ಯಾನ್‌ನ ಎಲ್ಲಾ ನೋಂದಣಿಗಳಿಗಾಗಿ)

ಅಸ್ತಿತ್ವದಲ್ಲಿರುವ	ಕೊನೆಯ	ನಮೂನೆ–ಸಿ	ನಮೂನೆ– ಎಫ್	ಅಂಕಣ	ನಮೂನೆ ಹೆಚ್/ಐ	ಸ್ಥಿತ್ಯಂತರ

ಕಾನೂನಿನ ಅಡಿಯಲ್ಲಿ ನೋಂದಣಿ ಸಂಖ್ಯೆ	ರಿಟರ್ನ್‌ನಲ್ಲಿರುವಂತೆ ವ್ಯಾಟ್ ಮತ್ತು ಪ್ರವೇಶ ತೆರಿಗೆ ಐಟಿಸಿ	ಯಾವ ವಹಿವಾಟಿಗೆ ಸಂಬಂದಿಸಿದಂತೆ ನಮೂನೆಗಳು ಬಾಕಿ ಉಳಿದಿವೆ	ಅಂಕಣ(3) ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ವ್ಯತ್ಯಾಸ ತೆರಿಗೆ	ಯಾವ ವಹಿವಾಟಿಗೆ ಸಂಬಂದಿಸಿದಂತೆ ನಮೂನೆಗಳು ಬಾಕಿ ಉಳಿದಿವೆ	ಅಂಕಣ (5)ರ ಮೇಲೆ ಸಂದಾಯ ಮಾಡಬೇಕಾದತೆರಿಗೆ	(3) **ಮತ್ತು** (5) ಕ್ಕೆ ಸಂಬಂಧಿಸಿದ ಐಟಿಸಿಯ ಹಿಮ್ಮುಖ ಗೊಳಿಸುವಿಕೆ	ಯಾವ ವಹಿವಾಟಿಗೆ ಸಂಬಂದಿಸಿದಂತೆ ನಮೂನೆಗಳು ಬಾಕಿ ಉಳಿದಿವೆ	ಅಂಕಣ (7)ರ ಮೇಲೆ ಸಂದಾಯ ಮಾಡಬೇಕಾದ ತೆರಿಗೆ	ಕಾಲೀನ ಐಟಿಸಿ 2–(4+6–7+9)
1	2	3	4	5	6	7	8	9	10

6. ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಅವುಗಳ ಮೇಲಿನ ಬಳಕೆಯಾಗದ ಐಟಿಸಿಯನ್ನು ಮುಂದಕ್ಕೆ ಸಾಗಿಸಿಲ್ಲದ ಬಂಡವಾಳ ಸರಕುಗಳ ವಿವರಗಳು [ಪ್ರಕರಣ 140 (2)].

(ಎ) ಕೇಂದ್ರ ತೆರಿಗೆಯಾಗಿ ವಿದ್ಯುನ್ಮಾನ ಜಮೆ ಖಾತೆಗೆ ಮುಂದೆ ಸಾಗಿಸಲಾದ ಬಂಡವಾಳ ಸರಕುಗಳಿಗೆ ಸಂಬಂಧಿಸಿದಂತೆ ಉಪಯೋಗಿಸಿಲ್ಲದ ಸೆನ್‌ವ್ಯಾಟ್ ಜಮೆ ಮೊತ್ತ

ಕ್ರಮ ಸಂಖ್ಯೆ	ಬೆಲೆಪಟ್ಟಿ/ ದಸ್ತಾವೇಜು ಸಂಖ್ಯೆ	ಬೆಲೆಪಟ್ಟಿ/ ದಸ್ತಾವೇಜು ದಿನಾಂಕ	ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಪೂರೈಕೆದಾರನ ನೋಂದಣಿ ಸಂಖ್ಯೆ	ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಸ್ವೀಕರಿಸುವವನ ನೋಂದಣಿ ಸಂಖ್ಯೆ	ಅವುಗಳ ಮೇಲಿನ ಜಮೆಯನ್ನು ಭಾಗಶಃವಾಗಿ ಉಪಯೋಗಿಸಿರುವ ಬಂಡವಾಳ ಸರಕುಗಳ ವಿವರ			ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಒಟ್ಟು ಅರ್ಹ ಸೆನ್‌ವ್ಯಾಟ್ ಜಮೆ	ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಉಪಯೋಗಿಸಿದ ಒಟ್ಟು ಸೆನ್‌ವ್ಯಾಟ್ ಜಮೆ	ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಉಪಯೋಗಿಸಿಲ್ಲದ ಒಟ್ಟು ಸೆನ್‌ವ್ಯಾಟ್ ಜಮೆ (ಕೇಂದ್ರ ತೆರಿಗೆಯ ಐಟಿಸಿಯಾಗಿ ಅರ್ಹವಾದ) [9–10]
					ಮೌಲ್ಯ	ಸಂದಾಯ ಮಾಡಿದ ಸುಂಕ ಮತ್ತು ತೆರಿಗೆ				
						ಇಡಿ/ ಸಿವಿಡಿ	ಎಸ್‌ಎಡಿ			
1	2	3	4	5	6	7	8	9	10	11
		ಒಟ್ಟು								

(ಬಿ) ರಾಜ್ಯ/ಕೇಂ.ಪ್ರ ತೆರಿಗೆಯಾಗಿ ವಿದ್ಯುನ್ಮಾನ ಜಮೆ ಖಾತೆಗೆ ಮುಂದೆ ಸಾಗಿಸಲಾದ ಉಪಯೋಗಿಸಿಕೊಂಡಿರದ ಹೂಡುವಳಿ ತೆರಿಗೆ ಜಮೆಯ ಮೊತ್ತ (ಒಂದೇ ರಾಜ್ಯದಲ್ಲಿರುವ ಒಂದೇ ಪ್ಯಾನ್‌ನ ಎಲ್ಲಾ ನೋಂದಣಿಗಳಿಗಾಗಿ)

ಕ್ರಮ ಸಂಖ್ಯೆ	ಬೆಲೆಪಟ್ಟಿ/ ದಸ್ತಾವೇಜು ಸಂಖ್ಯೆ	ಬೆಲೆಪಟ್ಟಿ/ ದಸ್ತಾವೇಜು ದಿನಾಂಕ	ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಪೂರೈಕೆದಾರನ ನೋಂದಣಿ ಸಂಖ್ಯೆ	ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಸ್ವೀಕರಿಸುವವನ ನೋಂದಣಿ ಸಂಖ್ಯೆ	ಅವುಗಳ ಮೇಲಿನ ಜಮೆಯನ್ನು ಉಪಯೋಗಿಸಿಲ್ಲದ ಬಂಡವಾಳ ಸರಕುಗಳ ವಿವರ		ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಅರ್ಹವಾದ ಒಟ್ಟು ವ್ಯಾಟ್/ ಪ್ರವೇಶ ತೆರಿಗೆ ಜಮೆ	ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಉಪಯೋಗಿಸಿದ ಒಟ್ಟು ವ್ಯಾಟ್/ ಪ್ರವೇಶ ತೆರಿಗೆ ಜಮೆ	ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಉಪಯೋಗಿಸಿಲ್ಲದ ಒಟ್ಟು ವ್ಯಾಟ್/ ಪ್ರವೇಶ ತೆರಿಗೆ ಜಮೆ (ರಾಜ್ಯ/ ಕೇಂ.ಪ್ರ ಐಟಿಸಿಯಾಗಿ ಅಂಗಿಕಾರಾರ್ಹವಾದ) [8–9]
					ಮೌಲ್ಯ	ಸಂದಾಯ ಮಾಡಿದ ವ್ಯಾಟ್/ ಪ್ರವೇಶ ತೆರಿಗೆ			
1	2	3	4	5	6	7	8	9	10

		ಒಟ್ಟು							

7. ಪ್ರಕರಣ 140(3), 140(4) (ಬಿ), 140(5) ಮತ್ತು 140(6) ರನಿಬಂಧನೆಗಳಿಗನುಸಾರವಾಗಿ ದಾಸ್ತಾನಿನಲ್ಲಿ ಹೊಂದಿರುವ ಹೂಡುವಳಿಗಳ ವಿವರ

(ಎ) ಕೋಷ್ಟಕ 5 (ಎ) ಅಡಿಯಲ್ಲಿ ಕ್ಲೇಮು ಮಾಡಿದ ಜಮೆಯನ್ನು ಹೊರತುಪಡಿಸಿ ಹೂಡುವಳಿಗಳ ಮೇಲೆ ಜಮೆಯಾಗಿ ಕ್ಲೇಮು ಮಾಡಿದ ಸುಂಕ ಮತ್ತು ತೆರಿಗೆಗಳ ಮೊತ್ತ(ಪ್ರಕರಣ 140(3), 140(4) (ಬಿ), 140(5) ಮತ್ತು 140(6)ರ ಅಡಿಯಲ್ಲಿ)

ಕ್ರಮ ಸಂಖ್ಯೆ	ದಾಸ್ತಾನಿನಲ್ಲಿ ಒಳಗೊಂಡಿರುವ ಹೂಡುವಳಿಗಳು ಅಥವಾ ಅರೆ ಸಿದ್ಧ ರೂಪದ ಅಥವಾ ಸಿದ್ಧ ರೂಪದ ಸರಕುಗಳು ಒಳಗೊಂಡಿರುವ ಹೂಡುವಳಿಗಳ ವಿವರ				
	ಹೆಚ್.ಎಸ್.ಎನ್ (6 ಅಂಕೆ ಲೆವೆಲ್)	ಘಟಕ	ಪ್ರಮಾಣ	ಮೌಲ್ಯ	ಅಂಥ ಹೂಡುವಳಿಗಳ ಮೇಲೆ ಸಂದಾಯ ಮಾಡಿದ ಅರ್ಹ ಸುಂಕಗಳು
1	2	3	4	5	6
7ಎ, ಸುಂಕ ಸಂದಾಯ ಮಾಡಿದ ಬೆಲೆಪಟ್ಟಿಗಳು ಲಭ್ಯವಿಲ್ಲದಿದ್ದಲ್ಲಿ					
ಹೂಡುವಳಿಗಳು					
ಅರೆ ಸಿದ್ಧರೂಪದ ಮತ್ತು ಸಿದ್ಧರೂಪದ ಸರಕುಗಳಲ್ಲಿರುವ ಹೂಡುವಳಿಗಳು					
7ಬಿ ಸುಂಕ ಸಂದಾಯ ಮಾಡಿದ ಬೆಲೆಪಟ್ಟಿಗಳು ಲಭ್ಯವಿಲ್ಲದಿದ್ದಲ್ಲಿ(ತಯಾರಕ ಅಥವಾ ಸೇವೆ ಒದಗಿಸುವವನನ್ನು ಹೊರತುಪಡಿಸಿದ ಇತರರಿಗೆ ಮಾತ್ರ ಅನ್ವಯಿಸುತ್ತದೆ)– ನಿಯಮ 117 (4) ರ ನಿಬಂಧನೆಗಳಿಗೆ ಅನುಸಾರವಾದ ಜಮೆ					
ಹೂಡುವಳಿಗಳು					

(ಬಿ) ಪ್ರಕರಣ 140 (5) ಅಡಿಯಲ್ಲಿ ಹೂಡುವಳಿಗಳಿಗೆ ಅಥವಾ ಹೂಡುವಳಿ ಸೇವೆಗಳಿಗೆ ಸಂಬಂಧಿಸಿದಂತೆ ಅರ್ಹವಾದ ಸುಂಕ ಮತ್ತು ತೆರಿಗೆಗಳು/ ಮೌ.ವ.ತೆ/ ಪ್ರವೇಶ ತೆರಿಗೆ:

ಪೂರೈಕೆದಾರರ ನೋಂದಣಿ ಸಂಖ್ಯೆ	ಬೆಲೆಪಟ್ಟಿ ಸಂಖ್ಯೆ	ಬೆಲೆಪಟ್ಟಿ ದಿನಾಂಕ	ವಿವರ	ಪ್ರಮಾಣ	ಯು.ಕ್ಯೂ.ಸಿ	ಮೌಲ್ಯ	ಅರ್ಹವಾದ ಸುಂಕ ಮತ್ತು ತೆರಿಗೆಗಳು	ಮೌ.ವ.ತೆ / ಪ್ರವೇಶ ತೆರಿಗೆ	ಸ್ವೀಕರಿಸುವವನ ಲೆಕ್ಕ ಪುಸ್ತಕದಲ್ಲಿ ನಮೂದಾದ ದಿನಾಂಕ

(ಸಿ) ಪ್ರಕರಣ 140(3), 140(4)(ಬಿ) ಮತ್ತು 140(6)ರ ಅಡಿಯಲ್ಲಿ ವಿದ್ಯುನ್ಮಾನ ಜಮೆ ಖಾತೆಗೆ ಎಸ್.ಜಿ.ಎಸ್.ಟಿ/ಯು.ಟಿ.ಜಿ.ಎಸ್.ಟಿ ಆಗಿ ಮುಂದೆ ಸಾಗಿಸಲಾದ, ಅವುಗಳ ಮೆಲೆ ತೆರಿಗೆಯನ್ನು ಸಂದಾಯ ಮಾಡಿರುವುದರ ಪುರಾವೆಯಾಗಿ ಬೆಲೆಪಟ್ಟಿಗಳು/ ದಸ್ತಾವೇಜುಗಳನ್ನು ಹೊಂದಿರುವಹೂಡುವಳಿಗಳ ಮೇಲೆ ಸಂದಾಯ ಮಾಡಿದ ವ್ಯಾಟ್ / ಪ್ರವೇಶ ತೆರಿಗೆ ಮೊತ್ತ.

ದಾಸ್ತಾನಿನಲ್ಲಿರುವ ಹೂಡುವಳಿಗಳ ವಿವರ					ಹಿಂದಿನ ಕಾನೂನಿನ ಅಡಿಯಲ್ಲಿ ಕ್ಲೇಮು ಮಾಡಿದ ಒಟ್ಟು ಹೂಡುವಳಿ ತೆರಿಗೆ ಜಮೆ	ಹಿಂದಿನ ಕಾನೂನಿನ ಅಡಿಯಲ್ಲಿ ಕ್ಲೇಮು ಮಾಡದ ವಿನಾಯಿತಿ ಮಾರಾಟಗಳಿಗೆ ಸಂಬಂಧಿಸಿದ ಒಟ್ಟು ಹೂಡುವಳಿ ತೆರಿಗೆ ಜಮೆ	ಎಸ್.ಜಿ.ಎಸ್.ಟಿ/ ಯು.ಟಿ.ಜಿ.ಎಸ್.ಟಿ ಆಗಲು ಅಂಗೀಕಾರಾರ್ಹವಾದ ಒಟ್ಟು ಹೂಡುವಳಿ ತೆರಿಗೆ ಜಮೆ
ವಿವರ	ಘಟಕ	ಪ್ರಮಾಣ	ಮೌಲ್ಯ	ಸಂದಾಯ ಮಾಡಿದ ವ್ಯಾಟ್ / ಪ್ರವೇಶ ತೆರಿಗೆ			
1	2	3	4	5	6	7	8

ಹೂಡುವಳಿಗಳು							
ಸಿದ್ಧರೂಪದ ಮತ್ತು ಅರೆ ಸಿದ್ಧರೂಪದ ಸರಕುಗಳಲ್ಲಿರುವ ಹೂಡುವಳಿಗಳು							

(ಡಿ) ತೆರಿಗೆ ಸಂದಾಯದ ಪುರವಾವೆಯಾಗಿ ಬೆಲೆಪಟ್ಟಿಗಳು/ ದಸ್ತಾವೇಜುಗಳಿಲ್ಲದಿರುವ ಸರಕುಗಳ ದಾಸ್ತಾನು (ನಿಯಮ 117 (4) ರ ನಿಬಂಧನೆಗಳಿಗನುಸಾರವಾಗಿ ಜಮೆ) **(ಏಕ ಬಿಂದುವಿನಲ್ಲಿ ವ್ಯಾಟ್ ಹೊಂದಿರುವ ರಾಜ್ಯಗಳಲ್ಲಿ ಮಾತ್ರವಿರುತ್ತದೆ)**

ದಾಸ್ತಾನಿನಲ್ಲಿರುವ ಹೂಡುವಳಿಗಳ ವಿವರ				
ವಿವರಣೆ	ಘಟಕ	ಪ್ರಮಾಣ	ಮೌಲ್ಯ	ಸಂದಾಯ ಮಾಡಿದ ತೆರಿಗೆ
1	2	3	4	5

ಹೂಡುವಳಿಗಳ/ ಹೂಡುವಳಿ ಸೇವೆಗಳ ವಿವರಣೆ ಮತ್ತು ಪ್ರಮಾಣದ ವಿವರಗಳುಹಾಗೂಸರಕು ಅಥವಾ ಸೇವೆಗಳ ಸ್ವೀಕೃತಿ ದಿನಾಂಕದ (ಲೆಕ್ಕಪತ್ರ ಪುಸ್ತಕಗಳಲ್ಲಿ ನಮೂದಿಸಿದಂತೆ) ಕೂಡ ಅಗತ್ಯವಾಗಿರುತ್ತದೆ.

8. ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಕೇಂದ್ರೀಕೃತ ನೋಂದಣಿಯನ್ನು ಹೊಂದಿರುವ ನೋಂದಾಯಿತ ವ್ಯಕ್ತಿಗಾಗಿ ಸೆನ್‌ವ್ಯಾಟ್ ಜಮೆಯ ವರ್ಗಾವಣೆಯ ವಿವರಗಳು (ಪ್ರಕರಣ 140 (8))

ಕ್ರಮ ಸಂಖ್ಯೆ	ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ನೋಂದಣಿ ಸಂಖ್ಯೆ (ಕೇಂದ್ರೀಕೃತ)	ಅಸ್ತಿತ್ವದಲ್ಲಿರುವ ಕಾನೂನಿಗೆ ಸಂಬಂಧಿಸಿದಂತೆ ಕೊನೆಯ ರಿಟರ್ನ್ ಸಲ್ಲಿಸಿದ ತೆರಿಗೆಯ ಅವಧಿ	ಅಂಕಣ 3ರಲ್ಲಿ ನಿರ್ದಿಷ್ಟಪಡಿಸಿದ ರಿಟರ್ನ್ ಸಲ್ಲಿಸಿದ ದಿನಾಂಕ	ಸದರಿ ಕೊನೆಯ ರಿಟರ್ನ್‌ನಲ್ಲಿ ಮುಂದಕ್ಕೆ ಸಾಗಿಸಲಾದ ಅರ್ಹ ಸೆನ್‌ವ್ಯಾಟ್ ಜಮೆಯ ಬಾಕಿ ಮೊತ್ತ	ಕೇಂದ್ರ ತೆರಿಗೆಯ ಐಟಿಸಿಯನ್ನು ಸ್ವೀಕರಿಸುವವರ ಜಿಎಸ್‌ಟಿಐಎನ್ (ಒಂದೇ ಪ್ಯಾನ್)	ವಿತರಣಾ ದಸ್ತಾವೇಜು/ ಬೆಲೆಪಟ್ಟಿ		ವರ್ಗಾಯಿಸಲಾದ ಕೇಂದ್ರ ತೆರಿಗೆಯ ಐಟಿಸಿ
						ಸಂಖ್ಯೆ	ದಿನಾಂಕ	
1	2	3	4	5	6	7	8	9
	ಒಟ್ಟು							

9. ಪ್ರಕರಣ 141 ಕ್ಕೆ ಸಂಬಂಧಿಸಿದಂತೆ ಮಜೂರಿ ಕೆಲಸಗಾರನಿಗೆ ರವಾನಿಸಿದ ಮತ್ತು ಆತನ ದಾಸ್ತಾನಿನಲ್ಲಿ ಪ್ರಧಾನಕರ್ತನ ಪರವಾಗಿ ಹೊಂದಿರುವ ಸರಕುಗಳ ವಿವರ

(ಎ) ಪ್ರಧಾನಕರ್ತನಂತೆಪ್ರಕರಣ 141 ರಡಿಯಲ್ಲಿ ಮಜೂರಿ ಕೆಲಸಗಾರನಿಗೆಕಳುಹಿಸಿದ ಸರಕುಗಳ ವಿವರ

ಕ್ರಮ ಸಂಖ್ಯೆ	ಚಲನ್ ಸಂಖ್ಯೆ	ಚಲನ್ ದಿನಾಂಕ	ಸರಕುಗಳ ವಿಧ (ಹೂಡುವಳಿಗಳು/ ಅರೆಸಿದ್ಧರೂಪದ / ಸಿದ್ಧರೂಪದ)	ಮಜೂರಿ ಕೆಲಸಗಾರನಲ್ಲಿರುವ ಸರಕುಗಳ ವಿವರಗಳು				
				ಹೆಚ್.ಎಸ್.ಎನ್	ವಿವರ	ಘಟಕ	ಪ್ರಮಾಣ	ಮೌಲ್ಯ
1	2	3	4	5	6	7	8	9
ಮಜೂರಿ ಕೆಲಸಗಾರನ ಜಿಎಸ್‌ಟಿಐಎನ್ ಸಂಖ್ಯೆ, ಲಭ್ಯವಿದ್ದಲ್ಲಿ								
	ಒಟ್ಟು							

(ಬಿ) ಪ್ರಕರಣ 141 ರಡಿಯಲ್ಲಿ ಮಜೂರಿ ಕೆಲಸಗಾರನಾಗಿ ಪ್ರಧಾನಕರ್ತನ ಪರವಾಗಿ ದಾಸ್ತಾನಿನಲ್ಲಿ ಹೊಂದಿರುವ ಸರಕುಗಳ ವಿವರ

ಕ್ರಮ ಸಂಖ್ಯೆ	ಚಲನ್ ಸಂಖ್ಯೆ	ಚಲನ್ ದಿನಾಂಕ	ಸರಕುಗಳ ವಿಧ (ಹೂಡುವಳಿಗಳು/ ಅರೆಸಿದ್ಧರೂಪದ/ ಸಿದ್ಧರೂಪದ)	ಮಜೂರಿ ಕೆಲಸಗಾರನಲ್ಲಿರುವ ಸರಕುಗಳ ವಿವರಗಳು				
				ಹೆಚ್.ಎಸ್.ಎನ್	ವಿವರ	ಘಟಕ	ಪ್ರಮಾಣ	ಮೌಲ್ಯ
1	2	3	4	5	6	7	8	9
ಉತ್ಪಾದಕನ ಜಿ.ಎಸ್.ಟಿ.ಐ.ಎನ್								
	ಒಟ್ಟು							

10. ಎಸ್‌ಜಿಎಸ್‌ಟಿ ಅಧಿನಿಯಮದ ಪ್ರಕರಣ 142 (14)ರ ಅಡಿಯಲ್ಲಿ ಪ್ರಧಾನಕರ್ತನ ಪರವಾಗಿ ಏಜೆಂಟನಾಗಿ ದಾಸ್ತಾನಿನಲ್ಲಿ ಹೊಂದಿರುವ ಸರಕುಗಳ ವಿವರಗಳು

(ಎ) ಪ್ರಧಾನಕರ್ತನ ಪರವಾಗಿ ಏಜೆಂಟನಾಗಿ ಹೊಂದಿರುವ ಸರಕುಗಳ ವಿವರಗಳು

ಕ್ರಮ ಸಂಖ್ಯೆ	ಪ್ರಧಾನಕರ್ತನ ಜಿಎಸ್‌ಟಿಐಎನ್	ಏಜೆಂಟನಲ್ಲಿರುವ ಸರಕುಗಳ ವಿವರಗಳು				
		ವಿವರ	ಘಟಕ	ಪ್ರಮಾಣ	ಮೌಲ್ಯ	ತೆಗೆದುಕೊಳ್ಳಬೇಕಾದ ಹೂಡುವಳಿ ತೆರಿಗೆ
1	2	3	4	5	6	7

(ಬಿ) ಏಜೆಂಟನು ಹೊಂದಿರುವ ಸರಕುಗಳ ವಿವರಗಳು

ಕ್ರಮ ಸಂಖ್ಯೆ	ಪ್ರಧಾನಕರ್ತನ ಜಿಎಸ್‌ಟಿಐಎನ್	ಏಜೆಂಟನಲ್ಲಿರುವ ಸರಕುಗಳ ವಿವರಗಳು				
		ವಿವರ	ಘಟಕ	ಪ್ರಮಾಣ	ಮೌಲ್ಯ	ತೆಗೆದುಕೊಳ್ಳಬೇಕಾದ ಹೂಡುವಳಿ ತೆರಿಗೆ
1	2	3	4	5	6	7

11. ಪ್ರಕರಣ 142(11)(ಸಿ)ರ ನಿಬಂಧನೆಗಳ ಅನುಸಾರ ಉಪಯೋಗಿಸಿದ ಜಮೆಯ ವಿವರಗಳು

ಕ್ರಮ ಸಂಖ್ಯೆ	ವ್ಯಾಟ್‌ನ ನೋಂದಣಿ ಸಂಖ್ಯೆ	ಸೇವಾ ತೆರಿಗೆ ನೋಂದಣಿ ಸಂಖ್ಯೆ	ಬೆಲೆಪಟ್ಟಿ/ ದಸ್ತಾವೇಜು ಸಂಖ್ಯೆ	ಬೆಲೆಪಟ್ಟಿ/ ದಸ್ತಾವೇಜು ದಿನಾಂಕ	ಸಂದಾಯ ಮಾಡಿದ ತೆರಿಗೆ	ಎಸ್.ಜಿ.ಎಸ್.ಟಿ ಜಮೆಯಾಗಿ ತೆಗೆದುಕೊಂಡ ವ್ಯಾಟ್‌ನ ಸಂದಾಯ ಅಥವಾ ಕೇಂದ್ರ ತೆರಿಗೆ ಜಮೆಯಾಗಿ ಸೇವಾ ತೆರಿಗೆಯ ಸಂದಾಯ
1	2	3	4	5	6	7
			ಒಟ್ಟು			

12. ಗೊತ್ತು ಪಡಿಸಲಾದ ದಿನಕ್ಕಿಂತ ಆರು ತಿಂಗಳ ಮುಂಚಿತವಾಗಿ ಅನುಮೋದನೆಯ ಆಧಾರದಲ್ಲಿ ಕಳುಹಿಸಲಾಗಿರುವ ಸರಕುಗಳ ವಿವರ (ಪ್ರಕರಣ 142 (12))

ಕ್ರಮ	ದಸ್ತಾವೇಜಿನ	ದಸ್ತಾವೇಜಿನ	ಸ್ವೀಕರಿಸುವವ	ಸ್ವೀಕರಿಸುವವನ	ಅನುಮೋದನೆಯ ಆಧಾರದಲ್ಲಿ ಕಳುಹಿಸಿದ ಸರಕುಗಳ ವಿವರ

ಸಂಖ್ಯೆ	ಸಂಖ್ಯೆ	ದಿನಾಂಕ	ನ ಜಿಎಸ್‌ಟಿಐಎನ್ ಸಂಖ್ಯೆ (ಅನ್ವಯವಾಗುತ್ತಿದ್ದಲ್ಲಿ)	ಹೆಸರು ಮತ್ತು ವಿಳಾಸ	ಹೆಚ್.ಎಸ್.ಎನ್	ವಿವರಣೆ	ಘಟಕ	ಪ್ರಮಾಣ	ಮೌಲ್ಯ
1	2	3	4	5	6	7	8	9	10
	ಒಟ್ಟು								

ಪರಿಶೀಲನೆ (ಪ್ರಾಧಿಕೃತ ಸಹಿದಾರನಿಂದ)

ಮೇಲೆ ನೀಡಲಾದ ಮಾಹಿತಿಯು ನನ್ನ ತಿಳುವಳಿಕೆಗೆ ಮತ್ತು ನಂಬಿಕೆಯ ಪ್ರಕಾರ ಸತ್ಯವಾಗಿರುತ್ತದೆ ಮತ್ತು ಸರಿಯಾಗಿರುತ್ತದೆ ಹಾಗೂ ಯಾವುದೇ ಮಾಹಿತಿಯನ್ನು ಇದರಿಂದ ಮರೆಮಾಚಿರುವುದಿಲ್ಲ ಎಂದು ನಾನು ಈ ಮೂಲಕ ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

ಸ್ಥಳ: ಸಹಿ

ದಿನಾಂಕ: ಪ್ರಾಧಿಕೃತ ಸಹಿದಾರನ ಹೆಸರು

ಪದನಾಮ/ ಸ್ಥಾನ

ನಮೂನೆ ಜಿಎಸ್‌ಟಿ ಟಿಆರ್‌ಎಎನ್‌–2

(ನಿಯಮ 117(4) ನೋಡಿ)

1. ಜಿಎಸ್‌ಟಿಐಎನ್:
2. ತೆರಿಗೆದಾಯಕ ವ್ಯಕ್ತಿಯ ಹೆಸರು :
3. ತೆರಿಗೆ ಅವಧಿ: .ತಿಂಗಳು ವರ್ಷ
4. ವಿದ್ಯುನ್ಮಾನ ಜಮೆ ಖಾತೆಗೆ ಮುಂದಕ್ಕೆ ಸಾಗಿಸಲಾದ ಅವುಗಳ ಮೇಲೆ ತೆರಿಗೆಯನ್ನು ಸಂದಾಯ ಮಾಡಿರುವುದರ ಪುರಾವೆಯಾಗಿ ಯಾವುದೇ ಬೆಲೆಪಟ್ಟಿ/ದಸ್ತಾವೇಜನ್ನು ಹೊಂದಿಲ್ಲದಿರುವುದಕ್ಕೆ ಸಂಬಂಧಿಸಿದಂತೆ ಗೊತ್ತುಪಡಿಸಲಾದ ದಿನದಂದು ದಾಸ್ತಾನಿನಲ್ಲಿ ಹೊಂದಿರುವ ಹೂಡುವಳಿಗಳ ವಿವರಗಳು.

ತೆರಿಗೆ ಅವಧಿಗಾಗಿ ಆರಂಭಿಕ ದಾಸ್ತಾನು			ಮಾಡಲಾದ ಹೊರಮುಖ ಪೂರೈಕೆ					ಅಂತಿಮ ದಾಸ್ತಾನು
ಹೆಚ್‌ಎಸ್‌ಎನ್ (6 ಅಂಕೆ ಲೆವೆಲ್)	ಘಟಕ	ಪ್ರಮಾಣ	ಪ್ರಮಾಣ	ಮೌಲ್ಯ	ಕೇಂದ್ರತೆರಿಗೆ	ಏಕೀಕೃತ ತೆರಿಗೆ	ಅನುಮತಿಸಲಾದ ಐಟಿಸಿ	ಪ್ರಮಾಣ
1	2	3	4	5	6	7	8	9

5. ಮೇಲಿನ ಕ್ರಮ ಸಂ.4 ರಲ್ಲಿ ನಮೂದಿಸಿದ ದಾಸ್ತಾನಿನ ಮೇಲಿನ ರಾಜ್ಯ ತೆರಿಗೆಯ ಜಮೆ (**ಏಕ ಬಿಂದುವಿನಲ್ಲಿ ವ್ಯಾಟ್ ಹೊಂದಿರುವ ರಾಜ್ಯಗಳಲ್ಲಿ ಮಾತ್ರವಿರುತ್ತದೆ**)

ತೆರಿಗೆ ಅವಧಿಗಾಗಿ ಆರಂಭಿಕ ದಾಸ್ತಾನು			ಮಾಡಲಾದ ಹೊರಮುಖ ಪೂರೈಕೆ					ಅಂತಿಮ ದಾಸ್ತಾನು
ಹೆಚ್‌ಎಸ್‌ಎನ್ (6 ಅಂಕೆ ಲೆವೆಲ್)	ಘಟಕ	ಪ್ರಮಾಣ	ಪ್ರಮಾಣ	ಮೌಲ್ಯ	ಕೇಂದ್ರತೆರಿಗೆ	ಏಕೀಕೃತ ತೆರಿಗೆ	ಅನುಮತಿಸಲಾದ ಐಟಿಸಿ	ಪ್ರಮಾಣ
1	2	3	4	5	6	7	8	9

ಪರಿಶೀಲನೆ (ಪ್ರಾಧಿಕೃತ ಸಹಿದಾರನಿಂದ)

ಮೇಲೆ ನೀಡಲಾದ ಮಾಹಿತಿಯು ನನ್ನ ತಿಳುವಳಿಕೆಗೆ ಮತ್ತು ನಂಬಿಕೆಯ ಪ್ರಕಾರ ಸತ್ಯವಾಗಿರುತ್ತದೆ ಮತ್ತು ಸರಿಯಾಗಿರುತ್ತದೆ ಹಾಗೂ ಯಾವುದೇ ಮಾಹಿತಿಯನ್ನು ಇದರಿಂದ ಮರೆಮಾಚಿರುವುದಿಲ್ಲ ಎಂದು ನಾನು ಈ ಮೂಲಕ ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

ಸ್ಥಳ: ಸಹಿ

ದಿನಾಂಕ: ಪ್ರಾಧಿಕೃತ ಸಹಿದಾರನ ಹೆಸರು

ಪದನಾಮ/ ಸ್ಥಾನ

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ತಿದ್ದೋಲೆ
ಸಂಖ್ಯೆ: ಆಇ 47 ಸಿ.ಎಸ್.ಎಲ್ 2017, ಬೆಂಗಳೂರು ದಿನಾಂಕ 31.10.2018

(1) ಕರ್ನಾಟಕ ವಿಶೇಷ ರಾಜ್ಯಪತ್ರ ಭಾಗ–IVಎ, ಸಂ. 455, ದಿನಾಂಕ 15ನೇ ಮಾರ್ಚ್, 2018ರಲ್ಲಿ ಪ್ರಕಟವಾದ ಅಧಿಸೂಚನೆ ಸಂ. ಆಇ 47 ಸಿ.ಎಸ್.ಎಲ್ 2017 ದಿನಾಂಕ 15ನೇ ಮಾರ್ಚ್, 2018ನ್ನು ಈ ಕೆಳಕಂಡ ತಿದ್ದುಪಡಿಗಳೊಂದಿಗೆ ಓದಿಕೊಳ್ಳತಕ್ಕದ್ದು, ಅಂದರೆ:–

ಕ್ರ.ಸಂ.	ಪುಟ ಸಂ.	ಸಾಲು ಸಂ.	ಗಾಗಿ	ಓದತಕ್ಕದ್ದು
1	7	46	ಅಂಕಣ ಎ.6	ಅಂಕಣ ಎ.8

(2) ಕರ್ನಾಟಕ ವಿಶೇಷ ರಾಜ್ಯಪತ್ರ ಭಾಗ–IVಎ, ಸಂ. 562, ದಿನಾಂಕ 5ನೇ ಏಪ್ರಿಲ್, 2018ರಲ್ಲಿ ಪ್ರಕಟವಾದ ಅಧಿಸೂಚನೆ ಸಂ. ಆಇ 47 ಸಿ.ಎಸ್.ಎಲ್ 2017 ದಿನಾಂಕ 5ನೇ ಏಪ್ರಿಲ್, 2018ನ್ನು ಈ ಕೆಳಕಂಡ ತಿದ್ದುಪಡಿಗಳೊಂದಿಗೆ ಓದಿಕೊಳ್ಳತಕ್ಕದ್ದು, ಅಂದರೆ:–

ಕ್ರ.ಸಂ.	ಪುಟ ಸಂ.	ಸಾಲು ಸಂ.	ಗಾಗಿ	ಓದತಕ್ಕದ್ದು
1	2	17	ಎರಡು ಸ್ಥಳಗಳಲ್ಲಿ ಇರುವ "ನಿಯಮ 138"	"ನಿಯಮ 138ಡಿ"

(3) ಕರ್ನಾಟಕ ವಿಶೇಷ ರಾಜ್ಯಪತ್ರ ಭಾಗ–IVಎ, ಸಂ. 1346, ದಿನಾಂಕ 17ನೇ ಸೆಪ್ಟಂಬರ್, 2018ರಲ್ಲಿ ಪ್ರಕಟವಾದ ಅಧಿಸೂಚನೆ ಸಂ. ಆಇ 47 ಸಿ.ಎಸ್.ಎಲ್ 2017 ದಿನಾಂಕ 17ನೇ ಸೆಪ್ಟಂಬರ್, 2018ನ್ನು ಈ ಕೆಳಕಂಡ ತಿದ್ದುಪಡಿಗಳೊಂದಿಗೆ ಓದಿಕೊಳ್ಳತಕ್ಕದ್ದು, ಅಂದರೆ:–

ಕ್ರ.ಸಂ.	ಪುಟ ಸಂ.	ಸಾಲು ಸಂ.	ಗಾಗಿ	ಓದತಕ್ಕದ್ದು
1	2	38	ಉಪನಿಯಮ (4)ರಲ್ಲಿ, ಖಂಡ (ಬಿ)ಯಲ್ಲಿ, ಉಪಖಂಡ (iii)	ಉಪನಿಯಮ (3)ರಲ್ಲಿ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

ಕೆ. ಎಸ್. ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ವಾ.ತೆ–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ತಿದ್ದೋಲೆ

ಸಂಖ್ಯೆ: ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ 28.12.2017

1. ಕರ್ನಾಟಕ ವಿಶೇಷ ರಾಜ್ಯಪತ್ರ ಭಾಗ–IVಎ, ಸಂ. 611, ದಿನಾಂಕ 29ನೇ ಜೂನ್ 2017ರಲ್ಲಿ ಪ್ರಕಟವಾದ ಅಧಿಸೂಚನೆ (4/2017) ಸಂ. ಆಇ 47 ಸಿಎಸ್ಎಲ್ 2017ರಲ್ಲಿ,–

(1) ನಿಯಮ 26ರಲ್ಲಿ, ಉಪನಿಯಮ (1)ರಲ್ಲಿ, "ಮಂಡಳಿ" ಪದವನ್ನು "ಆಯುಕ್ತರು" ಪದವನ್ನಾಗಿ ಓದಲ್ಪಡತಕ್ಕದ್ದು;

(2) ನಿಯಮ 55ರಲ್ಲಿ, ಉಪನಿಯಮ (1)ರಲ್ಲಿ, ಖಂಡ (ಡಿ)ಯಲ್ಲಿ, "ಮಂಡಳಿ" ಪದವನ್ನು "ಆಯುಕ್ತರು" ಪದವನ್ನಾಗಿ ಓದಲ್ಪಡತಕ್ಕದ್ದು;

(3) ನಿಯಮ 83ರಲ್ಲಿ, ಉಪನಿಯಮ (3)ರ ಎರಡನೆಯ ಪರಂತುಕದಲ್ಲಿ, "(ಸಿ)"ಅಕ್ಷರ ಮತ್ತು ಆವರಣಗಳನ್ನು, "(ಬಿ)"ಅಕ್ಷರ ಮತ್ತು ಆವರಣಗಳನ್ನಾಗಿ ಓದಲ್ಪಡತಕ್ಕದ್ದು.

2. ಕರ್ನಾಟಕ ವಿಶೇಷ ರಾಜ್ಯಪತ್ರ ಭಾಗ–IVಎ, ಸಂ. 849, ದಿನಾಂಕ 30–08–2017ರಲ್ಲಿ ಪ್ರಕಟವಾದ ಅಧಿಸೂಚನೆ (4–ಡಿ/2017) ಸಂ. ಆಇ 47 ಸಿಎಸ್ಎಲ್ 2017, ದಿನಾಂಕ 30–08–2017ರಲ್ಲಿ, ಖಂಡಿಕೆ 9ರಲ್ಲಿ, ನಿಯಮ 138ರಲ್ಲಿ, ಉಪನಿಯಮ (14)ರಲ್ಲಿ, ಖಂಡ (ಡಿ)ಯಲ್ಲಿ, "ಮೀರುವ ಮೌಲ್ಯಕ್ಕಾಗಿ" ಪದಗಳನ್ನು "ಮೀರದ ಮೌಲ್ಯಕ್ಕಾಗಿ" ಪದಗಳನ್ನಾಗಿ ಓದಲ್ಪಡತಕ್ಕದ್ದು.

3. ಕರ್ನಾಟಕ ವಿಶೇಷ ರಾಜ್ಯಪತ್ರ ಭಾಗ–IVಎ, ಸಂ. 967, ದಿನಾಂಕ 17–10–2017ರಲ್ಲಿ ಪ್ರಕಟವಾದ ಅಧಿಸೂಚನೆ (4–ಎಫ್/2017) ಸಂ. ಆಇ 47 ಸಿಎಸ್ಎಲ್ 2017, ದಿನಾಂಕ 17–10–2017ರಲ್ಲಿ, ಖಂಡಿಕೆ 2ರಲ್ಲಿ, ನಿಯಮ 24ರಲ್ಲಿ, "ಉಪನಿಯಮ (4)ರಲ್ಲಿ" ಪದಗಳು, ಸಂಖ್ಯೆ, ಆವರಣಗಳನ್ನು "ಉಪನಿಯಮ (5)ರಲ್ಲಿ" ಪದಗಳು, ಸಂಖ್ಯೆ, ಆವರಣಗಳನ್ನಾಗಿ ಓದಲ್ಪಡತಕ್ಕದ್ದು.

4. ಕರ್ನಾಟಕ ವಿಶೇಷ ರಾಜ್ಯಪತ್ರ ಭಾಗ–IVಎ, ಸಂ. 1219, ದಿನಾಂಕ 13–12–2017ರಲ್ಲಿ ಪ್ರಕಟವಾದ ಅಧಿಸೂಚನೆ (4–ಐ/2017) ಸಂ. ಆಇ 47 ಸಿಎಸ್ಎಲ್ 2017, ದಿನಾಂಕ 13–12–2017ರಲ್ಲಿ,–

(1) ಖಂಡಿಕೆ 2ರಲ್ಲಿ, ನಿಯಮ 24ರಲ್ಲಿ, "ಉಪನಿಯಮ (4)ರಲ್ಲಿ" ಪದಗಳು, ಸಂಖ್ಯೆ, ಆವರಣಗಳನ್ನು "ಉಪನಿಯಮ (5)ರಲ್ಲಿ" ಪದಗಳು, ಸಂಖ್ಯೆ, ಆವರಣಗಳನ್ನಾಗಿ ಓದಲ್ಪಡತಕ್ಕದ್ದು.

(2) ಖಂಡಿಕೆ 3ರಲ್ಲಿ, ನಿಯಮ 45ರಲ್ಲಿ, ಪರಂತುಕದಲ್ಲಿ, "ರಾಜ್ಯ" ಪದವನ್ನು "ಕೇಂದ್ರ" ಪದವನ್ನಾಗಿ ಓದಲ್ಪಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

ಕೆ. ಎಸ್. ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ವಾ.ತೆ–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ತಿದ್ದೋಲೆ
ಸಂಖ್ಯೆ: ಆಇ 47 ಸಿ.ಎಸ್.ಎಲ್ 2017, ಬೆಂಗಳೂರು ದಿನಾಂಕ 17.11.2017

ಕರ್ನಾಟಕ ವಿಶೇಷ ರಾಜ್ಯಪತ್ರ ಭಾಗ–IVಎ, ಸಂ. 611, ದಿನಾಂಕ 29ನೇ ಜೂನ್ 2017ರಲ್ಲಿ ಪ್ರಕಟವಾದ ಅಧಿಸೂಚನೆ (4/2017) ಸಂ. ಆಇ 47 ಸಿ.ಎಸ್.ಎಲ್ 2017ರಲ್ಲಿ,–

(1) ನಿಯಮ 55ರಲ್ಲಿ, ಉಪನಿಯಮ (1)ರಲ್ಲಿ, ಖಂಡ (ಡಿ)ಯಲ್ಲಿ, "ಮಂಡಳಿ" ಪದವನ್ನು "ಆಯುಕ್ತರು" ಪದವನ್ನಾಗಿ ಓದಲ್ಪಡತಕ್ಕದ್ದು,

(2) ನಿಯಮ 83ರಲ್ಲಿ, ಉಪನಿಯಮ (3)ರ ಎರಡನೆಯ ಪರಂತುಕದಲ್ಲಿ, "ಉಪಪ್ರಕರಣ (1)ರ ಖಂಡ (ಸಿ)" ಪದಗಳು, ಅಕ್ಷರಗಳು, ಸಂಖ್ಯೆ ಮತ್ತು ಆವರಣಗಳನ್ನು, "ಉಪನಿಯಮ (1)ರ ಖಂಡ (ಬಿ)" ಪದಗಳು, ಅಕ್ಷರಗಳು, ಸಂಖ್ಯೆ ಮತ್ತು ಆವರಣಗಳನ್ನಾಗಿ ಓದಲ್ಪಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

ಕೆ. ಎಸ್. ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ವಾ.ತೆ–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಎ/2017)
ಸಂಖ್ಯೆ. ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ: 05.07.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 164ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು ಕರ್ನಾಟಕ ವಿಶೇಷ ರಾಜ್ಯಪತ್ರಿಕೆ ಭಾಗ–IVA ಸಂಖ್ಯೆ 611 ದಿನಾಂಕ 29ನೇ ಜೂನ್ 2017ರಲ್ಲಿ ಅಧಿಸೂಚನೆ ಆಇ 47 ಸಿಎಸ್‌ಎಲ್ 2017 (ಸಂ.4/2017) ದಿನಾಂಕ 29.06.2017 ಪ್ರಕಟವಾದ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳನ್ನು ತಿದ್ದುಪಡಿ ಮಾಡಲು ಈ ಮೂಲಕ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಅಂದರೆ:–

ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ.– (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ನಿಯಮಗಳು, 2017 ಎಂದು ಕರೆಯಬಹುದು.

(2) ಅವು 2017ರ ಜುಲೈ 1ನೇ ದಿನದಿಂದ ಜಾರಿಗೆ ಬಂದಿವೆ ಎಂದು ಪರಿಭಾವಿಸತಕ್ಕದ್ದು.

2. ನಿಯಮ 44ರ ತಿದ್ದುಪಡಿ: – ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು (ಸದರಿ ನಿಯಮಗಳು ಎಂದು ಇನ್ನು ಮುಂದೆ ಉಲ್ಲೇಖಿಸಲಾಗಿದೆ) ಇದರ ನಿಯಮ 44 ರಲ್ಲಿ,

(ಎ) ಉಪ–ನಿಯಮ (2)ರಲ್ಲಿ, "ಏಕೀಕೃತ ತೆರಿಗೆ ಮತ್ತು ಕೇಂದ್ರ ತೆರಿಗೆ" ಪದಗಳಿಗಾಗಿ, "ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಕೇಂದ್ರಾಡಳಿತ ಪ್ರದೇಶ ತೆರಿಗೆ ಮತ್ತು ಏಕೀಕೃತ ತೆರಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) ಉಪ–ನಿಯಮ (6)ರಲ್ಲಿ , "ಐಜಿಎಸ್‌ಟಿ ಮತ್ತು ಸಿಜಿಎಸ್‌ಟಿ" ಪದಗಳಿಗಾಗಿ, "ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಕೇಂದ್ರಾಡಳಿತ ಪ್ರದೇಶ ತೆರಿಗೆ ಮತ್ತು ಏಕೀಕೃತ ತೆರಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

3. ನಿಯಮ 96ರ ತಿದ್ದುಪಡಿ: – ಸದರಿ ನಿಯಮಗಳ ನಿಯಮ 96ರ ಉಪ–ನಿಯಮ (1)ರ ಖಂಡ (ಬಿ) ಯಲ್ಲಿ ಮತ್ತು ಉಪ–ನಿಯಮ (3)ರಲ್ಲಿ, **"ನಮೂನೆ ಜಿಎಸ್‌ಟಿಆರ್–3"** ಪದಗಳು, ಅಕ್ಷರಗಳು ಮತ್ತು ಸಂಖ್ಯೆಯ ನಂತರ **"**ಅಥವಾ ಸಂದರ್ಭಾನುಸಾರವಾಗಿ, **ನಮೂನೆ ಜಿಎಸ್‌ಟಿಆರ್–3ಬಿ"** ಪದಗಳು, ಅಕ್ಷರಗಳು ಮತ್ತು ಸಂಖ್ಯೆಯನ್ನು ಸೇರಿಸತಕ್ಕದ್ದು;

4. ಹೊಸ ನಿಯಮ 96–ಎ ಸೇರ್ಪಡೆ: – ಸದರಿ ನಿಯಮಗಳ ನಿಯಮ 96ರ ನಂತರ, ಈ ಕೆಳಗಿನದನ್ನು ಸೇರಿಸತಕ್ಕದ್ದು, ಅಂದರೆ:

"96ಎ. ಬಾಂಡ್ ಅಥವಾ ವಾಗ್ದಾನ ಪತ್ರದ ಅಡಿಯಲ್ಲಿ ಸರಕು ಅಥವಾ ಸೇವೆಗಳ ರಫ್ತುವಿನ ಮೇಲೆ ಸಂದಾಯ ಮಾಡಿದ ಏಕೀಕೃತ ತೆರಿಗೆಯ ಮರುಪಾವತಿ.–(1) ಏಕೀಕೃತ ತೆರಿಗೆಯನ್ನು ಸಂದಾಯ ಮಾಡದೆ ಸರಕು ಅಥವಾ ಸೇವೆಗಳ ರಫ್ತುವಿನ ಪೂರೈಕೆಯ ಆಯ್ಕೆಯನ್ನು ಉಪಯೋಗಿಸುವ ಯಾವೊಬ್ಬ ನೋಂದಾಯಿತ ವ್ಯಕ್ತಿಯು, ರಫ್ತಿಗೆ ಮುನ್ನ, ಕ್ಷೇತ್ರ ವ್ಯಾಪ್ತಿಯ ಆಯುಕ್ತರಿಗೆ, ಪ್ರಕರಣ 50ರ ಉಪಪ್ರಕರಣ (1)ರಲ್ಲಿ ನಿರ್ದಿಷ್ಟಪಡಿಸಿದ ಬಡ್ಡಿಯ ಜೊತೆಯಲ್ಲಿ ಬಾಕಿಯಿರುವ ತೆರಿಗೆಯನ್ನು ಕೆಳಕಂಡ ಅವಧಿಯ ಒಳಗಾಗಿ ಸಂದಾಯ ಮಾಡುತ್ತೇನೆ ಎಂದು ತನ್ನನ್ನು ಬದ್ಧಗೊಳಿಸಿಕೊಂಡು, ಒಂದು ಬಾಂಡ್ ಅಥವಾ ವಾಗ್ದಾನ ಪತ್ರವನ್ನು **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–11**ರಲ್ಲಿ ಒದಗಿಸತಕ್ಕದ್ದು–

(ಎ) ಸರಕುಗಳು ಭಾರತದ ಹೊರಗಡೆ ರಫ್ತಾಗಿದ್ದರೆ, ರಫ್ತಿಗಾಗಿ ಬೆಲೆಪಟ್ಟಿಯನ್ನು ನೀಡಲಾದ ದಿನಾಂಕದಿಂದ ಮೂರು ತಿಂಗಳು ಮುಗಿದ ನಂತರದ ಹದಿನೈದು ದಿನಗಳು; ಅಥವಾ

(ಬಿ) ರಫ್ತುದಾರನಿಂದ ಪರಿವರ್ತನೀಯ ವಿದೇಶಿ ವಿನಿಮಯದಲ್ಲಿ ಅಂಥ ಸೇವೆಗಳ ಸಂದಾಯವನ್ನು ಸ್ವೀಕರಿಸಿಲ್ಲದಿದ್ದರೆ, ರಫ್ತಿಗಾಗಿ ಬೆಲೆಪಟ್ಟಿಯನ್ನು ನೀಡಲಾದ ದಿನಾಂಕದಿಂದ ಒಂದು ವರ್ಷ ಅಥವಾ ಆಯುಕ್ತರಿಂದ ಅನುಮತಿಸಬಹುದಾದ ಅಂಥ ಮುಂದಿನ ಅವಧಿಯು ಮುಗಿದ ನಂತರದ ಹದಿನೈದು ದಿನಗಳು.

(2) ಸಾಮಾನ್ಯ ಪೋರ್ಟಲ್‌ನಲ್ಲಿ ಒದಗಿಸಿದ ನಮೂನೆ ಜಿಎಸ್‌ಟಿಆರ್–1ರಲ್ಲಿ ಒಳಗೊಂಡಿರುವ ರಫ್ತು ಬೆಲೆಪಟ್ಟಿಯ ವಿವರಗಳನ್ನು, ವಿದ್ಯುನ್ಮಾನ ರೀತಿಯಲ್ಲಿ ಸೀಮಾಸುಂಕಗಳ ಇಲಾಖೆಯಿಂದ ಹೆಸರಿಸಿದ ವ್ಯವಸ್ಥೆಗೆ ಪ್ರಸರಣ ಮಾಡತಕ್ಕದ್ದು ಮತ್ತು ಸದರಿ ಬೆಲೆಪಟ್ಟಿಗಳಿಂದ ವ್ಯಾಪ್ತವಾದ ಸರಕುಗಳನ್ನು ಭಾರತದ ಹೊರಗಡೆ ರಫ್ತು ಮಾಡಲಾಗಿದೆ ಎನ್ನುವ ಒಂದು ಖಾತರಿಯನ್ನು ಸದರಿ ಸಿಸ್ಟಂನಿಂದ ಸಾಮಾನ್ಯ ಪೋರ್ಟಲ್‌ಗೆ ವಿದ್ಯುನ್ಮಾನ ರೀತಿಯಲ್ಲಿ ಪ್ರಸರಣಗೊಳಿಸತಕ್ಕದ್ದು.

(3) ಉಪನಿಯಮ (1)ರಲ್ಲಿ ನಿರ್ದಿಷ್ಟಪಡಿಸಿದ ಸಮಯದ ಒಳಗಾಗಿ ಸರಕುಗಳು ರಫ್ತಾಗದಿದ್ದಲ್ಲಿ ಮತ್ತು ಸದರಿ ಉಪನಿಯಮದಲ್ಲಿ ನಮೂದಿಸಿದ ಮೊತ್ತವನ್ನು ನೋಂದಾಯಿತ ವ್ಯಕ್ತಿಯು ಸಂದಾಯ ಮಾಡಲು ವಿಫಲನಾದಲ್ಲಿ, ಬಾಂಡ್ ಅಥವಾ ವಾಗ್ದಾನ ಪತ್ರದ ಅಡಿಯಲ್ಲಿ ಅನುಮತಿಸಲಾದ ರಫ್ತನ್ನು ತತ್‌ಕ್ಷಣದಲ್ಲಿ ಹಿಂಪಡೆಯತಕ್ಕದ್ದು ಮತ್ತು ಸದರಿ ಮೊತ್ತವನ್ನು ನೋಂದಾಯಿತ ವ್ಯಕ್ತಿಯಿಂದ ಪ್ರಕರಣ 79ರ ಉಪಬಂಧಗಳಿಗೆ ಅನುಸಾರವಾಗಿ ವಸೂಲಾತಿ ಮಾಡತಕ್ಕದ್ದು.

(4) ಬಾಂಡ್ ಅಥವಾ ವಾಗ್ದಾನ ಪತ್ರದ ಅಡಿಯಲ್ಲಿ ಅನುಮತಿಸಲಾದ, ಉಪನಿಯಮ (3) ನಿಬಂಧನೆಗಳಿಗೆ ಅನುಸಾರವಾಗಿ ಹಿಂಪಡೆಯಲಾದ ರಫ್ತನ್ನು, ನೋಂದಾಯಿತ ವ್ಯಕ್ತಿಯು ಬಾಕಿ ಮೊತ್ತವನ್ನು ಸಂದಾಯ ಮಾಡಿದಾಗ ಕೂಡಲೇ ಪೂರ್ವ ಸ್ಥಿತಿಗೆ ತರತಕ್ಕದ್ದು.

(5) ಮಂಡಳಿಯು, ಅಧಿಸೂಚನೆಯ ಮೂಲಕ, ಬಾಂಡ್‌ನ ಜಾಗದಲ್ಲಿ ಒಂದು ವಾಗ್ದಾನ ಪತ್ರವನ್ನು ಯಾವ ಷರತ್ತುಗಳು ಮತ್ತು ಸುರಕ್ಷತೆಗಳ ಅಡಿಯಲ್ಲಿ ಒದಗಿಸಬಹುದು ಎಂದು ನಿರ್ದಿಷ್ಟಪಡಿಸಬಹುದು.

(6) ಉಪನಿಯಮ (1)ರ ಉಪಬಂಧಗಳು ವಿಶೇಷ ಆರ್ಥಿಕ ವಲಯ ಅಭಿವೃದ್ಧಿದಾರ ಅಥವಾ ವಿಶೇಷ ಆರ್ಥಿಕ ವಲಯ ಘಟಕಕ್ಕೆ ಏಕೀಕೃತ ತೆರಿಗೆಯನ್ನು ಸಂದಾಯ ಮಾಡದೆ, ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಶೂನ್ಯ–ದರದ ಪೂರೈಕೆಗೆ ಸಂಬಂಧಿಸಿದಂತೆ ಯಥೋಚಿತ ವ್ಯತ್ಯಾಸಗಳೊಡನೆ ಅನ್ವಯವಾಗತಕ್ಕದ್ದು.

5. ನಿಯಮ 119ರ ತಿದ್ದುಪಡಿ: – ಸದರಿ ನಿಯಮಗಳ ನಿಯಮ 119ರಲ್ಲಿ, –

(ಎ) ಶಿರೋನಾಮೆಯಲ್ಲಿ, "ಏಜೆಂಟ್" ಪದಕ್ಕಾಗಿ "ಮಜೂರಿ ಕೆಲಸಗಾರ ಅಥವಾ ಏಜೆಂಟನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) "ಪ್ರಕರಣ 141ರ" ಪದ, ಸಂಖ್ಯೆ ಮತ್ತು ಅಕ್ಷರದ ನಂತರ "ಅಥವಾ ಪ್ರಕರಣ 142ರ ಉಪ–ಪ್ರಕರಣ (14)ರ" ಪದಗಳು, ಸಂಖ್ಯೆ ಮತ್ತು ಅಕ್ಷರವನ್ನು ಸೇರಿಸತಕ್ಕದ್ದು.

6. ಹೊಸ ಅಧ್ಯಾಯ XVII, XVIII ಮತ್ತು XIXಗಳ ಸೇರ್ಪಡೆ. – ಸದರಿ ನಿಯಮಗಳ ನಿಯಮ 138ರ ನಂತರ ಈ ಕೆಳಗಿನದನ್ನು ಸೇರಿಸತಕ್ಕದ್ದು, ಅಂದರೆ:

"ಅಧ್ಯಾಯ–XVII

ತಪಾಸಣೆ, ಶೋಧನೆ, ಮತ್ತು ವಶಕ್ಕೆ ತೆಗೆದುಕೊಳ್ಳುವುದು

139. ತಪಾಸಣೆ, ಶೋಧನೆ, ಮತ್ತು ವಶಕ್ಕೆ ತೆಗೆದುಕೊಳ್ಳುವುದು.– (1) ಜಂಟಿ ಆಯುಕ್ತರ ಶ್ರೇಣಿಗಿಂತ ಕಡಿಮೆಯಿಲ್ಲದ ಯುಕ್ತ ಅಧಿಕಾರಿಯು, ಪ್ರಕರಣ 67ರ ಉಪಬಂಧಗಳಿಗೆ ಅನುಸಾರವಾಗಿ ತಪಾಸಣೆ, ಶೋಧನೆ, ಮತ್ತು ಸಂದರ್ಭಾನುಸಾರವಾಗಿ ವಶಕ್ಕೆ ತೆಗೆದುಕೊಳ್ಳುವ ಉದ್ದೇಶಗಳಿಗಾಗಿ, ಒಂದು ವ್ಯವಹಾರಸ್ಥಳವನ್ನು ಅಥವಾ ಯಾವುದೇ ಇತರ ಸ್ಥಳಕ್ಕೆ ಭೇಟಿ ನೀಡಬೇಕಾಗಿದೆ ಎಂದು ನಂಬಲು ಕಾರಣಗಳನ್ನು ಹೊಂದಿದ್ದಲ್ಲಿ, ತನಗೆ ಅಧೀನನಾದ ಯಾವುದೇ ಇತರ ಅಧಿಕಾರಿಯನ್ನು, ತಪಾಸಣೆ ಅಥವಾ ಶೋಧನೆಯನ್ನು ನಡೆಸುವುದಕ್ಕಾಗಿ ಅಥವಾ ಸಂದರ್ಭಾನುಸಾರವಾಗಿ ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಬಾಧ್ಯವಿರುವ ಸರಕುಗಳು, ದಸ್ತಾವೇಜುಗಳು, ಪುಸ್ತಕಗಳು ಅಥವಾ ವಸ್ತುಗಳನ್ನು ವಶಕ್ಕೆ ತೆಗೆದುಕೊಳ್ಳುವುದಕ್ಕಾಗಿ ಪ್ರಾಧಿಕೃತಗೊಳಿಸಿ, **ನಮೂನೆ ಜಿಎಸ್‌ಟಿ ಐಎನ್‌ಎಸ್–01ರಲ್ಲಿ** ಪ್ರಾಧಿಕೃತತೆಯನ್ನು ನೀಡತಕ್ಕದ್ದು.

(2) ಪ್ರಕರಣ 67ರ ಉಪಪ್ರಕರಣ (2)ರ ಅಡಿಯಲ್ಲಿ ಯಾವುದೇ ಸರಕುಗಳು, ದಸ್ತಾವೇಜುಗಳು, ಪುಸ್ತಕಗಳು ಅಥವಾ ವಸ್ತುಗಳು ವಶಕ್ಕೆ ತೆಗೆದುಕೊಳ್ಳುವುದಕ್ಕೆ ಬಾಧ್ಯವಿದ್ದಲ್ಲಿ, ಯುಕ್ತ ಅಧಿಕಾರಿಯು ಅಥವಾ ಒಬ್ಬ ಪ್ರಾಧಿಕೃತ ಅಧಿಕಾರಿಯು ವಶಕ್ಕೆ ತೆಗೆದುಕೊಳ್ಳುವ ಆದೇಶವನ್ನು **ನಮೂನೆ ಜಿಎಸ್‌ಟಿ ಐಎನ್‌ಎಸ್–02ರಲ್ಲಿ** ಮಾಡತಕ್ಕದ್ದು.

(3) ಯುಕ್ತ ಅಧಿಕಾರಿಯು ಅಥವಾ ಒಬ್ಬ ಪ್ರಾಧಿಕೃತ ಅಧಿಕಾರಿಯು, ಅಂಥ ಸರಕುಗಳು ಅಥವಾ ವಸ್ತುಗಳನ್ನು ಯಾರ ಅಭಿರಕ್ಷಣೆಯಿಂದ ವಶಕ್ಕೆ ತೆಗೆದುಕೊಳ್ಳಲಾಗಿದೆಯೋ ಅಂಥ ಸರಕುಗಳ ಮಾಲೀಕನಿಗೆ ಅಥವಾ ಅಭಿರಕ್ಷಕನಿಗೆ, ಅಂಥ ಸರಕುಗಳು ಅಥವಾ ವಸ್ತುಗಳ ಅಭಿರಕ್ಷಣೆಯನ್ನು ಸುರಕ್ಷಿತ ಸುಸ್ಥಿತಿಯಲ್ಲಿಡುವುದಕ್ಕಾಗಿ ವಹಿಸಿಸಕೊಡಬಹುದು ಮತ್ತು ಸದರಿ ವ್ಯಕ್ತಿಯು ಅಂಥ ಅಧಿಕಾರಿಯ ಪೂರ್ವಾನುಮತಿಯಿಲ್ಲದೆ ಸರಕುಗಳನ್ನು ತೆಗೆಯುವುದು, ಬಿಟ್ಟುಕೊಡುವುದು ಅಥವಾ ಅನ್ಯಥಾ ವ್ಯವಹರಿಸತಕ್ಕದ್ದಲ್ಲ.

(4) ಯಾವುದೇ ಅಂಥ ಸರಕುಗಳನ್ನು ವಶಕ್ಕೆ ತೆಗೆದುಕೊಳ್ಳುವುದಕ್ಕೆ ಕಾರ್ಯಸಾಧ್ಯವಾಗದಿದ್ದಲ್ಲಿ, ಯುಕ್ತ ಅಧಿಕಾರಿಯು ಅಥವಾ ಪ್ರಾದಿಕೃತ ಅಧಿಕಾರಿಯು, ಸರಕುಗಳ ಮಾಲೀಕನಿಗೆ ಅಥವಾ ಅಭಿರಕ್ಷಕನಿಗೆ, ಅಂಥ ಅಧಿಕಾರಿಯ ಪೂರ್ವಾನುಮತಿಯಿಲ್ಲದೆ ಸರಕುಗಳನ್ನು ತೆಗೆಯುವುದು, ಬಿಟ್ಟುಕೊಡುವುದು ಅಥವಾ ಅನ್ಯಥಾ ವ್ಯವಹರಿಸತಕ್ಕದ್ದಲ್ಲ ಎನ್ನುವ ನಿಷೇಧದ ಒಂದು ಆದೇಶವನ್ನು **ನಮೂನೆ ಜಿಎಸ್‌ಟಿ ಐಎನ್‌ಎಸ್–03**ರಲ್ಲಿ ನೀಡಬಹುದು.

(5) ಸರಕುಗಳು, ದಸ್ತಾವೇಜುಗಳು, ಪುಸ್ತಕಗಳು ಅಥವಾ ವಸ್ತುಗಳನ್ನು ವಶಕ್ಕೆ ತೆಗೆದುಕೊಳ್ಳುವ ಅಧಿಕಾರಿಯು, ಅಂಥ ಸರಕುಗಳು, ದಸ್ತಾವೇಜುಗಳು, ಪುಸ್ತಕಗಳು ಅಥವಾ ವಸ್ತುಗಳ ಅನ್ವಯವಾಗುವಲ್ಲಿ, ಇತರ ವಿಷಯಗಳ ನಡುವೆ, ವಿವರಣೆ, ಪ್ರಮಾಣ ಅಥವಾ ಘಟಕ, ರಚನೆ, ಗುರುತು ಅಥವಾ ಮಾದರಿಯನ್ನು ಒಳಗೊಂಡಿರುವ ತಪಶೀಲು ಪಟ್ಟಿಯನ್ನು, ಸಿದ್ಧಪಡಿಸತಕ್ಕದ್ದು ಮತ್ತು ಯಾರಿಂದ ಅಂಥ ಸರಕುಗಳು, ದಸ್ತಾವೇಜುಗಳು, ಪುಸ್ತಕಗಳು ಅಥವಾ ವಸ್ತುಗಳನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆಯೋ, ಆ ವ್ಯಕ್ತಿಯಿಂದ ಸಹಿ ಪಡೆಯತಕ್ಕದ್ದು.

140. ವಶಕ್ಕೆ ತೆಗೆದುಕೊಂಡ ಸರಕುಗಳ ಬಿಡುಗಡೆಗಾಗಿ ಬಾಂಡ್ ಮತ್ತು ಭದ್ರತೆ.–(1) ವಶಕ್ಕೆ ತೆಗೆದುಕೊಂಡ ಸರಕುಗಳನ್ನು, ಸರಕುಗಳ ಮೌಲ್ಯಕ್ಕಾಗಿ **ನಮೂನೆ ಜಿಎಸ್‌ಟಿ ಐಎನ್‌ಎಸ್–04**ರಲ್ಲಿ ಬಾಂಡನ್ನು ಬರೆದುಕೊಟ್ಟ ಮೇಲೆ ಮತ್ತು ಸಂದಾಯ ಮಾಡಬೇಕಾದ ಅನ್ವಯವಾಗುವ ತೆರಿಗೆ, ಬಡ್ಡಿ ಮತ್ತು ದಂಡದ ಮೊತ್ತಕ್ಕೆ ಸಮನಾಂತರವಾದ ಒಂದು ಬ್ಯಾಂಕ್ ಭದ್ರತೆಯ ರೂಪದಲ್ಲಿ ಒಂದು ಭದ್ರತೆಯನ್ನು ಒದಗಿಸಿದ ಮೇಲೆ ತಾತ್ಕಾಲಿಕ ಆಧಾರದಲ್ಲಿ ಬಿಡುಗಡೆ ಮಾಡಬಹುದು.

ವಿವರಣೆ.– ಈ ಅಧ್ಯಾಯದ ಉಪಬಂಧಗಳ ಅಡಿಯಲ್ಲಿನ ನಿಯಮಗಳ ಉದ್ದೇಶಗಳಿಗಾಗಿ, **"ಅನ್ವಯವಾಗುವ ತೆರಿಗೆ"** ಎನ್ನುವುದು ಸಂದರ್ಭಾನುಸಾರವಾಗಿ, ರಾಜ್ಯ ತೆರಿಗೆ ಅಥವಾ ಕೇಂದ್ರ ತೆರಿಗೆ ಮತ್ತು ಕೇಂದ್ರಾಡಳಿತ ಪ್ರದೇಶ ತೆರಿಗೆ ಮತ್ತು ಸರಕು ಅಥವಾ ಸೇವೆಗಳ ತೆರಿಗೆ (ರಾಜ್ಯಗಳಿಗೆ ಪರಿಹಾರ) ಅಧಿನಿಯಮ 2017ರ (2017ರ ಕೇಂದ್ರ ಅಧಿನಿಯಮ 15) ಅಡಿಯಲ್ಲಿ ಸಂದಾಯ ಮಾಡಬೇಕಾದ ಉಪಕರ ಯಾವುದಾದರು ಇದ್ದರೆ ಅದನ್ನು ಒಳಗೊಳ್ಳತಕ್ಕದ್ದು.

(2) ಸರಕುಗಳನ್ನು ತಾತ್ಕಾಲಿಕವಾಗಿ ಯಾರಿಗೆ ಬಿಡುಗಡೆ ಮಾಡಲಾಗಿತ್ತೋ, ಆ ವ್ಯಕ್ತಿಯು ಯುಕ್ತ ಅಧಿಕಾರಿಯಿಂದ ಗೊತ್ತುಪಡಿಸಿದ ದಿನಾಂಕದಂದು ಮತ್ತು ಸೂಚಿಸಿದ ಸ್ಥಳದಲ್ಲಿ ಹಾಜರುಪಡಿಸಲು ವಿಫಲವಾದಲ್ಲಿ, ಭದ್ರತೆಯನ್ನು ನಗದೀಕರಿಸತಕ್ಕದ್ದು ಮತ್ತು ಅಂಥ ಸರಕುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ತೆರಿಗೆ, ಬಡ್ಡಿ ಮತ್ತು ದಂಡ ಮತ್ತು ಜುಲ್ಮಾನೆ ಯಾವುದಾದರು ಇದ್ದರೆ ಅವುಗಳಿಗೆ ಪ್ರತಿಯಾಗಿ ಹೊಂದಿಸತಕ್ಕದ್ದು.

141. ವಶಕ್ಕೆ ತೆಗೆದುಕೊಂಡ ಸರಕುಗಳಿಗೆ ಸಂಬಂದಿಸಿದಂತೆ ಕಾರ್ಯವಿಧಾನ.– (1) ವಶಕ್ಕೆ ತೆಗೆದುಕೊಂಡ ಸರಕುಗಳು ಅಥವಾ ವಸ್ತುಗಳು, ಕೆಟ್ಟು ಹೋಗುವ ಅಥವಾ ಅಪಾಯಕಾರಿ ಸ್ವರೂಪದ್ದಾಗಿದ್ದಲ್ಲಿ, ಮತ್ತು ತೆರಿಗೆದಾಯಕ ವ್ಯಕ್ತಿಯು, ಅಂಥ ಸರಕುಗಳ ಅಥವಾ ವಸ್ತುಗಳ ಮಾರುಕಟ್ಟೆ ಬೆಲೆಗೆ ಸಮನಾಂತರವಾದ ಒಂದು ಮೊತ್ತ ಅಥವಾ ತೆರಿಗೆದಾಯಕ ವ್ಯಕ್ತಿಯಿಂದ ಸಂದಾಯ ಮಾಡಬೇಕಾದ ಅಥವಾ ಮಾಡಬೇಕಾಗಿ ಬರಬಹುದಾದ ತೆರಿಗೆ, ಬಡ್ಡಿ ಮತ್ತು ದಂಡದ ಮೊತ್ತ ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಸಂದಾಯ ಮಾಡಿದರೆ, ಅಂಥ ಸರಕುಗಳನ್ನು ಅಥವಾ ಸಂದರ್ಭಾನುಸಾರವಾಗಿ ವಸ್ತುಗಳನ್ನು, ಸಂದಾಯದ ರುಜುವಾತಿನ ಮೇಲೆ, **ನಮೂನೆ ಜಿಎಸ್‌ಟಿ ಐಎನ್‌ಎಸ್–05**ರಲ್ಲಿ ಒಂದು ಆದೇಶದ ಮೂಲಕ ತತ್‌ಕ್ಷಣವೇ ಬಿಡುಗಡೆಗೊಳಿಸತಕ್ಕದ್ದು.

(2) ಸದರಿ ಸರಕುಗಳು ಅಥವಾ ವಸ್ತುಗಳಿಗೆ ಸಂಬಂಧಿಸಿದಂತೆ ಉಪನಿಯಮ (1)ರಲ್ಲಿ ಉಲ್ಲೇಖಿಸಲಾದ ಮೊತ್ತವನ್ನು ತೆರಿಗೆದಾಯಕ ವ್ಯಕ್ತಿಯು ಸಂದಾಯ ಮಾಡಲು ವಿಫಲವಾದಲ್ಲಿ, ಆಯುಕ್ತರು ಅಂಥ ಸರಕುಗಳು ಅಥವಾ ವಸ್ತುಗಳನ್ನು ವಿಲೇವಾರಿ ಮಾಡಬಹುದು ಮತ್ತು ಅದರಿಂದ ಪಡೆದುಕೊಂಡ ಮೊತ್ತವನ್ನು ಅಂಥ ಸರಕುಗಳು ಅಥವಾ ವಸ್ತುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ತೆರಿಗೆ, ಬಡ್ಡಿ, ದಂಡ, ಅಥವಾ ಯಾವುದೇ ಇತರ ಮೊತ್ತಕ್ಕೆ ಪ್ರತಿಯಾಗಿ ಹೊಂದಾಣಿಕೆ ಮಾಡತಕ್ಕದ್ದು.

ಅಧ್ಯಾಯ –XVIII
ತಗಾದೆಗಳು ಮತ್ತು ವಸೂಲಿ

142. ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ಮೊತ್ತಗಳ ತಗಾದೆಗಾಗಿ ಸೂಚನಾಪತ್ರ ಮತ್ತು ಆದೇಶ.– (1) ಯುಕ್ತ ಅದಿಕಾರಿಯು,

(ಎ) ಪ್ರಕರಣ 73ರ ಉಪಪ್ರಕರಣ (1) ಅಥವಾ ಪ್ರಕರಣ 74ರ ಉಪಪ್ರಕರಣ (1) ಅಥವಾ ಪ್ರಕರಣ 76ರ ಉಪಪ್ರಕರಣ (2)ರ ಅಡಿಯಲ್ಲಿ ಒಂದು ಸೂಚನಾಪತ್ರವನ್ನು, ಅದರ ಒಂದು ಸಾರಾಂಶವನ್ನು **ನಮೂನೆ ಜಿಎಸ್‌ಟಿ ಡಿಆರ್‌ಸಿ–01** ರಲ್ಲಿ ವಿದ್ಯುನ್ಮಾನ ರೀತಿಯಲ್ಲಿ,

(ಬಿ) ಪ್ರಕರಣ 73ರ ಉಪಪ್ರಕರಣ (3) ಅಥವಾ ಪ್ರಕರಣ 74ರ ಉಪಪ್ರಕರಣ (3) ಅಡಿಯಲ್ಲಿ ಒಂದು ವಿವರಪತ್ರವನ್ನು, ಅದರ ಒಂದು ಸಾರಾಂಶವನ್ನು **ನಮೂನೆ ಜಿಎಸ್‌ಟಿ ಡಿಆರ್‌ಸಿ–02** ರಲ್ಲಿ ವಿದ್ಯುನ್ಮಾನ ರೀತಿಯಲ್ಲಿ,

ಅದರಲ್ಲಿ ಸಂದಾಯ ಮಾಡಬೇಕಾದ ಮೊತ್ತವನ್ನು ನಿರ್ದಿಷ್ಟಪಡಿಸಿ ಅದರ ಜೊತೆಯಲ್ಲಿ ಜಾರಿಗೊಳಿಸತಕ್ಕದ್ದು.

(2) ಸೂಚನಾ ಪತ್ರ ಅಥವಾ ವಿವರಪತ್ರವನ್ನು ಜಾರಿಗೊಳಿಸುವ ಮೊದಲು, ತೆರಿಗೆಯನ್ನು ವಿಧಿಸಬಹುದಾದ ವ್ಯಕ್ತಿಯು, ಪ್ರಕರಣ 73ರ ಉಪಪ್ರಕರಣ (5)ರ ಉಪಬಂಧಗಳಿಗೆ ಅನುಸಾರವಾಗಿ ತೆರಿಗೆ ಮತ್ತು ಬಡ್ಡಿಯನ್ನು ಅಥವಾ ಸಂದರ್ಭಾನುಸಾರವಾಗಿ, ಪ್ರಕರಣ 74ರ ಉಪಪ್ರಕರಣ (5)ರ ಉಪಬಂಧಗಳಿಗೆ ಅನುಸಾರವಾಗಿ ತೆರಿಗೆ, ಬಡ್ಡಿ ಮತ್ತು ದಂಡವನ್ನು ಸಂದಾಯ ಮಾಡಿದಲ್ಲಿ, ಆತನು, ಅಂಥ ಸಂದಾಯವನ್ನು **ನಮೂನೆ ಜಿಎಸ್‌ಟಿ ಡಿಆರ್‌ಸಿ–03** ರಲ್ಲಿ ಯುಕ್ತ ಅಧಿಕಾರಿಗೆ ತಿಳಿಸತಕ್ಕದ್ದು ಮತ್ತು ಯುಕ್ತ

ಅಧಿಕಾರಿಯು ಸದರಿ ವ್ಯಕ್ತಿಯಿಂದ ಮಾಡಲಾದ ಸಂದಾಯವನ್ನು ಅಂಗೀಕರಿಸಿ ಒಂದು ಸ್ವೀಕೃತಿಯನ್ನು **ನಮೂನೆ ಜಿಎಸ್‌ಟಿ ಡಿಆರ್‌ಸಿ–04**ರಲ್ಲಿ ನೀಡತಕ್ಕದ್ದು.

(3) ತೆರಿಗೆಯನ್ನು ವಿಧಿಸಬಹುದಾದ ವ್ಯಕ್ತಿಯು, ಪ್ರಕರಣ 73ರ ಉಪಪ್ರಕರಣ (8)ರ ಅಡಿಯಲ್ಲಿ, ತೆರಿಗೆ ಮತ್ತು ಬಡ್ಡಿಯನ್ನು ಅಥವಾ ಸಂದರ್ಭಾನುಸಾರವಾಗಿ, ಪ್ರಕರಣ 74ರ ಉಪಪ್ರಕರಣ (8)ರ ಅಡಿಯಲ್ಲಿ ತೆರಿಗೆ, ಬಡ್ಡಿ ಮತ್ತು ದಂಡವನ್ನು, ನಿಯಮ (1)ರ ಅಡಿಯಲ್ಲಿ ಜಾರಿಗೊಳಿಸಿದ ಒಂದು ಸೂಚನಾಪತ್ರದ ಮೂವತ್ತು ದಿನಗಳ ಒಳಗಾಗಿ ಸಂದಾಯ ಮಾಡಿದಲ್ಲಿ, ಆತನು, ಅಂಥ ಸಂದಾಯವನ್ನು **ನಮೂನೆ ಜಿಎಸ್‌ಟಿ ಡಿಆರ್‌ಸಿ–03** ರಲ್ಲಿ ಯುಕ್ತ ಅಧಿಕಾರಿಗೆ ತಿಳಿಸತಕ್ಕದ್ದು ಮತ್ತು ಯುಕ್ತ ಅಧಿಕಾರಿಯು ಸದರಿ ಸೂಚನಾ ಪತ್ರಕ್ಕೆ ಸಂಬಂಧಿಸಿದಂತೆ ನಡಾವಳಿಯನ್ನು ಮುಕ್ತಾಯಗೊಳಿಸಿ ಒಂದು ಆದೇಶವನ್ನು **ನಮೂನೆ ಜಿಎಸ್‌ಟಿ ಡಿಆರ್‌ಸಿ–05**ರಲ್ಲಿ ನೀಡತಕ್ಕದ್ದು.

(4) ಪ್ರಕರಣ 73ರ ಉಪಪ್ರಕರಣ (9)ರ ಮತ್ತು ಪ್ರಕರಣ 74ರ ಉಪಪ್ರಕರಣ (9)ರಲ್ಲಿ ಉಲ್ಲೇಖಿಸಲಾದ ವಿಜ್ಞಾಪನೆಯು **ನಮೂನೆ ಜಿಎಸ್‌ಟಿ ಡಿಆರ್‌ಸಿ–06**ರಲ್ಲಿರತಕ್ಕದ್ದು.

(5) ಪ್ರಕರಣ 73ರ ಉಪಪ್ರಕರಣ (9)ರ ಮತ್ತು ಪ್ರಕರಣ 74ರ ಉಪಪ್ರಕರಣ (9)ರ ಅಥವಾ ಪ್ರಕರಣ 76ರ ಉಪಪ್ರಕರಣ (3)ರ ಅಡಿಯಲ್ಲಿ ನೀಡಲಾದ ಆದೇಶದ ಸಾರಾಂಶವನ್ನು, ಅದರಲ್ಲಿ, ತೆರಿಗೆಯನ್ನು ವಿಧಿಸಬಹುದಾದ ವ್ಯಕ್ತಿಯು, ಸಂದಾಯ ಮಾಡಬೇಕಾದ ತೆರಿಗೆ, ಬಡ್ಡಿ ಮತ್ತು ದಂಡದ ಮೊತ್ತವನ್ನು ನಿರ್ದಿಷ್ಟಪಡಿಸಿ **ನಮೂನೆ ಜಿಎಸ್‌ಟಿ ಡಿಆರ್‌ಸಿ–07**ರಲ್ಲಿ ವಿದ್ಯುನ್ಮಾನ ರೀತಿಯಲ್ಲಿ, ಅಪ್‌ಲೋಡ್ ಮಾಡತಕ್ಕದ್ದು.

(6) ಉಪನಿಯಮ (5)ರಲ್ಲಿ ಉಲ್ಲೇಖಿಸಲಾದ ಆದೇಶವನ್ನು ವಸೂಲಾತಿಗಾಗಿ ಸೂಚನಾ ಪತ್ರವೆಂದು ಪರಿಭಾವಿಸತಕ್ಕದ್ದು.

(7) ಪ್ರಕರಣ 161ರ ಉಪಬಂಧಗಳಿಗೆ ಅನುಸಾರವಾಗಿ ಆದೇಶದ ಯಾವುದೇ ಸರಿಪಡಿಸುವಿಕೆಯನ್ನು ಯುಕ್ತ ಅದಿಕಾರಿಯು **ನಮೂನೆ ಜಿಎಸ್‌ಟಿ ಡಿಆರ್‌ಸಿ–08**ರಲ್ಲಿ ಮಾಡತಕ್ಕದ್ದು.

143. ಕೊಡಬೇಕಾದ ಯಾವುದೇ ಹಣದಿಂದ ಮುರುಗಡೆ ಮಾಡುವುದರ ಮೂಲಕ ವಸೂಲಾತಿ.– ಒಬ್ಬ ವ್ಯಕ್ತಿಯಿಂದ (ಇನ್ನು ಮುಂದೆ **"ಬಾಕಿದಾರ"** ಎಂದು ಈ ನಿಯಮದಲ್ಲಿ ಉಲ್ಲೇಖಿಸಲಾಗಿದೆ) ಅಧಿನಿಯಮ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಯಾವುದೇ ಉಪಬಂಧಗಳ ಅಡಿಯಲ್ಲಿ ಸರ್ಕಾರಕ್ಕೆ ಸಂದಾಯ ಮಾಡಬೇಕಾಗಿರುವ, ಯಾವುದೇ ಮೊತ್ತವು ಸಂದಾಯವಾಗಿರದಿದ್ದಲ್ಲಿ, ಯುಕ್ತ ಅಧಿಕಾರಿಯು, **ನಮೂನೆ ಜಿಎಸ್‌ಟಿ ಡಿಆರ್‌ಸಿ–09ರಲ್ಲಿ** ಒಬ್ಬ ನಿರ್ದಿಷ್ಟಪಡಿಸಿದ ಅಧಿಕಾರಿಯನ್ನು, ಪ್ರಕರಣ 79ರ ಉಪಪ್ರಕರಣ (1)ರ ಖಂಡ (ಎ)ನ ಉಪಬಂಧಗಳಿಗೆ ಅನುಸಾರವಾಗಿ ಅಂಥ ಬಾಕಿದಾರನಿಗೆ ಕೊಡಬೇಕಾದ ಯಾವುದೇ ಮೊತ್ತದಿಂದ ಮುರುಗಡೆ ಮಾಡುವಂತೆ ಅಗತ್ಯಪಡಿಸಬಹುದು.

ವಿವರಣೆ.– ಈ ನಿಯಮದ ಉದ್ದೇಶಗಳಿಗಾಗಿ, **"ನಿರ್ದಿಷ್ಟಪಡಿಸಿದ ಅಧಿಕಾರಿ"** ಎಂದರೆ ಕೇಂದ್ರ ಸರ್ಕಾರದ ಅಥವಾ ಒಂದು ರಾಜ್ಯ ಸರ್ಕಾರದ ಅಥವಾ ಕೇಂದ್ರಾಡಳಿತ ಪ್ರದೇಶ ಸರ್ಕಾರದ ಅಥವಾ ಒಂದು ಸ್ಥಳೀಯ ಪ್ರಾಧಿಕಾರದ ಅಥವಾ ಕೇಂದ್ರ ಸರ್ಕಾರದ ಅಥವಾ ಒಂದು ರಾಜ್ಯ ಸರ್ಕಾರದ ಅಥವಾ ಕೇಂದ್ರಾಡಳಿತ ಪ್ರದೇಶ ಸರ್ಕಾರದ ಅಥವಾ ಒಂದು ಸ್ಥಳೀಯ ಪ್ರಾಧಿಕಾರದಿಂದ ಪೂರ್ಣವಾಗಿ ಅಥವಾ ಭಾಗಶಃವಾಗಿ ಮಾಲಿಕತ್ವ ಅಥವಾ ನಿಯಂತ್ರಣ ಹೊಂದಿರುವ ಒಂದು ಮಂಡಳಿ ಅಥವಾ ನಿಗಮ ಅಥವಾ ಒಂದು ಕಂಪನಿಯ ಯಾವುದೇ ಅಧಿಕಾರಿಯಾಗಿರತಕ್ಕದ್ದು.

144. ಯುಕ್ತ ಅಧಿಕಾರಿಯ ನಿಯಂತ್ರಣದ ಅಡಿಯಲ್ಲಿರುವ ಸರಕುಗಳ ಮಾರಾಟದ ಮೂಲಕ ವಸೂಲಾತಿ.– (1) ಒಬ್ಬ ಬಾಕಿದಾರನಿಂದ ಬಾಕಿಯಿರುವ ಯಾವುದೇ ಮೊತ್ತವನ್ನು ಅಂಥ ವ್ಯಕ್ತಿಗೆ ಸೇರಿರುವ ಸರಕುಗಳನ್ನು ಪ್ರಕರಣ 79ರ ಉಪಪ್ರಕರಣ (1)ರ ಖಂಡ (ಬಿ)ನ ಉಪಬಂಧಗಳಿಗೆ ಅನುಸಾರವಾಗಿ ಮಾರಾಟ ಮಾಡವುದರ ಮೂಲಕ ವಸೂಲು ಮಾಡಬೇಕಿರುವಲ್ಲಿ, ಯುಕ್ತ ಅಧಿಕಾರಿಯು ತಪಶೀಲು ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅಂಥ ಸರಕುಗಳ ಮಾರುಕಟ್ಟೆ ಮೌಲ್ಯವನ್ನು ಅಂದಾಜು ಮಾಡತಕ್ಕದ್ದು ಮತ್ತು ಸಂದಾಯ ಮಾಡಬೇಕಾದ ಮೊತ್ತವನ್ನು ಮತ್ತು ವಸೂಲಾತಿ ಪ್ರಕ್ರಿಯೆಗಾಗಿ ಭರಿಸಲಾದ ಆಡಳಿತಾತ್ಮಕ ವೆಚ್ಚದ ಜೊತೆಯಲ್ಲಿ ವಸೂಲು ಮಾಡುವುದಕ್ಕಾಗಿ ಅಗತ್ಯವಿರುಬಹುದಾದ ಅಷ್ಟು ಪ್ರಮಾಣದ ಸರಕುಗಳನ್ನು ಮಾತ್ರ ಮಾರಾಟ ಮಾಡಲು ಮುಂದುವರಿಯತಕ್ಕದ್ದು.

(2) ಸದರಿ ಸರಕುಗಳನ್ನು ಇ–ಹರಾಜನ್ನು ಒಳಗೊಂಡಂತೆ ಹರಾಜಿನ ಒಂದು ಪ್ರಕ್ರಿಯೆಯ ಮೂಲಕ ಮಾರಾಟ ಮಾಡತಕ್ಕದ್ದು, ಅದಕ್ಕಾಗಿ ಒಂದು ಸೂಚನಾಪತ್ರವನ್ನು ಮಾರಾಟ ಮಾಡಬೇಕಾದ ಸರಕುಗಳು ಮತ್ತು ಮಾರಾಟದ ಉದ್ದೇಶವನ್ನು ಸ್ಪಷ್ಟವಾಗಿ ಸೂಚಿಸಿ **ನಮೂನೆ ಜಿಎಸ್‌ಟಿ ಡಿಆರ್‌ಸಿ–10**ರಲ್ಲಿ ನೀಡತಕ್ಕದ್ದು.

(3) ಸವಾಲು ಸಲ್ಲಿಕೆಯ ಕೊನೆಯ ದಿನ ಅಥವಾ ಹರಾಜಿನ ದಿನಾಂಕವು ಉಪನಿಯಮ (2)ರಲ್ಲಿ ಉಲ್ಲೇಖಿಸಲಾದ ಸೂಚನಾಪತ್ರ ನೀಡಿಕೆಯ ದಿನಾಂಕದಿಂದ ಹದಿನೈದು ದಿನಗಳಿಗಿಂತ ಮುಂಚಿತವಾಗಿಲ್ಲದಿರತಕ್ಕದ್ದು.

ಪರಂತು ಸರಕುಗಳು ಕೆಟ್ಟು ಹೋಗುವ ಅಥವಾ ಅಪಾಯಕಾರಿ ಸ್ವರೂಪದ್ದಾಗಿದ್ದಲ್ಲಿ, ಅಥವಾ ಅವುಗಳನ್ನು ಅಭಿರಕ್ಷಣೆಯಲ್ಲಿಡುವ ವೆಚ್ಚಗಳು ಅವುಗಳ ಮೌಲ್ಯವನ್ನು ಮೀರುವುದು ಕಂಡಬಂದಲ್ಲಿ, ಯುಕ್ತ ಅಧಿಕಾರಿಯು ತತ್‌ಕ್ಷಣವೇ ಮಾರಾಟ ಮಾಡಬಹುದು.

(4) ಯುಕ್ತ ಅಧಿಕಾರಿಯು ಸವಾಲುದಾರರನ್ನು ಹರಾಜಿನಲ್ಲಿ ಭಾಗವಹಿಸಲು ಅರ್ಹರನ್ನಾಗಿ ಮಾಡುವುದಕ್ಕಾಗಿ ಅಂಥ ಅಧಿಕಾರಿಯಿಂದ ನಿರ್ದಿಷ್ಟಪಡಿಸಬಹುದಾದ ವಿಧಾನದಲ್ಲಿ ಒದಗಿಸಬೇಕಾದ ಪೂರ್ವ ಸವಾಲಿನ ಠೇವಣಿಯ ಮೊತ್ತವನ್ನು, ನಿರ್ದಿಷ್ಟಪಡಿಸಬಹುದು, ಅದನ್ನು ಯಶಸ್ವಿಯಾಗದ ಸವಲುದಾರರಿಗೆ ಹಿಂದಿರುಗಿಸಬಹುದು, ಸಂದರ್ಭಾನುಸಾರವಾಗಿ, ಯಶಸ್ವಿ ಸವಾಲುದಾರ ಪೂರ್ಣ ಮೊತ್ತವನ್ನು ಸಂದಾಯ ಮಾಡಲು ವಿಫಲನಾದ ಸಂದರ್ಭದಲ್ಲಿ ಮುಟ್ಟುಗೋಲು ಹಾಕಿಕೊಳ್ಳಬಹುದು.

(5) ಯುಕ್ತ ಅದಿಕಾರಿಯು ಯಶಸ್ವಿ ಸವಾಲುದಾರನಿಗೆ ಹರಾಜಿನ ದಿನಾಂಕದಿಂದ ಹದಿನೈದು ದಿನಗಳ ಒಂದು ಅವಧಿಯ ಒಳಗಾಗಿ ಸಂದಾಯವನ್ನು ಮಾಡುವಂತೆ ಆತನನ್ನು ಅಗತ್ಯಪಡಿಸಿ **ನಮೂನೆ ಜಿಎಸ್‌ಟಿ ಡಿಆರ್‌ಸಿ–11**ರಲ್ಲಿ ಒಂದು ಸೂಚನಾಪತ್ರವನ್ನು ನೀಡತಕ್ಕದ್ದು. ಪೂರ್ಣ ಸವಾಲಿನ ಮೊತ್ತವನ್ನು ಸಂದಾಯ ಮಾಡಿದ ಮೇಲೆ, ಯುಕ್ತ ಅಧಿಕಾರಿಯು ಸದರಿ ಸರಕುಗಳ ಸ್ವಾಧೀನತೆಯನ್ನು ಆ ಯಶಸ್ವಿ ಸವಾಲುದಾರನಿಗೆ ವರ್ಗಾಯಿಸತಕ್ಕದ್ದು ಮತ್ತು ಒಂದು ಪ್ರಮಾಣ ಪತ್ರವನ್ನು **ನಮೂನೆ ಜಿಎಸ್‌ಟಿ ಡಿಆರ್‌ಸಿ–12**ರಲ್ಲಿ ನೀಡತಕ್ಕದ್ದು.

(6) ಬಾಕಿದಾರನು ವಸೂಲಾತಿಯ ಅಡಿಯಲ್ಲಿನ ಮೊತ್ತವನ್ನು, ವಸೂಲಾತಿಯ ಪ್ರಕ್ರಿಯೆ ಮೇಲೆ ಭರಿಸಲಾದ ಯಾವುದೇ ವಚ್ಚವನ್ನು ಒಳಗೊಂಡಂತೆ, ಉಪನಿಯಮ (2)ರ ಅಡಿಯಲ್ಲಿ ಸೂಚನಾ ಪತ್ರವನ್ನು ನೀಡುವುದಕ್ಕಿಂತ ಮೊದಲೇ ಸಂದಾಯ ಮಾಡಿದಲ್ಲಿ, ಯುಕ್ತ ಅಧಿಕಾರಿಯು ಹರಾಜಿನ ಪ್ರಕ್ರಿಯೆಯನ್ನು ರದ್ದುಗೊಳಿಸತಕ್ಕದ್ದು ಮತ್ತು ಸರಕುಗಳನ್ನು ಬಿಡುಗಡೆಗೊಳಿಸತಕ್ಕದ್ದು.

(7) ಯುಕ್ತ ಅಧಿಕಾರಿಯು, ಯಾವುದೇ ಸವಾಲನ್ನು ಸ್ವೀಕರಿಸದಿದ್ದಲ್ಲಿ ಅಥವಾ ಸಾಕಷ್ಟು ಭಾಗವಹಿಸುವಿಕೆಯ ಕೊರತೆಯ ಕಾರಣದಿಂದಾಗಿ ಅಥವಾ ಕಡಿಮೆ ಸವಾಲುಗಳ ಕಾರಣದಿಂದಾಗಿ ಹರಾಜು ಸ್ಪರ್ಧಾತ್ಮಕವಾಗಿಲ್ಲ ಎಂದು ಪರಿಗಣಿಸಬೇಕಾಗಿದ್ದಲ್ಲಿ, ಪ್ರಕ್ರಿಯೆಯನ್ನು ರದ್ದುಗೊಳಿಸತಕ್ಕದ್ದು ಮತ್ತು ಪುನರ್–ಹರಾಜಿಗಾಗಿ ಮುಂದುವರಿಯತಕ್ಕದ್ದು.

145. ಮೂರನೇ ವ್ಯಕ್ತಿಯಿಂದ ವಸೂಲಾತಿ.– (1) ಯುಕ್ತ ಅಧಿಕಾರಿಯು ಪ್ರಕರಣ 79ರ ಉಪಪ್ರಕರಣ (1)ರ ಖಂಡ (ಸಿ)ಯಲ್ಲಿ ಉಲ್ಲೇಖಿಸಲಾದ ಒಬ್ಬ ವ್ಯಕ್ತಿಗೆ (ಇನ್ನು ಮುಂದ ಈ ನಿಯಮದಲ್ಲಿ **"** ಮೂರನೇ ವ್ಯಕ್ತಿ**"** ಎಂದು ಉಲ್ಲೇಖಿಸಲಾಗಿದೆ), **ನಮೂನೆ ಜಿಎಸ್‌ಟಿ ಡಿಆರ್‌ಸಿ–13**ರಲ್ಲಿ ಒಂದು ಸೂಚನಾಪತ್ರವನ್ನು, ಸೂಚನಾಪತ್ರದಲ್ಲಿ ನಿರ್ದಿಷ್ಟಪಡಿಸಿದ ಮೊತ್ತವನ್ನು ಠೇವಣಿ ಮಾಡುವಂತೆ ಆತನನ್ನು ನಿರ್ದೇಶಿಸಿ, ಜಾರಿ ಮಾಡಬಹದು.

(2) ಉಪನಿಯಮ (1)ರ ಅಡಿಯಲ್ಲಿ ನೀಡಲಾದ ಸೂಚನಾಪತ್ರದಲ್ಲಿ ನಿರ್ದಿಷ್ಟಪಡಿಸಿದ ಮೊತ್ತವನ್ನು ಮೂರನೇ ವ್ಯಕ್ತಿಯು ಸಂದಾಯ ಮಾಡಿದಲ್ಲಿ, ಯುಕ್ತ ಅಧಿಕಾರಿಯು,ಹಾಗೆ ವಿಮೋಚನೆ ಮಾಡಲಾದ ಬಾಧ್ಯತೆಯ ವಿವರಗಳನ್ನು ಸ್ಪಷ್ಟವಾಗಿ ಸೂಚಿಸಿ ಒಂದು ಪ್ರಮಾಣ ಪತ್ರವನ್ನು **ನಮೂನೆ ಜಿಎಸ್‌ಟಿ ಡಿಆರ್‌ಸಿ–14**ರಲ್ಲಿ ಮೂರನೇ ವ್ಯಕ್ತಿಗೆ ನೀಡತಕ್ಕದ್ದು.

146. ಒಂದು ಡಿಕ್ರಿ, ಇತ್ಯಾದಿಗಳ ಜಾರಿ ಮೂಲಕ ವಸೂಲಾತಿ.– ಹಣದ ಸಂದಾಯಕ್ಕಾಗಿ ಅಥವಾ ಒಂದು ಅಡಮಾನ ಅಥವಾ ಋಣಭಾರದ ಜಾರಿಯಲ್ಲಿನ ಮಾರಾಟಕ್ಕಾಗಿ ಒಂದು ಸಿವಿಲ್ ನ್ಯಾಯಾಲಯದ ಡಿಕ್ರಿಯ ಜಾರಿಯಲ್ಲಿ ಬಾಕಿದಾರನಿಗೆ ಯಾವುದೇ ಮೊತ್ತವನ್ನು ಸಂದಾಯ ಮಾಡಬೇಕಾದಲ್ಲಿ, ಯುಕ್ತ ಅಧಿಕಾರಿಯು, ಸದರಿ ನ್ಯಾಯಾಲಯಕ್ಕೆ **ನಮೂನೆ ಜಿಎಸ್‌ಟಿ ಡಿಆರ್‌ಸಿ–15**ರಲ್ಲಿ ಒಂದು ಕೋರಿಕೆಯನ್ನು ಕಳುಹಿಸತಕ್ಕದ್ದು ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ ಕೇಂದ್ರ ಅದಿನಿಯಮ 5)

ಉಪಬಂಧಗಳಿಗೆ ಒಳಪಟ್ಟು ಜಪ್ತಿ ಮಾಡಲಾದ ಡಿಕ್ರಿಯನ್ನು ಜಾರಿಗೊಳಿಸತಕ್ಕದ್ದು ಮತ್ತು ವಸೂಲಿ ಮಾಡಬಹುದಾದ ಮೊತ್ತದ ಇತ್ಯರ್ಥಕ್ಕಾಗಿ ನಿವ್ವಳ ಉತ್ಪತ್ತಿಯನ್ನು ಜಮೆಗೊಳಿಸತಕ್ಕದ್ದು.

147. ಚರ ಅಥವಾ ಸ್ಥಿರ ಸ್ವತ್ತಿನ ಮಾರಾಟದ ಮೂಲಕ ವಸೂಲಾತಿ.– (1) ಯುಕ್ತ ಅಧಿಕಾರಿಯು, ಬಾಕಿದಾರನಿಗೆ ಸೇರಿದ ಚರ ಅಥವಾ ಸ್ಥಿರ ಸ್ವತ್ತಿನ ಪಟ್ಟಿಯನ್ನು ಸಿದ್ಧಪಡಿಸಿ, ಪ್ರಚಲಿತ ಮಾರುಕಟ್ಟೆ ಬೆಲೆಯ ಪ್ರಕಾರ ಅವುಗಳ ಮೌಲ್ಯವನ್ನು ಅಂದಾಜಿಸತಕ್ಕದ್ದು ಮತ್ತು ಜಪ್ತಿ ಅಥವಾ ಚರಾಸ್ತಿ ವಶದ ಒಂದು ಆದೇಶವನ್ನು ಮತ್ತು ಬಾಕಿಯಿರುವ ಮೊತ್ತದ ವಸೂಲಾತಿಗಾಗಿ ಅಗತ್ಯವಿರಬಹುದಾದ ಅಂಥ ಚರ ಅಥವಾ ಸ್ಥಿರ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯವಹಾರವನ್ನು ನಿಷೇದಿಸಿ ಒಂದು ಸೂಚನಾಪತ್ರವನ್ನು ಮಾರಾಟಕ್ಕಾಗಿ **ನಮೂನೆ ಜಿಎಸ್‌ಟಿ ಡಿಆರ್‌ಸಿ–16**ರಲ್ಲಿ ನೀಡತಕ್ಕದ್ದು.

ಪರಂತು ನೆಗೋಷಿಯಬಲ್ ಇನ್ಸ್ಟ್ರುಮೆಂಟ್‌ನಿಂದ ಭದ್ರತೆಯಿಲ್ಲದ ಒಂದು ಋಣದಲ್ಲಿನ, ಒಂದು ನಿಗಮದಲ್ಲಿನ ಒಂದು ಷೇರಲ್ಲಿನ, ಯಾವುದೇ ಸ್ವತ್ತಿನ ಅಥವಾ ಯಾವುದೇ ನ್ಯಾಯಾಲಯದಲ್ಲಿ ಠೇವಣಿ ಇಟ್ಟ ಅಥವಾ ಅದರ ಅಭಿರಕ್ಷಣೆಯಲ್ಲಿರುವ ಸ್ವತ್ತನ್ನು ಹೊರತುಪಡಿಸಿದಂತೆ ಬಾಕಿದಾರನ ಸ್ವಾಧೀನದಲ್ಲಿ ಇಲ್ಲದಿರುವ ಇತರೇ ಚರ ಸ್ವತ್ತಿನ ಜಪ್ತಿಯನ್ನು, ನಿಯಮ 151ರಲ್ಲಿ ಉಪಬಂಧಿಸಿದ ವಿಧಾನದಲ್ಲಿ ಜಪ್ತಿಮಾಡತಕ್ಕದ್ದು.

(2) ಯುಕ್ತ ಅಧಿಕಾರಿಯು ಜಪ್ತಿಅಥವಾ ಚರಾಸ್ತಿ ವಶದ ಆದೇಶದ ಒಂದು ಪ್ರತಿಯನ್ನು, ಸದರೀ ಚರ ಅಥವಾ ಸ್ಥಿರ ಸ್ವತ್ತಿನ ಮೇಲೆ ಪೂರ್ವಾಧಿಯನ್ನು ಹೊರಿಸುವ, ಅದನ್ನು ಯುಕ್ತ ಅಧಿಕಾರಿಯಿಂದ ಹಾಗೆಂದು, ಲಿಖಿತ ಸೂಚನೆಗಳ ಮೇಲೆ ಮಾತ್ರ ತೆಗೆಯತಕ್ಕ, ಸಂಬಂಧಪಟ್ಟ ರೆವಿನ್ಯೂ ಪ್ರಾಧಿಕಾರ ಅಥವಾ ಸಾರಿಗೆ ಪ್ರಾಧಿಕಾರ ಅಥವಾ ಯಾವುದೇ ಅಂಥ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

(3) ಉಪನಿಯಮ (1)ರ ಅಡಿಯಲ್ಲಿ ಜಪ್ತಿಅಥವಾ ಚರಾಸ್ತಿ ವಶಕ್ಕೆ ಒಳಪಟ್ಟ ಸ್ವತ್ತು–

(ಎ) ಸ್ಥಿರ ಸ್ವತ್ತಾಗಿದ್ದಲ್ಲಿ, ಜಪ್ತಿಅಥವಾ ಚರಾಸ್ತಿ ವಶದ ಆದೇಶವನ್ನು ಸದರಿ ಸ್ವತ್ತಿನಲ್ಲಿ ಅಂಟಿಸತಕ್ಕದ್ದು ಮತ್ತು ಮಾರಾಟದ ಖಾತ್ರಿಯ ವರೆಗೂ ಅಂಟಿಸಿರುವುದು ಉಳಿಯತಕ್ಕದ್ದು;

(ಬಿ) ಚರ ಸ್ವತ್ತಾಗಿದ್ದಲ್ಲಿ, ಯುಕ್ತ ಅದಿಕಾರಿಯು, ಅಧಿನಿಯಮದ ಅಧ್ಯಾಯ ಫಿಖಗಿ ರ ಉಪಬಂಧಗಳಿಗೆ ಅನುಸಾರವಾಗಿ ಸದರಿ ಸ್ವತ್ತನ್ನು ವಶಕ್ಕೆ ತೆಗೆದುಕೊಳ್ಳತಕ್ಕದ್ದು ಮತ್ತು ಸದರಿ ಸ್ವತ್ತಿನ ಅಭಿರಕ್ಷಣೆಯನ್ನು ಯುಕ್ತ ಅಧಿಕಾರಿಯು ತಾನೇ ಸ್ವತಃ ಅಥವಾ ಆತನಿಂದ ಪ್ರಾಧಿಕೃತನಾದ ಒಬ್ಬ ಅಧಿಕಾರಿಯು ತೆಗೆದುಕೊಳ್ಳತಕ್ಕದ್ದು.

(4) ಜಪ್ತಿ ಅಥವಾ ಚರಾಸ್ತಿ ವಶದ ಸ್ವತ್ತನ್ನು, ಇ–ಹರಾಜನ್ನು ಒಳಗೊಂಡಂತೆ ಹರಾಜಿನ ಒಂದು ಪ್ರಕ್ರಿಯೆಯ ಮೂಲಕ ಮಾರಾಟ ಮಾಡತಕ್ಕದ್ದು, ಅದಕ್ಕಾಗಿ ಒಂದು ಸೂಚನಾಪತ್ರವನ್ನು ಮಾರಾಟ ಮಾಡಬೇಕಾದ ಸ್ವತ್ತು ಮತ್ತು ಮಾರಾಟದ ಉದ್ದೇಶವನ್ನು ಸ್ಪಷ್ಟವಾಗಿ ಸೂಚಿಸಿ **ನಮೂನೆ ಜಿಎಸ್‌ಟಿ ಡಿಆರ್‌ಸಿ–17**ರಲ್ಲಿ ನೀಡತಕ್ಕದ್ದು.

(5) ಈ ಅಧ್ಯಾಯದ ಉಪಬಂಧಗಳಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಮಾರಾಟ ಮಾಡಬೇಕಾದ ಸ್ವತ್ತು, ನೆಗೋಷಿಯಬಲ್ ಇನ್ಸ್ಟ್ರುಮೆಂಟ್, ಒಂದು ನಿಗಮದಲ್ಲಿನ ಒಂದು ಷೇರಾಗಿದ್ದಲ್ಲಿ, ಯುಕ್ತ ಅಧಿಕಾರಿಯು, ಅದನ್ನು ಸಾರ್ವಜನಿಕ ಹರಾಜಿನ ಮೂಲಕ ಮಾರಾಟ ಮಾಡದೆ, ಅಂಥ ಇನ್ಸ್ಟ್ರುಮೆಂಟ್ ಅಥವಾ ಒಂದು ಷೇರನ್ನು ಒಬ್ಬ ದಲ್ಲಾಳಿಯ ಮೂಲಕ ಮಾರಾಟ ಮಾಡಬಹುದು ಮತ್ತು ಸದರಿ ದಲ್ಲಾಳಿಯು ವಸೂಲಾತಿಯ ಅಡಿಯಲ್ಲಿನ ಮೊತ್ತವನ್ನು ವಿಮೋಚನೆ ಮಾಡುವುದಕ್ಕಾಗಿ ಅಗತ್ಯವಿರಬಹುದಾದ ತನ್ನ ಕಮಿಷನ್‌ನಷ್ಟು ಇಳಿಕೆ ಮಾಡಿದ ಅಂಥ ಮಾರಾಟದ ಅಷ್ಟು ಉತ್ಪತ್ತಿಯನ್ನು ಸರ್ಕಾರಕ್ಕೆ ಠೇವಣಿ ಮಾಡತಕ್ಕದ್ದು ಮತ್ತು ಉಳಿಕೆ ಮೊತ್ತ ಏನಾದರು ಇದ್ದರೆ, ಅದನ್ನು ಅಂಥ ಇನ್ಸ್ಟ್ರುಮೆಂಟ್ ಅಥವಾ ಷೇರಿನ ಮಾಲಿಕನಿಗೆ ಸಂದಾಯ ಮಾಡತಕ್ಕದ್ದು.

(6) ಯುಕ್ತ ಅಧಿಕಾರಿಯು ಸವಾಲುದಾರರನ್ನು ಹರಾಜಿನಲ್ಲಿ ಭಾಗವಹಿಸಲು ಅರ್ಹರನ್ನಾಗಿ ಮಾಡುವುದಕ್ಕಾಗಿ ಅಂಥ ಅಧಿಕಾರಿಯಿಂದ ನಿರ್ದಿಷ್ಟಪಡಿಸಬಹುದಾದ ವಿಧಾನದಲ್ಲಿ ಒದಗಿಸಬೇಕಾದ ಪೂರ್ವ ಸವಾಲಿನ ಠೇವಣಿಯ ಮೊತ್ತವನ್ನು, ನಿರ್ದಿಷ್ಟಪಡಿಸಬಹುದು, ಅದನ್ನು ಯಶಸ್ವಿಯಾಗದ ಸವಲುದಾರರಿಗೆ ಹಿಂದಿರುಗಿಸಬಹುದು, ಸಂದರ್ಭಾನುಸಾರವಾಗಿ, ಯಶಸ್ವಿ ಸವಾಲುದಾರ ಪೂರ್ಣ ಮೊತ್ತವನ್ನು ಸಂದಾಯ ಮಾಡಲು ವಿಫಲನಾದ ಸಂದರ್ಭದಲ್ಲಿ ಮುಟ್ಟುಗೋಲು ಹಾಕಿಕೊಳ್ಳಬಹುದು.

(7) ಸವಾಲು ಸಲ್ಲಿಕೆಯ ಕೊನೆಯ ದಿನ ಅಥವಾ ಹರಾಜಿನ ದಿನಾಂಕವು ಉಪನಿಯಮ (4)ರಲ್ಲಿ ಉಲ್ಲೇಖಿಸಲಾದ ಸೂಚನಾಪತ್ರ ನೀಡಿಕೆಯ ದಿನಾಂಕದಿಂದ ಹದಿನೈದು ದಿನಗಳಿಗಿಂತ ಮುಂಚಿತವಾಗಿಲ್ಲದಿರತಕ್ಕದ್ದು.

ಪರಂತು ಸರಕುಗಳು ಕೆಟ್ಟು ಹೋಗುವ ಅಥವಾ ಅಪಾಯಕಾರಿ ಸ್ವರೂಪದ್ದಾಗಿದ್ದಲ್ಲಿ, ಅಥವಾ ಅವುಗಳನ್ನು ಅಭಿರಕ್ಷಣೆಯಲ್ಲಿಡುವ ವೆಚ್ಚಗಳು ಅವುಗಳ ಮೌಲ್ಯವನ್ನು ಮೀರುವುದು ಕಂಡಬಂದಲ್ಲಿ, ಯುಕ್ತ ಅಧಿಕಾರಿಯು ತತ್‌ಕ್ಷಣವೇ ಮಾರಾಟ ಮಾಡಬಹುದು.

(8) ಯಾವುದೇ ಸ್ವತ್ತಿನ ಜಪ್ತಿಅಥವಾ ಚರಾಸ್ತಿ ವಶಕ್ಕೆ ಸಂಬಂಧಿಸಿದಂತೆ, ಅಂಥ ಸ್ವತ್ತು ಅಂಥ ಜಪ್ತಿಅಥವಾ ಚರಾಸ್ತಿ ವಶಕ್ಕೆ ಬಾಧ್ಯವಾಗಿಲ್ಲ ಎನ್ನುವ ಕಾರಣಾಧಾರದ ಮೇಲೆ ಯಾವುದೇ ಕ್ಲೇಮನ್ನು ಹೂಡಿದ್ದಲ್ಲಿ ಅಥವಾ ಯಾವುದೇ ಆಕ್ಷೇಪಣೆಯನು ಎತ್ತಿದ್ದಲ್ಲಿ, ಯುಕ್ತ ಅಧಿಕಾರಿಯು ಆ ಕ್ಲೇಮು ಅಥವಾ ಆಕ್ಷೇಪಣೆಯನ್ನು ತನಿಖೆ ಮಾಡತಕ್ಕದ್ದು ಮತ್ತು ಆ ಮಾರಾಟವನ್ನು ಆತನು ಸೂಕ್ತ ಎಂದು ಭಾವಿಸಬಹುದಾದ ಅಂಥ ಸಮಯಕ್ಕೆ ಮುಂದೂಡಬಹುದು.

(9) ಕ್ಲೇಮು ಅಥವಾ ಆಕ್ಷೇಪಣೆಯನ್ನು ಮಾಡುವ ವ್ಯಕ್ತಿಯು ಉಪನಿಯಮ (1)ರ ಅಡಿಯಲ್ಲಿ ನೀಡಿದ ಆದೇಶದ ದಿನಾಂಕದಂದು, ಜಪ್ತಿಅಥವಾ ಚರಾಸ್ತಿ ವಶದ ಅಡಿಯಲ್ಲಿ ಪ್ರಶ್ನೆಯಲ್ಲಿರುವ ಸ್ವತ್ತಿನಲ್ಲಿ ಆತನು ಕೆಲವು ಹಿತಾಶಕ್ತಿಯನ್ನು ಹೊಂದಿದ್ದ, ಅಥವಾ ಸ್ವಾಧೀನತೆಯಲ್ಲಿತ್ತು ಎನ್ನುವುದಕ್ಕೆ ಸಾಕ್ಷ್ಯವನ್ನು ಮುಂದಿಡಬೇಕು.

(10) ಯುಕ್ತ ಅಧಿಕಾರಿಯು ತನಿಖೆಯಾದ ಮೇಲೆ, ಕ್ಲೇಮು ಅಥವಾ ಆಕ್ಷೇಪಣೆಯಲ್ಲಿ ನಿರೂಪಿಸಿರವ ಕಾರಣಗಳಿಗಾಗಿ, ಅಂತ ಸ್ವತ್ತು, ಸದರಿ ದಿನಾಂಕದಂದು, ಬಾಕಿದಾರನ ಅಥವಾ ಆತನ ಅಥವಾ ಅದರ ಪರವಾದ ಯಾವುದೇ ಇತರ ವ್ಯಕ್ತಿಯ ಸ್ವಾಧೀನತೆಯಲ್ಲಿರಲಿಲ್ಲ, ಸದರಿ ದಿನಾಂಕದಂದು, ಬಾಕಿದಾರನ ಸ್ವಾಧೀನತೆಯಲ್ಲಿತ್ತು, ಅದು ಆತನ ಸ್ವಾಧೀನತೆಯಲ್ಲಿದ್ದದ್ದು, ಆತನ ಸ್ವಂತ ಖಾತೆಯಲ್ಲಲ್ಲ ಅಥವಾ ಆತನ ಸ್ವಂತ ಸ್ವತ್ತಾಗಿಯಲ್ಲ, ಆದರೆ ಯಾವುದೇ ಇತರ ವ್ಯಕ್ತಿಗಾಗಿ ಟ್ರಸ್ಟ್‌ನ ಖಾತೆಯಲ್ಲಿ ಅಥವಾ ಅದರಲ್ಲಿತ್ತು, ಅಥವಾ ಭಾಗಶಃವಾಗಿ ಆತನ ಖಾತೆಯಲ್ಲಿ ಅಥವಾ ಭಾಗಶಃವಾಗಿ ಕೆಲವು ಇತರೇ ವ್ಯಕ್ತಿಯ ಖಾತೆಯಲ್ಲಿತ್ತು, ಎನ್ನುವುದನ್ನು ಮನದಟ್ಟು ಮಾಡಿಕೊಂಡಿದ್ದಲ್ಲಿ, ಯುಕ್ತ ಅಧಿಕಾರಿಯು ಸ್ವತ್ತನ್ನು ಪೂರ್ಣವಾಗಿ ಅಥವಾ ಆತನು ಸೂಕ್ತ ಎಂದು ಭಾವಿಸಿದಷ್ಟರ ಮಟ್ಟಿಗೆ ಜಪ್ತಿಅಥವಾ ಚರಾಸ್ತಿ ವಶದಿಂದ ಬಿಡುಗಡೆ ಮಾಡಿ ಆದೇಶ ಮಾಡತಕ್ಕದ್ದು.

(11) ಯುಕ್ತ ಅಧಿಕಾರಿಯು ಸ್ವತ್ತು, ಸದರಿ ದಿನಾಂಕಂದು ಬಾಕಿದಾರನ ಸ್ವಾಧೀನತೆಯಲ್ಲಿ, ಆತನ ಸ್ವಂತ ಸ್ವತ್ತಾಗಿ ಇತ್ತು ಮತ್ತು ಯಾವುದೇ ವ್ಯಕ್ತಿಯ ಖಾತೆಯಲ್ಲಿರಲಿಲ್ಲ, ಅಥವಾ ಆತನಿಗಾಗಿ ಟ್ರಸ್ಟ್‌ನಲ್ಲಿ ಇತರ ವ್ಯಕ್ತಿಯ ಸ್ವಾಧೀನತೆಯಲ್ಲಿತ್ತು, ಅಥವಾ ಗೇಣಿದಾರನ ಅಥವಾ ಆತನಿಗೆ ಬಾಡಿಗೆಯನ್ನು ಸಂದಾಯ ಮಾಡುವ ಇತರೇ ವ್ಯಕ್ತಿಯ ಅಧಿಭೋಗದಲ್ಲಿತ್ತು ಎನ್ನುವುದನ್ನು ಮನದಟ್ಟು ಮಾಡಿಕೊಂಡಿದ್ದಲ್ಲಿ, ಯುಕ್ತ ಅಧಿಕಾರಿಯು ಕ್ಲೇಮನ್ನು ತಿರಸ್ಕರಿಸತಕ್ಕದ್ದು ಮತ್ತು ಹರಾಜಿನ ಮೂಲಕ ಮಾರಾಟದ ಪ್ರಕ್ರಿಯೆಯನ್ನು ಮುಂದುವರಿಸತಕ್ಕದ್ದು.

(12) ಯುಕ್ತ ಅದಿಕಾರಿಯು ಯಶಸ್ವಿ ಸವಾಲುದಾರನಿಗೆ ಒಂದು ಸೂಚನಾಪತ್ರವನ್ನು, ಅಂಥ ಸೂಚನಾಪತ್ರ ನೀಡಿದ ದಿನಾಂಕದಿಂದ ಹದಿನೈದು ದಿನಗಳ ಒಂದು ಅವಧಿಯ ಒಳಗಾಗಿ ಸಂದಾಯವನ್ನು ಮಾಡುವಂತೆ ಆತನನ್ನು ಅಗತ್ಯಪಡಿಸಿ **ನಮೂನೆ ಜಿಎಸ್‌ಟಿ ಡಿಆರ್‌ಸಿ–11**ರಲ್ಲಿ ನೀಡತಕ್ಕದ್ದು ಮತ್ತು ಸದರಿ ಸಂದಾಯವನ್ನು ಮಾಡಿದ ನಂತರ, ಆತನು ಸ್ವತ್ತಿನ ವಿವರಗಳು, ವರ್ಗಾವಣೆಯ ದಿನಾಂಕ, ಸವಾಲುದಾರನ ವಿವರಗಳು ಮತ್ತು ಸಂದಾಯ ಮಾಡಿದ ಮೊತ್ತವನ್ನು ನಿರ್ದಿಷ್ಟಪಡಿಸಿ ಒಂದು ಪ್ರಮಾಣ ಪತ್ರವನ್ನು **ನಮೂನೆ ಜಿಎಸ್‌ಟಿ ಡಿಆರ್‌ಸಿ–12**ರಲ್ಲಿ ನೀಡತಕ್ಕದ್ದು ಮತ್ತು ಅಂಥ ಪ್ರಮಾಣಪತ್ರವನ್ನು ನೀಡಿದ ತರುವಾಯ, ಸ್ವತ್ತಿನಲ್ಲಿಯ ಹಕ್ಕುಗಳು, ಸ್ವಾಮ್ಯ ಮತ್ತು ಹಿತಾಶಕ್ತಿಯು ಅಂಥ ಸವಾಲುದಾರನಿಗೆ ವರ್ಗಾಯಿಸಲಾಗಿದೆ ಎಂದು ಪರಿಭಾವಿಸತಕ್ಕದ್ದು.

(13) ಉಪನಿಯಮ (12)ರಲ್ಲಿ ನಿರ್ದಿಷ್ಟಪಡಿಸಿದ ಸ್ವತ್ತಿನ ವರ್ಗಾವಣೆಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಸ್ಟಾಂಪು ಸುಂಕ, ತೆರಿಗೆ ಅಥವಾ ಶುಲ್ಕವನ್ನು ಒಳಗೊಂಡಂತೆ ಯಾವುದೇ ಮೊತ್ತವನ್ನು, ಯಾರಿಗೆ ಅಂಥ ಸ್ವತ್ತು ವರ್ಗಾವಣೆಯಾಗಿದೆಯೋ ಆ ವ್ಯಕ್ತಿಯು ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು.

(14) ಬಾಕಿದಾರನು ವಸೂಲಾತಿಯ ಅಡಿಯಲ್ಲಿನ ಮೊತ್ತವನ್ನು, ವಸೂಲಾತಿಯ ಪ್ರಕ್ರಿಯೆ ಮೇಲೆ ಭರಿಸಲಾದ ಯಾವುದೇ ವಚ್ಚವನ್ನು ಒಳಗೊಂಡಂತೆ, ಉಪನಿಯಮ (4)ರ ಅಡಿಯಲ್ಲಿ ಸೂಚನಾ ಪತ್ರವನ್ನು ನೀಡುವುದಕ್ಕಿಂತ ಮೊದಲೇ ಸಂದಾಯ ಮಾಡಿದಲ್ಲಿ, ಯುಕ್ತ ಅಧಿಕಾರಿಯು ಹರಾಜಿನ ಪ್ರಕ್ರಿಯೆಯನ್ನು ರದ್ದುಗೊಳಿಸತಕ್ಕದ್ದು ಮತ್ತು ಸರಕುಗಳನ್ನು ಬಿಡುಗಡೆಗೊಳಿಸತಕ್ಕದ್ದು.

(15) ಯುಕ್ತ ಅಧಿಕಾರಿಯು, ಯಾವುದೇ ಸವಾಲನ್ನು ಸ್ವೀಕರಿಸದಿದ್ದಲ್ಲಿ ಅಥವಾ ಸಾಕಷ್ಟು ಭಾಗವಹಿಸುವಿಕೆಯ ಕೊರತೆಯ ಕಾರಣದಿಂದಾಗಿ ಅಥವಾ ಕಡಿಮೆ ಸವಾಲುಗಳ ಕಾರಣದಿಂದಾಗಿ ಹರಾಜು ಸ್ಪರ್ಧಾತ್ಮಕವಾಗಿಲ್ಲ ಎಂದು ಪರಿಗಣಿಸಬೇಕಾಗಿದ್ದಲ್ಲಿ, ಪ್ರಕ್ರಿಯೆಯನ್ನು ರದ್ದುಗೊಳಿಸತಕ್ಕದ್ದು ಮತ್ತು ಪುನರ್–ಹರಾಜಿಗಾಗಿ ಮುಂದುವರಿಯತಕ್ಕದ್ದು.

ಪ್ರಕರಣ 79ರ ಅನುಬಂಧಗಳನುಸಾರವಾಗಿ ರೂ. . . . . ಮತ್ತು ಅದರ ಮೇಲಾಗುವ ಬಡ್ಡಿ ಮತ್ತು ವಸೂಲಾತಿ ಪ್ರಕ್ರಿಯೆಯಲ್ಲಿ ಕೈಗೊಂಡ ಅನ್ವಯವಾಗತಕ್ಕ ವೆಚ್ಚಗಳ ವಸೂಲಾತಿಗಾಗಿ ಈ ಕೆಳಕಂಡ ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಿದ ಜಪ್ತಿ ಮಾಡಿದ ಅಥವಾ ನಿರ್ಬಂಧಿಸಿದ ಸರಕುಗಳ ಮಾರಾಟಕ್ಕಾಗಿ ಒಂದು ಆದೇಶವನ್ನು ನನ್ನಿಂದ ಮಾಡಲಾಗಿರುತ್ತದೆ;

ಮಾರಾಟವು ಬಹಿರಂಗ ಹರಾಜಿನ ಮೂಲಕ ಆಗುತ್ತದೆ ಮತ್ತು ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂತೆ ಲಾಟ್‌ಗಳಲ್ಲಿ ಮಾರಾಟಕ್ಕಾಗಿ ಸರಕುಗಳನ್ನು ಇಡತಕ್ಕದ್ದಾಗಿರುತ್ತದೆ. ಮಾರಾಟವು ಸುಸ್ತಿದಾರನ ಹಕ್ಕು, ಮಾಲೀಕತ್ವ ಮತ್ತು ಹಿತಾಸಕ್ತಿಗಳದ್ದಾಗಿರುತ್ತದೆ. ಮತ್ತು ಸದರಿ ಸ್ವತ್ತುಗಳಿಗೆ ಸಂಬಂಧಿಸಿದ ಬಾಧ್ಯತೆಗಳು ಮತ್ತು ಕ್ಲೇಮುಗಳು, ಅವು ನಿರ್ಧರಿಸಲ್ಪಟ್ಟಿರುವಷ್ಟರ ಮಟ್ಟಿಗೆ, ಪ್ರತಿ ಲಾಟ್‌ನ ಎದುರು ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಿದಂತೆ ಇರುತ್ತವೆ.

ಹರಾಜು . . . . . ದಂದು . . . . (ಸಮಯ)ದಲ್ಲಿ ನಡೆಸಲಾಗುತ್ತದೆ. ಹರಾಜಿನ ದಿನಾಂಕದ ಮುಂಚೆ ಬಾಕಿಯಿರುವ ಪೂರ್ಣ ಮೊತ್ತವನ್ನು ತುಂಬಿದ ಸಂದರ್ಭದಲ್ಲಿ, ಮಾರಾಟವನ್ನು ನಿಲ್ಲಿಸಲಾಗುವುದು.

ಮಾರಾಟದ ಸಮಯದಲ್ಲಿ ಅಥವಾ ಯುಕ್ತ ಅಧಿಕಾರಿಯ / ನಿರ್ದಿಷ್ಟಪಡಿಸಿದ ಅಧಿಕಾರಿಯ ನಿರ್ದೇಶನದ ಅನುಸಾರವಾಗಿ ಪ್ರತಿ ಲಾಟ್‌ನ ಬೆಲೆಯನ್ನು ತುಂಬತಕ್ಕದ್ದು ಮತ್ತು ಪಾವತಿಯನ್ನು ಮಾಡಲು ವಿಫಲನಾದರೆ, ಸರಕುಗಳನ್ನು ಮತ್ತೊಮ್ಮೆ ಹರಾಜು ಮಾಡಲಾಗುವುದು ಮತ್ತು ಮರುಮಾರಾಟ ಮಾಡಲಾಗುವುದು.

ಅನುಸೂಚಿ

ಕ್ರಮ ಸಂಖ್ಯೆ	ಸರಕುಗಳ ವಿವರಣೆ	ಪರಿಮಾಣ
1	2	3

ಸಹಿ
ಹೆಸರು
ಪದನಾಮ

ಸ್ಥಳ
ದಿನಾಂಕ

352

ನಮೂನೆ ಜಿಎಸ್‌ಟಿ ಡಿಆರ್‌ಸಿ–11

[ನಿಯಮ 144(5) & 147(12) ನೋಡಿ]

ಇವರಿಗೆ

_____

ಬಹಿರಂಗ ಹರಾಜು ಉಲ್ಲೇಖ ಸಂ. _____ ದಿನಾಂಕ _____ ವನ್ನು ದಯಮಾಡಿ ಗಮನಿಸಿ. _____ ದಂದು ನಡೆಸಲಾದ ಹರಾಜಿನ ಆಧಾರದ ಮೇಲೆ, ಸದರಿ ಪ್ರಕರಣದಲ್ಲಿ ಯಶಸ್ವಿ ಬಿಡ್ದುದಾರರಾಗಿ ನಿಮ್ಮನ್ನು ಗುರುತಿಸಲಾಗಿದೆ. ಹರಾಜಿನ ದಿನಾಂಕದಿಂದ 15 ದಿನಗಳ ಒಳಗಾಗಿ ರೂ. _____ಗಳ ಪಾವತಿಯನ್ನು ಮಾಡಲು ನಿಮ್ಮನ್ನು ಅಗತ್ಯಪಡಿಸಲಾಗಿದೆ.

ನೀವು ಬಿಡ್ ಮೊತ್ತದ ಪೂರ್ಣ ಪಾವತಿಯನ್ನು ಮಾಡಿದ ತರುವಾಯ ಸರಕುಗಳ ಸ್ವಾಧೀನತೆಯನ್ನು ನಿಮಗೆ ನೀಡಲಾಗುತ್ತದೆ.

ಸಹಿ
ಹೆಸರು
ಪದನಾಮ

ಸ್ಥಳ
ದಿನಾಂಕ

ನಮೂನೆ ಜಿಎಸ್‌ಟಿ ಡಿಆರ್‌ಸಿ–12

[ನಿಯಮ 144(2) ನೋಡಿ]

ಮಾರಾಟದ ಪ್ರಮಾಣಪತ್ರ

ತಗಾದೆ ಆದೇಶ ಸಂ. ದಿನಾಂಕ
ವಸೂಲಾತಿಯ ಉಲ್ಲೇಖ ಸಂ.: ದಿನಾಂಕ
ಅವಧಿ:

ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ, ಕೆಳಕಂಡ ಸರಕುಗಳನ್ನು:

ಅನುಸೂಚಿ (ಚರವಸ್ತುಗಳು)

ಕ್ರ.ಸಂ.	ಸರಕುಗಳ ವಿವರಣೆ	ಪರಿಮಾಣ
1	2	3

ಅನುಸೂಚಿ (ಸ್ಥಿರಾಸ್ತಿಗಳು)

ಕಟ್ಟಡ	ಮಹಡಿ	ಆವರಣದ	ರಸ್ತೆ /	ಭಾಗ /	ಜಿಲ್ಲೆ	ರಾಜ್ಯ	ಪಿನ್	ಅಕ್ಷಾಂಶ	ರೇಖಾಂಶ

353

ಸಂ./ ಫ್ಲಾಟ್ ಸಂ.	ಸಂಖ್ಯೆ	/ ಕಟ್ಟಡದ ಹೆಸರು	ಮಾರ್ಗ	ಗ್ರಾಮ			ಕೋಡ್	(ಐಚ್ಛಿಕ)	(ಐಚ್ಛಿಕ)
1	2	3	4	5	6	7	8	9	10

ಅನುಸೂಚಿ (ಷೇರುಗಳು)

ಕ್ರ.ಸಂ.	ಕಂಪನಿಯ ಹೆಸರು	ಪರಿಮಾಣ	ಮೌಲ್ಯ
1	2	3	4

<< ಎಸ್‌ಜಿಎಸ್‌ಟಿ / ಯುಟಿಜಿಎಸ್‌ಟಿ / ಸಿಜಿಎಸ್‌ಟಿ / ಐಜಿಎಸ್‌ಟಿ / ಉಪಕರ >> ಅಧಿನಿಯಮದ ಪ್ರಕರಣ 79(1)(ಬಿ) ಮತ್ತು ಅದರಡಿಯಲ್ಲಿ ಮಾಡಲಾದ ನಿಯಮಗಳ ಉಪಬಂಧಗಳನುಸಾರವಾಗಿ ರೂ. . . . . ಗಳ ವಸೂಲಾತಿಗಾಗಿ . . . . . ರಂದು. . . . . ರಲ್ಲಿ ನಡೆದ ವಸ್ತುಗಳ ಬಹಿರಂಗ ಹರಾಜಿನಲ್ಲಿ . . . . . .ಇವರಿಗೆ ಮಾರಾಟ ಮಾಡಲಾಗಿದೆ ಮತ್ತು ಸದರಿ . . . . . (ಖರೀದಿದಾರ) ನನ್ನು ಮಾರಾಟದ ಸಮಯದಲ್ಲಿ ಸದರಿ ವಸ್ತುಗಳ ಖರೀದಿದಾರನೆಂದು ಘೋಷಿಸಲಾಗಿದೆ. ಸದರಿ ವಸ್ತುಗಳ ಮಾರಾಟದ ಬೆಲೆಯನ್ನು . . . . . .ರಂದು ಸ್ವೀಕರಿಸಲಾಗಿದೆ. ಮಾರಾಟವನ್ನು . . . . . .ರಂದು ಖಾಯಂಗೊಳಿಸಲಾಗಿದೆ.

ಸಹಿ
ಹೆಸರು
ಪದನಾಮ

ಸ್ಥಳ
ದಿನಾಂಕ

ನಮೂನೆ ಜಿಎಸ್‌ಟಿ ಡಿಆರ್‌ಸಿ–13

[ನಿಯಮ 145(1) ನೋಡಿ]

ಪ್ರಕರಣ 79(1)(ಸಿ) ಅಡಿಯಲ್ಲಿ ಮೂರನೇ ವ್ಯಕ್ತಿಗೆ ನೋಟೀಸು

ಇವರಿಗೆ,

. . . . . .

<<ಎಸ್‌ಜಿಎಸ್‌ಟಿ / ಯುಟಿಜಿಎಸ್‌ಟಿ / ಸಿಜಿಎಸ್‌ಟಿ / ಐಜಿಎಸ್‌ಟಿ / ಸೆಸ್>> ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ತೆರಿಗೆ, ಉಪಕರ, ಬಡ್ಡಿ ಮತ್ತು ದಂಡಗಳ ಖಾತೆಯಲ್ಲಿ ರೂ. <<. . . . .>>ಗಳ ಮೊತ್ತವು <<ಜಿಎಸ್‌ಟಿಐಎನ್>>

354

ಹೊಂದಿರುವ << ತೆರಿಗೆದಾಯಕ ವ್ಯಕ್ತಿಯ ಹೆಸರು>> ಇವರಿಂದ ಪಾವತಿಯಾಗಬೇಕಾಗಿದ್ದು, ಅಂಥ ಮೊತ್ತದ ಪಾವತಿಯನ್ನು ಮಾಡಲು ಅವರು ವಿಫಲರಾಗಿರುತ್ತಾರೆ; ಮತ್ತು / ಅಥವಾ

ಸದರಿ ತೆರಿಗೆದಾಯಕ ವ್ಯಕ್ತಿಗೆ ನಿಮ್ಮಿಂದ ರೂ. . . . . .ಗಳ ಮೊತ್ತವು ನೀಡುವುದು ಬಾಕಿಯಿರುತ್ತದೆ ಅಥವಾ ಬಾಕಿಯಾಗಬೇಕಾಗುವುದು ಇರುತ್ತದೆ ಎಂದು ಗಮನಿಸಲಾಗಿದೆ; ಅಥವಾ

ಸದರಿ ವ್ಯಕ್ತಿಯ ಪರವಾಗಿ ಅಥವಾ ಅವನ ಖಾತೆಯಲ್ಲಿ ರೂ. . . . . ಗಳ ಮೊತ್ತವನ್ನು ನೀವು ಹೊಂದಿರುತ್ತೀರಿ ಅಥವಾ ಹೊಂದಬಹುದೆಂಬುದನ್ನು ಗಮನಿಸಲಾಗಿದೆ.

ನೀವು ಸರ್ಕಾರಕ್ಕೆ ಈ ಕೂಡಲೇ ಅಥವಾ ಹಣವು ಪಾವತಿಗೆ ಬಾಕಿಯಾದ ಕೂಡಲೇ ಅಥವಾ ಹೊಂದಿದ ಕೂಡಲೇ ರೂ. . . . . ಗಳ ಮೊತ್ತವನ್ನು ಅಧಿನಿಯಮದ ಪ್ರಕರಣ 79ರ ಉಪಪ್ರಕರಣ (1)ರ ಖಂಡ (ಸಿ)(i)ನಲ್ಲಿ ಒಳಗೊಂಡ ಉಪಬಂಧಗಳ ಅನುಸಾರವಾಗಿ ಪಾವತಿ ಮಾಡಲು ನಿಮಗೆ ಈ ಮೂಲಕ ನಿರ್ದೇಶಿಸಿದೆ.

ಈ ನೋಟೀಸಿಗೆ ಅನುಸಾರವಾಗಿ ನೀವು ಮಾಡಿದ ಯಾವುದೇ ಪಾವತಿಯನ್ನು ಅಧಿನಿಯಮದ ಪ್ರಕರಣ 79ರ ಅಧಿನಿಯಮದ ಅಡಿಯಲ್ಲಿ ಸದರಿ ತೆರಿಗೆದಾಯಕ ವ್ಯಕ್ತಿಯ ಪ್ರಾಧಿಕರಣೆಯ ಅಡಿಯಲ್ಲಿ ಮಾಡಲಾದ ಪಾವತಿಯೆಂದು ಪರಿಭಾವಿಸತಕ್ಕದ್ದು ಮತ್ತು ನಮೂನೆ ಜಿಎಸ್‌ಟಿ ಡಿಆರ್‌ಸಿ–14ರಲ್ಲಿ ಸರ್ಕಾರದಿಂದ ಪ್ರಮಾಣಪತ್ರವು ಅಂಥ ವ್ಯಕ್ತಿಗೆ ನಿಮ್ಮ ಬಾಧ್ಯತೆಯ, ಪ್ರಮಾಣಪತ್ರದಲ್ಲಿ ನಿರ್ದಿಷ್ಟಪಡಿಸಿರುವ ಮೊತ್ತದಷ್ಟರ ಮಟ್ಟಿಗೆ, ಸರಿಯಾದ ಮತ್ತು ಸಮರ್ಥವಾದ ತೀರುವಳಿಯಾಗುತ್ತದೆ.

ಮತ್ತೂ, ಈ ನೋಟೀಸು ಸ್ವೀಕರಿಸಿದ ನಂತರ ಸದರಿ ತೆರಿಗೆದಾಯಕ ವ್ಯಕ್ತಿಗೆ ಯಾವುದಾದರೂ ಬಾಧ್ಯತೆಯನ್ನು ತೀರುವಳಿ ಮಾಡಿದರೆ, ತೀರುವಳಿ ಮಾಡಿದ ಅಥವಾ ತೆರಿಗೆ, ಉಪಕರ, ಬಡ್ಡಿ ಮತ್ತು ದಂಡಕ್ಕಾಗಿ ತೆರಿಗೆದಾಯಕ ವ್ಯಕ್ತಿಯ ಬಾಧ್ಯತೆ, ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟರ ಮಟ್ಟಿಗೆ ಅಧಿನಿಯಮದ ಪ್ರಕರಣ 79ರ ಅಡಿಯಲ್ಲಿ ರಾಜ್ಯ / ಕೇಂದ್ರ ಸರ್ಕಾರಕ್ಕೆ ವೈಯಕ್ತಿಕವಾಗಿ ಬಾಧ್ಯರಾಗುತ್ತೀರಿ ಎಂಬುದನ್ನು ದಯವಿಟ್ಟು ಗಮನಿಸಿರಿ.

ಮತ್ತೂ, ಈ ನೋಟೀಸಿನ ಫಲಶೃತಿಯಂತೆ ಪಾವತಿಯನ್ನು ಮಾಡಲು ವಿಫಲರಾದಲ್ಲಿ, ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಮೊತ್ತಕ್ಕೆ ಸಂಬಂಧಿಸಿದಂತೆ ಸುಸ್ತಿದಾರರೆಂದು ನಿಮ್ಮನ್ನು ಪರಿಭಾವಿಸಲಾಗುವುದು ಎಂಬುದನ್ನು ಗಮನಿಸಿರಿ ಮತ್ತು ಅಧಿನಿಯಮದ ಮತ್ತು ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಪರಿಣಾಮಗಳು ಅನುಸರಿಸುತ್ತವೆ.

ಸಹಿ
ಹೆಸರು
ಪದನಾಮ

ಸ್ಥಳ
ದಿನಾಂಕ

ನಮೂನೆ ಜಿಎಸ್‌ಟಿ ಡಿಆರ್‌ಸಿ–14

[ನಿಯಮ 145(2) ನೋಡಿ]

ಮೂರನೇ ವ್ಯಕ್ತಿಗೆ ಪಾವತಿಯ ಪ್ರಮಾಣಪತ್ರ

ದಿನಾಂಕ . . . . . .ದ ಉಲ್ಲೇಖ ಸಂಖ್ಯೆ . . . . . ಹೊಂದಿರುವ ನಮೂನೆ ಜಿಎಸ್‌ಟಿ ಡಿಆರ್‌ಸಿ–13ರಲ್ಲಿ ನಿಮಗೆ ನೀಡಲಾದ ನೋಟೀಸಿಗೆ ಅನುಸಾರವಾಗಿ, ನೀವು ನಿಮ್ಮ ಬಾಧ್ಯತೆಯನ್ನು ರೂ . . . . . ಗಳನ್ನು ಕೆಳಗೆ ಹೇಳಲಾದ ಸುಸ್ತಿದಾರನಿಗಾಗಿ ಪಾವತಿ ಮಾಡುವ ಮೂಲಕ ನಿರ್ವಹಿಸಿರುತ್ತೀರಿ:

ಜಿಎಸ್‌ಟಿಐಎನ್ :

355

ಹೆಸರು –
ತಗಾದೆ ಆದೇಶ ಸಂಖ್ಯೆ : ದಿನಾಂಕ
ವಸೂಲಾತಿ ಉಲ್ಲೇಖ ಸಂಖ್ಯೆ : ದಿನಾಂಕ
ಅವಧಿ:

ಈ ಪ್ರಮಾಣಪತ್ರದಲ್ಲಿ ನಿರ್ದಿಷ್ಟಪಡಿಸಿರುವಷ್ಟರ ಮಟ್ಟಿಗೆ ಮೇಲೆ ಹೇಳಿರುವ ಸುಸ್ತಿದಾರನಿಗೆ ನಿಮ್ಮ ಬಾಧ್ಯತೆಯ ಸರಿಯಾದ ಮತ್ತು ಸಮರ್ಪಕವಾದ ನಿರ್ವಹಣೆಯಾಗಿ ಈ ಪ್ರಮಾಣಪತ್ರವು ನಿಯಮಿಸುತ್ತದೆ.

ಸಹಿ
ಹೆಸರು
ಪದನಾಮ

ಸ್ಥಳ
ದಿನಾಂಕ

ನಮೂನೆ ಜಿಎಸ್‌ಟಿ ಡಿಆರ್‌ಸಿ–15

[ನಿಯಮ 146 ನೋಡಿ]

ಸಿವಿಲ್ ನ್ಯಾಯಾಲಯದ ಮುಂದೆ ಡಿಕ್ರಿಯ ಕಾರ್ಯಪಾಲನೆಗಾಗಿ ಕೋರುವ ಅರ್ಜಿ

ಇವರಿಗೆ,

ಮಾನ್ಯ ನ್ಯಾಯಾಧೀಶರು

. . . . . ನ್ಯಾಯಾಲಯ

ತಗಾದೆ ಆದೇಶ ಸಂ.: ದಿನಾಂಕ: ಅವಧಿ:

ಮಾನ್ಯರೇ,

ಮೊಕ್ಕದ್ದಮೆ ಸಂಖ್ಯೆ . . . . . ರ . . . . . ರಲ್ಲಿ . . . . . (ಸುಸ್ತಿದಾರನ ಹೆಸರು) ಇವರು 20.. ರ . . . . . ದಿನದಂದು ತಮ್ಮ ನ್ಯಾಯಾಲಯದಿಂದ ಪಡೆದ ಡಿಕ್ರಿಯ ಪ್ರಕಾರ ಸದರಿ ವ್ಯಕ್ತಿಗೆ ರೂ. . . . . .ಗಳ ಮೊತ್ತವನ್ನು ಪಾವತಿಸಬೇಕಾಗಿರುತ್ತದೆ ಎಂಬುದನ್ನು ತಮ್ಮ ಮಾಹಿತಿಗಾಗಿ ಸಲ್ಲಿಸಿದೆ. ಆದರೆ, ಸದರಿ ವ್ಯಕ್ತಿಯು ಆದೇಶ ಸಂಖ್ಯೆ . . . . . ದಿನಾಂಕ . . . . . ದಂತೆ <<ಎಸ್‌ಜಿಎಸ್‌ಟಿ / ಯುಟಿಜಿಎಸ್‌ಟಿ / ಸಿಜಿಎಸ್‌ಟಿ / ಐಜಿಎಸ್‌ಟಿ / ಉಪಕರ >> ಅಧಿನಿಯಮದ ಉಪಬಂಧಗಳ ಅಡಿಯಲ್ಲಿ . . . . . ರೂಪಾಯಿಗಳ ಮೊತ್ತವನ್ನು ಪಾವತಿಸಲು ಬಾಧ್ಯನಾಗಿರುತ್ತಾನೆ.

ಆದ್ದರಿಂದ ಡಿಕ್ರಿಯನ್ನು ಕಾರ್ಯಪಾಲಿಸಲು ಮತ್ತು ಮೇಲೆ ಹೇಳಿರುವ ವಸೂಲಾಗಬೇಕಾಗಿರುವ ಸುಸ್ತಿ ಮೊತ್ತದ ತೀರುವಳಿಗಾಗಿ ನಿವ್ವಳ ಮೊತ್ತವನ್ನು ಜಮಾ ಮಾಡಲು ತಮ್ಮನ್ನು ಕೋರಿದೆ.

ಸ್ಥಳ

ದಿನಾಂಕ ಯುಕ್ತ ಅಧಿಕಾರಿ / ನಿರ್ದಿಷ್ಟಪಡಿಸಿದ ಅಧಿಕಾರಿ

356

ನಮೂನೆ ಜಿಎಸ್‌ಟಿ ಡಿಆರ್‌ಸಿ–16

[ನಿಯಮ 147(1) & 151(1) ನೋಡಿ]

ಇವರಿಗೆ
ಜಿಎಸ್‌ಟಿಐಎನ್
ಹೆಸರು
ವಿಳಾಸ

ತಗಾದೆ ಆದೇಶ ಸಂಖ್ಯೆ : ದಿನಾಂಕ
ವಸೂಲಾತಿ ಉಲ್ಲೇಖ ಸಂಖ್ಯೆ : ದಿನಾಂಕ
ಅವಧಿ:

ಪ್ರಕರಣ 79ರ ಅಡಿಯಲ್ಲಿ ಸ್ಥಿರಾಸ್ತಿ / ಚರ ವಸ್ತುಗಳು/ ಷೇರುಗಳ ಮುಟ್ಟುಗೋಲಿಗಾಗಿ ಮತ್ತು ಮಾರಾಟಕ್ಕಾಗಿ ನೋಟೀಸು

<<ಎಸ್‌ಜಿಎಸ್‌ಟಿ / ಯುಟಿಜಿಎಸ್‌ಟಿ / ಸಿಜಿಎಸ್‌ಟಿ / ಐಜಿಎಸ್‌ಟಿ / ಉಪಕರ >> ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ನೀವು ಪಾವತಿಸಬೇಕಾಗಿರುವ ತೆರಿಗೆ / ಉಪಕರ / ಬಡ್ಡಿ / ದಂಡದ ಬಾಕಿಯಾದ . . . . . ರೂಪಾಯಿಗಳ ಮೊತ್ತವನ್ನು ಪಾವತಿಸಲು ನೀವು ವಿಫಲರಾಗಿರುತ್ತೀರಿ.

ಈ ಕೆಳಗಿನ ಕೋಷ್ಟಕದಲ್ಲಿ ತಿಳಿಸಿರುವ ಸ್ಥಿರ ವಸ್ತುಗಳನ್ನು, ಆದ್ದರಿಂದ, ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಮತ್ತು ಸದರಿ ಮೊತ್ತದ ವಸೂಲಾತಿಗಾಗಿ ಮಾರಾಟ ಮಾಡಲಾಗುತ್ತದೆ. ಸದರಿ ವಸ್ತುಗಳ ವರ್ಗಾವಣೆ ಅಥವಾ ಅವುಗಳ ಮೇಲೆ ಯಾವುದೇ ಬಾಧ್ಯತೆಯನ್ನು ಸೃಷ್ಟಿಸುವುದನ್ನು ಈ ಮೂಲಕ ನಿಮ್ಮನ್ನು ಪ್ರತಿಬಂಧಿಸಲಾಗಿದೆ ಮತ್ತು ನಿಮ್ಮಿಂದ ಆದ ಯಾವುದೇ ವರ್ಗಾವಣೆ ಅಥವಾ ಬಾಧ್ಯತೆಯ ಸೃಷ್ಟಿಯು ಅಸಿಂಧುವಾಗಿರುತ್ತದೆ.

ಅನುಸೂಚಿ (ಚರವಸ್ತುಗಳು)

ಕ್ರ.ಸಂ.	ಸರಕುಗಳ ವಿವರಣೆ	ಪರಿಮಾಣ
1	2	3

ಅನುಸೂಚಿ (ಸ್ಥಿರಾಸ್ತಿಗಳು)

ಕಟ್ಟಡ ಸಂ./ ಫ್ಲಾಟ್ ಸಂ.	ಮಹಡಿ ಸಂಖ್ಯೆ	ಆವರಣದ / ಕಟ್ಟಡದ ಹೆಸರು	ರಸ್ತೆ / ಮಾರ್ಗ	ಭಾಗ / ಗ್ರಾಮ	ಜಿಲ್ಲೆ	ರಾಜ್ಯ	ಪಿನ್ ಕೋಡ್	ಅಕ್ಷಾಂಶ (ಐಚ್ಛಿಕ)	ರೇಖಾಂಶ (ಐಚ್ಛಿಕ)
1	2	3	4	5	6	7	8	9	10

ಅನುಸೂಚಿ (ಷೇರುಗಳು)

ಕ್ರ.ಸಂ.	ಕಂಪನಿಯ ಹೆಸರು	ಪರಿಮಾಣ	ಮೌಲ್ಯ
1	2	3	4

357

ಸಹಿ
ಹೆಸರು
ಪದನಾಮ

ಸ್ಥಳ
ದಿನಾಂಕ

ನಮೂನೆ ಜಿಎಸ್‌ಟಿ ಡಿಆರ್‌ಸಿ–17

[ನಿಯಮ 147(4) ನೋಡಿ]

ಪ್ರಕರಣ 79(1)(ಡಿ) ಅಡಿಯಲ್ಲಿ ಸ್ಥಿರಾಸ್ತಿ / ಚರಾಸ್ತಿಯ ಹರಾಜಿಗಾಗಿ ನೋಟೀಸು

ಪ್ರಕರಣ 79ರ ಅನುಬಂಧಗಳನುಸಾರವಾಗಿ ರೂ. . . . . ಮತ್ತು ಅದರ ಮೇಲಾಗುವ ಬಡ್ಡಿ ಮತ್ತು ವಸೂಲಾತಿ ಪ್ರಕ್ರಿಯೆಯಲ್ಲಿ ಕೈಗೊಂಡ ಅನ್ವಯವಾಗತಕ್ಕ ವೆಚ್ಚಗಳ ವಸೂಲಾತಿಗಾಗಿ ಈ ಕೆಳಕಂಡ ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಿದ ಜಪ್ತಿ ಮಾಡಿದ ಅಥವಾ ನಿರ್ಬಂಧಿಸಿದ ಸರಕುಗಳ ಮಾರಾಟಕ್ಕಾಗಿ ಒಂದು ಆದೇಶವನ್ನು ನನ್ನಿಂದ ಮಾಡಲಾಗಿರುತ್ತದೆ;

ಮಾರಾಟವು ಬಹಿರಂಗ ಹರಾಜಿನ ಮೂಲಕ ಆಗುತ್ತದೆ ಮತ್ತು ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂತೆ ಲಾಟ್‌ಗಳಲ್ಲಿ ಮಾರಾಟಕ್ಕಾಗಿ ಸರಕುಗಳನ್ನು ಇಡತಕ್ಕದ್ದಾಗಿರುತ್ತದೆ. ಮಾರಾಟವು ಸುಸ್ತಿದಾರನ ಹಕ್ಕು, ಮಾಲೀಕತ್ವ ಮತ್ತು ಹಿತಾಸಕ್ತಿಗಳದ್ದಾಗಿರುತ್ತದೆ. ಮತ್ತು ಸದರಿ ಸ್ವತ್ತುಗಳಿಗೆ ಸಂಬಂಧಿಸಿದ ಬಾಧ್ಯತೆಗಳು ಮತ್ತು ಕ್ಲೇಮುಗಳು, ಅವು ನಿರ್ಧರಿಸಲ್ಪಟ್ಟಿರುವಷ್ಟರ ಮಟ್ಟಿಗೆ, ಪ್ರತಿ ಲಾಟ್‌ನ ಎದುರು ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಿದಂತೆ ಇರುತ್ತವೆ.

ಮುಂದೂಡಿಕೆಯ ಯಾವುದೇ ಆದೇಶದ ಅನುಪಸ್ಥಿತಿಯಲ್ಲಿ, ಹರಾಜು . . . . . ದಂದು . . . . (ಸಮಯ)ದಲ್ಲಿ ನಡೆಸಲಾಗುತ್ತದೆ. ಹರಾಜಿನ ದಿನಾಂಕದ ಮುಂಚೆ ಬಾಕಿಯಿರುವ ಪೂರ್ಣ ಮೊತ್ತವನ್ನು ತುಂಬಿದ ಸಂದರ್ಭದಲ್ಲಿ, ಮಾರಾಟವನ್ನು ನಿಲ್ಲಿಸಲಾಗುವುದು.

ಮಾರಾಟದ ಸಮಯದಲ್ಲಿ ಅಥವಾ ಯುಕ್ತ ಅಧಿಕಾರಿಯ / ನಿರ್ದಿಷ್ಟಪಡಿಸಿದ ಅಧಿಕಾರಿಯ ನಿರ್ದೇಶನದ ಅನುಸಾರವಾಗಿ ಪ್ರತಿ ಲಾಟ್‌ನ ಬೆಲೆಯನ್ನು ತುಂಬತಕ್ಕದ್ದು ಮತ್ತು ಪಾವತಿಯನ್ನು ಮಾಡಲು ವಿಫಲನಾದರೆ, ವಸ್ತುಗಳನ್ನು ಮತ್ತೊಮ್ಮೆ ಹರಾಜು ಮಾಡಲಾಗುವುದು ಮತ್ತು ಮರುಮಾರಾಟ ಮಾಡಲಾಗುವುದು.

ಅನುಸೂಚಿ

ಕ್ರಮ ಸಂಖ್ಯೆ	ಸರಕುಗಳ ವಿವರಣೆ	ಪರಿಮಾಣ
1	2	3

ಅನುಸೂಚಿ (ಸ್ಥಿರಾಸ್ತಿಗಳು)

ಕಟ್ಟಡ ಸಂ./ ಫ್ಲಾಟ್ ಸಂ.	ಮಹಡಿ ಸಂಖ್ಯೆ	ಆವರಣದ / ಕಟ್ಟಡದ ಹೆಸರು	ರಸ್ತೆ / ಮಾರ್ಗ	ಭಾಗ / ಗ್ರಾಮ	ಜಿಲ್ಲೆ	ರಾಜ್ಯ	ಪಿನ್ ಕೋಡ್	ಅಕ್ಷಾಂಶ (ಐಚ್ಛಿಕ)	ರೇಖಾಂಶ (ಐಚ್ಛಿಕ)
1	2	3	4	5	6	7	8	9	10

ಅನುಸೂಚಿ (ಷೇರುಗಳು)

358

ಕ್ರ.ಸಂ.	ಕಂಪನಿಯ ಹೆಸರು	ಪರಿಮಾಣ	ಮೌಲ್ಯ
1	2	3	4

ಸ್ಥಳ
ದಿನಾಂಕ

ಸಹಿ
ಹೆಸರು
ಪದನಾಮ

ನಮೂನೆ ಜಿಎಸ್‌ಟಿ ಡಿಆರ್‌ಸಿ–18

[ನಿಯಮ 155 ನೋಡಿ]

ಇವರಿಗೆ
ಜಿಲ್ಲಾಧಿಕಾರಿಗಳ ಹೆಸರು ಮತ್ತು ವಿಳಾಸ
. . . . . .

ತಗಾದೆ ಆದೇಶ ಸಂಖ್ಯೆ :
ದಿನಾಂಕ
ವಸೂಲಾತಿ ಉಲ್ಲೇಖ ಸಂಖ್ಯೆ :
ದಿನಾಂಕ
ಅವಧಿ:

ಪ್ರಕರಣ 79ರ ಉಪಪ್ರಕರಣ (1)ರ ಖಂಡ (ಇ)ಯ ಅಡಿಯಲ್ಲಿ ಕಾರ್ಯ ಪ್ರಮಾಣಪತ್ರ

ನಾನು ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ, ...ರೂಪಾಯಿಗಳ ಮೊತ್ತವನ್ನು ಜಿಎಸ್‌ಟಿಐನ್ . . . . . ಹೊಂದಿರುವ ಮೆ. . . . . ಇವರಿಂದ <<ಎಸ್‌ಜಿಎಸ್‌ಟಿ / ಯುಟಿಜಿಎಸ್‌ಟಿ / ಸಿಜಿಎಸ್‌ಟಿ / ಐಜಿಎಸ್‌ಟಿ / ಉಪಕರ >> ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ತಗಾದೆ ಮಾಡಲಾಗಿದ್ದು, ಅವರಿಂದ ಪಾವತಿಸಬೇಕಾಗಿರುತ್ತದೆ, ಆದರೆ ಪಾವತಿಸಿರುವುದಿಲ್ಲ ಮತ್ತು ಅಧಿನಿಯಮದ ಅಡಿಯಲ್ಲಿ ಉಪಬಂಧಿಸಿದ ರೀತಿಯಲ್ಲಿ ಸದರಿ ಸುಸ್ತಿದಾರನಿಂದ ವಸೂಲಿ ಮಾಡುವುದು ಅಸಾಧ್ಯವಾಗಿರುತ್ತದೆ.

<< ತಗಾದೆಯ ವಿವರಗಳು >>

ಸದರಿ ಜಿಎಸ್‌ಟಿಐಎನ್ ಹೊಂದಿರುವವನು ನಿಮ್ಮ ಕ್ಷೇತ್ರವ್ಯಾಪ್ತಿಯಲ್ಲಿ ಆಸ್ತಿಯನ್ನು ಹೊಂದಿರುತ್ತಾನೆ / ವಾಸವಾಗಿರುತ್ತಾನೆ / ವ್ಯವಹಾರವನ್ನು ನಡೆಸುತ್ತಿರುತ್ತಾನೆ, ಅವುಗಳ ವಿವರಗಳು ಈ ಕೆಳಗಿನಂತಿರುತ್ತವೆ:–

<< ವಿವರಣೆ >>

ಸದರಿ ಸುಸ್ತಿದಾರನಿಂದ . . . . . ರೂಪಾಯಿಗಳ ಮೊತ್ತವನ್ನು, ಭೂಕಂದಾಯದ ಬಾಕಿಯ ರೀತಿಯಲ್ಲಿಯಂತೆಯೇ, ವಸೂಲಿ ಮಾಡಲು ಶೀಘ್ರ ನಡಾವಳಿಗಳನ್ನು ಜರುಗಿಸಲು ಈ ಮೂಲಕ ತಮ್ಮನ್ನು ಕೋರಿದೆ.

ಸಹಿ
ಹೆಸರು
ಪದನಾಮ

ಸ್ಥಳ
ದಿನಾಂಕ

359

ನಮೂನೆ ಜಿಎಸ್‌ಟಿ ಡಿಆರ್‌ಸಿ–19

[ನಿಯಮ 156 ನೋಡಿ]

ಇವರಿಗೆ,

ಮಾನ್ಯ ನ್ಯಾಯಾಧೀಶರು,

<< ನ್ಯಾಯಾಲಯದ ಹೆಸರು ಮತ್ತು ವಿಳಾಸ >>

ತಗಾದೆ ಆದೇಶ ಸಂಖ್ಯೆ : ದಿನಾಂಕ
ವಸೂಲಾತಿ ಉಲ್ಲೇಖ ಸಂಖ್ಯೆ : ದಿನಾಂಕ
ಅವಧಿ:

ಜುಲ್ಮಾನೆಯಂತೆ ವಸೂಲಾತಿಗಾಗಿ ನ್ಯಾಯಾಧೀಶರಿಗೆ ಅರ್ಜಿ

ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ತೆರಿಗೆ, ಬಡ್ಡಿ ಮತ್ತು ದಂಡದ ರುಪದಲ್ಲಿ <<ಜಿಎಸ್‌ಟಿಐಎನ್>> ಹೊಂದಿರುವ << ತೆರಿಗೆದಾಯಕ ವ್ಯಕ್ತಿಯ ಹೆಸರು>> ಇವರಿಂದ . . . . . ರೂಪಾಯಿಗಳ ಮೊತ್ತವು ವಸೂಲಾಗಬೇಕಾಗಿರುತ್ತದೆ. ಅಧಿನಿಯಮದ ಪ್ರಕರಣ 79ರ ಉಪಪ್ರಕರಣ (1)ರ ಖಂಡ (ಎಫ್)ನ ಉಪಬಂಧಗಳ ಅನುಸಾರವಾಗಿ ಅಂಥ ಮೊತ್ತವನ್ನು, ಒಬ್ಬ ನ್ಯಾಯಾಧೀಶರು ವಿಧಿಸಿದ ಜುಲ್ಮಾನೆಯ ರೀತಿಯಲ್ಲಿ, ಅದನ್ನು ದಯಮಾಡಿ ವಸೂಲಿ ಮಾಡಬೇಕೆಂದು ಕೋರಿದೆ.

ಮೊತ್ತದ ವಿವರಗಳು				
ವಿವರಣೆ	ಕೇಂದ್ರ ತೆರಿಗೆ	ರಾಜ್ಯ / ಕೇಂ.ಪ್ರ.ತೆರಿಗೆ	ಏಕೀಕೃತ ತೆರಿಗೆ	ಉಪಕರ
ತೆರಿಗೆ / ಉಪಕರ				
ಬಡ್ಡಿ				
ದಂಡ				
ಶುಲ್ಕ				
ಇತರೆ				
ಒಟ್ಟು				

ಸಹಿ
ಹೆಸರು
ಪದನಾಮ

ಸ್ಥಳ
ದಿನಾಂಕ

360

ನಮೂನೆ ಜಿಎಸ್‌ಟಿ ಡಿಆರ್‌ಸಿ–20

[ನಿಯಮ 158(1) ನೋಡಿ]

ಮುಂದೂಡಿದ ಪಾವತಿ / ಕಂತುಗಳಲ್ಲಿ ಪಾವತಿ ಗಾಗಿ ಅರ್ಜಿ

1. ತೆರಿಗೆದಾಯಕ ವ್ಯಕ್ತಿಯ ಹೆಸರು

2. ಜಿಎಸ್‌ಟಿಐಎನ್ –

3. ಅವಧಿ _____.

ಅಧಿನಿಯಮದ ಪ್ರಕರಣ 80ರ ಉಪಬಂಧಗಳ ಅನುಸಾರವಾಗಿ, ಈ ಕೆಳಗೆ ಹೇಳಿರುವ ಕಾರಣಗಳಿಗಾಗಿ, ತೆರಿಗೆ / ಇತರೆ ಬಾಕಿಗಳನ್ನು ಪಾವತಿಸಲು _____ರವರೆಗೆ ಸಮಯವನ್ನು ವಿಸ್ತರಿಸಿ ನನ್ನನ್ನು ಅನುಮತಿಸಬೇಕೆಂದು ಅಥವಾ ಅಂಥ ತೆರಿಗೆ / ಇತರೆ ಬಾಕಿಗಳನ್ನು _____ ಕಂತುಗಳಲ್ಲಿ ಪಾವತಿಸಲು ನನ್ನನ್ನು ಅನುಮತಿಸಬೇಕೆಂದು ಕೋರಿದೆ:

ತಗಾದೆ ಐಡಿ:				
ವಿವರಣೆ	ಕೇಂದ್ರ ತೆರಿಗೆ	ರಾಜ್ಯ / ಕೇಂ.ಪ್ರ.ತೆರಿಗೆ	ಏಕೀಕೃತ ತೆರಿಗೆ	ಉಪಕರ
ತೆರಿಗೆ / ಉಪಕರ				
ಬಡ್ಡಿ				
ದಂಡ				
ಶುಲ್ಕ				
ಇತರೆ				
ಒಟ್ಟು				

ಕಾರಣಗಳು:

ದಾಖಲಾತಿಯ ಅಪ್‌ಲೋಡ್

ಪರಿಶೀಲನೆ

ಮೇಲೆ ನೀಡಲಾದ ಮಾಹಿತಿಯು ನನ್ನ ತಿಳುವಳಿಕೆಗೆ ಮತ್ತು ನಂಬಿಕೆಯ ಪ್ರಕಾರ ಸತ್ಯವಾಗಿರುತ್ತದೆ ಮತ್ತು ಸರಿಯಾಗಿರುತ್ತದೆ ಹಾಗೂ ಯಾವುದೇ ಮಾಹಿತಿಯನ್ನು ಇದರಿಂದ ಮರೆಮಾಚಿರುವುದಿಲ್ಲ ಎಂದು ನಾನು ಈ ಮೂಲಕ ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

ಸ್ಥಳ: ಪ್ರಾಧಿಕೃತ ಸಹಿದಾರನ ಸಹಿ
ದಿನಾಂಕ: ಹೆಸರು

ನಮೂನೆ ಜಿಎಸ್‌ಟಿ ಡಿಆರ್‌ಸಿ–21

[ನಿಯಮ 158(2) ನೋಡಿ]

ಉಲ್ಲೇಖ ಸಂಖ್ಯೆ: ದಿನಾಂಕ

ಇವರಿಗೆ
ಜಿಎಸ್‌ಟಿಐಎನ್ . . . . . .
ಹೆಸರು . . . . . .

361

ವಿಳಾಸ . . . . . .

ತಗಾದೆ ಆದೇಶ ಸಂಖ್ಯೆ : ದಿನಾಂಕ
ವಸೂಲಾತಿ ಉಲ್ಲೇಖ ಸಂಖ್ಯೆ : ದಿನಾಂಕ
ಅವಧಿ:
ಅರ್ಜಿಯ ಉಲ್ಲೇಖ ಸಂ (ಎಆರ್‌ಎನ್) – ದಿನಾಂಕ

ಮುಂದೂಡಿದ ಪಾವತಿ / ಕಂತುಗಳಲ್ಲಿ ಪಾವತಿಗಾಗಿ ಅರ್ಜಿಯ ಒಪ್ಪಿಗೆ / ತಳ್ಳಿಹಾಕುವಿಕೆಯ ಆದೇಶ

ಇದು ಅಧಿನಿಯಮದ ಪ್ರಕರಣ 80ರ ಅಡಿಯಲ್ಲಿ ನೀವು ಸಲ್ಲಿಸಿರುವ ಮೇಲೆ ಉಲ್ಲೇಖಿಸಿದ ಅರ್ಜಿಯ ಉಲ್ಲೇಖವನ್ನು ಹೊಂದಿದೆ. ಮುಂದೂಡಿದ ಪಾವತಿಗಾಗಿ / ಕಂತುಗಳಲ್ಲಿ ತೆರಿಗೆ/ ಇತರೇ ಬಾಕಿಗಳ ಪಾವತಿಗಾಗಿ ನಿಮ್ಮ ಅರ್ಜಿಯನ್ನು ಪರಿಶೀಲಿಸಿದೆ ಮತ್ತು ಇದಕ್ಕೆ ಸಂಬಂಧಿಸಿದಂತೆ, ದಿನಾಂಕ _____ (ದಿನಾಂಕ) ದ ಒಳಗಾಗಿ ತೆರಿಗೆ ಮತ್ತು ಇತರೆ ಬಾಕಿಗಳನ್ನು ಪಾವತಿಸಲು ನಿಮ್ಮನ್ನು ಅನುಮತಿಸಿದೆ ಅಥವಾ ಇದಕ್ಕೆ ಸಂಬಂಧಿಸಿದಂತೆ, _____ ರೂಪಾಯಿಗಳ ತೆರಿಗೆ ಮತ್ತು ಇತರೆ ಬಾಕಿಗಳನ್ನು _____ ಮಾಸಿಕ ಕಂತುಗಳಲ್ಲಿ ಪಾವತಿಸಲು ನಿಮ್ಮನ್ನು ಅನುಮತಿಸಿದೆ.

ಅಥವಾ

ಇದು ಅಧಿನಿಯಮದ ಪ್ರಕರಣ 80ರ ಅಡಿಯಲ್ಲಿ ನೀವು ಸಲ್ಲಿಸಿರುವ ಮೇಲೆ ಉಲ್ಲೇಖಿಸಿದ ಅರ್ಜಿಯ ಉಲ್ಲೇಖವನ್ನು ಹೊಂದಿದೆ. ಮುಂದೂಡಿದ ಪಾವತಿಗಾಗಿ / ಕಂತುಗಳಲ್ಲಿ ತೆರಿಗೆ/ ಇತರೇ ಬಾಕಿಗಳ ಪಾವತಿಗಾಗಿ ನಿಮ್ಮ ಅರ್ಜಿಯನ್ನು ಪರಿಶೀಲಿಸಿದೆ ಮತ್ತು ಈ ಕೆಳಕಂಡ ಕಾರಣಗಳಿಗಾಗಿ ನಿಮ್ಮ ಕೋರಿಕೆಯನ್ನು ಒಪ್ಪಲು ಅಸಾಧ್ಯವಾಗಿರುತ್ತದೆ :

ತಳ್ಳಿಹಾಕೆರುವುದಕ್ಕಾಗಿ ಕಾರಣಗಳು

ಸಹಿ
ಸ್ಥಳ ಹೆಸರು
ದಿನಾಂಕ ಪದನಾಮ

ನಮೂನೆ ಜಿಎಸ್‌ಟಿ ಡಿಆರ್‌ಸಿ–22

[ನಿಯಮ 159(1) ನೋಡಿ]

ಉಲ್ಲೇಖ ಸಂ.: ದಿನಾಂಕ:

ಇವರಿಗೆ,

_____ ಹೆಸರು

_____ ವಿಳಾಸ

(ಬ್ಯಾಂಕ್/ ಅಂಚೆ ಕಛೇರಿ / ಹಣಕಾಸು ಸಂಸ್ಥೆ / ಸ್ಥಿರಾಸ್ತಿ ನೋಂದಣಿ ಪ್ರಾಧಿಕಾರ)

362

ಪ್ರಕರಣ 83ರ ಅಡಿಯಲ್ಲಿ ಸ್ವತ್ತನ್ನು ಪ್ರಾಸ್ತಾವಿಕ ಮುಟ್ಟುಗೋಲು

. . . . . (ಜಿಎಸ್‌ಟಿಐಎನ್/ ಐಡಿ)ಯನ್ನು ನೋಂದಣಿ ಸಂಖ್ಯೆಯಾಗಿ ಹೊಂದಿರುವ ಮತ್ತು .. . . . . (ವಿಳಾಸ) ದಲ್ಲಿ ವ್ಯವಹಾರದ ಪ್ರಧಾನಸ್ಥಳವನ್ನು ಹೊಂದಿರುವ ಮೆ. . . . . (ಹೆಸರು) ಇವರು <<ಎಸ್‌ಜಿಎಸ್‌ಟಿ / ಸಿಜಿಎಸ್‌ಟಿ>> ಅಧಿನಿಯಮದ ಅಡಿಯಲ್ಲಿ ನೋಂದಾಯಿತ ತೆರಿಗೆದಾಯಕ ವ್ಯಕ್ತಿಯಗಿರುತ್ತಾರೆ. ಸದರಿ ವ್ಯಕ್ತಿಯಿಂದ ಬಾಕಿಯಿರುವ ತೆರಿಗೆ ಮತ್ತು ಇತರೆ ಮೊತ್ತವನ್ನು ನಿರ್ಧರಿಸಲು ಅಧಿನಿಯಮದ ಪ್ರಕರಣ <<. . .>>ದ ಅಡಿಯಲ್ಲಿ ಮೇಲೆ ಹೇಳಿರುವ ವ್ಯಕ್ತಿಯ ವಿರುದ್ಧ ನಡಾವಳಿಗಳನ್ನು ಪ್ರಾರಂಭಿಸಲಾಗಿದೆ. ಇಲಾಖೆಯ ಬಳಿ ಲಭ್ಯವಿರುವ ಮಾಹಿತಿಯ ಪ್ರಕಾರ, ಸದರಿ ವ್ಯಕ್ತಿಯು –

<< ಉಳಿತಾಯ / ಚಾಲ್ತಿ / ಎಫ್‌ಡಿ / ಆರ್‌ಡಿ / ಡೆಪೋಸಿಟರಿ >> ಖಾತೆಯನ್ನು ನಿಮ್ಮ <<ಬ್ಯಾಂಕ್ / ಅಂಚೆ ಕಛೇರಿ / ಹಣಕಾಸು ಸಂಸ್ಥೆ>> ಯಲ್ಲಿ ಖಾತೆ ಸಂ. << ಖಾತೆ ಸಂ.>>ಯನ್ನು

ಅಥವಾ

. . . . . .<< ಸ್ವತ್ತಿನ ಐಡಿ & ಸ್ಥಳ>> ನಲ್ಲಿ ಸ್ವತ್ತನ್ನು

ಹೊಂದಿರುತ್ತಾನೆಂದು ನಮ್ಮ ಗಮನಕ್ಕೆ ಬಂದಿರುತ್ತದೆ.

ರಾಜಸ್ವದ ಹಿತಾಸಕ್ತಿಯನ್ನು ರಕ್ಷಿಸುವ ಉದ್ದೇಶಕ್ಕಾಗಿ ಮತ್ತು ಅಧಿನಿಯಮದ ಪ್ರಕರಣ 83ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ನಾನು . . . . . (ಹೆಸರು), ... (ಪದನಾಮ), ಸದರಿ ಖಾತೆಯನ್ನು / ಸ್ವತ್ತನ್ನು ಈ ಮೂಲಕ ಪ್ರಾಸ್ತಾವಿಕವಾಗಿ ಮುಟ್ಟುಗೋಲು ಹಾಕಿಕೊಳ್ಳುತ್ತೇನೆ.

ಸದರಿ ಖಾತೆಯಿಂದ ಅಥವಾ ಅದೇ ಪ್ಯಾನ್ ಹೊಂದಿರುವ ಮೇಲೆ ಹೇಳಿದ ವ್ಯಕ್ತಿಯಿಂದ ನಿರ್ವಹಿಸಲಾದ ಯಾವುದೇ ಖಾತೆಯಿಂದ, ಇಲಾಖೆಯ ಪೂರ್ವಾನುಮತಿಯಿಂದಲ್ಲದೆ ಯಾವುದೇ ಡೆಬಿಟ್‌ಅನ್ನು ಮಾಡಲು ಅವಕಾಶ ಕೊಡಬಾರದು

ಅಥವಾ

ಇಲಾಖೆಯ ಪೂರ್ವಾನುಮತಿಯಿಲ್ಲದೆ ಮೇಲೆ ಹೇಳಿದ ಸ್ವತ್ತನ್ನು ವಿಲೇವಾರಿ ಮಾಡಲು ಅವಕಾಶ ಕೊಡಬಾರದು.

ಸಹಿ
ಹೆಸರು
ಪದನಾಮ

ಪ್ರತಿಯನ್ನು ಇವರಿಗೆ –

ನಮೂನೆ ಜಿಎಸ್‌ಟಿ ಡಿಆರ್‌ಸಿ–23

[ನಿಯಮ 159(3), 159(5) & 159(6) ನೋಡಿ]

ಉಲ್ಲೇಖ ಸಂ.: ದಿನಾಂಕ:

ಇವರಿಗೆ,

_____ ಹೆಸರು

_____ ವಿಳಾಸ

(ಬ್ಯಾಂಕ್/ ಅಂಚೆ ಕಛೇರಿ / ಹಣಕಾಸು ಸಂಸ್ಥೆ / ಸ್ಥಿರಾಸ್ತಿ ನೋಂದಣಿ ಪ್ರಾಧಿಕಾರ)

ಆದೇಶ ಉಲ್ಲೇಖ ಸಂ.– ದಿನಾಂಕ :

363

ಪ್ರಕರಣ 83ರ ಅಡಿಯಲ್ಲಿ ಪ್ರಾಸ್ತಾವಿಕ ಮುಟ್ಟುಗೋಲು ಹಾಕಿದ ಸ್ವತ್ತಿನ ಬಿಡುಗಡೆ

ವ್ಯಕ್ತಿಯ ವಿರುದ್ಧ ಪ್ರಾರಂಭಿಸಿದ ನಡಾವಳಿಲ್ಲಿ ರಾಜಸ್ವದ ಹಿತಾಸಕ್ತಿಯನ್ನು ಕಾಯುವುದಕ್ಕಾಗಿ, ಲಗತ್ತಿಸಲಾದ ಮೇಲಿನ ಉಲ್ಲೇಖಿತ ಆದೇಶದಂತೆ, ನಿಮ್ಮ <<ಬ್ಯಾಂಕ್ / ಅಂಚೆ ಕಛೇರಿ / ಹಣಕಾಸು ಸಂಸ್ಥೆ >> ಯಲ್ಲಿನ ಖಾತೆ ಸಂಖ್ಯೆ <<. . . . . .>> ಹೊಂದಿರುವ << ಉಳಿತಾಯ / ಚಾಲ್ತಿ / ಎಫ್‌ಡಿ / ಆರ್‌ಡಿ>> ಖಾತೆಯ ಮುಟ್ಟುಗೋಲನ್ನು ದಯವಿಟ್ಟು ಗಮನಿಸಿ. ಈಗ, ತಪ್ಪಿತಸ್ಥ ವ್ಯಕ್ತಿಯ ವಿರುದ್ಧವಾಗಿ ಸದರಿ ಖಾತೆಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಅವಶ್ಯಕತೆಯಿರುವ ಅಂಥ ನಡಾವಳಿಗಳು ಇರುವುದಿಲ್ಲ. ಆದ್ದರಿಮದ, ಸದರಿ ಖಾತೆಯನ್ನು ಸಂಬಂಧಿಸಿದ ವ್ಯಕ್ತಿಗೆ ಪುನಸ್ಥಾಪಿಸಬಹುದಾಗಿದೆ.

ಅಥವಾ

ವ್ಯಕ್ತಿಯ ವಿರುದ್ಧ ಪ್ರಾರಂಭಿಸಿದ ನಡಾವಳಿಲ್ಲಿ ರಾಜಸ್ವದ ಹಿತಾಸಕ್ತಿಯನ್ನು ಕಾಯುವುದಕ್ಕಾಗಿ, ಲಗತ್ತಿಸಲಾದ ಮೇಲಿನ ಉಲ್ಲೇಖಿತ ಆದೇಶದಂತೆ, ಸ್ವತ್ತಿನ << ಐಡಿ / ಸ್ಥಳ >> ಮುಟ್ಟುಗೋಲನ್ನು ದಯವಿಟ್ಟು ಗಮನಿಸಿ. ಈಗ, ತಪ್ಪಿತಸ್ಥ ವ್ಯಕ್ತಿಯ ವಿರುದ್ಧವಾಗಿ ಸದರಿ ಸ್ವತ್ತನ್ನು ಮುಟ್ಟುಗೋಲು ಹಾಕಿಕೊಳ್ಳುವ ಅವಶ್ಯಕತೆಯಿರುವ ಅಂಥ ನಡಾವಳಿಗಳು ಇರುವುದಿಲ್ಲ. ಆದ್ದರಿಮದ, ಸದರಿ ಸ್ವತ್ತನ್ನು ಸಂಬಂಧಿಸಿದ ವ್ಯಕ್ತಿಗೆ ಪುನಸ್ಥಾಪಿಸಬಹುದಾಗಿದೆ.

ಸಹಿ
ಹೆಸರು
ಪದನಾಮ

ಪ್ರತಿಯನ್ನು ಇವರಿಗೆ –

ನಮೂನೆ ಜಿಎಸ್‌ಟಿ ಡಿಆರ್‌ಸಿ– 24

[ನಿಯಮ 160 ನೋಡಿ]

ಇವರಿಗೆ,

ಸಮಾಪಕರು / ಸ್ವೀಕರ್ತರು

. . . . . .

ತೆರಿಗೆದಾಯಕ ವ್ಯಕ್ತಿಯ ಹೆಸರು:
ಜಿಎಸ್‌ಟಿಐಎನ್:
ತಗಾದೆ ಆದೇಶ ಸಂ: ದಿನಾಂಕ: ಅವಧಿ:

ಮೊತ್ತದ ವಸೂಲಾತಿಗಾಗಿ ಸಮಾಪಕರಿಗೆ ಮಾಹಿತಿ

364

<<ಜಿಎಸ್‌ಟಿಐಎನ್>> ಹೊಂದಿರುವ <<ಕಂಪನಿಯ ಹೆಸರು>> ಗಾಗಿ ತಮ್ಮನ್ನು ಸಮಾಪಕರಾಗಿ ನೇಮಕ ಮಾಡಲಾದ ಮಾಹಿತಿಯನ್ನು ನೀಡುವ ತಮ್ಮ ಪತ್ರ <<ಮಾಹಿತಿ ಸಂಖ್ಯೆ & ದಿನಾಂಕ>>ದ ಉಲ್ಲೇಖವಿದೆ. ಈ ಸಂಬಂಧ ಸದರಿ ಕಂಪನಿಯು ರಾಜ್ಯ / ಕೇಂದ್ರ ಸರ್ಕಾರಕ್ಕೆ ಈ ಕೆಳಕಂಡ ಮೊತ್ತಗಳನ್ನು ಪಾವತಿಸಬೇಕಾಗಿರುತ್ತದೆ ಅಥವಾ ಪಾವತಿಸಬೇಕಾಗುವ ನಿರೀಕ್ಷೆಯಿರುತ್ತದೆ:

ಚಾಲ್ತಿ / ನಿರೀಕ್ಷಿಸಿದ ತಗಾದೆಗಳು

ಅಧಿನಿಯಮ	ತೆರಿಗೆ	ಬಡ್ಡಿ	ದಂಡ	ಇತರೆ ಮೊತ್ತ	ಒಟ್ಟು ಬಾಕಿ
1	2	3	4	5	6
ಕೇಂದ್ರ ತೆರಿಗೆ					
ರಾಜ್ಯ / ಕೇಂ.ಪ್ರ. ತೆರಿಗೆ					
ಏಕೀಕೃತ ತೆರಿಗೆ					
ಉಪಕರ					

ಅಧಿನಿಯಮದ ಪ್ರಕರಣ 88ರ ಉಪಬಂಧಗಳ ಅನುಸರಣೆಯಲ್ಲಿ, ಕಂಪನಿಯ ಅಂತಿಮ ಮುಕ್ತಾಯದ ಮುನ್ನ ಚಾಲ್ತಿ ಮತ್ತು ನಿರೀಕ್ಷಿತ ಬಾಧ್ಯತೆಗಳ ಪಾವತಿಗಾಗಿ ಸಾಕಾಗುವಷ್ಟು ಒದಗಣೆಗಳನ್ನು ಮಾಡಿಕೊಳ್ಳಬೇಕೆಂದು ತಮಗೆ ಈ ಮೂಲಕ ನಿರ್ದೇಶಿಸಿದೆ.

ಸ್ಥಳ ಹೆಸರು
ದಿನಾಂಕ ಪದನಾಮ

ನಮೂನೆ ಜಿಎಸ್‌ಟಿ ಡಿಆರ್‌ಸಿ–25

[ನಿಯಮ 161 ನೋಡಿ]

ಉಲ್ಲೇಖ ಸಂಖ್ಯೆ: << . . . . . >> <<ದಿನಾಂಕ>>

ಇವರಿಗೆ
ಜಿಎಸ್‌ಟಿಐಎನ್ . . . . . .
ಹೆಸರು . . . . . .
ವಿಳಾಸ . . . . . .

ತಗಾದೆ ಆದೇಶ ಸಂಖ್ಯೆ : ದಿನಾಂಕ
ವಸೂಲಾತಿ ಉಲ್ಲೇಖ ಸಂಖ್ಯೆ : ದಿನಾಂಕ
ಅವಧಿ:
ಅಪೀಲು ಅಥವಾ ಪುನರೀಕ್ಷಣಾ ಅಥವಾ ಯಾವುದೇ
ಇತರೆ ನಡಾವಳಿಗಳಲ್ಲಿ ಉಲ್ಲೇಖ ಸಂ – ದಿನಾಂಕ

ವಸೂಲಾತಿ ನಡಾವಳಿಗಳ ಮುಂದುವರಿಕೆ

ರೂ. . . . . ಮೊತ್ತಕ್ಕಾಗಿ ಮೇಲೆ ಉಲ್ಲೇಖಿಸಿದ ವಸೂಲಾತಿ ಉಲ್ಲೇಖ ಸಂಖ್ಯೆಯಲ್ಲಿ ನಿಮ್ಮ ವಿರುದ್ಧ ಪ್ರಾರಂಭಿಸಲಾದ ವಸೂಲಾತಿ ನಡಾವಳಿಗಳ ಉಲ್ಲೇಖವನ್ನು ಇದು ಹೊಂದಿದೆ.

365

ಅಪೀಲು/ ಪುನರೀಕ್ಷಣಾ ಪ್ರಾಧಿಕಾರವು / ನ್ಯಾಯಾಲಯವು << ಪ್ರಾಧಿಕಾರ / ನ್ಯಾಯಾಲಯದ ಹೆಸರು>> ಮೇಲೆ ಹೇಳಿದ ತಗಾದೆ ಆದೇಶ ಸಂಖ್ಯೆ . . . . . ದಿನಾಂಕ . . . . . ದಲ್ಲಿ ಒಳಗೊಂಡ ಬಾಕಿಗಳನ್ನು ತನ್ನ ಆದೇಶ ಸಂ. . . . . ದಿನಾಂಕ . . . . . .ದಲ್ಲಿ ಹೆಚ್ಚು/ ಕಡಿಮೆ ಮಾಡಿದೆ ಮತ್ತು ಬಾಕಿಯು ಈಗ ರೂ. . . . . ಗಳಷ್ಟಿರುತ್ತದೆ. ಹೆಚ್ಚುವರಿಯಾದ / ಕಡಿಮೆಯಾದ ರೂ. . . . . ಮೊತ್ತದ ವಸೂಲಾತಿಯನ್ನು, ಅಪೀಲು ಅಥವಾ ಪುನರೀಕ್ಷಣೆಯ ವಿಲೇವಾರಿಗೆ ತಕ್ಷಣ ಮುನ್ನ ಇದ್ದಂತಹ ಸ್ಥಿತಿಯಿಂದ ಮುಂದುವರೆಸಲಾಗಿದೆ.

ಅಪೀಲು / ಪುನರೀಕ್ಷಣೆಯ ಪರಿಣಾಮವನ್ನು ಜಾರಿಗೊಳಿಸಿದ ನಂತರ ತಿದ್ದುಪಡಿಯಾದ ಮೊತ್ತವು ಈ ಕೆಳಕಂಡಂತೆ ಇರುತ್ತದೆ:

(ಮೊತ್ತ ರೂ.ಗಳಲ್ಲಿ)

ಅಧಿನಿಯಮ	ತೆರಿಗೆ	ಬಡ್ಡಿ	ದಂಡ	ಇತರೆ ಮೊತ್ತ	ಒಟ್ಟು ಬಾಕಿ
1	2	3	4	5	6
ಕೇಂದ್ರ ತೆರಿಗೆ					
ರಾಜ್ಯ / ಕೇಂ.ಪ್ರ. ತೆರಿಗೆ					
ಏಕೀಕೃತ ತೆರಿಗೆ					
ಉಪಕರ					

ಸಹಿ
ಸ್ಥಳ ಹೆಸರು
ದಿನಾಂಕ ಪದನಾಮ

ನಮೂನೆ ಜಿಎಸ್‌ಟಿ ಸಿಪಿಡಿ–01

[ನಿಯಮ 162(1)ನ್ನು ನೋಡಿ]

ಅಪರಾಧವನ್ನು ರಾಜಿ ಮಾಡುವುದಕ್ಕಾಗಿ ಅರ್ಜಿ

1.	ಜಿಎಸ್‌ಟಿಐಎನ್ / ತಾತ್ಕಾಲಿಕ ಐಡಿ	
2.	ಅರ್ಜಿದಾರನ ಹೆಸರು	
3.	ವಿಳಾಸ	
4.	ಅಧಿನಿಯಮದ ಯಾವ ಉಪಬಂಧಗಳ ಉಲ್ಲಂಘನೆಗಾಗಿ ಅಭಿಯೋಜನೆಯನ್ನು ಪ್ರಾರಂಭಿಸಲಾಗಿದೆ ಅಥವಾ ಪ್ರಾರಂಭಿಸಲು ಉದ್ದೇಶಿಸಿದೆ	
5.	ನ್ಯಾಯನಿರ್ಣಯ ಆದೇಶ / ನೋಟೀಸಿನ ವಿವರಗಳು	
	ಉಲ್ಲೇಖ ಸಂಖ್ಯೆ	
	ದಿನಾಂಕ	
	ತೆರಿಗೆ	
	ಬಡ್ಡಿ	
	ದಂಡ	
	ಜುಲ್ಮಾನೆ, ಅದು ಇದ್ದಲ್ಲಿ	
6.	ಪ್ರಕರಣದ ಸಂಕ್ಷಿಪ್ತ ಘಟನಾವಳಿ ಮತ್ತು ಆಪಾದಿಸಿದ ಅಪರಾಧದ (ಗಳ) ವಿವರಗಳು	

366

7.	ಅಧಿನಿಯಮದಡಿಯಲ್ಲಿ ಇದು ಮೊದಲ ಅಪರಾಧವೇ?	
8.	7ಕ್ಕೆ ಉತ್ತರವು ನಿಷೇದಾತ್ಮಕವಾಗಿದ್ದರೆ, ಹಿಂದಣ ಪ್ರಕರಣಗಳ ವಿವರಗಳು	
9.	ಯಾವುದೇ ಅನ್ಯ ಕಾನೂನಿನಡಿಯಲ್ಲಿ ಇದೇ ಅಥವಾ ಯಾವುದೇ ಇತರೆ ಅಪರಾಧಗಳಿಗಾಗಿ ಯಾವುದೇ ನಡಾವಳಿಗಳನ್ನು ಪ್ರಾರಂಭಿಸಲು ಉದ್ದೇಶಿಸಿದೆಯೇ?	
10.	9ಕ್ಕೆ ಉತ್ತರವು ಸಕಾರಾತ್ಮಕವಾಗಿದ್ದರೆ, ಅವುಗಳ ವಿವರಗಳು	

ಘೋಷಣೆ

(1) ಆಯುಕ್ತರಿಂದ ನಿಗದಿಪಡಿಸಬಹುದಾದ, ರಾಜಿ ಮೊತ್ತವನ್ನು ಪಾವತಿಸುತ್ತೇನೆ
(2) ಅಧಿನಿಯಮದಡಿಯಲ್ಲಿ ಮಾಡಲಾದ ಅಪರಾಧವನ್ನು, ರಾಜಿ ಮಾಡಿಕೊಳ್ಳಲು, ಅಧಿಕಾರದ ವಿಷಯವಾಗಿ, ಕ್ಲೇಮು ಮಾಡುವಂತಿಲ್ಲವೆಂದು ನನಗೆ ತಿಳಿದಿದೆ.

ಅರ್ಜಿದಾರನ ಸಹಿ

ಹೆಸರು

ನಮೂನೆ ಜಿಎಸ್‌ಟಿ ಸಿಪಿಡಿ–02

[ನಿಯಮ 162(3) ನೋಡಿ]

ಉಲ್ಲೇಖ ಸಂ:. ದಿನಾಂಕ:

ಇವರಿಗೆ,
ಜಿಎಸ್‌ಟಿಐಎನ್ / ಐಡಿ. . . . . .
ಹೆಸರು . . . . . .
ವಿಳಾಸ . . . . . .
ಎಆರ್‌ಎನ್ . . . . . ದಿನಾಂಕ . . . . . .

ಅಪರಾಧವನ್ನು ರಾಜಿ ಮಾಡಿಕೊಳ್ಳುವುದಕ್ಕೆ ಅವಕಾಶ / ತಳ್ಳಿಹಾಕುವುದಕ್ಕಾಗಿ ಆದೇಶ

ಮೇಲೆ ಹೇಳಿದ ನಿಮ್ಮ ಅರ್ಜಿಯ ಉಲ್ಲೇಖವನ್ನು ಇದು ಹೊಂದಿದೆ. ನಿಮ್ಮ ಅರ್ಜಿಯನ್ನು ಇಲಾಖೆಯಲ್ಲಿ ಪರಿಶೀಲಿಸಲಾಯಿತು ಮತ್ತು ಅದರ ಅಂಶಗಳನ್ನು ಈ ಕೆಳಗೆ ದಾಖಲಿಸಿದೆ:

<< ಟೆಕ್ಸ್ಟ್ >>

○ ಕೆಳಗಿನ ಕೋಷ್ಟಕದ ಅಂಕದ (2)ಕ್ಕೆ ಸಂಬಂಧಿಸಿದ ಅಪರಾಧಗಳನ್ನು ಅಂಕಣ (3)ರಲ್ಲಿ ತಿಳಿಸಲಾದ ರಾಜೀ ಮೊತ್ತದ ಪಾವತಿಯೊಂದಿಗೆ ರಾಜಿ ಮಾಡಿಕೊಳ್ಳಲು ಅವಕಾಶ ನೀಡುವುದಕ್ಕೆ ಅವಶ್ಯಕತೆಗಳನ್ನು ನೀವು ಪೂರೈಸುವಿರೆಂದು ನನಗೆ ತೃಪ್ತಿಯಾಗಿದೆ:

ಕ್ರ. ಸಂ.	ಅಪರಾಧ	ರಾಜೀ ಮೊತ್ತ (ರೂ.ಗಳಲ್ಲಿ)
1	2	3

367

ಟಿಪ್ಪಣಿ: ಒಂದು ವೇಳೆ ತೆರಿಗೆದಾಯಕ ವ್ಯಕ್ತಿಯು ಎಸಗಿದ ಅಪರಾಧವು ಅಂಕಣ (2)ರಲ್ಲಿ ನಿರ್ದಿಷ್ಟಪಡಿಸಿದಂತೆ ಒಂದಕ್ಕಿಂತ ಹೆಚ್ಚಿನ ಗುಂಪುಗಳಲ್ಲಿ ಒಳಗೊಂಡರೆ, ರಾಜೀ ಮೊತ್ತವು, ವರ್ಗೀಕರಿಸಬಹುದಾದ ಗುಂಪುಗಳಲ್ಲಿ ರಾಜೀ ಮಾಡಿಕೊಳ್ಳಲು ಕೋರಿದ ಅಪರಾಧದ ಎದುರು ನಿರ್ದಿಷ್ಟಪಡಿಸಿದ ಮೊತ್ತಗಳ ಗರಿಷ್ಟವಾದ, ಅಂಕಣ (3)ರಲ್ಲಿ ನಿರ್ದಿಷ್ಟಪಡಿಸಿದ ಮೊತ್ತವಾಗಿರತಕ್ಕದ್ದು.

ಮೇಲೆ ಹೇಳಿದ ರಾಜೀ ಮೊತ್ತವನ್ನು . . . . . (ದಿನಾಂಕ) ದ ಒಳಗಾಗಿ ಪಾವತಿಸಲು ನಿಮಗೆ ಈ ಮೂಲಕ ನಿರ್ದೇಶಿಸಿದೆ ಮತ್ತು ರಾಜೀ ಮೊತ್ತದ ಪಾವತಿಯ ನಂತರ, ಮೇಲೆ ಹೇಳಿದ ಕೋಷ್ಟಕದ ಅಂಕಣ (2)ರಲ್ಲಿ ಪಟ್ಟಿ ಮಾಡಿದ ಅಪರಾಧಗಳಿಗಾಗಿ ಅಭಿಯೋಜನೆಯಿಂದ ನಿಮಗೆ ವಿನಾಯಿತಿಯನ್ನು ಮಂಜೂರು ಮಾಡಲಾಗುವುದು.

ಅಥವಾ

○ ನಿಮ್ಮ ಅರ್ಜಿಯನ್ನು ಈ ಮೂಲಕ ತಿರಸ್ಕರಿಸಿದೆ.

ಸಹಿ
ಹೆಸರು
ಪದನಾಮ"

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಬಿ/2017)
ಸಂ. ಆಇ47 ಸಿಎಸ್ಎಲ್ 2017 ಬೆಂಗಳೂರು, ದಿನಾಂಕ: 01.08.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ 2017ರ (2017ರ ಕರ್ನಾಟಕ ಅಧಿನಿಯಮ 27), ಪ್ರಕರಣ 164ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಈ ಕೆಳಗಿನಂತೆ ಮತ್ತಷ್ಟು ತಿದ್ದುಪಡಿಗಳನ್ನು ತರಲು ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಅಂದರೆ:–

368

ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ:– (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಎರಡನೇ ತಿದ್ದುಪಡಿ) ನಿಯಮಗಳು, 2017 ಎಂದು ಕರೆಯಬಹುದು.

(2) ಉಪಬಂಧಿಸಿದುದನ್ನುಳಿದು, ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಅವುಗಳು ಜಾರಿಗೆ ಬರತಕ್ಕದ್ದು.

2. ನಿಯಮ 24ರ ತಿದ್ದುಪಡಿ:– ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು 2017 (ಇನ್ನು ಮುಂದೆ **"**ಸದರಿ ನಿಯಮಗಳು**"** ಎಂದು ಉಲ್ಲೇಖಿಸಲಾಗಿದೆ) ರ ನಿಯಮ 24ರ ಉಪನಿಯಮ (5)ರಲ್ಲಿ "ಗೊತ್ತುಪಡಿಸಲಾದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ" ಪದಗಳಿಗಾಗಿ "30ನೇ ಸೆಪ್ಟೆಂಬರ್, 2017 ರಂದು ಅಥವಾ ಅದಕ್ಕಿಂತ ಮುಂಚಿತವಾಗಿ" ಪದಗಳು ಮತ್ತು ಸಂಖ್ಯೆಗಳನ್ನು ದಿನಾಂಕ 28ನೇ ಜೂನ್, 2017 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು.

3. ನಿಯಮ 34 ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 34ಕ್ಕೆ ಈ ಕೆಳಗಿನದ್ದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"34. ಮೌಲ್ಯದ ನಿರ್ಧರಣೆಗಾಗಿ ಭಾರತೀಯ ರೂಪಾಯಿಗಳನ್ನು ಹೊರತುಪಡಿಸಿದ ಕರೆನ್ಸಿಯ ವಿನಿಮಯದ ದರ.– (1) ತೆರಿಗೆದಾಯಕ ಸರಕುಗಳ ಮೌಲ್ಯದ ನಿರ್ಧರಣೆಗಾಗಿ ವಿನಿಮಯದ ದರವು, ಪ್ರಕರಣ 12ರ ನಿಬಂಧನೆಗಳಿಗೆ ಅನುಸಾರವಾಗಿ ಅಂಥ ಸರಕುಗಳ ಪೂರೈಕೆಯ ಸಮಯದ ದಿನಾಂಕಕ್ಕಾಗಿ ಸೀಮಾಸುಂಕಗಳ ಅಧಿನಿಯಮ, 1962ರ ಪ್ರಕರಣ 14ರ ಅಡಿಯಲ್ಲಿ ಮಂಡಳಿಯಿಂದ ಅಧಿಸೂಚಿಸಿದ ಅನ್ವಯವಾಗುವ ವಿನಿಮಯದ ದರವಾಗಿರತಕ್ಕದ್ದು.

(2) ತೆರಿಗೆದಾಯಕ ಸೇವೆಗಳ ಮೌಲ್ಯವನ್ನು ನಿರ್ಧರಿಸುವುದಕ್ಕಾಗಿನ ವಿನಿಮಯದ ದರವು, ಪ್ರಕರಣ 13ರ ನಿಬಂಧನೆಗಳನುಸಾರ ಅಂಥ ಸೇವೆಗಳ ಪೂರೈಕೆಯ ಸಮಯದ ದಿನಾಂಕಕ್ಕಾಗಿ, ಸಾಮಾನ್ಯವಾಗಿ ಸ್ವೀಕೃತವಾದ ಲೆಕ್ಕದ ತತ್ವಗಳ ಪ್ರಕಾರ ನಿರ್ಧರಿಸಿದ ಅನ್ವಯವಾಗುವ ವಿನಿಮಯದ ದರವಾಗಿರತಕ್ಕದ್ದು.**"**

4. ನಿಯಮ 44 ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 44 ರಲ್ಲಿ ಉಪನಿಯಮ (2) ಕ್ಕಾಗಿ ಈ ಕೆಳಗಿನದನ್ನು, 1ನೇ ಜುಲೈ 2017 ನೇ ದಿನಾಂಕದಿಂದ ಜಾರಿಗೆ ಬರುವಂತೆ, ಪ್ರತಿಯೋಜಿಸತಕ್ಕದ್ದು, ಅಂದರೆ:–

"(2) ಉಪನಿಯಮ (1)ರಲ್ಲಿ ನಿರ್ದಿಷ್ಟಪಡಿಸಿರುವ ಮೊತ್ತವನ್ನು ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಕೇಂದ್ರಾಡಳಿತ ಪ್ರದೇಶ ತೆರಿಗೆ ಮತ್ತು ಏಕೀಕೃತ ತೆರಿಗೆಯ ಹೂಡುವಳಿ ತೆರಿಗೆ ಜಮೆಗಾಗಿ ಪ್ರತ್ಯೇಕವಾಗಿ ನಿರ್ಧರಿಸತಕ್ಕದ್ದು.**"**

5. ನಿಯಮ 46 ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 46 ರಲ್ಲಿ, ಮೂರನೇ ಪರಂತುಕಕ್ಕೆ, ಈ ಕೆಳಗಿನ ಪರಂತುಕ ವನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ಅಲ್ಲದೆ ಪರಂತು, ಸರಕು ಮತ್ತು ಸೇವೆಗಳ ರಫ್ತಿನ ಸಂದರ್ಭದಲ್ಲಿ, ಬೆಲೆಪಟ್ಟಿಯು, **"**ಏಕೀಕೃತ ತೆರಿಗೆ ಸಂದಾಯದ ಮೇಲಿನ ರಫ್ತಿಗಾಗಿ ಮುಡುಪಾದ ಪೂರೈಕೆ/ ಎಸ್ಇಝಡ್ ಘಟಕ ಅಥವಾ ಎಸ್ಇಝಡ್ ಅಭಿವೃದ್ಧಿದಾರರಿಗೆ ಪ್ರಾಧಿಕೃತ ಕಾರ್ಯಾಚರಣೆಗಳಿಗಾಗಿ ಪೂರೈಕೆ**"** ಅಥವಾ ಸಂದರ್ಭಾನುಸಾರವಾಗಿ **"**ಏಕೀಕೃತ ತೆರಿಗೆ ಸಂದಾಯವಿಲ್ಲದೆ, ಬಾಂಡ್ ಅಥವಾ ವಾಗ್ದಾನ ಪತ್ರದ ಅಡಿಯಲ್ಲಿ ರಫ್ತಿಗಾಗಿ ಮುಡುಪಾದ ಪೂರೈಕೆ/ ಎಸ್ಇಝಡ್ ಘಟಕ ಅಥವಾ ಎಸ್ಇಝಡ್ ಅಭಿವೃದ್ಧಿದಾರರಿಗೆ ಪ್ರಾಧಿಕೃತ ಕಾರ್ಯಾಚರಣೆಗಳಿಗಾಗಿ ಪೂರೈಕೆ**"** ಎನ್ನುವ ಹಿಂಬರಹವನ್ನು ಹೊಂದಿರತಕ್ಕದ್ದು ಮತ್ತು ಖಂಡ(ಇ)ರಲ್ಲಿ ನಿರ್ದಿಷ್ಟಪಡಿಸಿದ ವಿವರಗಳಿಗೆ ಬದಲಾಗಿ, ಈ ಕೆಳಕಂಡ ವಿವರಗಳನ್ನು ಹೊಂದಿರತಕ್ಕದ್ದು, ಅಂದರೆ,–

369

(i) ಸ್ವೀಕರಿಸುವವನ ಹೆಸರು ಮತ್ತು ವಿಳಾಸ;

(ii) ಬಟವಾಡೆಯ ವಿಳಾಸ;

(iii)ಗಮ್ಯಸ್ಥಾನ ದೇಶದ ಹೆಸರು:

5. ನಿಯಮ 61 ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 61 ರಲ್ಲಿ, ಉಪನಿಯಮ (5)ಕ್ಕೆ ಈ ಕೆಳಗಿನ ಉಪನಿಯಮಗಳನ್ನು 1ನೇ ಜುಲೈ, 2017 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು, ಅಂದರೆ:–

"(5) ಪ್ರಕರಣ 37ರ ಅಡಿಯಲ್ಲಿ **ನಮೂನೆ ಜಿಎಸ್‌ಟಿಆರ್–1** ರಲ್ಲಿ ಮತ್ತು ಪ್ರಕರಣ 38ರ ಅಡಿಯಲ್ಲಿ **ನಮೂನೆ ಜಿಎಸ್‌ಟಿಆರ್–2** ರಲ್ಲಿ ವಿವರಗಳನ್ನು ಒದಗಿಸುವುದರ ಕಾಲಮಿತಿಯನ್ನು ವಿಸ್ತರಣೆ ಮಾಡಲಾಗಿದ್ದಲ್ಲಿ ಮತ್ತು ಸನ್ನಿವೇಶಗಳು ಹಾಗೆ ಅಪೇಕ್ಷಿಸಿದ್ದಲ್ಲಿ, **ನಮೂನೆ ಜಿಎಸ್‌ಟಿಆರ್–3ಕ್ಕೆ** ಬದಲಾಗಿ ಆಯುಕ್ತರು, ಅಧಿಸೂಚನೆಯ ಮೂಲಕ, ಆ ರಿಟರ್ನನ್ನು, **ನಮೂನೆ ಜಿಎಸ್‌ಟಿಆರ್–3ಬಿಯಲ್ಲಿ** ಸಾಮಾನ್ಯ ಪೋರ್ಟಲ್‌ನ ಮುಖಾಂತರ ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಒದಗಿಸತಕ್ಕದ್ದು.

(6) **ನಮೂನೆ ಜಿಎಸ್‌ಟಿಆರ್–2ರಲ್ಲಿ** ವಿವರಗಳನ್ನು ಒದಗಿಸುವ ಗಡುವು ದಿನಾಂಕದ ನಂತರ **ನಮೂನೆ ಜಿಎಸ್‌ಟಿಆರ್–3ಬಿ** ವಿವರಗಳನ್ನು ಒದಗಿಸಿದ್ದಲ್ಲಿ,–

(ಎ) **ನಮೂನೆ ಜಿಎಸ್‌ಟಿಆರ್–1, ನಮೂನೆ ಜಿಎಸ್‌ಟಿಆರ್–2ರ** ಮೂಲಕ ಒದಗಿಸಿದ ಮಾಹಿತಿಯ ಆಧಾರದ ಮೇಲೆ ಅಥವಾ ಹಿಂದಿನ ತೆರಿಗೆ ಅವಧಿಗಳ ಇತರೇ ಬಾಧ್ಯತೆಗಳ ಆಧಾರದ ಮೇಲೆ **ನಮೂನೆ ಜಿಎಸ್‌ಟಿಆರ್–3ರ ಭಾಗ–ಎ**ಯನ್ನು ವಿದ್ಯುನ್ಮಾನ ರೀತಿಯಲ್ಲಿ ಸೃಷ್ಟಿಸತಕ್ಕದ್ದು ಮತ್ತು ಸದರಿ ರಿಟರ್ನಿನ **ಭಾಗ–ಬಿಯನ್ನು,** ಸಂಬಂಧಪಟ್ಟ ತೆರಿಗೆ ಅವಧಿಗಾಗಿ ಒದಗಿಸಿದ **ನಮೂನೆ ಜಿಎಸ್‌ಟಿಆರ್–3ಬಿ**ಯಲ್ಲಿನ ರಿಟರ್ನಿನ ಆಧಾರದಲ್ಲಿ ಸೃಷ್ಟಿಸತಕ್ಕದ್ದು;

(ಬಿ) ನೋಂದಾಯಿತ ವ್ಯಕ್ತಿಯು **ನಮೂನೆ ಜಿಎಸ್‌ಟಿಆರ್–3**ರಲ್ಲಿನ ರಿಟರ್ನಿನ **ಭಾಗ–ಬಿ**ಯನ್ನು **ನಮೂನೆ ಜಿಎಸ್‌ಟಿಆರ್–3ಬಿ** ಮತ್ತು **ನಮೂನೆ ಜಿಎಸ್‌ಟಿಆರ್–3ರ** ನಡುವೆ ಯಾವುದಾದರು ನ್ಯೂನತೆಗಳಿದ್ದರೆ ಅದರ ಆಧಾರದ ಮೇಲೆ ಮಾರ್ಪಾಡು ಮಾಡತಕ್ಕದ್ದು ಮತ್ತು ಆತನ ತೆರಿಗೆ ಮತ್ತು ಇತರೇ ಬಾಧ್ಯತೆಗಳು ಯಾವುದಾದರು ಇದ್ದರೆ ಅದನ್ನು ಸಂದಾಯಿಸತಕ್ಕದ್ದು;

(ಸಿ) **ನಮೂನೆ ಜಿಎಸ್‌ಟಿಆರ್–3ರಲ್ಲಿನ** ಹೂಡುವಳಿ ತೆರಿಗೆ ಜಮೆಯ ಮೊತ್ತವು, **ನಮೂನೆ ಜಿಎಸ್‌ಟಿಆರ್–3ಬಿ** ಯಲ್ಲಿನ ನಿಬಂಧನೆಗನುಸಾರವಾದ ಹೂಡುವಳಿ ತೆರಿಗೆ ಮೊತ್ತವನ್ನು ಮೀರಿದ್ದಲ್ಲಿ, ಹೆಚ್ಚುವರಿ ಮೊತ್ತವನ್ನು ನೋಂದಾಯಿತ ವ್ಯಕ್ತಿಯ ವಿದ್ಯುನ್ಮಾನ ಜಮೆ ಖಾತೆಗೆ ಜಮೆಗೊಳಿಸತಕ್ಕದ್ದು."

6. **ನಿಯಮ 83 ರ ತಿದ್ದುಪಡಿ.**– ಸದರಿ ನಿಯಮಗಳ ನಿಯಮ 83ರಲ್ಲಿ, ಉಪನಿಯಮ (3)ರಲ್ಲಿ, ಎರಡನೇ ಪರಂತುಕದಲ್ಲಿ, "ಉಪಪ್ರಕರಣ" ಎಂಬ ಪದಕ್ಕಾಗಿ "ಉಪನಿಯಮ" ಎಂಬ ಪದವನ್ನು 1ನೇ ಜುಲೈ 2017 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು.

7. **ನಿಯಮ 89 ರ ತಿದ್ದುಪಡಿ.**– ಸದರಿ ನಿಯಮಗಳ ನಿಯಮ 89ರಲ್ಲಿ, ಉಪನಿಯಮ (4) ರಲ್ಲಿ, ಉಪಬಂಧ (ಇ)ಯಲ್ಲಿ , "ಪ್ರಕರಣ 2ರ ಉಪಪ್ರಕರಣ (112)" ಎಂಬ ಪದಗಳು ಮತ್ತು ಸಂಖ್ಯೆಗಳಿಗಾಗಿ "ಪ್ರಕರಣ 2ರ ಉಪಬಂಧ (112)" ಎಂಬ ಪದಗಳನ್ನು ಮತ್ತು ಸಂಖ್ಯೆಗಳನ್ನು 1ನೇ ಜುಲೈ, 2017 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು.

370

8. **ನಮೂನೆ ಜಿಎಸ್‌ಟಿ ಟಿಆರ್‌ಎಎನ್‌–01 ನ ತಿದ್ದುಪಡಿ.**– ಸದರಿ ನಿಯಮಗಳ**, ನಮೂನೆ ಜಿಎಸ್‌ಟಿ ಟಿಆರ್‌ಎಎನ್‌–01** ರಲ್ಲಿ, ಕ್ರಮ ಸಂಖ್ಯೆ 7 ರಲ್ಲಿ, ಕೋಷ್ಟಕ (ಎ) ಯಲ್ಲಿ, ಕಾಲಂ(2)ರಲ್ಲಿ, ಶೀರ್ಷಿಕೆ "ಹೆಚ್‌ಎಸ್‌ಎನ್‌ (6 ಅಂಕಿಗಳ ಮಟ್ಟದಲ್ಲಿ)" ಗಾಗಿ ಶೀರ್ಷಿಕೆ "ಹೆಚ್‌ಎಸ್‌ಎನ್‌ ಅನ್ವಯವಾಗುವಂತೆ" ಎಂಬುದನ್ನು 1ನೇ ಜುಲೈ, 2017ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು.

9. **ನಮೂನೆ ಜಿಎಸ್‌ಟಿ ಟಿಆರ್‌ಎಎನ್‌–02 ನ ತಿದ್ದುಪಡಿ.**– ಸದರಿ ನಿಯಮಗಳ, **ನಮೂನೆ ಜಿಎಸ್‌ಟಿ ಟಿಆರ್‌ಎಎನ್‌–02**ರಲ್ಲಿ, ಕೋಷ್ಟಕದ ಕ್ರಮ ಸಂಖ್ಯೆ 4 ಮತ್ತು 5 ರಲ್ಲಿ, ಕಾಲಂ(1) ರಲ್ಲಿ, ಶೀರ್ಷಿಕೆ "ಹೆಚ್‌ಎಸ್‌ಎನ್‌ (6 ಅಂಕಿಗಳ ಮಟ್ಟದಲ್ಲಿ)" ಗಾಗಿ ಶೀರ್ಷಿಕೆ "ಹೆಚ್‌ಎಸ್‌ಎನ್‌ ಅನ್ವಯವಾಗುವಂತೆ" ಎಂಬುದನ್ನು 1ನೇ ಜುಲೈ, 2017 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಅವರ ಆದೇಶಾನುಸಾರ

ಕೆ.ಎಸ್‌.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

371

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಸಿ/2017)
ಸಂ. ಆಇ47 ಸಿಎಸ್ಎಲ್ 2017 ಬೆಂಗಳೂರು, ದಿನಾಂಕ: 29.08.2017.

ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ ಅಧಿನಿಯಮ 2017ರ (2017ರ ಕರ್ನಾಟಕ ಅಧಿನಿಯಮ 27), ಪ್ರಕರಣ 164ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಈ ಕೆಳಗಿನಂತೆ ಮುಂದುವರಿದ ತಿದ್ದುಪಡಿಗಳನ್ನು ತರಲು ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಅಂದರೆ:–

ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ:– (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಮೂರನೆ ತಿದ್ದುಪಡಿ) ನಿಯಮಗಳು, 2017, ಎಂದು ಕರೆಯಬಹುದು.

(2) ಉಪಬಂಧಿಸಿದುದನ್ನುಳಿದು, ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಅವುಗಳು ಜಾರಿಗೆ ಬರತಕ್ಕದ್ದು.

2. ನಿಯಮ 3ರ ತಿದ್ದುಪಡಿ:– ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017 (ಇನ್ನು ಮುಂದೆ **"**ಸದರಿ ನಿಯಮಗಳು**"** ಎಂದು ಉಲ್ಲೇಖಿಸಲಾಗಿದೆ) ರ ನಿಯಮ 3ರಲ್ಲಿ, ಉಪನಿಯಮ (4)ರಲ್ಲಿ "ಅರವತ್ತು ದಿನಗಳ" ಪದಗಳಿಗಾಗಿ "ತೊಂಭತ್ತು ದಿನಗಳ" ಪದಗಳನ್ನು ಪ್ರತಿಯೋಜಿಸತಕ್ಕದ್ದು.

3. ನಿಯಮ 17ರ ತಿದ್ದುಪಡಿ:– ಸದರಿ ನಿಯಮಗಳ ನಿಯಮ 17ರಲ್ಲಿ, ಉಪನಿಯಮ (2)ರಲ್ಲಿ "ಸದರಿ ಅರ್ಜಿಯನ್ನು ಭರ್ತಿ ಮಾಡಿದ ನಂತರ**"** ಪದಗಳ ನಂತರ "ಅಥವಾ ಭಾರತ ಸರ್ಕಾರದ ವಿದೇಶಾಂಗ ವ್ಯವಹಾರಗಳ ಮಂತ್ರಾಲಯದಿಂದ ಪಡೆದ ಶಿಫಾರಸ್ಸನ್ನು ಸ್ವೀಕರಿಸಿದ ನಂತರ" ಪದಗಳನ್ನು 29ನೇ ಜೂನ್ 2017 ರಿಂದ ಜಾರಿಗೆ ಬರುವಂತೆ ಸೇರಿಸತಕ್ಕದ್ದು.

4. **ನಿಯಮ 40 ರ ತಿದ್ದುಪಡಿ:**– ಸದರಿ ನಿಯಮಗಳ ನಿಯಮ 40ರಲ್ಲಿ, ಉಪನಿಯಮ (1)ರಲ್ಲಿ, ಉಪಬಂಧ (ಬಿ) ಗಾಗಿ 1ನೇ, ಜುಲೈ 2017 ರಿಂದ ಜಾರಿಗೆ ಬರುವಂತೆ ಈ ಕೆಳಗಿನದ್ದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"(ಬಿ) ನೋಂದಾಯಿತ ವ್ಯಕ್ತಿಯು, ಪ್ರಕರಣ 18ರ ಉಪಪ್ರಕರಣ (1) ರ ಅಡಿಯಲ್ಲಿ ಹೂಡುವಳಿ ತೆರಿಗೆ ಜಮೆ ಉಪಯೋಗಿಸಿಕೊಳ್ಳಲು ಅರ್ಹನಾದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ, ಅಥವಾ ಆಯುಕ್ತರು ಈ ಸಂಬಂಧದಲ್ಲಿ ಅಧಿಸೂಚನೆಯ ಮೂಲಕ ವಿಸ್ತರಿಸಬಹುದಾದ ಅಂಥ ಹೆಚ್ಚಿನ ಅವಧಿಯ ಒಳಗಾಗಿ, ಮೇಲೆ ಹೇಳಲಾದಂತೆ ಹೂಡುವಳಿ ತೆರಿಗೆ ಜಮೆಯನ್ನು ಉಪಯೋಗಿಸಿಕೊಳ್ಳಲು ತಾನು ಅರ್ಹನಾಗಿರುವೆನೆಂದು ಸಾಮಾನ್ಯ ಪೋರ್ಟಲ್‌ನಲ್ಲಿ **ನಮೂನೆ ಜಿಎಸ್‌ಟಿ ಐಟಿಸಿ–01**ರಲ್ಲಿ ವಿದ್ಯುನ್ಮಾನ ರೀತಿಯಲ್ಲಿ ಘೋಷಣೆ ಮಾಡತಕ್ಕದ್ದು:

ಪರಂತು, ಮಂಡಳಿಯಲ್ಲಿನ ಆಯುಕ್ತರಿಂದ ಅಧಿಸೂಚಿಸಲಾದ ಕಾಲಮಿತಿಯ ಯಾವುದೇ ವಿಸ್ತರಣೆಯನ್ನು, ಆಯುಕ್ತರಿಂದ ಅಧಿಸೂಚಿತವಾದದು ಎಂದು ಪರಿಭಾವಿಸತಕ್ಕದ್ದು**"**.

5. **ನಿಯಮ 61 ರ ತಿದ್ದುಪಡಿ.**– ಸದರಿ ನಿಯಮಗಳ ನಿಯಮ 61ರಲ್ಲಿ, ಉಪನಿಯಮ (5)ರಲ್ಲಿ, "ನಿರ್ದಿಷ್ಟಪಡಿಸಿದ" ಪದಗಳಿಗೆ "ನಿರ್ದಿಷ್ಟಪಡಿಸಿದ ವಿಧಾನ ಮತ್ತು ಷರತ್ತುಗಳಿಗೆ ಒಳಪಟ್ಟು," ಪದಗಳನ್ನು 1ನೇ ಜುಲೈ 2017 ರಿಂದ

372

ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು.

6. **ನಿಯಮ 87 ರ ತಿದ್ದುಪಡಿ.**– ಸದರಿ ನಿಯಮಗಳ ನಿಯಮ 87ರಲ್ಲಿ,

(ಎ) ಉಪನಿಯಮ (2)ರಲ್ಲಿ ಕೊನೆಯಲ್ಲಿ ಈ ಕೆಳಗಿನದ್ದನ್ನು ಸೇರಿಸತಕ್ಕದು, ಅಂದರೆ:–

"ಪರಂತು, ಸಾಮಾನ್ಯ ಪೋರ್ಟಲ್‌ನಲ್ಲಿ, ಸೃಷ್ಟಿಸಲಾದ **ನಮೂನೆ ಜಿಎಸ್‌ಟಿ ಪಿಎಂಟಿ–06ರ**ಲ್ಲಿನ ಚಲನ್ ಹದಿನೈದು ದಿನಗಳ ಅವಧಿಯವರೆಗೆ ಸಿಂಧುವಾಗಿರತಕ್ಕದ್ದು:

ಮತ್ತು ಪರಂತು, ಭಾರತದ ಹೊರಗಡೆಯಿರುವ ಒಂದು ಸ್ಥಳದಿಂದ, ಏಕೀಕೃತ ಸರಕು ಮತ್ತು ಸೇವೆಗಳ ಅಧಿನಿಯಮ, 2017ರ (2017ರ ಕೇಂದ್ರ ಅಧಿನಿಯಮ 13) ಪ್ರಕರಣ 14ರಲ್ಲಿ ಉಲ್ಲೇಖಿಸಲಾದ ತೆರಿಗೆದಾಯಕನಲ್ಲದ ಆನ್‌ಲೈನ್ ಸ್ವೀಕರಿಸುವವನಿಗೆ, ಆನ್‌ಲೈನ್ ಮಾಹಿತಿ ಮತ್ತು ದತ್ತಾಂಶ ಸಂಗ್ರಹದ ಪ್ರವೇಶಾವಕಾಶ ಅಥವಾ ಮರುಪ್ರಾಪ್ತಿ ಸೇವೆಗಳ ಪೂರೈಕೆಯನ್ನು ಮಾಡುತ್ತಿರುವ ಒಬ್ಬ ವ್ಯಕ್ತಿಯು ಸಹ ಮಂಡಳಿಯ ಸಂದಾಯ ವ್ಯವಸ್ಥೆಯ ಅಂದರೆ ಮಂಡಳಿಯಿಂದ ಅಧಿಸೂಚಿಸಿದ ದಿನಾಂಕದಿಂದ ಅಬಕಾರಿ ಮತ್ತು ಸೇವಾ ತೆರಿಗೆಯಲ್ಲಿನ ವಿದ್ಯುನ್ಮಾನ ಲೆಕ್ಕದ ವ್ಯವಸ್ಥೆಯ ಮೂಲಕವು ಸಹ ಹಾಗೆ ಮಾಡಬಹುದು."

(ಬಿ) ಉಪನಿಯಮ (3) ರಲ್ಲಿ, ಎರಡನೇ ಪರಂತುಕಕ್ಕಾಗಿ, ಈ ಕೆಳಗಿನ ಪರಂತುಕವನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ಮತ್ತು ಪರಂತು, ಭಾರತದ ಹೊರಗಡೆಯಿರುವ ಒಂದು ಸ್ಥಳದಿಂದ, ಏಕೀಕೃತ ಸರಕು ಮತ್ತು ಸೇವೆಗಳ ಅಧಿನಿಯಮ, 2017ರ (2017ರ ಕೇಂದ್ರ ಅಧಿನಿಯಮ 13) ಪ್ರಕರಣ 14ರಲ್ಲಿ ಉಲ್ಲೇಖಿಸಲಾದ ತೆರಿಗೆದಾಯಕನಲ್ಲದ ಆನ್‌ಲೈನ್ ಸ್ವೀಕರಿಸುವವನಿಗೆ, ಆನ್‌ಲೈನ್ ಮಾಹಿತಿ ಮತ್ತು ದತ್ತಾಂಶ ಸಂಗ್ರಹದ ಪ್ರವೇಶಾವಕಾಶ ಅಥವಾ ಮರುಪ್ರಾಪ್ತಿ ಸೇವೆಗಳ ಪೂರೈಕೆಯನ್ನು ಮಾಡುತ್ತಿರುವ ಒಬ್ಬ ವ್ಯಕ್ತಿಯು, ವಿಶ್ವವ್ಯಾಪಿ ಅಂತರಬ್ಯಾಂಕು ಹಣಕಾಸು ದೂರಸಂಪರ್ಕ ಸಂದಾಯ ಜಾಲಕ್ಕಾಗಿ ಸೊಸೈಟಿಯ ಮೂಲಕ ಅಂತರರಾಷ್ಟ್ರೀಯ ಹಣ ವರ್ಗಾವಣೆಯ ಮೂಲಕವು ಸಹ, ಮಂಡಳಿಯು ಅಧಿಸೂಚಿಸಬೇಕಿರುವ ದಿನಾಂಕದಿಂದ ಉಪನಿಯಮ (2)ರ ಅಡಿಯಲ್ಲಿ ಠೇವಣಿಯನ್ನು ಮಾಡಬಹುದು."

7. **ನಿಯಮ 103 ರ ತಿದ್ದುಪಡಿ.**– ಸದರಿ ನಿಯಮಗಳ ನಿಯಮ 103ಕ್ಕಾಗಿ, 1ನೇ ಜುಲೈ 2017 ರಿಂದ ಜಾರಿಗೆ ಬರುವಂತೆ ಈ ಕೆಳಗಿನ ನಿಯಮವನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"**103. ಪೂರ್ವಭಾವಿ ನಿರ್ಣಯಕ್ಕಾಗಿ ಪ್ರಾಧಿಕಾರದ ಸದಸ್ಯನ ನೇಮಾಕಾತಿ.**– ಸರ್ಕಾರವು ಜಂಟಿ ಆಯುಕ್ತರ ಶ್ರೇಣಿಗಿಂತ ಕಡಿಮೆಯಿಲ್ಲದ ಅಧಿಕಾರಿಗಳನ್ನು ಪೂರ್ವಭಾವಿ ನಿರ್ಣಯಕ್ಕಾಗಿ ಪ್ರಾಧಿಕಾರದ ಸದಸ್ಯರನ್ನಾಗಿ ನೇಮಕಾತಿ ಮಾಡತಕ್ಕದ್ದು.",

8. ನಮೂನೆ ಜಿಎಸ್‌ಟಿ ಆರ್‌ಇಜಿ–01 ರ ತಿದ್ದುಪಡಿ.– ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಆರ್‌ಇಜಿ–01** ರಲ್ಲಿ, "ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸುವುದಕ್ಕಾಗಿ ಸೂಚನೆಗಳು" ಶೀರ್ಷಿಕೆಯಲ್ಲಿ, ಕ್ರಮ ಸಂಖ್ಯೆ 15 ರ ನಂತರ, ಈ ಕೆಳಗಿನದನ್ನು ಸೇರಿಸತಕ್ಕದ್ದು, ಅಂದರೆ.–

"16. ಪೂರೈಕೆದಾರರಂತೆ ನೋಂದಣಿಗಾಗಿ ಅರ್ಜಿ ಸಲ್ಲಿಸುವ ಸರ್ಕಾರಿ ಇಲಾಖೆಗಳು ಬ್ಯಾಂಕಿನ ಖಾತೆಯ ವಿವರಗಳನ್ನು ಸಲ್ಲಿಸದಿರಬಹುದು.";

9. **ನಮೂನೆ ಜಿಎಸ್‌ಟಿ ಆರ್‌ಇಜಿ–13ರ ಪ್ರತಿಯೋಜನೆ.– ನಮೂನೆ ಜಿಎಸ್‌ಟಿ ಆರ್‌ಇಜಿ–13** ಕ್ಕಾಗಿ 29ನೇ ಜೂನ್ 2017 ರಿಂದ ಜಾರಿಗೆ ಬರುವಂತೆ ಈ ಕೆಳಗಿನದ್ದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ.–

373

ನಮೂನೆ – ಜಿಎಸ್‌ಟಿ ಆರ್‌ಇಜಿ–13

(ನಿಯಮ 17ನ್ನು ನೋಡಿ)

ಸಂಯುಕ್ತ ರಾಷ್ಟ್ರ ಸಂಘದ ನಿಕಾಯಗಳು/ ರಾಯಭಾರ ಕಛೇರಿ/ ಇತರೆಯವರಿಗೆ ವಿಶಿಷ್ಟ ಗುರುತಿನ ಸಂಖ್ಯೆಯ (ಯುಐಎನ್) ಮಂಜೂರಾತಿಗಾಗಿ ಅರ್ಜಿ/ನಮೂನೆ

ರಾಜ್ಯ/ಕೇಂದ್ರಾಡಳಿತ ಪ್ರದೇಶ– ಜಿಲ್ಲೆ–

ಭಾಗ – ಎ

(i)	ಎಂಟಿಟಿಯ ಹೆಸರು	
(ii)	ಎಂಟಿಟಿಯಶಾಶ್ವತ ಖಾತೆ ಸಂಖ್ಯೆ, (ಅಧಿನಿಯಮದ ಪ್ರಕರಣ 25ರ ಉಪಪ್ರಕರಣ (9)ರ ಖಂಡ (ಎ)ನಲ್ಲಿ ನಿರ್ದಿಷ್ಟಪಡಿಸಿದ ಎಂಟಿಟಿಗಳಿಗೆ ಅನ್ವಯವಾಗುವುದಿಲ್ಲ)	
(iii)	ಪ್ರಾಧಿಕೃತ ಸಹಿದಾರನ ಹೆಸರು	
(iv)	ಪ್ರಾಧಿಕೃತ ಸಹಿದಾರನ ಶಾಶ್ವತ ಖಾತೆ ಸಂಖ್ಯೆ, (ಅಧಿನಿಯಮದ ಪ್ರಕರಣ 25ರ ಉಪಪ್ರಕರಣ (9)ರ ಖಂಡ (ಎ)ನಲ್ಲಿ ನಿರ್ದಿಷ್ಟಪಡಿಸಿದ ಎಂಟಿಟಿಗಳಿಗೆ ಅನ್ವಯವಾಗುವುದಿಲ್ಲ)	
(v)	ಪ್ರಾಧಿಕೃತ ಸಹಿದಾರನ ಇ–ಮೇಲ್ ವಿಳಾಸ	
(vi)	ಪ್ರಾಧಿಕೃತ ಸಹಿದಾರನ ಮೊಬೈಲ್ ಸಂಖ್ಯೆ (+91)	

ಭಾಗ – ಬಿ

1.	ಎಂಟಿಟಿಯವಿಧ(ಒಂದನ್ನು ಆಯ್ಕೆ ಮಾಡಿ)		ಸಂಯುಕ್ತ ರಾಷ್ಟ್ರ ಸಂಘದ ನಿಕಾಯ ರಾಯಭಾರ ಕಛೇರಿ ಇತರೆ ವ್ಯಕ್ತಿ	
2.	ದೇಶ			
2ಎ	ಭಾರತ ಸರ್ಕಾರದ ವಿದೇಶಾಂಗ ವ್ಯವಹಾರದ ಮಂತ್ರಾಲಯದ ಶಿಫಾರಸ್ಸು (ಅನ್ವಯವಾದರೆ)		ಪತ್ರ ಸಂಖ್ಯೆ.	ದಿನಾಂಕ
3.	ಅಧಿಸೂಚನೆ ವಿವರಗಳು		ಅಧಿಸೂಚನೆಸಂಖ್ಯೆ.	ದಿನಾಂಕ
4.	ರಾಜ್ಯದಲ್ಲಿನ ಎಂಟಿಟಿಯವಿಳಾಸ			
	ಬ್ಲಾಕ್/ತಾಲ್ಲೂಕು			
	ಅಕ್ಷಾಂಶ		ರೇಖಾಂಶ	
	ರಾಜ್ಯ		ಪಿನ್‌ಕೋಡ್	
	ಸಂಪರ್ಕದ ಮಾಹಿತಿ			
	ಮಿಂಚೋಲೆಯ ವಿಳಾಸ		ದೂರವಾಣಿ ಸಂಖ್ಯೆ	
	ಫ್ಯಾಕ್ಸ್ ಸಂಖ್ಯೆ		ಮೊಬೈಲ್ ಸಂಖ್ಯೆ	
7.	ಪ್ರಾಧಿಕೃತ ಸಹಿದಾರನ ವಿವರಗಳು, ಅನ್ವಯವಾದಲ್ಲಿ			
	ನಿರ್ದಿಷ್ಟ ವಿವರಗಳು	ಮೊದಲ ಹೆಸರು	ಮಧ್ಯದ ಹೆಸರು	ಕೊನೆಯ ಹೆಸರು
	ಹೆಸರು			
	ಭಾವಚಿತ್ರ			
	ತಂದೆಯ ಹೆಸರು			

374

	ಜನ್ಮ ದಿನಾಂಕ	ದಿದಿ/ತಿಂತಿಂ/ವವವವ	ಲಿಂಗ	<ಪುರುಷ /ಸ್ತ್ರೀ/ ಇತರೆ>
	ಮೊಬೈಲ್ ಸಂಖ್ಯೆ		ಮಿಂಚೋಲೆಯ ವಿಳಾಸ	

	ದೂರವಾಣಿ ಸಂಖ್ಯೆ			
	ಪದನಾಮ / ಸ್ಥಾನ		ನಿರ್ದೇಶಕರ ಗುರುತಿನ ಸಂಖ್ಯೆ (ಯಾವುದಾದರೂ ಇದ್ದರೆ)	
	ಶಾಶ್ವತ ಖಾತೆ ಸಂಖ್ಯೆ(ಅಧಿನಿಯಮದ ಪ್ರಕರಣ 25ರ ಉಪಪ್ರಕರಣ (9)ರ ಖಂಡ (ಎ) ನಲ್ಲಿ ನಿರ್ದಿಷ್ಟ ಪಡಿಸಿದ ಎಂಟಿಟಿಗಳಿಗೆ ಅನ್ವಯವಾಗುವುದಿಲ್ಲ)		ಆಧಾರ್ ಸಂಖ್ಯೆ(ಅಧಿನಿಯಮದ ಪ್ರಕರಣ 25ರ ಉಪಪ್ರಕರಣ (9)ರ ಖಂಡ (ಎ) ನಲ್ಲಿ ನಿರ್ದಿಷ್ಟ ಪಡಿಸಿದ ಎಂಟಿಟಿಗಳಿಗೆ ಅನ್ವಯವಾಗುವುದಿಲ್ಲ)	
	ನೀವು ಭಾರತೀಯ ನಾಗರೀಕರೇ ?	ಹೌದು/ಇಲ್ಲ	ಪಾಸ್ ಪೋರ್ಟ್ ಸಂಖ್ಯೆ(ವಿದೇಶೀಯರಾದಲ್ಲಿ)	
	ವಾಸ ಸ್ಥಳದ ವಿಳಾಸ			
	ಕಟ್ಟಡದ ಸಂಖ್ಯೆ/ ಫ್ಲಾಟ್ ಸಂಖ್ಯೆ		ಮಹಡಿ ಸಂಖ್ಯೆ	
	ಆವರಣದ/ಕಟ್ಟಡದ ಹೆಸರು		ರಸ್ತೆ/ಬೀದಿ	
	ನಗರ/ಪಟ್ಟಣ/ಗ್ರಾಮ		ಜಿಲ್ಲೆ	
	ಬ್ಲಾಕ್/ತಾಲೂಕ್			
	ರಾಜ್ಯ		ಪಿನ್ ಕೋಡ್	

8.	ಬ್ಯಾಂಕ್ ಖಾತೆಯ ವಿವರಗಳು(ಅವಶ್ಯಕತೆ ಇದ್ದಲ್ಲಿ ಹೆಚ್ಚಿನ ಖಾತೆಗಳ ವಿವರಗಳನ್ನು ಸೇರಿಸಿ)			
	ಖಾತೆಯ ಸಂಖ್ಯೆ:		ಖಾತೆಯ ವಿಧ	
	ಐಎಫ್ಎಸ್ಸಿ		ಬ್ಯಾಂಕ್ ಹೆಸರು	
	ಶಾಖೆಯ ವಿಳಾಸ			

9.	*ಅಪ್‌ಲೋಡ್ ಮಾಡಲಾಗಿರುವದಸ್ತಾವೇಜುಗಳು ದಸ್ತಾವೇಜುಗಳ ಪುರಾವೆಯ ಸ್ವಾಧೀನತೆಯನ್ನು ಹೊಂದಿರುವ ಪ್ರಾಧಿಕೃತ ಸಹಿದಾರನು ಅರ್ಜಿದಾರನನ್ನು ಎಂಟಿಟಿಯನ್ನು ಪ್ರತಿನಿಧಿಸಲು ಪ್ರಾಧಿಕೃತಗೊಳಿಸಿದ ಗೊತ್ತುವಳಿ/ಪವರ್ ಆಫ್ ಅಟಾರ್ನಿಯ ಪ್ರತಿಯನ್ನು ಒಳಗೊಂಡಂತೆ, ಸ್ಕ್ಯಾನ್ ಮಾಡಲಾದ ಅಂಥ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡತಕ್ಕದ್ದು.* **ಅಥವಾ** *ಅರ್ಜಿದಾರನಿಂದ (ಸಂಯುಕ್ತ ರಾಷ್ಟ್ರ ಸಂಘದ ನಿಕಾಯಗಳು/ ರಾಯಭಾರ ಕಛೇರಿ ಇತ್ಯಾದಿ) ಅಂಥ ದಸ್ತಾವೇಜುಗಳ ಪುರಾವೆಯ ಸಂಗ್ರಹಿಸಿರುವ ಯುಕ್ತ ಅಧಿಕಾರಿಯು ಭಾರತದಲ್ಲಿನ ಸಂಯುಕ್ತ ರಾಷ್ಟ್ರ ಸಂಘದ ನಿಕಾಯಗಳು/ ರಾಯಭಾರ ಕಛೇರಿ ಇತ್ಯಾದಿಯನ್ನು ಪ್ರತಿನಿಧಿಸಲು ಅರ್ಜಿದಾರನನ್ನು ಪ್ರಾಧಿಕೃತಗೊಳಿಸಿದ ಗೊತ್ತುವಳಿ/ಪವರ್ ಆಫ್ ಅಟಾರ್ನಿಯನ್ನು ಪ್ರತಿಯನ್ನು ಒಳಗೊಂಡಂತೆ, ಸ್ಕ್ಯಾನ್ ಮಾಡಲಾದ ಅಂಥ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡತಕ್ಕದ್ದು ಮತ್ತು ಅದನ್ನು ಸೃಷ್ಟಿಸಿದ ವಿಶಿಷ್ಟ ಗುರುತಿನ ಸಂಖ್ಯೆಯೊಂದಿಗೆ ಸಂಪರ್ಕ ಕಲ್ಪಿಸತಕ್ಕದ್ದು ಮತ್ತು ಸಂಬಂಧಪಟ್ಟ ಸಂಯುಕ್ತ ರಾಷ್ಟ್ರ ಸಂಘದ ನಿಕಾಯಗಳು/ ರಾಯಭಾರ ಕಛೇರಿ ಇತ್ಯಾದಿಗೆ ನಿಯತಗೊಳಿಸತಕ್ಕದ್ದು.*

375

11	**ಪರಿಶೀಲನೆ** *ಮೇಲೆ ನೀಡಲಾದ ಮಾಹಿತಿಯು ನನ್ನ ತಿಳುವಳಿಕೆಗೆ ಮತ್ತು ನಂಬಿಕೆಯ ಪ್ರಕಾರ ಸತ್ಯವಾಗಿರುತ್ತದೆ ಮತ್ತು ಸರಿಯಾಗಿರುತ್ತದೆ ಹಾಗೂ ಯಾವುದೇ ಮಾಹಿತಿಯನ್ನು ಇದರಿಂದ ಮರೆಮಾಚಿರುವುದಿಲ್ಲ ಎಂದು ನಾನು, ಈ ಮೂಲಕ ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.*

ಸ್ಥಳ: (ಸಹಿ)
ದಿನಾಂಕ: ಪ್ರಾಧಿಕೃತ ವ್ಯಕ್ತಿಯ ಹೆಸರು

ಅಥವಾ

(ಸಹಿ)
ಯುಕ್ತ ಅಧಿಕಾರಿಯ ಹೆಸರು
ಸ್ಥಳ ಪದನಾಮ.
ದಿನಾಂಕ ಕ್ಷೇತ್ರವ್ಯಾಪ್ತಿ

ಸರ್ಕಾರದಿಂದ ಅಧಿಸೂಚಿಸಿದ ಸಂಯುಕ್ತ ರಾಷ್ಟ್ರ ಸಂಘದ ನಿಕಾಯಗಳು/ ರಾಯಭಾರ ಕಛೇರಿ/ ಇತರೆಯವರ ನೋಂದಣಿಗಾಗಿ ಅರ್ಜಿ ಸಲ್ಲಿಸಲು ಸೂಚನೆಗಳು:

- ವಿಶಿಷ್ಟ ಗುರುತಿನ ಸಂಖ್ಯೆಯನ್ನು ಪಡೆಯುವುದು ಅಗತ್ಯವಿರುವ ಪ್ರತಿಯೊಬ್ಬ ವ್ಯಕ್ತಿಯು ಅರ್ಜಿಯನ್ನು ವಿದ್ಯುನ್ಮಾನ ರೀತಿಯಲ್ಲಿ ಸಲ್ಲಿಸತಕ್ಕದ್ದು.
- ಅರ್ಜಿಯನ್ನು ಸಾಮಾನ್ಯ ಪೋರ್ಟಲ್ ಮೂಲಕ ಸಲ್ಲಿಸತಕ್ಕದ್ದು ಅಥವಾ ನೋಂದಣಿಯನ್ನು ಯುಕ್ತ ಅಧಿಕಾರಿಯು ಸ್ವಯಂ ಪ್ರೇರಣೆಯಿಂದ ನೀಡಬಹುದು.
- ಸಾಮಾನ್ಯ ಪೋರ್ಟಲ್‌ನಲ್ಲಿ ಸಲ್ಲಿಸಿದ ಅರ್ಜಿಯನ್ನು ವಿದ್ಯುನ್ಮಾನ ರೀತಿಯಲ್ಲಿ ಅಥವಾ ಸರ್ಕಾರವು ನಿರ್ದಿಷ್ಟಪಡಿಸಿದ ಯಾವುದೇ ಇತರ ವಿಧಾನಗಳಲಿ ಸಹಿ ಮಾಡುವುದು ಅಗತ್ಯವಿರುತ್ತದೆ.
- ಮರುಪಾವತಿಯ ಅರ್ಜಿಯನ್ನು ಅಥವಾ ಅನ್ಯಥಾ ಸಹಿಮಾಡುವುದಕ್ಕಾಗಿ ಸಂಬಂಧಪಟ್ಟ ಎಂಟಿಟಿಯ ಪ್ರಾಧಿಕೃತನಾದ ವ್ಯಕ್ತಿಯ ವಿವರಗಳನ್ನು, ಅರ್ಜಿಯಲ್ಲಿನ **"ಪ್ರಾಧಿಕೃತ ಸಹಿದಾರನ ವಿವರಗಳಿಗೆ"** ಪ್ರತಿಯಾಗಿ ಭರ್ತಿಮಾಡತಕ್ಕದ್ದು.
- ಶಾಶ್ವತ ಖಾತೆ ಸಂಖ್ಯೆ/ಆಧಾರ ಸಂಖ್ಯೆಯು ಅಧಿನಿಯಮದ ಪ್ರಕರಣ 25ರ ಉಪಪ್ರಕರಣ (9)ರ ಖಂಡ (ಎ) ನಲ್ಲಿ ನಿರ್ದಿಷ್ಟ ಪಡಿಸಿದ ಎಂಟಿಟಿಗಳಿಗೆ ಅನ್ವಯವಾಗತಕ್ಕದ್ದಲ್ಲ)."

10. ನಮೂನೆ ಜಿಎಸ್‌ಟಿ ಟಿಆರ್‌ಎಎನ್–1 ರ ತಿದ್ದುಪಡಿ.– ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಟಿಆರ್‌ಎಎನ್–1** ರಲ್ಲಿ, ಕ್ರಮ ಸಂಖ್ಯೆ 7ರಲ್ಲಿ, –

(ಎ) ಐಟಂ (ಎ) ನಲ್ಲಿ, **"ಮತ್ತು 140(6)"** ಪದ, ಸಂಖ್ಯೆಗಳು ಮತ್ತು ಆವರಣಗಳಿಗಾಗಿ, **"140(6) ಮತ್ತು 140(7)"** ಎಂಬ ಅಲ್ಪ ವಿರಾಮ, ಸಂಖ್ಯೆಗಳು, ಆವರಣಗಳು ಮತ್ತು ಪದವನ್ನು 18ನೇ ಜುಲೈ, 2017ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು.

(ಬಿ) ಐಟಂ (ಬಿ) ನಲ್ಲಿ,–

(ಎ) **"ಪ್ರಕರಣ 140(5)"** ಪದ, ಸಂಖ್ಯೆಗಳು ಮತ್ತು ಆವರಣಗಳ ನಂತರ, **"ಮತ್ತು ಪ್ರಕರಣ 140(7)"** ಪದ, ಸಂಖ್ಯೆಗಳು ಮತ್ತು ಆವರಣಗಳನ್ನು 18ನೇ ಜುಲೈ, 2017ರಿಂದ ಜಾರಿಗೆ ಬರುವಂತೆ ಸೇರಿಸತಕ್ಕದ್ದು;

376

(ಬಿ) "ಪೂರ್ಯೆಕೆದಾರನ ಹೆಸರು" ಕಾಲಂ ಶೀರ್ಷಿಕೆಗಾಗಿ, "ಪೂರ್ಯೆಕೆದಾರನ ಅಥವಾ ಹೂಡುವಳಿ ಸೇವೆ ಹಂಚಿಕೆದಾರನ ನೋಂದಣಿ ಸಂಖ್ಯೆ" ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಸಿ) "ಅರ್ಹ ಸುಂಕಗಳು ಮತ್ತು ತೆರಿಗೆಗಳು" ಕಾಲಂ ಶೀರ್ಷಿಕೆಯಲ್ಲಿ, "ಅರ್ಹ ಸುಂಕಗಳು ಮತ್ತು ತೆರಿಗೆಗಳು" ಎಂಬ ಪದಗಳ ನಂತರ "(ಕೇಂದ್ರ ತೆರಿಗೆಗಳು)" ಆವರಣಗಳು ಮತ್ತು ಪದಗಳನ್ನು 18ನೇ ಜುಲೈ, 2017ರಿಂದ ಜಾರಿಗೆ ಬರುವಂತೆ ಸೇರಿಸತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

377

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಡಿ/2017)
ಸಂಖ್ಯೆ. ಆಇ 47 ಸಿಎಸ್ ಎಲ್ 2017, ಬೆಂಗಳೂರು, ದಿನಾಂಕ: 30.08.2017

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ 2017ರ (2017ರ ಕರ್ನಾಟಕ ಅಧಿನಿಯಮ 27), ಪ್ರಕರಣ 164ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳಿಗೆ ಮುಂದುವರಿದ ತಿದ್ದುಪಡಿಗಳನ್ನು ತರಲು ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಅಂದರೆ:–

ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ:– (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ನಾಲ್ಕನೇ ತಿದ್ದುಪಡಿ) ನಿಯಮಗಳು, 2017 ಎಂದು ಕರೆಯಬಹುದು.

(2) ನಿಯಮಗಳು 2 ರಿಂದ 8, 11, 12 ಮತ್ತು 13, 1ನೇ ಜುಲೈ 2017ರಿಂದ ಜಾರಿಗೆ ಬಂದಿರುವುವೆಂದು ಪರಿಭಾವಿಸತಕ್ಕದ್ದು ಮತ್ತು ಇನ್ನುಳಿದ ನಿಯಮಗಳು ರಾಜ್ಯ ಸರ್ಕಾರವು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ನಿಯಮ 119ರ ತಿದ್ದುಪಡಿ:– ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ (ಇನ್ನು ಮುಂದೆ **"ಸದರಿ ನಿಯಮಗಳು"** ಎಂದು ಉಲ್ಲೇಖಿಸಲಾಗಿದೆ), ನಿಯಮ 119ರಲ್ಲಿ, **ಶೀರ್ಷಿಕೆಯಲ್ಲಿ**, "ಮಜೂರಿ ಕೆಲಸಗಾರ/ಏಜೆಂಟ್" ಪದಗಳು ಮತ್ತು ಸಂಕೇತಗಳಿಗಾಗಿ, "ಮಜೂರಿ ಕೆಲಸಗಾರ ಅಥವಾ ಏಜೆಂಟನು" ಪದಗಳನ್ನು ಪ್ರತಿಯೋಜಿಸತಕ್ಕದ್ದು,

3. ನಿಯಮ 122ರ ಪ್ರತಿಯೋಜನೆ:– ಸದರಿ ನಿಯಮಗಳ ನಿಯಮ 122ಕ್ಕಾಗಿ, ಈ ಕೆಳಗಿನದ್ದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"122. ಪ್ರಾಧಿಕಾರದ ರಚನೆ.– ಪ್ರಾಧಿಕಾರದ ರಚನೆಯು ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಿಯಮ 122ರ ಉಪಬಂಧಗಳಿಗೆ ಅನುಸಾರವಾಗಿರತಕ್ಕದ್ದು.".

4. ನಿಯಮ 123ರ ಪ್ರತಿಯೋಜನೆ:– ಸದರಿ ನಿಯಮಗಳ ನಿಯಮ 123ಕ್ಕಾಗಿ, ಈ ಕೆಳಗಿನದ್ದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"123. ಸ್ಥಾಯಿ ಸಮಿತಿ ಮತ್ತು ಪರಿಶೋಧನಾ ಸಮಿತಿಗಳ ರಚನೆ.–(1) ಸ್ಥಾಯಿ ಸಮಿತಿ ಮತ್ತು ಪರಿಶೋಧನಾ ಸಮಿತಿಗಳ ರಚನೆಯು ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಿಯಮ 123ರ ಉಪಬಂಧಗಳಿಗೆ ಅನುಸಾರವಾಗಿರತಕ್ಕದ್ದು.".

5. ನಿಯಮ 124ರ ಪ್ರತಿಯೋಜನೆ:– ಸದರಿ ನಿಯಮಗಳ ನಿಯಮ 124ಕ್ಕಾಗಿ, ಈ ಕೆಳಗಿನದ್ದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"124. ಪ್ರಾಧಿಕಾರದ ಛೇರ್‌ಮನ್ ಮತ್ತು ಸದಸ್ಯರುಗಳ ನೇಮಕಾತಿ, ವೇತನ, ಭತ್ಯೆಗಳು ಮತ್ತು ಸೇವೆಯ ಇತರೇ

378

ನಿಬಂಧನೆಗಳು ಮತ್ತು ಷರತ್ತುಗಳು.– ಪ್ರಾಧಿಕಾರದ ಛೇರ್‌ಮನ್ ಮತ್ತು ಸದಸ್ಯರುಗಳ ನೇಮಕಾತಿ, ವೇತನ, ಭತ್ಯೆಗಳು ಮತ್ತು ಸೇವೆಯ ಇತರೇ ನಿಬಂಧನೆಗಳು ಮತ್ತು ಷರತ್ತುಗಳು ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಿಯಮ 124ರ ಉಪಬಂಧಗಳಿಗೆ ಅನುಸಾರವಾಗಿರತಕ್ಕದ್ದು.**"**.

6. ನಿಯಮ 125ರ ಪ್ರತಿಯೋಜನೆ:– ಸದರಿ ನಿಯಮಗಳ ನಿಯಮ 125ಕ್ಕಾಗಿ, ಈ ಕೆಳಗಿನದ್ದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"125. ಪ್ರಾಧಿಕಾರದ ಕಾರ್ಯದರ್ಶಿ.– ಪ್ರಾಧಿಕಾರದ ಕಾರ್ಯದರ್ಶಿಯು ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಿಯಮ 125ರ ಉಪಬಂಧಗಳಿಗೆ ಅನುಸಾರವಾಗಿರತಕ್ಕದ್ದು.**"**.

7. **ನಿಯಮ 126ರ ಪ್ರತಿಯೋಜನೆ.**– ಸದರಿ ನಿಯಮಗಳ ನಿಯಮ 126ಕ್ಕಾಗಿ, ಈ ಕೆಳಗಿನದ್ದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"126. ಕಾರ್ಯಪದ್ಧತಿ ಮತ್ತು ಕಾರ್ಯವಿಧಾನವನ್ನು ನಿರ್ಧರಿಸಲು ಅಧಿಕಾರ.– ಪ್ರಾಧಿಕಾರದ ಕಾರ್ಯಪದ್ಧತಿ ಮತ್ತು ಕಾರ್ಯವಿಧಾನವನ್ನು ನಿರ್ಧರಿಸುವ ಅಧಿಕಾರವು ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಿಯಮ 126ರ ಉಪಬಂಧಗಳಿಗೆ ಅನುಸಾರವಾಗಿರತಕ್ಕದ್ದು.**"**.

8. **ನಿಯಮ 137ರ ಪ್ರತಿಯೋಜನೆ.**– ಸದರಿ ನಿಯಮಗಳ ನಿಯಮ 137ಕ್ಕಾಗಿ, ಈ ಕೆಳಗಿನದ್ದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"137. ಪ್ರಾಧಿಕಾರದ ಅವಧಿ.– ಪ್ರಾಧಿಕಾರದ ಅವಧಿಯು ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಿಯಮ 137ರ ಉಪಬಂಧಗಳಿಗೆ ಅನುಸಾರವಾಗಿರತಕ್ಕದ್ದು.**"**.

9. **ನಿಯಮ 138ರ ಪ್ರತಿಯೋಜನೆ.**– ಸದರಿ ನಿಯಮಗಳ ನಿಯಮ 138ಕ್ಕಾಗಿ, ಈ ಕೆಳಗಿನದ್ದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"138. ಸರಕುಗಳ ಚಲನೆಗಿಂತ ಮೊದಲು ಒದಗಿಸಬೇಕಾದ ಮಾಹಿತಿ ಮತ್ತು ಇ–ವೇ ಬಿಲ್ಲನ್ನು ಸೃಷ್ಟಿಸುವುದು.– (1) ಐವತ್ತು ಸಾವಿರ ರೂಪಾಯಿಗಳ ರವಾನೆ ಮೌಲ್ಯವನ್ನು ಮೀರಿರುವ–

(i) ಒಂದು ಪೂರೈಕೆಗೆ ಸಂಬಂಧಿಸಿದಂತೆ; ಅಥವಾ

(ii) ಪೂರೈಕೆಯನ್ನು ಹೊರತುಪಡಿಸಿದ ಕಾರಣಗಳಿಗಾಗಿ; ಅಥವಾ

(iii)ಅನೋಂದಾಯಿತ ವ್ಯಕ್ತಿಯಿಂದ ಒಳಮುಖ ಪೂರೈಕೆಯ ಕಾರಣದಿಂದಾಗಿ,

–ಸರಕುಗಳ ಚಲನೆಯನ್ನು ಉಂಟುಮಾಡುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಅಂಥ ಚಲನೆಯನ್ನು ಪ್ರಾರಂಭಿಸುವ ಮುನ್ನ, ಸದರಿ ಸರಕುಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಸಾಮಾನ್ಯ ಪೋರ್ಟಲ್‌ನಲ್ಲಿ, **ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–01** ರ **ಭಾಗ–ಎ**ನಲ್ಲಿ, ವಿದ್ಯುನ್ಮಾನ ರೀತಿಯಲ್ಲಿ, ಒದಗಿಸತಕ್ಕದ್ದು:

(2) ಸರಕುಗಳ ರವಾನೆದಾರನಾಗಿ ಅಥವಾ ರವಾನೆ ಸ್ವೀಕೃತಿದಾರನಂತೆ ಪೂರೈಕೆಯ ಸ್ವೀಕರಿಸುವವನಾಗಿ, ನೋಂದಾಯಿತ ವ್ಯಕ್ತಿಯು, ಆತನ ಸ್ವಂತ ಸಾಗಾಣಿಕೆ ವಾಹನದಲ್ಲಾಗಲಿ ಅಥವಾ ಬಾಡಿಗೆಯದಾಗಿರಲಿ ಅಥವಾ ರೈಲ್ವೆಯ ಮೂಲಕ ಅಥವಾ ವಾಯುಯಾನದ ಮೂಲಕ ಅಥವಾ ನೌಕೆಯ ಮೂಲಕವಾಗಲಿ, ಸರಕುಗಳ ಸಾಗಾಣಿಕೆಯನ್ನು

379

ಮಾಡಿದ್ದಲ್ಲಿ, ಸದರಿ ವ್ಯಕ್ತಿಯು ಅಥವಾ ಸ್ವೀಕರಿಸುವವನು, **ನಮೂನೆ ಜಿಎಸ್‌ಟಿ ಎಡಬ್ಲೂಬಿ–01** ರ **ಭಾಗ–ಬಿ**ನಲ್ಲಿ ಮಾಹಿತಿಯನ್ನು ಸಾಮಾನ್ಯ ಪೋರ್ಟಲ್‌ನಲ್ಲಿ ಒದಗಿಸಿದ ನಂತರ, **ನಮೂನೆ ಜಿಎಸ್‌ಟಿ ಇಡಬ್ಲೂಬಿ–01** ರಲ್ಲಿ ಸಾಮಾನ್ಯ ಪೋರ್ಟಲ್‌ನಲ್ಲಿ ಇ–ವೇ ಬಿಲ್ಲನ್ನು ಸೃಷ್ಟಿಸಬಹುದು.

(3) ಉಪನಿಯಮ (2)ರ ಅಡಿಯಲ್ಲಿ ಇ–ವೇ ಬಿಲ್ಲನ್ನು ಸೃಷ್ಟಿಸಿಲ್ಲದಿದ್ದಲ್ಲಿ ಮತ್ತು ರಸ್ತೆಯ ಮೂಲಕ ಸಾಗಾಣಿಕೆಗಾಗಿ ಸರಕುಗಳನ್ನು ಸಾಗಾಣಿಕೆದಾರನ ಕೈಗೊಪ್ಪಿಸಿದ್ದಲ್ಲಿ, ನೋಂದಾಯಿತ ವ್ಯಕ್ತಿಯು, ಸಾಮಾನ್ಯ ಪೋರ್ಟಲ್‌ನಲ್ಲಿ, **ನಮೂನೆ ಜಿಎಸ್‌ಟಿ ಇಡಬ್ಲೂಬಿ–01** ರ **ಭಾಗ–ಬಿ**ನಲ್ಲಿ ಸಾಗಾಣಿಕೆದಾರನಿಗೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸತಕ್ಕದ್ದು ಮತ್ತು ನೋಂದಾಯಿತ ವ್ಯಕ್ತಿಯು **ನಮೂನೆ ಜಿಎಸ್‌ಟಿ ಇಡಬ್ಲೂಬಿ–01** ರ **ಭಾಗ–'ಎ'**ನಲ್ಲಿ ಒದಗಿಸಿದ ಮಾಹಿತಿಯ ಆಧಾರದ ಮೇಲೆ, ಇ–ವೇ ಬಿಲ್ಲನ್ನು ಸಾಗಾಣಿಕೆದಾರನು ಸದರಿ ಪೋರ್ಟಲ್‌ನಲ್ಲಿ ಸೃಷ್ಟಿಸತಕ್ಕದ್ದು:

ಪರಂತು, ನೋಂದಾಯಿತ ವ್ಯಕ್ತಿ ಅಥವಾ ಸಂದರ್ಭಾನುಸಾರವಾಗಿ ಸಾಗಾಣಿಕೆದಾರನು, ಆತನ ಆಯ್ಕೆಯಲ್ಲಿ, ರವಾನೆ ಸರಕಿನ ಮೌಲ್ಯ ಐವತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿದ್ದರೂ ಸಹ, ಇ–ವೇ ಬಿಲ್ಲನ್ನು ಸೃಷ್ಟಿಸಬಹುದು ಮತ್ತು ಅದನ್ನು ಕೊಂಡೊಯ್ಯಬಹುದು:

ಮತ್ತು ಪರಂತು, ಒಬ್ಬ ಅನೋಂದಾಯಿತ ವ್ಯಕ್ತಿಯಿಂದ, ಆತನ ಸ್ವಂತ ಸಾಗಾಣಿಕೆ ವಾಹನದ ಅಥವಾ ಬಾಡಿಗೆಯ ವಾಹನದ ಮೂಲಕ ಅಥವಾ ಒಬ್ಬ ಸಾಗಾಣಿಕೆದಾರನ ಮೂಲಕ, ಸಾಗಾಣಿಕೆ ಉಂಟಾದಲ್ಲಿ, ಆತನು ಅಥವಾ ಸಾಗಾಣಿಕೆದಾರನು, ಅವರ ಆಯ್ಕೆಯಲ್ಲಿ, ಇ–ವೇ ಬಿಲ್ಲನ್ನು **ನಮೂನೆ ಜಿಎಸ್‌ಟಿ ಇಡಬ್ಲೂಬಿ–01ರಲ್ಲಿ** ಸಾಮಾನ್ಯ ಪೋರ್ಟಲ್‌ನಲ್ಲಿ, ಈ ನಿಯಮದಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ ಸೃಷ್ಟಿಸತಕ್ಕದ್ದು:

ಅಲ್ಲದೆ ಪರಂತು, ಸರಕುಗಳು, ರವಾನೆದಾರನ ವ್ಯವಹಾರ ಸ್ಥಳದಿಂದ, ಸಾಗಾಣಿಕದಾರನ ವ್ಯವಹಾರ ಸ್ಥಳಕ್ಕೆ ಮುಂದಿನ ಸಾಗಾಣಿಕೆಗಾಗಿ, ರಾಜ್ಯದ ಒಳಗೆ, ಹತ್ತು ಕಿಲೋಮೀಟರುಗಳಿಗಿಂತ ಕಡಿಮೆಯ ಅಂತರದಲ್ಲಿ ಸಾಗಾಣಿಕೆಯಾಗಿದ್ದಲ್ಲಿ, ಪೂರೈಕೆದಾರ ಅಥವಾ ಸಾಗಾಣಿಕೆದಾರ **ನಮೂನೆ ಜಿಎಸ್‌ಟಿ ಇಡಬ್ಲೂಬಿ–01 ರ ಭಾಗ–ಬಿ**ನಲ್ಲಿ ಸಾಗಾಣಿಕೆ ವಾಹನದ ವಿವರಗಳನ್ನು ಒದಗಿಸದಿರಬಹುದು.

ವಿವರಣೆ 1.– ಈ ಉಪನಿಯಮದ ಉದ್ದೇಶಗಳಿಗಾಗಿ, ಒಬ್ಬ ಅನೋಂದಾಯಿತ ಪೂರೈಕೆದಾರನಿಂದ ನೋಂದಾಯಿತನಾಗಿರುವ ಸ್ವೀಕರಿಸುವವನಿಗೆ ಸರಕುಗಳು ಪೂರೈಕೆಯಾಗಿದ್ದಲ್ಲಿ, ಸರಕುಗಳ ಚಲನೆಯನ್ನು ಪ್ರಾರಂಭಿಸುವ ಸಮಯದಲ್ಲಿ, ಸ್ವೀಕರಿಸುವವನು ಗೊತ್ತಿದ್ದರೆ, ಅಂಥ ಸ್ವೀಕರಿಸುವವನಿಂದ ಚಲನೆಯು ಉಂಟಾಗಿದೆ ಎಂದು ಹೇಳತಕ್ಕದ್ದು.

ವಿವರಣೆ 2.– ರೈಲ್ವೆಯ ಮೂಲಕ ಅಥವಾ ನೌಕೆಯ ಮೂಲಕ ಅಥವಾ ವಾಯುಯಾನದ ಮೂಲಕ ಸರಕುಗಳ ಸಾಗಾಣಿಕೆಯನ್ನು ಮಾಡಿದ್ದಲ್ಲಿ, ರವಾನೆದಾರನು ಅಥವಾ ರವಾನೆ ಸ್ವೀಕೃತಿದಾರನಂತೆ ಪೂರೈಕೆಯ ಸ್ವೀಕರಿಸುವವನು, **ನಮೂನೆ ಜಿಎಸ್‌ಟಿ ಇಡಬ್ಲೂಬಿ–01**ರ **ಭಾಗ–ಎ** ಯಲ್ಲಿನ ಮಾಹಿತಿಯನ್ನು ಒದಗಿಸತಕ್ಕದ್ದು.

(4) ಸಾಮಾನ್ಯ ಪೋರ್ಟಲ್‌ನಲ್ಲಿ ಇ–ವೇ ಬಿಲ್ಲನ್ನು ಸೃಷ್ಟಿಸಿದ ತರುವಾಯ, ಪೂರೈಕೆದಾರನಿಗೆ, ಸ್ವೀಕರಿಸುವವನಿಗೆ ಮತ್ತು ಸಾಗಾಣಿಕೆದಾರನಿಗೆ, ಒಂದು ವಿಶಿಷ್ಟ ಇ–ವೇ ಬಿಲ್ಲಿನ ಸಂಖ್ಯೆಯನ್ನು (ಇಬಿಎನ್) ಸಾಮಾನ್ಯ ಪೋರ್ಟಲ್‌ನಲ್ಲಿ ಲಭ್ಯ ಮಾಡತಕ್ಕದ್ದು.

(5) ಸರಕುಗಳನ್ನು ಸಂಚಾರದ ಕ್ರಮದಲ್ಲಿ ಒಂದು ಸಾಗಾಣಿಕೆ ವಾಹನದಿಂದ ಮತ್ತೊಂದಕ್ಕೆ, ವರ್ಗಾಯಿಸುತ್ತಿರುವ ಯಾವೊಬ್ಬ ಸಾಗಾಣಿಕೆದಾರನು, ಅಂಥ ವರ್ಗಾವಣೆ ಮತ್ತು ಮುಂದಿನ ಸರಕುಗಳ ಚಲನೆಗಿಂತ ಮೊದಲು, ಸಾಗಾಣಿಕೆ ವಾಹನದ ವಿವರಗಳನ್ನು ಸಾಮಾನ್ಯ ಪೋರ್ಟಲ್‌ನಲ್ಲಿ **ನಮೂನೆ ಜಿಎಸ್‌ಟಿ ಇಡಬ್ಲೂಬಿ–01**ರಲ್ಲಿ ಅಪ್‌ಡೇಟ್ ಮಾಡತಕ್ಕದ್ದು:

ಪರಂತು, ಸರಕುಗಳು, ಸಾಗಾಣಿಕದಾರನ ವ್ಯವಹಾರ ಸ್ಥಳದಿಂದ, ರವಾನೆ ಸ್ವೀಕೃತಿದಾರನ ವ್ಯವಹಾರ ಸ್ಥಳಕ್ಕೆ ಅಂತಿಮವಾಗಿ, ರಾಜ್ಯದ ಒಳಗೆ, ಹತ್ತು ಕಿಲೋಮೀಟರುಗಳಿಗಿಂತ ಕಡಿಮೆಯ ಅಂತರದಲ್ಲಿ ಸಾಗಾಣಿಕೆಯಾಗಿದ್ದಲ್ಲಿ ಇ–ವೇ ಬಿಲ್ಲಿನಲ್ಲಿ ಸಾಗಾಣಿಕೆ ವಾಹನದ ವಿವರಗಳನ್ನು ಅಪ್‌ಡೇಟ್ ಮಾಡದಿರಬಹುದು.

380

(6) ಉಪನಿಯಮ (1)ರ ಉಪಬಂಧಗಳಿಗೆ ಅನುಸಾರವಾಗಿ ಇ–ವೇ ಬಿಲ್ಲನ್ನು ಸೃಷ್ಟಿಸಿದ ನಂತರ, ಒಂದು ಸಾಗಾಣಿಕೆ ವಾಹನದಲ್ಲಿ ಬಹು ಸರಕು ರವಾನೆಗಳನ್ನು ಸಾಗಾಣಿಕೆ ಮಾಡಲು ಉದ್ದೇಶಿಸಿದ್ದಲ್ಲಿ, ಸಾಗಾಣಿಕೆದಾರನು, ಅಂಥ ಪ್ರತಿಯೊಂದು ಸರಕು ರವಾನೆಗೆ ಸಂಬಂಧಿಸಿದಂತೆ ಸೃಷ್ಟಿಸಲಾದ ಇ–ವೇ ಬಿಲ್ಲುಗಳ ಕ್ರಮ ಸಂಖ್ಯೆಯನ್ನು ಸಾಮಾನ್ಯ ಪೋರ್ಟಲ್‌ನಲ್ಲಿ ವಿದ್ಯುನ್ಮಾನ ರೀತಿಯಲ್ಲಿ ಸೂಚಿಸಬಹುದು ಮತ್ತು ಸರಕುಗಳ ಚಲನೆಯ ಮುನ್ನ ಸದರಿ ಪೋರ್ಟಲ್‌ನಲ್ಲಿ ಕ್ರೋಢೀಕೃತ ಇ–ವೇ ಬಿಲ್ಲನ್ನು ಆತನು **ನಮೂನೆ ಜಿಎಸ್‌ಟಿ ಇಡಬ್ಲೂಬಿ–02**ರಲ್ಲಿ ಸೃಷ್ಟಿಸಬಹುದು.

(7) ಸರಕುಗಳ ರವಾನೆದಾರ ಅಥವಾ ಸ್ವೀಕರಿಸವವನು ಉಪನಿಯಮ (1)ರ ಉಪಬಂಧಗಳಿಗೆ ಅನುಸಾರವಾಗಿ **ನಮೂನೆ ಜಿಎಸ್‌ಟಿ ಇಡಬ್ಲೂಬಿ–01** ನ್ನು ಸೃಷ್ಟಿಸಿರದಿದ್ದಲ್ಲಿ ಮತ್ತು ಸಾಗಾಣಿಕೆ ವಾಹನದಲ್ಲಿ ಕೊಂಡೊಯ್ಯುತ್ತಿರುವ ಸರಕುಗಳ ಮೌಲ್ಯವು ಐವತ್ತು ಸಾವಿರ ರೂಪಾಯಿಗಳಿಗಿಂತ ಹೆಚ್ಚಿದ್ದಲ್ಲಿ, ಸಾಗಾಣಿಕೆದಾರನು ಸಂದರ್ಭಾನುಸಾರವಾಗಿ ಬೆಲೆಪಟ್ಟಿ ಅಥವಾ ಪೂರೈಕೆ ಬಿಲ್ಲು ಅಥವಾ ಬಟವಾಡೆ ಚಲನ್ ಆಧಾರದಲ್ಲಿ **ನಮೂನೆ ಜಿಎಸ್‌ಟಿ ಇಡಬ್ಲೂಬಿ–01**ನ್ನು ಸೃಷ್ಟಿಸತಕ್ಕದ್ದು ಮತ್ತು ಸರಕುಗಳ ಚಲನೆಯ ಮುನ್ನ ಸಾಮಾನ್ಯ ಪೋರ್ಟಲ್‌ನಲ್ಲಿ ಕ್ರೋಢೀಕೃತ ಇ–ವೇ ಬಿಲ್ಲನ್ನು ಸಹ **ನಮೂನೆ ಜಿಎಸ್‌ಟಿ ಇಡಬ್ಲೂಬಿ–02**ರಲ್ಲಿ ಸೃಷ್ಟಿಸಬಹುದು.

(8) **ನಮೂನೆ ಜಿಎಸ್‌ಟಿ ಇಡಬ್ಲೂಬಿ–01**ರ **ಭಾಗ–ಎ**ಯಲ್ಲಿ ಒದಗಿಸಿದ ಮಾಹಿತಿಯನ್ನು ನೋಂದಾಯಿತ ವ್ಯಕ್ತಿಗೆ ಲಭ್ಯವಾಗುವಂತೆ ಮಾಡತಕ್ಕದ್ದು, ಆತನು ಅದನ್ನು **ನಮೂನೆ ಜಿಎಸ್‌ಟಿಆರ್–1**ರಲ್ಲಿ ವಿವರಗಳನ್ನು ಒದಗಿಸುವುದಕ್ಕಾಗಿ ಉಪಯೋಗಿಸಿಕೊಳ್ಳಬಹುದು:

ಪರಂತು ಒಬ್ಬ ಅನೋಂದಾಯಿತ ಪೂರೈಕೆದಾರನು **ನಮೂನೆ ಜಿಎಸ್‌ಟಿ ಇಡಬ್ಲೂಬಿ–01** ರಲ್ಲಿ ಮಾಹಿತಿಯನ್ನು ಒದಗಿಸಿದಾಗ, ಮೊಬೈಲ್ ಸಂಖ್ಯೆ ಅಥವಾ ಮಿಂಚಂಚೆ ಲಭ್ಯವಿದ್ದಲ್ಲಿ, ಆತನಿಗೆ ವಿದ್ಯುನ್ಮಾನ ರೀತಿಯಲ್ಲಿ ತಿಳಿಸತಕ್ಕದ್ದು.

(9) ಈ ನಿಯಮದ ಅಡಿಯಲ್ಲಿ ಇ–ವೇ ಬಿಲ್ ಸೃಷ್ಟಿಸಲಾಗಿದ್ದು, ಆದರೆ ಸರಕುಗಳು ಸಾಗಾಣಿಕೆಯಾಗಿಲ್ಲದಿರುವುದಾಗಲಿ ಅಥವಾ ಇ–ವೇ ಬಿಲ್ಲಿನಲ್ಲಿ ಒದಗಿಸಿದ ವಿವರಗಳ ಪ್ರಕಾರ ಸಾಗಾಣಿಕೆಯಾಗಿಲ್ಲದಿರುವುದಾಗಲಿ ಹಾಗಿದ್ದಲ್ಲಿ, ಇ–ವೇ ಬಿಲ್ಲನ್ನು, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಿದ ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ಸಾಮಾನ್ಯ ಪೋರ್ಟಲ್‌ನಲ್ಲಿ ವಿದ್ಯುನ್ಮಾನ ರೀತಿಯಲ್ಲಿ, ಇ–ವೇ ಬಿಲ್ಲನ್ನು ಸೃಷ್ಟಿಸಿದ 24 ಗಂಟೆಗಳ ಒಳಗಾಗಿ ರದ್ದುಪಡಿಸಬಹುದು:

ಪರಂತು, ಇ–ವೇ ಬಿಲ್ಲನ್ನು, ಅದನ್ನು ನಿಯಮ 138ಬಿಯ ಉಪಬಂಧಗಳಿಗೆ ಅನುಸಾರವಾಗಿ ಸಂಚಾರದಲ್ಲಿ ಪರಿಶೀಲಿಸಲಾಗಿದ್ದಲ್ಲಿ, ರದ್ದುಪಡಿಸಬಾರದು.

(10) ಈ ನಿಯಮದ ಅಡಿಯಲ್ಲಿ ಸೃಷ್ಟಿಸಿದ ಒಂದು ಇ–ವೇ ಬಿಲ್ಲು ಅಥವಾ ಒಂದು ಕ್ರೋಢೀಕೃತ ಇ–ವೇ ಬಿಲ್ಲು, ಕೆಳಕಂಡ ಕೋಷ್ಟಕದ ಕಾಲಂ (3)ರಲ್ಲಿ ನಮೂದಿಸಿರುವ ಅವಧಿಗಾಗಿ, ಸಂಬಂಧಿಸಿದ ದಿನಾಂಕದಿಂದ, ಸರಕುಗಳು ಸಾಗಾಣಿಕೆಯಾಗಬೇಕಿರುವ ಕಾಲಂ (2)ರಲ್ಲಿ ನಮೂದಿಸಿರುವ ಅಂತರಕ್ಕಾಗಿ ಸಿಂಧುವಾಗಿರತಕ್ಕದ್ದು:

ಕೋಷ್ಟಕ

ಕ್ರ.ಸಂ	**ಅಂತರ**	**ಸಿಂಧುತ್ವದ ಅವಧಿ**
(1)	**(2)**	**(3)**
1.	100 ಕಿ.ಮೀ ವರೆಗೆ	ಒಂದು ದಿನ

381

2.	ತದನಂತರದ ಪ್ರತಿ 100 ಕಿ.ಮೀ ಅಥವಾ ಅದರ ಭಾಗಕ್ಕಾಗಿ	ಒಂದು ಹೆಚ್ಚುವರಿ ದಿನ

ಪರಂತು ಆಯುಕ್ತರು, ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದ ಸರಕುಗಳ ವರ್ಗಗಳಿಗಾಗಿ ಇ–ವೇ ಬಿಲ್ಲಿನ ಸಿಂಧುತ್ವದ ಅವಧಿಯನ್ನು ವಿಸ್ತರಿಸಬಹುದು:

ಮತ್ತು ಪರಂತು, ಒಂದು ವಿಶೇಷ ಸ್ವರೂಪದ ಸನ್ನಿವೇಶಗಳ ಅಡಿಯಲ್ಲಿ, ಇ–ವೇ ಬಿಲ್ಲಿನ ಸಿಂಧುತ್ವದ ಅವಧಿಯ ಒಳಗಾಗಿ ಸರಕುಗಳನ್ನು ಸಾಗಾಣಿಕೆ ಮಾಡಲಾಗದಿದ್ದಲ್ಲಿ, ಸಾಗಾಣಿಕೆದಾರನು **ನಮೂನೆ ಜಿಎಸ್‌ಟಿ ಇಡಬ್ಲೂಬಿ–01**ರ **ಭಾಗ–ಬಿ** ಯಲ್ಲಿ ವಿವರಗಳನ್ನು ಅಪ್‌ಡೇಟ್ ಮಾಡಿದ ನಂತರ ಮತ್ತೊಂದು ಇ–ವೇ ಬಿಲ್ಲನ್ನು ಸೃಷ್ಟಿಸಬಹುದು.

ವಿವರಣೆ.– ಈ ನಿಯಮದ ಉದ್ದೇಶಗಳಿಗಾಗಿ **"**ನಿರ್ದಿಷ್ಟಪಡಿಸಿದ ದಿನಾಂಕ**"**ವನ್ನು ಇ–ವೇ ಬಿಲ್ ಸೃಷ್ಟಿಸಿದ ದಿನಾಂಕ ಎಂದು ಅರ್ಥೈಸತಕ್ಕದ್ದು ಮತ್ತು ಸಿಂಧುತ್ವದ ಅವಧಿಯನ್ನು ಇ–ವೇ ಸೃಷ್ಟಿಸಿದ ಸಮಯದಿಂದ ಲೆಕ್ಕಹಾಕತಕ್ಕದ್ದು ಮತ್ತು 24 ಘಂಟೆಗಳನ್ನು ಪ್ರತಿಯೊಂದು ದಿನವಾಗಿ ಲೆಕ್ಕಹಾಕತಕ್ಕದ್ದು.

(11) ಉಪನಿಯಮ (1)ರ ಅಡಿಯಲ್ಲಿ ಸೃಷ್ಟಿಸಿದ ಇ–ವೇ ಬಿಲ್ಲಿನ ವಿವರಗಳನ್ನು ಸ್ವೀಕರಿಸುವವನಿಗೆ, ನೋಂದಾಯಿತನಾಗಿದ್ದರೆ, ಸಾಮಾನ್ಯ ಪೋರ್ಟಲ್‌ನಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು, ಆತನು ಇ–ವೇ ಬಿಲ್ಲಿನಿಂದ ವ್ಯಾಪ್ತವಾದ ಸರಕು ರವಾನೆಯ ತನ್ನ ಅಂಗೀಕಾರ ಅಥವಾ ತಿರಸ್ಕರಿಸಿದುದರ ಬಗ್ಗೆ ತಿಳಿಸತಕ್ಕದ್ದು.

(12) ಉಪನಿಯಮ (11)ರಲ್ಲಿ ಉಲ್ಲೇಖಿಸಲಾದ ಸ್ವೀಕರಿಸುವವನು, ಆತನಿಗೆ ಸಾಮಾನ್ಯ ಪೋರ್ಟಲ್‌ನಲ್ಲಿ ವಿವರಗಳನ್ನು ಲಭ್ಯಗೊಳಿಸಿದ ಎಪ್ಪತ್ತೆರಡು ಗಂಟೆಗಳ ಒಳಗಾಗಿ ತನ್ನ ಅಂಗೀಕಾರ ಅಥವಾ ತಿರಸ್ಕಾರವಾದ ಬಗ್ಗೆ ತಿಳಿಸಿಲ್ಲದಿದ್ದಲ್ಲಿ, ಸದರಿ ವಿವರಗಳನ್ನು ಆತನು ಅಂಗೀಕರಿಸಿದ್ದಾನೆ ಎಂದು ಪರಿಭಾವಿತವಾಗತಕ್ಕದ್ದು.

(13) ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು ಅಥವಾ ಯಾವುದೇ ಇತರ ರಾಜ್ಯದ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳ ನಿಯಮ 138ರ ಅಡಿಯಲ್ಲಿ ಸೃಷ್ಟಿಸಿದ ಇ–ವೇ ಬಿಲ್ ರಾಜ್ಯದಲ್ಲಿ ಸಿಂಧುವಾಗಿರತಕ್ಕದ್ದು.

(14) ಈ ನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಕೆಳಕಂಡುವುಗಳಿಗೆ ಯಾವುದೇ ಇ–ವೇ ಬಿಲ್ಲನ್ನು ಸೃಷ್ಟಿಸುವುದು ಅಗತ್ಯವಿರುವುದಿಲ್ಲ –

(ಎ) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸರಕುಗಳನ್ನು ಸಾಗಾಣಿಕೆ ಮಾಡುತ್ತಿದ್ದಲ್ಲಿ;

(ಬಿ) ಯಾಂತ್ರೀಕೃತವಲ್ಲದ ಸಾಗಾಣಿಕೆ ವಾಹನದಲ್ಲಿ, ಸರಕುಗಳನ್ನು ಸಾಗಾಣಿಕೆ ಮಾಡುತ್ತಿದ್ದಲ್ಲಿ;

(ಸಿ) ಸರಕುಗಳನ್ನು, ಬಂದರು, ವಿಮಾನ ನಿಲ್ದಾಣ, ವಾಯುಯಾನ ಕಾರ್ಗೋ ಸಂಕೀರ್ಣ ಮತ್ತು ಭೂ ಸೀಮಾಸುಂಕ ಠಾಣೆಯಿಂದ ಒಳನಾಡು (ಇನ್‌ಲ್ಯಾಂಡ್) ಕಂಟೈನರ್ ಡಿಪೋ ಅಥವಾ ಒಂದು ಕಂಟೈನರ್ ಸಾಗಣಿಕೆ ಠಾಣೆಗೆ ಸೀಮಾಸುಂಕ ತೀರುವೆಗಾಗಿ ಸಾಗಾಣಿಕೆ ಮಾಡುತ್ತಿದ್ದಲ್ಲಿ; ಮತ್ತು

(ಡಿ) ಆಯುಕ್ತರು, ಕೇಂದ್ರ ತೆರಿಗೆಯ ಮುಖ್ಯ ಆಯುಕ್ತರೊಡನೆ ಸಮಾಲೋಚಿಸಿ ಅಧಿಸೂಚಿಸಬಹುದಾದ ಅಂಥ ಸರಕುಗಳ ಸಾಗಾಣಿಕೆಗೆ ಸಂಬಂಧಿಸಿದಂತೆ ಮತ್ತು ಕರ್ನಾಟಕ ರಾಜ್ಯದ ಅಂಥ ಪ್ರದೇಶಗಳ ಒಳಗಾಗಿ ಮತ್ತು ಅಂಥ ಮೊತ್ತವನ್ನು ಮೀರಿದ ಮೌಲ್ಯಗಳಿಗಾಗಿ.

382

ವಿವರಣೆ.– ಇ–ವೇ ಬಿಲ್ಲನ್ನು ಸೃಷ್ಟಿಸುವ ಮತ್ತು ರದ್ದುಪಡಿಸುವ ಸೌಲಭ್ಯವನ್ನು ಎಸ್ಎಂಎಸ್ ಮೂಲಕವು ಸಹ ಲಭ್ಯವಾಗುವಂತೆ ಮಾಡಬಹುದು.

ಅನುಬಂಧ

[(ನೋಡಿ ನಿಯಮ 138(14)]

ಕ್ರ.ಸಂ.	ಅಧ್ಯಾಯ/ಶಿರೋನಾಮೆ/ ಉಪ–ಶಿರೋನಾಮೆ/ ದರದ ವಸ್ತು	ಸರಕುಗಳ ವಿವರ
(1)	(2)	(3)
1.	0101	ಸಜೀವ ಕತ್ತೆಗಳು, ಹೇಸರಗತ್ತೆಗಳು, ಹಿನ್ನಿಗಳು
2.	0102	ಸಜೀವ ಗೋಜಾತಿಯ ಪ್ರಾಣಿಗಳು
3.	0103	ಸಜೀವ ಹಂದಿ
4.	0104	ಸಜೀವ ಕುರಿ ಮತ್ತು ಮೇಕೆಗಳು
5.	0105	ಸಜೀವ ಕುಕ್ಕುಟಗಳು, ಅರ್ಥಾತ್, *ಗ್ಯಾಲಸ್ ಡೊಮೆಸ್ಟಿಕಸ್* ಪ್ರಬೇಧಗಳ ಕೋಳಿಗಳು, ಬಾತು ಕೋಳಿಗಳು, ಹೆಬ್ಬಾತುಗಳು, ಟರ್ಕಿಗಳು ಮತು ಗಿನಿ ಕೋಳಿಗಳು
6.	0106	ಸಸ್ತನಿಗಳು, ಪಕ್ಷಿಗಳು, ಕೀಟಗಳು ಮುಂತಾದ, ಇತರೆ ಸಜೀವ ಪ್ರಾಣಿಗಳು
7.	0201	ಗೋಜಾತಿ ಪ್ರಾಣಿಗಳ ತಾಜಾ ಮತ್ತು ಶೀತಲೀಕರಿಸಿದ, ಮಾಂಸ
8.	0202	ಗೋಜಾತಿಯ ಪ್ರಾಣಿಗಳ ಹೆಪ್ಪುಗಟ್ಟಿಸಿದ ಮಾಂಸ [ಹೆಪ್ಪುಗಟ್ಟಿಸಿ ಮತ್ತು ಘಟಕದ ಧಾರಕದಲ್ಲಿಟ್ಟಿರುವುದನ್ನು ಹೊರತುಪಡಿಸಿದಂತೆ]
9.	0203	ಹಂದಿಯ ತಾಜಾ, ಶೀತಲೀಕರಿಸಿದ, ಹೆಪ್ಪುಗಟ್ಟಿಸಿದ ಮಾಂಸ [ಹೆಪ್ಪುಗಟ್ಟಿಸಿ ಮತ್ತು ಘಟಕದ ಧಾರಕದಲ್ಲಿಟ್ಟಿರುವುದನ್ನು ಹೊರತುಪಡಿಸಿದಂತೆ]
10.	0204	ಕುರಿಗಳ ಅಥವಾ ಮೇಕೆಗಳ ತಾಜಾ, ಶೀತಲೀಕರಿಸಿದ ಅಥವಾ ಹೆಪ್ಪುಗಟ್ಟಿಸಿದ ಮಾಂಸ [ಹೆಪ್ಪುಗಟ್ಟಿಸಿ ಮತ್ತು ಘಟಕದ ಧಾರಕದಲ್ಲಿಟ್ಟಿರುವುದನ್ನು ಹೊರತುಪಡಿಸಿದಂತೆ]
11.	0205	ಕುದುರೆಗಳು, ಕತ್ತೆಗಳು, ಹೇಸರಗತ್ತೆಗಳು, ಹಿನ್ನಿಗಳ ತಾಜಾ, ಶೀತಲೀಕರಿಸಿದ ಅಥವಾ ಹೆಪ್ಪುಗಟ್ಟಿಸಿದ ಮಾಂಸ [ಹೆಪ್ಪುಗಟ್ಟಿಸಿ ಮತ್ತು ಘಟಕದ ಧಾರಕದಲ್ಲಿಟ್ಟಿರುವುದನ್ನು ಹೊರತುಪಡಿಸಿದಂತೆ]
12.	0206	ಗೋಜಾತಿಗೆ ಸೇರಿದ ಪ್ರಾಣಿಗಳ, ಹಂದಿ, ಕುರಿ, ಮೇಕೆ, ಕುದುರೆ, ಕತ್ತೆ, ಹೇಸರುಗತ್ತೆ, ಅಥವಾ ಹಿನ್ನಿಗಳ ತಾಜಾ, ಶೀತಲೀಕರಿಸಿದ ಅಥವಾ ಹೆಪ್ಪುಗಟ್ಟಿಸಿದ ಖಾದ್ಯ ಮಾಂಸದ ತ್ಯಾಜ್ಯ (ಆಫಲ್) [ಹೆಪ್ಪುಗಟ್ಟಿಸಿ ಮತ್ತು ಘಟಕದ ಧಾರಕದಲ್ಲಿಟ್ಟಿರುವುದನ್ನು ಹೊರತುಪಡಿಸಿದಂತೆ]
13.	0207	ಶಿರೋನಾಮೆ 0105ರ ಕುಕ್ಕುಟಗಳ ತಾಜಾ, ಶೀತಲೀಕರಿಸಿದ ಅಥವಾ ಹೆಪ್ಪುಗಟ್ಟಿಸಿದ ಮಾಂಸ ಮತ್ತು ಖಾದ್ಯ ಮಾಂಸದ ತ್ಯಾಜ್ಯ (ಆಫಲ್)[ಹೆಪ್ಪುಗಟ್ಟಿಸಿ ಮತ್ತು ಘಟಕದ ಧಾರಕದಲ್ಲಿಟ್ಟಿರುವುದನ್ನು ಹೊರತುಪಡಿಸಿದಂತೆ]
14.	0208	ತಾಜಾ, ಶೀತಲೀಕರಿಸಿದ ಅಥವಾ ಹೆಪ್ಪುಗಟ್ಟಿಸಿದ ಇತರೇ ಮಾಂಸ ಮತ್ತು ಖಾದ್ಯ ಮಾಂಸದ ತ್ಯಾಜ್ಯ (ಆಫಲ್) [ಹೆಪ್ಪುಗಟ್ಟಿಸಿ ಮತ್ತು ಘಟಕದ ಧಾರಕದಲ್ಲಿಟ್ಟಿರುವುದನ್ನು ಹೊರತುಪಡಿಸಿದಂತೆ]
15.	0209	ಕರಗಿಸಿಲ್ಲದ ಅಥವಾ ಅನ್ಯಥಾ ಹೊರತೆಗೆದಿಲ್ಲದಿರುವ ಶೀತಲೀಕರಿಸಿದ ಅಥವಾ ಹೆಪ್ಪುಗಟ್ಟಿಸಿದ, ಹಂದಿ ಕೊಬ್ಬು, ತೆಳ್ಳನೆ ಮಾಂಸ ಮುಕ್ತವಾದುದು, ಮತ್ತು ಕುಕ್ಕಟದ ಕೊಬ್ಬು [ಹೆಪ್ಪುಗಟ್ಟಿಸಿ ಮತ್ತು ಘಟಕದ ಧಾರಕದಲ್ಲಿಟ್ಟಿರುವುದನ್ನು ಹೊರತುಪಡಿಸಿದಂತೆ]
16.	0209	ಕರಗಿಸಿಲ್ಲದ ಅಥವಾ ಅನ್ಯಥಾ ಹೊರತೆಗೆದಿಲ್ಲದಿರುವ ಉಪ್ಪುಲೇಪಿತ, ಬ್ರೈನ್‌ನಲ್ಲಿ ಶೇಖರಿಸಿದ, ಒಣಗಿಸಿದ, ಅಥವಾ ಹೊಗೆಯಾಡಿಸಿದ ಹಂದಿ ಕೊಬ್ಬು, ತೆಳ್ಳನೆ ಮಾಂಸ ಮುಕ್ತವಾದುದು, ಮತ್ತು ಕುಕ್ಕಟದ ಕೊಬ್ಬು [ಹೆಪ್ಪುಗಟ್ಟಿಸಿ ಮತ್ತು ಘಟಕದ ಧಾರಕದಲ್ಲಿಟ್ಟಿರುವುದನ್ನು ಹೊರತುಪಡಿಸಿದಂತೆ]
17.	0210	ಅಳತೆಯ ಧಾರಕಗಳಲ್ಲಿಟ್ಟಿರುವುದನ್ನು ಹೊರತುಪಡಿಸಿದ, ಉಪ್ಪುಲೇಪಿತ, ಬ್ರೈನ್‌ನಲ್ಲಿ ಶೇಖರಿಸಿದ, ಒಣಗಿಸಿದ, ಅಥವಾ ಹೊಗೆಯಾಡಿಸಿದ ಮಾಂಸ ಮತ್ತು ಖಾದ್ಯ ಮಾಂಸ ತ್ಯಾಜ್ಯ (ಆಫಲ್); ಮಾಂಸ ಮತ್ತು ಖಾದ್ಯ ಮಾಂಸ ತ್ಯಾಜ್ಯದ (ಆಫಲ್) ಖಾದ್ಯ ಹಿಟ್ಟು ಮತ್ತು ಮೀಲ್ಸ್.

383

18.	03	ಮೀನು ಬೀಜಗಳು, ಪ್ರಾನ್/ಸೀಗಡಿ ಬೀಜಗಳು, ಸಂಸ್ಕರಿಸಿರಲಿ, ಶುದ್ಧೀಕರಿಸಿರಲಿ ಅಥವಾ ಶೀತಲೀಕರಿಸಿದ ಸ್ಥಿತಿಯಲ್ಲಿರಲಿ ಅಥವಾ ಇಲ್ಲದಿರಲಿ (ಅಧ್ಯಾಯ 3ರ ಅಡಿಯಲ್ಲಿ ಬರುವ ಮತ್ತು ಶೇ.2.5%ರಷ್ಟು ತೆರಿಗೆಯನ್ನು ಆಕರ್ಷಿಸಿಸುವ ಸರಕುಗಳನ್ನು ಹೊರತುಪಡಿಸಿದಂತೆ)
19.	0301	ಸಜೀವ ಮೀನು
20.	0302	ಶಿರೋನಾಮೆ 0304ರ ಮೀನಿನ ಫಿಲ್ಲೇಟ್ಗಳು ಮತ್ತು ಇತರೆ ಮೀನಿನ ಮಾಂಸವನ್ನು ಹೊರತುಪಡಿಸಿದ ತಾಜಾ, ಅಥವಾ ಶೀತಲೀಕರಿಸಿದ ಮೀನು
21.	0304	ತಾಜಾ, ಅಥವಾ ಶೀತಲೀಕರಿಸಿದ ಮೀನಿನ ಫಿಲ್ಲೇಟ್ಗಳು ಮತ್ತು ಇತರೆ ಮೀನಿನ ಮಾಂಸ (ಕತ್ತರಿಸಿರಲಿ ಅಥವಾ ಇಲ್ಲದಿರಲಿ)
22.	0306	ಸಜೀವ, ತಾಜಾ, ಅಥವಾ ಶೀತಲೀಕರಿಸಿದ ಕಠಿಣ ಚರ್ಮಿಗಳು, ಚಿಪ್ಪಿನಲ್ಲಿರಲಿ ಅಥವಾ ಇಲ್ಲದಿರಲಿ; ಹಬೆಯಲ್ಲಿ ಬೇಯಿಸಿದ ಅಥವಾ ನೀರಿನಲ್ಲಿ ಕುದಿಸಿದ ಚಿಪ್ಪಿನಲ್ಲಿರುವ ಸಜೀವ, ತಾಜಾ, ಅಥವಾ ಶೀತಲೀಕರಿಸಿದ ಕಠಿಣ ಚರ್ಮಿಗಳು,
23.	0307	ಸಜೀವ, ತಾಜಾ, ಅಥವಾ ಶೀತಲೀಕರಿಸಿದ ಮೃದ್ವಂಗಿಗಳು, ಚಿಪ್ಪಿನಲ್ಲಿರಲಿ ಅಥವಾ ಇಲ್ಲದಿರಲಿ; ಸಜೀವ, ತಾಜಾ, ಅಥವಾ ಶೀತಲೀಕರಿಸಿದ
24.	0308	ಕಠಿಣ ಚರ್ಮಿಗಳು ಮತ್ತು ಮೃದ್ವಂಗಿಯಲ್ಲದ, ಸಜೀವ, ತಾಜಾ, ಅಥವಾ ಶೀತಲೀಕರಿಸಿದ ಜಲವಾಸಿ ಅಕಶೇರುಕಗಳು;
25.	0401	ಬೇರ್ಪಡಿಸಿದ ಹಾಲು, ಹಾಲು ಮತ್ತು ಕ್ರೀಮ್ ಒಳಗೊಂಡಂತೆ, ಸಾಂದ್ರೀಕರಿಸದ ಅಥವಾ ಸಕ್ಕರೆ ಅಥವಾ ಇನ್ನಿತರ ಸಿಹಿ ಅಂಶಗಳನ್ನು ಸೇರಿಸಿರುವುದನ್ನು ಒಳಗೊಳ್ಳದ, ತಾಜಾ ಹಾಲು ಮತ್ತು ಪಾಶ್ಚರೀಕೃತ ಹಾಲು, ಅಲ್ಟ್ರಾ ಅಧಿಕ ಉಷ್ಣತೆಯ (UHT) ಹಾಲನ್ನು ಹೊರತುಪಡಿಸಿದಂತೆ
26.	0403	ಮೊಸರು; ಲಸ್ಸಿ; ಮಜ್ಜಿಗೆ
27.	0406	ಅಳತೆಯ ಧಾರಕದಲ್ಲಿಟ್ಟಿರುವ ಮತ್ತು ನೋಂದಾಯಿತ ಬ್ರಾಂಡಿನ ಹೆಸರನ್ನು ಹೊಂದಿರುವುದನ್ನು ಹೊರತುಪಡಿಸಿದ ಚೆನಾ ಅಥವಾ ಪನೀರ್.
28.	0407	ಚಿಪ್ಪಿನಲ್ಲಿರುವ, ತಾಜಾ, ಸಂರಕ್ಷಿಸಿದ ಅಥವಾ ಬೇಯಿಸಿದ ಪಕ್ಷಿಗಳ ಮೊಟ್ಟೆಗಳು
29.	0409	ಅಳತೆಯ ಧಾರಕದಲ್ಲಿಟ್ಟಿರುವ ಮತ್ತು ನೋಂದಾಯಿತ ಬ್ರಾಂಡಿನ ಹೆಸರನ್ನು ಹೊಂದಿರುವುದನ್ನು ಹೊರತುಪಡಿಸಿದ ನೈಸರ್ಗಿಕ ಜೇನುತುಪ್ಪ.
30.	0501	ಸಜ್ಜುಗೊಳಿಸದ ಮಾನವ ಕೂದಲು, ತೊಳೆದಿರಲಿ ಅಥವಾ ಶುಚಿಗೊಳಿಸಿರಲಿ ಅಥವಾ ಇಲ್ಲದಿರಲಿ; ಮಾನವ ಕೂದಲಿನ ತ್ಯಾಜ್ಯ
31.	0506	ಎಲ್ಲಾ ಸರಕುಗಳು ಅಂದರೆ ರೂಪುಗೊಡದ, ಕೊಬ್ಬಿನಾಂಶ ತೆಗೆದ, ಸರಳವಾಗಿ ತಯಾರಿಸಿದ (ಆದರೆ ಆಕಾರ ನೀಡುವಿಕೆಗಾಗಿ ಕತ್ತರಿಸದ), ಆಮ್ಲ ಅಥವಾ ಜಿಲಟಿನೀಕರಣದೊಂದಿಗೆ ಸಂಸ್ಕರಿಸಿದ ಮೂಳೆಗಳು ಮತ್ತು ಕೋಡು–ಗೊರಟೆಗಳು, ಈ ಉತ್ಪನ್ನಗಳ ಪುಡಿ ಮತ್ತು ತ್ಯಾಜ್ಯ
32.	0507 90	ಎಲ್ಲಾ ಸರಕುಗಳು ಅಂದರೆ ಗೊರಸಿನ ಆಹಾರ; ಕೊಂಬಿನ ಆಹಾರ; ಗೊರಸುಗಳು, ಪಕ್ಷಿಗಳ ಉಗುರು, ಉಗುರುಗಳು ಮತ್ತು ಕೊಕ್ಕುಗಳು; ಕವಲ್ಗೊಂಬು; ಇತ್ಯಾದಿ
33.	0511	ಹೆಪ್ಪುಗಟ್ಟಿಸಿದ ವೀರ್ಯ ಒಳಗೊಂಡಂತೆ ವೀರ್ಯ
34.	06	ಸಜೀವ ಮರಗಳು ಮತ್ತು ಇತರೇ ಸಸ್ಯಗಳು; ಗೆಡ್ಡೆಗಳು, ಬೇರುಗಳು ಮತ್ತು ಅದೇ ರೀತಿಯವು; ಕತ್ತರಿಸಿದ ಹೂವುಗಳು ಮತ್ತು ಅಲಂಕಾರಿಕ ಎಲೆಗಳು
35.	0701	ತಾಜಾ ಅಥವಾ ಶೀತಲೀಕರಿಸಿದ ಆಲೂಗಡ್ಡೆ
36.	0702	ತಾಜಾ ಅಥವಾ ಶೀತಲೀಕರಿಸಿದ ಟೊಮೇಟೋ,
37.	0703	ತಾಜಾ ಅಥವಾ ಶೀತಲೀಕರಿಸಿದ ಈರುಳ್ಳಿ, ಸಣ್ಣ ಈರುಳ್ಳಿ, ಬೆಳ್ಳುಳ್ಳಿ, ಲೀಕ್ಗಳು ಮತ್ತು ಇತರೇ ಅಲಿಯಾಸಿಯಸ್ ತರಕಾರಿಗಳು
38.	0704	ತಾಜಾ ಅಥವಾ ಶೀತಲೀಕರಿಸಿದ ಎಲೆ ಕೋಸು, ಹೂ ಕೋಸು, ಗೆಡ್ಡೆ ಕೋಸು, ಕೇಲ್ ಮತ್ತು ಅದೇ ರೀತಿಯ ಖಾದ್ಯ ಬ್ರಾಸ್ಸಿಕಾಗಳು
39.	0705	ತಾಜಾ ಅಥವಾ ಶೀತಲೀಕರಿಸಿದ ಲೆಟ್ಯೂಸ್ (ಲಾಕ್ಟುಸಾಸ್ಟಿವಾ) ಮತ್ತು ಚಿಕೋರಿ (ಚಿಕೋರಿಯಂ
40.	0706	ತಾಜಾ ಅಥವಾ ಶೀತಲೀಕರಿಸಿದ ಕ್ಯಾರೆಟ್, ಟರ್ನಿಪ್ಗಳು, ಸಲಾಡ್ ಬೀಟ್ರೋಟ್, ಸಾಲ್ಸಿಫಿ, ಸೆಲೆರಿಯಾಕ್, ಕೆಂಪು ಮೂಲಂಗಿ ಮತ್ತು ಅದೇ ರೀತಿಯ ಖಾದ್ಯ ಬೇರುಗಳು

384

41.	0707	ತಾಜಾ ಅಥವಾ ಶೀತಲೀಕರಿಸಿದ ಸೌತೆಕಾಯಿ ಮತ್ತು ಘರ್ಕಿನ್‌ಗಳು
42.	0708	ತಾಜಾ ಅಥವಾ ಶೀತಲೀಕರಿಸಿದ ಸಿಪ್ಪೆಯಿರುವ ಅಥವಾ ಸಿಪ್ಪೆಯಿಲ್ಲದ, ದ್ವಿದಳ ಧಾನ್ಯಗಳ
43.	0709	ತಾಜಾ ಅಥವಾ ಶೀತಲೀಕರಿಸಿದ ಇತರೇ ತರಕಾರಿಗಳು
44.	0712	ಪೂರ್ಣವಾಗಿರುವ, ಕತ್ತರಿಸಿದ, ಎಳೆಯಾಗಿ ತೆಗೆದ ಅಥವಾ ಮುರಿದ ಅಥವಾ ಪುಡಿ ರೂಪದಲ್ಲಿರುವ ಆದರೆ ಮತ್ತಷ್ಟು ಸಜ್ಜುಗೊಳಿಸದ ಒಣಗಿದ ತರಕಾರಿಗಳು,
45.	0713	ಒಣಗಿದ ದ್ವಿದಳ ತರಕಾರಿಗಳು, ಸಿಪ್ಪೆಯುಳ್ಳವು, ಸಿಪ್ಪೆ ತೆಗೆದಿರಲಿ ಅಥವಾ ಸೀಳಿರಲಿ ಅಥವಾ ಇಲ್ಲದಿರಲಿ
46.	0714	ತಾಜಾ ಅಥವಾ ಶೀತಲೀಕರಿಸಿದ ಮರಗೆಣಸು, ಸಿಹಿ ಗೆಣಸು, ಸಾಲಾಮಿಸ್ರಿ, ಜೆರೂಸಲೆಂ ಆರ್ಟಿಚೋಕ್ಸ್, ಮತ್ತು ಸಿಹಿಗೆಣಸು, ಅತಿ ಹೆಚ್ಚಿನ ಪಿಷ್ಟವನ್ನು ಅಥವಾ ಇನ್ಯೂಲಿನ್ ಅಂಶವನ್ನು ಹೊಂದಿರುವ ಅದೇ ರೀತಿಯ ಬೇರುಗಳು ಮತ್ತು ಗೆಡ್ಡೆಗಳು; ಸಬ್ಬಕ್ಕಿ ತಿರುಳು
47.	0801	ತಾಜಾ ಅಥವಾ ಒಣಗಿದ ತೆಂಗಿನಕಾಯಿಗಳು, ಸಿಪ್ಪೆಯಿರಲಿ ಅಥವಾ ಇಲ್ಲದರಲಿ, ಅಥವಾ ಸಿಪ್ಪೆ
48.	0801	ತಾಜಾ ಬ್ರೆಜಿಲ್ ಬೀಜಗಳು, ಸಿಪ್ಪೆಯಿರಲಿ ಅಥವಾ ಇಲ್ಲದರಲಿ, ಅಥವಾ ಸಿಪ್ಪೆ ತೆಗೆದಿರಲಿ.
49.	0802	ತಾಜಾ, ಇತರೇ ಬೀಜಗಳು, ಅವುಗಳೆಂದರೆ, ಬಾದಾಮಿ, ಹೇಸಲ್ ಅಥವಾ ಹೇಸಲ್ ಚಿಪ್ಪು ಕಾಯಿಗಳು(ಕೊರಿಯಸ್ ಎಸ್‌ಪಿಪಿ), ವಾಲ್ನಟ್‌ಗಳು, ಚೆಸ್ಟ್‌ನಟ್‌ಗಳು (ಕ್ಯಾಸ್ಟಾನಿಯಾ ಎಸ್‌ಪಿಪಿ), ಪಿಸ್ತ, ಮಕಾಡೆಮೀಯ ನಟ್‌ಗಳು, ಕೋಲಾ ನಟ್‌ಗಳು (ಕೋಲಾ ಎಸ್‌ಪಿಪಿ.) ತಾಜಾ ಅಡಿಕೆಗಳು, ಸಿಪ್ಪೆಯಿರಲಿ ಅಥವಾ ಇಲ್ಲದರಲಿ, ಅಥವಾ ಸಿಪ್ಪೆ ತೆಗೆದಿರಲಿ
50.	0803	ತಾಜಾ ಅಥವಾ ಒಣಗಿದ ಬಾಳೆಗಿಡ ಒಳಗೊಂಡಂತೆ ಬಾಳೆಹಣ್ಣುಗಳು
51.	0804	ತಾಜಾ ಖರ್ಜೂರ, ಅಂಜೂರ, ಅನಾನಸ್, ಅವೋಕಾಡೋ, ಸೀಬೆ, ಮಾವಿನಹಣ್ಣು ಮತ್ತು ಮ್ಯಾಂಗೋಸ್ಟೀನ್‌ಗಳು,
6. +	ಕ್ಲೇಮು ಮಾಡಿರುವ ಮರುಪಾವತಿಯ ಮೊತ್ತ (ರೂಗಳಲ್ಲಿ)	ಅಧಿನಿಯಮ	ತೆರಿಗೆ	ಬಡ್ಡಿ	ದಂಡ	ಶುಲ್ಕ	ಇತರೆ	ಒಟ್ಟು
		ಕೇಂದ್ರ ತೆರಿಗೆ						
		ರಾಜ್ಯ/ಕೇಂ.ಪ್ರ ತೆರಿಗೆ						
		ಏಕೀಕೃತ ತೆರಿಗೆ						
		ಉಪಕರ						
		ಒಟ್ಟು						
7.	ಕ್ಲೇಮು ಮಾಡಿರುವ ಮರುಪಾವತಿಯ ಕಾರಣಾಧಾರಗಳು(ಕೆಳಗಿನವುಗಳಿಂದ ಆಯ್ಕೆ ಮಾಡಿ):	(ಎ)	ವಿದ್ಯುನ್ಮಾನ ನಗದು ಖಾತೆಯಲ್ಲಿನ ಹೆಚ್ಚುವರಿ ಉಳಿಕೆ					
		(ಬಿ)	ಸರಕುಗಳು / ಸೇವೆಗಳ ರಫ್ತುಗಳು– ತೆರಿಗೆ ಸಂದಾಯದೊಂದಿಗೆ					
		(ಸಿ)	ಸರಕುಗಳು / ಸೇವೆಗಳ ರಫ್ತುಗಳು– ತೆರಿಗೆ ಸಂದಾಯವಿಲ್ಲದೆ, (ಸಂಚಿತವಾದ ಐಟಿಸಿ)					
		(ಡಿ)	ವಿಲೋಮ ತರಿಗೆ ಸ್ವರೂಪದ ಕಾರಣದಿಂದಾಗಿ ಸಂಚಿತವಾದ ಐಟಿಸಿ (ಪ್ರಕರಣ 54(3)ರ ಪರಂತುಕದ ಖಂಡ (ii))					
		(ಇ)	ಎಸ್ಇಝಡ್ ಘಟಕ / ಎಸ್ಇಝಡ್ಅಭಿವೃದ್ಧಿದಾರನಿಗೆ ಮಾಡಲಾದ ಪೂರೈಕೆಗಳ ಕಾರಣದಿಂದಾಗಿ (ತೆರಿಗೆ ಸಂದಾಯದೊಂದಿಗೆ)					
		(ಎಫ್)	ಎಸ್ಇಝಡ್ ಘಟಕ / ಎಸ್ಇಝಡ್ಅಭಿವೃದ್ಧಿದಾರನಿಗೆ ಮಾಡಲಾದ ಪೂರೈಕೆಗಳ ಕಾರಣದಿಂದಾಗಿ (ತೆರಿಗೆ ಸಂದಾಯವಿಲ್ಲದೆ)					
		(ಜಿ)	ಪರಿಭಾವಿತ ರಫ್ತುಗಳನ್ನು ಸ್ವೀಕರಿಸುವವನು					

ಘೋಷಣೆ (ಪ್ರಕರಣ 54(3)ರ ಎರಡನೇ ಪರಂತುಕ)

ರಫ್ತು ಮಾಡಲಾದ ಸರಕುಗಳು ಯಾವುದೇ ರಫ್ತು ಸುಂಕಕ್ಕೆ ಒಳಪಟ್ಟಿಲ್ಲ ಎಂದು ನಾನು ಈ ಮೂಲಕ ಘೋಷಿಸುತ್ತೇನೆ. ನಾನು ಯಾವುದೇ ಸರಕು ಮತ್ತು ಸೇವೆಗಳು ಮತ್ತು ಅವುಗಳೆರಡರ ಮೇಲೆ ಸುಂಕ ವಾಪಸ್ಸಾತಿಯನ್ನು ಉಪಯೋಗಿಸಿಕೊಂಡಿಲ್ಲ ಎಂದು ಸಹ ಹಾಗೂ ಮರುಪಾವತಿ ಕ್ಲೇಮು ಮಾಡಿರುವುದಕ್ಕೆ ಸಂಬಂಧಿಸಿದ ಪೂರೈಕೆಗಳ

417

ಮೇಲೆ ಸಂದಾಯ ಮಾಡಿದ ಏಕೀಕೃತ ತೆರಿಗೆ ಮರುಪಾವತಿಯನ್ನು ನಾನು ಕ್ಲೇಮು ಮಾಡಿಲ್ಲ ಎಂದು ಘೋಷಿಸುತ್ತೇನೆ.

ಸಹಿ
ಹೆಸರು
ಪದನಾಮ/ಸ್ಥಾನಮಾನ

ಘೋಷಣೆ(ಪ್ರಕರಣ 54(3)(ಖ))

ಅರ್ಜಿಯಲ್ಲಿ ನಾನು ಕ್ಲೇಮು ಮಾಡಿದ ಐಟಿಸಿಯ ಮರುಪಾವತಿಯು, ನಿಶ್ಶೇಷ ದರದ ಅಥವಾ ಪೂರ್ಣವಾಗಿ ವಿನಾಯಿತಿಯಾದ ಪೂರೈಕೆಗಳನ್ನು ಮಾಡುವುದಕ್ಕಾಗಿ ಬಳಸಿದ ಸರಕುಗಳು ಅಥವಾ ಸೇವೆಗಳ ಮೇಲೆ ಉಪಯೋಗಿಸಿದ ಐಟಿಸಿಯನ್ನು ಒಳಗೊಂಡಿರುವುದಿಲ್ಲ ಎಂದು ನಾನು ಈ ಮೂಲಕ ಘೋಷಿಸುತ್ತೇನೆ.

ಸಹಿ
ಹೆಸರು
ಪದನಾಮ/ಸ್ಥಾನಮಾನ

ಘೋಷಣೆ (ನಿಯಮ 89(2)(ಎಫ್))

ವಿಶೇಷ ಆರ್ಥಿಕ ವಲಯ ಘಟಕ/ವಿಶೇಷ ಆರ್ಥಿಕ ವಲಯ ಅಭಿವೃದ್ಧಿದಾರನು, ಈ ಮರುಪಾವತಿ ಕ್ಲೇಮಿನ ಅಡಿಯಲ್ಲಿ ಬರುವ, ಅರ್ಜಿದಾರನಿಂದ ಸಂದಾಯವಾದ ತೆರಿಗೆಯ ಹೂಡುವಳಿ ತೆರಿಗೆ ಜಮೆಯನ್ನು ಉಪಯೋಗಿಸಿಕೊಂಡಿಲ್ಲವೆಂದು ನಾನು ಈ ಮೂಲಕ ಘೋಷಿಸುತ್ತೇನೆ.

ಸಹಿ
ಹೆಸರು
ಪದನಾಮ/ಸ್ಥಾನಮಾನ

ಸ್ವಯಂ–ಘೋಷಣೆ(ನಿಯಮ 89(2)(ಎಲ್))

.....ಜಿಎಸ್‌ಟಿಇನ್/ ತಾತ್ಕಾಲಿಕ ಗುರುತು ಸಂಖ್ಯೆ ಹೊಂದಿರುವ ..... ಆದ ನಾನು /ನಾವು (ಅರ್ಜಿದಾರ) ವಿದ್ಯುಕ್ತವಾಗಿ ಘೋಷಿಸುವುದು ಮತ್ತು ಪ್ರಮಾಣೀಕರಿಸುವುದೇನೆಂದರೆ, ತೆರಿಗೆ, ಬಡ್ಡಿ, ಅಥವಾ ಯಾವುದೇ ಇತರೇ ಮೊತ್ತಕ್ಕೆ ಸಂಬಂಧಿಸಿದಂತೆ ..... ಯಿಂದ ..... ವರೆಗಿನ ಅವಧಿಗಾಗಿ ಮರುಪಾವತಿ ಅರ್ಜಿಯಲ್ಲಿ ಕ್ಲೇಮು ಮಾಡಲಾಗಿರುವ ರೂ...../– ಮೊತ್ತದ ಮರುಪಾವತಿಗೆ ಸಂಬಂಧಿಸಿದಂತೆ, ಅಂಥ ತೆರಿಗೆ ಮತ್ತು ಬಡ್ಡಿಯ ಹೊರೆಯನ್ನು ಯಾವುದೇ ಇತರ ವ್ಯಕ್ತಿಗೆ ವರ್ಗಾಯಿಸಿರುವುದಿಲ್ಲ.

ಸಹಿ
ಹೆಸರು
ಪದನಾಮ/ಸ್ಥಾನಮಾನ

(ಪ್ರಕರಣ 54ರ ಉಪಪ್ರಕರಣ (8)ರ ಖಂಡ (ಎ) ಅಥವಾ ಖಂಡ (ಬಿ)ಅಥವಾ ಖಂಡ (ಸಿ) ಅಥವಾ ಖಂಡ (ಡಿ) ಅಥವಾ ಖಂಡ (ಎಫ್) ಅಡಿಯಲ್ಲಿ ಮರುಪಾವತಿಯನ್ನುಕ್ಲೇಮು ಮಾಡುವ ಅರ್ಜಿದಾರರು ಈ ಘೋಷಣೆಯನ್ನು ಒದಗಿಸಬೇಕಿರುವುದು ಅಗತ್ಯವಿರುವುದಿಲ್ಲ.)

8. **ಪರಿಶೀಲನೆ :**

ನಾನು/ನಾವು <ತೆರಿಗೆ ಪಾವತಿದಾರರ ಹೆಸರು> ಈ ಮೂಲಕ ಪ್ರಮಾಣ ಪೂರ್ವಕವಾಗಿ ಘೋಷಿಸುವುದೇನೆಂದರೆ, ಇಲ್ಲಿ ನೀಡಲಾದ ಮಾಹಿತಿಯು ನನ್ನ ಅತ್ಯುತ್ತಮ ತಿಳುವಳಿಕೆ ಮತ್ತು ನಂಬಿಕೆಯಂತೆ ಸತ್ಯ ಮತ್ತು ಸಮರ್ಪಕವಾಗಿರುತ್ತದೆ ಮತ್ತು ಏನನ್ನೂ ಮರೆಮಾಚಿರುವುದಿಲ್ಲ.
ನನ್ನಿಂದ/ನಮ್ಮಿಂದ ಈ ಸಂಬಂಧದಲ್ಲಿ ಈ ಹಿಂದೆ ಯಾವುದೇ ಮರುಪಾವತಿಯನ್ನು ಸ್ವೀಕೃತವಾಗಿರುವುದಿಲ್ಲವೆಂದು

418

ನಾನು/ನಾವು ಘೋಷಿಸುತ್ತೇನೆ/ವೆ
ಸ್ಥಳ:
ದಿನಾಂಕ:

ಪ್ರಾಧಿಕೃತ ವ್ಯಕ್ತಿಯ ಸಹಿ
ಹೆಸರು:
ಪದನಾಮ / ಸ್ಥಾನಮಾನ"

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

419

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಕೆ/2017)
ನಂ. ಆಇ 47 ಸಿಎಸ್ಎಲ್ 2017, ಬೆಂಗಳೂರು, ದಿನಾಂಕ 25.01.2018

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ 2017ರ (2017ರ ಕರ್ನಾಟಕ ಅಧಿನಿಯಮ 27), ಪ್ರಕರಣ 164ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017, ಇವುಗಳಿಗೆ ಮುಂದುವರಿದ ತಿದ್ದುಪಡಿ ತರಲು ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಅಂದರೆ:–

ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ:**– (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ನಿಯಮಗಳು, 2018, ಎಂದು ಕರೆಯಬಹುದು.

(2) ಈ ನಿಯಮಗಳು 2017ರ ಡಿಸೆಂಬರ್ 21ನೇ ದಿನದಿಂದ ಜಾರಿಗೆ ಬಂದಿವೆ ಎಂದು ಪರಿಭಾವಿಸತಕ್ಕದ್ದು.

2. **ನಮೂನೆ ಜಿಎಸ್ಟಿಆರ್–1ರ ತಿದ್ದುಪಡಿ:**– ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017, (ಇನ್ನು ಮುಂದೆ **"ಸದರಿ ನಿಯಮಗಳು"** ಎಂದು ಉಲ್ಲೇಖಿಸಲಾಗಿದೆ)ರ ನಮೂನೆ ಜಿಎಸ್ಟಿಆರ್–1ರಲ್ಲಿ ಕೋಷ್ಟಕ 6 ಮತ್ತು ಅದಕ್ಕೆ ಸಂಬಂಧಿಸಿದ ನಮೂದನೆಗಳಿಗಾಗಿ, ಈ ಕೆಳಗಿನದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"6. **ಶೂನ್ಯ ದರದ ಪೂರೈಕೆಗಳು ಮತ್ತು ಪರಿಭಾವಿತ ರಫ್ತುಗಳು**

ಸ್ವೀಕರಿಸುವವನ ಜಿಎಸ್ಟಿಐಎನ್	ಬೆಲೆಪಟ್ಟಿ ವಿವರಗಳು			ರಫ್ತು		ಏಕೀಕೃತ ತೆರಿಗೆ			ಉಪಕರ
	ಸಂ.	ದಿನಾಂಕ	ಮೌಲ್ಯ	ಸಂ.	ದಿನಾಂಕ	**ದರ**	ತೆರಿಗೆದಾಯಕ ಮೌಲ್ಯ	ಮೊತ್ತ	
1	2	3	4	5	6	7	8	9	
6ಎ. ರಫ್ತುಗಳು									
6ಬಿ. ಎಸ್ಇಝೆಡ್ ವಲಯದ ಘಟಕಕ್ಕೆ ಅಥವಾ ಎಸ್ಇಝೆಡ್ ಅಭಿವೃದ್ಧಿದಾರರಿಗೆ ಮಾಡಿದ ಪೂರೈಕೆಗಳು									
ಪರಿಭಾವಿತ ರಫ್ತುಗಳು									

420

3. **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–01ರ ತಿದ್ದುಪಡಿ.**– ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–01**ರಲ್ಲಿ, –

(ಎ) ಸಂಖ್ಯೆ 7ರಲ್ಲಿ, ಖಂಡ (ಹೆಚ್)ನಲ್ಲಿ, "ಪರಿಭಾವಿತ ರಫ್ತುಗಳ ಸ್ವೀಕರಿಸುವವನು", ಎಂಬ ಪದಗಳಿಗಾಗಿ "ಪರಿಭಾವಿತ ರಫ್ತು ಪೂರೈಕೆಗಳ ಸ್ವೀಕರಿಸುವವನು/ಪರಿಭಾವಿತ ರಫ್ತು ಪೂರೈಕೆಗಳ ಸರಬರಾಜುದಾರನು" ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಸಂಖ್ಯೆ 9ರಲ್ಲಿ, **ಘೋಷಣೆ [ನಿಯಮ 89(2)(ಜಿ))]** ಮತ್ತು ಸಂಬಂಧಿತ ನಮೂದನೆಗಳಿಗೆ, ಈ ಕೆಳಗಿನದ್ದು ಪ್ರತಿಯೋಜಿಸತಕ್ಕದ್ದು, ಅಂದರೆ:–

"ಘೋಷಣೆ (ನಿಯಮ 89(2)(ಜಿ))
(ಪರಿಭಾವಿತ ರಫ್ತನ್ನು ಸ್ವೀಕರಿಸುವವರಿಗಾಗಿ)

ಸ್ವೀಕರಿಸುವವನು ಮರುಪಾವತಿಯನ್ನು ಕ್ಲೇಮು ಮಾಡಿದ್ದರೆ ☐
ಮರುಪಾವತಿಯನ್ನು ಕ್ಲೇಮು ಮಾಡಿರುವ ತೆರಿಗೆ ಅವಧಿಗಾಗಿ ವಿವರಪತ್ರ 5ಬಿಯಲ್ಲಿ ವರದಿ ಮಾಡಲಾಗಿರುವ ಅಂಥ ತೆರಿಗೆ ಬೆಲೆಪಟ್ಟಿಗಳಿಗಾಗಿ ಮಾತ್ರ ಮರುಪಾವತಿಯನ್ನು ಕೋರಲಾಗಿದೆ ಮತ್ತು ಮೊತ್ತವು ಸದರಿ ತೆರಿಗೆ ಅವಧಿಗಾಗಿ ಸಲ್ಲಿಸಿದ ಸಿಂಧುವಾದ ರಿಟರ್ನ್‌ನಲ್ಲಿ ಉಪಯೋಗಿಸಿದ ಹೂಡುವಳಿ ತೆರಿಗೆ ಜಮೆಯ ಮೊತ್ತವನ್ನು ಮೀರಿರುವುದಿಲ್ಲ ಎಂದು ಘೋಷಿಸುತ್ತೇನೆ. ಸದರಿ ಪೂರೈಕೆಗಳಿಗೆ ಸಂಬಂಧಿಸಿದಂತೆ ಪೂರೈಕೆದಾರನು ಮರುಪಾವತಿಯನ್ನು ಕ್ಲೇಮು ಮಾಡಿರುವುದಿಲ್ಲವೆಂದೂ ಸಹ ಘೋಷಿಸುತ್ತೇನೆ.

ಪೂರೈಕೆದಾರನು ಮರುಪಾವತಿಯನ್ನು ಕ್ಲೇಮು ಮಾಡಿದ್ದರೆ ☐
ಮರುಪಾವತಿಯನ್ನು ಕ್ಲೇಮು ಮಾಡಿರುವ ತೆರಿಗೆ ಅವಧಿಗಾಗಿ ವಿವರಪತ್ರ 5ಬಿಯಲ್ಲಿ ವರದಿ ಮಾಡಲಾಗಿರುವ ಅಂಥ ತೆರಿಗೆ ಬೆಲೆಪಟ್ಟಿಗಳಿಗಾಗಿ ಮಾತ್ರ ಮರುಪಾವತಿಯನ್ನು ಕೋರಲಾಗಿದೆ. ಸದರಿ ಪೂರೈಕೆಗಳಿಗೆ ಸಂಬಂಧಿಸಿದಂತೆ ಸ್ವೀಕರಿಸುವವನು ಮರುಪಾವತಿಯನ್ನು ಕ್ಲೇಮು ಮಾಡಿರುವುದಿಲ್ಲ ಮತ್ತು ಸದರಿ ಪೂರೈಕೆಗಳ ಮೇಲೆ ಯಾವುದೇ ಹೂಡುವಳಿ ತೆರಿಗೆ ಜಮೆಯನ್ನು ಉಪಯೋಗಿಸಿಕೊಂಡಿರುವುದಿಲ್ಲ ಎಂದೂ ಸಹ ಘೋಷಿಸುತ್ತೇನೆ.

ಸಹಿ:
ಹೆಸರು ಪದನಾಮ/ಸ್ಥಾನಮಾನ

ಮುಚ್ಚಳಿಕೆ

ಮರುಪಾವತಿ ಪಡೆದ ಮೊತ್ತಕ್ಕೆ ಸಂಬಂಧಿಸಿದಂತೆ, ಒಂದು ವೇಳೆ ಸಿಜಿಎಸ್‌ಟಿ/ಕೆಜಿಎಸ್‌ಟಿ ಅಧಿನಿಯಮದ ಪ್ರಕರಣ 42ರ ಉಪಪ್ರಕರಣ (2)ನ್ನು ಓದಿಕೊಂಡು ಪ್ರಕರಣ 16ರ ಉಪಪ್ರಕರಣ (2)ರ ಉಪಬಂಧ (ಸಿ)ಯ ಕೋರಿಕೆಗಳಿಗೆ ಅನುಗುಣವಾಗಿ ಪಾಲಿಸಲಾಗಿರುವುದಿಲ್ಲವೆಂದು ನಂತರ ಕಂಡುಬಂದಂಥ ಸಂದರ್ಭದಲ್ಲಿ, ಮಂಜೂರಾದ ಮರುಪಾವತಿ ಮೊತ್ತವನ್ನು ಬಡ್ಡಿ ಸಹಿತ ಸರ್ಕಾರಕ್ಕೆ ಹಿಂದಿರುಗಿಸಲು ಈ ಮೂಲಕ ನಾನು ಬದ್ಧನಾಗಿರುತ್ತೇನೆ.

ಸಹಿ:
ಹೆಸರು ಪದನಾಮ/ಸ್ಥಾನಮಾನ"

(ಸಿ) ಅನುಬಂಧ–1 ರಲ್ಲಿ,–

421

(i) ವಿವರಪತ್ರ–1ರ ಮತ್ತು ಸಂಬಂಧಿಸಿದ ನಮೂದನೆಗಳ ನಂತರ ಈ ಕೆಳಗಿನ ವಿವರಪತ್ರವನ್ನು ಸೇರಿಸತಕ್ಕದ್ದು, ಅಂದರೆ:–

"ವಿವರಪತ್ರ–1ಎ [ನಿಯಮ 89(2)(ಹೆಚ್)]

ಮರುಪಾವತಿಯ ವಿಧ: ವಿಲೋಮ ತೆರಿಗೆ ಸಂರಚನೆಯ ಮೂಲಕ ಹೂಡುವಳಿ ತೆರಿಗೆಯ ಸಂಚಿತವಾಗಿದಲ್ಲಿ [ಪ್ರಕರಣ 54ರ ಉಪಪ್ರಕರಣ (3)ದ ಮೊದಲ ಪರಂತುಕದ ಖಂಡ (ii)]

ಕ್ರಮ ಸಂಖ್ಯೆ	ಪಡೆದ ಒಳಪೂರೈಕೆಗಳ ಬೆಲೆಪಟ್ಟಿಗಳ ವಿವರ			ಒಳಪೂರೈಕೆಗಳ ಮೇಲೆ ಪಾವತಿಸಿದ ತೆರಿಗೆ			ಹೊರಪೂರೈಕೆಗಳ ಮೇಲೆ ನೀಡಿದ ಬೆಲೆಪಟ್ಟಿಗಳ ವಿವರ			ಹೊರಪೂರೈಕೆಗಳ ಮೇಲೆ ಪಾವತಿಸಿದ ತೆರಿಗೆ		
	ನಂ.	ದಿನಾಂಕ	ತೆರಿಗೆದಾಯಕ ಮೌಲ್ಯ	ಏಕೀಕೃತ ತೆರಿಗೆ	ಕೇಂದ್ರ ತೆರಿಗೆ	ರಾಜ್ಯ/ ಕೇಂದ್ರಾಡಳಿತ ತೆರಿಗೆ	ನಂ.	ದಿನಾಂಕ	ತೆರಿಗೆದಾಯಕ ಮೌಲ್ಯ	ಏಕೀಕೃತ ತೆರಿಗೆ	ಕೇಂದ್ರ ತೆರಿಗೆ	ರಾಜ್ಯ/ ಕೇಂದ್ರಾಡಳಿತ ತೆರಿಗೆ
1	2	3	4	5	6	7	8	9	10	11	12	13

(ii) ವಿವರಪತ್ರ–5(ಎ) ಮತ್ತು ಅದಕ್ಕೆ ಸಂಬಂಧಿಸಿದ ನಮೂದನೆಗಳ ನಂತರ, ಈ ಕೆಳಗಿನ ವಿವರಪತ್ರವನ್ನು ಸೇರಿಸತಕ್ಕದ್ದು, ಅಂದರೆ:–

"ವಿವರಪತ್ರ–5ಬಿ [ನಿಯಮ 89(2)(ಜಿ)]

ಮರುಪಾವತಿಯ ವಿಧ: ಪರಿಭಾವಿತ ರಫ್ತುಗಳ ಮೇಲೆ

(ಮೊತ್ತ ರೂ.ಗಳಲ್ಲಿ)

ಕ್ರಮ ಸಂಖ್ಯೆ	ಒಂದು ವೇಳೆ ಪೂರೈಕೆದಾರನಿಂದ ಮರುಪಾವತಿ ಕ್ಲೇಮು ಮಾಡಿದಲ್ಲಿ ಹೊರಪೂರೈಕೆಗಳ ಬೆಲೆಪಟ್ಟಿಗಳ ವಿವರ/ ಒಂದು ವೇಳೆ ಸ್ವೀಕೃತಿದಾರನಿಂದ ಮರುಪಾವತಿ ಕ್ಲೇಮು ಮಾಡಿದಲ್ಲಿ ಒಳಪೂರೈಕೆಗಳ ಬೆಲೆಪಟ್ಟಿಗಳ ವಿವರ/			ಪಾವತಿಸಿದ ತೆರಿಗೆ			
	ನಂ.	ದಿನಾಂಕ	ತೆರಿಗೆದಾಯಕ ಮೌಲ್ಯ	ಏಕೀಕೃತ ತೆರಿಗೆ	ಕೇಂದ್ರ ತೆರಿಗೆ	ರಾಜ್ಯ/ ಕೇಂದ್ರಾಡಳಿತ ತೆರಿಗೆ	ಉಪಕರ
1	2	3	4	5	6	7	8

4. **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–01ಎ ಯ ತಿದ್ದುಪಡಿ.**– ಸದರಿ ನಿಯಮಗಳ ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–01ಎ ಯಲ್ಲಿ, –

(ಎ) ಸಂಖ್ಯೆ 7ರಲ್ಲಿ, ಖಂಡ (ಜಿ)ಯಲ್ಲಿ, "ಪರಿಭಾವಿತ ರಫ್ತುಗಳ ಸ್ವೀಕರಿಸುವವನು" ಎಂಬ ಪದಗಳಿಗಾಗಿ "ಪರಿಭಾವಿತ ರಫ್ತು ಪೂರೈಕೆಗಳನ್ನು ಸ್ವೀಕರಿಸುವವನು/ ಪರಿಭಾವಿತ ರಫ್ತು ಪೂರೈಕೆಗಳ ಸರಬುರಾಜುದಾರನು" ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಶೀರ್ಷಿಕೆ **ಘೋಷಣೆ [ನಿಯಮ 89(2)(ಎಫ್))]** ಮತ್ತು ಸಂಬಂಧಿತ ನಮೂದನೆಗಳ ನಂತರ, ಈ ಕೆಳಗಿನದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ಘೋಷಣೆ (ನಿಯಮ 89(2)(ಜಿ)

422

(ಪರಿಭಾವಿತ ರಫ್ತನ್ನು ಸ್ವೀಕರಿಸುವವರಿಗಾಗಿ)

ಸ್ವೀಕರಿಸುವವನು ಮರುಪಾವತಿಯನ್ನು ಕ್ಲೇಮು ಮಾಡಿದ್ದರೆ ☐
ಮರುಪಾವತಿಯನ್ನು ಕ್ಲೇಮು ಮಾಡಿರುವ ತೆರಿಗೆ ಅವಧಿಗಾಗಿ ವಿವರಪತ್ರ 5ಬಿಯಲ್ಲಿ ವರದಿ ಮಾಡಲಾಗಿರುವ ಅಂಥ ತೆರಿಗೆ ಬೆಲೆಪಟ್ಟಿಗಳಿಗಾಗಿ ಮಾತ್ರ ಮರುಪಾವತಿಯನ್ನು ಕೋರಲಾಗಿದೆ ಮತ್ತು ಮೊತ್ತವು ಸದರಿ ತೆರಿಗೆ ಅವಧಿಗಾಗಿ ಸಲ್ಲಿಸಿದ ಸಿಂಧುವಾದ ರಿಟರ್ನ್‌ನಲ್ಲಿ ಉಪಯೋಗಿಸಿದ ಹೂಡುವಳಿ ತೆರಿಗೆ ಜಮೆಯ ಮೊತ್ತವನ್ನು ಮೀರಿರುವುದಿಲ್ಲ ಎಂದು ಘೋಷಿಸುತ್ತೇನೆ. ಸದರಿ ಪೂರೈಕೆಗಳಿಗೆ ಸಂಬಂಧಿಸಿದಂತೆ ಪೂರೈಕೆದಾರನು ಮರುಪಾವತಿಯನ್ನು ಕ್ಲೇಮು ಮಾಡಿರುವುದಿಲ್ಲವೆಂದೂ ಸಹ ಘೋಷಿಸುತ್ತೇನೆ.

ಪೂರೈಕೆದಾರನು ಮರುಪಾವತಿಯನ್ನು ಕ್ಲೇಮು ಮಾಡಿದ್ದರೆ ☐
ಮರುಪಾವತಿಯನ್ನು ಕ್ಲೇಮು ಮಾಡಿರುವ ತೆರಿಗೆ ಅವಧಿಗಾಗಿ ವಿವರಪತ್ರ 5ಬಿಯಲ್ಲಿ ವರದಿ ಮಾಡಲಾಗಿರುವ ಅಂಥ ತೆರಿಗೆ ಬೆಲೆಪಟ್ಟಿಗಳಿಗಾಗಿ ಮಾತ್ರ ಮರುಪಾವತಿಯನ್ನು ಕೋರಲಾಗಿದೆ. ಸದರಿ ಪೂರೈಕೆಗಳಿಗೆ ಸಂಬಂಧಿಸಿದಂತೆ ಸ್ವೀಕರಿಸುವವನು ಮರುಪಾವತಿಯನ್ನು ಕ್ಲೇಮು ಮಾಡಿರುವುದಿಲ್ಲ ಮತ್ತು ಸದರಿ ಪೂರೈಕೆಗಳ ಮೇಲೆ ಯಾವುದೇ ಹೂಡುವಳಿ ತೆರಿಗೆ ಜಮೆಯನ್ನು ಉಪಯೋಗಿಸಿಕೊಂಡಿರುವುದಿಲ್ಲ ಎಂದೂ ಸಹ ಘೋಷಿಸುತ್ತೇನೆ.

ಸಹಿ:
ಹೆಸರು ಪದನಾಮ/ಸ್ಥಾನಮಾನ

ಮುಚ್ಚಳಿಕೆ

ಮರುಪಾವತಿ ಪಡೆದ ಮೊತ್ತಕ್ಕೆ ಸಂಬಂಧಿಸಿದಂತೆ, ಒಂದು ವೇಳೆ ಸಿಜಿಎಸ್‌ಟಿ/ಕೆಜಿಎಸ್‌ಟಿ ಅಧಿನಿಯಮದ ಪ್ರಕರಣ 42ರ ಉಪಪ್ರಕರಣ (2)ನ್ನು ಓದಿಕೊಂಡು ಪ್ರಕರಣ 16ರ ಉಪಪ್ರಕರಣ (2)ರ ಉಪಬಂಧ (ಸಿ)ಯ ಕೋರಿಕೆಗಳಿಗೆ ಅನುಗುಣವಾಗಿ ಪಾಲಿಸಲಾಗಿರುವುದಿಲ್ಲವೆಂದು ನಂತರ ಕಂಡುಬಂದಂಥ ಸಂದರ್ಭದಲ್ಲಿ, ಮಂಜೂರಾದ ಮರುಪಾವತಿ ಮೊತ್ತವನ್ನು ಬಡ್ಡಿ ಸಹಿತ ಸರ್ಕಾರಕ್ಕೆ ಹಿಂದಿರುಗಿಸಲು ಈ ಮೂಲಕ ನಾನು ಬದ್ಧನಾಗಿರುತ್ತೇನೆ.

ಸಹಿ:
ಹೆಸರು ಪದನಾಮ/ಸ್ಥಾನಮಾನ"

(ಸಿ) ಅನುಬಂಧ–1 ರಲ್ಲಿ:–

(i) "ವಿವರಪತ್ರ–1 (ನಿಯಮ 89(5))" ಶೀರ್ಷಿಕೆ ಮತ್ತು ಸಂಬಂಧಿಸಿದ ನಮೂದನೆಗಳ ನಂತರ ಈ ಕೆಳಗಿನ ವಿವರಪತ್ರವನ್ನು ಸೇರಿಸತಕ್ಕದ್ದು, ಅಂದರೆ:–

"ವಿವರಪತ್ರ–1ಎ [ನಿಯಮ 89(2)(ಹೆಚ್)]

ಮರುಪಾವತಿಯ ವಿಧ: ವಿಲೋಮ ತೆರಿಗೆ ಸಂರಚನೆಯ ಮೂಲಕ ಹೂಡುವಳಿ ತೆರಿಗೆಯ ಸಂಚಿತವಾಗಿದಲ್ಲಿ [ಪ್ರಕರಣ 54(3)ರ ಮೊದಲ ಪರಂತುಕದ ಖಂಡ (ii)]

ಕ್ರಮ ಸಂಖ್ಯೆ	ಪಡೆದ ಒಳಪೂರೈಕೆಗಳ ಬೆಲೆಪಟ್ಟಿಗಳ ವಿವರ			ಒಳಪೂರೈಕೆಗಳ ಮೇಲೆ ಪಾವತಿಸಿದ ತೆರಿಗೆ			ಹೊರಪೂರೈಕೆಗಳ ಮೇಲೆ ನೀಡಿದ ಬೆಲೆಪಟ್ಟಿಗಳ ವಿವರ			ಹೊರಪೂರೈಕೆಗಳ ಮೇಲೆ ಪಾವತಿಸಿದ ತೆರಿಗೆ		
	ನಂ.	ದಿನಾಂಕ	ತೆರಿಗೆದಾಯಕ ಮೌಲ್ಯ	ಏಕೀಕೃತ ತೆರಿಗೆ	ಕೇಂದ್ರ ತೆರಿಗೆ	ರಾಜ್ಯ/ ಕೇಂದ್ರಾಡಳಿತ ತೆರಿಗೆ	ನಂ.	ದಿನಾಂಕ	ತೆರಿಗೆದಾಯಕ ಮೌಲ್ಯ	ಏಕೀಕೃತ ತೆರಿಗೆ	ಕೇಂದ್ರ ತೆರಿಗೆ	ರಾಜ್ಯ/ ಕೇಂದ್ರಾಡಳಿತ ತೆರಿಗೆ
1	2	3	4	5	6	7	8	9	10	11	12	13

(ii) "ವಿವರಪತ್ರ–5(ಎ) [ನಿಯಮ 89(4)]" ಶೀರ್ಷಿಕೆ ಮತ್ತು ಅದಕ್ಕೆ ಸಂಬಂಧಿಸಿದ ನಮೂದನೆಗಳ ನಂತರ ಈ ಕೆಳಗಿನ ವಿವರಪತ್ರವನ್ನು ಸೇರಿಸತಕ್ಕದ್ದು, ಅಂದರೆ:–

"ವಿವರಪತ್ರ–5ಬಿ [ನಿಯಮ 89(2)(ಜಿ)]

423

ಮರುಪಾವತಿಯ ವಿಧ: ಪರಿಭಾವಿತ ರಫ್ತುಗಳ ಮೇಲೆ

(ಮೊತ್ತ ರೂ.ಗಳಲ್ಲಿ)

ಕ್ರಮ ಸಂಖ್ಯೆ	ಒಂದು ವೇಳೆ ಪೂರೈಕೆದಾರನಿಂದ ಮರುಪಾವತಿ ಕ್ಲೇಮು ಮಾಡಿದಲ್ಲಿ ಹೊರಪೂರೈಕೆಗಳ ಬೆಲೆಪಟ್ಟಿಗಳ ವಿವರ/ ಒಂದು ವೇಳೆ ಸ್ವೀಕೃತಿದಾರನಿಂದ ಮರುಪಾವತಿ ಕ್ಲೇಮು ಮಾಡಿದಲ್ಲಿ ಒಳಪೂರೈಕೆಗಳ ಬೆಲೆಪಟ್ಟಿಗಳ ವಿವರ/			ಪಾವತಿಸಿದ ತೆರಿಗೆ			
	ನಂ.	ದಿನಾಂಕ	ತೆರಿಗೆದಾಯಕ ಮೌಲ್ಯ	ಏಕೀಕೃತ ತೆರಿಗೆ	ಕೇಂದ್ರ ತೆರಿಗೆ	ರಾಜ್ಯ/ ಕೇಂದ್ರಾಡಳಿತ ತೆರಿಗೆ	ಉಪಕರ
1	2	3	4	5	6	7	8

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

424

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಎಲ್/2017)
ನಂ. ಆಇ 47 ಸಿಎಸ್ಎಲ್ 2017, ಬೆಂಗಳೂರು, ದಿನಾಂಕ 25.01.2018

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ 2017ರ (2017ರ ಕರ್ನಾಟಕ ಅಧಿನಿಯಮ 27), ಪ್ರಕರಣ 164ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017, ಇವುಗಳಿಗೆ ಮುಂದುವರಿದ ತಿದ್ದುಪಡಿ ತರಲು ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಅಂದರೆ:–

ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ:– (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ (ಎರಡನೇ ತಿದ್ದುಪಡಿ) ನಿಯಮಗಳು, 2018, ಎಂದು ಕರೆಯಬಹುದು.

(2) ಈ ನಿಯಮಗಳಲ್ಲಿ ಉಪಬಂಧಿಸಿದುದನ್ನುಳಿದು, ಈ ನಿಯಮಗಳು 2017ರ ಡಿಸೆಂಬರ್ 29ನೇ ದಿನದಿಂದ ಜಾರಿಗೆ ಬಂದಿವೆ ಎಂದು ಪರಿಭಾವಿಸತಕ್ಕದ್ದು.

2. ನಿಯಮ 17ರ ತಿದ್ದುಪಡಿ:– ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ ನಿಯಮಗಳು, 2017, (ಇನ್ನು ಮುಂದೆ ಇವುಗಳನ್ನು **"**ಸದರಿ ನಿಯಮಗಳು**"** ಎಂದು ಉಲ್ಲೇಖಿಸಲಾಗಿದೆ)ರಲ್ಲಿ, ನಿಯಮ 17ರಲ್ಲಿ, ಉಪನಿಯಮ (1)ರ ನಂತರ, ಈ ಕೆಳಗಿನದನ್ನು ಸೇರಿಸತಕ್ಕದ್ದು, ಅಂದರೆ:–

"(1ಎ) ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ ಅಡಿಯಲ್ಲಿ ಮಂಜೂರಾದ ವಿಶಿಷ್ಟ ಗುರುತಿನ ಸಂಖ್ಯೆಯು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ 2017ರ (2017ರ ಕರ್ನಾಟಕ ಅಧಿನಿಯಮ 27)ರಡಿಯಲ್ಲಿ ಮಂಜೂರಾಗಿದ್ದೆಂದು ಪರಿಭಾವಿಸತಕ್ಕದ್ದು.**"**

3. ನಿಯಮ 19ರ ತಿದ್ದುಪಡಿ:– ಸದರಿ ನಿಯಮಗಳ ನಿಯಮ 19ರಲ್ಲಿ, ಉಪ ನಿಯಮ(1)ರ ನಂತರ ಈ ಕೆಳಗಿನದನ್ನು ಸೇರಿಸತಕ್ಕದ್ದು, ಅಂದರೆ :–

"(1ಎ) ಉಪನಿಯಮ (1)ರಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಆಯುಕ್ತರು ಆದೇಶದಲ್ಲಿ ನಿರ್ದಿಷ್ಟ ಪಡಿಸಿದ ಅಂಥ ನಿಬಂಧನೆಗಳಿಗೆ ಒಳಪಟ್ಟು, ಲಿಖಿತ ರೂಪದಲ್ಲಿ ದಾಖಲಿಸಲಾದ ಕಾರಣಗಳಿಗಾಗಿ ಆಯುಕ್ತರು ಮಾಡಿದ ಅಂಥ ಆದೇಶವನ್ನು ಹೊರತುಪಡಿಸಿ, ನೋಂದಣಿಗಾಗಿ ಅರ್ಜಿಯ ಯಾವುದೇ ವಿವರವು, ಸಾಮಾನ್ಯ ಪೋರ್ಟಲ್‌ನಲ್ಲಿ ನಮೂನೆ ಜಿಎಸ್‌ಟಿ ಆರ್‌ಇಜಿ–14ರಲ್ಲಿನ ಅರ್ಜಿಯನ್ನು ಸಲ್ಲಿಸಿದ ದಿನಾಂಕಕ್ಕಿಂತ ಮುಂಚಿತವಾಗಿ ಜಾರಿಗೆ ಬರುವಂತೆ ತಿದ್ದುಪಡಿಯಾಗತಕ್ಕದ್ದಲ್ಲ.**"**

4. ನಿಯಮ 89ರ ತಿದ್ದುಪಡಿ:– ಸದರಿ ನಿಯಮಗಳ ನಿಯಮ 89ರಲ್ಲಿ, ಉಪ ನಿಯಮ(4)ಕ್ಕಾಗಿ ಅಕ್ಟೋಬರ್ 23, 2017ರಿಂದ ಜಾರಿಗೆ ಬರುವಂತೆ, ಈ ಕೆಳಗಿನದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ :–

"(4) ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕೇಂದ್ರ ಅಧಿನಿಯಮ 13)ರ ಪ್ರಕರಣ 16ರ ಉಪಪ್ರಕರಣ (3)ರ ಉಪಬಂಧಗಳಿಗೆ ಅನುಸಾರವಾಗಿ, ಬಾಂಡ್ ಅಥವಾ ವಾಗ್ದಾನ ಪತ್ರದ ಅಡಿಯಲ್ಲಿ

425

ತೆರಿಗೆ ಸಂದಾಯ ಮಾಡದೇ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಶೂನ್ಯ–ದರ ಪೂರೈಕೆಯ ಸಂದರ್ಭದಲ್ಲಿ, ಹೂಡುವಳಿ ತೆರಿಗೆ ಜಮೆಯ ಮರುಪಾವತಿಯನ್ನು ಕೆಳಕಂಡ ಸೂತ್ರದ ಪ್ರಕಾರ ಮಂಜೂರು ಮಾಡತಕ್ಕದ್ದು–

ಮರುಪಾವತಿ ಮೊತ್ತ= (ಸರಕುಗಳ ಶೂನ್ಯ–ದರದ ಪೂರೈಕೆ ವಹಿವಾಟು + ಸೇವೆಗಳ ಶೂನ್ಯ–ದರದ ಪೂರೈಕೆ ವಹಿವಾಟು) x ನಿವ್ವಳ ಐಟಿಸಿ ÷ ಹೊಂದಿಸಿದ ಒಟ್ಟು ವಹಿವಾಟು

ಇದರಲ್ಲಿ,–

(ಎ) "ಮರುಪಾವತಿ ಮೊತ್ತ" ಎಂದರೆ, ಅಂಗೀಕರಿಸಬಹುದಾದಂತಹ ಗರಿಷ್ಟ ಮರುಪಾವತಿ:

(ಬಿ) "ನಿವ್ವಳ ಐಟಿಸಿ" ಎಂದರೆ, ಉಪನಿಯಮಗಳು (4ಎ) ಅಥವಾ (4ಬಿ) ಅಥವಾ ಅವೆರಡರ ಅಡಿಯಲ್ಲಿ ಮರುಪಾವತಿಯನ್ನು ಕ್ಲೇಮು ಮಾಡಿದ ಹೂಡುವಳಿ ತೆರಿಗೆ ಜಮೆಯನ್ನು ಹೊರತುಪಡಿಸಿ, ಸಂಬಂಧಿಸಿದ ಅವಧಿಯಲ್ಲಿನ ಹೂಡುವಳಿಗಳು ಮತ್ತು ಹೂಡುವಳಿ ಸೇವೆಗಳ ಮೇಲೆ ಉಪಯೋಗಿಸಿದ ಹೂಡುವಳಿ ತೆರಿಗೆ ಜಮೆ;

(ಸಿ) "ಸರಕುಗಳ ಶೂನ್ಯ–ದರದ ಪೂರೈಕೆ ವಹಿವಾಟು" ಎಂದರೆ ಉಪನಿಯಮಗಳು (4ಎ) ಅಥವಾ (4ಬಿ) ಅಥವಾ ಅವೆರಡರ ಅಡಿಯಲ್ಲಿ ಮರುಪಾವತಿಯನ್ನು ಕ್ಲೇಮು ಮಾಡಿದ ಪೂರೈಕೆಯ ವಹಿವಾಟನ್ನು ಹೊರತುಪಡಿಸಿ, ಸಂಬಂಧಿಸಿದ ಅವಧಿಯಲ್ಲಿ, ಬಾಂಡ್ ಅಥವಾ ವಾಗ್ದಾನ ಪತ್ರದ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡದೇ ಮಾಡಿದ ಸರಕುಗಳ ಶೂನ್ಯ–ದರದ ಪೂರೈಕೆ ಮೌಲ್ಯ;

(ಡಿ) "ಸೇವೆಗಳ ಶೂನ್ಯ–ದರದ ಪೂರೈಕೆ ವಹಿವಾಟು" ಎಂದರೆ ಕೆಳಕಂಡ ವಿಧಾನದಲ್ಲಿ ಲೆಕ್ಕ ಹಾಕಿದ ಬಾಂಡ್ ಅಥವಾ ವಾಗ್ದಾನ ಪತ್ರದ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡದೇ ಮಾಡಿದ ಸೇವೆಗಳ ಶೂನ್ಯ–ದರದ ಪೂರೈಕೆ, ಎಂದರೆ:–

ಸೇವೆಗಳ ಶೂನ್ಯ–ದರದ ಪೂರೈಕೆಯು, ಸಂಬಂಧಿಸಿದ ಅವಧಿಯಲ್ಲಿ ಪೂರ್ಣಗೊಳಿಸದ ಸೇವೆಗಳಿಗೆ ಸಂಬಂಧಿಸಿದಂತೆ ಸೇವೆಗಳ ಶೂನ್ಯ–ದರದ ಪೂರೈಕೆಗಳಿಗಾಗಿ ಸ್ವೀಕರಿಸಿರುವ ಮುಂಗಡವನ್ನು ಕಳೆದು, ಸೇವೆಗಳ ಶೂನ್ಯ–ದರದ ಪೂರೈಕೆಗಳಿಗಾಗಿ ಮತ್ತು ಸಂಬಂಧಿಸಿದ ಅವಧಿಗಿಂತ ಮೊದಲಿನ ಯಾವುದೇ ಅವಧಿಯಲ್ಲಿ ಮುಂಗಡವಾಗಿ ಸಂದಾಯವನ್ನು ಸ್ವೀಕರಿಸಲಾಗಿರುವ ಮತ್ತು ಪೂರೈಕೆ ಪೂರ್ಣವಾಗಿರುವ ಸೇವೆಗಳ ಶೂನ್ಯ–ದರದ ಪೂರೈಕೆಗಳಿಗಾಗಿ, ಸಂಬಂಧಿಸಿದ ಅವಧಿಯಲ್ಲಿ ಸ್ವೀಕರಿಸಿರುವ ಒಟ್ಟು ಸಂದಾಯ

(ಇ) "ಹೊಂದಿಸಿದ ಒಟ್ಟು ವಹಿವಾಟು" ಎಂದರೆ, ಸಂಬಂಧಿಸಿದ ಅವಧಿಯಲ್ಲಿನ, ಈ ಕೆಳಗಿನದ್ದನ್ನು ಹೊರತುಪಡಿಸಿದ,–

(ಎ) ಶೂನ್ಯ ದರದ ಪೂರೈಕೆಗಳನ್ನು ಹೊರತುಪಡಿಸಿದ ವಿನಾಯಿತಿ ಪೂರೈಕೆಗಳ ಮೌಲ್ಯ, ಮತ್ತು

(ಬಿ) ಉಪನಿಯಮಗಳು (4ಎ) ಅಥವಾ (4ಬಿ) ಅಥವಾ ಅವೆರಡರ ಅಡಿಯಲ್ಲಿ ಮರುಪಾವತಿಯ ಕ್ಲೇಮು ಮಾಡಿದ್ದಕ್ಕೆ ಸಂಬಂಧಿಸಿದ ಪೂರೈಕೆ ವಹಿವಾಟು, ಯಾವುದಾದರೂ ಇದ್ದಲ್ಲಿ ಪ್ರಕರಣ 2ರ ಖಂಡ (112)ರಲ್ಲಿ ಪರಿಭಾಷಿಸಿದಂತೆ ಒಂದು ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿನ ವಹಿವಾಟು.

(ಎಫ್) "ಸಂಬಂಧಿಸಿದ ಅವಧಿ" ಎಂದರೆ ಯಾವ ಅವಧಿಗೆ ಕ್ಲೇಮನ್ನು ಸಲ್ಲಿಸಲಾಗಿರುವುದೋ ಆ ಅವಧಿ.

(4ಎ) ಅಧಿಸೂಚನೆ (17/2017) ಸಂಖ್ಯೆ ಆಇ 47 ಸಿಎಸ್ಎಲ್ 2017 ದಿನಾಂಕ 19–10–2017 ರ ಉಪಯೋಗ ಪಡೆದು ಪೂರೈಕೆದಾರನು ಮಾಡಿದ ಪೂರೈಕೆಗಳನ್ನು ಸ್ವೀಕರಿಸಿದ ಸಂದರ್ಭದಲ್ಲಿ, ಸರಕು ಅಥವಾ ಸೇವೆಗಳ ಅಥವಾ ಅವೆರಡರ ಶೂನ್ಯ–ದರದ ಪೂರೈಕೆಯನ್ನು ಮಾಡುವ ಸಲುವಾಗಿ ಉಪಯೋಗಿಸಿದ ಇತರೇ ಹೂಡುವಳಿಗಳು ಅಥವಾ ಹೂಡುವಳಿ ಸೇವೆಗಳಿಗೆ ಸಂಬಂಧಿಸಿದಂತೆ ಉಪಯೋಗಿಸಿದ ಹೂಡುವಳಿ ತೆರಿಗೆ ಜಮೆಯ ಮರುಪಾವತಿಯನ್ನು ಮಂಜೂರು ಮಾಡತಕ್ಕದ್ದು.

(4ಬಿ) ಅಧಿಸೂಚನೆ (40/2017) ಸಂಖ್ಯೆ ಆಇ 48 ಸಿಎಸ್ಎಲ್ 2017 ದಿನಾಂಕ 23–10–2017 ಅಥವಾ ಅಧಿಸೂಚನೆ ಸಂಖ್ಯೆ 41/2017– ಏಕೀಕೃತ ತೆರಿಗೆ (ದರ) ದಿನಾಂಕ 23–10–2017 ಅಥವಾ ಅವೆರಡರ ಉಪಯೋಗ ಪಡೆದು ಪೂರೈಕೆದಾರನು ಮಾಡಿದ ಪೂರೈಕೆಗಳನ್ನು ಸ್ವೀಕರಿಸಿದ ಸಂದರ್ಭದಲ್ಲಿ, ಸದರಿ ಅಧಿಸೂಚನೆಗಳ ಅಡಿಯಲ್ಲಿ ಸರಕುಗಳ ರಫ್ತಿಗಾಗಿ ಸ್ವೀಕರಿಸಿದ ಹೂಡುವಳಿಗಳಿಗೆ ಸಂಬಂಧಿಸಿದಂತೆ ಉಪಯೋಗಿಸಿದ ಹೂಡುವಳಿ ತೆರಿಗೆಯ

426

ಜಮೆಯ ಮರುಪಾವತಿಯನ್ನು ಮತ್ತು ಸರಕುಗಳ ಅಂಥ ರಫ್ತು ಮಾಡುವುದಕ್ಕಾಗಿ ಉಪಯೋಗಿಸಿದಷ್ಟರಮಟ್ಟಿಗೆ ಇತರೇ ಹೂಡುವಳಿಗಳು ಅಥವಾ ಹೂಡುವಳಿ ಸೇವೆಗಳಿಗೆ ಸಂಬಂಧಿಸಿದಂತೆ ಉಪಯೋಗಿಸಿದ ಹೂಡುವಳಿ ತೆರಿಗೆ ಜಮೆಯ ಮರುಪಾವತಿಯನ್ನು ಮಂಜೂರು ಮಾಡತಕ್ಕದ್ದು.

5. **ನಿಯಮ 95ರ ತಿದ್ದುಪಡಿ:**– ಸದರಿ ನಿಯಮಗಳ ನಿಯಮ 95ರಲ್ಲಿ,–

(1) ಉಪನಿಯಮ (1)ಕ್ಕಾಗಿ, ಈ ಕೆಳಗಿನದ್ದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ :–

"(1) ಪ್ರಕರಣ 55ರ ಅಡಿಯಲ್ಲಿ ನೀಡಿದ ಅಧಿಸೂಚನೆಯ ಪ್ರಕಾರ ತನ್ನ ಒಳಮುಖ ಪೂರೈಕೆಗಳ ಮೇಲೆ ಆತನಿಂದ ಸಂದಾಯ ಮಾಡಿದ ತೆರಿಗೆಯ ಮರುಪಾವತಿಯ ಕ್ಲೇಮಿಗೆ ಅರ್ಹನಿರುವ ಯಾವೊಬ್ಬ ವ್ಯಕ್ತಿಯು, ನಮೂನೆ ಜಿಎಸ್‌ಟಿಆರ್ 11ರಲ್ಲಿನ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಳಮುಖ ಪೂರೈಕೆಗಳ ವಿವರಪತ್ರದ ಜೊತೆಯಲ್ಲಿ, ಮರುಪಾವತಿಗಾಗಿ ಅರ್ಜಿಯನ್ನು, ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–10ರಲ್ಲಿ, ಪ್ರತಿ ತ್ರೈಮಾಸಿಕಕ್ಕೆ ಒಂದು ಬಾರಿ, ಸಾಮಾನ್ಯ ಪೋರ್ಟಲ್‌ನ ಮುಖಾಂತರ ವಿದ್ಯುನ್ಮಾನ ರೀತಿಯಲ್ಲಿ ಅಥವಾ ಅನ್ಯ ರೀತಿಯಲ್ಲಿ, ನೇರವಾಗಿಯಾಗಲೀ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲೀ, ಸಲ್ಲಿಸತಕ್ಕದ್ದು.";

(2) ಉಪನಿಯಮ (3)ರಲ್ಲಿ, ಖಂಡ (ಎ)ಯಲ್ಲಿ "ಮತ್ತು ಒಂದು ತೆರಿಗೆ ಬೆಲೆ ಪಟ್ಟಿ ಅಡಿಯಲ್ಲಿ ವ್ಯಾಪ್ತವಾದ ಪೂರೈಕೆಯ ಬೆಲೆಯು, ತೆರಿಗೆ ಸಂದಾಯ ಮಾಡಿರುವುದು ಏನಾದರು ಇದ್ದರೆ, ಅದನ್ನು ಬಿಟ್ಟು ಐದು ಸಾವಿರ ರೂಪಾಯಿಗಳನ್ನು ಮೀರಿದ್ದಾಗ" ಪದಗಳನ್ನು ಬಿಟ್ಟುಬಿಡತಕ್ಕದ್ದು.

6. **ನಿಯಮ 96ರ ತಿದ್ದುಪಡಿ:**– ಸದರಿ ನಿಯಮಗಳ ನಿಯಮ 96ರಲ್ಲಿ,–

(1) ಶೀರ್ಷಿಕೆಯಲ್ಲಿ, "ಸರಕುಗಳ ಮೇಲೆ" ಪದಗಳಿಗಾಗಿ ನಂತರ "ಸರಕುಗಳ ಅಥವಾ ಸೇವೆಗಳ ಮೇಲೆ" ಪದಗಳನ್ನು ಅಕ್ಟೋಬರ್ 23, 2017ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು,

(2) ಉಪನಿಯಮ(8)ರ ನಂತರ, ಈ ಕೆಳಗಿನದ್ದನ್ನು ಸೇರಿಸತಕ್ಕದ್ದು, ಅಂದರೆ:–

"(9) ಸರಕು ಅಥವಾ ಸೇವೆಗಳ ರಫ್ತಿನ ಮೇಲೆ ಭರಿಸಿದ ಏಕೀಕೃತ ತೆರಿಗೆಯ ಮರುಪಾವತಿಯನ್ನು ಕ್ಲೇಮು ಮಾಡುವ ವ್ಯಕ್ತಿಗಳು, ಪೂರೈಕೆದಾರನಿಂದ ಸರಬುರಾಜುದಾರನಿಂದ ಅಧಿಸೂಚನೆ (17/2017) ಸಂಖ್ಯೆ ಆಇ 47 ಸಿಎಸ್‌ಎಲ್ 2017 ದಿನಾಂಕ 19–10–2017 ಅಥವಾ ಅಧಿಸೂಚನೆ (40/2017) ಸಂಖ್ಯೆ ಆಇ 48 ಸಿಎಸ್‌ಎಲ್ 2017 ದಿನಾಂಕ 23–10–2017 ಅಥವಾ ಅಧಿಸೂಚನೆ ಸಂಖ್ಯೆ 41/2017–ಏಕೀಕೃತ ತೆರಿಗೆ (ದರ) ದಿನಾಂಕ 23–10–2017, ರಡಿಯಲ್ಲಿ ಪೂರೈಕೆದಾರನು ಮೇಲಿನ ಅಧಿಸೂಚನೆಗಳ ಪ್ರಯೋಜನವನ್ನು ಉಪಯೋಗಿಸಿದ ಪೂರೈಕೆಗಳನ್ನು ಸ್ವೀಕರಿಸಿರಬಾರದು."

7. ನಮೂನೆ ಜಿಎಸ್‌ಟಿ ಆರ್‌ಇಜಿ–10ರ ಪ್ರತಿಯೋಜನೆ.– ಸದರಿ ನಿಯಮಗಳ **ನಮೂನೆ ಜಿಎಸ್‌ಟಿ–ಆರ್‌ಇಜಿ–10**ಗಾಗಿ ಈ ಕೆಳಗಿನದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

427

"ನಮೂನೆ – ಜಿಎಸ್‌ಟಿ ಆರ್‌ಇಜಿ–10

[ನಿಯಮ 14(1) ನೋಡಿ]

ಭಾರತದ ಹೊರಗಡೆಯಿರುವ ಒಂದು ಸ್ಥಳದಿಂದ, ನೋಂದಾಯಿತ ವ್ಯಕ್ತಿಯನ್ನು ಹೊರತುಪಡಿಸಿದ ಭಾರತದಲ್ಲಿನ ವ್ಯಕ್ತಿಗೆ, ಆನ್‌ಲೈನ್ ಮಾಹಿತಿ ಮತ್ತು ದತ್ತಾಂಶ ಸಂಗ್ರಹದ ಪ್ರವೇಶಾವಕಾಶ ಅಥವಾ ಮರುಪ್ರಾಪ್ತಿ ಸೇವೆಗಳ ಪೂರೈಕೆಯನ್ನು ಮಾಡುತ್ತಿರುವ ಒಬ್ಬ ವ್ಯಕ್ತಿಯ

ನೋಂದಣಿಗಾಗಿ ಅರ್ಜಿ.

ಭಾಗ – ಎ

(i)	ವ್ಯಕ್ತಿಯ ಕಾನೂನುಸಮ್ಮತ ಹೆಸರು	
(ii)	ಆ ದೇಶದ ಸರ್ಕಾರದಿಂದ ಎಂಟಿಟಿಯನ್ನು ಯಾವುದರ ಆಧಾರದಲ್ಲಿ ಗುರುತಿಸಲಾಗಿದೆಯೋ ಆ ತೆರಿಗೆ ಗುರುತಿನ ಸಂಖ್ಯೆ ಅಥವಾ ವಿಶಿಷ್ಟ ಸಂಖ್ಯೆ	
(iii)	ಪ್ರಾಧಿಕೃತ ಸಹಿದಾರನ ಹೆಸರು	
(iv)	ಪ್ರಾಧಿಕೃತ ಸಹಿದಾರನ ಮಿಂಚಂಚೆಯ ವಿಳಾಸ	
(v)	ಭಾರತದಲ್ಲಿ ನೇಮಕಗೊಂಡ ಪ್ರತಿನಿಧಿಯ ಹೆಸರು, ಯಾರಾದರು ಇದ್ದಲ್ಲಿ	
	(ಅ) ಭಾರತದಲ್ಲಿ ನೇಮಕಗೊಂಡ ಪ್ರತಿನಿಧಿಯ ಪ್ಯಾನ್	
	(ಆ) ಭಾರತದಲ್ಲಿ ನೇಮಕಗೊಂಡ ಪ್ರತಿನಿಧಿಯ ಮಿಂಚಂಚೆಯ ವಿಳಾಸ	
	(ಇ) ಭಾರತದಲ್ಲಿ ನೇಮಕಗೊಂಡ ಪ್ರತಿನಿಧಿಯ ಮೋಬೈಲ್ ಸಂಖ್ಯೆ (+91)	
ಟಿಪ್ಪಣಿ:–ಮೇಲ್ಕಂಡಂತೆ ಸಲ್ಲಿಸಲಾದ ಸಂಬಂಧಪಟ್ಟ ಮಾಹಿತಿಯು, ಭಾಗ–ಬಿ ಯನ್ನು ತುಂಬುವುದನ್ನು ಪ್ರಾರಂಭಿಸುವುದಕ್ಕಿಂತ ಮೊದಲು, ಕಾರ್ಯಸಾಧ್ಯವಾಗುವಷ್ಟರ ಮಟ್ಟಿಗೆ ಆನ್–ಲೈನ್ ಪರಿಶೀಲನೆಗೆ ಒಳಪಟ್ಟಿರುತ್ತದೆ.		

ಭಾಗ– ಬಿ

	ಪ್ರಾಧಿಕೃತ ಸಹಿದಾರನ ವಿವರಗಳು		
	ಮೊದಲ ಹೆಸರು	ಮಧ್ಯದ ಹೆಸರು	ಕೊನೆಯ ಹೆಸರು
	ಭಾವಚಿತ್ರ		
	ಲಿಂಗ		ಪುರುಷ/ಮಹಿಳೆ/ಇತರೆ
	ಪದನಾಮ		
	ಹುಟ್ಟಿದ ದಿನಾಂಕ		ದಿದಿ/ತಿಂತಿಂ/ವವವವ
	ತಂದೆಯ ಹೆಸರು		
	ರಾಷ್ಟ್ರೀಯತೆ		
	ಆಧಾರ್, ಯಾವುದಾದರು ಇದ್ದಲ್ಲಿ		
	ಪ್ರಾಧಿಕೃತ ರುಜುದಾರರ ವಿಳಾಸ		ವಿಳಾಸ– ಸಾಲು 1
			ವಿಳಾಸ– ಸಾಲು 2
			ವಿಳಾಸ– ಸಾಲು 3

428

<table>
<tr><td>2</td><td colspan="3">ಭಾರತದಲ್ಲಿನ ಆನ್‌ಲೈನ್ ಸೇವೆ ಆರಂಭಗೊಂಡ ದಿನಾಂಕ</td><td colspan="3">ದಿದಿ/ತಿಂತಿಂ/ವವವವ</td></tr>
<tr><td>3</td><td colspan="6">ತೆರಿಗೆದಾಯಕ ಸೇವೆಗಳನ್ನು ಯಾವುದರ ಮೂಲಕ ಒದಗಿಸಲಾಗುತ್ತದೆಯೋ, ಆ ಜಾಲತಾಣದ ಯೂನಿಫಾರ್ಮ್ ರಿಸೋರ್ಸ್ ಲೊಕೇಟರ್ಸ್(ಯುಆರ್‌ಎಲ್)
1.
2.
3.</td></tr>
<tr><td>4</td><td>ಕ್ಷೇತ್ರವ್ಯಾಪ್ತಿ</td><td colspan="2">ಕೇಂದ್ರ</td><td colspan="3">ಬೆಂಗಳೂರು ಪಶ್ಚಿಮ, ಸಿಜಿಎಸ್‌ಟಿ ಆಯುಕ್ತಾಲಯ</td></tr>
<tr><td rowspan="3">5</td><td colspan="6">ಭಾರತದಲ್ಲಿ ನೇಮಕಗೊಂಡ ಪ್ರತಿನಿಧಿಯ ಬ್ಯಾಂಕ್ ಖಾತೆಯ ವಿವರಗಳು (ನೇಮಕಗೊಂಡಿದ್ದಲ್ಲಿ)</td></tr>
<tr><td>ಖಾತೆಯ ಸಂಖ್ಯೆ:</td><td colspan="2"></td><td>ಖಾತೆಯ ವಿಧ</td><td colspan="2"></td></tr>
<tr><td>ಬ್ಯಾಂಕ್ ಹೆಸರು</td><td></td><td>ಶಾಖೆಯ ವಿಳಾಸ</td><td></td><td>ಐಎಫ್‌ಎಸ್‌ಸಿ</td><td></td></tr>
<tr><td>6</td><td colspan="6">ಅಪ್‌ಲೋಡ್ ಮಾಡಲಾದ ದಸ್ತಾವೇಜುಗಳು
ನಮೂನೆಯಲ್ಲಿನ ಕ್ಷೇತ್ರಗಳ ಮೌಲ್ಯಗಳ ಪ್ರಕಾರ ಅಪ್‌ಲೋಡ್ ಮಾಡುವುದು ಅಗತ್ಯವಿರುವ ದಸ್ತಾವೇಜುಗಳ ಕಸ್ಟಮೈಸ್ ಮಾಡಿದ ಪಟ್ಟಿ (ಸೂಚನೆಗಳನ್ನು ನೋಡಿ)</td></tr>
<tr><td>7</td><td colspan="6">ಘೋಷಣೆ:
ಮೇಲೆ ನೀಡಲಾದ ಮಾಹಿತಿಯು ನನ್ನ ತಿಳುವಳಿಕೆಗೆ ಮತ್ತು ನಂಬಿಕೆಯ ಪ್ರಕಾರ ಸತ್ಯವಾಗಿರುತ್ತದೆ ಮತ್ತು ಸರಿಯಾಗಿರುತ್ತದೆ ಹಾಗೂ ಯಾವುದೇ ಮಾಹಿತಿಯನ್ನು ಇದರಿಂದ ಮರೆಮಾಚಿರುವುದಿಲ್ಲ ಎಂದು ನಾನು, ಈ ಮೂಲಕ ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.
_____, ಆದ ನಾನು ಈ ಮೂಲಕ ಘೋಷಿಸುವುದೇನೆಂದರೆ ನೋಂದಣಿದಾರನ ಪರವಾಗಿ ಸಹಿಮಾಡಲು ನಾನು ಪ್ರಾಧಿಕೃತನಾಗಿದ್ದೇನೆ, ತೆರಿಗೆದಾಯಕ ಕ್ಷೇತ್ರದಲ್ಲಿ ನೆಲೆಗೊಂಡಿರುವ ಕರದಾತನಲ್ಲದ ಆನ್‌ಲೈನ್ ಸ್ವೀಕರಿಸುವವನಿಂದ ಬಾಧ್ಯವಿರುವ ತೆರಿಗೆಯನ್ನು ವಿಧಿಸುತ್ತೇನೆ ಮತ್ತು ಸಂಗ್ರಹಿಸುತ್ತೇನೆ ಹಾಗೂ ಅದನ್ನು ಭಾರತ ಸರ್ಕಾರಕ್ಕೆ ಠೇವಣಿ ಮಾಡುತ್ತೇನೆ.
ಸಹಿ
ಸ್ಥಳ :
ಪ್ರಾಧಿಕೃತ ಸಹಿದಾರನ ಹೆಸರು
ದಿನಾಂಕ :
ಪದನಾಮ</td></tr>
</table>

ಟಿಪ್ಪಣಿ: ಅರ್ಜಿದಾರನು ಒಂದು ಘೋಷಣೆಯನ್ನು (ಈ ಕೆಳ ನಮೂದಿಸಿದ ನಮೂನೆಯ ಪ್ರಕಾರ) ಸ್ಕ್ಯಾನ್ ಮಾಡಲಾದ ಪಾಸ್‌ಪೋರ್ಟ್ ಹಾಗೂ ಭಾವಚಿತ್ರದೊಂದಿಗೆ ಅಪ್‌ಲೋಡ್ ಮಾಡುವುದು ಅಗತ್ಯವಿರುತ್ತದೆ.

ಪುರಾವೆಗಳಾಗಿ ಅಪ್‌ಲೋಡ್ ಮಾಡಬೇಕಾದ ದಸ್ತಾವೇಜುಗಳ ವಿವರ ಈ ಕೆಳಕಂಡಂತೆ ಇವೆ.

1	ಭಾರತದಲ್ಲಿ ನೇಮಕಗೊಂಡ ಪ್ರತಿನಿಧಿಯ ವ್ಯವಹಾರದ ಪ್ರಧಾನ ಸ್ಥಳದ ಪುರಾವೆ, ಯಾರಾದರೂ ಇದ್ದಲ್ಲಿ: (ಎ) ಸ್ವಂತ ಸ್ಥಳವಾದಲ್ಲಿ – ಸ್ಥಳಗಳ ಮಾಲೀಕತ್ವಕ್ಕೆ ಪೂರಕವಾಗಿರುವ ಯಾವುದೇ ದಸ್ತಾವೇಜುಗಳು, ಅಂದರೆ ಇತ್ತೀಚಿನ ಸ್ವತ್ತಿನ ತೆರಿಗೆ ರಸೀದಿ ಅಥವಾ ಮುನ್ಸಿಪಲ್ ಖಾತೆಯ ಪ್ರತಿ ಅಥವಾ ಇತ್ತೀಚಿನ ವಿದ್ಯುಚ್ಛಕ್ತಿ ಬಿಲ್ (ಬಿ) ಬಾಡಿಗೆ ಅಥವಾ ಭೋಗ್ಯ ಪಡೆದ ಸ್ಥಳವಾದಲ್ಲಿ – ಭೋಗ್ಯದಾರರ ಸ್ಥಳಗಳ ಮಾಲೀಕತ್ವಕ್ಕೆ ಪೂರಕವಾಗಿರುವ ಯಾವುದೇ ದಸ್ತಾವೇಜುಗಳೊಂದಿಗೆ ಅಂದರೆ ಮುನ್ಸಿಪಲ್ ಖಾತೆಯ ಪ್ರತಿ ಅಥವಾ ಇತ್ತೀಚಿನ ವಿದ್ಯುಚ್ಛಕ್ತಿ ಬಿಲ್ ಮುಂತಾದವುಗಳೊಂದಿಗೆ, ಸಿಂಧುವಾದ ಬಾಡಿಗೆ / ಭೋಗ್ಯದ ಕರಾರುಪತ್ರ (ಸಿ) ಮೇಲಿನ (ಎ) ಮತ್ತು (ಬಿ)ಯಲ್ಲಿ ಬಾರದ ಸ್ಥಳಗಳಿಗಾಗಿ– ಸಮ್ಮತಿದಾರರ ಸ್ಥಳಗಳ ಮಾಲೀಕತ್ವಕ್ಕೆ ಪೂರಕವಾಗಿರುವ ಯಾವುದೇ ದಸ್ತಾವೇಜುಗಳೊಂದಿಗೆ ಅಂದರೆಇತ್ತೀಚಿನ ಸ್ವತ್ತಿನ ತೆರಿಗೆ ರಸೀದಿ ಅಥವಾ ಮುನ್ಸಿಪಲ್ ಖಾತೆಯ ಪ್ರತಿ ಅಥವಾ ಇತ್ತೀಚಿನ ವಿದ್ಯುಚ್ಛಕ್ತಿ ಬಿಲ್ ಮುಂತಾದವುಗಳೊಂದಿಗೆ, ನೀಡಲ್ಪಟ್ಟ ಸಮ್ಮತಿ ಪತ್ರ. ಹಂಚಿಕೆ ಮಾಡಲಾದ ಸ್ವತ್ತುಗಳಿಗೂ, ಅದೇ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಬಹುದು.

429

2	ಪುರಾವೆ: ವೀಸಾ ವಿವರಗಳೊಂದಿಗಿನ ಅನಿವಾಸಿ ತೆರಿಗೆದಾಯಕ ವ್ಯಕ್ತಿಯ ಪಾಸ್‌ಪೋರ್ಟಿನ ಸ್ಕ್ಯಾನ್ ಮಾಡಲಾದ ಪ್ರತಿ.ಕಂಪನಿ/ಸೊಸೈಟಿ/ಎಲ್‌ಎಲ್‌ಪಿ/ಎಫ್‌ಸಿಎನ್‌ಆರ್/ ಇತ್ಯಾದಿ ಸಂದರ್ಭಗಳಲ್ಲಿ, ಪ್ರಾಧಿಕೃತ ಪತ್ರದೊಂದಿಗೆ ಪವರ್ ಆಫ್ ಅಟಾರ್ನಿ ಹೊಂದಿರುವ ವ್ಯಕ್ತಿಯದು. ಕಂಪನಿಯು ಭಾರತದ ಹೊರಗಡೆ ಅಥವಾ ಭಾರತದ ಒಳಗಡೆ ನೋಂದಣಿಯಾಗಿದ್ದಲ್ಲಿ ಸೇರ್ಪಡೆ ಮಾಡಿದ ಪ್ರಮಾಣ ಪತ್ರದ ಸ್ಕ್ಯಾನ್ ಮಾಡಲಾದ ಪ್ರತಿ. ಮೂಲ ದೇಶದಿಂದ ನೀಡಿದ ಪರವಾನಗಿಯ ಸ್ಕ್ಯಾನ್ ಮಾಡಲಾದ ಪ್ರತಿ. ಭಾರತ ಸರ್ಕಾರದಿಂದ ನೀಡಿದ ತೀರುವಳಿ ಪ್ರಮಾಣ ಪತ್ರ ಸ್ಕ್ಯಾನ್ ಮಾಡಲಾದ ಪ್ರತಿ.
3	ಬ್ಯಾಂಕ್ ಖಾತೆಗೆ ಸಂಬಂಧಪಟ್ಟ ಪುರಾವೆ: ಸ್ಕ್ಯಾನ್ ಮಾಡಲಾದ ಬ್ಯಾಂಕ್ ಖಾತೆ ಪಾಸ್ ಪುಸ್ತಕದ ಮೊದಲನೇ ಪುಟ ಅಥವಾ ಬ್ಯಾಂಕ್ ವಿವರಪತ್ರದ ಸಂಬಂಧಪಟ್ಟ ಸ್ಕ್ಯಾನ್ ಮಾಡಲಾದ ಪುಟ ಅಥವಾ ಮಾಲೀಕರ ಹೆಸರು ಅಥವಾ ವ್ಯಾಪಾರದ ಹೆಸರು, ಬ್ಯಾಂಕ್ ಖಾತೆ ಸಂಖ್ಯೆ, ಎಂಐಸಿಆರ್, ಐಎಫ್‌ಎಸ್‌ಸಿ, ಮತ್ತು ಕೋಡ್ ಒಳಗೊಂಡಂತೆ ಬ್ಯಾಂಕ್ ಶಾಖೆ ವಿವರಗಳನ್ನು ಒಳಗೊಂಡಿರುವ ರದ್ದುಪಡಿಸಲಾದ ಚೆಕ್ ಹಾಳೆಯ ಸ್ಕ್ಯಾನ್ ಮಾಡಲಾದ ಪ್ರತಿ
4	ಭಾರತದಲ್ಲಿ ಪ್ರತಿನಿಧಿಯಾಗಿ ನೇಮಕಗೊಂಡ ಬಗ್ಗೆ ಸ್ಕ್ಯಾನ್ ಮಾಡಲಾದ ದಸ್ತಾವೇಜುಗಳು, ಅನ್ವಯಿಸಿದಲ್ಲಿ
5	ಪ್ರಾಧಿಕೃತತೆಯ ನಮೂನೆ :– ಅರ್ಜಿಯಲ್ಲಿ ನಮೂದಿಸಲಾದಪ್ರತಿಯೊಬ್ಬ ಪ್ರಾಧಿಕೃತ ಸಹಿದಾರನಿಗಾಗಿ, ವ್ಯವಸ್ಥಾಪಕ ಸಮಿತಿ ಅಥವಾ ನಿರ್ದೇಶಕ ಮಂಡಳಿಯ ಪ್ರಾಧಿಕೃತತೆ ಅಥವಾ ಗೊತ್ತುವಳಿಯ ಪ್ರತಿಯನ್ನು ಈ ಕೆಳಕಂಡ ಮಾದರಿಯಲ್ಲಿ ಸಲ್ಲಿಸಬೇಕು: ಪ್ರಾಧಿಕೃತ ಸಹಿದಾರನಿಗಾಗಿ ಘೋಷಣೆ ಪತ್ರ (ಪ್ರತಿ ಸಹಿದಾರನಿಗೂ ಪ್ರತ್ಯೇಕವಾದದ್ದು) ನಾನು _____ (ವ್ಯವಸ್ಥಾಪಕ ನಿರ್ದೇಶಕರು/ ಪೂರ್ಣಾವಧಿ ನಿರ್ದೇಶಕರು/ಸಿಇಓ ಅಥವಾ ಪವರ್ ಆಫ್ ಅಟಾರ್ನಿ ಹೊಂದಿರುವವನು) <<ಪ್ರಾಧಿಕೃತ ಸಹಿದಾರನ ಹೆಸರು>>,ಯವರನ್ನು <<ವ್ಯವಹಾರದ ಹೆಸರು>> ಇದರ ಪ್ರಾಧಿಕೃತ ಸಹಿದಾರನಾಗಿ ವ್ಯವಹರಿಸಲು ಈ ಮೂಲಕ ಪ್ರಾಧಿಕೃತತೆಯನ್ನು ನೀಡುತ್ತಿದ್ದೇನೆ/ವೆ ಹಾಗೂ ಅದಕ್ಕಾಗಿ ಅಧಿನಿಯಮದ ಅಡಿಯಲ್ಲಿ ನೋಂದಣಿ ಅರ್ಜಿಯನ್ನು ಸಲ್ಲಿಸಲಾಗಿರುತ್ತದೆ, ಎಂಬುದಾಗಿ ಈ ಮೂಲಕ ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ/ವೆ ಮತ್ತು ಘೋಷಿಸುತ್ತೇನೆ. ಈ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಆತನ ಎಲ್ಲ ಕ್ರಮಗಳು ನನ್ನ/ನಮ್ಮ ಮೇಲೆ ಬದ್ಧವಾಗಿರುತ್ತದೆ. ಪ್ರಭಾರದಲ್ಲಿರುವ ವ್ಯಕ್ತಿಗಳ ಸಹಿ. ಕ್ರಮ ಸಂಖ್ಯೆ ಪೂರ್ಣ ಹೆಸರು ಪದನಾಮ/ಸ್ಥಾನಮಾನ ಸಹಿ 1. ನಾನು<< ಪ್ರಾಧಿಕೃತ ಸಹಿದಾರನ ಹೆಸರು>> ಈ ಮೂಲಕ ಮೇಲೆ ಉಲ್ಲೇಖಿಸಲಾದ ವ್ಯಾಪಾರದ ಪ್ರಾಧಿಕೃತ ಸಹಿದಾರನಾಗಿ ವ್ಯವಹರಿಸಲು ವಿಧಿವತ್ತಾಗಿ ನನ್ನ ಒಪ್ಪಿಗೆಯನ್ನು ನೀಡುತ್ತಿದ್ದೇನೆ ಮತ್ತು ನನ್ನ ಎಲ್ಲಾ ಕ್ರಮಗಳು ವ್ಯಾಪಾರದ ಮೇಲೆ ಬಾಧ್ಯತೆಯುಳ್ಳತಕ್ಕದ್ದು. ಪ್ರಾಧಿಕೃತ ಸಹಿದಾರನ ಸಹಿ ಸ್ಥಳ: (ಹೆಸರು) ದಿನಾಂಕ: ಪದನಾಮ / ಸ್ಥಾನ ಪ್ರಾಧಿಕೃತ ಸಹಿದಾರರ ಒಪ್ಪಿಗೆ

ಸೂಚನೆಗಳು:

1. ಪ್ರಾಧಿಕೃತ ಸಹಿದಾರನು ಭಾರತದಲ್ಲಿ ನಿವಾಸಿಯಾಗಿರದಿದ್ದಲ್ಲಿ ಅಂಥಹ ವ್ಯಕ್ತಿಗೆ ಡಿಜಿಟಲ್ ಸಿಗ್ನೇಚರ್ ಸರ್ಟೀಫಿಕೇಟ್ ಮೂಲಕ ಅಧಿಕೃತಗೊಳಿಸುವುದು ಕಡ್ಡಾಯವಾಗಿರುವುದಿಲ್ಲ. ಅಧಿಕೃತಗೊಳಿಸುವುದನ್ನು ಎಲೆಕ್ಟ್ರಾನಿಕ್ ವೆರಿಫೀಕೇಷನ್ ಕೋಡ್ (ಇವಿಸಿ) ಮೂಲಕ ಮಾಡಬೇಕಾಗಿದೆ.
2. ಭಾರತದಲ್ಲಿ ನೇಮಕಗೊಂಡ ಪ್ರತಿನಿಧಿ ಎಂಬುದು ಏಕೀಕೃತ ಸರಕುಗಳು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ ಪ್ರಕರಣ 14ರಡಿಯಲ್ಲಿನ ಅರ್ಥವನ್ನು ಹೊಂದಿರತಕ್ಕದ್ದು."

430

8. ನಮೂನೆ ಜಿಎಸ್‌ಟಿ ಆರ್‌ಇಜಿ–13ರ ತಿದ್ದುಪಡಿ.– ಸದರಿ ನಿಯಮಗಳ ನಮೂನೆ ಜಿಎಸ್‌ಟಿ ಆರ್‌ಇಜಿ 13 ರಲ್ಲಿ,–

(ಎ) ಭಾಗ–ಬಿ ಯಲ್ಲಿ, ಕ್ರಮ ಸಂಖ್ಯೆ 4ರಲ್ಲಿ **"ರಾಜ್ಯದಲ್ಲಿನ ಎನ್‌ಟಿಟಿಯ ವಿಳಾಸ"** ಪದಗಳಿಗಾಗಿ **"ಯಾವುದರ ಮೇಲೆ ಕೇಂದ್ರೀಕೃತ ವಿಶಿಷ್ಟ ಗುರುತಿನ ಸಂಖ್ಯೆ ಕೋರಿದೆಯೋ ಆ ಎನ್‌ಟಿಟಿಯ ವಿಳಾಸ"** ಎಂಬುದನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಬಿ) ಸೂಚನೆಗಳು ಅಡಿಯಲ್ಲಿ, **"ವಿಶಿಷ್ಟ ಗುರುತಿನ ಸಂಖ್ಯೆಯನ್ನು ಪಡೆಯುವುದು ಅಗತ್ಯವಿರುವ ಪ್ರತಿಯೊಬ್ಬ ವ್ಯಕ್ತಿಯು ಅರ್ಜಿಯನ್ನು ವಿದ್ಯುನ್ಮಾನ ರೀತಿಯಲ್ಲಿ ಸಲ್ಲಿಸತಕ್ಕದ್ದು"** ಪದಗಳಿಗಾಗಿ **"ವಿಶಿಷ್ಟ ಗುರುತಿನ ಸಂಖ್ಯೆಯನ್ನು ಪಡೆಯುವುದು ಅಗತ್ಯವಿರುವ ಪ್ರತಿಯೊಬ್ಬ ವ್ಯಕ್ತಿಯು ಅರ್ಜಿಯನ್ನು ವಿದ್ಯುನ್ಮಾನ ರೀತಿಯಲ್ಲಿ ಅಥವಾ ಬೇರಾವುದೇ ರೀತಿಯಲ್ಲಿ ಸಲ್ಲಿಸತಕ್ಕದ್ದು"** ಪದಗಳನ್ನು ಪ್ರತಿಯೋಜಿಸತಕ್ಕದ್ದು.

9. ನಮೂನೆ ಜಿಎಸ್‌ಟಿಆರ್–11ರ ಪ್ರತಿಯೋಜನೆ.– ಸದರಿ ನಿಯಮಗಳ ನಮೂನೆ ಜಿಎಸ್‌ಟಿಆರ್–11 ಕ್ಕಾಗಿ, ಈ ಕೆಳಗಿನದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ;–

"ನಮೂನೆ ಜಿಎಸ್‌ಟಿಆರ್ – 11

[ನಿಯಮ 82 ನೋಡಿ]

ವಿಶಿಷ್ಟ ಗುರುತಿನ ಸಂಖ್ಯೆಯನ್ನು (ಯುಐಎನ್) ಹೊಂದಿರುವ ವ್ಯಕ್ತಿಗಳಿಂದ ಮಾಡಲಾದ ಒಳಮುಖ ಪೂರೈಕೆಗಳ ವಿವರಪತ್ರ

ವರ್ಷ:
ತೆರಿಗೆ ಅವಧಿ:

1	ಯುಐಎನ್																			
2	ಯುಐಎನ್ ಹೊಂದಿರುವ ವ್ಯಕ್ತಿಯ ಹೆಸರು	ಸ್ವಯಂ ಜನ್ಯಗೊಳ್ಳುತ್ತದೆ																		

3. ಸ್ವೀಕರಿಸಲಾದ ಒಳಮುಖ ಪೂರೈಕೆಗಳ ವಿವರಗಳು

(ಮೊತ್ತ ರೂ.ಗಳಲ್ಲಿ, ಎಲ್ಲಾ ಕೋಷ್ಟಕಗಳಿಗಾಗಿ)

ಪೂರೈಕೆದಾರನ ಜಿಎಸ್‌ಟಿಐಎನ್	ಬೆಲೆಪಟ್ಟಿ / ಖರ್ಚು ಚೀಟಿ / ಜಮೆ ಚೀಟಿಯ ವಿವರಗಳು			ದರ	ತೆರಿಗೆದಾಯಕ ಮೌಲ್ಯ	ತೆರಿಗೆಯ ಮೊತ್ತ				ಪೂರೈಕೆಯ ಸ್ಥಳ
	ಸಂ.	ದಿನಾಂಕ	ಮೌಲ್ಯ			ವಿಕೀಕೃತ ತೆರಿಗೆ	ಕೇಂದ್ರ ತೆರಿಗೆ	ರಾಜ್ಯ ಕೇಂ. ಪ್ರ. ತೆರಿಗೆ	ಉಪಕರ	
1	2	3	4	5	6	7	8	9	10	
3ಎ. ಸ್ವೀಕರಿಸಲಾದ ಬೆಲೆಪಟ್ಟಿಗಳು										
3ಬಿ. ಸ್ವೀಕರಿಸಲಾದ ಖರ್ಚು ಚೀಟಿ / ಜಮೆ ಚೀಟಿ										

ಪರಿಶೀಲನೆ

ಮೇಲೆ ನೀಡಲಾದ ಮಾಹಿತಿಯು ನನ್ನ ತಿಳುವಳಿಕೆಗೆ ಮತ್ತು ನಂಬಿಕೆಯ ಪ್ರಕಾರ ಸತ್ಯವಾಗಿರುತ್ತದೆ ಮತ್ತು ಸರಿಯಾಗಿರುತ್ತದೆ ಹಾಗೂ ಯಾವುದೇ ಮಾಹಿತಿಯನ್ನು ಇದರಿಂದ ಮರೆಮಾಚಿರುವುದಿಲ್ಲ ಎಂದು ನಾನು, ಈ ಮೂಲಕ ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

ಸಹಿ

ಸ್ಥಳ :
ದಿನಾಂಕ:

(ಪ್ರಾಧಿಕೃತ ಸಹಿದಾರನ ಹೆಸರು)
ಪದನಾಮ / ಸ್ಥಾನ

ಸೂಚನೆಗಳು:

431

1. ಬಳಸಿದ ಪದಗಳು:–
   a. ಜಿಎಸ್‌ಟಿಐಎನ್ – ಸರಕು ಮತ್ತು ಸೇವೆಗಳ ತೆರಿಗೆ ಗುರುತಿನ ಸಂಖ್ಯೆ
   b. ಯುಐಎನ್ – ವಿಶಿಷ್ಟ ಗುರುತಿನ ಸಂಖ್ಯೆ
2. ಮರುಪಾವತಿ ಅರ್ಜಿಯನ್ನು ಯಾವ ರಾಜ್ಯದಲ್ಲಿ ವಿಶಿಷ್ಟ ಗುರುತಿನ ಸಂಖ್ಯೆ ಹಂಚಿಕೆಯಾಗಿದೆಯೋ, ಅದೇ ರಾಜ್ಯದಲ್ಲಿ ಸಲ್ಲಿಸತಕ್ಕದ್ದು.
3. ಮರುಪಾವತಿ ಉದ್ದೇಶಗಳಿಗಾಗಿ, ಯಾವುದರ ಮೇಲೆ ಮರುಪಾವತಿ ಕೋರಿದೆಯೋ ಅದೇ ಬೆಲೆ ಚೀಟಿಗಳನ್ನು ನಮೂದಿಸಬಹುದಾಗಿದೆ.

10. ನಮೂನೆ ಜಿಎಸ್ ಆರ್‌ಎಫ್‌ಡಿ–10ರ ಪ್ರತಿಯೋಜನೆ.– ಸದರಿ ನಿಯಮಗಳ ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–10 ಕ್ಕಾಗಿ, ಈ ಕೆಳಗಿನದ್ದನ್ನು ಪ್ರತಿಯೋಜಿಸತಕ್ಕದ್ದು ಅಂದರೆ;–

"ನಮೂನೆ ಜಿಎಸ್‌ಟಿ–ಆರ್‌ಎಫ್‌ಡಿ–10

[ನಿಯಮ 95(1) ನೋಡಿ]

ಸಂಯುಕ್ತ ರಾಷ್ಟ್ರ ಸಂಘದ ಯಾವುದೇ ವಿಶೇಷ ಏಜೆನ್ಸಿ ಅಥವಾ ಯಾವುದೇ ಬಹುಪಕ್ಷೀಯ ಹಣಕಾಸಿನ ಸಂಸ್ಥೆ ಮತ್ತು ಸಂಘಟನೆ, ವಿದೇಶಗಳ ಕಾನ್ಸುಲೇಟ್ ಅಥವಾ ರಾಯಭಾರಿ ಕಛೇರಿಯಿಂದ ಮರುಪಾವತಿಗಾಗಿ ಅರ್ಜಿ.

1. ಯುಐಎನ್ :
2. ಹೆಸರು :
3. ವಿಳಾಸ :
4. ತೆರಿಗೆ ಅವಧಿ(ತ್ರೈಮಾಸಿಕ) :ಇಂದ:<ದಿನಾಂಕ/ತಿಂಗಳು/ವರ್ಷ> ರವರೆಗೆ <ದಿನಾಂಕ/ತಿಂಗಳು/ವರ್ಷ>
5. ಎಆರ್‌ಎನ್ ಮತ್ತು ಜಿಎಸ್‌ಟಿಆರ್–11ರ ದಿನಾಂಕ :ಎಆರ್‌ಎನ್ < > ದಿನಾಂಕ
6. ಮರುಪಾವತಿ ಹಕ್ಕು ಮೊತ್ತ :<ಐಎನ್‌ಆರ್><ಪದಗಳಲ್ಲಿ>

ರಾಜ್ಯ	ಕೇಂದ್ರ ತೆರಿಗೆ	ರಾಜ್ಯ/ ಕೇಂ.ಪ್ರ ತೆರಿಗೆ	ಏಕೀಕೃತ ತೆರಿಗೆ	ಉಪಕರ
ಒಟ್ಟು				

7. ಬ್ಯಾಂಕ್ ಖಾತೆ ವಿವರ:
   ಎ. ಬ್ಯಾಂಕ್ ಖಾತೆ ಸಂಖ್ಯೆ
   ಬಿ. ಬ್ಯಾಂಕ್ ಖಾತೆಯ ವಿಧ
   ಸಿ. ಬ್ಯಾಂಕ್ ಹೆಸರು
   ಡಿ. ಖಾತೆದಾರ/ನಿರ್ವಾಹಕನ ಹೆಸರು
   ಇ. ಬ್ಯಾಂಕ ಶಾಖೆಯ ವಿಳಾಸ
   ಎಫ್. ಐಎಫ್‌ಎಸ್‌ಸಿ
   ಜಿ. ಎಮ್‌ಐಸಿಆರ್

8. ಪರಿಶೀಲನೆ

_____ ಆದ ನಾನು << ರಾಯಭಾರ/ ಅಂತರರಾಷ್ಟ್ರೀಯ ಸಂಘಟನೆಯ ಹೆಸರು>> ಪ್ರಾಧಿಕೃತ ಪ್ರತಿನಿಧಿಯಾಗಿ ಮೇಲೆ ನೀಡಲಾದ ಮಾಹಿತಿಯು ನನ್ನ ತಿಳುವಳಿಕೆಗೆ ಮತ್ತು ನಂಬಿಕೆಯ ಪ್ರಕಾರ ಸತ್ಯವಾಗಿರುತ್ತದೆ ಮತ್ತು ಸರಿಯಾಗಿರುತ್ತದೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

ಸಂಯುಕ್ತ ರಾಷ್ಟ್ರ ಸಂಘದ ಯಾವುದೇ ವಿಶೇಷ ಏಜೆನ್ಸಿ ಅಥವಾ ಯಾವುದೇ ಬಹುಪಕ್ಷೀಯ ಹಣಕಾಸಿನ ಸಂಸ್ಥೆ ಮತ್ತು ಸಂಘಟನೆ, ವಿದೇಶಗಳ ಕಾನ್ಸುಲೇಟ್ ಅಥವಾ ರಾಯಭಾರಿ ಕಛೇರಿ, ಅಥವಾ ಸರ್ಕಾರದಿಂದ ನಿರ್ದಿಷ್ಟಪಡಿಸಿದ/ಅಧಿಸೂಚಿಸಿದ ಯಾವುದೇ ಇತರ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗವಾಗಿ ಮರುಪಾವತಿ ಪಡೆಯಲು ನಾವು ಅರ್ಹರಾಗಿದ್ದೇವೆ.

432

ದಿನಾಂಕ: ಪ್ರಾಧಿಕೃತ ಸಹಿದಾರರ ಸಹಿ
ಸ್ಥಳ: ಹೆಸರು
ಪದನಾಮ/ ಸ್ಥಾನ

ಸೂಚನೆಗಳು:

1. ಮರುಪಾವತಿಗಾಗಿ ಅರ್ಜಿಯನ್ನು ತ್ರೈಮಾಸಿಕವಾಗಿ ಸಲ್ಲಿಸತಕ್ಕದ್ದು.
2. ಕೋಷ್ಟಕ ಸಂಖ್ಯೆ 6, ಜಿಎಸ್‌ಟಿಆರ್–11ರ ಕೋಷ್ಟಕ 3 ರಲ್ಲಿ ಒದಗಿಸಿದ ವಿವರಗಳಿಂದ ಸ್ವಯಂಜನ್ಯಗೊಳ್ಳುತ್ತದೆ.
3. ಮರುಪಾವತಿಯ ಮೊತ್ತವನ್ನು ಅರ್ಹತೆಯಂತೆ ತಿದ್ದುಪಡಿಮಾಡಲು ಸೌಲಭ್ಯವಿರುತ್ತದೆ.
4. ಮರುಪಾವತಿ ಸೌಲಭ್ಯವನ್ನು ಒದಗಿಸುವ ಎಂಇಎಯಿಂದ ಜಾರಿಗೊಳಿಸಿದ ಅಗತ್ಯ ಪ್ರಮಾಣಪತ್ರವನ್ನು ಮರುಪಾವತಿ ಕ್ಲೇಮ್‌ನ್ನು ಸಂಸ್ಕರಿಸಲು ಯುಕ್ತ ಅಧಿಕಾರಿಯ ಮುಂದೆ ಹಾಜರುಪಡಿಸತಕ್ಕದ್ದು."

11. ನಮೂನೆ ಜಿಎಸ್‌ಟಿ ಡಿಆರ್‌ಸಿ–7ಯ ತಿದ್ದುಪಡಿ.– ಸದರಿ ನಿಯಮಗಳ ನಮೂನೆ ಜಿಎಸ್‌ಟಿ ಡಿಆರ್‌ಸಿ–7ರಲ್ಲಿ ಕ್ರಮಸಂಖ್ಯೆ 5 ಮತ್ತು ಅದಕ್ಕೆ ಸಂಬಂಧಿಸಿದ ನಮೂದನೆಗಳನ್ನು ಬಿಟ್ಟುಬಿಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿಗಳು
ಆರ್ಥಿಕ ಇಲಾಖೆ (ಸಿ.ಟಿ.–1)

433

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಎಮ್)
ಸಂಖ್ಯೆ. ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ: 31.01.2018

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ 2017ರ (2017ರ ಕರ್ನಾಟಕ ಅಧಿನಿಯಮ 27), ಪ್ರಕರಣ 164ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಜಿಎಸ್‌ಟಿ ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017, ಇವುಗಳಿಗೆ ಮುಂದುವರಿದ ತಿದ್ದುಪಡಿ ತರಲು ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಅಂದರೆ:–

ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ:– (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಮೂರನೆಯ ತಿದ್ದುಪಡಿ) ನಿಯಮಗಳು, 2018 ಎಂದು ಕರೆಯಬಹುದು.

(2) ಉಪಬಂಧಿಸಿದುದನ್ನುಳಿದು, ಈ ನಿಯಮಗಳು 2018ರ ಜನವರಿ 23ನೇ ದಿನದಿಂದ ಜಾರಿಗೆ ಬಂದಿವೆ ಎಂದು ಪರಿಭಾವಿಸತಕ್ಕದ್ದು.

2. ನಿಯಮ 3ರ ತಿದ್ದುಪಡಿ– ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017 (ಇನ್ನು ಮುಂದೆ "ಸದರಿ ನಿಯಮಗಳು" ಎಂದು ಉಲ್ಲೇಖಿಸಲಾಗಿದೆ)ರಲ್ಲಿ, ನಿಯಮ 3ರಲ್ಲಿ, ಉಪನಿಯಮ (3ಎ)ರಲ್ಲಿ, "ತೊಂಬತ್ತು ದಿನಗಳ" ಪದಗಳಿಗಾಗಿ, "ಒಂದು ನೂರಾ ಎಂಬತ್ತು ದಿನಗಳ" ಪದಗಳನ್ನು ಪ್ರತಿಯೋಜಿಸತಕ್ಕದ್ದು.

3. ನಿಯಮ 7ರ ತಿದ್ದುಪಡಿ– ಸದರಿ ನಿಯಮಗಳ ನಿಯಮ 7ರಲ್ಲಿ, ಕೋಷ್ಟಕದಲ್ಲಿ,

(1) ಕ್ರಮ ಸಂಖ್ಯೆ 1ರಲ್ಲಿ, ಅಂಕಣ (3)ರಲ್ಲಿ "ಶೇಕಡಾ ಒಂದು" ಪದಗಳಿಗಾಗಿ "ರಾಜ್ಯದಲ್ಲಿನ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿನ ವಹಿವಾಟಿನ ಶೇಕಡಾ ಅರ್ಧ" ಪದಗಳನ್ನು ದಿನಾಂಕ ಜನವರಿ 1, 2018ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು;

(2) ಕ್ರಮ ಸಂಖ್ಯೆ 2ರಲ್ಲಿ, ಅಂಕಣ (3)ರಲ್ಲಿ, "ಶೇಕಡಾ ಎರಡುವರೆ" ಪದಗಳಿಗಾಗಿ "ರಾಜ್ಯದಲ್ಲಿನ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿನ ವಹಿವಾಟಿನ ಶೇಕಡಾ ಎರಡೂವರೆ" ಪದಗಳನ್ನು ದಿನಾಂಕ ಜನವರಿ 1, 2018ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು;

(3) ಕ್ರಮ ಸಂಖ್ಯೆ 3ರಲ್ಲಿ, ಅಂಕಣ (3)ರಲ್ಲಿ, "ಶೇಕಡಾ ಅರ್ಧ" ಪದಗಳಿಗಾಗಿ "ರಾಜ್ಯದಲ್ಲಿನ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿನ ಸರಕುಗಳ ತೆರಿಗೆದಾಯಕ ಪೂರೈಕೆಗಳ ವಹಿವಾಟಿನ ಶೇಕಡಾ ಅರ್ಧ" ಪದಗಳನ್ನು ದಿನಾಂಕ ಜನವರಿ 1, 2018ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು;

4. ನಿಯಮ 20ರ ತಿದ್ದುಪಡಿ :– ಸದರಿ ನಿಯಮಗಳ ನಿಯಮ 20ರಲ್ಲಿನ ಪರಂತುಕವನ್ನು ಬಿಟ್ಟು ಬಿಡತಕ್ಕದ್ದು.

5. ನಿಯಮ 24ರ ತಿದ್ದುಪಡಿ:– ಸದರಿ ನಿಯಮಗಳ ನಿಯಮ 24 ರಲ್ಲಿ, ಉಪನಿಯಮ (4)ರಲ್ಲಿ "31ನೇ ಡಿಸೆಂಬರ್, 2017ರಂದು" ಅಂಕಿಗಳು, ಅಕ್ಷರಗಳು ಮತ್ತು ಪದಗಳಿಗಾಗಿ "31ನೇ ಮಾರ್ಚ್, 2018ರಂದು" ಅಂಕಿಗಳು, ಅಕ್ಷರಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

434

6. ಹೊಸ ನಿಯಮ 31ಎ ಸೇರ್ಪಡೆ:– ಸದರಿ ನಿಯಮಗಳ ನಿಯಮ 31ರ ನಂತರ, ಈ ಕೆಳಗಿನದನ್ನು ಸೇರಿಸತಕ್ಕದ್ದು, ಅಂದರೆ:–

"31ಎ. ಲಾಟರಿ, ಬೆಟ್ಟಿಂಗ್, ಜೂಜು ಮತ್ತು ಕುದುರೆ ರೇಸಿಂಗ್‌ಗಳಿಗೆ ಸಂಬಂಧಿಸಿದ ಪೂರೈಕೆಗಳ ಮೌಲ್ಯ:–

(1) ಈ ಅಧ್ಯಾಯದಲ್ಲಿನ ಉಪಬಂಧಗಳಲ್ಲಿ ಏನೇ ಒಳಗೊಂಡಿದ್ದರೂ, ಈ ಕೆಳಗೆ ನಿರ್ದಿಷ್ಟಪಡಿಸಿದ ಪೂರೈಕೆಗಳಿಗೆ ಸಂಬಂಧಿಸಿದ ಮೌಲ್ಯವನ್ನು ಇನ್ನು ಮುಂದೆ ಉಪಬಂಧಿಸಿದ ರೀತಿಯಲ್ಲಿ ನಿರ್ಧರಿಸತಕ್ಕದ್ದು.

(2) (ಎ) ರಾಜ್ಯ ಸರ್ಕಾರಗಳಿಂದ ನಡೆಸಲ್ಪಟ್ಟ ಲಾಟರಿಯ ಪೂರೈಕೆಯ ಮೌಲ್ಯವನ್ನು ಟಿಕೇಟಿನ ಮುಖ ಬೆಲೆಯ 100/112 ಅಥವಾ ಸಂಘಟಿಸಿದ ರಾಜ್ಯದ ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚಿತಗೊಂಡ ಬೆಲೆ, ಇವುಗಳಲ್ಲಿ ಯಾವುದು ಹೆಚ್ಚೋ ಅದು ಎಂದು ಪರಿಭಾವಿಸತಕ್ಕದ್ದು.

(ಬಿ) ರಾಜ್ಯ ಸರ್ಕಾರಗಳಿಂದ ಪ್ರಾಧಿಕೃತಗೊಳಿಸಿದ ಲಾಟರಿಯ ಪೂರೈಕೆಗಳ ಮೌಲ್ಯವನ್ನು ಟಿಕೇಟಿನ ಮುಖ ಬೆಲೆಯ 100/128 ಅಥವಾ ಸಂಘಟಿಸಿದ ರಾಜ್ಯದ ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚಿತಗೊಂಡ ಬೆಲೆ, ಇವುಗಳಲ್ಲಿ ಯಾವುದು ಹೆಚ್ಚೋ ಅದು ಎಂದು ಪರಿಭಾವಿಸತಕ್ಕದ್ದು.

ವಿವರಣೆ:– ಈ ಉಪನಿಯಮಗಳ ಸಲುವಾಗಿ, ಪದಾವಳಿಗಳು–

(ಎ) **"ರಾಜ್ಯ ಸರ್ಕಾರಗಳಿಂದ ನಡೆಸಲ್ಪಟ್ಟ ಲಾಟರಿ"** ಎಂದರೆ ಸಂಘಟಿಸಿದ ರಾಜ್ಯವನ್ನು ಹೊರತುಪಡಿಸಿ ಬೇರೆ ಯಾವುದೇ ರಾಜ್ಯದಲ್ಲಿ ಮಾರಾಟ ಮಾಡತಕ್ಕದ್ದಲ್ಲದಂತಹ ಲಾಟರಿ.

(ಬಿ) **"ರಾಜ್ಯ ಸರ್ಕಾರಗಳಿಂದ ಪ್ರಾಧಿಕೃತಗೊಳಿಸಿದ ಲಾಟರಿ"** ಎಂದರೆ ಸಂಘಟಿಸಿದ ರಾಜ್ಯವನ್ನೂ ಸೇರಿ ಬೇರೆ ರಾಜ್ಯದಲ್ಲಿ(ಗಳಲ್ಲಿ)ಯೂ ಸಹ ಮಾರಾಟ ಮಾಡಲು ಪ್ರಾಧೀಕೃತಗೊಳಿಸಿದ ಲಾಟರಿ.

(ಸಿ) **"ಸಂಘಟಿಸಿದ ರಾಜ್ಯ"**ವು ಲಾಟರಿ (ನಿಯಂತ್ರಣ) ನಿಯಮಗಳು, 2010ರ ನಿಯಮ 2ರ ಉಪನಿಯಮ (1)ರ ಖಂಡ (ಎಫ್)ನಲ್ಲಿ ಅದಕ್ಕೆ ನಿಗದಿಪಡಿಸಿದ ಅರ್ಥವನ್ನೇ ಹೊಂದಿರುವುದು.

(3) ರೇಸ್ ಕ್ಲಬ್‌ನಲ್ಲಿನ ಬೆಟ್ಟಿಂಗ್, ಜೂಜು ಅಥವಾ ಕುದುರೆ ರೇಸ್‌ಗಳಲ್ಲಿ ಗೆಲ್ಲಲು ಅವಕಾಶವಿರುವ ಕ್ರಮಾರ್ಹ ಕ್ಲೇಮುಗಳ ಪೂರೈಕೆಯ ಮೌಲ್ಯವು ಬೆಟ್‌ನ ಮುಖಬೆಲೆಯ ಅಥವಾ ಟೋಟಲೈಸೇಟರ್‌ನಲ್ಲಿ ಭರಿಸಿದ ಮೊತ್ತದ ಶೇಕಡಾ ನೂರರಷ್ಟು ಇರತಕ್ಕದ್ದು.".

7. ನಿಯಮ 43ರ ತಿದ್ದುಪಡಿ:– ಸದರಿ ನಿಯಮಗಳ ನಿಯಮ 43ರಲ್ಲಿ, ಉಪನಿಯಮ (2)ರಲ್ಲಿ, ವಿವರಣೆಗಾಗಿ ಈ ಕೆಳಗಿನದ್ದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ವಿವರಣೆ:– ನಿಯಮ 42ರ ಮತ್ತು ಈ ನಿಯಮದ ಉದ್ದೇಶಗಳಿಗಾಗಿ, ವಿನಾಯಿತಿ ಪೂರೈಕೆಗಳ ಸಮಗ್ರ ಮೌಲ್ಯವು ಈ ಕೆಳಗಿನವುಗಳನ್ನು ಹೊರತುಪಡಿಸತಕ್ಕದ್ದೆಂದು ಈ ಮೂಲಕ ಸ್ಪಷ್ಟೀಕರಿಸಲಾಗಿದೆ:–

(ಎ) ಭಾರತದ ರಾಜ್ಯಪತ್ರ, ಅಸಾಧಾರಣ, ಭಾಗ II, ಪ್ರಕರಣ 3, ಉಪಪ್ರಕರಣ (i), ಸಂಖ್ಯೆ ಜಿಎಸ್‌ಆರ್ 1338(ಇ) ದಿನಾಂಕ 27ನೇ ಅಕ್ಟೋಬರ್, 2017ರಲ್ಲಿ ಪ್ರಕಟವಾದ ಭಾರತ ಸರ್ಕಾರ, ಆರ್ಥಿಕ ಮಂತ್ರಾಲಯ, ಕಂದಾಯ ಇಲಾಖೆಯ ಅಧಿಸೂಚನೆ ಸಂಖ್ಯೆ 42/2017–ಏಕೀಕೃತ ತೆರಿಗೆ (ದರ), ದಿನಾಂಕ 27ನೇ ಅಕ್ಟೋಬರ್, 2017ರಲ್ಲಿ ನಿರ್ದಿಷ್ಟಪಡಿಸಿದ ಸೇವೆಗಳ ಪೂರೈಕೆಗಳ ಮೌಲ್ಯ;

(ಬಿ) ಠೇವಣಿಗಳನ್ನು ಸ್ವೀಕರಿಸುವ, ಸಾಲಗಳು ಅಥವಾ ಮುಂಗಡಗಳನ್ನು ನೀಡುವ ಮೂಲಕ ಸೇವೆಗಳ ಪೂರೈಕೆಯಲ್ಲಿ ತೊಡಗಿಕೊಂಡಿರುವ ಒಂದು ಬ್ಯಾಂಕಿಂಗ್ ಕಂಪನಿ ಅಥವಾ ಒಂದು ಬ್ಯಾಂಕೇತರ ಹಣಕಾಸು ಕಂಪನಿಯನ್ನು ಒಳಗೊಂಡಂತಹ ಹಣಕಾಸು ಸಂಸ್ಥೆಯನ್ನು ಹೊರತುಪಡಿಸಿದಂತೆ, ಬಡ್ಡಿ ಅಥವಾ ರಿಯಾಯಿತಿ ರೂಪದಲ್ಲಿ ಪ್ರತಿನಿಧಿಸಲ್ಪಟ್ಟ ಪ್ರತಿಫಲದಷ್ಟರ ಮಟ್ಟಿಗೆ ಠೇವಣಿಗಳನ್ನು ಸ್ವೀಕರಿಸುವ, ಸಾಲಗಳು ಅಥವಾ ಮುಂಗಡಗಳನ್ನು ನೀಡುವ ಸೇವೆಗಳ ಮೌಲ್ಯ.

(ಸಿ) ಭಾರತದಲ್ಲಿನ ತೀರುವಳಿಯ ಸೀಮಾಸುಂಕ ಸ್ಟೇಷನ್‌ನಿಂದ ಭಾರತದ ಹೊರಗಿನ ಒಂದು ಸ್ಥಳಕ್ಕೆ ನೌಕೆಯ ಮುಖಾಂತರ ಸರಕುಗಳ ಸಾಗಾಣಿಕೆಯ ಮೂಲಕವಾದ ಸೇವೆಗಳ ಪೂರೈಕೆಯ ಮೌಲ್ಯ.".

435

8. ನಿಯಮ 54ರ ತಿದ್ದುಪಡಿ :– ಸದರಿ ನಿಯಮಗಳ ನಿಯಮ 54ರಲ್ಲಿ, ಉಪನಿಯಮ (1)ರ ನಂತರ, ಈ ಕೆಳಗಿನದ್ದನ್ನು ಸೇರಿಸತಕ್ಕದ್ದು, ಅಂದರೆ:–

"(1ಎ) (ಎ). ಒಬ್ಬ ಹೂಡುವಳಿ ಸೇವೆ ಹಂಚಿಕೆದಾರನಾಗಿ ಅದೇ ಪ್ಯಾನ್ ಮತ್ತು ರಾಜ್ಯ ಸಂಕೇತವನ್ನು ಹೊಂದಿರುವ, ಒಬ್ಬ ನೋಂದಾಯಿತ ವ್ಯಕ್ತಿಯು, ಹೂಡುವಳಿ ಸೇವೆ ಹಂಚಿಕೆದಾರನಿಗೆ ಸಾಮಾನ್ಯ ಹೂಡುವಳಿ ಸೇವೆಗಳ ಜಮೆಯನ್ನು ವರ್ಗಾಯಿಸಲು ಒಂದು ತೆರಿಗೆ ಬೆಲೆಪಟ್ಟಿ, ಅಥವಾ ಸಂದರ್ಭಾನುಸಾರವಾಗಿ ಜಮೆ ಚೀಟಿ ಅಥವಾ ಖರ್ಚು ಚೀಟಿಯನ್ನು ನೀಡಬಹುದು ಮತ್ತು ಅವು ಈ ಕೆಳಗಿನ ವಿವರಗಳನ್ನು ಒಳಗೊಂಡಿರತಕ್ಕದ್ದು:–

(i) ಹೂಡುವಳಿ ಸೇವೆ ಹಂಚಿಕೆದಾರನಾಗಿ ಅದೇ ಪ್ಯಾನ್ ಮತ್ತು ರಾಜ್ಯ ಸಂಕೇತವನ್ನು ಹೊಂದಿರುವ ನೋಂದಾಯಿತ ವ್ಯಕ್ತಿಯ ಹೆಸರು, ವಿಳಾಸ ಮತ್ತು ಸರಕು ಮತ್ತು ಸೇವೆಗಳ ತೆರಿಗೆ ಗುರುತಿನ ಸಂಖ್ಯೆ;

(ii) ಒಂದು ಆರ್ಥಿಕ ವರ್ಷಕ್ಕೆ ವಿಶಿಷ್ಟವಾದ, ಒಂದು ಅಥವಾ ಬಹು ಸರಣಿಯಲ್ಲಿನ, ಅಕ್ಷರಗಳು ಅಥವಾ ಅಂಕಿಗಳು ಅಥವಾ "–" ಅಥವಾ "/" ಗಳಿಂದ ಅನುಕ್ರಮವಾಗಿ ಚಿಹ್ನೆವೆತ್ತ ಹೈಫನ್ ಅಥವಾ ಡ್ಯಾಷ್ ವಿಶೇಷ ಲಿಪಿಗಳನ್ನು ಹೊಂದಿದ, ಹದಿನಾರು ಅಕ್ಷರಗಳಿಗೆ ಮೀರದ ಕ್ರಮಾನುಗತ ಕ್ರಮಸಂಖ್ಯೆ;

(iii) ಅದನ್ನು ನೀಡಿದ ದಿನಾಂಕ;

(iv) ಸಾಮಾನ್ಯ ಸೇವೆಯ ಪೂರೈಕೆದಾರನ ಸರಕು ಮತ್ತು ಸೇವೆಗಳ ತೆರಿಗೆ ಗುರುತಿನ ಸಂಖ್ಯೆ ಮತ್ತು ಹೂಡುವಳಿ ಸೇವೆಗಳ ಹಂಚಿಕೆದಾರನಿಗೆ ಯಾವುದರ ಜಮೆಯನ್ನು ವರ್ಗಾಯಿಸಲು ಉದ್ದೇಶಿಸಿರುವುದೋ ಆ ಮೂಲ ಬೆಲೆಪಟ್ಟಿಯ ಸಂಖ್ಯೆ;

(v) ಹೂಡುವಳಿ ಸೇವೆ ಹಂಚಿಕೆದಾರನ ಹೆಸರು, ವಿಳಾಸ, ಮತ್ತು ಸರಕು ಮತ್ತು ಸೇವೆಗಳ ತೆರಿಗೆ ಗುರುತಿನ ಸಂಖ್ಯೆ;

(vi) ತೆರಿಗೆದಾಯಕ ಮೌಲ್ಯ, ದರ ಮತ್ತು ವರ್ಗಾಯಿಸಲ್ಪಡುವ ಜಮೆಯ ಮೊತ್ತ; ಮತ್ತು

(vii) ನೋಂದಾಯಿತ ವ್ಯಕ್ತಿಯ ಅಥವಾ ಅವನ ಅಧಿಕೃತ ಪ್ರತಿನಿಧಿಯ ಸಹಿ ಅಥವಾ ಡಿಜಿಟಲ್ ಸಹಿ.

(ಬಿ) ಖಂಡ (ಎ)ಯ ಅಡಿಯಲ್ಲಿ ನೀಡಿದ ಬೆಲೆಪಟ್ಟಿಯಲ್ಲಿನ ತೆರಿಗೆದಾಯಕ ಮೌಲ್ಯವು ಸಾಮಾನ್ಯ ಸೇವೆಗಳ ಮೌಲ್ಯಕ್ಕೆ ಸಮನಾಗಿರತಕ್ಕದ್ದು.".

9. ನಿಯಮ 55ಎ ಸೇರ್ಪಡೆ.– ಸದರಿ ನಿಯಮಗಳ ನಿಯಮ 55ರ ನಂತರ, ಈ ಕೆಳಗಿನದ್ದನ್ನು ಸೇರಿಸತಕ್ಕದ್ದು, ಅಂದರೆ:–

"**55ಎ. ತೆರಿಗೆ ಬೆಲೆಪಟ್ಟಿ ಅಥವಾ ಪೂರೈಕೆಯ ಬಿಲ್ ಜೊತೆಗೆ ಸರಕುಗಳ ಸಾಗಾಣಿಕೆ.**– ಸಾಗಾಣಿಕೆ ವಾಹನದ ಪ್ರಭಾರ ವ್ಯಕ್ತಿಯು, ಸದರಿ ನಿಯಮಗಳ ಅಡಿಯಲ್ಲಿ ಇ–ವೇಬಿಲ್ಲನ್ನು ಕೊಂಡೊಯ್ಯುವ ಅವಶ್ಯಕತೆ ಇಲ್ಲದಿದ್ದಲ್ಲಿ, ಸದರಿ ವ್ಯಕ್ತಿಯು ಬೆಲೆಪಟ್ಟಿಯ ಅಥವಾ ನಿಯಮ 46, 46ಎ ಅಥವಾ 49ರ ಉಪಬಂಧಗಳನ್ವಯ ನೀಡಿದ ಪೂರೈಕೆ ಬಿಲ್‌ನ ಪ್ರತಿಯನ್ನು ಕೊಂಡೊಯ್ಯತಕ್ಕದ್ದು.".

10. ನಿಯಮ 89ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 89ರಲ್ಲಿ, ಉಪನಿಯಮ (4ಎ) ಮತ್ತು (4ಬಿ)ಗಳಿಗಾಗಿ, ಈ ಕೆಳಗಿನದ್ದನ್ನು ದಿನಾಂಕ 23ನೇ ಅಕ್ಟೋಬರ್, 2017ರಿಂದ ಜಾರಿಗೆ ಬಂದಿರುವಂತೆ ಪ್ರತಿಯೋಜಿಸತಕ್ಕದ್ದು, ಅಂದರೆ:–

"(4ಎ) ಕರ್ನಾಟಕ ವಿಶೇಷ ರಾಜ್ಯಪತ್ರ, ಭಾಗ–IVಎ, ಸಂಖ್ಯೆ 969, ದಿನಾಂಕ 19ನೇ ಅಕ್ಟೋಬರ್, 2017ರಲ್ಲಿ ಪ್ರಕಟವಾದ ಕರ್ನಾಟಕ ಸರ್ಕಾರದ ಅಧಿಸೂಚನೆ (17/2017) ಸಂಖ್ಯೆ ಆಇ 47 ಸಿಎಸ್‌ಎಲ್ 2017 ದಿನಾಂಕ

436

19ನೇ ಅಕ್ಟೋಬರ್, 2017ರ ಸೌಲಭ್ಯವನ್ನು ಉಪಯೋಗಿಸಿ ಪೂರೈಕೆದಾರನು ಮಾಡಿದ ಪೂರೈಕೆಗಳನ್ನು ಸ್ವೀಕರಿಸಿದ ಸಂದರ್ಭದಲ್ಲಿ ಸರಕು ಅಥವಾ ಸೇವೆಗಳು ಅಥವಾ ಅವೆರಡರ ಶೂನ್ಯ–ದರದ ಪೂರೈಕೆಗಳನ್ನು ಮಾಡಲು ಉಪಯೋಗಿಸಿದ ಇತರೇ ಹೂಡುವಳಿಗಳಿಗೆ ಮತ್ತು ಹೂಡುವಳಿ ಸೇವೆಗಳಿಗೆ ಸಂಬಂಧಿಸಿದ ಉಪಯೋಗಿಸಲಾದ ಹೂಡುವಳಿ ತೆರಿಗೆಯ ಜಮೆಯ ಮರುಪಾವತಿಯನ್ನು ಮಂಜೂರು ಮಾಡತಕ್ಕದ್ದು.

(4ಬಿ) ಕರ್ನಾಟಕ ವಿಶೇಷ ರಾಜ್ಯಪತ್ರ, ಭಾಗ–IVಎ, ಸಂಖ್ಯೆ 974, ದಿನಾಂಕ 23ನೇ ಅಕ್ಟೋಬರ್, 2017ರಲ್ಲಿ ಪ್ರಕಟವಾದ ಕರ್ನಾಟಕ ಸರ್ಕಾರದ ಅಧಿಸೂಚನೆ (40/2017) ಸಂಖ್ಯೆ ಆಇ 48 ಸಿಎಸ್ಎಲ್ 2017, ದಿನಾಂಕ 23ನೇ ಅಕ್ಟೋಬರ್, 2017ರ ಸೌಲಭ್ಯವನ್ನು ಉಪಯೋಗಿಸಿ ಪೂರೈಕೆದಾರನು ಮಾಡಿದ ಪೂರೈಕೆಗಳನ್ನು ಸ್ವೀಕರಿಸಿದ ಸಂದರ್ಭದಲ್ಲಿ, ಸರಕುಗಳ ರಫ್ತಿಗೆ ಸದರಿ ಅಧಿಸೂಚನೆಯ ಅಡಿಯಲ್ಲಿ ಸ್ವೀಕರಿಸಿದ ಹೂಡುವಳಿಗಳಿಗೆ ಸಂಬಂಧಿಸಿದಂತೆ ಉಪಯೋಗಿಸಲಾದ ಹೂಡುವಳಿ ತೆರಿಗೆ ಜಮೆಯ ಮತ್ತು ಸರಕುಗಳ ಅಂಥ ರಫ್ತನ್ನು ಮಾಡಲು ಉಪಯೋಗಿಸಿದಷ್ಟರ ಪ್ರಮಾಣಕ್ಕೆ ಇತರೇ ಹೂಡುವಳಿಗಳಿಗೆ ಅಥವಾ ಹೂಡುವಳಿ ಸೇವೆಗಳಿಗೆ ಸಂಬಂಧಿಸಿದ ಉಪಯೋಗಿಸಲಾದ ಹೂಡುವಳಿ ತೆರಿಗೆಯ ಜಮೆಯ ಮರುಪಾವತಿಯನ್ನು ಮಂಜೂರು ಮಾಡತಕ್ಕದ್ದು.".

11. ನಿಯಮ 96ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 96 ರಲ್ಲಿ,

(1) ಉಪನಿಯಮ (1)ರಲ್ಲಿ, "ಒಬ್ಬ ರಫ್ತುದಾರನಿಂದ" ಪದಗಳಿಗಾಗಿ "ಸರಕುಗಳ ಒಬ್ಬ ರಫ್ತುದಾರನಿಂದ" ಪದಗಳನ್ನು ದಿನಾಂಕ 23ನೇ ಅಕ್ಟೋಬರ್, 2017ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು.

(2) ಉಪನಿಯಮ (2)ರಲ್ಲಿ "ಸಂಬಂಧಿಸಿದ ರಫ್ತು ಬೆಲೆಪಟ್ಟಿಗಳ" ಪದಗಳಿಗಾಗಿ "ಸರಕುಗಳ ರಫ್ತುಗಳಿಗೆ ಅನ್ವಯಿಸುವ ಸಂಬಂಧಿಸಿದ ರಫ್ತು ಬೆಲೆಪಟ್ಟಿಗಳ" ಪದಗಳನ್ನು ದಿನಾಂಕ 23ನೇ ಅಕ್ಟೋಬರ್, 2017ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು;

(3) ಉಪನಿಯಮ (3)ರಲ್ಲಿ, "ಸೀಮಾಸುಂಕದಿಂದ ಹೆಸರಿಸಲಾದ ಸಿಸ್ಟಂ, ಮರುಪಾವತಿಯ ಕ್ಲೇಮನ್ನು ಪ್ರಕ್ರಿಯೆಗೊಳಿಸತಕ್ಕದ್ದು" ಪದಗಳಿಗಾಗಿ "ಸೀಮಾಸುಂಕ ಇಲಾಖೆಯಿಂದ ಹೆಸರಿಸಲಾದ ಸಿಸ್ಟಂ ಅಥವಾ ಸಂದರ್ಭಾನುಸಾರವಾಗಿ ಸೀಮಾಸುಂಕದ ಯುಕ್ತ ಅಧಿಕಾರಿಯು, ಸರಕುಗಳ ರಫ್ತಿಗೆ ಸಂಬಂಧಿಸಿದ ಮರುಪಾವತಿಯ ಕ್ಲೇಮನ್ನು ಪ್ರಕ್ರಿಯೆಗೊಳಿಸತಕ್ಕದ್ದು" ಪದಗಳನ್ನು ದಿನಾಂಕ 23ನೇ ಅಕ್ಟೋಬರ್, 2017ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು;

(4) ಉಪನಿಯಮ (9)ಕ್ಕಾಗಿ ಈ ಕೆಳಗಿನದ್ದನ್ನು ದಿನಾಂಕ 23ನೇ ಅಕ್ಟೋಬರ್, 2017ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು, ಅಂದರೆ:–

"(9) ಭಾರತದಿಂದ ಹೊರಕ್ಕೆ ರಫ್ತಾದ ಸೇವೆಗಳ ಮೇಲೆ ಸಂದಾಯ ಮಾಡಿದ ಏಕೀಕೃತ ತೆರಿಗೆಯ ಮರುಪಾವತಿ ಅರ್ಜಿಯನ್ನು **ನಮೂನೆ ಜಿಎಸ್ಟಿ ಆರ್ಎಫ್ಡಿ 01**ರಲ್ಲಿ ಒದಗಿಸತಕ್ಕದ್ದು ಮತ್ತು ನಿಯಮ 89ರ ಉಪಬಂಧಗಳನ್ವಯ ವ್ಯವಹರಿಸತಕ್ಕದ್ದು;

(10) ಸರಕು ಅಥವಾ ಸೇವೆಗಳ ರಫ್ತುಗಳ ಮೇಲೆ ಸಂದಾಯ ಮಾಡಿದ ಏಕೀಕೃತ ತೆರಿಗೆಯ ಮರುಪಾವತಿಯನ್ನು ಕ್ಲೇಮು ಮಾಡುವ ವ್ಯಕ್ತಿಗಳು ಕರ್ನಾಟಕ ವಿಶೇಷ ರಾಜ್ಯಪತ್ರ, ಭಾಗ–IVಎ, ಸಂಖ್ಯೆ 969, ದಿನಾಂಕ 19ನೇ ಅಕ್ಟೋಬರ್, 2017ರಲ್ಲಿ ಪ್ರಕಟವಾದ ಕರ್ನಾಟಕ ಸರ್ಕಾರದ ಅಧಿಸೂಚನೆ (17/2017) ಸಂಖ್ಯೆ ಆಇ 47 ಸಿಎಸ್ಎಲ್ 2017, ದಿನಾಂಕ 19ನೇ ಅಕ್ಟೋಬರ್, 2017ರ ಅಥವಾ ಕರ್ನಾಟಕ ವಿಶೇಷ ರಾಜ್ಯಪತ್ರ,, ಭಾಗ–IVಎ, ಸಂಖ್ಯೆ 974, ದಿನಾಂಕ 23ನೇ ಅಕ್ಟೋಬರ್, 2017ರಲ್ಲಿ ಪ್ರಕಟವಾದ ಕರ್ನಾಟಕ ಸರ್ಕಾರದ ಅಧಿಸೂಚನೆ (40/2017) ಸಂಖ್ಯೆ ಆಇ 48 ಸಿಎಸ್ಎಲ್ 2017 ದಿನಾಂಕ 23ನೇ ಅಕ್ಟೋಬರ್, 2017ರ ಸೌಲಭ್ಯವನ್ನು ಉಪಯೋಗಿಸಿಕೊಂಡು ಪೂರೈಕೆದಾರನು ಮಾಡಿರುವ ಪೂರೈಕೆಗಳನ್ನು ಸ್ವೀಕರಿಸಿರಬಾರದು.".

437

12. ನಿಯಮ 138ರ ಪ್ರತಿಯೋಜನೆ.– ಸದರಿ ನಿಯಮಗಳ ನಿಯಮ 138ಕ್ಕಾಗಿ, ಈ ಕೆಳಗಿನದ್ದನ್ನು 1ನೇ ಫೆಬ್ರವರಿ, 2018ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು, ಅಂದರೆ:–

"138. ಸರಕುಗಳ ಚಲನೆಗಿಂತ ಮುಂಚಿತವಾಗಿ ಒದಗಿಸಬೇಕಾದ ಮಾಹಿತಿ ಮತ್ತು ಇ–ವೇಬಿಲ್ಲನ್ನು ಸೃಷ್ಟಿಸುವುದು.– (1) ಐವತ್ತು ಸಾವಿರ ರೂಪಾಯಿಗಳ ರವಾನೆ ಮೌಲ್ಯವನ್ನು ಮೀರಿರುವ–

(i) ಒಂದು ಪೂರೈಕೆಗೆ ಸಂಬಂಧಿಸಿದಂತೆ; ಅಥವಾ

(ii) ಪೂರೈಕೆಯನ್ನು ಹೊರತುಪಡಿಸಿದ ಕಾರಣಗಳಿಗಾಗಿ; ಅಥವಾ

(iii) ಒಬ್ಬ ಅನೋಂದಾಯಿತ ವ್ಯಕ್ತಿಯಿಂದ ಒಳಮುಖ ಪೂರೈಕೆಯ ಕಾರಣದಿಂದಾಗಿ,

–ಸರಕುಗಳ ಚಲನೆಯನ್ನು ಉಂಟುಮಾಡುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಅಂಥ ಚಲನೆಯು ಪ್ರಾರಂಭವಾಗುವ ಮುನ್ನ, ಸದರಿ ಸರಕುಗಳಿಗೆ ಸಂಬಂಧಿಸಿದ ಮಾಹಿತಿಯನ್ನು, ಒದಗಿಸಬೇಕಾದ ಅಂಥ ಇತರೇ ಮಾಹಿತಿಯ ಸಹಿತ, ಸಾಮಾನ್ಯ ಪೋರ್ಟಲ್‌ನಲ್ಲಿ, **ನಮೂನೆ ಜಿಎಸ್‌ಟಿ ಇಡಬ್ಲೂಬಿ–01** ರ **ಭಾಗ–ಎ**ನಲ್ಲಿ, ವಿದ್ಯುನ್ಮಾನ ರೀತಿಯಲ್ಲಿ, ಒದಗಿಸತಕ್ಕದ್ದು ಮತ್ತು ಸದರಿ ಪೋರ್ಟಲ್‌ನಲ್ಲಿ ಒಂದು ವಿಶಿಷ್ಟ ಸಂಖ್ಯೆ ಸೃಷ್ಟಿಯಾಗುವುದು:

ಪರಂತು, ಒಂದು ರಾಜ್ಯದಲ್ಲಿ ನೆಲೆಗೊಂಡಿರುವ ಒಬ್ಬ ಪ್ರಧಾನಕರ್ತನಿಂದ ಯಾವುದೇ ಇತರ ರಾಜ್ಯದಲ್ಲಿ ನೆಲೆಗೊಂಡಿರುವ ಮಜೂರಿ ಕೆಲಸಗಾರನಿಗೆ ಸರಕುಗಳನ್ನು ಕಳುಹಿಸಿದ್ದಲ್ಲಿ, ಪ್ರಧಾನಕರ್ತನು ರವಾನೆಯ ಮೌಲ್ಯವನ್ನು ಪರಿಗಣಿಸದೆ ಇ–ವೇಬಿಲ್ಲನ್ನು ಸೃಷ್ಟಿಸತಕ್ಕದ್ದು:

ಮತ್ತು ಪರಂತು, ಪ್ರಕರಣ 24ರ ಖಂಡ (i) ಮತ್ತು (ii)ಗಳ ಅಡಿಯಲ್ಲಿ ನೋಂದಣಿ ಪಡೆಯುವ ಅಗತ್ಯತೆಯಿಂದ ವಿನಾಯಿತಗೊಂಡಿರುವ ಒಬ್ಬ ವ್ಯಕ್ತಿಯಿಂದ ಕರಕುಶಲ ಸರಕುಗಳು, ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಸಾಗಾಣಿಕೆಯಾಗುತ್ತಿದ್ದಲ್ಲಿ, ಸದರಿ ವ್ಯಕ್ತಿಯು ರವಾನೆಯ ಮೌಲ್ಯವನ್ನು ಪರಿಗಣಿಸದೆ ಇ–ವೇಬಿಲ್ಲನ್ನು ಸೃಷ್ಟಿಸತಕ್ಕದ್ದು.

ವಿವರಣೆ 1.– ಈ ನಿಯಮದ ಉದ್ದೇಶಗಳಿಗಾಗಿ, ಪದಾವಳಿಯಾದ **"ಕರಕುಶಲ ಸರಕುಗಳು"** ಎನ್ನುವುದಕ್ಕೆ, ಕಾಲಕಾಲಕ್ಕೆ ತಿದ್ದುಪಡಿಗೊಂಡ ದಿನಾಂಕ 16ನೇ ಸೆಪ್ಟಂಬರ್ 2017ರ ಕರ್ನಾಟಕ ವಿಶೇಷ ರಾಜ್ಯಪತ್ರ, ಸಂ.887ರ ಭಾಗ–IVಎನಲ್ಲಿ ಪ್ರಕಟವಾದ ಕರ್ನಾಟಕ ಸರ್ಕಾರದ ಅಧಿಸೂಚನೆ (6/2017) ಸಂ. ಆಇ 47 ಸಿಎಸ್‌ಎಲ್ 2017ರ ದಿನಾಂಕ 15ನೇ ಸೆಪ್ಟಂಬರ್ 2017ರಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರುವುದು.

ವಿವರಣೆ 2.– ಈ ನಿಯಮದ ಉದ್ದೇಶಗಳಿಗಾಗಿ, ಸರಕುಗಳ ರವಾನೆ ಮೌಲ್ಯವು ಪ್ರಕರಣ 15ರ ಉಪಬಂಧಗಳಿಗೆ ಅನುಸಾರವಾಗಿ ನಿರ್ಧರಿಸಲ್ಪಟ್ಟ, ಸದರಿ ರವಾನೆಗೆ ಸಂಬಂಧಿಸಿದಂತೆ ನೀಡಲಾದ ಬೆಲೆಪಟ್ಟಿ, ಪೂರೈಕೆ ಬಿಲ್ ಅಥವಾ ಸಂದರ್ಭಾನುಸಾರವಾಗಿ ಬಟವಾಡೆ ಚಲನ್‌ನಲ್ಲಿ ಘೋಷಿಸಿದ ಮೌಲ್ಯವಾಗಿರತಕ್ಕದ್ದು ಮತ್ತು ಆ ದಸ್ತಾವೇಜಿನಲ್ಲಿ ವಿಧಿಸಿದ ಕೇಂದ್ರ ತೆರಿಗೆ, ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶ ತೆರಿಗೆ, ಏಕೀಕೃತ ತೆರಿಗೆ ಮತ್ತು ಉಪಕರಗಳನ್ನು, ಅವು ಇದ್ದಲ್ಲಿ, ಒಳಗೊಂಡಿರುತ್ತದೆ.

(2) ಸರಕುಗಳ ರವಾನೆದಾರನಾಗಿ ಅಥವಾ ರವಾನೆ ಸ್ವೀಕೃತಿದಾರನಂತೆ ಪೂರೈಕೆಯ ಸ್ವೀಕರಿಸುವವನಾಗಿ, ನೋಂದಾಯಿತ ವ್ಯಕ್ತಿಯು, ಆತನ ಸ್ವಂತ ಸಾಗಾಣಿಕೆ ವಾಹನದಲ್ಲಾಗಲಿ ಅಥವಾ ಬಾಡಿಗೆಯದಾಗಲಿ ಅಥವಾ ರೈಲ್ವೆಯ ಮೂಲಕ ಅಥವಾ ವಾಯುಯಾನದ ಮೂಲಕ ಅಥವಾ ನೌಕೆಯ ಮೂಲಕವಾಗಲಿ, ಸರಕುಗಳ ಸಾಗಾಣಿಕೆಯನ್ನು ಮಾಡಿದ್ದಲ್ಲಿ, ಸದರಿ ವ್ಯಕ್ತಿಯು ಅಥವಾ ಸ್ವೀಕರಿಸುವವನು, **ನಮೂನೆ ಜಿಎಸ್‌ಟಿ ಇಡಬ್ಲೂಬಿ–01ರ ಭಾಗ–ಬಿ**ನಲ್ಲಿ ಮಾಹಿತಿಯನ್ನು ಒದಗಿಸಿದ ನಂತರ, ವಿದ್ಯುನ್ಮಾನ ರೀತಿಯಲ್ಲಿ, ಸಾಮಾನ್ಯ ಪೋರ್ಟಲ್‌ನಲ್ಲಿ,

438

ನಮೂನೆ ಜಿಎಸ್‌ಟಿ ಇಡಬ್ಲೂಬಿ–01ರಲ್ಲಿ ಇ–ವೇಬಿಲ್ಲನ್ನು ಸೃಷ್ಟಿಸಬಹುದು:

ಪರಂತು, ರೈಲ್ವೆಯ ಮೂಲಕ ಅಥವಾ ವಾಯುಯಾನದ ಮೂಲಕ ಅಥವಾ ನೌಕೆಯ ಮೂಲಕ ಸರಕುಗಳ ಸಾಗಾಣಿಕೆಯನ್ನು ಮಾಡಿದ್ದಲ್ಲಿ, ಪೂರೈಕೆದಾರ ಅಥವಾ ಸ್ವೀಕರಿಸುವವನಾಗಿರುವ ನೋಂದಾಯಿತ ವ್ಯಕ್ತಿಯು ಇ–ವೇಬಿಲ್ಲನ್ನು ಸೃಷ್ಟಿಸತಕ್ಕದ್ದು; ಮತ್ತು ಅವನು ಸಾಮಾನ್ಯ ಪೋರ್ಟಲ್‌ನಲ್ಲಿ ಕೆಳಗಿನ ಮಾಹಿತಿಯನ್ನು ಒದಗಿಸತಕ್ಕದ್ದು–

(ಎ) **ನಮೂನೆ ಜಿಎಸ್‌ಟಿ ಇಡಬ್ಲೂಬಿ–01**ರ **ಭಾಗ–ಬಿ**ನಲ್ಲಿ ಮಾಹಿತಿ; ಮತ್ತು

(ಬಿ) ಸಂದರ್ಭಾನುಸಾರವಾಗಿ, ರೈಲ್ವೆ ರಸೀದಿ ಅಥವಾ ವಾಯು ಸರಕು ಚೀಟಿ ಅಥವಾ ಬಿಲ್ ಆಫ್ ಲ್ಯಾಡಿಂಗ್‌ನ ಕ್ರಮ ಸಂಖ್ಯೆ ಮತ್ತು ದಿನಾಂಕ

(3) ಉಪನಿಯಮ (2)ರ ಅಡಿಯಲ್ಲಿ ಇ–ವೇಬಿಲ್ಲನ್ನು ಸೃಷ್ಟಿಸಿಲ್ಲದಿದ್ದಲ್ಲಿ ಮತ್ತು ರಸ್ತೆಯ ಮೂಲಕ ಸಾಗಾಣಿಕೆಗಾಗಿ ಸರಕುಗಳನ್ನು ಸಾಗಾಣಿಕೆದಾರನ ಕೈಗೊಪ್ಪಿಸಿದ್ದಲ್ಲಿ, ನೋಂದಾಯಿತ ವ್ಯಕ್ತಿಯು, ಸಾಮಾನ್ಯ ಪೋರ್ಟಲ್‌ನಲ್ಲಿ ಸಾಗಾಣಿಕೆದಾರನಿಗೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸತಕ್ಕದ್ದು ಮತ್ತು ನೋಂದಾಯಿತ ವ್ಯಕ್ತಿಯು **ನಮೂನೆ ಜಿಎಸ್‌ಟಿ ಇಡಬ್ಲೂಬಿ–01** ರ **ಭಾಗ–'ಎ'**ನಲ್ಲಿ ಒದಗಿಸಿದ ಮಾಹಿತಿಯ ಆಧಾರದ ಮೇಲೆ, ಇ–ವೇಬಿಲ್ಲನ್ನು ಸಾಗಾಣಿಕೆದಾರನು ಸದರಿ ಪೋರ್ಟಲ್‌ನಲ್ಲಿ ಸೃಷ್ಟಿಸತಕ್ಕದ್ದು:

ಪರಂತು, ನೋಂದಾಯಿತ ವ್ಯಕ್ತಿ ಅಥವಾ ಸಂದರ್ಭಾನುಸಾರವಾಗಿ ಸಾಗಾಣಿಕೆದಾರನು, ಆತನ ಆಯ್ಕೆಯಲ್ಲಿ, ರವಾನೆ ಸರಕಿನ ಮೌಲ್ಯ ಐವತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿದ್ದರೂ ಸಹ, ಇ–ವೇಬಿಲ್ಲನ್ನು ಸೃಷ್ಟಿಸಬಹುದು ಮತ್ತು ಅದನ್ನು ಕೊಂಡೊಯ್ಯಬಹುದು:

ಮತ್ತು ಪರಂತು, ಒಬ್ಬ ಅನೋಂದಾಯಿತ ವ್ಯಕ್ತಿಯು, ಆತನ ಸ್ವಂತ ಸಾಗಾಣಿಕೆ ವಾಹನದಲ್ಲಿ ಅಥವಾ ಬಾಡಿಗೆಯದರಲ್ಲಿ ಅಥವಾ ಒಬ್ಬ ಸಾಗಾಣಿಕೆದಾರನ ಮೂಲಕ, ಚಲನೆಯನ್ನು ಉಂಟುಮಾಡಿದ್ದಲ್ಲಿ, ಆತನು ಅಥವಾ ಸಾಗಾಣಿಕೆದಾರನು, ಅವರ ಆಯ್ಕೆಯಲ್ಲಿ, ಇ–ವೇಬಿಲ್ಲನ್ನು **ನಮೂನೆ ಜಿಎಸ್‌ಟಿ ಇಡಬ್ಲೂಬಿ–01ರಲ್ಲಿ** ಸಾಮಾನ್ಯ ಪೋರ್ಟಲ್‌ನಲ್ಲಿ, ಈ ನಿಯಮದಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ ಸೃಷ್ಟಿಸತಕ್ಕದ್ದು:

ಅಲ್ಲದೆ ಪರಂತು, ರವಾನೆದಾರನ ವ್ಯವಹಾರ ಸ್ಥಳದಿಂದ ಸಾಗಾಣಿಕದಾರನ ವ್ಯವಹಾರ ಸ್ಥಳಕ್ಕೆ ಮುಂದಿನ ಸಾಗಾಣಿಕೆಗಾಗಿ, ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದ ಒಳಗೆ ಹತ್ತು ಕಿಲೋಮೀಟರುಗಳಿಗಿಂತ ಕಡಿಮೆಯ ಅಂತರದಲ್ಲಿ ಸರಕುಗಳು ಸಾಗಾಣಿಕೆಯಾಗಿದ್ದಲ್ಲಿ, ಪೂರೈಕೆದಾರನು ಅಥವಾ ಸ್ವೀಕರಿಸುವವನು ಅಥವಾ ಸಂದರ್ಭಾನುಸಾರವಾಗಿ, ಸಾಗಾಣಿಕೆದಾರನು **ನಮೂನೆ ಜಿಎಸ್‌ಟಿ ಇಡಬ್ಲೂಬಿ–01 ರ ಭಾಗ–ಬಿ**ನಲ್ಲಿ ಸಾಗಾಣಿಕೆ ವಾಹನದ ವಿವರಗಳನ್ನು ಒದಗಿಸದಿರಬಹುದು.

ವಿವರಣೆ 1.– ಈ ಉಪನಿಯಮದ ಉದ್ದೇಶಗಳಿಗಾಗಿ, ಒಬ್ಬ ಅನೋಂದಾಯಿತ ಪೂರೈಕೆದಾರನಿಂದ ನೋಂದಾಯಿತನಾಗಿರುವ ಸ್ವೀಕರಿಸುವವನಿಗೆ ಸರಕುಗಳು ಪೂರೈಕೆಯಾಗಿದ್ದಲ್ಲಿ, ಸರಕುಗಳ ಚಲನೆಯನ್ನು ಪ್ರಾರಂಭಿಸುವ ಸಮಯದಲ್ಲಿ ಸ್ವೀಕರಿಸುವವನು ಗೊತ್ತಿದ್ದರೆ, ಅಂಥ ಸ್ವೀಕರಿಸುವವನಿಂದ ಚಲನೆಯು ಉಂಟಾಗಿದೆ ಎಂದು ಹೇಳತಕ್ಕದ್ದು.

ವಿವರಣೆ 2.– ಉಪನಿಯಮ (3)ರ ಮೂರನೆಯ ಪರಂತುಕದ ಮತ್ತು ಉಪನಿಯಮ (5)ರ ಪರಂತುಕದ ಅಡಿಯಲ್ಲಿ ಒಳಗೊಂಡ ಚಲನೆಗಳನ್ನು ಹೊರತುಪಡಿಸಿದಂತೆ ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–1ರ ಭಾಗ–ಬಿಯಲ್ಲಿ ಮಾಹಿತಿಯನ್ನು ಒದಗಿಸದ ಹೊರತು ರಸ್ತೆಯ ಮೂಲಕ ಸರಕುಗಳ ಚಲನೆಗೆ ಇ–ವೇಬಿಲ್ ಸಿಂಧುವಾಗಿರತಕ್ಕದ್ದಲ್ಲ.

(4) ಸಾಮಾನ್ಯ ಪೋರ್ಟಲ್‌ನಲ್ಲಿ ಇ–ವೇಬಿಲ್ಲನ್ನು ಸೃಷ್ಟಿಸಿದ ತರುವಾಯ, ಪೂರೈಕೆದಾರನಿಗೆ, ಸ್ವೀಕರಿಸುವವನಿಗೆ ಮತ್ತು ಸಾಗಾಣಿಕೆದಾರನಿಗೆ, ಒಂದು ವಿಶಿಷ್ಟ ಇ–ವೇಬಿಲ್ಲಿನ ಸಂಖ್ಯೆಯನ್ನು (ಇಬಿಎನ್) ಸಾಮಾನ್ಯ

439

ಪೋರ್ಟಲ್‌ನಲ್ಲಿ ಲಭ್ಯ ಮಾಡತಕ್ಕದ್ದು.

(5) ಸರಕುಗಳನ್ನು ಒಂದು ಸಾಗಾಣಿಕೆ ವಾಹನದಿಂದ ಮತ್ತೊಂದಕ್ಕೆ ವರ್ಗಾಯಿಸಿದಾಗ, ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–01ರ ಭಾಗ–ಎನಲ್ಲಿ ಮಾಹಿತಿಯನ್ನು ಒದಗಿಸಿದ ರವಾನೆದಾರನು ಅಥವಾ ಸ್ವೀಕರಿಸುವವನು ಅಥವಾ ಸಾಗಾಣಿಕೆದಾರನು, ಅಂಥ ವರ್ಗಾವಣೆ ಮತ್ತು ಸರಕುಗಳ ಮುಂದಿನ ಚಲನೆಗಿಂತ ಮೊದಲು, ಸಾಗಾಣಿಕೆ ವಾಹನದ ವಿವರಗಳನ್ನು ಇ–ವೇಬಿಲ್‌ನಲ್ಲಿ ಸಾಮಾನ್ಯ ಪೋರ್ಟಲ್‌ನಲ್ಲಿ **ನಮೂನೆ ಜಿಎಸ್‌ಟಿ ಇಡಬ್ಲೂಬಿ–01**ರಲ್ಲಿ ಅಪ್‌ಡೇಟ್ ಮಾಡತಕ್ಕದ್ದು:

ಪರಂತು, ಸರಕುಗಳು, ಸಾಗಾಣಿಕದಾರನ ವ್ಯವಹಾರ ಸ್ಥಳದಿಂದ ಅಂತಿಮವಾಗಿ ಸ್ವೀಕೃತಿದಾರನ ವ್ಯವಹಾರ ಸ್ಥಳಕ್ಕೆ, ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದ ಒಳಗೆ ಹತ್ತು ಕಿಲೋಮೀಟರುಗಳಿಗಿಂತ ಕಡಿಮೆಯ ಅಂತರದಲ್ಲಿ ಸಾಗಾಣಿಕೆಯಾಗಿದ್ದಲ್ಲಿ ಇ–ವೇಬಿಲ್ಲಿನಲ್ಲಿ ಸಾಗಾಣಿಕೆ ವಾಹನದ ವಿವರಗಳನ್ನು ಅಪ್‌ಡೇಟ್ ಮಾಡದಿರಬಹುದು.

(5ಎ) **ನಮೂನೆ ಜಿಎಸ್‌ಟಿ ಇಡಬ್ಲೂಬಿ–01ರ ಭಾಗ ಎ**ನಲ್ಲಿ ಮಾಹಿತಿಯನ್ನು ಒದಗಿಸಿದ ರವಾನೆದಾರನು ಅಥವಾ ಸ್ವೀಕೃತಿದಾರನು, ಅಥವಾ ಸಾಗಾಣಿಕೆದಾರನು, ಇ–ವೆ ಬಿಲ್ಲಿನ ಸಂಖ್ಯೆಯನ್ನು, ಸರಕುಗಳ ಮುಂದಿನ ಚಲನೆಗಾಗಿ ಮಾಹಿತಿಯನ್ನು **ನಮೂನೆ ಜಿಎಸ್‌ಟಿ ಇಡಬ್ಲೂಬಿ–01ರ ಭಾಗ ಬಿ**ನಲ್ಲಿ ಅಪ್‌ಡೇಟ್ ಮಾಡಲು, ಮತ್ತೊಬ್ಬ ನೋಂದಾಯಿತ ಅಥವಾ ದಾಖಲಿತ ಸಾಗಾಣಿಕೆದಾರನಿಗೆ ನಿಯೋಜಿಸಬಹುದು:

ಪರಂತು, ಒಮ್ಮೆ ಸಾಗಾಣಿಕೆದಾರನು **ನಮೂನೆ ಜಿಎಸ್‌ಟಿ ಇಡಬ್ಲೂಬಿ–01ರ ಭಾಗ ಬಿ**ನಲ್ಲಿ ಸಾಗಾಣಿಕೆಯ ವಿವರಗಳನ್ನು ಅಪ್‌ಡೇಟ್ ಮಾಡಿದಲ್ಲಿ, **ನಮೂನೆ ಜಿಎಸ್‌ಟಿ ಇಡಬ್ಲೂಬಿ–01ರ ಭಾಗ ಎ** ನಲ್ಲಿ ಮಾಹಿತಿಯನ್ನು ಒದಗಿಸಿದ ರವಾನೆದಾರನು ಅಥವಾ ಸಂದರ್ಭಾನುಸಾರವಾಗಿ ಸ್ವೀಕೃತಿದಾರನು, ಬೇರೊಬ್ಬ ಸಾಗಾಣಿಕೆದಾರನಿಗೆ ಇ–ವೇಬಿಲ್ಲಿನ ಸಂಖ್ಯೆಯನ್ನು ನಿಯೋಜಿಸಲು ಅವಕಾಶವಿರುವುದಿಲ್ಲ.

(6) ಉಪನಿಯಮ (1)ರ ಉಪಬಂಧಗಳಿಗೆ ಅನುಸಾರವಾಗಿ ಇ–ವೇಬಿಲ್ಲನ್ನು ಸೃಷ್ಟಿಸಿದ ನಂತರ, ವಿವಿಧ ಸರಕು ರವಾನೆಗಳನ್ನು ಒಂದು ಸಾಗಾಣಿಕೆ ವಾಹನದಲ್ಲಿ ಸಾಗಾಣಿಕೆ ಮಾಡಲು ಉದ್ದೇಶಿಸಿದ್ದಲ್ಲಿ, ಸಾಗಾಣಿಕೆದಾರನು, ಅಂಥ ಪ್ರತಿಯೊಂದು ಸರಕು ರವಾನೆಗೆ ಸಂಬಂಧಿಸಿದಂತೆ ಸೃಷ್ಟಿಸಲಾದ ಇ–ವೇಬಿಲ್ಲುಗಳ ಕ್ರಮ ಸಂಖ್ಯೆಯನ್ನು, ಸಾಮಾನ್ಯ ಪೋರ್ಟಲ್‌ನಲ್ಲಿ ವಿದ್ಯುನ್ಮಾನ ರೀತಿಯಲ್ಲಿ, ಸೂಚಿಸಬಹುದು ಮತ್ತು ಸರಕುಗಳ ಚಲನೆಯ ಮುನ್ನ ಸದರಿ ಸಾಮಾನ್ಯ ಪೋರ್ಟಲ್‌ನಲ್ಲಿ ಕ್ರೋಢೀಕೃತ ಇ–ವೇಬಿಲ್ಲನ್ನು ಆತನು **ನಮೂನೆ ಜಿಎಸ್‌ಟಿ ಇಡಬ್ಲೂಬಿ–02**ರಲ್ಲಿ ಸೃಷ್ಟಿಸಬಹುದು.

(7) ಸರಕುಗಳ ರವಾನೆದಾರ ಅಥವಾ ಸ್ವೀಕರಿಸುವವನು ಉಪನಿಯಮ (1)ರ ಉಪಬಂಧಗಳಿಗೆ ಅನುಸಾರವಾಗಿ **ನಮೂನೆ ಜಿಎಸ್‌ಟಿ ಇಡಬ್ಲೂಬಿ–01**ನ್ನು ಸೃಷ್ಟಿಸಿರದಿದ್ದಲ್ಲಿ ಮತ್ತು ಸಾಗಾಣಿಕೆ ವಾಹನದಲ್ಲಿ ಕೊಂಡೊಯ್ಯುತ್ತಿರುವ ಸರಕುಗಳ ಮೌಲ್ಯವು ಐವತ್ತು ಸಾವಿರ ರೂಪಾಯಿಗಳಿಗಿಂತ ಹೆಚ್ಚಿದ್ದಲ್ಲಿ, ಸಾಗಾಣಿಕೆದಾರನು, ಬೆಲೆಪಟ್ಟಿ ಅಥವಾ ಪೂರೈಕೆ ಬಿಲ್ಲು ಅಥವಾ ಸಂದರ್ಭಾನುಸಾರವಾಗಿ ಬಟವಾಡೆ ಚಲನ್ ಆಧಾರದಲ್ಲಿ, **ನಮೂನೆ ಜಿಎಸ್‌ಟಿ ಇಡಬ್ಲೂಬಿ–01**ನ್ನು ಸೃಷ್ಟಿಸತಕ್ಕದ್ದು ಮತ್ತು ಸರಕುಗಳ ಚಲನೆಯ ಮುನ್ನ ಸಾಮಾನ್ಯ ಪೋರ್ಟಲ್‌ನಲ್ಲಿ ಕ್ರೋಢೀಕೃತ ಇ–ವೇಬಿಲ್ಲನ್ನು ಸಹ **ನಮೂನೆ ಜಿಎಸ್‌ಟಿ ಇಡಬ್ಲೂಬಿ–02**ರಲ್ಲಿ ಸೃಷ್ಟಿಸಬಹುದು:

ಪರಂತು, ಒಬ್ಬ ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕನ ಮೂಲಕ ಸರಕುಗಳು ಸಾಗಾಣಿಕೆಯಾಗುವಂತಿದ್ದಲ್ಲಿ, **ನಮೂನೆ ಜಿಎಸ್‌ಟಿ ಇಡಬ್ಲೂಬಿ–01**ರ **ಭಾಗ–ಎ**ಯಲ್ಲಿ ಮಾಹಿತಿಯನ್ನು ಸದರಿ ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕನಿಂದ ಒದಗಿಸಬಹುದು.

440

(8) **ನಮೂನೆ ಜಿಎಸ್‌ಟಿ ಇಡಬ್ಲೂಬಿ–01**ರ **ಭಾಗ–ಎ**ಯಲ್ಲಿ ಒದಗಿಸಿದ ಮಾಹಿತಿಯನ್ನು ನೋಂದಾಯಿತ ಪೂರೈಕೆದಾರನಿಗೆ ಸಾಮಾನ್ಯ ಪೋರ್ಟಲ್‌ನಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು, ಆತನು ಅದನ್ನು **ನಮೂನೆ ಜಿಎಸ್‌ಟಿಆರ್–1**ರಲ್ಲಿ ವಿವರಗಳನ್ನು ಒದಗಿಸುವುದಕ್ಕಾಗಿ ಉಪಯೋಗಿಸಿಕೊಳ್ಳಬಹುದು:

ಪರಂತು ಒಬ್ಬ ಅನೋಂದಾಯಿತ ಪೂರೈಕೆದಾರನು ಅಥವಾ ಅನೋಂದಾಯಿತ ಸ್ವೀಕರಿಸುವವನು **ನಮೂನೆ ಜಿಎಸ್‌ಟಿ ಇಡಬ್ಲೂಬಿ–01**ರಲ್ಲಿ ಮಾಹಿತಿಯನ್ನು ಒದಗಿಸಿದಾಗ, ಮೊಬೈಲ್ ಸಂಖ್ಯೆ ಅಥವಾ ಮಿಂಚಂಚೆ ಲಭ್ಯವಿದ್ದಲ್ಲಿ, ಆತನಿಗೆ ವಿದ್ಯುನ್ಮಾನ ರೀತಿಯಲ್ಲಿ ತಿಳಿಸತಕ್ಕದ್ದು.

(9) ಈ ನಿಯಮದ ಅಡಿಯಲ್ಲಿ ಇ–ವೇಬಿಲ್ ಸೃಷ್ಟಿಸಲಾಗಿದ್ದು, ಆದರೆ ಸರಕುಗಳು ಸಾಗಾಣಿಕೆಯಾಗಿಲ್ಲದಿರುವುದಾಗಲಿ ಅಥವಾ ಇ–ವೇಬಿಲ್ಲಿನಲ್ಲಿ ಒದಗಿಸಿದ ವಿವರಗಳ ಪ್ರಕಾರ ಸಾಗಾಣಿಕೆಯಾಗಿಲ್ಲದಿರುವುದಾಗಲಿ ಆಗಿದ್ದಲ್ಲಿ, ಇ–ವೇಬಿಲ್ಲನ್ನು, ಸಾಮಾನ್ಯ ಪೋರ್ಟಲ್‌ನಲ್ಲಿ ವಿದ್ಯುನ್ಮಾನ ರೀತಿಯಲ್ಲಿ, ಇ–ವೇಬಿಲ್ಲನ್ನು ಸೃಷ್ಟಿಸಿದ 24 ಘಂಟೆಗಳ ಒಳಗಾಗಿ ರದ್ದುಪಡಿಸಬಹುದು:

ಪರಂತು, ಇ–ವೇಬಿಲ್ಲನ್ನು, ಅದನ್ನು ನಿಯಮ 138ಬಿಯ ಉಪಬಂಧಗಳಿಗೆ ಅನುಸಾರವಾಗಿ ಸಂಚಾರದಲ್ಲಿ ಪರಿಶೀಲಿಸಲಾಗಿದ್ದಲ್ಲಿ, ರದ್ದುಪಡಿಸಬಾರದು:

ಮತ್ತು ಪರಂತು, ಉಪನಿಯಮ (1)ರಡಿಯಲ್ಲಿ ಸೃಷ್ಟಿಯಾದ ವಿಶಿಷ್ಟ ಸಂಖ್ಯೆಯು **ನಮೂನೆ ಜಿಎಸ್‌ಟಿ ಇಡಬ್ಲೂಬಿ–01ರ ಭಾಗ–ಬಿ**ನಲ್ಲಿ ಅಪ್‌ಡೇಷನ್‌ಗಾಗಿ 72 ಘಂಟೆಗಳ ಕಾಲ ಸಿಂಧುವಾಗಿರತಕ್ಕದ್ದು.

(10) ಈ ನಿಯಮದ ಅಡಿಯಲ್ಲಿ ಸೃಷ್ಟಿಸಿದ ಒಂದು ಇ–ವೇಬಿಲ್ಲು ಅಥವಾ ಒಂದು ಕ್ರೋಢೀಕೃತ ಇ–ವೇಬಿಲ್ಲು, ಕೆಳಕಂಡ ಕೋಷ್ಟಕದ ಕಾಲಂ (3)ರಲ್ಲಿ ನಮೂದಿಸಿರುವ ಅವಧಿಗಾಗಿ, ಸಂಬಂಧಿಸಿದ ದಿನಾಂಕದಿಂದ, ಸರಕುಗಳು ಸಾಗಾಣಿಕೆಯಾಗಬೇಕಿರುವ ಅಂಕಣ (2)ರಲ್ಲಿ ನಮೂದಿಸಿರುವ ದೇಶದೊಳಗಿನ ಅಂತರಕ್ಕಾಗಿ ಸಿಂಧುವಾಗಿರತಕ್ಕದ್ದು:–

ಕೋಷ್ಟಕ

ಕ್ರ.ಸಂ	**ಅಂತರ**	**ಸಿಂಧುತ್ವದ ಅವಧಿ**
(1)	**(2)**	**(3)**
1.	100 ಕಿ.ಮೀ. ವರೆಗೆ	ಒಂದು ದಿನ
2.	ತದನಂತರದ ಪ್ರತಿ 100 ಕಿ.ಮೀ ಅಥವಾ ಅದರ ಭಾಗಕ್ಕಾಗಿ	ಒಂದು ಹೆಚ್ಚುವರಿ ದಿನ:

ಪರಂತು ಆಯುಕ್ತರು, ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದ ಸರಕುಗಳ ವರ್ಗಗಳಿಗಾಗಿ ಇ–ವೇಬಿಲ್ಲಿನ ಸಿಂಧುತ್ವದ ಅವಧಿಯನ್ನು ವಿಸ್ತರಿಸಬಹುದು:

ಮತ್ತು ಪರಂತು, ಒಂದು ವಿಶೇಷ ಸ್ವರೂಪದ ಸನ್ನಿವೇಶಗಳ ಅಡಿಯಲ್ಲಿ, ಇ–ವೇಬಿಲ್ಲಿನ ಸಿಂಧುತ್ವದ ಅವಧಿಯ ಒಳಗಾಗಿ ಸರಕುಗಳನ್ನು ಸಾಗಾಣಿಕೆ ಮಾಡಲಾಗದಿದ್ದಲ್ಲಿ, ಸಾಗಾಣಿಕೆದಾರನು **ನಮೂನೆ ಜಿಎಸ್‌ಟಿ ಇಡಬ್ಲೂಬಿ–01**ರ **ಭಾಗ–ಬಿ**ಯಲ್ಲಿ ವಿವರಗಳನ್ನು ಅಪ್‌ಡೇಟ್ ಮಾಡಿದ ನಂತರ ಮತ್ತೊಂದು ಇ–ವೇಬಿಲ್ಲನ್ನು ಸೃಷ್ಟಿಸಬಹುದು.

ವಿವರಣೆ.– ಸದರಿ ನಿಯಮದ ಉದ್ದೇಶಕ್ಕಾಗಿ, **"ಸಂಬಂಧಪಟ್ಟ ದಿನಾಂಕ"** ಎಂದರೆ ಇ–ವೇಬಿಲ್ ಸೃಷ್ಟಿ ಮಾಡಲಾದ ದಿನಾಂಕ ಎಂದು ಅರ್ಥೈಸತಕ್ಕದ್ದು ಮತ್ತು ಸಿಂಧುತ್ವದ ಅವಧಿಯನ್ನು ಇ–ವೇಬಿಲ್ ಸೃಷ್ಟಿ

441

ಮಾಡಲಾದ ಸಮಯದಿಂದ ಎಣಿಕೆಮಾಡಲಾಗುವುದು ಮತ್ತು ಪ್ರತಿ ದಿನವನ್ನು 24 ಘಂಟೆಗಳೆಂದು ಎಣಿಕೆಮಾಡಲಾಗುವುದು.

(11) ಉಪನಿಯಮ (1)ರ ಅಡಿಯಲ್ಲಿ ಸೃಷ್ಟಿಸಿದ ಇ–ವೇಬಿಲ್ಲಿನ ವಿವರಗಳನ್ನು,

(ಎ) **ನಮೂನೆ ಜಿಎಸ್‌ಟಿ ಇಡಬ್ಲೂಬಿ–01ರ ಭಾಗ ಎ**ನಲ್ಲಿ ವಿವರಗಳನ್ನು ಸ್ವೀಕರಿಸುವವನು ಅಥವಾ ಸಾಗಾಣಿಕೆದಾರನು ಒದಗಿಸಿದ್ದಲ್ಲಿ, ಪೂರೈಕೆದಾರನು ನೋಂದಾಯಿತನಾಗಿದ್ದರೆ, ಆತನಿಗೆ,

(ಬಿ) **ನಮೂನೆ ಜಿಎಸ್‌ಟಿ ಇಡಬ್ಲೂಬಿ–01ರ ಭಾಗ ಎ**ನಲ್ಲಿ ವಿವರಗಳನ್ನು ಪೂರೈಕೆದಾರನು ಅಥವಾ ಸಾಗಾಣಿಕೆದಾರನು ಒದಗಿಸಿದ್ದಲ್ಲಿ, ಸ್ವೀಕರಿಸುವವನು ನೋಂದಾಯಿತನಾಗಿದ್ದರೆ, ಆತನಿಗೆ,

ಸಾಮಾನ್ಯ ಪೋರ್ಟಲ್‌ನಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು ಮತ್ತು ಪೂರೈಕೆದಾರನು ಹಾಗೂ ಸ್ವೀಕರಿಸುವವನು ಸಂದರ್ಭಾನುಸಾರವಾಗಿ ಇ–ವೇಬಿಲ್ಲಿನಲ್ಲಿ ಒಳಪಟ್ಟ ಸರಕು ರವಾನೆಯ ತನ್ನ ಅಂಗೀಕಾರ ಅಥವಾ ತಿರಸ್ಕರಿಸಿದುದರ ಬಗ್ಗೆ ತಿಳಿಸತಕ್ಕದ್ದು.

(12) ಉಪನಿಯಮ (11)ರಲ್ಲಿ ಉಲ್ಲೇಖಿಸಲಾದ ಮಾಹಿತಿಯನ್ನು ಒದಗಿಸಲಾದ ವ್ಯಕ್ತಿಯು, ಆತನಿಗೆ ಸಾಮಾನ್ಯ ಪೋರ್ಟಲ್‌ನಲ್ಲಿ ವಿವರಗಳನ್ನು ಲಭ್ಯಗೊಳಿಸಿದ ಎಪ್ಪತ್ತೆರಡು ಘಂಟೆಗಳ ಒಳಗಾಗಿ ತನ್ನ ಅಂಗೀಕಾರ ಅಥವಾ ತಿರಸ್ಕಾರವಾದ ಬಗ್ಗೆ ತಿಳಿಸಿಲ್ಲದಿದ್ದಲ್ಲಿ, ಸದರಿ ವಿವರಗಳನ್ನು ಆತನು ಅಂಗೀಕರಿಸಿದ್ದಾನೆ ಎಂದು ಪರಿಭಾವಿತವಾಗತಕ್ಕದ್ದು.

(13) ಈ ನಿಯಮದ ಅಡಿಯಲ್ಲಿ ಅಥವಾ ಯಾವುದೇ ರಾಜ್ಯದ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳ ನಿಯಮ 138ರ ಅಡಿಯಲ್ಲಿ ಸೃಷ್ಟಿಸಿದ ಇ–ವೇಬಿಲ್ ಪ್ರತಿಯೊಂದು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶದಲ್ಲಿ ಸಿಂಧುವಾಗಿರತಕ್ಕದ್ದು.

(14) ಈ ನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಕೆಳಕಂಡವುಗಳಿಗೆ ಯಾವುದೇ ಇ–ವೇಬಿಲ್ಲನ್ನು ಸೃಷ್ಟಿಸುವುದು ಅಗತ್ಯವಿರುವುದಿಲ್ಲ–

(ಎ) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸರಕುಗಳನ್ನು ಸಾಗಾಣಿಕೆ ಮಾಡುತ್ತಿದ್ದಲ್ಲಿ;

(ಬಿ) ಯಾಂತ್ರೀಕೃತವಲ್ಲದ ಸಾಗಾಣಿಕೆ ವಾಹನದಲ್ಲಿ ಸರಕುಗಳನ್ನು ಸಾಗಾಣಿಕೆ ಮಾಡುತ್ತಿದ್ದಲ್ಲಿ;

(ಸಿ) ಸರಕುಗಳನ್ನು, ಬಂದರು, ವಿಮಾನ ನಿಲ್ದಾಣ, ವಾಯುಯಾನ ಕಾರ್ಗೋ ಸಂಕೀರ್ಣ ಮತ್ತು ಭೂ ಸೀಮಾಸುಂಕ ಠಾಣೆಯಿಂದ ಒಳನಾಡು (ಇನ್‌ಲ್ಯಾಂಡ್) ಕಂಟೈನರ್ ಡಿಪೋ ಅಥವಾ ಒಂದು ಕಂಟೈನರ್ ಸಾಗಾಣಿಕೆ ಠಾಣೆಗೆ ಕಸ್ಟಮ್ಸ್‌ನಿಂದ ತೀರುವೆಗಾಗಿ, ಸಾಗಾಣಿಕೆ ಮಾಡುತ್ತಿದ್ದಲ್ಲಿ;

(ಡಿ) ಸಂಬಂಧಪಟ್ಟ ರಾಜ್ಯದ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳ ನಿಯಮ 138ರ ಉಪನಿಯಮ (14)ರ ಖಂಡ (ಡಿ) ಅಡಿಯಲ್ಲಿ ಅಧಿಸೂಚಿತಗೊಂಡ ಅಂಥ ಪ್ರದೇಶಗಳ ಒಳಗೆ ಚಲನೆ ಮಾಡಲಾಗುತ್ತಿರುವ ಸರಕುಗಳಿಗೆ ಸಂಬಂಧಿಸಿದಂತೆ;

(ಇ) ಕರ್ನಾಟಕ ವಿಶೇಷ ರಾಜ್ಯಪತ್ರ, ಭಾಗ IVಎ, ಸಂಖ್ಯೆ 592, ದಿನಾಂಕ 29ನೇ ಜೂನ್, 2017ರಲ್ಲಿ ಪ್ರಕಟಗೊಂಡು ಕಾಲಕಾಲಕ್ಕೆ ತಿದ್ದುಪಡಿಯಾದ ಕರ್ನಾಟಕ ಸರ್ಕಾರದ ಅಧಿಸೂಚನೆ (02/2017) ಸಂಖ್ಯೆ ಆಇ 48 ಸಿಎಸ್‌ಎಲ್ 2017, ದಿನಾಂಕ 29ನೇ ಜೂನ್, 2017ರಲ್ಲಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ, ಎಣ್ಣೆ ರಹಿತ ಹಿಂಡಿಯನ್ನು ಹೊರತುಪಡಿಸಿ ಸರಕುಗಳನ್ನು ಸಾಗಾಣಿಕೆ ಮಾಡಿದ್ದಲ್ಲಿ;

442

(ಎಫ್) ಸಾಗಾಣಿಕೆ ಮಾಡುವ ಸರಕು, ಮಾನವ ಉಪಭೋಗಕ್ಕಾಗಿ ಮಾಡಿದ ಮದ್ಯ ಪಾನೀಯ, ಕಚ್ಚಾ ತೈಲ, ಹೈಸ್ಪೀಡ್ ಡೀಸೆಲ್, ಮೋಟಾರ್ ಸ್ಪಿರಿಟ್ (ಸಾಮಾನ್ಯವಾಗಿ ಪೆಟ್ರೋಲ್ ಎಂದು ಕರೆಯಲ್ಪಡುವ), ನೈಸರ್ಗಿಕ ಅನಿಲ ಅಥವಾ ಏವಿಯೇಷನ್ ಟರ್ಬೈನ್ ಇಂಧನವಾಗಿದ್ದಲ್ಲಿ; ಮತ್ತು

(ಜಿ) ಸಾಗಾಣಿಕೆಯಾದ ಸರಕುಗಳನ್ನು ಅಧಿನಿಯಮದ ಅನುಸೂಚಿ IIIರಲ್ಲಿ ಪೂರೈಕೆಗಳಲ್ಲ ಎಂದು ಪರಿಗಣಿಸಿದ್ದಲ್ಲಿ.

ವಿವರಣೆ.– ಇ–ವೇಬಿಲ್ಲನ್ನು ಸೃಷ್ಟಿಸುವ ಮತ್ತು ರದ್ದುಪಡಿಸುವ ಸೌಲಭ್ಯವನ್ನು ಎಸ್ಎಂಎಸ್ ಮೂಲಕವೂ ಸಹ ಲಭ್ಯವಾಗುವಂತೆ ಮಾಡಬಹುದು.

ಅನುಬಂಧ

[(ನಿಯಮ 138(14)ನ್ನು ನೋಡುವುದು)]

ಕ್ರ. ಸಂ.	ಸರಕುಗಳ ವಿವರ
(1)	(2)
1	ಗೃಹಬಳಕೆಗಲ್ಲದ ವಿನಾಯಿತಿ ವರ್ಗದ (ಎನ್ಡಿಇಸಿ) ಗ್ರಾಹಕರಿಗೆ ಮತ್ತು ಗೃಹಬಳಕೆಗೆ ಪೂರೈಕೆಗಾಗಿ ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್ಪಿಜಿ)
2	ಪಿಡಿಎಸ್ ಅಡಿಯಲ್ಲಿ ಮಾರಾಟ ಮಾಡಲಾದ ಸೀಮೆಎಣ್ಣೆ
3	ಅಂಚೆ ಇಲಾಖೆಯಿಂದ ಸಾಗಾಣಿಕೆ ಮಾಡಲಾದ ಅಂಚೆ ಬ್ಯಾಗೇಜು
4	ನೈಸರ್ಗಿಕ ಅಥವಾ ಕಲ್ಚರ್ಡ್ ಮುತ್ತುಗಳು ಮತ್ತು ಅಮೂಲ್ಯ ಅಥವಾ ಅರೆ–ಅಮೂಲ್ಯ ಹರಳುಗಳು; ಅಮೂಲ್ಯ ಲೋಹಗಳು ಮತ್ತು ಅಮೂಲ್ಯ ಲೋಹ ಲೇಪಿತವಾದ ಲೋಹಗಳು (ಅಧ್ಯಾಯ–71)
5	ಆಭರಣಗಳು, ಚಿನ್ನದ ಕೆಲಸಗಾರರ ಅಥವಾ ಬೆಳ್ಳಿ ಕೆಲಸಗಾರರ ಪರಿಕರಗಳು ಮತ್ತು ಇತರೇ ವಸ್ತುಗಳು (ಅಧ್ಯಾಯ–71)
6	ಕರೆನ್ಸಿ
7	ಬಳಕೆಮಾಡಿದ ವೈಯಕ್ತಿಕ ಮತ್ತು ಗೃಹಬಳಕೆಯ ವಸ್ತುಗಳು
8	ರೂಪುಗೊಡದ ಹವಳ (0508) ಮತ್ತು ರೂಪು ನೀಡಿರುವ ಹವಳ (9601).

13. ನಿಯಮ 138ಎಯ ತಿದ್ದುಪಡಿ.– ಸದರಿ ನಿಯಮಗಳ ನಿಯಮ 138ಎಯಲ್ಲಿ, ಉಪನಿಯಮ (5)ರಲ್ಲಿ **"**ಏನೇ ಒಳಗೊಂಡಿದ್ದರೂ**"** ಪದಗಳಿಗಾಗಿ **"**ಇದರಲ್ಲಿ ಏನೇ ಒಳಗೊಂಡಿದ್ದರೂ**"** ಪದಗಳನ್ನು 1ನೇ ಫೆಬ್ರವರಿ, 2018ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು.

14. ನಿಯಮ 138ಬಿಯ ತಿದ್ದುಪಡಿ:– ಸದರಿ ನಿಯಮಗಳ ನಿಯಮ 138ಬಿಯಲ್ಲಿ, ಉಪನಿಯಮ (3)ರಲ್ಲಿ, ಪರಂತುಕದಲ್ಲಿ, **"**ನಡೆಸಲಾದ**"** ಪದಗಳಿಗಾಗಿ **"**ಬೇರೆಯವರಿಂದ ನಡೆಸಲಾದ**"** ಪದಗಳನ್ನು 1ನೇ ಫೆಬ್ರವರಿ, 2018ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು.

15. ನಮೂನೆ ಜಿಎಸ್ಟಿ ಆರ್ಎಫ್ಡಿ–01ಎ ನ ತಿದ್ದುಪಡಿ.– ಸದರಿ ನಿಯಮಗಳ **ನಮೂನೆ ಜಿಎಸ್ಟಿ ಆರ್ಎಫ್ಡಿ–01ಎ** ದಲ್ಲಿ,

(ಎ) ವಿವರಪತ್ರ 1ಎ ದ ನಂತರ, ಈ ಕೆಳಗಿನದ್ದನ್ನು ಸೇರಿಸತಕ್ಕದ್ದು, ಅಂದರೆ:–

443

"ವಿವರಪತ್ರ–2 (ನಿಯಮ 89(2)(ಸಿ))

ಮರುಪಾವತಿಯ ವಿಧ: ತೆರಿಗೆಯ ಸಂದಾಯದೊಂದಿಗೆ ಸೇವೆಗಳ ರಫ್ತುಗಳು

(ರೂ. ನಲ್ಲಿ ಮೊತ್ತ)

ಕ್ರ.ಸಂ	ಬೆಲೆಪಟ್ಟಿಯ ವಿವರಗಳು			ಏಕೀಕೃತ ತೆರಿಗೆ		ಉಪಕರ	ಬಿಆರ್‌ಸಿ/ಎಫ್‌ಐಆರ್‌ಸಿ		ಖರ್ಚು ಚೀಟಿ ಒಳಗೊಂಡಿರುವ ಏಕೀಕೃತ ತೆರಿಗೆ ಮತ್ತು ಉಪಕರ ಯಾವುದಾದರು ಇದ್ದರೆ	ಜಮೆ ಚೀಟಿ ಒಳಗೊಂಡಿರುವ ಏಕೀಕೃತ ತೆರಿಗೆ ಮತ್ತು ಉಪಕರ ಯಾವುದಾದರು ಇದ್ದರೆ	ನಿವ್ವಳ ಏಕೀಕೃತ ತೆರಿಗೆ ಮತ್ತು ಉಪಕರ (6+7+10 – 11)
	ಸಂ.	ದಿನಾಂಕ	ಮೌಲ್ಯ	ತೆರಿಗೆದಾಯಕ ಮೌಲ್ಯ	ಮೊತ್ತ		ಸಂ.	ದಿನಾಂಕ			
1	2	3	4	5	6	7	8	9	10	11	12
											]

ವಿವರಪತ್ರ–3

[ನಿಯಮ 89(2)(ಬಿ) ಮತ್ತು 89(2)(ಸಿ)]

ಮರುಪಾವತಿಯ ವಿಧ: ತೆರಿಗೆಯ ಸಂದಾಯವಿಲ್ಲದ ರಫ್ತು (ರೂ. ನಲ್ಲಿ ಮೊತ್ತ)

ಕ್ರ. ಸಂ	ಬೆಲೆಪಟ್ಟಿಯ ವಿವರಗಳು			ಸರಕುಗಳು/ಸೇವೆಗಳು (ಜಿ/ಎಸ್)	ಶಿಪ್ಪಿಂಗ್ ಬಿಲ್/ರಫ್ತಿನ ಬಿಲ್			ಇಜಿಎಮ್ ವಿವರಗಳು		ಬಿಆರ್‌ಸಿ/ಎಫ್‌ಐಆರ್‌ಸಿ	
	ಸಂ.	ದಿನಾಂಕ	ಮೌಲ್ಯ		ಬಂದರು ಕೋಡ್	ಸಂ.	ದಿನಾಂಕ	ಉಲ್ಲೇಖ. ಸಂ.	ದಿನಾಂಕ	ಸಂ.	ದಿನಾಂಕ
1	2	3	4	5	6	7	8	9	10	1	12
											";

(ಬಿ) ವಿವರಪತ್ರ 3ಎ ನ ನಂತರ, ಈ ಕೆಳಗಿನದ್ದನ್ನು ಸೇರಿಸತಕ್ಕದ್ದು, ಅಂದರೆ:–

"ವಿವರಪತ್ರ–4

[ನಿಯಮ 89(2)(ಡಿ) ಮತ್ತು 89(2)(ಇ)]

ಎಸ್‌ಇಝಡ್ ಘಟಕಕ್ಕೆ/ಎಸ್‌ಇಝಡ್ ಅಭಿವೃದ್ದಿದಾರನಿಗೆ ಪೂರೈಕೆಗಳು

ಮರುಪಾವತಿಯ ವಿಧ: ಎಸ್‌ಇಝಡ್ ಘಟಕಕ್ಕೆ/ಎಸ್‌ಇಝಡ್ ಅಭಿವೃದ್ದಿದಾರನಿಗೆ ಪೂರೈಕೆ ಮಾಡಿದುದರ ಕಾರಣದಿಂದಾಗಿ (ತೆರಿಗೆಯ ಸಂದಾಯದ ಮೇಲೆ)

(ರೂ. ನಲ್ಲಿ ಮೊತ್ತ)

ಸ್ವೀಕರಿಸುವವನ ಜಿಎಸ್‌ಟಿ ಐಎನ್	ಬೆಲೆಪಟ್ಟಿಯ ವಿವರಗಳು			ಶಿಪ್ಪಿಂಗ್ ಬಿಲ್/ರಫ್ತಿನ ಬಿಲ್ಲು/ಎಸ್‌ಇಝಡ್ ನಿಂದ ಸಮ್ಮತಿಸಿದ ಬೆಲೆಪಟ್ಟಿ		ಏಕೀಕೃತ ತೆರಿಗೆ		ಉಪಕರ	ಖರ್ಚು ಚೀಟಿ ಒಳಗೊಂಡಿರುವ ಏಕೀಕೃತ ತೆರಿಗೆ ಮತ್ತು ಉಪಕರ ಯಾವುದಾದರು ಇದ್ದರೆ	ಜಮೆ ಚೀಟಿ ಒಳಗೊಂಡಿರುವ ಏಕೀಕೃತ ತೆರಿಗೆ ಮತ್ತು ಉಪಕರ ಯಾವುದಾದರು ಇದ್ದರೆ	ನಿವ್ವಳ ಏಕೀಕೃತ ತೆರಿಗೆ ಮತ್ತು ಉಪಕರ (8+9+10 –11)
	ಸಂ.	ದಿನಾಂಕ	ಮೌಲ್ಯ	ಸಂ.	ದಿನಾಂಕ	ತೆರಿಗೆದಾಯಕ ಮೌಲ್ಯ	ಮೊತ್ತ				
1	2	3	4	5	6	7	8	9	10	11	12
											";

16. ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–01 ಮತ್ತು ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–02ಗಳ ಪ್ರತಿಯೋಜನೆ.– ಸದರಿ ನಿಯಮಗಳ ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–01 ಮತ್ತು ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–02 ಗಳಿಗಾಗಿ, ಈ

444

ಕೆಳಗಿನದ್ದನ್ನು 1ನೇ ಫೆಬ್ರವರಿ, 2018ರಿಂದ ಜಾರಿಗೆ ಬರುವಂತೆ, ಪ್ರತಿಯೋಜಿಸತಕ್ಕದ್ದು, ಅಂದರೆ:–

"ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–01

(ನಿಯಮ 138ನ್ನು ನೋಡಿ)

ಇ–ವೇ ಬಿಲ್

ಇ–ವೇ ಬಿಲ್ ಸಂಖ್ಯೆ :
ಇ–ವೇ ಬಿಲ್ ದಿನಾಂಕ :
ಸೃಷ್ಟಿಸುವ :
ಇಂದ ಸಿಂಧು :
ವರೆಗೆ ಸಿಂಧು ;

ಭಾಗ–ಎ		
ಎ.1	ಪೂರೈಕೆದಾರನ ಜಿಎಸ್‌ಟಿಐಎನ್	
ಎ.2	ಸ್ವೀಕರಿಸುವವನ ಜಿಎಸ್‌ಟಿಐಎನ್	
ಎ.3	ಬಟವಾಡೆಯ ಸ್ಥಳ	
ಎ.4	ಸಾಗಾಣಿಕೆ ದಸ್ತಾವೇಜು ಸಂಖ್ಯೆ	
ಎ.5	ಸಾಗಾಣಿಕೆ ದಸ್ತಾವೇಜು ದಿನಾಂಕ	
ಎ.6	ಸರಕುಗಳ ಮೌಲ್ಯ	
ಎ.7	ಹೆಚ್‌ಎಸ್‌ಎನ್ ಕೋಡ್	
ಎ.8	ಸಾಗಾಣಿಕೆಗೆ ಕಾರಣ	
ಭಾಗ–ಬಿ		
ಬಿ. 1	ವಾಹನ ಸಂಖ್ಯೆ (ರಸ್ತೆ)	
ಬಿ. 2	ಸಾಗಾಣಿಕೆ ದಸ್ತಾವೇಜು ಸಂಖ್ಯೆ	

ಟಿಪ್ಪಣಿಗಳು:

1. ಕಾಲಂ ಎ.7 ರಲ್ಲಿನ ಹೆಚ್‌ಎಸ್‌ಎನ್ ಕೋಡ್‌ನ್ನು, ಹಿಂದಿನ ಹಣಕಾಸು ವರ್ಷದಲ್ಲಿ ಐದು ಕೋಟಿ ರೂಪಾಯಿಗಳ ವರೆಗೆ ವಾರ್ಷಿಕ ವಹಿವಾಟನ್ನು ಹೊಂದಿರುವ ತೆರಿಗೆ ಸಂದಾಯದಾರರು ಕನಿಷ್ಠ ಎರಡು ಅಂಕಿಯ ಮಟ್ಟದಲ್ಲಿ ಮತ್ತು ಹಿಂದಿನ ಹಣಕಾಸು ವರ್ಷದಲ್ಲಿ ಐದು ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ವಾರ್ಷಿಕ ವಹಿವಾಟನ್ನು ಹೊಂದಿರುವ ತೆರಿಗೆ ಸಂದಾಯದಾರರು ನಾಲ್ಕು ಅಂಕಿಯ ಮಟ್ಟದಲ್ಲಿ ಸೂಚಿಸತಕ್ಕದ್ದು.
2. ದಸ್ತಾವೇಜು ಸಂಖ್ಯೆಯು ತೆರಿಗೆ ಬೆಲೆಪಟ್ಟಿ, ಸ್ವೀಕೃತಿಯ ಬಿಲ್, ಬಟವಾಡೆ ಚಲನ್ ಅಥವಾ ಪ್ರವೇಶದ ಬಿಲ್ ಗಳದ್ದಾಗಿರಬಹುದು.
3. ಸಾಗಾಣಿಕೆ ದಸ್ತಾವೇಜು ಸಂಖ್ಯೆಯು ಸರಕುಗಳ ಸ್ವೀಕೃತಿ ಸಂಖ್ಯೆ ಅಥವಾ ರೈಲ್ವೆ ಸ್ವೀಕೃತಿ ಸಂಖ್ಯೆ ಅಥವಾ ವಿಮಾನಯಾನ ಬಿಲ್ ಸಂಖ್ಯೆ ಅಥವಾ ಬಿಲ್ ಆಫ್ ಲೇಡಿಂಗ್ ಸಂಖ್ಯೆಯನ್ನು ಸೂಚಿಸುತ್ತದೆ.
4. ಬಟವಾಡೆಯ ಸ್ಥಳ, ಬಟವಾಡೆ ಸ್ಥಳದ ಪಿನ್ ಕೋಡನ್ನು ಸೂಚಿಸತಕ್ಕದ್ದು.
5. ಸಾಗಾಣಿಕೆಗೆ ಕಾರಣಗಳಿಗಾಗಿ ಕೆಳಕಂಡುವುಗಳಲ್ಲಿ ಒಂದನ್ನು ಆಯ್ಕೆ ಮಾಡತಕ್ಕದ್ದು.

ಕೋಡ್	**ವಿವರಣೆ**
1	ಪೂರೈಕೆ
2	ರಫ್ತು ಅಥವಾ ಆಮದು

445

3	ಮಜೂರಿ ಕೆಲಸ
4	ಎಸ್‌ಕೆಡಿ ಅಥವಾ ಸಿಕೆಡಿ
5	ಸ್ವೀಕರಿಸುವವನು ತಿಳಿದಿಲ್ಲ.
6	ಲೈನ್ ಮಾರಾಟಗಳು
7	ಮಾರಾಟಗಳ ಹಿಂತಿರುಗಿಸುವಿಕೆ
8	ಪ್ರದರ್ಶನ ಅಥವಾ ಜಾತ್ರೆಗಳು
9	ಸ್ವಂತ ಬಳಕೆಗಾಗಿ
10	ಇತರೇ

ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–02

(ನಿಯಮ 138ನ್ನು ನೋಡಿ)

ಕ್ರೋಢೀಕೃತ ಇ–ವೇ ಬಿಲ್

ಕ್ರೋಢೀಕೃತ ಇ–ವೇ ಬಿಲ್ ಸಂಖ್ಯೆ:
ಕ್ರೋಢೀಕೃತ ಇ–ವೇ ಬಿಲ್ ದಿನಾಂಕ:
ಸೃಷ್ಟಿಸುವವ:
ವಾಹನ ಸಂಖ್ಯೆ:

ಇ–ವೇ ಬಿಲ್‌ಗಳ ಸಂಖ್ಯೆ	
ಇ–ವೇ ಬಿಲ್ ಸಂಖ್ಯೆ";	

17. ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–03 ರ ತಿದ್ದುಪಡಿ :– ಸದರಿ ನಿಯಮಗಳ ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–03ರಲ್ಲಿ, ಎರಡು ಸ್ಥಳಗಳಲ್ಲಿ ಇರುವ 'ಯೂಟಿ–ಕೇಂ.ಪ್ರ' ಅಕ್ಷರಗಳಿಗಾಗಿ 'ಕೇಂದ್ರಾಡಳಿತ ಪ್ರದೇಶ' ಪದಗಳನ್ನು 1ನೇ ಫೆಬ್ರವರಿ, 2018ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು.

18. ನಮೂನೆ ಜಿಎಸ್‌ಟಿ ಐಎನ್‌ವಿ–01 ರ ತಿದ್ದುಪಡಿ:– ಸದರಿ ನಿಯಮಗಳ ನಮೂನೆ ಜಿಎಸ್‌ಟಿ ಐಎನ್‌ವಿ–01 ರಲ್ಲಿ, "ಯೂಟಿ–ಕೇಂ.ಪ್ರ' ಅಕ್ಷರಗಳಿಗಾಗಿ 'ಕೇಂದ್ರಾಡಳಿತ ಪ್ರದೇಶ' ಪದಗಳನ್ನು 1ನೇ ಫೆಬ್ರವರಿ, 2018ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

446

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಎನ್)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ: 15.03.2018

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕ ಅಧಿನಿಯಮ ಸಂಖ್ಯೆ 27) ಪ್ರಕರಣ 164 ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಕರ್ನಾಟಕ ಸರಕು ಮತ್ತು ಸೇವೆಗಳ ನಿಯಮಗಳು, 2017 ಅನ್ನು ತಿದ್ದುಪಡಿ ಮಾಡಲು ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಅಂದರೆ:–

ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ– (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ನಾಲ್ಕನೆಯ ತಿದ್ದುಪಡಿ) ನಿಯಮಗಳು, 2018 ಎಂದು ಕರೆಯಬಹುದು.

(2) ಈ ನಿಯಮಗಳ ಉಪಬಂಧಗಳಲ್ಲಿ ಉಪಬಂಧಿಸುದುದನ್ನು ಉಳಿದು, ಕರ್ನಾಟಕ ಸರ್ಕಾರವು ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಿಸಿದ ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ನಿಯಮ 138ರ ಪ್ರತಿಯೋಜನೆ– ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017 (ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ)ರ ನಿಯಮ 138ಕ್ಕಾಗಿ, ಈ ಕೆಳಗಿನದ್ದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"138. ಸರಕುಗಳ ಚಲನೆಗಿಂತ ಮುಂಚಿತವಾಗಿ ಒದಗಿಸಬೇಕಾದ ಮಾಹಿತಿ ಮತ್ತು ಇ–ವೇಬಿಲ್ಲನ್ನು ಸೃಷ್ಟಿಸುವುದು.– (1) ಐವತ್ತು ಸಾವಿರ ರೂಪಾಯಿಗಳ ರವಾನೆ ಮೌಲ್ಯವನ್ನು ಮೀರಿರುವ–

(i) ಒಂದು ಪೂರೈಕೆಗೆ ಸಂಬಂಧಿಸಿದಂತೆ; ಅಥವಾ

(ii) ಪೂರೈಕೆಯನ್ನು ಹೊರತುಪಡಿಸಿದ ಕಾರಣಗಳಿಗಾಗಿ; ಅಥವಾ

(iii) ಒಬ್ಬ ಅನೋಂದಾಯಿತ ವ್ಯಕ್ತಿಯಿಂದ ಒಳಮುಖ ಪೂರೈಕೆಯ ಕಾರಣದಿಂದಾಗಿ,

–ಸರಕುಗಳ ಚಲನೆಯನ್ನು ಉಂಟುಮಾಡುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಅಂಥ ಚಲನೆಯು ಪ್ರಾರಂಭವಾಗುವ ಮುನ್ನ, ಸದರಿ ಸರಕುಗಳಿಗೆ ಸಂಬಂಧಿಸಿದ ಮಾಹಿತಿಯನ್ನು, ನಿರ್ದಿಷ್ಟಪಡಿಸಿದ ಅಂಥ ಇತರೇ ಮಾಹಿತಿಯ ಸಹಿತ, ಸಾಮಾನ್ಯ ಪೋರ್ಟಲ್‌ನಲ್ಲಿ, **ನಮೂನೆ ಜಿಎಸ್‌ಟಿ ಇಡಬ್ಲೂಬಿ–01** ರ **ಭಾಗ–ಎ**ನಲ್ಲಿ, ವಿದ್ಯುನ್ಮಾನ ರೀತಿಯಲ್ಲಿ, ಒದಗಿಸತಕ್ಕದ್ದು ಮತ್ತು ಸದರಿ ಪೋರ್ಟಲ್‌ನಲ್ಲಿ ಒಂದು ವಿಶಿಷ್ಟ ಸಂಖ್ಯೆ ಸೃಷ್ಟಿಯಾಗುವುದು:

ಪರಂತು, ಒಬ್ಬ ಸಾಗಾಣಿಕೆದಾರನು, ಒಬ್ಬ ನೋಂದಾಯಿತ ವ್ಯಕ್ತಿಯಿಂದ ಪಡೆದ ಅಧಿಕರಣೆಯ ಆಧಾರದ ಮೇಲೆ, ಸಂಬಂಧಿಸಿದ ಮಾಹಿತಿಯನ್ನು, ನಿರ್ದಿಷ್ಟಪಡಿಸಿದ ಅಂಥ ಇತರೇ ಮಾಹಿತಿಯ ಸಹಿತ, ಸಾಮಾನ್ಯ ಪೋರ್ಟಲ್‌ನಲ್ಲಿ, **ನಮೂನೆ ಜಿಎಸ್‌ಟಿ ಇಡಬ್ಲೂಬಿ–01** ರ **ಭಾಗ–ಎ**ನಲ್ಲಿ ವಿದ್ಯುನ್ಮಾನ ರೀತಿಯಲ್ಲಿ ಒದಗಿಸಬಹುದು ಮತ್ತು ಸದರಿ ಪೋರ್ಟಲ್‌ನಲ್ಲಿ ಒಂದು ವಿಶಿಷ್ಟ ಸಂಖ್ಯೆ ಸೃಷ್ಟಿಯಾಗುವುದು:

ಅಲ್ಲದೆ ಪರಂತು, ಸಾಗಾಣಿಕೆಯಾಗಬೇಕಾದ ಸರಕುಗಳು, ಒಬ್ಬ ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕ ಇಲ್ಲವೆ ಒಂದು ಕೊರಿಯರ್ ಸಂಸ್ಥೆಯ ಮೂಲಕ ಪೂರೈಕೆಯಾದಲ್ಲಿ, ಸರಕು ರವಾನಿಸುವ ವ್ಯಕ್ತಿಯಿಂದ ಪಡೆದ ಅಧಿಕರಣೆಯ ಆಧಾರದ ಮೇಲೆ, ಸದರಿ ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕ ಇಲ್ಲವೆ ಕೊರಿಯರ್ ಸಂಸ್ಥೆಯು ಮಾಹಿತಿಯನ್ನು ಸಾಮಾನ್ಯ ಪೋರ್ಟಲ್‌ನಲ್ಲಿ, **ನಮೂನೆ ಜಿಎಸ್‌ಟಿ ಇಡಬ್ಲೂಬಿ–01** ರ **ಭಾಗ–ಎ**ನಲ್ಲಿ ವಿದ್ಯುನ್ಮಾನ ರೀತಿಯಲ್ಲಿ ಒದಗಿಸಬಹುದು ಮತ್ತು ಸದರಿ ಪೋರ್ಟಲ್‌ನಲ್ಲಿ ಒಂದು ವಿಶಿಷ್ಟ ಸಂಖ್ಯೆ ಸೃಷ್ಟಿಯಾಗುವುದು:

447

ಮತ್ತು ಪರಂತು, ಒಂದು ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿ ನೆಲೆಗೊಂಡಿರುವ ಒಬ್ಬ ಪ್ರಧಾನಕರ್ತನಿಂದ ಯಾವುದೇ ಇತರ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿ ನೆಲೆಗೊಂಡಿರುವ ಮಜೂರಿ ಕೆಲಸಗಾರನಿಗೆ ಸರಕುಗಳನ್ನು ಕಳುಹಿಸಿದ್ದಲ್ಲಿ, ಪ್ರಧಾನಕರ್ತನು ಅಥವಾ ಮಜೂರಿ ಕೆಲಸಗಾರನು, ಅವನು ನೋಂದಾಯಿತನಾಗಿದ್ದರೆ, ರವಾನೆಯ ಮೌಲ್ಯವನ್ನು ಗಣನೆಗೆ ತೆಗೆದುಕೊಳ್ಳದೆ, ಇ–ವೇ ಬಿಲ್ಲನ್ನು ಸೃಷ್ಟಿಸತಕ್ಕದ್ದು:

ಮತ್ತು ಪರಂತು, ಪ್ರಕರಣ 24ರ ಖಂಡ (i) ಮತ್ತು (ii)ಗಳ ಅಡಿಯಲ್ಲಿ ನೋಂದಣಿ ಪಡೆಯುವ ಅಗತ್ಯತೆಯಿಂದ ವಿನಾಯಿತಗೊಂಡಿರುವ ಒಬ್ಬ ವ್ಯಕ್ತಿಯಿಂದ ಕರಕುಶಲ ಸರಕುಗಳು ಒಂದು ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಿಂದ ಮತ್ತೊಂದು ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶಕ್ಕೆ ಸಾಗಾಣಿಕೆಯಾಗುತ್ತಿದ್ದಲ್ಲಿ, ಸದರಿ ವ್ಯಕ್ತಿಯು, ರವಾನೆಯ ಮೌಲ್ಯವನ್ನು ಗಣನೆಗೆ ತೆಗೆದುಕೊಳ್ಳದೆ, ಇ–ವೇ ಬಿಲ್ಲನ್ನು ಸೃಷ್ಟಿಸತಕ್ಕದ್ದು.

ವಿವರಣೆ 1. ಈ ನಿಯಮದ ಉದ್ದೇಶಕ್ಕಾಗಿ, ಪದಾವಳಿಯಾದ **"ಕರಕುಶಲ ಸರಕುಗಳು"** ಎನ್ನುವುದು, ಭಾರತ ರಾಜ್ಯಪತ್ರ, ಅಸಾಧಾರಣ, ಭಾಗ–II, ಪ್ರಕರಣ 3, ಉಪಪ್ರಕರಣ (i), ಸಂಖ್ಯೆ ಜಿ.ಎಸ್.ಆರ್.1158(ಇ) ದಿನಾಂಕ 15ನೇ ಸೆಪ್ಟಂಬರ್ 2017ರಲ್ಲಿ ಪ್ರಕಟವಾದ ಭಾರತ ಸರ್ಕಾರ, ಆರ್ಥಿಕ ಮಂತ್ರಾಲಯದ ಅಧಿಸೂಚನೆ ಸಂ.32/2017–ಕೇಂದ್ರ ತೆರಿಗೆ ದಿನಾಂಕ: 15–09–2017ರಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರುವುದು.

ವಿವರಣೆ 2: ಈ ನಿಯಮದ ಉದ್ದೇಶಕ್ಕಾಗಿ, ಸರಕುಗಳ ರವಾನೆ ಮೌಲ್ಯವು ಪ್ರಕರಣ 15ರ ಉಪಬಂಧಗಳನ್ವಯ ನಿರ್ಧರಿಸಲ್ಪಟ್ಟ, ಸದರಿ ರವಾನೆಗೆ ಸಂಬಂಧಿಸಿದಂತೆ ನೀಡಲಾದ ಒಂದು ಬೆಲೆಪಟ್ಟಿ, ಒಂದು ಪೂರೈಕೆ ಬಿಲ್ ಅಥವಾ ಸಂದರ್ಭಾನುಸಾರವಾಗಿ, ಒಂದು ಬಟವಾಡೆ ಚಲನ್‌ನಲ್ಲಿ ಘೋಷಿಸಿದ ಮೌಲ್ಯವಾಗಿರುತ್ತದೆ ಮತ್ತು ಹಾಗೂ ದಸ್ತಾವೇಜಿನಲ್ಲಿ ವಿಧಿಸಿದ ಕೇಂದ್ರ ತೆರಿಗೆ, ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶ ತೆರಿಗೆ, ಏಕೀಕೃತ ತೆರಿಗೆ ಮತ್ತು ಉಪಕರ, ಯಾವುದಾದರೂ ಇದ್ದಲ್ಲಿ, ಅವುಗಳನ್ನು ಒಳಗೊಂಡಿರುತ್ತದೆ ಮತ್ತು ಸರಕುಗಳ ವಿನಾಯಿತ ಮತ್ತು ತೆರಿಗೆದಾಯಕ ಪೂರೈಕೆಗಳೆರಡರ ಸಂಬಂಧ ತೆರಿಗೆ ಬೆಲೆಪಟ್ಟಿಯನ್ನು ನೀಡಿದ್ದಲ್ಲಿ, ಸರಕುಗಳ ವಿನಾಯಿತಿ ಪೂರೈಕೆಗಳ ಮೌಲ್ಯವನ್ನು ಒಳಗೊಂಡಿರತಕ್ಕದ್ದಲ್ಲ.

(2) ಸರಕುಗಳ ರವಾನೆದಾರನಾಗಿ ಅಥವಾ ರವಾನೆ ಸ್ವೀಕೃತಿದಾರನಂತೆ ಪೂರೈಕೆಯ ಸ್ವೀಕರಿಸುವವನಾಗಿ, ನೋಂದಾಯಿತ ವ್ಯಕ್ತಿಯು, ಆತನ ಸ್ವಂತ ಸಾಗಾಣಿಕೆ ವಾಹನದಲ್ಲಾಗಲಿ ಅಥವಾ ಬಾಡಿಗೆಯದಾಗಿರಲಿ ಅಥವಾ ಸಾರ್ವಜನಿಕ ಸಾಗಾಣಿಕೆ ವಾಹನದಲ್ಲಾಗಲಿ ರಸ್ತೆಯ ಮೂಲಕ ಸರಕುಗಳ ಸಾಗಾಣಿಕೆಯನ್ನು ಮಾಡಿದ್ದಲ್ಲಿ, ಸದರಿ ವ್ಯಕ್ತಿಯು, **ನಮೂನೆ ಜಿಎಸ್‌ಟಿ ಇಡಬ್ಲೂಬಿ–01 ರ ಭಾಗ–ಬಿ**ನಲ್ಲಿ ಮಾಹಿತಿಯನ್ನು ಒದಗಿಸಿದ ನಂತರ, ಸಾಮಾನ್ಯ ಪೋರ್ಟಲ್‌ನಲ್ಲಿ, ವಿದ್ಯುನ್ಮಾನ ರೀತಿಯಲ್ಲಿ, **ನಮೂನೆ ಜಿಎಸ್‌ಟಿ ಇಡಬ್ಲೂಬಿ–01** ರಲ್ಲಿ ಇ–ವೇಬಿಲ್ಲನ್ನು ಸೃಷ್ಟಿಸಬಹುದು.

(2ಎ) ರೈಲ್ವೆಯ ಮೂಲಕ ಅಥವಾ ವಾಯುಯಾನದ ಅಥವಾ ನೌಕೆಯ ಮೂಲಕವಾಗಲಿ, ಪೂರೈಕೆದಾರನು ಅಥವಾ ಸ್ವೀಕರಿಸುವವನಾಗಿ, ನೋಂದಾಯಿತ ವ್ಯಕ್ತಿಯು ಸರಕುಗಳ ಸಾಗಾಣಿಕೆಯನ್ನು ಮಾಡಿದ್ದಲ್ಲಿ, ಸದರಿ ನೋಂದಾಯಿತ ವ್ಯಕ್ತಿಯು, ಚಲನೆ ಪ್ರಾರಂಭಗೊಳ್ಳುವ ಮೊದಲು ಇಲ್ಲವೆ ಚಲನೆ ಅಂತ್ಯಗೊಂಡ ನಂತರ, **ನಮೂನೆ ಜಿಎಸ್‌ಟಿ ಇಡಬ್ಲೂಬಿ–01** ರ **ಭಾಗ–ಬಿ**ನಲ್ಲಿ ಮಾಹಿತಿಯನ್ನು, ಸಾಮಾನ್ಯ ಪೋರ್ಟಲ್‌ನಲ್ಲಿ ಒದಗಿಸತಕ್ಕದ್ದು:

ಪರಂತು, ರೈಲ್ವೆಯ ಮೂಲಕ ಸರಕುಗಳ ಸಾಗಾಣಿಕೆಯನ್ನು ಮಾಡಿದ್ದಲ್ಲಿ, ಸರಕುಗಳ ಬಿಡುಗಡೆಯ ಸಮಯದಲ್ಲಿ ಸದರಿ ನಿಯಮಗಳಡಿಯಲ್ಲಿ ಅಗತ್ಯವಿರುವ ಇ–ವೇಬಿಲ್‌ನ್ನು ಹಾಜರುಪಡಿಸದ ಹೊರತು, ಅವುಗಳನ್ನು, ರೈಲ್ವೆಯವರು ಬಿಡುಗಡೆ ಮಾಡತಕ್ಕದ್ದಲ್ಲ.

(3) ಉಪನಿಯಮ (2)ರ ಅಡಿಯಲ್ಲಿ ಇ–ವೇ ಬಿಲ್ಲನ್ನು ಸೃಷ್ಟಿಸಿಲ್ಲದಿದ್ದಲ್ಲಿ ಮತ್ತು ರಸ್ತೆಯ ಮೂಲಕ ಸಾಗಾಣಿಕೆಗಾಗಿ ಸರಕುಗಳನ್ನು ಸಾಗಾಣಿಕೆದಾರನ ಕೈಗೊಪ್ಪಿಸಿದ್ದಲ್ಲಿ, ನೋಂದಾಯಿತ ವ್ಯಕ್ತಿಯು, ಸಾಮಾನ್ಯ ಪೋರ್ಟಲ್‌ನಲ್ಲಿ, ಸಾಗಾಣಿಕೆದಾರನಿಗೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸತಕ್ಕದ್ದು ಮತ್ತು ನೋಂದಾಯಿತ ವ್ಯಕ್ತಿಯು **ನಮೂನೆ ಜಿಎಸ್‌ಟಿ ಇಡಬ್ಲೂಬಿ–01**ರ **ಭಾಗ–ಎ**ನಲ್ಲಿ ಒದಗಿಸಿದ ಮಾಹಿತಿಯ ಆಧಾರದ ಮೇಲೆ, ಇ–ವೇ ಬಿಲ್ಲನ್ನು

448

ಸಾಗಾಣಿಕೆದಾರನು ಸದರಿ ಪೋರ್ಟಲ್‌ನಲ್ಲಿ ಸೃಷ್ಟಿಸತಕ್ಕದ್ದು:

ಪರಂತು, ನೋಂದಾಯಿತ ವ್ಯಕ್ತಿ ಅಥವಾ ಸಾಗಾಣಿಕೆದಾರನು, ಆತನ ಆಯ್ಕೆಯಲ್ಲಿ, ರವಾನೆ ಸರಕಿನ ಮೌಲ್ಯ ಐವತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿದ್ದರೂ ಸಹ, ಇ–ವೇ ಬಿಲ್ಲನ್ನು ಸೃಷ್ಟಿಸಬಹುದು ಮತ್ತು ಅದನ್ನು ಕೊಂಡೊಯ್ಯಬಹುದು:

ಮತ್ತೂ ಪರಂತು, ಒಬ್ಬ ಅನೋಂದಾಯಿತ ವ್ಯಕ್ತಿಯಿಂದ, ಆತನ ಸ್ವಂತ ಸಾಗಾಣಿಕೆ ವಾಹನದಲ್ಲಿ ಅಥವಾ ಬಾಡಿಗೆಯದರಲ್ಲಿ ಅಥವಾ ಒಬ್ಬ ಸಾಗಾಣಿಕೆದಾರನ ಮೂಲಕ, ಸಾಗಾಣಿಕೆ ಉಂಟಾದಲ್ಲಿ, ಆತನು ಅಥವಾ ಸಾಗಾಣಿಕೆದಾರನು, ಅವರ ಆಯ್ಕೆಯಲ್ಲಿ, ಸಾಮಾನ್ಯ ಪೋರ್ಟಲ್‌ನಲ್ಲಿ, ಈ ನಿಯಮದಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ, **ನಮೂನೆ ಜಿಎಸ್‌ಟಿ ಇಡಬ್ಲೂಬಿ–01ರಲ್ಲಿ** ಇ–ವೇಬಿಲ್ಲನ್ನು ಸೃಷ್ಟಿಸತಕ್ಕದ್ದು:

ಅಲ್ಲದೆ ಪರಂತು, ಸರಕುಗಳು, ರವಾನೆದಾರನ ವ್ಯವಹಾರ ಸ್ಥಳದಿಂದ ಸಾಗಾಣಿಕೆದಾರನ ವ್ಯವಹಾರ ಸ್ಥಳಕ್ಕೆ ಮುಂದಿನ ಸಾಗಾಣಿಕೆಗಾಗಿ, ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದ ಒಳಗೆ ಐವತ್ತು ಕಿಲೋಮೀಟರುಗಳಿಗಿಂತ ಕಡಿಮೆಯ ದೂರಕ್ಕಾಗಿ ಸಾಗಾಣಿಕೆ ಮಾಡಿದ್ದಲ್ಲಿ, ಪೂರೈಕೆದಾರ ಅಥವಾ ಸ್ವೀಕರಿಸುವವನು ಅಥವಾ ಸಂದರ್ಭಾನುಸಾರವಾಗಿ, ಸಾಗಾಣಿಕೆದಾರ **ನಮೂನೆ ಜಿಎಸ್‌ಟಿ ಇಡಬ್ಲೂಬಿ–01ರ ಭಾಗ–ಬಿ**ನಲ್ಲಿ ಸಾಗಾಣಿಕೆ ವಾಹನದ ವಿವರಗಳನ್ನು ಒದಗಿಸದಿರಬಹುದು.

ವಿವರಣೆ 1– ಈ ಉಪನಿಯಮದ ಉದ್ದೇಶಗಳಿಗಾಗಿ, ಒಬ್ಬ ಅನೋಂದಾಯಿತ ಪೂರೈಕೆದಾರನಿಂದ ನೋಂದಾಯಿತನಾಗಿರುವ ಸ್ವೀಕರಿಸುವವನಿಗೆ ಸರಕುಗಳು ಪೂರೈಕೆಯಾಗಿದ್ದಲ್ಲಿ, ಸರಕುಗಳ ಚಲನೆಯನ್ನು ಪ್ರಾರಂಭಿಸುವ ಸಮಯದಲ್ಲಿ ಸ್ವೀಕರಿಸುವವನು ಗೊತ್ತಿದ್ದರೆ, ಅಂಥ ಸ್ವೀಕರಿಸುವವನಿಂದ ಚಲನೆಯು ಉಂಟಾಗಿದೆ ಎಂದು ಹೇಳತಕ್ಕದ್ದು.

ವಿವರಣೆ 2.–ಉಪನಿಯಮ (3)ರ ಮೂರನೆಯ ಪರಂತುಕ ಮತ್ತು ಉಪನಿಯಮ (5)ರ ಪರಂತುಕದ ಅಡಿಯಲ್ಲಿ ವ್ಯಾಪ್ತವಾದ ಚಲನೆಗಳನ್ನು ಹೊರತುಪಡಿಸಿದಂತೆ **ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–1**ರ **ಭಾಗ–ಬಿ**ಯಲ್ಲಿ ಮಾಹಿತಿಯನ್ನು ಒದಗಿಸದ ಹೊರತು ರಸ್ತೆಯ ಮೂಲಕ ಸರಕುಗಳ ಚಲನೆಗೆ ಇ–ವೇಬಿಲ್ ಸಿಂಧುವಾಗಿರತಕ್ಕದ್ದಲ್ಲ.

(4) ಸಾಮಾನ್ಯ ಪೋರ್ಟಲ್‌ನಲ್ಲಿ ಇ–ವೇ ಬಿಲ್ಲನ್ನು ಸೃಷ್ಟಿಸಿದ ತರುವಾಯ, ಪೂರೈಕೆದಾರನಿಗೆ, ಸ್ವೀಕರಿಸುವವನಿಗೆ ಮತ್ತು ಸಾಗಾಣಿಕೆದಾರನಿಗೆ, ಒಂದು ವಿಶಿಷ್ಟ ಇ–ವೇ ಬಿಲ್ಲಿನ ಸಂಖ್ಯೆಯನ್ನು (ಇಬಿಎನ್) ಸಾಮಾನ್ಯ ಪೋರ್ಟಲ್‌ನಲ್ಲಿ ಲಭ್ಯ ಮಾಡತಕ್ಕದ್ದು.

(5) ಸರಕುಗಳನ್ನು ಒಂದು ಸಾಗಾಣಿಕೆ ವಾಹನದಿಂದ ಮತ್ತೊಂದಕ್ಕೆ ವರ್ಗಾಯಿಸಿದಾಗ, **ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–01**ರ **ಭಾಗ–ಎ**ನಲ್ಲಿ ಮಾಹಿತಿಯನ್ನು ಒದಗಿಸಿದ ರವಾನೆದಾರನು ಅಥವಾ ಸ್ವೀಕರಿಸುವವನು, ಅಥವಾ ಸಾಗಾಣಿಕೆದಾರನು, ಅಂಥ ವರ್ಗಾವಣೆ ಮತ್ತು ಸರಕುಗಳ ಮುಂದಿನ ಚಲನೆಗಿಂತ ಮೊದಲು, ಸಾಗಾಣಿಕೆ ವಾಹನದ ವಿವರಗಳನ್ನು ಇ–ವೇ ಬಿಲ್‌ನಲ್ಲಿ ಸಾಮಾನ್ಯ ಪೋರ್ಟಲ್‌ನಲ್ಲಿ **ನಮೂನೆ ಜಿಎಸ್‌ಟಿ ಇಡಬ್ಲೂಬಿ–01**ರ **ಭಾಗ–ಬಿ**ನಲ್ಲಿ ಅಪ್‌ಡೇಟ್ ಮಾಡತಕ್ಕದ್ದು:

ಪರಂತು, ಸರಕುಗಳು, ಸಾಗಾಣಿಕದಾರನ ವ್ಯವಹಾರ ಸ್ಥಳದಿಂದ ಅಂತಿಮವಾಗಿ ರವಾನೆ ಸ್ವೀಕೃತಿದಾರನ ವ್ಯವಹಾರ ಸ್ಥಳಕ್ಕೆ, ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದ ಒಳಗೆ ಐವತ್ತು ಕಿಲೋಮೀಟರುಗಳಿಗಿಂತ ಕಡಿಮೆಯ ದೂರಕ್ಕಾಗಿ ಸಾಗಾಣಿಕೆ ಮಾಡಿದ್ದಲ್ಲಿ ಇ–ವೇ ಬಿಲ್ಲಿನಲ್ಲಿ ಸಾಗಾಣಿಕೆ ವಾಹನದ ವಿವರಗಳನ್ನು ಅಪ್‌ಡೇಟ್ ಮಾಡದಿರಬಹುದು.

(5ಎ) **ನಮೂನೆ ಜಿಎಸ್‌ಟಿ ಇಡಬ್ಲೂಬಿ–01 ರ ಭಾಗ ಎ** ನಲ್ಲಿ ಮಾಹಿತಿಯನ್ನು ಒದಗಿಸಿದ ರವಾನೆದಾರನು ಅಥವಾ ಸ್ವೀಕರಿಸುವವನು, ಅಥವಾ ಸಾಗಾಣಿಕೆದಾರನು, ಇ–ವೇ ಬಿಲ್ಲಿನ ಸಂಖ್ಯೆಯನ್ನು, ಸರಕುಗಳ ಮುಂದಿನ ಚಲನೆಗಾಗಿ ಮಾಹಿತಿಯನ್ನು **ನಮೂನೆ ಜಿಎಸ್‌ಟಿ ಇಡಬ್ಲೂಬಿ–01**ರ **ಭಾಗ** ಬಿನಲ್ಲಿ ಅಪ್‌ಡೇಟ್ ಮಾಡಲು, ಮತ್ತೊಬ್ಬ

449

ನೋಂದಾಯಿತ ಅಥವಾ ದಾಖಲಿತ ಸಾಗಾಣಿಕೆದಾರನಿಗೆ ನಿಯೋಜಿಸಬಹುದು:

ಪರಂತು, ಒಮ್ಮೆ ಸಾಗಾಣಿಕೆದಾರನು **ನಮೂನೆ ಜಿಎಸ್‌ಟಿ ಇಡಬ್ಲೂಬಿ–01**ರ **ಭಾಗ** ಬಿನಲ್ಲಿ ಸಾಗಾಣಿಕೆಯ ವಿವರಗಳನ್ನು ಅಪ್‌ಡೇಟ್ ಮಾಡಿದ ನಂತರ, **ನಮೂನೆ ಜಿಎಸ್‌ಟಿ ಇಡಬ್ಲೂಬಿ–01**ರ **ಭಾಗ ಎ**ಯಲ್ಲಿ ಮಾಹಿತಿಯನ್ನು ಒದಗಿಸಿದ ರವಾನೆದಾರನು ಅಥವಾ ಸಂದರ್ಭಾನುಸಾರವಾಗಿ ಸ್ವೀಕರಿಸುವವನು, ಬೇರೊಬ್ಬ ಸಾಗಾಣಿಕೆದಾರನಿಗೆ ಇ–ವೇಬಿಲ್ಲಿನ ಸಂಖ್ಯೆಯನ್ನು ನಿಯೋಜಿಸಲು ಅವಕಾಶವಿರುವುದಿಲ್ಲ.

(6) ಉಪನಿಯಮ (1)ರ ಉಪಬಂಧಗಳಿಗೆ ಅನುಸಾರವಾಗಿ ಇ–ವೇಬಿಲ್ಲನ್ನು ಸೃಷ್ಟಿಸಿದ ನಂತರ, ಬಹು ಸರಕು ರವಾನೆಗಳನ್ನು ಒಂದು ಸಾಗಾಣಿಕೆ ವಾಹನದಲ್ಲಿ ಸಾಗಾಣಿಕೆ ಮಾಡಲು ಉದ್ದೇಶಿಸಿದ್ದಲ್ಲಿ, ಸಾಗಾಣಿಕೆದಾರನು, ಅಂಥ ಪ್ರತಿಯೊಂದು ಸರಕು ರವಾನಗೆ ಸಂಬಂಧಿಸಿದಂತೆ ಸೃಷ್ಟಿಸಲಾದ ಇ–ವೇಬಿಲ್ಲುಗಳ ಕ್ರಮ ಸಂಖ್ಯೆಯನ್ನು, ಸಾಮಾನ್ಯ ಪೋರ್ಟಲ್‌ನಲ್ಲಿ ವಿದ್ಯುನ್ಮಾನ ರೀತಿಯಲ್ಲಿ, ಸೂಚಿಸಬಹುದು ಮತ್ತು ಸರಕುಗಳ ಚಲನೆಯ ಮುನ್ನ ಸದರಿ ಸಾಮಾನ್ಯ ಪೋರ್ಟಲ್‌ನಲ್ಲಿ ಕ್ರೋಢೀಕೃತ ಇ–ವೇ ಬಿಲ್ಲನ್ನು ಆತನು **ನಮೂನೆ ಜಿಎಸ್‌ಟಿ ಇಡಬ್ಲೂಬಿ–02**ರಲ್ಲಿ ಸೃಷ್ಟಿಸಬಹುದು.

(7) ಸರಕುಗಳ ರವಾನೆದಾರ ಅಥವಾ ಸ್ವೀಕರಿಸವವನು **ನಮೂನೆ ಜಿಎಸ್‌ಟಿ ಇಡಬ್ಲೂಬಿ–01**ನಲ್ಲಿ ಇ–ವೇ ಬಿಲ್ಲನ್ನು ಸೃಷ್ಟಿಸಿರದಿದ್ದಲ್ಲಿ ಮತ್ತು ಸಾಗಾಣಿಕೆ ವಾಹನದಲ್ಲಿ ಕೊಂಡೊಯ್ಯುತ್ತಿರುವ ಸರಕುಗಳ ಒಟ್ಟು ಮೌಲ್ಯವು ಐವತ್ತು ಸಾವಿರ ರೂಪಾಯಿಗಳಿಗಿಂತ ಹೆಚ್ಚಿದ್ದಲ್ಲಿ, ಸಾಗಾಣಿಕೆದಾರನು, ರೈಲ್ವೆ ವಾಯುಯಾನ ಮತ್ತು ನೌಕೆಯಲ್ಲಿ ಸರಕುಗಳ ಸಾಗಾಣಿಕೆಯನ್ನು ಹೊರತುಪಡಿಸಿದಂತೆ, ಅಂತರ್–ರಾಜ್ಯ ಪೂರೈಕೆಗಳಿಗೆ ಸಂಬಂಧಿಸಿದಂತೆ, ಸರಕುಗಳ ಚಲನೆಯ ಮುನ್ನ, ಸಾಮಾನ್ಯ ಪೋರ್ಟಲ್‌ನಲ್ಲಿ, ಬೆಲೆಪಟ್ಟಿ ಅಥವಾ ಪೂರೈಕೆ ಬಿಲ್ಲು ಅಥವಾ ಸಂದರ್ಭಾನುಸಾರವಾಗಿ ಬಟವಾಡೆ ಚಲನ್ ಆಧಾರದಲ್ಲಿ **ನಮೂನೆ ಜಿಎಸ್‌ಟಿ ಇಡಬ್ಲೂಬಿ–01** ನಲ್ಲಿ ಇ–ವೇಬಿಲ್ಲನ್ನು ಸೃಷ್ಟಿಸತಕ್ಕದ್ದು ಮತ್ತು **ನಮೂನೆ ಜಿಎಸ್‌ಟಿ ಇಡಬ್ಲೂಬಿ–02**ರಲ್ಲಿ ಕ್ರೋಢೀಕೃತ ಇ–ವೇ ಬಿಲ್ಲನ್ನು ಸಹ ಸೃಷ್ಟಿಸಬಹುದು.

ಪರಂತು, ಒಬ್ಬ ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕನಿಂದ ಅಥವಾ ಒಂದು ಕೊರಿಯರ್ ಸಂಸ್ಥೆಯಿಂದ ಸರಕುಗಳ ಸಾಗಾಣಿಕೆಯಾದಲ್ಲಿ, **ನಮೂನೆ ಜಿಎಸ್‌ಟಿ ಇಡಬ್ಲೂಬಿ–01**ರ **ಭಾಗ–ಎ**ಯಲ್ಲಿ ಮಾಹಿತಿಯನ್ನು ಸದರಿ ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕನು ಅಥವಾ ಕೊರಿಯರ್ ಸಂಸ್ಥೆಯು ಒದಗಿಸತಕ್ಕದ್ದು.

(8) **ನಮೂನೆ ಜಿಎಸ್‌ಟಿ ಇಡಬ್ಲೂಬಿ–01** ರ **ಭಾಗ–ಎ**ಯಲ್ಲಿ ಒದಗಿಸಿದ ಮಾಹಿತಿಯನ್ನು ನೋಂದಾಯಿತ ಪೂರೈಕೆದಾರನಿಗೆ ಸಾಮಾನ್ಯ ಪೋರ್ಟಲ್‌ನಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು, ಆತನು ಅದನ್ನು **ನಮೂನೆ ಜಿಎಸ್‌ಟಿಆರ್–1**ರಲ್ಲಿ ವಿವರಗಳನ್ನು ಒದಗಿಸುವುದಕ್ಕಾಗಿ ಉಪಯೋಗಿಸಿಕೊಳ್ಳಬಹುದು:

ಪರಂತು ಒಬ್ಬ ಅನೋಂದಾಯಿತ ಪೂರೈಕೆದಾರನು ಅಥವಾ ಅನೋಂದಾಯಿತ ಸ್ವೀಕರಿಸುವವನು **ನಮೂನೆ ಜಿಎಸ್‌ಟಿ ಇಡಬ್ಲೂಬಿ–01**ರಲ್ಲಿ ಮಾಹಿತಿಯನ್ನು ಒದಗಿಸಿದಾಗ, ಮೊಬೈಲ್ ಸಂಖ್ಯೆ ಅಥವಾ ಮಿಂಚಂಚೆ ಲಭ್ಯವಿದ್ದಲ್ಲಿ, ಆತನಿಗೆ ವಿದ್ಯುನ್ಮಾನ ರೀತಿಯಲ್ಲಿ ತಿಳಿಸತಕ್ಕದ್ದು.

(9) ಈ ನಿಯಮದ ಅಡಿಯಲ್ಲಿ ಇ–ವೇಬಿಲ್ ಸೃಷ್ಟಿಸಲಾಗಿದ್ದು, ಆದರೆ ಸರಕುಗಳು ಸಾಗಾಣಿಕೆಯಾಗಿಲ್ಲದಿರುವುದಾಗಲಿ ಅಥವಾ ಇ–ವೇಬಿಲ್ಲಿನಲ್ಲಿ ಒದಗಿಸಿದ ವಿವರಗಳ ಪ್ರಕಾರ ಸಾಗಾಣಿಕೆಯಾಗಿಲ್ಲದಿರುವುದಾಗಲಿ ಆಗಿದ್ದಲ್ಲಿ, ಇ–ವೇಬಿಲ್ಲನ್ನು, ಸಾಮಾನ್ಯ ಪೋರ್ಟಲ್‌ನಲ್ಲಿ ವಿದ್ಯುನ್ಮಾನ ರೀತಿಯಲ್ಲಿ, ಇ–ವೇಬಿಲ್ಲನ್ನು ಸೃಷ್ಟಿಸಿದ ಇಪ್ಪತ್ತನಾಲ್ಕು ಘಂಟೆಗಳ ಒಳಗಾಗಿ ರದ್ದುಪಡಿಸಬಹುದು:

ಪರಂತು, ಇ–ವೇಬಿಲ್ಲನ್ನು, ಅದನ್ನು ನಿಯಮ 138ಬಿಯ ಉಪಬಂಧಗಳಿಗೆ ಅನುಸಾರವಾಗಿ ಸಂಚಾರದಲ್ಲಿ ಪರಿಶೀಲಿಸಲಾಗಿದ್ದಲ್ಲಿ, ರದ್ದುಪಡಿಸಬಾರದು:

ಮತ್ತು ಪರಂತು, ಉಪನಿಯಮ (1)ರಡಿಯಲ್ಲಿ ಸೃಷ್ಟಿಯಾದ ವಿಶಿಷ್ಟ ಸಂಖ್ಯೆಯು **ನಮೂನೆ ಜಿಎಸ್‌ಟಿ**

450

ಇಡಬ್ಲೂಬಿ–01ರ **ಭಾಗ–ಬಿ**ನಲ್ಲಿ ಅಪ್‌ಡೇಷನ್‌ಗಾಗಿ ಹದಿನೈದು ದಿನಗಳ ಅವಧಿಯವರೆಗೆ ಸಿಂಧುವಾಗಿರತಕ್ಕದ್ದು.

(10) ಈ ನಿಯಮದ ಅಡಿಯಲ್ಲಿ ಸೃಷ್ಟಿಸಿದ ಒಂದು ಇ–ವೇ ಬಿಲ್ಲು ಅಥವಾ ಒಂದು ಕ್ರೋಢೀಕೃತ ಇ–ವೇ ಬಿಲ್ಲು, ಕೆಳಕಂಡ ಕೋಷ್ಟಕದ ಕಾಲಂ (3)ರಲ್ಲಿ ನಮೂದಿಸಿರುವ ಅವಧಿಗಾಗಿ, ಸಂಬಂಧಿಸಿದ ದಿನಾಂಕದಿಂದ, ಸರಕುಗಳು ಸಾಗಾಣಿಕೆಯಾಗಬೇಕಿರುವ ಅಂಕಣ (2)ರಲ್ಲಿ ನಮೂದಿಸಿರುವ ಅಂತರಕ್ಕಾಗಿ ಸಿಂಧುವಾಗಿರತಕ್ಕದ್ದು:–

ಕೋಷ್ಟಕ

ಕ್ರ.ಸಂ	**ಅಂತರ**	**ಸಿಂಧುತ್ವದ ಅವಧಿ**
(1)	**(2)**	**(3)**
1.	100 ಕಿ.ಮೀ ವರೆಗೆ	ಮೀರಿದ ಆಯಾಮದ ಕಾರ್ಗೋವನ್ನು ಹೊರತುಪಡಿಸಿದಂತೆ, ಒಂದು ದಿನ
2.	ತದನಂತರದ, ಪ್ರತಿ 100 ಕಿ.ಮೀ ಅಥವಾ ಅದರ ಭಾಗಕ್ಕಾಗಿ	ಮೀರಿದ ಆಯಾಮದ ಕಾರ್ಗೋವನ್ನು ಹೊರತುಪಡಿಸಿದಂತೆ, ಒಂದು ಹೆಚ್ಚುವರಿ ದಿನ
3.	20 ಕಿ.ಮೀ ವರೆಗೆ	ಮೀರಿದ ಆಯಾಮದ ಕಾರ್ಗೋನ ಸಂದರ್ಭದಲ್ಲಿ, ಒಂದು ದಿನ
4.	ತದನಂತರದ ಪ್ರತಿ 20 ಕಿ.ಮೀ ಅಥವಾ ಅದರ ಭಾಗಕ್ಕಾಗಿ	ಮೀರಿದ ಆಯಾಮದ ಕಾರ್ಗೋನ ಸಂದರ್ಭದಲ್ಲಿ, ಒಂದು ಹೆಚ್ಚುವರಿ ದಿನ

ಪರಂತು ಆಯುಕ್ತರು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದ ಸರಕುಗಳ ವರ್ಗಗಳಿಗಾಗಿ ಇ–ವೇ ಬಿಲ್ಲಿನ ಸಿಂಧುತ್ವದ ಅವಧಿಯನ್ನು ವಿಸ್ತರಿಸಬಹದು:

ಮತ್ತು ಪರಂತು, ಟ್ರಾನ್‌ಷಿಪ್ಮೆಂಟ್ ಸೇರಿದಂತೆ, ಒಂದು ವಿಶೇಷ ಸ್ವರೂಪದ ಸನ್ನಿವೇಶಗಳ ಅಡಿಯಲ್ಲಿ, ಇ–ವೇ ಬಿಲ್ಲಿನ ಸಿಂಧುತ್ವದ ಅವಧಿಯ ಒಳಗಾಗಿ ಸರಕುಗಳನ್ನು ಸಾಗಾಣಿಕೆ ಮಾಡಲಾಗದಿದ್ದಲ್ಲಿ, ಸಾಗಾಣಿಕೆದಾರನು **ನಮೂನೆ ಜಿಎಸ್‌ಟಿ ಇಡಬ್ಲೂಬಿ–01** ರ **ಭಾಗ–ಬಿ** ಯಲ್ಲಿ ವಿವರಗಳನ್ನು ಅಪ್‌ಡೇಟ್ ಮಾಡಿದ ನಂತರ ಸಿಂಧುತ್ವದ ಅವಧಿಯನ್ನು, ಅದು ಅವಶ್ಯವಿದ್ದರೆ, ವಿಸ್ತರಿಸಕೊಳ್ಳಬಹುದು.

ವಿವರಣೆ 1.– ಸದರಿ ನಿಯಮದ ಉದ್ದೇಶಕ್ಕಾಗಿ, **"**ಸಂಬಂಧಪಟ್ಟ ದಿನಾಂಕ**"** ವೆಂದರೆ ಇ–ವೇ ಬಿಲ್ ಸೃಷಿಯಾದ ದಿನಾಂಕ ಮತ್ತು ಸಿಂಧುತ್ವದ ಅವಧಿಯನ್ನು ಇ–ವೇ ಬಿಲ್ ಸೃಷ್ಟಿಯಾದ ಸಮಯದಿಂದ ಎಣಿಕೆಮಾಡಲಾಗುವುದು ಮತ್ತು ಪ್ರತಿ ದಿನವನ್ನು ಇ–ವೇ ಬಿಲ್ ಸೃಷ್ಟಿಯಾದ ದಿನಾಂಕದ ನಂತರ ನಿಕಟಪೂರ್ವ ದಿನದ ಮಧ್ಯರಾತ್ರಿಯಲ್ಲಿ ಅಂತ್ಯಗೊಳ್ಳುವ ಅವಧಿಎಂದು ಎಣಿಕೆ ಮಾಡತಕ್ಕದ್ದು.

ವಿವರಣೆ 2.– ಸದರಿ ನಿಯಮದ ಉದ್ದೇಶಕ್ಕಾಗಿ, **"**ಮೀರಿದ ಆಯಾಮದ ಕಾರ್ಗೋ**"** ಎಂದರೆ ಮೋಟಾರು ವಾಹನ ಕಾಯ್ದೆ, 1988 (ಕೇಂದ್ರ ಕಾಯ್ದೆ 59, 1988) ರ ಅಡಿಯಲ್ಲಿ ಮಾಡಲಾದ ಕೇಂದ್ರ ಮೋಟಾರು ವಾಹನ ನಿಯಮಗಳು, 1989ರ ನಿಯಮ 93ರಲ್ಲಿ ನಿಯಮಿಸಲಾದ ಆಯಾಮಗಳ ಮಿತಿಗಳನ್ನು ಮೀರಿದ ಮತ್ತು ಒಂದೇ ಅವಿಭಾಜ್ಯ ಘಟಕವಾಗಿ ಕೊಂಡೊಯ್ಯುತ್ತಿರುವ ಸರಕು ಎಂದು ಅರ್ಥೈಸತಕ್ಕದ್ದು.

(11) ಈ ನಿಯಮದ ಅಡಿಯಲ್ಲಿ ಸೃಷ್ಟಿಸಿದ ಇ–ವೇ ಬಿಲ್ಲಿನ ವಿವರಗಳನ್ನು,

(ಎ) **ನಮೂನೆ ಜಿಎಸ್‌ಟಿ ಇಡಬ್ಲೂಬಿ–01** ರ **ಭಾಗ ಎ** ನಲ್ಲಿ ವಿವರಗಳನ್ನು ಸ್ವೀಕರಿಸುವವನು ಅಥವಾ ಸಾಗಾಣಿಕೆದಾರನು ಒದಗಿಸಿದ್ದಲ್ಲಿ, ಪೂರೈಕೆದಾರನು ನೋಂದಾಯಿತನಾಗಿದ್ದರೆ, ಆತನಿಗೆ,

(ಬಿ) **ನಮೂನೆ ಜಿಎಸ್‌ಟಿ ಇಡಬ್ಲೂಬಿ–01** ರ **ಭಾಗ ಎ** ನಲ್ಲಿ ವಿವರಗಳನ್ನು ಪೂರೈಕೆದಾರನು ಅಥವಾ ಸಾಗಾಣಿಕೆದಾರನು ಒದಗಿಸಿದ್ದಲ್ಲಿ, ಸ್ವೀಕರಿಸುವವನು ನೋಂದಾಯಿತನಾಗಿದ್ದರೆ, ಆತನಿಗೆ,

451

ಸಾಮಾನ್ಯ ಪೋರ್ಟಲ್‌ನಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು ಮತ್ತು ಪೂರೈಕೆದಾರನು ಹಾಗೂ ಸ್ವೀಕರಿಸುವವನು ಸಂದರ್ಭಾನುಸಾರವಾಗಿ ಇ–ವೇ ಬಿಲ್ಲಿನಿಂದ ವ್ಯಾಪ್ತವಾದ ಸರಕು ರವಾನೆಯ ತನ್ನ ಅಂಗೀಕಾರ ಅಥವಾ ತಿರಸ್ಕರಿಸಿದುದರ ಬಗ್ಗೆ ತಿಳಿಸತಕ್ಕದ್ದು.

(12) ಉಪನಿಯಮ (11) ರಲ್ಲಿ ಉಲ್ಲೇಖಿಸಲಾದ ಸ್ವೀಕರಿಸುವವನು, ಆತನಿಗೆ ಸಾಮಾನ್ಯ ಪೋರ್ಟಲ್‌ನಲ್ಲಿ ವಿವರಗಳನ್ನು ಲಭ್ಯಗೊಳಿಸಿದ ಎಪ್ಪತ್ತೆರಡು ಗಂಟೆಗಳ ಒಳಗಾಗಿ ಅಥವಾ ಸರಕುಗಳ ಬಟವಾಡೆಯ ಸಮಯ, ಇವುಗಳಲ್ಲಿ ಯಾವುದು ಮುನ್ನವೋ, ತನ್ನ ಅಂಗೀಕಾರ ಅಥವಾ ತಿರಸ್ಕಾರವಾದ ಬಗ್ಗೆ ತಿಳಿಸಿಲ್ಲದಿದ್ದಲ್ಲಿ, ಸದರಿ ವಿವರಗಳನ್ನು ಆತನು ಅಂಗೀಕರಿಸಿದ್ದಾನೆ ಎಂದು ಪರಿಭಾವಿತವಾಗತಕ್ಕದ್ದು.

(13) ಈ ನಿಯಮಗಳು ಅಥವಾ ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳ ಅಥವಾ ಯಾವುದೇ ಇತರ ರಾಜ್ಯದ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳ ನಿಯಮ 138ರ ಅಡಿಯಲ್ಲಿ ಸೃಷ್ಟಿಸಿದ ಇ–ವೇಬಿಲ್ ರಾಜ್ಯದಲ್ಲಿ ಸಿಂಧುವಾಗಿರತಕ್ಕದ್ದು.

(14) ಈ ನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಕೆಳಕಂಡುವುಗಳಿಗೆ ಯಾವುದೇ ಇ–ವೇ ಬಿಲ್ಲನ್ನು ಸೃಷ್ಟಿಸುವುದು ಅಗತ್ಯವಿರತಕ್ಕದ್ದಲ್ಲ–

(ಎ) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸರಕುಗಳನ್ನು ಸಾಗಾಣಿಕೆ ಮಾಡುತ್ತಿದ್ದಲ್ಲಿ;

(ಬಿ) ಯಾಂತ್ರೀಕೃತವಲ್ಲದ ಸಾಗಾಣಿಕೆ ವಾಹನದಲ್ಲಿ, ಸರಕುಗಳನ್ನು ಸಾಗಾಣಿಕೆ ಮಾಡುತ್ತಿದ್ದಲ್ಲಿ;

(ಸಿ) ಸರಕುಗಳನ್ನು, ಕಸ್ಟಂಸ್ ಪೋರ್ಟ್, ವಿಮಾನ ನಿಲ್ದಾಣ, ವಾಯುಯಾನ ಕಾರ್ಗೋ ಸಂಕೀರ್ಣ ಮತ್ತು ಭೂ ಸೀಮಾಸುಂಕ ಠಾಣೆಯಿಂದ ಒಳನಾಡು (ಇನ್‌ಲ್ಯಾಂಡ್) ಕಂಟೈನರ್ ಡಿಪೋ ಅಥವಾ ಒಂದು ಕಂಟೈನರ್ ಸಾಗಾಣಿಕೆ ಠಾಣೆಗೆ ಕಸ್ಟಂಸ್‌ನಿಂದ ತೀರುವೆಗಾಗಿ, ಸಾಗಾಣಿಕೆ ಮಾಡುತ್ತಿದ್ದಲ್ಲಿ;

(ಡಿ) ರಾಜ್ಯದೊಳಗಿನ ಅಂಥ ಪ್ರದೇಶದೊಳಗೆ ಅಂಥ ಸರಕುಗಳ ಚಲನೆಗೆ ಸಂಬಂಧಿಸಿದಂತೆ ಮತ್ತು ಕೇಂದ್ರ ತೆರಿಗೆಯ ಪ್ರಧಾನ ಮುಖ್ಯ ಆಯುಕ್ತರು ಅಥವಾ ಮುಖ್ಯ ಆಯುಕ್ತರೊಂದಿಗೆ ಸಮಾಲೋಚನೆ ಮಾಡಿ ಆಯುಕ್ತರು ನಿರ್ದಿಷ್ಟಪಡಿಸಿದ ಷರತ್ತುಗಳಿಗೆ ಒಳಪಟ್ಟು ಅಧಿಸೂಚಿಸಿದ ಮೊತ್ತಕ್ಕೆ ಮೀರದ ಸರಕುಗಳ ಮೌಲ್ಯಕ್ಕೆ ಸಂಬಂಧಿಸಿದಂತೆ ಸರಕುಗಳನ್ನು ಸಾಗಾಣಿಕೆ ಮಾಡುತ್ತಿದ್ದಲ್ಲಿ;

(ಇ) ಕರ್ನಾಟಕ ರಾಜ್ಯಪತ್ರ, ಅಸಾಧಾರಣ, ಭಾಗ IV(ಎ), ಸಂಖ್ಯೆ 592 ದಿನಾಂಕ 29ನೇ ಜೂನ್, 2017 ರಲ್ಲಿ ಪ್ರಕಟಗೊಂಡು ಕಾಲಕಾಲಕ್ಕೆ ತಿದ್ದುಪಡಿಗೊಳಪಟ್ಟ ಕರ್ನಾಟಕ ಸರ್ಕಾರದ ಅಧಿಸೂಚನೆ (02/2017) ಸಂಖ್ಯೆ ಆಇ 48 ಸಿಎಸ್‌ಎಲ್ 2017 ದಿನಾಂಕ 29ನೇ ಜೂನ್, 2017ಗೆ ಸೇರಿಸಲಾದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ, ಎಣ್ಣೆ ರಹಿತ ಹಿಂಡಿಯನ್ನು ಹೊರತುಪಡಿಸಿ ಸರಕುಗಳನ್ನು ಸಾಗಾಣಿಕೆ ಮಾಡಿದ್ದಲ್ಲಿ;

(ಎಫ್) ಸಾಗಾಣಿಕೆ ಮಾಡುವ ಸರಕು, ಮಾನವ ಉಪಭೋಗಕ್ಕಾಗಿ ಮಾಡಿದ ಮದ್ಯ ಪಾನೀಯ, ಕಚ್ಚಾ ತೈಲ, ಹೈಸ್ಪೀಡ್ ಡೀಸೆಲ್, ಮೋಟಾರ್ ಸ್ಪಿರಿಟ್ (ಸಾಮಾನ್ಯವಾಗಿ ಹೆಸರಿಸಿದಂತೆ ಪೆಟ್ರೋಲ್), ನೈಸರ್ಗಿಕ ಅನಿಲ ಅಥವಾ ಏವಿಯೇಷನ್ ಟರ್ಬೈನ್ ಇಂಧನ ವಾಗಿದ್ದಲ್ಲಿ,

(ಜಿ) ಅಧಿನಿಯಮದ ಅನುಸೂಚಿ IIIರಲ್ಲಿ ಪೂರೈಕೆಗಳಲ್ಲ ಎಂದು ಸಾಗಾಣಿಕೆಯಾದ ಸರಕುಗಳನ್ನು ಎಂದು ಪರಿಗಣಿಸಿದ್ದಲ್ಲಿ,

(ಎಚ್) ಸಾಗಾಣಿಕೆಯಾಗುತ್ತಿರುವ ಸರಕುಗಳು,

452

(i) ಕಸ್ಟಂಸ್‌ನ ಬಾಂಡ್ ಅಡಿಯಲ್ಲಿ ಒಂದು ಒಳನಾಡು (ಇನ್‌ಲ್ಯಾಂಡ್) ಕಂಟೈನರ್ ಡಿಪೋ ಅಥವಾ ಒಂದು ಕಂಟೈನರ್ ಸಾಗಾಣಿಕೆ ಠಾಣೆಯಿಂದ ಕಸ್ಟಂಸ್ ಪೋರ್ಟ್, ವಿಮಾನ ನಿಲ್ದಾಣ, ವಾಯುಯಾನ ಕಾರ್ಗೋ ಸಂಕೀರ್ಣ ಮತ್ತು ಭೂ ಸೀಮಾಸುಂಕ ಠಾಣೆಗೆ, ಅಥವಾ ಒಂದು ಸೀಮಾಸುಂಕ ಠಾಣೆಯಿಂದ ಅಥವಾ ಒಂದು ಕಸ್ಟಂಸ್ ಪೋರ್ಟ್ ನಿಂದ ಮತ್ತೊಂದು ಸೀಮಾಸುಂಕ ಠಾಣೆ ಅಥವಾ ಕಸ್ಟಂಸ್ ಪೋರ್ಟ್‌ಗೆ ಸಾಗಿಸಲಾಗುತ್ತಿದ್ದಲ್ಲಿ; ಅಥವಾ

(ii) ಕಸ್ಟಂಸ್ ಮೇಲುಸ್ತುವಾರಿಯಲ್ಲಿ ಅಥವಾ ಸೀಮಾಸುಂಕ ಮುದ್ರೆಯಡಿಯಲ್ಲಿ ಸಾಗಿಸಲಾಗುತ್ತಿದ್ದಲ್ಲಿ;

(ಐ) ಸಾಗಾಣಿಕೆಯಾಗುತ್ತಿರುವ ಸರಕುಗಳು, ನೇಪಾಳ್ ಅಥವಾ ಭೂತಾನ್ ಗೆ ಅಥವಾ ಇಂದ ಟ್ರಾನ್ಸಿಟ್ ಕಾರ್ಗೊ ಆಗಿದ್ದಾಗ;

(ಜೆ) ಸಾಗಾಣಿಕೆಯಾಗುತ್ತಿರುವ ಸರಕುಗಳು, ಕರ್ನಾಟಕ ವಿಶೇಷ ರಾಜ್ಯಪತ್ರ, ಭಾಗ IVಎ, ಸಂಖ್ಯೆ 597, ದಿನಾಂಕ 29ನೇ ಜೂನ್ 2017ರಲ್ಲಿ ಪ್ರಕಟಗೊಂಡ, ಕಾಲಕಾಲಕ್ಕೆ ತಿದ್ದುಪಡಿಗೊಂಡಂತೆ, ಕರ್ನಾಟಕ ಸರ್ಕಾರದ ಅಧಿಸೂಚನೆ (07/2017) ಸಂಖ್ಯೆ ಆಇ 48 ಸಿಎಸ್‌ಎಲ್ 2017 ದಿನಾಂಕ 29ನೇ ಜೂನ್ 2017ರಡಿಯಲ್ಲಿ ಮತ್ತು ಕರ್ನಾಟಕ ವಿಶೇಷ ರಾಜ್ಯಪತ್ರ, ಭಾಗ IVಎ, ಸಂಖ್ಯೆ 896, ದಿನಾಂಕ 21ನೇ ಸೆಪ್ಟಂಬರ್ 2017ರಲ್ಲಿ ಪ್ರಕಟಗೊಂಡ, ಕಾಲಕಾಲಕ್ಕೆ ತಿದ್ದುಪಡಿಗೊಂಡಂತೆ, ಕರ್ನಾಟಕ ಸರ್ಕಾರದ ಅಧಿಸೂಚನೆ (26/2017) ಸಂಖ್ಯೆ ಆಇ 48 ಸಿಎಸ್‌ಎಲ್ 2017 ದಿನಾಂಕ 21ನೇ ಸೆಪ್ಟಂಬರ್ 2017 ರಡಿಯಲ್ಲಿ ತೆರಿಗೆಯಿಂದ ವಿನಾಯಿತಿಯಾಗಿದ್ದಾಗ;

(ಕೆ) ರಕ್ಷಣಾ ಮಂತ್ರಾಲಯದಡಿಯಲ್ಲಿನ ರಕ್ಷಾ ರಚನೆಯು, ರವಾನೆದಾರ ಅಥವಾ ಸ್ವೀಕರಿಸುವವನಾಗಿ, ಸರಕುಗಳ ಚಲನೆಗೆ ಕಾರಣವಾದಾಗ;

(ಎಲ್) ಸರಕಾರ ಅಥವಾ ಸ್ಥಳೀಯ ಪ್ರಾಧಿಕಾರವು, ರೈಲು ಮೂಲಕ ಸರಕು ಸಾಗಾಣಿಕೆಗೆ ಸರಕುಗಳ ರವಾನೆದಾರರಾಗಿದ್ದಾಗ;

(ಎಮ್) ಸರಕುಗಳ ಖಾಲಿ ಕಂಟೈನರ್‌ಗಳ ಸಾಗಾಣಿಕೆಯಾಗುವಾಗ;

(ಎನ್) ಸರಕುಗಳ ಚಲನೆಯೊಂದಿಗೆ ನಿಯಮ 55ರನ್ವಯ ನೀಡಲಾದ ಬಟವಡೆ ಚಲನ್ ಜೊತೆಗೂಡಿರಬೇಕೆಂಬ ಷರತ್ತಿಗೆ ಒಳಪಟ್ಟು, ಸರಕುಗಳ ರವಾನೆದಾರರ ವ್ಯವಹಾರ ಸ್ಥಳದಿಂದ ತೂಕಮಾಪನಕ್ಕಾಗಿ ಇಪ್ಪತ್ತು ಕಿ.ಮೀ. ದೂರದವರೆಗೆ ತೂಕಮಾಪನಾ ಕೇಂದ್ರಕ್ಕೆ ಅಥವಾ ತೂಕಮಾಪನಾ ಕೇಂದ್ರದಿಂದ ಸದರಿ ರವಾನೆದಾರರ ವ್ಯವಹಾರ ಸ್ಥಳಕ್ಕೆ ಸರಕುಗಳನ್ನು ಸಾಗಾಣಿಕೆ ಮಾಡಿದಾಗ.

ವಿವರಣೆ.– ಇ–ವೇ ಬಿಲ್ಲನ್ನು ಸೃಷ್ಟಿಸುವ, ರದ್ದುಪಡಿಸುವ, ಅಪ್‌ಡೇಷನ್ ಮಾಡುವ ಮತ್ತು ನಿಯೋಜಿಸುವ ಸೌಲಭ್ಯವನ್ನು ಪೂರೈಕೆದಾರ, ಸ್ವೀಕರಿಸುವವನು ಮತ್ತು ಸಂದರ್ಭಾನುಸಾರವಾಗಿ, ಸಾಗಾಣಿಕೆದಾರನಿಗೆ ಎಸ್‌ಎಂಎಸ್ ಮೂಲಕವೂ ಲಭ್ಯವಾಗುವಂತೆ ಮಾಡತಕ್ಕದ್ದು.

ಅನುಬಂಧ

[(ನಿಯಮ 138(14) ನ್ನು ನೋಡುವುದು)]

ಕ್ರ. ಸಂ.	**ಸರಕುಗಳ ವಿವರ**
(1)	**(2)**
1	ಗೃಹಬಳಕೆಗಲ್ಲದ ವಿನಾಯಿತಿ ವರ್ಗದ (ಎನ್‌ಡಿಇಸಿ) ಗ್ರಾಹಕರು ಮತ್ತು ಗೃಹಬಳಕೆಯ ಪೂರೈಕೆಗೆ ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ)
2	ಪಿಡಿಎಸ್ ಅಡಿಯಲ್ಲಿ ಮಾರಾಟ ಮಾಡಲಾದ ಸೀಮೆಎಣ್ಣೆ

453

3	ಅಂಚೆ ಇಲಾಖೆಯಿಂದ ಸಾಗಾಣಿಕೆ ಮಾಡಲಾದ ಅಂಚೆ ಬ್ಯಾಗೇಜುಗಳು
4	ನೈಸರ್ಗಿಕ ಅಥವಾ ಕಲ್ಚರ್ಡ್ ಮುತ್ತುಗಳು ಮತ್ತು ಅಮೂಲ್ಯ ಅಥವಾ ಅರೆ ಅಮೂಲ್ಯ ಹರಳುಗಳು; ಅಮೂಲ್ಯ ಲೋಹಗಳು ಮತ್ತು ಅಮೂಲ್ಯ ಲೋಹ ಲೇಪಿತವಾದ ಲೋಹಗಳು (ಅಧ್ಯಾಯ–71)
5	ಆಭರಣಗಳು, ಚಿನ್ನದ ಕೆಲಸಗಾರರ ಅಥವಾ ಬೆಳ್ಳಿ ಕೆಲಸಗಾರರ ಪರಿಕರಗಳು ಮತ್ತು ಇತರೇ ವಸ್ತುಗಳು (ಅಧ್ಯಾಯ–71)
6	ಕರೆನ್ಸಿ
7	ಬಳಕೆಮಾಡಿದ ವೈಯಕ್ತಿಕ ಮತ್ತು ಗೃಹಬಳಕೆಯ ವಸ್ತುಗಳು
8	ರೂಪುಗೊಡದ ಹವಳ (0508) ಮತ್ತು ರೂಪು ನೀಡಿರುವ ಹವಳ (9601)”;

3. ನಿಯಮ 138ಎ ಯ ಪ್ರತಿಯೋಜನೆ :– ಸದರಿ ನಿಯಮಗಳ ನಿಯಮ 138ಎ ಗಾಗಿ, ಈ ಕೆಳಗಿನದ್ದನ್ನು ಪ್ರತಿಯೋಜಿಸತಕ್ಕದು, ಅಂದರೆ:–

“138ಎ.– ಸಾಗಾಣಿಕೆ ವಾಹನದ ಪ್ರಭಾರದಲ್ಲಿರುವ ವ್ಯಕ್ತಿಯು ತೆಗೆದುಕೊಂಡು ಹೋಗಬಹುದಾದ ದಸ್ತಾವೇಜುಗಳು ಮತ್ತು ಸಾಧನಗಳು.– (1) ಸಾಗಾಣಿಕೆ ವಾಹನದ ಪ್ರಭಾರದಲ್ಲಿರುವ ವ್ಯಕ್ತಿಯು ಕೆಳಕಂಡವುಗಳನ್ನು ಕೊಂಡೊಯ್ಯತಕ್ಕದ್ದು–

(ಎ) ಬೆಲೆಪಟ್ಟಿ ಅಥವಾ ಪೂರೈಕೆಯ ಬಿಲ್ಲು ಅಥವಾ ಸಂದರ್ಭಾನುಸಾರವಾಗಿ ಬಟವಾಡೆ ಚಲನ್: ಮತ್ತು

(ಬಿ) ಭೌತಿಕ ರೂಪದಲ್ಲಿನ ಇ–ವೇಬಿಲ್ಲಿನ ಒಂದು ಪ್ರತಿ ಅಥವಾ ವಿದ್ಯುನ್ಮಾನ ರೂಪದ ಅಥವಾ ಆಯುಕ್ತರಿಂದ ಅಧಿಸೂಚಿಸಬಹುದಾದ ಅಂಥ ವಿಧಾನದಲ್ಲಿ ಸಾಗಾಣಿಕೆ ವಾಹನಕ್ಕೆ ಅಳವಡಿಸಲಾದ ರೇಡಿಯೋ ಆವೃತ್ತಿ ಗುರುತು ಸಾಧನಕ್ಕೆ ಮ್ಯಾಪ್ ಮಾಡಿರುವ ಇ–ವೇಬಿಲ್ಲಿನ ಸಂಖ್ಯೆ;

ಪರಂತು, ಈ ಉಪನಿಯಮದ ಖಂಡ (ಬಿ)ಯಲ್ಲಿ ಒಳಗೊಂಡಿರುವ ಯಾವುದೂ ರೈಲು ಅಥವಾ ವಿಮಾನ ಅಥವಾ ನೌಕೆಯ ಮೂಲಕ ಆಗುವ ಸರಕುಗಳ ಚಲನೆಯ ಸಂದರ್ಭದಲ್ಲಿ ಅನ್ವಯಿಸತಕ್ಕದ್ದಲ್ಲ.

(2) ಒಬ್ಬ ನೋಂದಾಯಿತ ವ್ಯಕ್ತಿಯು, ತಾನು ನೀಡಿದ ಒಂದು ತೆರಿಗೆ ಬೆಲೆಪಟ್ಟಿಯನ್ನು ಸಾಮಾನ್ಯ ಪೋರ್ಟಲ್‌ನಲ್ಲಿ **ನಮೂನೆ ಜಿಎಸ್‌ಟಿ ಐಎನ್‌ವಿ–1ರ**ಲ್ಲಿ ಅಪ್‌ಲೋಡ್ ಮಾಡುವುದರ ಮೂಲಕ ಒಂದು ಬೆಲೆಪಟ್ಟಿಯ ಉಲ್ಲೇಖ ಸಂಖ್ಯೆಯನ್ನು ಸದರಿ ಪೋರ್ಟಲ್‌ನಿಂದ ಪಡೆಯಬಹುದು ಮತ್ತು ಬೆಲೆಪಟ್ಟಿಗೆ ಬದಲಾಗಿ ಅದನ್ನು ಯುಕ್ತ ಅಧಿಕಾರಿಯಿಂದ ಪರಿಶೀಲನೆಗಾಗಿ ಹಾಜರುಪಡಿಸಬಹುದು ಮತ್ತು ಅಂಥ ಸಂಖ್ಯೆಯು ಅಪ್‌ಲೋಡ್ ಮಾಡಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯವರೆಗೆ ಸಿಂಧುವಾಗಿರತಕ್ಕದ್ದು.

(3) ನೋಂದಾಯಿತ ವ್ಯಕ್ತಿಯು ಉಪನಿಯಮ (2)ರ ಅಡಿಯಲ್ಲಿ ಬೆಲೆಪಟ್ಟಿಯನ್ನು ಅಪಲೋಡ್ ಮಾಡಿದ್ದಲ್ಲಿ, **ನಮೂನೆ ಜಿಎಸ್‌ಟಿ ಐಎನ್‌ವಿ–1ರ**ಲ್ಲಿ ಒದಗಿಸಲಾದ ಮಾಹಿತಿಯ ಆಧಾರ ಮೇಲೆ ಸಾಮಾನ್ಯ ಪೋರ್ಟಲ್‌ನಲ್ಲಿ **ನಮೂನೆ ಜಿಎಸ್‌ಟಿ ಇಡಬ್ಲೂಬಿ–01ರ ಭಾಗ–ಎ**ಯಲ್ಲಿನ ಮಾಹಿತಿಯು, ಸ್ವಯಂ–ಜನ್ಯಗೊಳ್ಳತಕ್ಕದ್ದು.

(4) ಆಯುಕ್ತರು, ಅಧಿಸೂಚನೆಯ ಮೂಲಕ, ಸಾಗಾಣಿಕೆದಾರರ ಒಂದು ವರ್ಗವನ್ನು, ರೇಡಿಯೋ ಆವೃತ್ತಿ ಗುರುತು ಸಾಧನವನ್ನು ಪಡೆಯುವಂತೆ ಮತ್ತು ಸದರಿ ಸಾಧನವನ್ನು ಸಾಗಾಣಿಕೆ ವಾಹನಕ್ಕೆ ಅಳವಡಿಸುವಂತೆ ಮತ್ತು ಸರಕುಗಳ ಚಲನೆಗೆ ಮುನ್ನ ರೇಡಿಯೋ ಆವೃತ್ತಿ ಗುರುತು ಸಾಧನಕ್ಕೆ ಇ–ವೇ ಬಿಲ್ಲನ್ನು ಮ್ಯಾಪ್ ಮಾಡುವಂತೆ ಅಗತ್ಯಪಡಿಸಬಹುದು.

(5) ಉಪನಿಯಮ (1)ರ ಖಂಡ (ಬಿ)ಯಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಸನ್ನಿವೇಶಗಳು ಹಾಗೆ ಅಪೇಕ್ಷಿಸಿದಲ್ಲಿ, ಆಯುಕ್ತರು, ಅಧಿಸೂಚನೆಯ ಮೂಲಕ, ಸಾಗಾಣಿಕೆ ವಾಹನದ ಪ್ರಭಾರದಲ್ಲಿರುವ ವ್ಯಕ್ತಿಯನ್ನು ಇ–ವೇ ಬಿಲ್ಲಿಗೆ ಬದಲಾಗಿ ಕೆಳಕಂಡವುಗಳನ್ನು ಕೊಂಡೊಯ್ಯುವಂತೆ ಅಗತ್ಯಪಡಿಸಬಹುದು–

454

(ಎ) ತೆರಿಗೆ ಬೆಲೆಪಟ್ಟಿ ಅಥವಾ ಪೂರೈಕೆಯ ಬಿಲ್ಲು ಅಥವಾ ಪ್ರವೇಶದ ಬಿಲ್ಲು; ಅಥವಾ

(ಬಿ) ಪೂರೈಕೆಯ ರೀತಿಯಿಂದಲ್ಲದ ಇತರೇ ಕಾರಣಗಳಿಗಾಗಿ ಸರಕುಗಳು ಸಾಗಾಣಿಕೆಯಾಗಿದ್ದಲ್ಲಿ, ಒಂದು ಬಟವಾಡೆ ಚಲನ್."

4. ನಿಯಮ 138ಬಿ ಯ ಪ್ರತಿಯೋಜನೆ :– ಸದರಿ ನಿಯಮಗಳ ನಿಯಮ 138ಬಿ ಗಾಗಿ, ಈ ಕೆಳಗಿನದ್ದನ್ನು ಪ್ರತಿಯೋಜಿಸತಕ್ಕದು, ಅಂದರೆ:–

"138ಬಿ. ದಸ್ತಾವೇಜುಗಳು ಮತ್ತು ಸಾಗಾಣಿಕೆ ವಾಹನಗಳ ಪರಿಶೀಲನೆ.– (1) ಆಯುಕ್ತರು ಅಥವಾ ಅವರಿಂದ ಈ ಸಂಬಂಧದಲ್ಲಿ ಅಧಿಕಾರ ಪಡೆದ ಒಬ್ಬ ಅಧಿಕಾರಿಯು, ಸರಕುಗಳ ಎಲ್ಲಾ ಅಂತರ್–ರಾಜ್ಯ ಮತ್ತು ರಾಜ್ಯದೊಳಗಿನ ಚಲನೆಗಾಗಿ ಭೌತಿಕ ರೂಪದಲ್ಲಿರುವ ಅಥವಾ ವಿದ್ಯುನ್ಮಾನ ರೂಪದಲ್ಲಿನ ಇ–ವೇ ಬಿಲ್ಲನ್ನು ಪರಿಶೀಲಿಸುವುದಕ್ಕಾಗಿ ಯಾವುದೇ ಸಾಗಾಣಿಕೆ ವಾಹನವನ್ನು ತಡೆಯಲು ಯುಕ್ತ ಅಧಿಕಾರಿಯನ್ನು ಪ್ರಾಧಿಕೃತಗೊಳಿಸಬಹುದು.

(2) ಸರಕುಗಳ ಚಲನೆ ಪರಿಶೀಲನೆಯನ್ನು ನಡೆಸುವುದು ಅಗತ್ಯವಿರುವ ಸ್ಥಳಗಳಲ್ಲಿ, ಆಯುಕ್ತರು ರೇಡಿಯೋ ಆವೃತ್ತಿ ಗುರುತು ಸಾಧನದ ರೀಡರ್‌ಗಳನ್ನು ಅನುಸ್ಥಾಪಿಸತಕ್ಕದ್ದು ಮತ್ತು ಸದರಿ ಸಾಧನದೊಂದಿಗೆ ಇ–ವೇ ಬಿಲ್ಲನ್ನು ಮ್ಯಾಪ್ ಮಾಡಲಾಗಿದ್ದಲ್ಲಿ, ಅಂಥ ಸಾಧನ ರೀಡರ್‌ಗಳ ಮೂಲಕ ವಾಹನಗಳ ಚಲನೆಯ ಪರಿಶೀಲನೆಯನ್ನು ಮಾಡತಕ್ಕದ್ದು.

(3) ಸಾಗಾಣಿಕೆ ವಾಹನಗಳ ಭೌತಿಕ ತಪಾಸಣೆಯನ್ನು ಆಯಕ್ತರಿಂದ ಅಥವಾ ಅವರಿಂದ ಈ ಸಂಬಂಧದಲ್ಲಿ ಅಧಿಕಾರ ಪಡೆದ ಒಬ್ಬ ಅಧಿಕಾರಿಯಿಂದ ಪ್ರಾಧಿಕೃತನಾದ ಯುಕ್ತ ಅಧಿಕಾರಿಯಿಂದ ನಡೆಸತಕ್ಕದ್ದು.

ಪರಂತು, ತೆರಿಗೆ ತಪ್ಪಿಸುವಿಕೆಯ ನಿರ್ದಿಷ್ಟ ಮಾಹಿತಿಯ ಸ್ವೀಕೃತಿಯ ಮೇರೆಗೆ, ಆಯಕ್ತರಿಂದ ಅಥವಾ ಅವರಿಂದ ಈ ಸಂಬಂಧದಲ್ಲಿ ಅಧಿಕಾರ ಪಡೆದ ಒಬ್ಬ ಅಧಿಕಾರಿಯಿಂದ ಅಗತ್ಯವಿರುವ ಅನುಮೋದನೆಯನ್ನು ಪಡೆದ ನಂತರ, ಯಾವುದೇ ಇತರ ಅಧಿಕಾರಿಯೂ ಸಹ, ಒಂದು ನಿರ್ದಿಷ್ಟ ಸಾಗಾಣಿಕೆ ವಾಹನದ ಭೌತಿಕ ಪರಿಶೀಲನೆಯನ್ನು ಕೈಗೊಳ್ಳಬಹುದು.".

5. ನಿಯಮ 138ಸಿ ಯ ಪ್ರತಿಯೋಜನೆ :– ಸದರಿ ನಿಯಮಗಳ ನಿಯಮ 138ಸಿ ಗಾಗಿ, ಈ ಕೆಳಗಿನದ್ದನ್ನು ಪ್ರತಿಯೋಜಿಸತಕ್ಕದು, ಅಂದರೆ:–

"138ಸಿ. ಸರಕುಗಳ ತಪಾಸಣೆ ಮತ್ತು ಪರಿಶೀಲನೆ.– (1) ಸಂಚಾರದಲ್ಲಿರುವ ಸರಕುಗಳ ಪ್ರತಿಯೊಂದು ತಪಾಸಣೆಯ ಸಾರಾಂಶದ ವರದಿಯನ್ನು, ಯುಕ್ತ ಅಧಿಕಾರಿಯು, ತಪಾಸಣೆಯ ಇಪ್ಪತ್ನಾಲ್ಕು ಗಂಟೆಯ ಒಳಗಾಗಿ, **ನಮೂನೆ ಜಿಎಸ್‌ಟಿ ಇಡಬ್ಲೂಬಿ–03** ರ **ಭಾಗ–ಎ**ಯಲ್ಲಿ ಆನ್‌ಲೈನ್‌ನಲ್ಲಿ ದಾಖಲು ಮಾಡತಕ್ಕದ್ದು ಮತ್ತು ಅಂಥ ತಪಾಸಣೆಯ ಮೂರು ದಿನಗಳ ಒಳಗಾಗಿ **ನಮೂನೆ ಜಿಎಸ್‌ಟಿ ಇಡಬ್ಲೂಬಿ–03** ರ **ಭಾಗ–ಬಿಯಲ್ಲಿ** ಅಂತಿಮ ವರದಿಯನ್ನು ದಾಖಲು ಮಾಡತಕ್ಕದ್ದು.

(2) ಯಾವುದೇ ಸಾಗಾಣಿಕೆ ವಾಹನವನ್ನು ಸಾಗಾಣಿಕೆಯಲ್ಲಿರುವಾಗ ಸರಕುಗಳ ಭೌತಿಕ ಪರಿಶೀಲನೆಯನ್ನು ರಾಜ್ಯದ ಅಥವಾ ಕೇಂದ್ರಾಡಳಿತ ಪ್ರದೇಶದ ಒಳಗೆ ಅಥವಾ ಯಾವುದೇ ಇತರೇ ರಾಜ್ಯದ ಒಂದು ಸ್ಥಳದಲ್ಲಿ ಮಾಡಲಾಗಿದ್ದಲ್ಲಿ, ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿ ಪುನಃ ಸದರಿ ಸಾಗಾಣಿಕೆ ವಾಹನದ ಮುಂದಿನ ಭೌತಿಕ ತಪಾಸಣೆಯನ್ನು, ತರುವಾಯವಾಗಿ ತೆರಿಗೆ ತಪ್ಪಿಸುವಿಕೆಗೆ ಸಂಬಂಧಿಸಿದಂತೆ ನಿರ್ದಿಷ್ಟ ಮಾಹಿತಿ ಲಭ್ಯವಾಗಿರುವುದನ್ನು ಹೊರತುಪಡಿಸಿದಂತೆ, ನಡೆಸತಕ್ಕದ್ದಲ್ಲ.".

6. ನಿಯಮ 138ಡಿ ಯ ಪ್ರತಿಯೋಜನೆ:– ಸದರಿ ನಿಯಮಗಳ ನಿಯಮ 138ಡಿ ಗಾಗಿ, ಈ ಕೆಳಗಿನದ್ದನ್ನು

455

ಪ್ರತಿಯೋಜಿಸತಕ್ಕದು, ಅಂದರೆ:–

"138ಡಿ. ವಾಹನದ ತಡೆಹಿಡಿಯುವಿಕೆಗೆ ಸಂಬಂಧಿಸಿದಂತೆ ಮಾಹಿತಿಯನ್ನು ಅಪ್‌ಲೋಡ್ ಮಾಡುವ ಸೌಲಭ್ಯ.– ಒಂದು ವಾಹನವನ್ನು ಮೂವತ್ತು ನಿಮಿಷಗಳನ್ನು ಮೀರಿದ ಒಂದು ಅವಧಿಗಾಗಿ ಅಡ್ಡಹಾಕಿ ಮತ್ತು ತಡೆಹಿಡಿಯಲಾಗಿದ್ದಲ್ಲಿ, ಸಾಗಾಣಿಕೆದಾರನು, ಸದರಿ ಮಾಹಿತಿಯನ್ನು ಸಾಮಾನ್ಯ ಪೋರ್ಟಲ್‌ನಲ್ಲಿ **ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–04**ರಲ್ಲಿ ಅಪ್‌ಲೋಡ್ ಮಾಡಬಹುದು.".

7. ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–01, ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–02, ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–03, ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–04 ಮತ್ತು ನಮೂನೆ ಜಿಎಸ್‌ಟಿ ಐಎನ್‌ವಿ–01 ಪ್ರತಿಯೋಜನೆ:– ಸದರಿ ನಿಯಮಗಳ ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–01, ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–02, ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–03, ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–04 ಮತ್ತು ನಮೂನೆ ಜಿಎಸ್‌ಟಿ ಐಎನ್‌ವಿ–01ಗಾಗಿ ಈ ಕೆಳಕಂಡ ನಮೂನೆಗಳನ್ನು ಪ್ರತಿಯೋಜಿಸತಕ್ಕದ್ದು.

"ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–01

(ನಿಯಮ 138ನ್ನು ನೋಡಿ)

ಇ–ವೇ ಬಿಲ್

ಇ–ವೇ ಬಿಲ್ ಸಂಖ್ಯೆ :

ಇ–ವೇ ಬಿಲ್ ದಿನಾಂಕ :

ಸೃಷ್ಟಿಸುವವ :

ಇಂದ ಸಿಂಧು :

ವರೆಗೆ ಸಿಂಧು :

	ಭಾಗ–ಎ	
ಎ.1	ಪೂರೈಕೆದಾರನ ಜಿಎಸ್‌ಟಿಐಎನ್	
ಎ.2.	ರವಾನೆಯ ಸ್ಥಳ	
ಎ.3	ಸ್ವೀಕರಿಸುವವನ ಜಿಎಸ್‌ಟಿಐಎನ್	
ಎ.4	ಬಟವಾಡೆಯ ಸ್ಥಳ	
ಎ.5	ದಸ್ತಾವೇಜು ಸಂಖ್ಯೆ	
ಎ.6	ದಸ್ತಾವೇಜು ದಿನಾಂಕ	
ಎ.7	ಸರಕುಗಳ ಮೌಲ್ಯ	
ಎ.8	ಹೆಚ್‌ಎಸ್‌ಎನ್ ಕೋಡ್	
ಎ.9	ಸಾಗಾಣಿಕೆಗೆ ಕಾರಣ	
	ಭಾಗ–ಬಿ	
ಬಿ. 1	ರಸ್ತೆಗಾಗಿ ವಾಹನ ಸಂಖ್ಯೆ	
ಬಿ. 2	ಸಾಗಾಣಿಕೆ ದಸ್ತಾವೇಜು ಸಂಖ್ಯೆ/ ರಕ್ಷಣಾ ವಾಹನ ಸಂಖ್ಯೆ/ ತಾತ್ಕಾಲಿಕ ನೋಂದಣಿ ಸಂಖ್ಯೆ/ ನೇಪಾಳ ಅಥವಾ ಭೂತಾನ ನೋಂದಣಿ ಸಂಖ್ಯೆ	

ಟಿಪ್ಪಣಿಗಳು:

456

1. ಅಂಕಣ ಎ.6ರಲ್ಲಿನ ಹೆಚ್ಎಸ್ಎನ್ ಕೋಡ್‌ನ್ನು, ಹಿಂದಿನ ಹಣಕಾಸು ವರ್ಷದಲ್ಲಿ ಐದು ಕೋಟಿ ರೂಪಾಯಿಗಳವರೆಗೆ ವಾರ್ಷಿಕ ವಹಿವಾಟನ್ನು ಹೊಂದಿರುವ ತೆರಿಗೆ ಸಂದಾಯದಾರರು ಕನಿಷ್ಠ ಎರಡು ಅಂಕಿಯ ಮಟ್ಟದಲ್ಲಿ ಮತ್ತು ಹಿಂದಿನ ಹಣಕಾಸು ವರ್ಷದಲ್ಲಿ ಐದು ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ವಾರ್ಷಿಕ ವಹಿವಾಟನ್ನು ಹೊಂದಿರುವ ತೆರಿಗೆ ಸಂದಾಯದಾರರು ನಾಲ್ಕು ಅಂಕಿಯ ಮಟ್ಟದಲ್ಲಿ ಸೂಚಿಸತಕ್ಕದ್ದು.

2. ದಸ್ತಾವೇಜು ಸಂಖ್ಯೆಯು ತೆರಿಗೆ ಬೆಲೆಪಟ್ಟಿ, ಪೂರೈಕೆಯ ಬಿಲ್, ಬಟವಡೆ ಚಲನ್ ಅಥವಾ ಪ್ರವೇಶ ಬಿಲ್‌ಯದ್ದಾಗಿರಬಹುದು.

3. ಸಾಗಾಣಿಕೆ ದಸ್ತಾವೇಜು ಸಂಖ್ಯೆಯು ಸರಕುಗಳ ಸ್ವೀಕೃತಿ ಸಂಖ್ಯೆ ಅಥವಾ ರೈಲ್ವೆ ಸ್ವೀಕೃತಿ ಸಂಖ್ಯೆ ಅಥವಾ ಫಾರ್ವರ್ಡಿಂಗ್ ಟಿಪ್ಪಣಿ ಸಂಖ್ಯೆ, ಅಥವಾ ರೈಲ್ವೆಯಿಂದ ನೀಡಲಾದ ಪಾರ್ಸಲ್ ವೇ ಬಿಲ್ ಸಂಖ್ಯೆ, ವಿಮಾನಯಾನ ಬಿಲ್ ಸಂಖ್ಯೆ ಅಥವಾ ಬಿಲ್ ಆಫ್ ಲ್ಯಾಡಿಂಗ್ ಸಂಖ್ಯೆಯನ್ನು ಸೂಚಿಸುತ್ತದೆ.

4. ಬಟವಾಡೆಯ ಸ್ಥಳ, ಬಟವಾಡೆ ಸ್ಥಳದ ಪಿನ್ ಕೋಡನ್ನು ಸೂಚಿಸತಕ್ಕದ್ದು.

5. ರವಾನೆಯ ಸ್ಥಳ, ರವಾನೆ ಸ್ಥಳದ ಪಿನ್ ಕೋಡನ್ನು ಸೂಚಿಸತಕ್ಕದ್ದು.

6. ಪೂರೈಕೆದಾರ ಅಥವಾ ಸ್ವೀಕೃತಿದಾರ ಅನೋಂದಾಯಿತನಾಗಿದ್ದಲ್ಲಿ, ಕಾಲಂ ಎ.1 ಅಥವಾ ಸಂದರ್ಭಾನುಸಾರವಾಗಿ, ಎ.3 ರಲ್ಲಿ, "ಯುಆರ್‌ಪಿ" ಅಕ್ಷರಗಳನ್ನು ಭರಿಸುವುದು.

7. ಸಾಗಾಣಿಕೆಗೆ ಕಾರಣಗಳಿಗಾಗಿ ಕೆಳಕಂಡವುಗಳಲ್ಲಿ ಒಂದನ್ನು ಆಯ್ಕೆ ಮಾಡತಕ್ಕದ್ದು.

ಕೋಡ್	**ವಿವರಣೆ**
1	ಪೂರೈಕೆ
2	ರಫ್ತು ಅಥವಾ ಆಮದು
3	ಮಜೂರಿ ಕೆಲಸ
4	ಎಸ್‌ಕೆಡಿ ಅಥವಾ ಸಿಕೆಡಿ
5	ಸ್ವೀಕರಿಸುವವನು ತಿಳಿದಿಲ್ಲ.
6	ಲೈನ್ ಮಾರಾಟಗಳು
7	ಮಾರಾಟಗಳ ಹಿಂತಿರುಗಿಸುವಿಕೆ
8	ಪ್ರದರ್ಶನ ಅಥವಾ ಜಾತ್ರೆಗಳು
9	ಸ್ವಂತ ಬಳಕೆಗಾಗಿ
10	ಇತರೇ

ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–02

(ನಿಯಮ 138ನ್ನು ನೋಡಿ)

ಕ್ರೋಢೀಕೃತ ಇ–ವೇ ಬಿಲ್

ಕ್ರೋಢೀಕೃತ ಇ–ವೇ ಬಿಲ್ ಸಂಖ್ಯೆ :
ಕ್ರೋಢೀಕೃತ ಇ–ವೇ ಬಿಲ್ ದಿನಾಂಕ :
ಸೃಷ್ಟಿಸುವವ :
ವಾಹನ ಸಂಖ್ಯೆ :

ಇ–ವೇ ಬಿಲ್‌ಗಳ ಸಂಖ್ಯೆ	
ಇ–ವೇ ಬಿಲ್ ಸಂಖ್ಯೆ	

457

ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–03

(ನಿಯಮ 138ಸಿಯನ್ನು ನೋಡಿ)

ಪರಿಶೀಲನಾ ವರದಿ

ಭಾಗ–ಎ	
ಅಧಿಕಾರಿಯ ಹೆಸರು	
ತಪಾಸಣಾ ಸ್ಥಳ	
ತಪಾಸಣೆಯ ಸಮಯ	
ವಾಹನ ಸಂಖ್ಯೆ	
ಇ–ವೇ ಬಿಲ್ ಸಂಖ್ಯೆ	
ಬೆಲೆಪಟ್ಟಿ ಅಥವಾ ಚಲನ್ ಅಥವಾ ಬಿಲ್ ದಿನಾಂಕ	
ಬೆಲೆಪಟ್ಟಿ ಅಥವಾ ಚಲನ್ ಅಥವಾ ಬಿಲ್ ಸಂಖ್ಯೆ	
ವಾಹನದ ಪ್ರಭಾರದಲ್ಲಿರುವ ವ್ಯಕ್ತಿಯ ಹೆಸರು	
ಸರಕುಗಳ ವಿವರಣೆ	
ಸರಕುಗಳ ಘೋಷಿತ ಪ್ರಮಾಣ	
ಸರಕುಗಳ ಘೋಷಿತ ಮೌಲ್ಯ	
ನ್ಯೂನತೆಯ ಸಂಕ್ಷಿಪ್ತ ವಿವರಣೆ	
ಸರಕುಗಳನ್ನು ತಡೆಹಿಡಿಯಲಾಗಿತ್ತೇ?	
ಇಲ್ಲದಿದ್ದಲ್ಲಿ, ವಾಹನವನ್ನು ಬಿಡುಗಡೆ ಮಾಡಿದ ದಿನಾಂಕ ಮತ್ತು ಸಮಯ	
ಭಾಗ–ಬಿ	
ಸರಕುಗಳ ನೈಜವಾದ ಪ್ರಮಾಣ	
ಸರಕುಗಳ ನೈಜವಾದ ಮೌಲ್ಯ	
ಸಂದಾಯ ಮಾಡಬೇಕಾದ ತೆರಿಗೆ	
ಏಕೀಕೃತ ತೆರಿಗೆ	
ಕೇಂದ್ರ ತೆರಿಗೆ	
ರಾಜ್ಯ ಅಥವಾ ಕೇಂ.ಪ್ರ. ತೆರಿಗೆ	
ಉಪಕರ	
ಸಂದಾಯ ಮಾಡಬೇಕಾದ ದಂಡ	
ಏಕೀಕೃತ ತೆರಿಗೆ	
ಕೇಂದ್ರ ತೆರಿಗೆ	
ರಾಜ್ಯ ಅಥವಾ ಕೇಂ.ಪ್ರ. ತೆರಿಗೆ	
ಉಪಕರ	
ಸೂಚನಾಪತ್ರದ ವಿವರಗಳು	
ದಿನಾಂಕ	

458

ಸಂಖ್ಯೆ	
ನಿರ್ಣಯಗಳ ಸಾರಾಂಶ	

ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–04

(ನಿಯಮ 138ಡಿಯನ್ನು ನೋಡಿ)

ತಡೆಯಿಹಿಡಿಯುವಿಕೆಯ ವರದಿ

ಇ–ವೇ ಬಿಲ್ ಸಂಖ್ಯೆ	
ತಡೆಹಿಡಿದ ಅಂದಾಜು ಸ್ಥಳ	
ತಡೆಯಿಹಿಡಿಯುವಿಕೆಯ ಅವಧಿ	
ಪ್ರಭಾರದಲ್ಲಿರುವ ಅಧಿಕಾರಿಯ ಹೆಸರು	ತಿಳಿದಿದ್ದರೆ
ದಿನಾಂಕ	
ಸಮಯ	

ನಮೂನೆ ಜಿಎಸ್‌ಟಿ ಐಎನ್‌ವಿ–01

(ನಿಯಮ 138ಎಯನ್ನು ನೋಡಿ)

ಬೆಲೆಪಟ್ಟಿ ಉಲ್ಲೇಖ ಸಂಖ್ಯೆಯನ್ನು ಸೃಷ್ಟಿಸುವುದು

ಐಆರ್‌ಎನ್:		**ದಿನಾಂಕ:**	
ಪೂರೈಕೆದಾರನ ವಿವರಗಳು			
ಜಿಎಸ್‌ಟಿಐಎನ್			
ಕಾನೂನು ಸಮ್ಮತ ಹೆಸರು			
ವ್ಯಾಪಾರದ ಹೆಸರು, ಯಾವುದಾದರೂ ಇದ್ದರೆ			
ವಿಳಾಸ:			
ಬೆಲೆಪಟ್ಟಿಯ ಕ್ರಮ ಸಂ.			
ಬೆಲೆಪಟ್ಟಿಯ ದಿನಾಂಕ			
	ಸ್ವೀಕರಿಸುವವನ ವಿವರಗಳು (ಬಿಲ್ ಮಾಡಿರುವವನಿಗೆ)	**ರವಾನೆ ಸ್ವೀಕರಿಸುವವನ ವಿವರಗಳು (ಶಿಪ್ ಮಾಡಿರುವವನಿಗೆ)**	
ಜಿಎಸ್‌ಟಿಎನ್ ಅಥವಾ ಯುಐಎನ್, ಲಭ್ಯವಿದ್ದರೆ			
ಹೆಸರು			
ವಿಳಾಸ			
ರಾಜ್ಯ (ಹೆಸರು ಮತ್ತು ಕೋಡ್)			
ಪೂರೈಕೆಯ ವಿಧ			
	ಬಿ ಯಿಂದ ಬಿಗೆ ಪೂರೈಕೆ		

459

	ಬಿ ಯಿಂದ ಸಿಗೆ ಪೂರೈಕೆ		
	ಹಿಮ್ಮುಖ ವಿಧಿಸುವಿಕೆಯನ್ನು ಆಕರ್ಷಿಸುತ್ತದೆ		
	ಟಿಸಿಎಸ್‌ನ್ನು ಆಕರ್ಷಿಸುತ್ತದೆ	ನಿರ್ವಾಹಕನ ಜಿಎಸ್‌ಟಿಎನ್	
	ಟಿಡಿಎಸ್‌ನ್ನು ಆಕರ್ಷಿಸಿತ್ತದೆ	ಟಿಡಿಎಸ್ ಪ್ರಾಧಿಕಾರದ ಜಿಎಸ್‌ಟಿಎನ್	
	ರಫ್ತು		
	ಎಸ್‌ಇಝಡ್‌ಗೆ ಪೂರೈಕೆ ಮಾಡಲಾಗಿದೆ		
	ಪರಿಭಾವಿತ ರಫ್ತು		

ಕ್ರ. ಸಂ	ಸರಕುಗಳ ವಿವರಣೆ	ಹೆಚ್ ಎಸ್ ಎನ್	ಪ್ರಮಾಣ	ಘಟಕ	ಬೆಲೆ (ಪ್ರತಿ ಘಟಕಕ್ಕೆ)	ಒಟ್ಟು ಮೌಲ್ಯ	ಸೋಡಿ, ಯಾವುದಾದರು ಇದ್ದರೆ	ತೆರಿಗೆದಾಯಕ ಮೌಲ್ಯ	ಕೇಂದ್ರ ತೆರಿಗೆ		ರಾಜ್ಯ ಅಥವಾ ಕೇಂ.ಪ್ರ. ತೆರಿಗೆ		ಏಕೀಕೃತ ತೆರಿಗೆ		ಉಪಕರ	
									ದರ	ಮೊತ್ತ	ದರ	ಮೊತ್ತ	ದರ	ಮೊತ್ತ	ದರ	ಮೊತ್ತ
	ಸಾಗಾಣಿಕೆ ವೆಚ್ಚ															
	ವಿಮೆ															
	ಪ್ಯಾಕಿಂಗ್ ಮತ್ತು ರವಾನೆ ಚಾರ್ಜುಗಳು ಇತ್ಯಾದಿ															
ಒಟ್ಟು																
ಒಟ್ಟು ಬೆಲೆಪಟ್ಟಿಯ ಮೌಲ್ಯ (ಸಂಖ್ಯೆಯಲ್ಲಿ)																
ಒಟ್ಟು ಬೆಲೆಪಟ್ಟಿಯ ಮೌಲ್ಯ (ಪದಗಳಲ್ಲಿ)																

ಸಹಿ
ಸಹಿದಾರನ ಹೆಸರು
ಪದನಾಮ ಅಥವಾ ಸ್ಥಾನಮಾನ".

8. **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–01 ರ ತಿದ್ದುಪಡಿ**– ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ** –01 ರಲ್ಲಿ, ಕ್ರಮ ಸಂಖ್ಯೆ 9ರಡಿಯಲ್ಲಿ, "ಘೋಷಣೆ [ಪ್ರಕರಣ 54(3)ಕ್ಕೆ ಎರಡನೆಯ ಪರಂತುಕ] ಮತ್ತು ಅಲ್ಲಿಂದ ಸಂಬಂಧಪಟ್ಟ ನಮೂದನೆಗಳಿಗೆ, ಈ ಅಧಿಸೂಚನೆಯು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಣೆಗೊಂಡ ದಿನಾಂಕದಿಂದ ಜಾರಿಗೆ ಬಂದಿರುವಂತೆ, ಈ ಕೆಳಗಿನದ್ದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ಘೋಷಣೆ (ಪ್ರಕರಣ 54(3)ರ ಎರಡನೇ ಪರಂತುಕ)

ರಫ್ತು ಮಾಡಲಾದ ಸರಕುಗಳು ಯಾವುದೇ ರಫ್ತು ಸುಂಕಕ್ಕೆ ಒಳಪಟ್ಟಿಲ್ಲ ಎಂದು ನಾನು ಈ ಮೂಲಕ ಘೋಷಿಸುತ್ತೇನೆ. ನಾನು ಯಾವುದೇ ಸರಕು ಮತ್ತು ಸೇವೆಗಳು ಮತ್ತು ಅವುಗಳೆರಡರ ಮೇಲೆ ಕೇಂದ್ರ ಅಬಕಾರಿ ಸುಂಕ / ಸೇವಾ ತೆರಿಗೆ/ ಕೇಂದ್ರ ತೆರಿಗೆಯ ಸುಂಕ ವಾಪಸ್ಸಾತಿಯನ್ನು ಉಪಯೋಗಿಸಿಕೊಂಡಿಲ್ಲ ಎಂದೂ ಸಹ ಘೋಷಿಸುತ್ತೇನೆ ಹಾಗೂ ಮರುಪಾವತಿ ಕ್ಲೇಮು ಮಾಡಿರುವುದಕ್ಕೆ ಸಂಬಂಧಿಸಿದ ಪೂರೈಕೆಗಳ ಮೇಲೆ ಸಂದಾಯ ಮಾಡಿದ ಏಕೀಕೃತ ತೆರಿಗೆಯ ಮರುಪಾವತಿಯನ್ನು ನಾನು ಕ್ಲೇಮು ಮಾಡಿಲ್ಲ ಎಂದು ಘೋಷಿಸುತ್ತೇನೆ.

ಸ್ಥಳ
ದಿನಾಂಕ

ಸಹಿ
ಹೆಸರು
ಪದನಾಮ / ಸ್ಥಾನ"

460

9. **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–01ಎ ರ ತಿದ್ದುಪಡಿ–** ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ –01ಎ** ಯಲ್ಲಿ, **"**ಘೋಷಣೆ [ಪ್ರಕರಣ 54(3)ಕ್ಕೆ ಎರಡನೆಯ ಪರಂತುಕ]**"** ಮತ್ತು ಅದಕ್ಕೆ ಸಂಬಂಧಿಸಿದ ನಮೂದನೆಗಳಿಗೆ, ಸದರಿ ಅಧಿಸೂಚನೆಯು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಣೆಗೊಂಡ ದಿನಾಂಕದಿಂದ ಜಾರಿಗೆ ಬಂದಿರುವಂತೆ, ಈ ಕೆಳಗಿನದ್ದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ಘೋಷಣೆ (ಪ್ರಕರಣ 54(3)ರ ಎರಡನೇ ಪರಂತುಕ)

ರಫ್ತು ಮಾಡಲಾದ ಸರಕುಗಳು ಯಾವುದೇ ರಫ್ತು ಸುಂಕಕ್ಕೆ ಒಳಪಟ್ಟಿಲ್ಲ ಎಂದು ನಾನು ಈ ಮೂಲಕ ಘೋಷಿಸುತ್ತೇನೆ. ನಾನು ಯಾವುದೇ ಸರಕು ಮತ್ತು ಸೇವೆಗಳು ಮತ್ತು ಅವುಗಳೆರಡರ ಮೇಲೆ ಕೇಂದ್ರ ಅಬಕಾರಿ ಸುಂಕ / ಸೇವಾ ತೆರಿಗೆ/ ಕೇಂದ್ರ ತೆರಿಗೆಯ ಸುಂಕ ವಾಪಸ್ಸಾತಿಯನ್ನು ಉಪಯೋಗಿಸಿಕೊಂಡಿಲ್ಲ ಎಂದೂ ಸಹ ಘೋಷಿಸುತ್ತೇನೆ ಹಾಗೂ ಮರುಪಾವತಿ ಕ್ಲೇಮು ಮಾಡಿರುವುದಕ್ಕೆ ಸಂಬಂಧಿಸಿದ ಪೂರೈಕೆಗಳ ಮೇಲೆ ಸಂದಾಯ ಮಾಡಿದ ಏಕೀಕೃತ ತೆರಿಗೆಯ ಮರುಪಾವತಿಯನ್ನು ನಾನು ಕ್ಲೇಮು ಮಾಡಿಲ್ಲ ಎಂದು ಘೋಷಿಸುತ್ತೇನೆ.

ಸಹಿ
ಹೆಸರು
ಪದನಾಮ / ಸ್ಥಾನ**"**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

461

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಒ/2017)
ನಂ. ಆಇ 47 ಸಿಎಸ್ಎಲ್ 2017, ಬೆಂಗಳೂರು, ದಿನಾಂಕ 05.04.2018

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕ ಅಧಿನಿಯಮ 27), ಪ್ರಕರಣ 164ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ ನಿಯಮಗಳು, 2017, ಇವುಗಳಿಗೆ ಮುಂದುವರಿದ ತಿದ್ದುಪಡಿ ತರಲು ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಅಂದರೆ:–

ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ:– (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಐದನೇ ತಿದ್ದುಪಡಿ) ನಿಯಮಗಳು, 2018, ಎಂದು ಕರೆಯಬಹುದು.

(2) ಈ ನಿಯಮಗಳಲ್ಲಿ ಉಪಬಂಧಿಸಿದುದನ್ನುಳಿದು, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ನಿಯಮ 45ರ ತಿದ್ದುಪಡಿ:– ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017 (ಇವುಗಳನ್ನು ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ) ರಲ್ಲಿ, ನಿಯಮ 45ರಲ್ಲಿ, ಉಪನಿಯಮ (1)ಕ್ಕಾಗಿ, ಈ ಕೆಳಗಿನದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"(1) ಹೂಡುವಳಿಗಳು, ಅರೆ–ಸಿದ್ಧಪಡಿಸಿದ ಸರಕುಗಳು ಅಥವಾ ಬಂಡವಾಳ ಸರಕುಗಳನ್ನು, ಅಂಥ ಸರಕುಗಳನ್ನು ಮಜೂರಿ ಕೆಲಸಗಾರನಿಗೆ ನೇರವಾಗಿ ಕಳುಹಿಸುವುದನ್ನು ಒಳಗೊಂಡಂತೆ, ಪ್ರಧಾನಕರ್ತನು ನೀಡಿದ ಒಂದು ಚಲನ್‌ನಿಂದ ಒಳಗೊಂಡಿರುವುದರ ಅಡಿಯಲ್ಲಿ ಮಜೂರಿ ಕೆಲಸಗಾರನಿಗೆ ಕಳುಹಿಸತಕ್ಕದ್ದು, ಮತ್ತು ಸರಕುಗಳನ್ನು ಒಬ್ಬ ಮಜೂರಿದಾರನಿಂದ ಇನ್ನೊಬ್ಬ ಮಜೂರಿದಾರನಿಗೆ ಕಳುಹಿಸುವಾಗ, ಪ್ರಧಾನ ಕರ್ತನು ಅಥವಾ ಸರಕುಗಳನ್ನು ಕಳುಹಿಸುವ ಮಜೂರಿ ಕೆಲಸಗಾರನು ಇವರುಗಳಲ್ಲಿ ಯಾರಾದರೊಬ್ಬರು ಇನ್ನೊಬ್ಬ ಮಜೂರಿ ಕೆಲಸಗಾರನಿಗೆ ಚಲನ್ ಅನ್ನು ನೀಡಬಹುದು:

ಪರಂತು, ಒಬ್ಬ ಮಜೂರಿ ಕೆಲಸಗಾರನಿಂದ ಮತ್ತೊಬ್ಬನಿಗೆ ಸರಕುಗಳನ್ನು ಕಳುಹಿಸುವಾಗ ಅಥವಾ ಪ್ರಧಾನಕರ್ತನಿಗೆ ಹಿಂದಿರುಗಿಸುವಾಗ, ಪ್ರಧಾನಕರ್ತನು ನೀಡಿದ ಚಲನ್ ಅನ್ನು, ಅದರಲ್ಲಿ ಸೂಚಿಸಿರುವ, ಪ್ರಮಾಣ ಮತ್ತು ಸರಕಿನ ವಿವರಗಳನ್ನು ಮಜೂರಿ ಕೆಲಸಗಾರನು ಅನುಮೋದಿಸಬಹುದಾಗಿರುತ್ತದೆ:

ಮತ್ತು ಪರಂತು, ಒಬ್ಬ ಮಜೂರಿ ಕೆಲಸಗಾರನಿಂದ ಮತ್ತೊಬ್ಬನಿಗೆ ಸರಕುಗಳನ್ನು ಕಳುಹಿಸುವಾಗ ಅಥವಾ ಪ್ರಧಾನಕರ್ತನಿಗೆ ಹಿಂದಿರುಗಿಸುವಾಗ, ಮಜೂರಿ ಕೆಲಸಗಾರನು ಅನುಮೋದಿಸಿದ ಚಲನ್‌ಅನ್ನು, ಅದರಲ್ಲಿ ಸೂಚಿಸಿರುವ, ಪ್ರಮಾಣ ಮತ್ತು ಸರಕಿನ ವಿವರಗಳನ್ನು ಮತ್ತೊಬ್ಬ ಮಜೂರಿ ಕೆಲಸಗಾರನು ಮುಂದುವರೆದು ಅನುಮೋದಿಸಬಹುದಾಗಿರುತ್ತದೆ."

3. ನಿಯಮ 127ರ ತಿದ್ದುಪಡಿ:– ಸದರಿ ನಿಯಮಗಳ ನಿಯಮ 127ರಲ್ಲಿ, ಖಂಡ (iv)ರಲ್ಲಿ

462

"ಹತ್ತರೊಳಗಾಗಿ" ಪದಕ್ಕಾಗಿ "ಹತ್ತನೇ ದಿನದೊಳಗಾಗಿ" ಎಂದು ಪ್ರತಿಯೋಜಿಸತಕ್ಕದ್ದು;

4. ನಿಯಮ 129ರ ತಿದ್ದುಪಡಿ:– ಸದರಿ ನಿಯಮಗಳ ನಿಯಮ 129ರಲ್ಲಿ, ಉಪನಿಯಮ (6)ರಲ್ಲಿ "ಸ್ಥಾಯಿ ಸಮಿತಿಯಿಂದ ಲಿಖಿತವಾಗಿ" ಪದಗಳಿಗಾಗಿ "ಪ್ರಾಧಿಕಾರದಿಂದ ಲಿಖಿತವಾಗಿ" ಪದಗಳನ್ನು ಪ್ರತಿಯೋಜಿಸತಕ್ಕದ್ದು;

5. ನಿಯಮ 133ರ ತಿದ್ದುಪಡಿ:– ಸದರಿ ನಿಯಮಗಳ ನಿಯಮ 133ರಲ್ಲಿ, ಉಪನಿಯಮ (3)ರ ನಂತರ, ಈ ಕೆಳಗಿನದನ್ನು ಸೇರಿಸತಕ್ಕದ್ದು, ಅಂದರೆ:–

"(4) ನಿಯಮ 129ರ ಉಪನಿಯಮ (6)ರಲ್ಲಿ ಸಂರಕ್ಷಣೆಗಳ ಡೈರಕ್ಟರ್ ಜನರಲ್ ನೀಡಿರುವ ಉಲ್ಲೇಖಿಸಿದ ವರದಿಯಲ್ಲಿ, ಪ್ರಕರಣ 171 ಅಥವಾ ಈ ನಿಯಮಗಳ ಉಲ್ಲಂಘನೆ ಆಗಿದೆ ಅಥವಾ ಆಗಿಲ್ಲವೆಂದು ಶಿಫಾರಸ್ಸು ಮಾಡಿದ್ದರೂ, ಆದರೆ ಪ್ರಾಧಿಕಾರವು ಈ ವಿಷಯದಲ್ಲಿ ಮುಂದಿನ ವಿಚಾರಣೆ ಅಥವಾ ತನಿಖೆ ಅವಶ್ಯಕತೆಯಿದೆಯೆಂದು ಅಭಿಪ್ರಾಯಪಟ್ಟಿದ್ದಲ್ಲಿ, ಅದು, ಲಿಖಿತವಾಗಿ ದಾಖಲಿಸಿದ ಕಾರಣಗಳಿಗಾಗಿ, ವಿಷಯವನ್ನು ಸಂರಕ್ಷಣೆಗಳ ಡೈರಕ್ಟರ್ ಜನರಲ್‌ರವರಿಗೆ ಅಧಿನಿಯಮ ಮತ್ತು ಈ ನಿಯಮಗಳ ಉಪಬಂಧಗಳ ಅನ್ವಯ ಮುಂದಿನ ವಿಚಾರಣೆ ಅಥವಾ ತನಿಖೆ ಮಾಡಿಸುವುದಕ್ಕಾಗಿ ರವಾನಿಸಬಹುದು.".

6. ನಿಯಮ 134ರ ಪ್ರತಿಯೋಜನೆ:– ಸದರಿ ನಿಯಮಗಳ ನಿಯಮ 134ಕ್ಕಾಗಿ, ಈ ಕೆಳಗಿನದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"134. **<u>ಬಹುಮತದಿಂದ ನಿರ್ಣಯವನ್ನು ತೆಗೆದುಕೊಳ್ಳುವುದು</u>**.– (1) ಪ್ರಾಧಿಕಾರದ ಕನಿಷ್ಠ ಮೂವರು ಸದಸ್ಯರು ಸಭೆಯ ಕೋರಂ ಅನ್ನು ರಚಿಸುವುದು.

(2) ಯಾವುದೇ ವಿಷಯದ ಮೇಲೆ ಪ್ರಾಧಿಕಾರದ ಸದಸ್ಯರುಗಳು ವಿಭಿನ್ನ ಅಭಿಪ್ರಾಯಗಳನ್ನು ಹೊಂದಿದ್ದರೆ, ಆ ವಿಷಯವನ್ನು, ಹಾಜರಿರುವ ಮತ್ತು ಮತ ಚಲಾಯಿಸಿದ ಸದಸ್ಯರುಗಳ ಬಹುಮತದ ಅಭಿಪ್ರಾಯದ ಅನುಸಾರವಾಗಿ ನಿರ್ಣಯಿಸತಕ್ಕದ್ದು ಮತ್ತು ಮತಗಳು ಸಮನಾದ ಸಂದರ್ಭದಲ್ಲಿ, ಅಧ್ಯಕ್ಷರು ಎರಡನೇಯ ಅಥವಾ ನಿರ್ಣಾಯಕ ಮತವನ್ನು ಹೊಂದಿರುತ್ತಾರೆ.".

7. ನಿಯಮ 137ರ ತಿದ್ದುಪಡಿ:– ಸದರಿ ನಿಯಮಗಳ ನಿಯಮ 137ರಲ್ಲಿ, ಖಂಡ (ಸಿ)ಯಲ್ಲಿ, ಉಪಖಂಡ ಬಿ. ಯ ನಂತರ, ಈ ಕೆಳಗಿನದನ್ನು ಸೇರಿಸತಕ್ಕದ್ದು, ಅಂದರೆ:–

"ಸಿ. ನಿಯಮ 128ರ ಉಪನಿಯಮ (1)ರ ಅಡಿಯಲ್ಲಿ, ನೋಂದಾಯಿತ ವ್ಯಕ್ತಿಯು ಸರಕುಗಳ ಅಥವಾ ಸೇವೆಗಳ ಪೂರೈಕೆಯ ಮೇಲಿನ ತೆರಿಗೆ ದರದ ಇಳಿಕೆಯ ಅನುಕೂಲತೆಯನ್ನು ಅಥವಾ ಹೂಡುವಳಿ ತೆರಿಗೆ ಜಮೆಯ ಅನುಕೂಲತೆಯನ್ನು ಸ್ವೀಕರಿಸುವವನಿಗೆ ಅದಕ್ಕನುಗುಣವಾಗಿ ಬೆಲೆ ಇಳಿಕೆಯ ಮೂಲಕ ವರ್ಗಾಯಿಸಿಲ್ಲವೆಂದು ಬೇರಾವುದೇ ವ್ಯಕ್ತಿಯು ಆಪಾದಿಸಿದ್ದಲ್ಲಿ.".

8. ನಿಯಮ 138ರ ತಿದ್ದುಪಡಿ:– ಸದರಿ ನಿಯಮಗಳ ನಿಯಮ 138ರಲ್ಲಿ, ಅದರ ಕೊನೆಯಲ್ಲಿ, 2018ನೇ ಏಪ್ರಿಲ್ 1ನೇ ದಿನದಿಂದ ಜಾರಿಯಾಗುವಂತೆ, ಈ ಕೆಳಗಿನದನ್ನು ಸೇರಿಸತಕ್ಕದ್ದು, ಅಂದರೆ:–

"ವಿವರಣೆ.– ಈ ಅಧ್ಯಾಯದ ಉದ್ದೇಶಗಳಿಗಾಗಿ, 'ರೈಲ್ವೆಗಳ ಮೂಲಕ ಸಾಗಾಣಿಕೆಯಾದದ್ದು', 'ರೈಲ್ವೆಯಿಂದ ಸರಕು ಸಾಗಾಣಿಕೆ', 'ರೈಲಿನಿಂದ ಸರಕು ಸಾಗಾಣೆ' ಮತ್ತು 'ರೈಲಿನಿಂದ ಸರಕುಗಳ ಚಲನೆ' ಎಂಬ ಪದಾವಳಿಗಳು ರೈಲ್ವೆಯಿಂದ ಪಾರ್ಸಲ್ ಸ್ಥಳಾವಕಾಶವನ್ನು ಭೋಗ್ಯಕ್ಕಾಗಿ ನೀಡಲಾದ ಪ್ರಕರಣಗಳನ್ನು ಒಳಗೊಳ್ಳತಕ್ಕದ್ದಲ್ಲ.".

463

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

464

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಪಿ/2017)
ನಂ. ಆಇ 47 ಸಿಎಸ್‌ಎಲ್ 2017, ಬೆಂಗಳೂರು, ದಿನಾಂಕ 10.05.2018

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕ ಅಧಿನಿಯಮ 27), ಪ್ರಕರಣ 164ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಜಿಎಸ್‌ಟಿ ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017, ಇವುಗಳಿಗೆ ಮುಂದುವರಿದ ತಿದ್ದುಪಡಿ ತರಲು ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಅಂದರೆ:–

ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ.– (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಆರನೇ ತಿದ್ದುಪಡಿ) ನಿಯಮಗಳು, 2018 ಎಂದು ಕರೆಯಬಹುದು.

(2) ಉಪಬಂಧಿಸಿದುದನ್ನು ಉಳಿದು, ಇವುಗಳು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ನಿಯಮ 89ರ ತಿದ್ದುಪಡಿ.– ನಿಯಮ 89ರಲ್ಲಿ, ಉಪನಿಯಮ (5)ಕ್ಕಾಗಿ, ಈ ಕೆಳಗಿನದ್ದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"(5). ವಿಲೋಮ ಸುಂಕ ಸ್ವರೂಪದ ಕಾರಣದಿಂದಾಗಿ ಮರುಪಾವತಿಯ ಸಂದರ್ಭದಲ್ಲಿ, ಹೂಡುವಳಿ ತೆರಿಗೆ ಜಮೆಯ ಮರುಪಾವತಿಯನ್ನು ಕೆಳಕಂಡ ಸೂತ್ರದ ಪ್ರಕಾರ ಮಂಜೂರು ಮಾಡತಕ್ಕದ್ದು–

ಗರಿಷ್ಟ ಮರುಪಾವತಿ ಮೊತ್ತ = {(ವಿಲೋಮ ದರದ ಸರಕು ಮತ್ತು ಸೇವೆಗಳ ಪೂರೈಕೆಯ ವಹಿವಾಟು) X ನಿವ್ವಳ ಐಟಿಸಿ ÷ ಹೊಂದಿಸಿದ ಒಟ್ಟು ವಹಿವಾಟು} – ಅಂಥ ಸರಕು ಮತ್ತು ಸೇವೆಗಳ ವಿಲೋಮ ದರದ ಪೂರೈಕೆ ಮೇಲೆ ಸಂದಾಯ ಮಾಡಬೇಕಾದ ತೆರಿಗೆ.

ವಿವರಣೆ:– ಈ ಉಪನಿಯಮದ ಉದ್ದೇಶಗಳಿಗಾಗಿ ಪದಾವಳಿಗಳು –
(ಎ) **"ನಿವ್ವಳ ಐಟಿಸಿ"** ಎಂದರೆ ಉಪನಿಯಮ (4ಎ) ಅಥವಾ (4ಬಿ) ಅಥವಾ ಅವೆರಡರ ಅಡಿಯಲ್ಲಿ ಮರುಪಾವತಿಯ ಕ್ಲೇಮನ್ನು ಮಾಡಿದಕ್ಕಾಗಿ ಉಪಯೋಗಿಸಿದ ಹೂಡುವಳಿ ತೆರಿಗೆ ಜಮೆಯನ್ನು ಹೊರತುಪಡಿಸಿದ, ಸಂಬಂಧಿಸಿದ ಅವಧಿಯಲ್ಲಿನ ಹೂಡುವಳಿಗಳ ಮೇಲೆ ಉಪಯೋಗಿಸಿದ ಹೂಡುವಳಿ ತೆರಿಗೆ ಜಮೆ; ಮತ್ತು

(ಬಿ) **"ಹೊಂದಿಸಿದ ಒಟ್ಟು ವಹಿವಾಟು"** ಎಂಬುದು ಉಪನಿಯಮ (4)ರಲ್ಲಿ ಅದಕ್ಕೆ ನಿಯೋಜಿರುವ ಅರ್ಥವನ್ನೇ ಹೊಂದಿರತಕ್ಕದ್ದು.":

3. ನಿಯಮ 97ರ ಪ್ರತಿಯೋಜನೆ.– ನಿಯಮ 97ಕ್ಕಾಗಿ, ಈ ಕೆಳಗಿನದ್ದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"97. ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿ.– (1) ಪ್ರಕರಣ 54ರ ಉಪಪ್ರಕರಣ (5)ರಲ್ಲಿ ನಿರ್ದಿಷ್ಟಪಡಿಸಿದ ಎಲ್ಲಾ

465

ಮೊತ್ತಗಳು ಮತ್ತು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ 27)ರ ಪ್ರಕರಣ 57ರಲ್ಲಿ ನಿರ್ದಿಷ್ಟಪಡಿಸಿದ ಮೊತ್ತದೊಂದಿಗೆ ಹೂಡಿಕೆ ಮೇಲಿನ ಆದಾಯದ ಮೊತ್ತವು, ಈ ನಿಧಿಗೆ ಜಮೆಯಾಗತಕ್ಕದ್ದು.

ಪರಂತು, ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕೇಂದ್ರ ಅಧಿನಿಯಮ 13)ರ ಪ್ರಕರಣ 20ರೊಂದಿಗೆ ಓದಿಕೊಂಡ, ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕೇಂದ್ರ ಅಧಿನಿಯಮದ 12)ರ ಪ್ರಕರಣ 54ರ ಉಪಪ್ರಕರಣ (5)ರಡಿಯಲ್ಲಿ ನಿರ್ಧರಿಸಿದ ಏಕೀಕೃತ ತೆರಿಗೆಯ ಶೇಕಡ 50ರಷ್ಟರ ಸಮನಾದ ಒಂದು ಮೊತ್ತವನ್ನು ಈ ನಿಧಿಗೆ ತೇವಣಿ ಮಾಡತಕ್ಕದ್ದು.

(2) ನಿಧಿಗೆ ಜಮೆಗೊಳಿಸಲಾಗಿರುವ ಯಾವುದೇ ಮೊತ್ತವನ್ನು, ಯಾವುದೇ ಕ್ಲೇಮುದಾರನಿಗೆ ಸಂದಾಯ ಮಾಡುವಂತೆ ಯುಕ್ತ ಅಧಿಕಾರಿ, ಅಪೀಲು ಪ್ರಾಧಿಕಾರ ಅಥವಾ ನ್ಯಾಯಾಲಯವು ಆದೇಶಿಸಿದಾಗ ಅಥವಾ ನಿರ್ದೇಶಿಸಿದಾಗ, ಅದನ್ನು ನಿಧಿಯಿಂದ ಸಂದಾಯ ಮಾಡತಕ್ಕದ್ದು.

(3) ರಾಜ್ಯ ಸರ್ಕಾರದಿಂದ ನಿರ್ವಹಿಸಲಾದ ನಿಧಿಯ ಲೆಕ್ಕಪತ್ರಗಳು ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಲೆಕ್ಕಪರಿಶೋಧನೆಗೆ ಒಳಪಟ್ಟಿರತಕ್ಕದ್ದು.

(4) ಸರ್ಕಾರವು, ಒಂದು ಆದೇಶದ ಮೂಲಕ, ಒಬ್ಬ ಅಧ್ಯಕ್ಷ, ಒಬ್ಬ ಉಪಾಧ್ಯಕ್ಷ, ಒಬ್ಬ ಸದಸ್ಯ ಕಾರ್ಯದರ್ಶಿ ಮತ್ತು ಅದು ಸೂಕ್ತ ಎಂದು ಭಾವಿಸಬಹುದಾದ ಅಂತಹ ಇತರೆ ಸದಸ್ಯರುಗಳನ್ನೊಳಗೊಂಡ ಒಂದು ಸ್ಥಾಯಿ ಸಮಿತಿ (ಇನ್ನು ಮುಂದೆ ಇದನ್ನು 'ಸಮಿತಿ' ಎಂದು ಉಲ್ಲೇಖಿಸಿದೆ)ಯನ್ನು ರಚಿಸತಕ್ಕದ್ದು ಮತ್ತು ಸಮಿತಿಯು ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿಗೆ ಜಮೆಗೊಳಿಸಲಾದ ಹಣವನ್ನು ಗ್ರಾಹಕರ ಕ್ಷೇಮಾಭಿವೃದ್ಧಿಗಾಗಿ ಸಮರ್ಪಕವಾದ ಬಳಕೆಗಾಗಿ ಶಿಫಾರಸ್ಸುಗಳನ್ನು ಮಾಡತಕ್ಕದ್ದು.

(5) (ಎ) ಸಮಿತಿಯು ಅವಶ್ಯವಿದ್ದಾಗ ಆಗಾಗ್ಗೆ, ಸಾಮಾನ್ಯವಾಗಿ ವರ್ಷದಲ್ಲಿ ನಾಲ್ಕು ಬಾರಿ ಸಭೆ ಸೇರತಕ್ಕದ್ದು;

(ಬಿ) ಸಮಿತಿಯ ಅಧ್ಯಕ್ಷರು, ಅಥವಾ ಅವರ ಗೈರು ಹಾಜರಿಯಲ್ಲಿ ಉಪಾಧ್ಯಕ್ಷರು, ಸೂಕ್ತವೆಂದು ಭಾವಿಸಿದ ಅಂತಹ ಸಮಯ ಮತ್ತು ಸ್ಥಳದಲ್ಲಿ ಸಮಿತಿಯು ಸಭೆ ಸೇರತಕ್ಕದ್ದು.

(ಸಿ) ಸಮಿತಿಯು ಅಧ್ಯಕ್ಷರ, ಅಥವಾ ಅವರ ಗೈರು ಹಾಜರಿಯಲ್ಲಿ ಉಪಾಧ್ಯಕ್ಷರ, ಅಧ್ಯಕ್ಷತೆಯಲ್ಲಿ ಸಮಿತಿಯು ಸಭೆ ಸೇರತಕ್ಕದ್ದು;

(ಡಿ) ಪ್ರತಿಯೊಬ್ಬ ಸದಸ್ಯರಿಗೆ ಕನಿಷ್ಟ ಹತ್ತು ದಿನಗಳ ಅವಧಿಯ ಲಿಖಿತ ಸೂಚನೆಯನ್ನು ನೀಡಿ ಸಮಿತಿಯ ಸಭೆಯನ್ನು ಕರೆಯತಕ್ಕದ್ದು;

(ಇ) ಸಮಿತಿಯ ಸೂಚನಾಪತ್ರವು ಸಭೆಯ ಸ್ಥಳ, ದಿನಾಂಕ ಮತ್ತು ಸಭೆಯ ಸಮಯವನ್ನು ನಿರ್ದಿಷ್ಟಪಡಿಸತಕ್ಕದ್ದು ಮತ್ತು ಸಭೆಯಲ್ಲಿ ನಡೆಸಬಹುದಾದ ವ್ಯವಹಾರಗಳ ಪಟ್ಟಿಯನ್ನು ಹೊಂದಿರತಕ್ಕದ್ದು;

(ಎಫ್) ಅಧ್ಯಕ್ಷರ ಅಥವಾ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆಯದ ಮತ್ತು ಕನಿಷ್ಟ ಇತರೆ ಮೂರು ಸದಸ್ಯರ ಹಾಜರಾತಿ ಇರದ ಸಭೆಯ ಯಾವುದೇ ನಡಾವಳಿಗಳು ಸಿಂಧುವಾಗಿರತಕ್ಕದ್ದಲ್ಲ;

(6) ಸಮಿತಿಯು ಕೆಳಕಂಡ ಅಧಿಕಾರಗಳನ್ನು ಹೊಂದಿರತಕ್ಕದ್ದು–

(ಎ) ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂತ ಯಾವುದೇ ಪ್ರಾಧಿಕಾರದ ಮುಂದೆ ನೋಂದಣಿ ಪಡೆಯಲು ಯಾವುದೇ ಅರ್ಜಿದಾರನನ್ನು ಅಗತ್ಯಪಡಿಸುವುದು;

(ಬಿ) ಅರ್ಜಿದಾರನ ಅಭಿರಕ್ಷೆ ಮತ್ತು ನಿಯಂತ್ರಣದಲ್ಲಿರುವ ಅಂಥ ಪುಸ್ತಕಗಳು, ಲೆಕ್ಕಪತ್ರಗಳು, ದಸ್ತಾವೇಜುಗಳು, ಪರಿಕರಗಳು, ಅಥವಾ ವಸ್ತುಗಳನ್ನು, ಅರ್ಜಿಯ ಸಮರ್ಪಕವಾದ

466

ಮೌಲ್ಯಮಾಪನಕ್ಕಾಗಿ ಅಗತ್ಯವಿರುವಾಗ, ಅದರ ಮುಂದೆ, ಅಥವಾ ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಯುಕ್ತವಾಗಿ ಪ್ರಾಧಿಕೃತನಾದ ಒಬ್ಬ ಅಧಿಕಾರಿಯ ಮುಂದೆ ಹಾಜರುಪಡಿಸುವಂತೆ, ಯಾವುದೇ ಅರ್ಜಿದಾರನನ್ನು ಅಗತ್ಯಪಡಿಸುವುದು;

(ಸಿ) ಗ್ರಾಹಕರ ಕ್ಷೇಮಾಭಿವೃದ್ಧಿಗಾಗಿ ಎಂದು ಕ್ಲೇಮು ಮಾಡಲಾದ ಚಟುವಟಿಕೆಗಳು ನಡೆಯುತ್ತಿವೆ ಎಂದು ನಿರೂಪಿಸಬಹುದಾದ ಯಾವುದೇ ಸ್ಥಳಗಳ ಪ್ರವೇಶ ಮತ್ತು ತಪಾಸಣೆಗೆ, ಕೇಂದ್ರ ಸರ್ಕಾರ ಅಥವಾ, ಸಂದರ್ಭಾನುಸಾರವಾಗಿ ರಾಜ್ಯ ಸರ್ಕಾರದ ಯುಕ್ತವಾಗಿ ಪ್ರಾಧಿಕೃತನಾದ ಒಬ್ಬ ಅಧಿಕಾರಿಯನ್ನು ಅನುಮತಿಸುವುದಕ್ಕಾಗಿ, ಯಾವುದೇ ಅರ್ಜಿದಾರನನ್ನು ಅಗತ್ಯಪಡಿಸುವುದು;

(ಡಿ) ಅನುದಾನದ ಸಮರ್ಪಕವಾದ ಬಳಕೆಯನ್ನು ಖಾತರಿಪಡಿಸಿಕೊಳ್ಳುವುದಕ್ಕಾಗಿ, ಅರ್ಜಿದಾರನ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆ ಮಾಡಿಸುವುದು;

(ಇ) ಆತನ ಕಡೆಯಿಂದ ಮುಖ್ಯ ವಿಷಯಗಳ ಮಾಹಿತಿ ನೀಡುವಿಕೆಯಲ್ಲಿ ತಪ್ಪಿದ್ದಲ್ಲಿ ಅಥವಾ ಬಚ್ಚಿಟ್ಟಿರುವ ಸಂದರ್ಭದಲ್ಲಿ ಮಂಜೂರು ಮಾಡಿರುವ ಅನುದಾನವನ್ನು, ಸಂಚಿತ ಬಡ್ಡಿಯೊಂದಿಗೆ ಒಂದೇ ಮೊತ್ತದಲ್ಲಿ, ಸಮಿತಿಗೆ ಮರುಪಾವತಿ ಮಾಡಲು ಮತ್ತು ಅಧಿನಿಯಮದ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸುವುದಕ್ಕಾಗಿ ಯಾವುದೇ ಅರ್ಜಿದಾರನನ್ನು ಅಗತ್ಯಪಡಿಸುವುದು;

(ಎಫ್) ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಯಾವೊಬ್ಬ ಅರ್ಜಿದಾರನಿಂದ ಬಾಕಿಯಿರುವ ಯಾವುದೇ ಮೊತ್ತವನ್ನು ವಸೂಲಿ ಮಾಡುವುದು;

(ಜಿ) ಅನುದಾನದ ಸಮರ್ಪಕ ಬಳಕೆಯನ್ನು ಸೂಚಿಸುವ ಒಂದು ನಿಯತಕಾಲಿಕ ವರದಿಯನ್ನು ಸಲ್ಲಿಸುವುದಕ್ಕಾಗಿ ಯಾವುದೇ ಅರ್ಜಿದಾರನನ್ನು, ಅಥವಾ ಅರ್ಜಿದಾರರ ವರ್ಗವನ್ನು ಅಗತ್ಯಪಡಿಸುವುದು;

(ಹೆಚ್) ಅವರ ಮುಂದೆ ಇಡಲಾದ ಒಂದು ಅರ್ಜಿಯನ್ನು, ಸಂಗತಿಗಳ ಅಸಂಗತತೆ, ಅಥವಾ ಮುಖ್ಯ ವಿಷಯಗಳ ವಿವರಗಳಲ್ಲಿ ನಿಖರತೆಯಿಲ್ಲದಿರುವ ಕಾರಣದಿಂದಾಗಿ ತಿರಸ್ಕರಿಸುವುದು;

(ಐ) ಅರ್ಜಿದಾರನಿಗೆ, ಆತನ ಹಣಕಾಸಿನ ಸ್ಥಿತಿಗತಿಯನ್ನು ಮತ್ತು ವೃತ್ತಿಯ ಅಡಿಯಲ್ಲಿನ ಚಟುವಟಿಕೆಯ ಸ್ವರೂಪದ ಮಹತ್ವ ಮತ್ತು ಉಪಯುಕ್ತತೆಯನ್ನು ಗಮನದಲ್ಲಿಟ್ಟುಕೊಂಡು, ಒದಗಿಸಲಾದ ಹಣಕಾಸಿನ ನೆರವು ದುರುಪಯೋಗವಾಗತಕ್ಕದ್ದಲ್ಲ ಎನ್ನುವುದನ್ನು ಖಾತರಿಪಡಿಸಿಕೊಂಡ ನಂತರ ಅನುದಾನದ ರೂಪದಲ್ಲಿ, ಕನಿಷ್ಟ ಹಣಕಾಸಿನ ನೆರವನ್ನು ಶಿಫಾರಸ್ಸು ಮಾಡುವುದು;

(ಜೆ) ನಿಧಿಯಿಂದ ಹೂಡಿಕೆಗಳನ್ನು ಮಾಡಬಹುದಾಗಿದ್ದಲ್ಲಿ, ಪ್ರಯೋಜನಕರ ಮತ್ತು ಸುರಕ್ಷಿತ ಕ್ಷೇತ್ರಗಳನ್ನು ಗುರುತಿಸುವುದು ಮತ್ತು ಅದರ ಪ್ರಕಾರವಾಗಿ ಶಿಫಾರಸ್ಸುಗಳನ್ನು ಮಾಡುವುದು;

(ಕೆ) ಒಬ್ಬ ಅರ್ಜಿದಾರನ ಗ್ರಾಹಕ ಕ್ಷೇಮಾಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಿಕೆಯ ಅವಧಿಗಾಗಿ ಅಗತ್ಯಪಡಿಸಿದ ಷರತ್ತುಗಳನ್ನು ಸಡಿಲಗೊಳಿಸುವುದು;

(ಎಲ್) ನಿಧಿಯ ನಿರ್ವಹಣೆ ಮತ್ತು ಆಡಳಿತಕ್ಕಾಗಿ ಮಾರ್ಗದರ್ಶಿಗಳನ್ನು ರೂಪಿಸುವುದು.

(7) ಸಮಿತಿಯು ಮುಖ್ಯ ವಿಷಯಗಳ ವಿವರಗಳನ್ನು ಪರಿಶೀಲಿಸಲಾಗಿರುವ ಮತ್ತು ಅದಕ್ಕನುಗುಣವಾಗಿ ಸದಸ್ಯ ಕಾರ್ಯದರ್ಶಿಯಿಂದ ಪರಿಗಣನೆಗೆ ಶಿಫಾರಸ್ಸಾಗಿರುವ ಹೊರತು ಒಂದು ಅರ್ಜಿಯನ್ನು ಪರಿಗಣಿಸತಕ್ಕದ್ದಲ್ಲ.

(8) ಸಮಿತಿಯು ಕೆಳಗಿನಂತೆ ಶಿಫಾರಸ್ಸುಗಳನ್ನು ಮಾಡತಕ್ಕದ್ದು:

(ಎ) ಯಾವುದೇ ಅರ್ಜಿದಾರನಿಗೆ ಅನುದಾನಗಳ ಲಭ್ಯತೆಯನ್ನು ಮಾಡುವುದಕ್ಕಾಗಿ;

(ಬಿ) ನಿಧಿಯಲ್ಲಿ ಲಭ್ಯವಿರುವ ಹಣದ ಹೂಡಿಕೆ ಮಾಡುವುದಕ್ಕಾಗಿ;

467

(ಸಿ) ಅಂತಿಮ ನಿರ್ಣಯದ ನಂತರ, ಗ್ರಾಹಕ ವ್ಯಾಜ್ಯಗಳಲ್ಲಿ ಒಬ್ಬ ದೂರುದಾರನಿಂದ ಅಥವಾ ದೂರುದಾರ ವರ್ಗದವರಿಂದ ಭರಿಸಲಾದ ಕಾನೂನು ವೆಚ್ಚಗಳನ್ನು ವಾಪಸಾತಿ ಮಾಡಲು ನಿಧಿಗಳ ಲಭ್ಯತೆಯನ್ನು ಮಾಡುವುದಕ್ಕಾಗಿ (ಆಯ್ಕೆ ಆಧಾರದ ಮೇಲೆ);

(ಡಿ) ಕೇಂದ್ರ ಗ್ರಾಹಕ ಸಂರಕ್ಷಣಾ ಪರಿಷತ್ತಿನಿಂದ (ಸಮಿತಿಯಿಂದ ಸಮಂಜಸವಾಗಿ ಪರಿಗಣಿಸಬಹುದಾಗಿದ್ದು) ಶಿಫಾರಸ್ಸು ಮಾಡಿದ ಯಾವುದೇ ಇತರೆ ಉದ್ದೇಶಗಳಿಗಾಗಿ ಅನುದಾನಗಳ ಲಭ್ಯತೆ ಮಾಡುವುದಕ್ಕಾಗಿ;

(ಇ) ಪ್ರಚಾರಕ್ಕಾಗಿ / ಜಿಎಸ್‌ಟಿ ಮೇಲೆ ಗ್ರಾಹಕರ ತಿಳುವಳಿಕೆಗಾಗಿ, ನಿಧಿಗೆ ಪ್ರತಿ ವರ್ಷ ಜಮೆಯಾದ ನಿಧಿಗಳ ಶೇಕಡ 50ರಷ್ಟರವರೆಗಿನಷ್ಟನ್ನು ಲಭ್ಯತೆಯನ್ನು ಮಾಡುವುದಕ್ಕಾಗಿ, ಪರಂತು ಗ್ರಾಹಕರ ವ್ಯವಹಾರಗಳ ಇಲಾಖೆಯವರ ಗ್ರಾಹಕರ ಕ್ಷೇಮಾಭಿವೃದ್ಧಿ ಚಟುವಟಿಕೆಗಳಿಗಾಗಿ ನಿಧಿಗಳ ಲಭ್ಯತೆಯು ಪ್ರತಿವರ್ಷಕ್ಕೆ 25 ಕೋಟಿ ರೂಪಾಯಿಗೆ ಕಡಿಮೆಯಿಲ್ಲದಂತೆ ಮಾಡುವುದಕ್ಕಾಗಿ.

ವಿವರಣೆ:– ಈ ನಿಯಮದ ಉದ್ದೇಶಗಳಿಗಾಗಿ–

(ಎ) ಅರ್ಜಿದಾರನು ಎಂದರೆ

(i) ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ;

(ii) ಸಂಸತ್ತಿನ ಅಥವಾ ರಾಜ್ಯದ ಅಥವಾ ಯಾವುದೇ ಇತರ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದ ಶಾಸನಸಭೆಯ ಅಧಿನಿಯಮದ ಅಡಿಯಲ್ಲಿ ಸಂರಚಿತವಾದ ನಿಯಂತ್ರಣ ಪ್ರಾಧಿಕಾರಗಳು ಅಥವಾ ಸ್ವಾಯತ್ತ ಸಂಸ್ಥೆಗಳು;

(iii) ಕಂಪನಿ ಅಧಿನಿಯಮ 2013 (2013ರ ಕೇಂದ್ರ ಅಧಿನಿಯಮ 18) ರಡಿಯಲ್ಲಿ ಅಥವಾ ಕಾಲಕ್ಕೆ ಜಾರಿಯಲ್ಲಿರುವ ಇನ್ನಿತರೆ ಯಾವುದೇ ಕಾನೂನಿನಡಿಯಲ್ಲಿ ನೋಂದಾಯಿತವಾದ, ಕನಿಷ್ಠ ಮೂರು ವರ್ಷಗಳಿಗಾಗಿ ಗ್ರಾಹಕ ಕ್ಷೇಮಾಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿಕೊಂಡ ಯಾವುದೇ ಏಜನ್ಸಿ ಅಥವಾ ಸಂಘ ಸಂಸ್ಥೆ;

(iv) ಗ್ರಾಹಕರ, ವಿಶೇಷವಾಗಿ ಮಹಿಳೆಯರ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ, ಗ್ರಾಮ ಅಥವಾ ಮಂಡಲ ಅಥವಾ ಸಮಿತಿ ಅಥವಾ ಸಮಿತಿ ಮಟ್ಟದ ಸಹಕಾರಗಳು;

(v) ಸಂಸತ್ತಿನ ಅಥವಾ ರಾಜ್ಯದ ಅಥವಾ ಕೇಂದ್ರಾಡಳಿತ ಪ್ರದೇಶದ ಶಾಸನಸಭೆಯ ಅಧಿಸೂಚನೆಯ ಅಡಿಯಲ್ಲಿ ಅನುಸ್ಥಾಪಿಸಲಾದ ಒಂದು ಶೈಕ್ಷಣಿಕ ಅಥವಾ ಸಂಶೋಧನಾ ಸಂಸ್ಥೆ ಅಥವಾ ಸಂಸತ್ತಿನ ಅಧಿನಿಯಮದ ಅಡಿಯಲ್ಲಿ ಸ್ಥಾಪಿತವಾದ ಇತರೆ ಶೈಕ್ಷಣಿಕ ಸಂಸ್ಥೆಗಳು ಅಥವಾ ವಿಶ್ವವಿದ್ಯಾಲಯ ಅನುದಾನ ಆಯೋಗ ಅಧಿನಿಯಮ, 1956 (1956ರ 3)ರ ಪ್ರಕರಣ 3ರ ಅಡಿಯಲ್ಲಿ ಭಾವಿತ ವಿಶ್ವವಿದ್ಯಾಲಯವೆಂದು ಘೋಷಿಸಲಾದ ಮತ್ತು ಕನಿಷ್ಠ ಮೂರು ವರ್ಷಗಳ ಅವಧಿಗಾಗಿ ಗ್ರಾಹಕ ಅಧ್ಯಯನವನ್ನು ಪಠ್ಯಕ್ರಮದ ಭಾಗವಾಗಿ ಉಳ್ಳ ಒಂದು ಸಂಸ್ಥೆ; ಮತ್ತು

(vi) ಗ್ರಾಹಕ ಸಂರಕ್ಷಣಾ ಅಧಿನಿಯಮ, 1986 (1986ರ 68)ರ ಪ್ರಕರಣ 2ರ ಉಪಪ್ರಕರಣ (1)ರ ಖಂಡ (ಬಿ) ಅಡಿ ದೂರುದಾರನೆಂದು ಪರಿಭಾಷಿತನಾದ, ಗ್ರಾಹಕ ವ್ಯಾಜ್ಯಗಳ ಪರಿಹಾರ ಸಂಸ್ಥೆಯಲ್ಲಿ ದರ್ಜಿಸಲಾದ ಪ್ರಕರಣದಲ್ಲಿ ಅವನಿಂದ ಭರಿಸಿದ ಕಾನೂನು ವೆಚ್ಚಗಳನ್ನು ವಾಪಸು ಪಡೆಯಲು ಮನವಿ ಸಲ್ಲಿಸುವವನು.

468

(ಬಿ) 'ಅರ್ಜಿ' ಎಂದರೆ ಸ್ಥಾಯಿ ಸಮಿತಿಯಿಂದ ಕಾಲಕಾಲಕ್ಕೆ ನಿರ್ದಿಷ್ಟಪಡಿಸಲಾದ ರೂಪದಲ್ಲಿನ ಒಂದು ನಮೂನೆಯಲ್ಲಿನ ಅರ್ಜಿ;

(ಸಿ) 'ಕೇಂದ್ರ ಗ್ರಾಹಕ ಸಂರಕ್ಷಣಾ ಪರಿಷತ್ತು' ಎಂದರೆ ಗ್ರಾಹಕರ ಹಕ್ಕುಗಳ ಏಳಿಗೆ ಮತ್ತು ಸಂರಕ್ಷಣೆಗಾಗಿ ಗ್ರಾಹಕ ಸಂರಕ್ಷಣಾ ಅಧಿನಿಯಮ, 1986 (1986ರ ಕೇಂದ್ರ ಅಧಿನಿಯಮ 68)ರ ಪ್ರಕರಣ 4ರ ಉಪಪ್ರಕರಣ (1)ರ ಅಡಿಯಲ್ಲಿ ಸ್ಥಾಪಿತವಾದ ಕೇಂದ್ರ ಗ್ರಾಹಕ ಸಂರಕ್ಷಣಾ ಪರಿಷತ್ತು;

(ಡಿ) 'ಸಮಿತಿ' ಎಂದರೆ ಉಪನಿಯಮ (4)ರಡಿಯಲ್ಲಿ ಸ್ಥಾಪಿತವಾದ ಸಮಿತಿ.

(ಇ) 'ಗ್ರಾಹಕ' ಪದಕ್ಕೆ, ರಾಜ್ಯ ತೆರಿಗೆಯನ್ನು ಸಂದಾಯಮಾಡಲಾದ ಸರಕುಗಳ ಗ್ರಾಹಕ ಸೇರಿದಂತೆ, ಗ್ರಾಹಕ ಸಂರಕ್ಷಣಾ ಅಧಿನಿಯಮ, 1986 (1986ರ ಕೇಂದ್ರ ಅಧಿನಿಯಮ 68)ರ ಪ್ರಕರಣ 2ರ, ಉಪಪ್ರಕರಣ (1)ರ, ಖಂಡ (ಡಿ)ಯಲ್ಲಿ ಅದಕ್ಕೆ ನೀಡಿದ ಅದೇ ಅರ್ಥವನ್ನು ನೀಡಲಾಗಿದೆ;

(ಎಫ್) 'ನಿಧಿ' ಎಂದರೆ ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ 27)ರ ಪ್ರಕರಣ 57ರ ಅಡಿಯಲ್ಲಿ ರಾಜ್ಯ ಸರ್ಕಾರದಿಂದ ಸ್ಥಾಪಿತವಾದ ನಿಧಿ.

(ಜಿ) 'ಯುಕ್ತ ಅಧಿಕಾರಿ' ಎಂದರೆ ಅಧಿನಿಯಮದ ಅಡಿಯಲ್ಲಿ ಪೂರ್ಣವಾಗಿ ಅಥವಾ ಆಂಶಿಕವಾಗಿ ರಾಜ್ಯ ತೆರಿಗೆಯ ಮರುಪಾವತಿಯ ಆದೇಶ ಹೊರಡಿಸಲು ಅಧಿಕಾರವುಳ್ಳ ಅಧಿಕಾರಿ ಎಂದರ್ಥ.

4. ನಮೂನೆ ಜಿಎಸ್‌ಟಿ ಐಟಿಸಿ–03ರ ತಿದ್ದುಪಡಿ. – ಸದರಿ ನಿಯಮಗಳ ನಮೂನೆ ಜಿಎಸ್‌ಟಿ ಐಟಿಸಿ–03 ರಲ್ಲಿ, ನಮೂದು 5(ಇ)ಯ ನಂತರ, **"ಸೂಚನೆಗಳು"** ಅಡಿಯಲ್ಲಿ **"**** ಬಂಡವಾಳ ಸರಕುಗಳ ಮೌಲ್ಯವು, ಬೆಲೆಪಟ್ಟಿಯ ದಿನಾಂಕದಿಂದ ವರ್ಷದ ಪ್ರತಿ ತ್ರೈಮಾಸಿಕಕ್ಕೆ ಅಥವಾ ಅದರ ಭಾಗಕ್ಕೆ ಐದು ಶೇಕಡವಾರು ಅಂಶಗಳಿಂದ ಕಡಿಮೆ ಮಾಡಿದ ಬೆಲೆಪಟ್ಟಿಯ ಮೌಲ್ಯ.**"** ಗುರುತು ಮತ್ತು ಪದಗಳಿಗಾಗಿ, **"**** ಬಂಡವಾಳ ಸರಕುಗಳ ಮೌಲ್ಯವು, ಬೆಲೆಪಟ್ಟಿಯ ದಿನಾಂಕದಿಂದ ಪ್ರತಿ ತಿಂಗಳಿಗೆ ಅಥವಾ ಅದರ ಭಾಗಕ್ಕೆ 1/60ರಷ್ಟನ್ನು ಕಡಿಮೆ ಮಾಡಿದ ಬೆಲೆಪಟ್ಟಿಯ ಮೌಲ್ಯವಾಗಿರತಕ್ಕದ್ದು**"** ಸಂಕೇತಗಳು, ಪದಗಳು ಮತ್ತು ಸಂಖ್ಯೆಗಳನ್ನು ಪ್ರತಿಯೋಜಿಸತಕ್ಕದ್ದು.

5. **ನಮೂನೆ ಜಿಎಸ್‌ಟಿಆರ್–10 ರ ಸೇರ್ಪಡೆ.**– ಸದರಿ ನಿಯಮಗಳ **ನಮೂನೆ ಜಿಎಸ್‌ಟಿಆರ್–8ರ** ನಂತರ, ಈ ಕೆಳಗಿನ ನಮೂನೆಯನ್ನು ಸೇರಿಸತಕ್ಕದ್ದು, ಅಂದರೆ :–

469

"ನಮೂನೆ ಜಿಎಸ್‌ಟಿಆರ್–10

(ನಿಯಮ 81ನ್ನು ನೋಡಿ)

ಅಂತಿಮ ರಿಟರ್ನ

1	ಜಿಎಸ್‌ಟಿಐಎನ್	
2	ಕಾನೂನು ಸಮ್ಮತ ಹೆಸರು	
3	ವ್ಯಾಪಾರದ ಹೆಸರು, ಯಾವುದಾದರೂ ಇದ್ದರೆ	
4	ಮುಂದಿನ ವ್ಯವಹಾರಕ್ಕಾಗಿ ವಿಳಾಸ	
5	ನೋಂದಣಿ ರದ್ದತಿಯು ಜಾರಿಗೆ ಬರುವ ದಿನಾಂಕ (ವ್ಯವಹಾರವನ್ನು ಅಂತಿಮಗೊಳಿಸಿದ ದಿನಾಂಕ ಅಥವಾ ನೋಂದಣಿಯನ್ನು ರದ್ದುಪಡಿಸಬೇಕಾಗಿರುವ ದಿನಾಂಕ)	
6	ರದ್ದತಿ ಆದೇಶದ ಉಲ್ಲೇಖ ಸಂಖ್ಯೆ	
7	ರದ್ದತಿ ಆದೇಶದ ದಿನಾಂಕ	

8. ದಾಸ್ತಾನಿನಲ್ಲಿರುವ ಹೂಡುವಳಿಗಳು, ದಾಸ್ತಾನಿನಲ್ಲಿರುವ ಭಾಗಶಃ ಪೂರ್ಣಗೊಂಡ ಅಥವಾ ಪೂರ್ಣಗೊಂಡ ಸರಕುಗಳು ಮತ್ತು ಯಾವುದರ ಹೂಡುವಳಿಗಳ ಮೇಲೆ ಹೂಡುವಳಿ ತೆರಿಗೆ ಜಮೆಯನ್ನು ಹಿಂತಿರುಗಿಸುವ ಮತ್ತು ಸರ್ಕಾರಕ್ಕೆ ಪಾವತಿಸುವ ಅವಶ್ಯಕತೆಯಿರುವುದೋ ಆ ಬಂಡವಾಳ ಸರಕುಗಳು/ ಸ್ಥಾವರ ಮತ್ತು ಯಂತ್ರೋಪಕರಣಗಳ ವಿವರಗಳು.

ಕ್ರಮ ಸಂಖ್ಯೆ	ಜಿಎಸ್‌ಟಿಐಎನ್	ಬೆಲೆಪಟ್ಟಿ/ಪ್ರವೇಶ ಬಿಲ್		ದಾಸ್ತಾನಿನಲ್ಲಿರುವ ಹೂಡುವಳಿಗಳ ವಿವರಗಳು, ಅರೆಪೂರ್ಣಗೊಂಡ ಅಥವಾ ಪೂರ್ಣಗೊಂಡ ದಾಸ್ತಾನು ಹೊಂದಿರುವ ಹೂಡುವಳಿಗಳು ಮತ್ತು ಬಂಡವಾಳ ಸರಕುಗಳು/ಸ್ಥಾವರ ಮತ್ತು ಯಂತ್ರೋಪಕರಣಗಳ ಹೂಡುವಳಿಗಳ ಮೇಲೆ ಹೂಡುವಳಿ ತೆರಿಗೆ ಜಮೆಯನ್ನು ಹಿಂತಿರುಗಿಸುವ ಮತ್ತು ಸರ್ಕಾರಕ್ಕೆ ಪಾವತಿಸುವ ವಿವರಗಳು	ಯೂನಿಟ್ ಕ್ವಾಂಟಿಟಿ ಕೋಡ್ (ಯುಕ್ಯೂಸಿ)	ಪರಿಮಾಣ	ಮೌಲ್ಯ (ಜಮೆ/ಖರ್ಚು ಚೀಟಿಯಂತೆ ಹೊಂದಾಯಿಸಿದ್ದು)	ಹೂಡುವಳಿ ತೆರಿಗೆ ಜಮೆ/ಪಾವತಿಸಬೇಕಾಗಿರುವ ತೆರಿಗೆ (ಯಾವುದು ಹೆಚ್ಚೋ ಅದು) (ರೂ. ಗಳಲ್ಲಿ)			
								ಕೇಂದ್ರ ತೆರಿಗೆ	ರಾಜ್ಯ/ ಕೇಂದ್ರಾಡಳಿತ ತೆರಿಗೆ	ಏಕೀಕೃತ ತೆರಿಗೆ	ಉಪಕರ
1	2	3	4	5	6	7	8	9	10	11	12
8(ಎ) ದಾಸ್ತಾನಿನಲ್ಲಿರುವ ಹೂಡುವಳಿಗಳ ವಿವರಗಳು (ಬೆಲೆಪಟ್ಟಿಗಳು ಲಭ್ಯವಿದ್ದ ಕಡೆ)											
8(ಬಿ) ಅರೆಪೂರ್ಣಗೊಂಡ ಅಥವಾ ಪೂರ್ಣಗೊಂಡ ದಾಸ್ತಾನು ಹೊಂದಿರುವ ಹೂಡುವಳಿಗಳು (ಬೆಲೆಪಟ್ಟಿಗಳು ಲಭ್ಯವಿದ್ದ ಕಡೆ)											
8(ಸಿ) ದಾಸ್ತಾನಿನಲ್ಲಿರುವ ಬಂಡವಾಳ ಸರಕುಗಳು/ಸ್ಥಾವರ ಮತ್ತು ಯಂತ್ರೋಪಕರಣಗಳು											
8(ಡಿ) ದಾಸ್ತಾನಿನಲ್ಲಿರುವ ಹೂಡುವಳಿಗಳು ಅಥವಾ ಅರೆಪೂರ್ಣಗೊಂಡ ಅಥವಾ ಪೂರ್ಣಗೊಂಡ ದಾಸ್ತಾನು ಹೊಂದಿರುವ ಹೂಡುವಳಿಗಳು (ಬೆಲೆಪಟ್ಟಿಗಳು ಲಭ್ಯವಿಲ್ಲದಿದ್ದ ಕಡೆ)											

9. ಪಾವತಿಸಬೇಕಾದ ಮತ್ತು ಪಾವತಿಸಿದ ತೆರಿಗೆ ಮೊತ್ತ (ಕೋಷ್ಟಕ 8ರ ಆಧಾರದ ಮೇಲೆ)

470

ಕ್ರಮ ಸಂಖ್ಯೆ	ವಿವರ	ಹಿಂದಿರುಗಿಸಬೇಕಾದ ಐಟಿಸಿ/ಪಾವತಿಸಬೇಕಾದ ತೆರಿಗೆ	ನೋಂದಣಿ ರದ್ದತಿ ಅರ್ಜಿಯೊಂದಿಗೆ ಪಾವತಿಸಿದ ತೆರಿಗೆ (ಜಿಎಸ್‌ಟಿಆರ್‌ಇಜಿ–16)	ಪಾವತಿಸಬೇಕಾಗಿರುವ ಬಾಕಿ ತೆರಿಗೆ (3–4)	ವಿದ್ಯುನ್ಮಾನ ನಗದು ಖಾತೆಯಲ್ಲಿ ಖರ್ಚುಮಾಡಿ	ವಿದ್ಯುನ್ಮಾನ ಜಮೆ ಖಾತೆಯಲ್ಲಿ ಖರ್ಚುಮಾಡಿ ಪಾವತಿಸಿದ ತೆರಿಗೆ			
						ಕೇಂದ್ರ ತೆರಿಗೆ	ರಾಜ್ಯ/ ಕೇಂದ್ರಾಡಳಿತ ತೆರಿಗೆ	ಏಕೀಕೃತ ತೆರಿಗೆ	ಉಪಕರ
1	2	3	4	5	6	7	8	9	10
1.	ಕೇಂದ್ರ ತೆರಿಗೆ								
2.	ರಾಜ್ಯ/ ಕೇಂದ್ರಾಡಳಿತ ತೆರಿಗೆ								
3.	ಏಕೀಕೃತ ತೆರಿಗೆ								
4.	ಉಪಕರ								

10. ಬಡ್ಡಿ, ವಿಳಂಬ ಶುಲ್ಕ ಪಾವತಿಸಬೇಕಾದದ್ದು ಮತ್ತು ಪಾವತಿಸಿದ್ದು

ವಿವರ	ಪಾವತಿಸಬೇಕಾದ ಮೊತ್ತ	ಪಾವತಿಸಿದ ಮೊತ್ತ
1	2	3
(i) ಈ ಕೆಳಗಿನವುಗಳಿಗೆ ಸಂಬಂಧಿಸಿದಂತೆ ಬಡ್ಡಿ		
(a) ಏಕೀಕೃತ ತೆರಿಗೆ		
(b) ಕೇಂದ್ರ ತೆರಿಗೆ		
(c) ರಾಜ್ಯ/ ಕೇಂದ್ರಾಡಳಿತ ತೆರಿಗೆ		
(d) ಉಪಕರ		
(ii) ಈ ಕೆಳಗಿನವುಗಳಿಗೆ ಸಂಬಂಧಿಸಿದಂತೆ ವಿಳಂಬ ಶುಲ್ಕ		
(a) ಕೇಂದ್ರ ತೆರಿಗೆ		
(b) ರಾಜ್ಯ/ ಕೇಂದ್ರಾಡಳಿತ ತೆರಿಗೆ		

11. ಪರಿಶೀಲನೆ

ಈ ಮೇಲೆ ನೀಡಲಾದ ಮಾಹಿತಿಯು ನನ್ನ ತಿಳುವಳಿಕೆಗೆ ಮತ್ತು ನಂಬಿಕೆಯ ಪ್ರಕಾರ ಸತ್ಯವಾಗಿರುತ್ತದೆ ಮತ್ತು ಸರಿಯಾಗಿರುತ್ತದೆ ಹಾಗೂ ಯಾವುದೇ ಮಾಹಿತಿಯನ್ನು ಇದರಿಂದ ಮರೆಮಾಚಿರುವುದಿಲ್ಲ ಎಂದು ನಾನು ಈ ಮೂಲಕ ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

ಪ್ರಾಧಿಕೃತ ಸಹಿದಾರನ ಸಹಿ

ಹೆಸರು _____

ಪದನಾಮ/ ಸ್ಥಾನ _____

ದಿನಾಂಕ – ಡಿಡಿ/ಎಮ್ ಎಮ್/ವೈವೈವೈವೈ

ಸೂಚನೆಗಳು:

1. ಈ ನಮೂನೆಯನ್ನು ಕೆಳಗಿನಂತೆ ನೋಂದಾಯಿತರಾದ ಯಾವ ತೆರಿಗೆ ಪಾವತಿದಾರರು ಅಥವಾ ವ್ಯಕ್ತಿಗಳು ತುಂಬುವ ಅಗತ್ಯತೆ ಇರುವುದಿಲ್ಲ :–

   (i) ಹೂಡುವಳಿ ಸೇವೆ ಹಂಚಿಕೆದಾರರು;

   (ii) ಪ್ರಕರಣ 10ರಡಿಯಲ್ಲಿ ತೆರಿಗೆ ಪಾವತಿಸುವ ವ್ಯಕ್ತಿಗಳು;

   (iii)ಅನಿವಾಸಿ ತೆರಿಗೆದಾಯಕ ವ್ಯಕ್ತಿ;

471

(iv) ಪ್ರಕರಣ 51ರಡಿಯಲ್ಲಿ ಮೂಲದಲ್ಲಿ ತೆರಿಗೆ ಮುರುಗಡೆ ಮಾಡಲು ಅವಶ್ಯವಿರುವ ವ್ಯಕ್ತಿಗಳು; ಮತ್ತು

(v) ಪ್ರಕರಣ 52ರಡಿಯಲ್ಲಿ ಮೂಲದಲ್ಲಿ ತೆರಿಗೆ ಸಂಗ್ರಹಿಸಲು ಅವಶ್ಯವಿರುವ ವ್ಯಕ್ತಿಗಳು.

2. ದಾಸ್ತಾನಿನಲ್ಲಿರುವ ಹೂಡುವಳಿಗಳ ವಿವರಗಳು, ಅರೆಪೂರ್ಣಗೊಂಡ ಅಥವಾ ಪೂರ್ಣಗೊಂಡ ದಾಸ್ತಾನು ಹೊಂದಿರುವ ಹೂಡುವಳಿಗಳು ಮತ್ತು ಬಂಡವಾಳ ಸರಕುಗಳು/ಸ್ಥಾವರ ಮತ್ತು ಯಂತ್ರೋಪಕರಣಗಳ ಹೂಡುವಳಿಗಳ ಮೇಲೆ ಹೂಡುವಳಿ ತೆರಿಗೆ ಜಮೆಯನ್ನು ಪಡೆದುಕೊಂಡು ನಂತರ ಹಿಂತಿರುಗಿಸುವ ಮತ್ತು ಸರ್ಕಾರಕ್ಕೆ ಪಾವತಿಸುವ ವಿವರಗಳು

3. ಕ್ರಮ ಸಂಖ್ಯೆ 8ರಲ್ಲಿ ದಾಸ್ತಾನಿನ ವಿವರಗಳನ್ನು ಒದಗಿಸುವಾಗ ಈ ಕೆಳಗಿನ ಅಂಶಗಳನ್ನು ಗಮನಿಸುವ ಅವಶ್ಯಕತೆ ಇರುತ್ತದೆ:

(i) ದಾಸ್ತಾನಿನಲ್ಲಿರುವ ಹೂಡುವಳಿಗಳು, ಅರೆಪೂರ್ಣಗೊಂಡ ಅಥವಾ ಪೂರ್ಣಗೊಂಡ ದಾಸ್ತಾನುಗಳಿಗೆ ಹೊಂದಿರುವ ಹೂಡುವಳಿಗಳಿಗೆ ಸಂಬಂಧಿಸಿದಂತೆ ತೆರಿಗೆ ಬೆಲೆಪಟ್ಟಿಗಳು ಲಭ್ಯವಿರದಿದಲ್ಲಿ, ನೋಂದಾಯಿತ ವ್ಯಕ್ತಿಯು ನಿಯಮ 44ರ ಉಪನಿಯಮ (3) ರಡಿಯಲ್ಲಿ ಸರಕುಗಳ ಹಾಲಿ ಮಾರುಕಟ್ಟೆದರಗಳ ಅನ್ವಯ ಅಂದಾಜು ಮಾಡತಕ್ಕದ್ದು;

(ii) ಬಂಡವಾಳ ಸರಕುಗಳು/ಸ್ಥಾವರ ಮತ್ತು ಯಂತ್ರೋಪಕರಣಗಳ ಹೂಡುವಳಿಗಳಿಗೆ ಸಂಬಂಧಿಸಿದಂತೆ, ಅದರ ಬೆಲೆಪಟ್ಟಿಯ ಮೌಲ್ಯವನ್ನು ಅವುಗಳ ಉಪಯುಕ್ತ ಜೀವಾವಧಿ ಐದು ವರ್ಷಗಳೆಂದು ಪರಿಗಣಿಸಿ ತೆರಿಗೆ ಬೆಲೆಪಟ್ಟಿಯ/ ಖರೀದಿ ದಿನಾಂಕದಿಂದ ಪ್ರತಿ ಮಾಹೆಗೆ ಅಥವಾ ಅಂಶಕ್ಕೆ ಒಂದನೇ ಅರವತ್ತರ ಭಾಗದಿಂದ ಕಡಿತಗೊಳಿಸಿ ಪರಿಗಣಿಸತಕ್ಕದ್ದು.

4. ಕೋಷ್ಟಕದ ಕ್ರಮಸಂಖ್ಯೆ 8ಕ್ಕೆ (ನಮೂದು 8(ಡಿ)ಗೆ) ನಿಯಮ 44ರ ಉಪನಿಯಮ (3)ರನ್ವಯ ಒದಗಿಸಿದ ವಿವರಗಳು ಒಬ್ಬ ವೃತ್ತಿನಿರತ ಸನ್ನದು ಅಕೌಂಟೆಂಟ್ ಅಥವಾ ಕಾಸ್ಟ್ ಅಕೌಂಟೆಂಟ್‌ರಿಂದ ಪ್ರಮಾಣೀಕರಿಸಿದಂತಹವಾಗಿರತಕ್ಕದ್ದು. ವಿವರಗಳನ್ನು ದಾಖಲಿಸುವಾಗ ಪ್ರಮಾಣಪತ್ರದ ಪ್ರತಿಯನ್ನು ಅಪ್‌ಲೋಡ್ ಮಾಡತಕ್ಕದ್ದು";

6. **ನಮೂನೆ ಜಿಎಸ್‌ಟಿ ಡಿಆರ್‌ಸಿ–07ರ ಪ್ರತಿಯೋಜನೆ.** – ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಡಿಆರ್‌ಸಿ–07** ಗಾಗಿ, ಈ ಕೆಳಗಿನದ್ದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ :–

"ನಮೂನೆ ಜಿಎಸ್‌ಟಿ ಡಿಆರ್‌ಸಿ–07

(ನಿಯಮ 142(5) ನ್ನು ನೋಡಿ)

ಆದೇಶದ ಸಾರಾಂಶ

1. ಆದೇಶದ ವಿವರಗಳು –

(ಎ) ಆದೇಶ ಸಂಖ್ಯೆ. (ಬಿ) ಆದೇಶದ ದಿನಾಂಕ (ಸಿ) ತೆರಿಗೆ ಅವಧಿ

2. ಒಳಗೊಂಡ ವಿವಾದಾಂಶಗಳು–<<ಡ್ರಾಪ್ ಡೌನ್>>
ವರ್ಗೀಕರಣ, ಮೌಲ್ಯಮಾಪನ, ತೆರಿಗೆ ದರ, ವಹಿವಾಟನ್ನು ಬಚ್ಚಿಟಿರುವುದು, ಅಧಿಕ ಐಟಿಸಿ ಕ್ಲೇಮು ಮಾಡಿರುವುದು, ಅಧಿಕ ಮರುಪಾವತಿ ಬಿಡುಗಡೆಯಾಗಿರುವುದು, ಪೂರೈಕೆ ಸ್ಥಳ, ಇತರೆ (ನಿರ್ದಿಷ್ಟಪಡಿಸಿ)

3. ಸರಕು/ ಸೇವೆಗಳ ವಿವರಣೆ –

ಕ್ರಮ ಸಂಖ್ಯೆ	ಹೆಚ್‌ಎಸ್‌ಎನ್	ವಿವರಣೆ

472

4. ತಗಾದೆಯ ವಿವರಗಳು (ಮೊತ್ತ, ರೂಗಳಲ್ಲಿ)

ಕ್ರಮ ಸಂಖ್ಯೆ	ತೆರಿಗೆ ದರ	ವಹಿವಾಟು	ಪೂರೈಕೆ ಸ್ಥಳ	ಅಧಿನಿಯಮ	ತೆರಿಗೆ/ ಉಪಕರ	ಬಡ್ಡಿ	ದಂಡ	ಇತರೆ
1	2	3	4	5	6	7	8	9

ಸಹಿ
ಹೆಸರು
ಪದನಾಮ"

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

473

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಕ್ಯೂ/2017)
ನಂ. ಆಇ 47 ಸಿಎಸ್ಎಲ್ 2017, ಬೆಂಗಳೂರು, ದಿನಾಂಕ: 29.06.2018

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕ ಅಧಿನಿಯಮ 27), ಪ್ರಕರಣ 164ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017, ಇವುಗಳಿಗೆ ಮುಂದುವರಿದ ತಿದ್ದುಪಡಿ ತರಲು ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಅಂದರೆ:–

ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ.– (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಏಳನೇ ತಿದ್ದುಪಡಿ) ನಿಯಮಗಳು, 2018 ಎಂದು ಕರೆಯಬಹುದು.

(2) ಉಪಬಂಧಿಸಿದುದನ್ನುಳಿದು, ಸದರಿ ನಿಯಮಗಳು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಲಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ನಿಯಮ 37ರ ತಿದ್ದುಪಡಿ.– ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017 (ಇನ್ನು ಮುಂದೆ **"**ಸದರಿ ನಿಯಮಗಳು**"** ಎಂದು ಉಲ್ಲೇಖಿಸಲಾಗಿದೆ) ರಲ್ಲಿ, ನಿಯಮ 37ರಲ್ಲಿ, ಉಪನಿಯಮ (1)ರಲ್ಲಿ, ಒಂದನೇ ಪರಂತುಕದ ನಂತರ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:–

"ಮತ್ತು ಪರಂತು, ಪ್ರಕರಣ 15ರ, ಉಪಪ್ರಕರಣ (2)ರ, ಖಂಡ(ಬಿ)ಯ ಉಪಬಂಧಗಳ ಅನ್ವಯ ಸೇರಿಸಿದ ಯಾವುದಾದರೂ ಮೊತ್ತಕ್ಕೆ ಸಂಬಂಧಿಸಿದ ಪೂರೈಕೆಗಳ ಮೌಲ್ಯವು ಪ್ರಕರಣ 16ರ ಉಪಪ್ರಕರಣ (2)ರ ಎರಡನೇ ಪರಂತುಕದ ಉದ್ದೇಶಗಳಿಗಾಗಿ ಪಾವತಿಯಾಗಿದೆಯೆಂದು ಪರಿಭಾವಿಸತಕ್ಕದ್ದು.**"**;

3. **ನಿಯಮ 58ರ ತಿದ್ದುಪಡಿ.**– ಸದರಿ ನಿಯಮಗಳ ನಿಯಮ 58ರಲ್ಲಿ, ಉಪನಿಯಮ (1)ರ ನಂತರ, ಈ ಕೆಳಗಿನ ಉಪನಿಯಮವನ್ನು ಸೇರಿಸತಕ್ಕದ್ದು, ಅಂದರೆ:–

"(1ಎ) ಈ ನಿಯಮಗಳ ಅಧ್ಯಾಯ XVIರ ಉದ್ದೇಶಗಳಿಗಾಗಿ, ಅದೇ ಖಾಯಂ ಖಾತೆ ಸಂಖ್ಯೆ (PAN)ಯನ್ನು ಹೊಂದಿರುವ ಒಂದಕ್ಕಿಂತ ಹೆಚ್ಚು ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶಗಳಲ್ಲಿ ನೋಂದಾಯಿತನಾದ ಸಾಗಾಣಿಕೆದಾರನು, ತನ್ನ ಯಾವುದಾದರೊಂದು ಸರಕು ಮತ್ತು ಸೇವೆಗಳ ತೆರಿಗೆ ಗುರುತಿನ ಸಂಖ್ಯೆಯನ್ನು ಉಪಯೋಗಿಸಿ ನಮೂನೆ ಜಿಎಸ್ಟಿ ಇಎನ್ಆರ್–02ರಲ್ಲಿ ವಿವರಗಳನ್ನು ಸಲ್ಲಿಸುವ ಮೂಲಕ ಒಂದು ವಿಶಿಷ್ಟ ಸಾಮಾನ್ಯ ದಾಖಲಿತ ಸಂಖ್ಯೆಗಾಗಿ ಅರ್ಜಿ ಸಲ್ಲಿಸಬಹುದು, ಮತ್ತು ಒದಗಿಸಿದ ವಿವರಗಳ ಅಧಿಕೃತತೆ ಮೇರೆಗೆ ಸದರಿ ಸಾಗಾಣಿಕೆದಾರನಿಗೆ ಒಂದು ವಿಶಿಷ್ಟ ಸಾಮಾನ್ಯ ದಾಖಲಿತ ಸಂಖ್ಯೆಯನ್ನು ಸೃಷ್ಟಿಸತಕ್ಕದ್ದು ಮತ್ತು ತಿಳಿಸತಕ್ಕದ್ದು.;

ಪರಂತು, ವಿಶಿಷ್ಟ ಸಾಮಾನ್ಯ ದಾಖಲಿತ ಸಂಖ್ಯೆಯನ್ನು ಸದರಿ ಸಾಗಾಣಿಕೆದಾರನು ಪಡೆದಿದ್ದಲ್ಲಿ, ಅವನು ಯಾವುದೇ ಸರಕು ಮತ್ತು ಸೇವೆಗಳ ತೆರಿಗೆ ಗುರುತಿನ ಸಂಖ್ಯೆಯನ್ನು ಅಧ್ಯಾಯ XVIರ ಉದ್ದೇಶಗಳಿಗಾಗಿ

474

ಉಪಯೋಗಿಸಲು ಅರ್ಹನಾಗಿರತಕ್ಕದ್ದಲ್ಲ.";

4. ನಿಯಮ 83ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 83ರಲ್ಲಿ, ಉಪನಿಯಮ (3)ರಲ್ಲಿ, ಎರಡನೇ ಪರಂತುಕದಲ್ಲಿ, 'ಒಂದು ವರ್ಷ' ಪದಗಳಿಗಾಗಿ 'ಹದಿನೆಂಟು ತಿಂಗಳುಗಳು' ಪದಗಳನ್ನು ಪ್ರತಿಯೋಜಿಸತಕ್ಕದ್ದು;

5. **ನಿಯಮ 89ರ ತಿದ್ದುಪಡಿ.** – ಸದರಿ ನಿಯಮಗಳ ನಿಯಮ 89ರಲ್ಲಿ, ಉಪನಿಯಮ (5)ಕ್ಕಾಗಿ, 1ನೇ ಜುಲೈ 2017ದಿಂದ ಜಾರಿಗೆ ಬರುವಂತೆ, ಈ ಕೆಳಗಿನದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ;–

"(5) ವಿಲೋಮ ತೆರಿಗೆ ಸಂರಚನೆಯಲ್ಲಿ ಮರುಪಾವತಿಯ ಸಂದರ್ಭದಲ್ಲಿ, ಹೂಡುವಳಿ ತೆರಿಗೆ ಜಮೆಯ ಮರುಪಾವತಿಯನ್ನು ಕೆಳಕಂಡ ಸೂತ್ರದ ಪ್ರಕಾರ ಮಂಜೂರು ಮಾಡತಕ್ಕದ್ದು–

ಗರಿಷ್ಟ ಮರುಪಾವತಿ ಮೊತ್ತ = {(ಸರಕು ಮತ್ತು ಸೇವೆಗಳ ವಿಲೋಮ ದರದ ಪೂರೈಕೆಯ ವಹಿವಾಟು) X ನಿವ್ವಳ ಐಟಿಸಿ ÷ ಹೊಂದಿಸಿದ ಒಟ್ಟು ವಹಿವಾಟು} – ಸರಕು ಮತ್ತು ಸೇವೆಗಳ ಅಂಥ ವಿಲೋಮ ದರದ ಪೂರೈಕೆಯ ಮೇಲೆ ಸಂದಾಯ ಮಾಡಬೇಕಾದ ತೆರಿಗೆ.

ವಿವರಣೆ.– ಈ ಉಪನಿಯಮದ ಉದ್ದೇಶಗಳಿಗಾಗಿ, ಪದಾವಳಿಗಳು –

(ಎ) ನಿವ್ವಳ ಐಟಿಸಿ ಎಂದರೆ ಉಪನಿಯಮಗಳು (4ಎ) ಅಥವಾ (4ಬಿ) ಅಥವಾ ಅವೆರಡರ ಅಡಿಯಲ್ಲಿ ಮರುಪಾವತಿಯನ್ನು ಕ್ಲೇಮು ಮಾಡಲು ಉಪಯೋಗಿಸಿದ ಹೂಡುವಳಿ ತೆರಿಗೆಯ ಜಮೆಯನ್ನು ಹೊರತುಪಡಿಸಿ, ಸಂಬಂಧಿಸಿದ ಅವಧಿಯಲ್ಲಿ ಹೂಡುವಳಿಗಳ ಮೇಲೆ ಉಪಯೋಗಿಸಿದ ಹೂಡುವಳಿ ತೆರಿಗೆ ಜಮೆ; ಮತ್ತು

(ಬಿ) ಹೊಂದಿಸಿದ ಒಟ್ಟು ವಹಿವಾಟು ಎಂಬುದು ಉಪನಿಯಮ (4)ರಲ್ಲಿ ಅದಕ್ಕೆ ನಿಯೋಜಿಸಿದ ಅದೇ ಅರ್ಥವನ್ನೇ ಹೊಂದಿರತಕ್ಕದ್ದು."

5. ನಿಯಮ 95ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 95ರಲ್ಲಿ, ಉಪನಿಯಮ (3)ರಲ್ಲಿ, ಖಂಡ (ಎ)ಗಾಗಿ, 1ನೇ ಜುಲೈ 2017ರಿಂದ ಜಾರಿಗೆ ಬರುವಂತೆ, ಈ ಕೆಳಗಿನದ್ದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ;–

"(ಎ) ಒಬ್ಬ ನೋಂದಾಯಿತ ವ್ಯಕ್ತಿಯಿಂದ ತೆರಿಗೆ ಬೆಲೆಪಟ್ಟಿಯ ಮೇಲೆ ಸ್ವೀಕರಿಸಿದ ಸರಕು ಅಥವಾ ಸೇವೆಗಳು ಮತ್ತು ಅಥವಾ ಅವರೆಡರ ಒಳಮುಖ ಪೂರೈಕೆಗಳು;".

6. ನಿಯಮ 97ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 97ರಲ್ಲಿ, ಉಪನಿಯಮ (1)ರಲ್ಲಿ, ಪರಂತುಕಕ್ಕಾಗಿ, ಈ ಕೆಳಗಿನ ಪರಂತುಕಗಳನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ಪರಂತು, ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕೇಂದ್ರ ಅಧಿನಿಯಮ 13)ರ ಪ್ರಕರಣ 20ನ್ನು ಓದಿಕೊಂಡು, ಕರ್ನಾಟಕ ಸರಕು ಮತ್ತು ಸೇವೆಗಳ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ 27)ರ ಪ್ರಕರಣ 54ರ ಉಪಪ್ರಕರಣ (5)ರಡಿಯಲ್ಲಿ ನಿರ್ಧರಿಸಲಾದ ಏಕೀಕೃತ ತೆರಿಗೆಯ ಶೇಕಡ 50ರಷ್ಟಕ್ಕೆ ಸಮನಾದ ಮೊತ್ತವನ್ನು ನಿಧಿಗೆ ಠೇವಣಿ ಮಾಡತಕ್ಕದ್ದು;

6ಎಮ್	ಮೇಲಿನ 6ಬಿ ಯಿಂದ 6ಎಲ್ ವರೆಗೆ ನಿಗದಿಪಡಿಸಿದ ಶೀರ್ಷಿಕೆಗಳಡಿಯಲ್ಲಿ ಒಳಗೊಂಡಿಲ್ಲದ, ಆದರೆ ಉಪಯೋಗಿಸಿಕೊಂಡ ಹೂ.ತೆ.ಜ ವಿವರಗಳನ್ನು ಇಲ್ಲಿ ಘೋಷಿಸತಕ್ಕದ್ದು. ಹಣಕಾಸು ವರ್ಷದಲ್ಲಿ ನಮೂನೆ ಐಟಿಸಿ–01 ಮತ್ತು ಐಟಿಸಿ–02 ರ ಮೂಲಕ ಉಪಯೋಗಿಸಿದ ಹೂ.ತೆ. ಜಮೆಯ ವಿವರಗಳನ್ನು ಇಲ್ಲಿ ಘೋಷಿಸತಕ್ಕದ್ದು.
7ಎ, 7ಬಿ, 7ಸಿ, 7ಡಿ, 7ಇ, 7ಎಫ್, 7ಜಿ ಮತ್ತು 7ಹೆಚ್	ಅನರ್ಹತೆಯ ಕಾರಣದಿಂದಾಗಿ ಹಿಮ್ಮುಖಗೊಳಿಸಿದ ಹೂ.ತೆ.ಜ ಅಥವಾ ಕೇಂದ್ರ ಸರಕು ಮತ್ತು ಸೇವಾ ತೆರಿಗೆ ನಿಯಮಗಳು 2017ರ ನಿಯಮ 37, 39, 42 ಮತ್ತು 43 ರಡಿಯಲ್ಲಿ ಮಾಡಬೇಕಾದಂತಹ ಹಿಮ್ಮುಖಗೊಳಿಸುವಿಕೆಯ ವಿವರಗಳನ್ನು ಇಲ್ಲಿ ಘೋಷಿಸತಕ್ಕದ್ದು. ಈ ಕಾಲಂ, ಕೇಂದ್ರ ಸರಕು ಮತ್ತು ಸೇವಾ ತೆರಿಗೆ ಅಧಿನಿಯಮ 2017ರ ಪ್ರಕರಣ 17(5)ರಡಿಯಲ್ಲಿ ಯಾವುದೇ ಹಿಮ್ಮುಖಗೊಳಿಸಿದ ಹೂ.ತೆ.ಜ ವಿವರಗಳು ಮತ್ತು ನಮೂನೆ ಜಿಎಸ್‌ಟಿ ಟ್ರಾನ್–1 ಅಥವಾ ಜಿಎಸ್‌ಟಿ ಟ್ರಾನ್–11 ನಲ್ಲಿ ಕ್ಲೇಮು ಮಾಡಿದ ನಂತರದಲ್ಲಿ ಹಿಮ್ಮುಖಗೊಳಿಸಿದ ಅನರ್ಹ ಸ್ಥಿತ್ಯಂತರಕಾಲೀನ ಜಮೆ ವಿವರಗಳನ್ನೂ ಸಹ ಒಳಗೊಂಡಿರಬೇಕು. ಈ ವಿವರಗಳನ್ನು ಭರ್ತಿ ಮಾಡಲು ನಮೂನೆ ಜಿಎಸ್‌ಟಿಆರ್–3ಬಿ ರ ಕೋಷ್ಟಕ 4(ಬಿ) ಅನ್ನು ಬಳಸಿಕೊಳ್ಳಬಹುದಾಗಿರುತ್ತದೆ. ನಮೂನೆ ಐಟಿಸಿ–03ರ ಮೂಲಕ ಹಿಮ್ಮುಖಗೊಳಿಸಿದ ಯಾವುದೇ ಹೂ.ತೆ.ಜ ಯನ್ನು 7ಹೆಚ್‌ನಲ್ಲಿ ಘೋಷಿಸಿತಕ್ಕದ್ದು. ನಮೂನೆ ಜಿಎಸ್‌ಟಿಆರ್–3ಬಿ ಯ ಕೋಷ್ಟಕ 4ಡಿ ನಲ್ಲಿ ಹೇಳಿರುವ ಮೊತ್ತವು ನಮೂನೆ ಜಿಎಸ್‌ಟಿಆರ್–3ಬಿ ಯ ಕೋಷ್ಟಕ 4ಎ ನಲ್ಲಿ ಒಳಗೊಂಡಿಲ್ಲದಿದ್ದರೆ, ನಮೂನೆ ಜಿಎಸ್‌ಟಿಆರ್–9ರ ಕೋಷ್ಟಕ 7ಇ ನಲ್ಲಿ ಯಾವುದೇ ಅಂಶವನ್ನು ದಾಖಲಿಸಬಾರದು. ಆದಾಗ್ಯೂ, ನಮೂನೆ ಜಿಎಸ್‌ಟಿಆರ್–3ಬಿ ಯ ಕೋಷ್ಟಕ ಅಡಿಯಲ್ಲಿ ಹೇಳಿರುವ ಮೊತ್ತವು ನಮೂನೆ ಜಿಎಸ್‌ಟಿಆರ್–3ಬಿ ಯ ಕೋಷ್ಟಕ 4ಎ ನಲ್ಲಿ ಒಳಗೊಂಡಿದ್ದಲ್ಲಿ, ನಮೂನೆ ಜಿಎಸ್‌ಟಿಆರ್–9ರ ಕೋಷ್ಟಕ 7ಇ ನಲ್ಲಿ ದಾಖಲಾಗಿರುತ್ತದೆ.
8ಎ	ಹಣಕಾಸು ವರ್ಷ 2017–18ರಲ್ಲಿ ಒಳಮುಖ ಪೂರೈಕೆಗಳ ಮೇಲೆ ಲಭ್ಯವಿರುವ (ಆಮದು ಮತ್ತು ಹಿಮ್ಮುಖ ವಿಧಿಸುವಿಕೆ ಹೊಣೆಯುಕ್ತ ಒಳಮುಖ ಪೂರೈಕೆಗಳನ್ನು ಹೊರತು ಪಡಿಸಿ ಆದರೆ ವಿ.ಆ.ವ ಗಳಿಂದ ಸ್ವೀಕರಿಸಿದ ಸೇವೆಗಳನ್ನು ಒಳಗೊಂಡಂತೆ) ಮತ್ತು ನಮೂನೆ ಜಿಎಸ್‌ಟಿಆರ್–2ಎ (ಕೋಷ್ಟಕ–3 ಮತ್ತು 5 ಮಾತ್ರ) ನಲ್ಲಿ ಪ್ರತಿಫಲಿಸಿದ ಒಟ್ಟು ಜಮೆ ಈ ಕೋಷ್ಟಕದಲ್ಲಿ ಸ್ವಯಂ ಪ್ರದರ್ಶಿತಗೊಳ್ಳುತ್ತದೆ. ಇದು, ಆಯಾ ಪೂರೈಕೆದಾರರು ತಮ್ಮ ನಮೂನೆ ಜಿಎಸ್‌ಟಿಆರ್–1ರಲ್ಲಿ ಘೋಷಿಸಿದ ಎಲ್ಲಾ ಹೂ.ತೆ.ಜಗಳ ಸಮಗ್ರ ಮೊತ್ತವಾಗಿರುತ್ತದೆ.
8ಬಿ	ಕೋಷ್ಟಕ–6ಬಿ ಮತ್ತು 6ಹೆಚ್‌ನಲ್ಲಿ ಘೋಷಿಸಿದಂತೆ ಹೂ.ತೆ.ಜಮೆಯು ಇಲ್ಲಿ ಸ್ವಯಂ ಪ್ರದರ್ಶಿತಗೊಳ್ಳುತ್ತದೆ.
8ಸಿ	ಜುಲೈ 2017 ರಿಂದ ಮಾರ್ಚ್ 2018ರ ಅವಧಿಯಲ್ಲಿ ಸ್ವೀಕರಿಸಿದ ಎಲ್ಲಾ ಒಳಮುಖ ಪೂರೈಕೆಗಳ (ಹಿಮ್ಮುಖ ವಿಧಿಸುವಿಕೆ ಆಧಾರದಲ್ಲಿ ತೆರಿಗೆ ಸಂದಾಯ ಮಾಡಬೇಕಾದಂತಹ ಪೂರೈಕೆಗಳನ್ನು ಹೊರತುಪಡಿಸಿ ಆದರೆ ವಿ.ಆ.ವ ಗಳಿಂದ ಸ್ವೀಕರಿಸಿದ ಪೂರೈಕೆಗಳನ್ನು ಒಳಗೊಂಡಂತೆ) ಮೇಲೆ

562

	ಉಪಯೋಗಿಸಿಕೊಂಡ ಹೂ.ತೆ.ಜ, ಆದರೆ ಏಪ್ರಿಲ್ ರಿಂದ ಸೆಪ್ಟೆಂಬರ್ 2018ರ ನಡುವೆ ಉಪಯೋಗಿಸಿ ಜಮೆಯ ಸಮಗ್ರ ಮೌಲ್ಯ, ಇಲ್ಲಿ ಘೋಷಿಸತಕ್ಕದ್ದು. ಈ ವಿವರಗಳನ್ನು ಭರ್ತಿ ಮಾಡಲು ನಮೂನೆ ಜಿಎಸ್‌ಟಿಆರ್–3ಬಿ ರ ಕೋಷ್ಟಕ 4(ಎ)(5) ಅನ್ನು ಬಳಸಿಕೊಳ್ಳಬಹುದಾಗಿರುತ್ತದೆ.
8ಡಿ	ನಮೂನೆ ಜಿಎಸ್‌ಟಿಆರ್–2ಎ (ಕೋಷ್ಟಕ 3 ಮತ್ತು 5 ಮಾತ್ರ) ನಲ್ಲಿ ಲಭ್ಯವಿರುವ ಆದರೆ ನಮೂನೆ ಜಿಎಸ್‌ಟಿಆರ್–3ಬಿ ರಿಟರ್ನ್‌ಗಳಲ್ಲಿ ಉಪಯೋಗಿಸಿಕೊಳ್ಳದ ಹೂಡುವಳಿ ತೆರಿಗೆ ಜಮೆಯ ಸಮಗ್ರ ಮೌಲ್ಯವನ್ನು 8ಎ, 8ಬಿ ಮತ್ತು 8ಸಿ ಮೌಲ್ಯಗಳ ಆಧಾರದ ಮೇಲೆ ಲೆಕ್ಕಹಾಕತಕ್ಕದ್ದು. ಆದಾಗ್ಯೂ, ಕೆಲವು ಸಂದರ್ಭಗಳಲ್ಲಿ ನಮೂನೆ ಜಿಎಸ್‌ಟಿಆರ್–3ಬಿನಲ್ಲಿ ಉಪಯೋಗಿಸಿಕೊಂಡ ಜಮೆಯು, ನಮೂನೆ ಜಿಎಸ್‌ಟಿಆರ್–2ಎ ನಲ್ಲಿ ಲಭ್ಯವಿರುವ ಜಮೆಗಿಂತ ಹೆಚ್ಚಿನದಾಗಿರುಬಹುದು. ಅಂತಹ ಪ್ರಕರಣಗಳಲ್ಲಿ, 8ಡಿ ಸಾಲಿನಲ್ಲಿರುವ ಮೌಲ್ಯವು ಋಣಾತ್ಮಕವಾಗಿರುತ್ತದೆ.
8ಇ ಮತ್ತು 8ಎಫ್	ನಮೂನೆ 3ಬಿ ಯಲ್ಲಿ ಲಭ್ಯವಿದ್ದು ಆದರೆ ಉಪಯೋಗಿಸಿಕೊಳ್ಳದ ಜಮೆ ಮತ್ತು ನಮೂನೆ ಜಿಎಸ್‌ಟಿಆರ್–3ಬಿ ಯಲ್ಲಿ ಉಪಯೋಗಿಸಿದ ಅನರ್ಹತೆಯ ಕಾರಣಕ್ಕೆ ಉಪಯೋಗಿಸಿಕೊಳ್ಳದ ಜಮೆಯನ್ನು ಇಲ್ಲಿ ಘೋಷಿಸತಕ್ಕದ್ದು. ಸೂಕ್ತವಾಗಿ 8ಡಿ ಧನಾತ್ಮಕವಾಗಿದ್ದರೆ, 8ಇ ಮತ್ತು 8ಎಫ್ ಮೊತ್ತವು 8ಡಿ ಗೆ ಸಮನಾಗಿರತಕ್ಕದ್ದು.
8ಜಿ	ಹಣಕಾಸು ವರ್ಷದ ಅವಧಿಯಲ್ಲಿ, ಆಮದಿನ ಸಮಯದಲ್ಲಿ (ವಿಆವ ಗಳಿಂದ ಮಾಡಿದ ಆಮದುಗಳನ್ನು ಒಳಗೊಂಡಂತೆ) ಸಂದಾಯ ಮಾಡಿದ ಏಕೀಕೃತ ಸರಕು ಮತ್ತು ಸೇವಾ ತೆರಿಗೆಯ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು.
8ಹೆಚ್	ಕೋಷ್ಟಕ 6ಇ ರಲ್ಲಿ ಘೋಷಿಸಿದಂತೆ ಹೂ.ತೆ.ಜ ಇಲ್ಲಿ ಸ್ವಯಂ ಪ್ರದರ್ಶಿತಗೊಳ್ಳತಕ್ಕದ್ದು.
8ಕೆ	ಪ್ರಸಕ್ತ ಹಣಕಾಸು ವರ್ಷದಲ್ಲಿ ಚ್ಯುತವಾಗತಕ್ಕ ಒಟ್ಟು ಹೂ.ತೆ.ಜ ಯು ಈ ಸಾಲಿನಲ್ಲಿ ಲೆಕ್ಕಾಚಾರವಾಗತಕ್ಕದ್ದು.

6. ಭಾಗ–IV ಹಣಕಾಸು ವರ್ಷದ ಅವಧಿಯಲ್ಲಿ ವಾಸ್ತವವಾಗಿ ಸಂದಾಯ ಮಾಡಿದ ತೆರಿಗೆ ಈ ವಿವರಗಳನ್ನು ಭರ್ತಿ ಮಾಡಲು ನಮೂನೆ ಜಿಎಸ್‌ಟಿಆರ್–3ಬಿ ರ ಕೋಷ್ಟಕ 6.1 ಅನ್ನು ಬಳಸಿಕೊಳ್ಳಬಹುದು.

7. ಭಾಗ–V ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್ ನಿಂದ ಸೆಪ್ಟೆಂಬರ್‌ವರೆಗೆ ನಮೂನೆ ಜಿಎಸ್‌ಟಿಆರ್–3ಬಿ ಗಳಲ್ಲಿ ಘೋಷಿಸಿದ ಹಿಂದಿನ ಹಣಕಾಸು ವರ್ಷದ ವ್ಯವಹಾರದ ವಿವರಗಳು ಅಥವಾ ಹಿಂದಿನ ಹಣಕಾಸು ವರ್ಷಕ್ಕೆ ವಾರ್ಷಿಕ ರಿಟರ್ನ್ ಸಲ್ಲಿಸಿದ ಕೊನೆಯ ದಿನಾಂಕ ಇವೆರಡರಲ್ಲಿ ಯಾವುದು ಮೊದಲು ಅದರ ವಿವರಗಳನ್ನು ಒಳಗೊಂಡಿರುತ್ತದೆ. (ಉದಾಹರಣೆಗೆ, ಹಣಕಾಸು ವರ್ಷ 2017–18ರ ವಾರ್ಷಿಕ ರಿಟರ್ನ್‌ನಲ್ಲಿ, ಏಪ್ರಿಲ್ ನಿಂದ ಸೆಪ್ಟೆಂಬರ್ 2018ರವರೆಗೆ ಘೋಷಿಸಿದ ವ್ಯವಹಾರಗಳನ್ನು ಘೋಷಿಸತಕ್ಕದ್ದು.) ಈ ಕೆಳಕಂಡ ಸೂಚನೆಗಳಂತೆ ಭಾಗ–V ಭರ್ತಿ ಮಾಡುವುದು.

ಕೋಷ್ಟಕ ಸಂಖ್ಯೆ	**ಸೂಚನೆಗಳು**
10 ಮತ್ತು 11	ಹಿಂದಿನ ಹಣಕಾಸು ವರ್ಷದ ರಿಟರ್ನ್‌ಗಳಲ್ಲಿ ಘೋಷಿಸಿದಂತಹ ಯಾವುದೇ ಪೂರೈಕೆಗಳಿಗೆ ಮಾಡಿದ ಸೇರ್ಪಡೆಗಳು ಅಥವಾ ತಿದ್ದುಪಡಿಗಳನ್ನು ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್ ನಿಂದ ಸೆಪ್ಟೆಂಬರ್ ವರೆಗಿನ ನಮೂನೆ ಜಿಎಸ್‌ಟಿಆರ್–1 ರ ಕೋಷ್ಟಕ 9ಎ, 9ಬಿ ಮತ್ತು 9ಸಿ ನಲ್ಲಿ ಅಥವಾ ಹಿಂದಿನ ಹಣಕಾಸು ವರ್ಷದ ವಾರ್ಷಿಕ ರಿಟರ್ನ್‌ನ್ನು ಸಲ್ಲಿಸುವ ದಿನಾಂಕ, ಇವೆರಡರಲ್ಲಿ ಯಾವುದು ಮೊದಲೋ ಅದರಲ್ಲಿ ಒದಗಿಸಿದ್ದ ಅಂತಹ ತಿದ್ದುಪಡಿಗಳ ವಿವರಗಳನ್ನು ಇಲ್ಲಿ ಘೋಷಿಸತಕ್ಕದ್ದು.
12	ಹಿಂದಿನ ಹಣಕಾಸು ವರ್ಷದಲ್ಲಿ ಉಪಯೋಗಿಸಿದ ಆದರೆ ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಸೆಪ್ಟೆಂಬರ್ ವರೆಗಿನ ರಿಟರ್ನ್‌ಗಳಲ್ಲಿ ಹಿಮ್ಮುಖಗೊಳಿಸಿದ ಅಥವಾ ಹಿಂದಿನ ಹಣಕಾಸು ವರ್ಷದ ವಾರ್ಷಿಕ ರಿಟರ್ನ್‌ಗಳನ್ನು ಸಲ್ಲಿಸುವ ದಿನಾಂಕ, ಇವೆರಡರಲ್ಲಿ

563

	ಯಾವುದು ಮೊದಲೋ ಅದರಲ್ಲಿ ಹಿಮ್ಮುಖಗೊಳಿಸಿದ ಹೂ.ತೆ.ಜ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು, ಈ ವಿವರಗಳನ್ನು ಭರ್ತಿ ಮಾಡಲು ನಮೂನೆ ಜಿಎಸ್‌ಟಿಆರ್–3ಬಿ ರ ಕೋಷ್ಟಕ 4(ಬಿ) ಅನ್ನು ಬಳಸಿಕೊಳ್ಳಬಹುದಾಗಿರುತ್ತದೆ.
13	ಹಿಂದಿನ ಹಣಕಾಸು ವರ್ಷದಲ್ಲಿ ಸ್ವೀಕರಿಸಿದ ಸರಕು ಅಥವಾ ಸೇವೆಗಳಿಗೆ ಸಂಬಂಧಿಸಿದ ಹೂ.ತೆ.ಜ ಯನ್ನು ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಸೆಪ್ಟೆಂಬರ್ ಮಾಹೆಗಳಿಗೆ ಸಲ್ಲಿಸಿದ ರಿಟರ್ನ್‌ಗಳಲ್ಲಿ ಅಥವಾ ಹಿಂದಿನ ಹಣಕಾಸು ವರ್ಷದ ವಾರ್ಷಿಕ ರಿಟರ್ನ್ ಸಲ್ಲಿಸುವ ದಿನಾಂಕ, ಇವೆರಡರಲ್ಲಿ ಯಾವುದು ಮೊದಲೋ, ಅದರಲ್ಲಿ ಉಪಯೋಗಿಸಿದ ಹೂ.ತೆ.ಜ ವಿವರಗಳನ್ನು ಇಲ್ಲಿ ಘೋಷಿಸತಕ್ಕದ್ದು. ಈ ವಿವರಗಳನ್ನು ಭರ್ತಿ ಮಾಡಲು ನಮೂನೆ ಜಿಎಸ್‌ಟಿಆರ್–3ಬಿ ರ ಕೋಷ್ಟಕ 4(ಎ) ಅನ್ನು ಬಳಸಿಕೊಳ್ಳಬಹುದಾಗಿರುತ್ತದೆ. ಆದಾಗ್ಯೂ, ಪ್ರಕರಣ 16ರ ಉಪಪ್ರಕರಣ (2)ರ ಎರಡನೇ ಪರಂತುಕದ ಅನುಸಾರವಾಗಿ ಹಣಕಾಸು ವರ್ಷ 2017–18ರಲ್ಲಿ ಹಿಮ್ಮುಖಗೊಳಿಸಿ, ಆದರೆ ಹಣಕಾಸು ವರ್ಷ 2018–19ರಲ್ಲಿ ಮರುಕ್ಲೇಮು ಮಾಡಿದಂತಹ ಯಾವುದೇ ಹೂಡುವಳಿ ತೆರಿಗೆ ಜಮೆಯ ವಿವರಗಳನ್ನು ಹಣಕಾಸು ವರ್ಷ 2018–19ರ ವಾರ್ಷಿಕ ರಿಟರ್ನ್‌ನಲ್ಲಿ ಒದಗಿಸತಕ್ಕದ್ದು.

8. ಭಾಗ–VI ಇತರೆ ಮಾಹಿತಿಯನ್ನು ಒಳಗೊಂಡಿರುತ್ತದೆ. ಭಾಗ–VI ನ್ನು ಭರ್ತಿ ಮಾಡಲು ಸೂಚನೆಗಳು ಈ ಕೆಳಕಂಡತೆ ಇವೆ.

ಕೋಷ್ಟಕ ಸಂಖ್ಯೆ	**ಸೂಚನೆಗಳು**
15ಎ, 15ಬಿ, 15ಸಿ ಮತ್ತು 15ಡಿ	ಕ್ಲೇಮು ಮಾಡಿದ ಮಂಜೂರಾದ ತಿರಸ್ಕರಿಸಿದ ಮತ್ತು ಪ್ರಕ್ರಿಯೆಯಲ್ಲಿ ಬಾಕಿ ಇರುವ ಮರುಪಾವತಿಯ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು, ಕ್ಲೇಮು ಮಾಡಿದ ಮರುಪಾವತಿಯು ಮಂಜೂರಾದ, ತಿರಸ್ಕರಿಸಿದ ಅಥವಾ ಪ್ರಕ್ರಿಯೆಯಲ್ಲಿ ಬಾಕಿ ಇರುವ ಕ್ಲೇಮು ಮಾಡಿದ ಎಲ್ಲಾ ಮರುಪಾವತಿಗಳ ಸಮಗ್ರ ಮೌಲ್ಯವಾಗಿರುತ್ತದೆ. ಮಂಜೂರಾದ ಮರುಪಾವತಿ ಎಂದರೆ, ಎಲ್ಲಾ ಮಂಜೂರಾತಿ ಆದೇಶಗಳ ಸಮಗ್ರ ಮೌಲ್ಯವಾಗಿರುತ್ತದೆ. ಬಾಕಿ ಇರುವ ಮರುಪಾವತಿ ಎಂದರೆ, ಸ್ವೀಕೃತಿ ಪಡೆದಂತಹ ಎಲ್ಲಾ ಮರುಪಾವತಿ ಅರ್ಜಿಗಳ ಸಮಗ್ರ ಮೊತ್ತವಾಗಿರುತ್ತದೆ, ಮತ್ತು ಸ್ವೀಕರಿಸಿದ ತಾತ್ಕಾಲಿಕ ಮರುಪಾವತಿಗಳನ್ನು ಹೊರತುಪಡಿಸಿರುತ್ತದೆ. ಜಿಎಸ್‌ಟಿ ಅಲ್ಲದ ಮರುಪಾವತಿ ಕ್ಲೇಮುಗಳ ವಿವರಗಳನ್ನು ಇವು ಒಳಗೊಂಡಿರುವುದಿಲ್ಲ.
15ಇ, 15ಎಫ್ ಮತ್ತು 15ಜಿ	ನ್ಯಾಯನಿರ್ಣಯ ಪ್ರಾಧಿಕಾರದಿಂದ ತಗಾದೆಯನ್ನು ಧೃಢೀಕರಿಸಿ ಮಾಡಿದ ಆದೇಶಗಳಲ್ಲಿನ ತಗಾದೆಗಳ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು. ಮೇಲಿನ 15ಇ ನಲ್ಲಿ ಘೋಷಿಸಿದಂತಹ ಒಟ್ಟು ದೃಢೀಕರಿಸಿದ ತಗಾದೆಯಲ್ಲಿ ಸಂದಾಯ ಮಾಡಿದ ತೆರಿಗೆಗಳ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು. ಮೇಲಿನ 15ಇ ನಲ್ಲಿ ವಸೂಲಿಗೆ ಬಾಕಿ ಇರುವ ತಗಾದೆಗಳ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು.
16ಎ	ರಾಜಿ ತೆರಿಗೆ ಸಂದಾಯ ಮಾಡುವವರಿಂದ ಸ್ವೀಕರಿಸಿದ ಪೂರೈಕೆಗಳ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು. ಈ ವಿವರಗಳನ್ನು ಭರ್ತಿ ಮಾಡಲು ನಮೂನೆ ಜಿಎಸ್‌ಟಿಆರ್–3ಬಿಯ ಕೋಷ್ಟಕ 5ಅನ್ನು ಬಳಸಿಕೊಳ್ಳಬಹುದಾಗಿರುತ್ತದೆ.
16ಬಿ	ಕೇಂದ್ರ ಸರಕು ಮತ್ತು ಸೇವಾ ತೆರಿಗೆ ಅಧಿನಿಯಮದ ಪ್ರಕರಣ 143ರ ಉಪಪ್ರಕರಣ (3) ಮತ್ತು ಉಪಪ್ರಕರಣ (4) ಪರಿಭಾಷೆಯಲ್ಲಿ ಪ್ರಧಾನ ಕರ್ತನಿಂದ ಮಜೂರಿ ಕೆಲಸಗಾರರಿಗೆ ಮಾಡಿದ ಎಲ್ಲಾ ಪರಿಭಾವಿತ ಪೂರೈಕೆಗಳ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು.
16ಸಿ	ಅನುಮೋದನೆ ಆಧಾರದಲ್ಲಿ ಕಳುಹಿಸಿದಂತಹ, ಆದರೆ ಪ್ರಧಾನ ಪೂರೈಕೆದಾರನಿಗೆ ಅಂತಹ ಪೂರೈಕೆಯನ್ನು ಮಾಡಿದ ನೂರ ಎಂಭತ್ತು ದಿನಗಳ ಒಳಗೆ ಹಿಂತಿರುಗಿಸಿಲ್ಲವೋ ಅಂತಹ ಎಲ್ಲಾ ಸರಕುಗಳ ಪರಿಭಾವಿತ ಪೂರೈಕೆಗಳ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು.

564

17 ಮತ್ತು 18	ಒಂದು ನಿರ್ದಿಷ್ಟ ಹೆಚ್.ಎಸ್.ಎನ್ ಸಂಕೇತದಲ್ಲಿ ಮಾಡಿದ ಮತ್ತು ಸ್ವೀಕರಿಸಿದ ಪೂರೈಕೆಗಳ ಸಾರಾಂಶವನ್ನು ಈ ಕೋಷ್ಟಕದಲ್ಲಿ ಮಾತ್ರ ವರದಿ ಮಾಡಬೇಕು. ರೂ. 1.50 ಕೋಟಿ ವರೆಗೆ ವಾರ್ಷಿಕ ವಹಿವಾಟು ಉಳ್ಳ ತೆರಿಗೆದಾರರಿಗೆ ಇದು ಐಚ್ಛಿಕವಾಗಿದೆ. ಹಿಂದಿನ ವರ್ಷದಲ್ಲಿ ವಾರ್ಷಿಕ ವಹಿವಾಟು ರೂ.1.50 ಕೋಟಿಗೂ ಹೆಚ್ಚು ಆದರೆ ರೂ. 5 ಕೋಟಿ ವರೆಗೆ ಇದ್ದರೆ, ಅಂತಹ ತೆರಿಗೆದಾರರು ಎರಡು ಅಂಕಿ ಮಟ್ಟದವರೆಗೆ ಮತ್ತು ವಾರ್ಷಿಕ ವಹಿವಾಟು ರೂ.5 ಕೋಟಿಗಿಂತ ಹೆಚ್ಚಿದ್ದರೆ, ನಾಲ್ಕು ಅಂಕಿ ಮಟ್ಟದವರೆಗೆ ಹೆಚ್.ಎಸ್.ಎನ್ ಸಂಕೇತವನ್ನು ವರದಿ ಮಾಡುವುದು ಕಡ್ಡಾಯವಾಗಿರುತ್ತದೆ. ಸರಕುಗಳ ಪೂರೈಕೆಗಾಗಿ ಮಾತ್ರ ಯುಕ್ಯೂಸಿ ಸಂಕೇತನ್ನು ಒದಗಿಸಬೇಕಾಗಿರುತ್ತದೆ. ಹಿಂದಿರುಗಿದಂತಹ ಅಂಶವನ್ನು ಕಳೆದ ನಿವ್ವಳ ಪ್ರಮಾಣವನ್ನು ವರದಿ ಮಾಡಬೇಕಾಗಿರುತ್ತದೆ. ಕೋಷ್ಟಕ 17 ರಲ್ಲಿ ವಿವರಗಳನ್ನು ಭರ್ತಿ ಮಾಡಲು ನಮೂನೆ ಜಿಎಸ್‌ಟಿಆರ್–1 ಕೋಷ್ಟಕ 12 ಅನ್ನು ಬಳಸಿಕೊಳ್ಳಬಹುದಾಗಿರುತ್ತದೆ. ಒಳಮುಖ ಪೂರೈಕೆಗಳ ಒಟ್ಟು ಮೌಲ್ಯದ ಶೇಕಡಾ 10 ಅಥವಾ ಅದಕ್ಕೂ ಹೆಚ್ಚಿನ ಮೌಲ್ಯದ ಪ್ರತ್ಯೇಕ/ಸ್ವತಂತ್ರ ಒಳಮುಖ ಪೂರೈಕೆಗಳನ್ನು ಮಾತ್ರ ಈ ಸಾರಾಂಶ ವಿವರಗಳನ್ನು ಘೋಷಿಸುವ ಅವಶ್ಯಕತೆ ಇರುತ್ತದೆ.
19	ಕೊನೆಯ ದಿನಾಂಕದ ನಂತರ, ವಾರ್ಷಿಕ ರಿಟರ್ನ್‌ನ್ನು ಸಲ್ಲಿಸಿದರೆ, ವಿಳಂಬ ಶುಲ್ಕ ಸಂದಾಯ/ ಪಾವತಿ ಮಾಡಬೇಕಾಗುತ್ತದೆ.

9. ಈ ರಿಟರ್ನ್‌ನ ಕೊನೆಯ ಭಾಗದಲ್ಲಿ, ಈ ನಮೂನೆಯಲ್ಲಿ ಘೋಷಿಸಿಕೊಂಡ ಯಾವುದೇ ಹೆಚ್ಚುವರಿ ಭಾದ್ಯತೆಯನ್ನು ನಮೂನೆ ಡಿಆರ್‌ಸಿ–3 ಮೂಲಕ ಸಂದಾಯ ಮಾಡಲು ತೆರಿಗೆದಾರರಿಗೆ ಒಂದು ಆಯ್ಕೆಯನ್ನು ನೀಡತಕ್ಕದ್ದು. ತೆರಿಗೆದಾರರು ನಮೂನೆ ಡಿಆರ್‌ಸಿ–3ನಲ್ಲಿ ಒದಗಿಸಿರುವ ಡ್ರಾಪ್‌ಡೌನ್‌ನಲ್ಲಿನ **"ವಾರ್ಷಿಕ ರಿಟರ್ನ್"**ನ್ನು ಆಯ್ಕೆಮಾಡತಕ್ಕದ್ದು. ಅಂತಹ ಬಾಧ್ಯತೆಯನ್ನು ವಿದ್ಯುನ್ಮಾನ ಜಮೆ ಖಾತೆಯ ಮೂಲಕ ಮಾತ್ರ ಸಂದಾಯ ಮಾಡಲು ಸಾಧ್ಯ ಎಂಬುದನ್ನು ಗಮನಿಸಬಹುದು.**"**;

17. ನಮೂನೆ ಜಿಎಸ್‌ಟಿಆರ್–9ಎ ನ ಪ್ರತಿಯೋಜನೆ– ಸದರಿ ನಿಯಮಗಳ **ನಮೂನೆ ಜಿಎಸ್‌ಟಿಆರ್–9ಎ** ಗಾಗಿ, ಈ ಕೆಳಗಿನ ನಮೂನೆಯನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ನಮೂನೆ–ಜಿಎಸ್‌ಟಿ ಆರ್–9ಎ

[ನಿಯಮ 80 ನೋಡಿ]

ವಾರ್ಷಿಕ ರಿಟರ್ನ್ (ರಾಜಿ ತೆರಿಗೆ ಸಂದಾಯ ಮಾಡುವವರಿಗೆ)

ಭಾಗ– I	ಮೂಲ ವಿವರಗಳು		
1	ಹಣಕಾಸು ವರ್ಷ		
2	ಜಿಎಸ್‌ಟಿಐಎನ್		
3ಎ	ಕಾನೂನು ಸಮ್ಮತ ಹೆಸರು	<ಸ್ವಯಂ ಪ್ರದರ್ಶಿತ>	
3ಬಿ	ವ್ಯವಹಾರದ ಹೆಸರು (ಇದ್ದರೆ)	<ಸ್ವಯಂ ಪ್ರದರ್ಶಿತ>	
4	ವರ್ಷದಲ್ಲಿ ರಾಜಿ ತೆರಿಗೆಯ ಅವದಿ (––––––– ಇಂದ ––––––– ವರೆಗೆ)		
5	ಹಿಂದಿನ ಹಣಕಾಸು ವರ್ಷದ ಸಮಗ್ರ ವಹಿವಾಟು		
			(ಮೊತ್ತ ರೂ.ಗಳಲ್ಲಿ ಎಲ್ಲಾ ಕೋಷ್ಟಕಗಳಲ್ಲಿ)
ಭಾಗ– II	ಹಣಕಾಸು ವರ್ಷದಲ್ಲಿ ಮಾಡಿದ ಹೊರಮುಖ ಮತ್ತು ಒಳಮುಖ ಪೂರೈಕೆಗಳ ವಿವರ		

565

	ವಿವರ	ವಹಿವಾಟು	ತೆರಿಗೆ ದರ	ಕೇಂದ್ರ ತೆರಿಗೆ	ರಾಜ್ಯ ತೆರಿಗೆ/ ಕೇಂ. ಪ್ರದೇಶ ತೆರಿಗೆ	ಏಕೀಕೃತ ತೆರಿಗೆ	ಉಪಕರ
	1	2	3	4	5	6	7
6	ಹಣಕಾಸು ವರ್ಷದಲ್ಲಿ ಮಾಡಿದ ಹೊರಮುಖ ಪೂರೈಕೆಗಳ ವಿವರಗಳು						
A	ತೆರಿಗೆದಾಯಕ						
B	ವಿನಾಯಿತಿಯುಳ್ಳ, ನಿಶ್ಯೇಷ ದರ						
C	ಒಟ್ಟು						

7	ಹಣಕಾಸು ವರ್ಷದಲ್ಲಿ ಹಿಮ್ಮುಖ ವಿಧಿಸುವಿಕೆ (ಜಮೆ/ಖರ್ಚುಪಟ್ಟಿಗಳನ್ನು ಕಳೆದ ನಿವ್ವಳ ಮೌಲ್ಯ) ಆಧಾರದಲ್ಲಿ ತೆರಿಗೆ ಸಂದಾಯ ಮಾಡಬೇಕಾದ ಒಳಮುಖ ಪೂರೈಕೆಗಳ ವಿವರಗಳು					
	ವಿವರ	ತೆರಿಗೆದಾಯಕ ಮೌಲ್ಯ	ಕೇಂದ್ರ ತೆರಿಗೆ	ರಾಜ್ಯ ತೆರಿಗೆ/ ಕೇಂ. ಪ್ರದೇಶ ತೆರಿಗೆ	ಏಕೀಕೃತ ತೆರಿಗೆ	ಉಪಕರ
	1	2	3	4	5	6
A	ನೋಂದಾಯಿತ ವ್ಯಕ್ತಿಗಳಿಂದ ಸ್ವೀಕರಿಸಿದ ಹಿಮ್ಮುಖ ವಿಧಿಸುವಿಕೆ ಭಾದ್ಯತೆ ಹೊಂದಿರುವ ಒಳಮುಖ ಪೂರೈಕೆಗಳು					
B	ಅನೋಂದಾಯಿತ ವ್ಯಕ್ತಿಗಳಿಂದ ಸ್ವೀಕರಿಸಿದ ಹಿಮ್ಮುಖ ವಿಧಿಸುವಿಕೆ ಭಾದ್ಯತೆ ಹೊಂದಿರುವ ಒಳಮುಖ ಪೂರೈಕೆಗಳು					
C	ಸೇವೆಗಳ ಆಮದು					
D	ಮೇಲಿನ (ಎ)(ಬಿ) ಮತ್ತು (ಸಿ) ಮೇಲೆ ಸಂದಾಯ ಮಾಡಬೇಕಾದ ನಿವ್ವಳ ತೆರಿಗೆ					

8	ಹಣಕಾಸು ವರ್ಷದ ಇನ್ನಿತರೆ ಒಳಮುಖ ಪೂರೈಕೆಗಳ ವಿವರಗಳು					
A	ನೋಂದಾಯಿತ ವ್ಯಕ್ತಿಗಳಿಂದ ಒಳಮುಖ ಪೂರೈಕೆಗಳು (ಮೇಲಿನ 7ಎ ಹೊರತುಪಡಿಸಿ)					
B	ಸರಕುಗಳ ಆಮದು					

ಭಾಗ– III	ಹಣಕಾಸು ವರ್ಷದಲ್ಲಿ ಸಲ್ಲಿಸಿದ ರಿಟರ್ನ್‌ಗಳಲ್ಲಿ ಘೋಷಿಸಿಕೊಂಡಂತೆ ಸಂದಾಯ ಮಾಡಿದ ತೆರಿಗೆಯ ವಿವರಗಳು			
9	ವಿವರ	ಸಂದಾಯ ಮಾಡಬೇಕಾಗಿರುವ ಒಟ್ಟು ತೆರಿಗೆ	ಸಂದಾಯ ಮಾಡಿರುವುದು	
	1	2	3	
	ಏಕೀಕೃತ ತೆರಿಗೆ			
	ಕೇಂದ್ರ ತೆರಿಗೆ			
	ರಾಜ್ಯ ತೆರಿಗೆ/ಕೇಂದ್ರ ಪ್ರದೇಶ ತೆರಿಗೆ			

566

	ಉಪಕರ			
	ಬಡ್ಡಿ			
	ವಿಳಂಬ ಶುಲ್ಕ			
	ದಂಡ			

ಭಾಗ– IV	ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್ ನಿಂದ ಸೆಪ್ಟೆಂಬರ್‌ವರೆಗಿನ ರಿಟರ್ನ್‌ಗಳಲ್ಲಿ ಘೋಷಿಸಿದ, ಹಿಂದಿನ ಹಣಕಾಸು ವರ್ಷದ ಅಥವಾ ಹಿಂದಿನ ಹಣಕಾಸು ವರ್ಷದ ವಾರ್ಷಿಕ ರಿಟರ್ನ್ ಸಲ್ಲಿಸುವ ದಿನಾಂಕದವರೆಗಿನ, ಇವೆರಡರಲ್ಲಿ ಯಾವುದು ಮುಂಚಿತವೋ ಅದರೊಳಗೆ ಮಾಡಿದ ವ್ಯವಹಾರಗಳು ವಿವರಗಳು

	ವಿವರ	ವಹಿವಾಟು	ಕೇಂದ್ರ ತೆರಿಗೆ	ರಾಜ್ಯ ತೆರಿಗೆ/ ಕೇಂ. ಪ್ರದೇಶ ತೆರಿಗೆ	ಏಕೀಕೃತ ತೆರಿಗೆ	ಉಪಕರ
	1	2	3	4	5	6
10	ತಿದ್ದುಪಡಿಗಳ (ಖರ್ಚುಪಟ್ಟಿ ಕಳೆದ ನಿವ್ವಳ ಮೌಲ್ಯ) ಮೂಲಕ ಘೋಷಿಸಿಕೊಂಡ ಪೂರೈಕೆಗಳು/ತೆರಿಗೆ (ಹೊರಮುಖ)					
11	ತಿದ್ದುಪಡಿಗಳ (ಖರ್ಚುಪಟ್ಟಿ ಕಳೆದ ನಿವ್ವಳ ಮೌಲ್ಯ) ಮೂಲಕ ಘೋಷಿಸಿಕೊಂಡ, ಹಿಮ್ಮುಖ ವಿಧಿಸುವಿಕೆ ಭಾದ್ಯತೆ ಹೊಂದಿರುವ ಒಳಮುಖ ಪೂರೈಕೆಗಳು					
12	ತಿದ್ದುಪಡಿಗಳ (ಜಮಾ ಪಟ್ಟಿ ಕಳೆದ ನಿವ್ವಳ ಮೌಲ್ಯ) ಮೂಲಕ ಕಡಿಮೆ ಮಾಡಿದ ಪೂರೈಕೆಗಳು/ತೆರಿಗೆ (ಹೊರಮುಖ)					
13	ತಿದ್ದುಪಡಿಗಳ (ಜಮಾ ಪಟ್ಟಿ ಕಳೆದ ನಿವ್ವಳ ಮೌಲ್ಯ) ಮೂಲಕ ಕಡಿಮೆ ಮಾಡಿದ, ಹಿಮ್ಮುಖ ವಿಧಿಸುವಿಕೆ ಭಾದ್ಯತೆ ಹೊಂದಿಸುವ ಒಳಮುಖ ಪೂರೈಕೆಗಳು					

14	ಮೇಲಿನ 10,11,12 ಮತ್ತು 13ರಲ್ಲಿನ ಘೋಷಣೆಯ ಕಾರಣದಿಂದ ಸಂದಾಯ ಮಾಡಿದ ವ್ಯತ್ಯಾಸದ ತೆರಿಗೆ

	ವಿವರ	ಸಂದಾಯ ಮಾಡಿಬೇಕಾಗಿರುವ	ಸಂದಾಯ ಮಾಡಿದ
	1	2	3
	ಏಕೀಕೃತ ತೆರಿಗೆ		
	ಕೇಂದ್ರ ತೆರಿಗೆ		
	ರಾಜ್ಯ ತೆರಿಗೆ/ ಕೇಂದ್ರ ಪ್ರದೇಶ ತೆರಿಗೆ		
	ಉಪಕರ		
	ಬಡ್ಡಿ		

ಭಾಗ– V	ಇತರೆ ಮಾಹಿತಿ
	ತಗಾದೆ ಮತ್ತು ಮರುಪಾವತಿ ವಿವರಗಳು

567

15								
	ವಿವರ	ಕೇಂದ್ರ ತೆರಿಗೆ	ರಾಜ್ಯ ತೆರಿಗೆ/ ಕೇಂ. ಪ್ರದೇಶ ತೆರಿಗೆ	ಏಕೀಕೃತ ತೆರಿಗೆ	ಉಪ ಕರ	ಬಡ್ಡಿ	ದಂಡ	ವಿಳಂಬ ಶುಲ್ಕ
	1	2	3	4	5	6	7	8
A	ಕ್ಲೇಮು ಮಾಡಿದ ಒಟ್ಟು ಮರುಪಾವತಿ							
B	ಮಂಜೂರಾದ ಒಟ್ಟು ಮರುಪಾವತಿ							
C	ತಿರಸ್ಕೃತಗೊಂಡ ಒಟ್ಟು ಮರುಪಾವತಿ							
D	ಬಾಕಿ ಇರುವ ಒಟ್ಟು ಮರುಪಾವತಿ							
E	ಒಟ್ಟು ತೆರಿಗೆ ತಗಾದೆ							
F	ಮೇಲಿನ ಇ'ಗೆ ಸಂಬಂಧಪಟ್ಟಂತೆ ಸಂದಾಯ ಮಾಡಿದ ಒಟ್ಟು ತೆರಿಗೆ							
G	ಮೇಲಿನ ಇ'ನಲ್ಲಿ ಬಾಕಿ ಇರುವ ತಗಾದೆಗಳ ಮೊತ್ತ							

16	ಹಿಮ್ಮುಖಗೊಳಿಸಿದ ಅಥವಾ ಉಪಯೋಗಿಸಿಕೊಂಡ ಜಮೆ ವಿವರಗಳು				
	ವಿವರ	ಕೇಂದ್ರ ತೆರಿಗೆ	ರಾಜ್ಯ ತೆರಿಗೆ/ ಕೇಂ. ಪ್ರದೇಶ ತೆರಿಗೆ	ಏಕೀಕೃತ ತೆರಿಗೆ	ಉಪಕರ
	1	2	3	4	5
A	ರಾಜಿ ತೆರಿಗೆ ಯೋಜನೆಯನ್ನು ಆಯ್ಕೆ ಮಾಡಿದ ಕಾರಣಕ್ಕೆ ಹಿಮ್ಮುಖಗೊಳಿಸಿದ ಜಮೆ (–)				
B	ರಾಜಿ ತೆರಿಗೆ ಯೋಜನೆಯಿಂದ ಹೊರಬಂದಿದಕ್ಕೆ ಉಪಯೋಗಿಸಿಕೊಂಡ ಜಮೆ (+)				

17	ಸಂದಾಯ ಮಾಡಬೇಕಾಗಿರುವ ಮತ್ತು ಮಾಡಿದ ವಿಳಂಬ ಶುಲ್ಕ		
	ವಿವರ	ಸಂದಾಯ ಮಾಡಿಬೇಕಾಗಿರುವ	ಸಂದಾಯ ಮಾಡಿದ
	1	2	3
A	ಕೇಂದ್ರ ತೆರಿಗೆ		
B	ರಾಜ್ಯ ತೆರಿಗೆ		

568

ಪರಿಶೀಲನೆ:

ಮೇಲೆ ನೀಡಲಾದ ಮಾಹಿತಿಯು, ನನ್ನ ತಿಳುವಳಿಕೆಯ ಮತ್ತು ನಂಬಿಕೆಯ ಮಟ್ಟಿಗೆ ಸತ್ಯವಾಗಿರುತ್ತದೆ ಮತ್ತು ಸರಿಯಾಗಿರುತ್ತದೆ ಹಾಗು ಯಾವುದೇ ಮಾಹಿತಿಯನ್ನು ಅದರಿಂದ ಮರೆಮಾಚಿಸಿರುವುದಿಲ್ಲ ಮತ್ತು ಹುಟ್ಟುವಳಿ ತೆರಿಗೆ ಭಾದ್ಯತೆಯಲ್ಲಿ ಯಾವುದೇ ಕಡಿತವಾದಲ್ಲಿ, ಅದರ ಲಾಭವನ್ನು/ಅನುಕೂಲತೆಯನ್ನು ಪೂರೈಕೆ ಸ್ವೀಕರ್ತನಿಗೆ ವರ್ಗಾಯಿಸಿದೆ/ ವರ್ಗಾಯಿಸಲಾಗಿದೆ, ಎಂದು ನಾನು, ಈ ಮೂಲಕ ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

ಸ್ಥಳ: ಸಹಿ

ದಿನಾಂಕ: ಪ್ರಾಧಿಕೃತ ಸಹಿದಾರನ ಹೆಸರು

ಪದನಾಮ/ಸ್ಥಾನ

ಸೂಚನೆಗಳು

1. ಈ ರಿಟರ್ನ್ ಸಲ್ಲಿಸುವ ಮುಂಚೆ ಹಣಕಾಸು ವರ್ಷ 2017–18ಕ್ಕೆ ನಿಮ್ಮ ಎಲ್ಲಾ ನಮೂನೆ ಜಿಎಸ್‌ಟಿಆರ್–4 ಗಳನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಜುಲೈ 2017 ಮತ್ತು ಮಾರ್ಚ್ 2018ರ ನಡುವಿನ ಅವಧಿಯ ವಿವರಗಳನ್ನು ಈ ರಿಟರ್ನ್‌ನಲ್ಲಿ ಒದಗಿಸತಕ್ಕದ್ದು.
2. ನಮೂನೆ ಜಿಎಸ್‌ಟಿಆರ್–4ರಲ್ಲಿ ಘೋಷಿಸಿಕೊಂಡಿರದ ಹಣಕಾಸು ವರ್ಷ 2017–18ರ ಹೆಚ್ಚುವರಿ ಭಾದ್ಯತೆಯನ್ನು ಈ ರಿಟರ್ನ್‌ನಲ್ಲಿ ಘೋಷಿಸಿಕೊಳ್ಳಬಹುದು ಎಂಬುದನ್ನು ಗಮನಿಸಬಹುದು.
3. ಭಾಗ–I ತೆರಿಗೆದಾರನ ಮೂಲ ವಿವರಗಳನ್ನು ಒಳಗೊಂಡಿರುತ್ತದೆ. ಭಾಗ–ಖ ನ್ನು ಭರ್ತಿ ಮಾಡಲು ಸೂಚನೆಗಳು ಈ ಕೆಳಗಿನಂತೆ ಇರುತ್ತವೆ.

ಕೋಷ್ಟಕ ಸಂಖ್ಯೆ.	**ಸೂಚನೆಗಳು**
5.	ಹಿಂದಿನ ಹಣಕಾಸು ವರ್ಷದ ಸಮಗ್ರ ವಹಿವಾಟು ಎಂದರೆ, ರಿಟರ್ನ್ ಸಲ್ಲಿಸುತ್ತಿರುವ ವರ್ಷದ ಹಿಂದಿನ ಹಣಕಾಸು ವರ್ಷದ ವಹಿವಾಟು. ಉದಾಹರಣೆಗೆ, ಹಣಕಾಸು ವರ್ಷ 2017–18 ರ ವಾರ್ಷಿಕ ರಿಟರ್ನ್‌ಗೆ ಈ ಕೋಷ್ಟಕದಲ್ಲಿ ಹಣಕಾಸು ವರ್ಷ 2016–17ರ ಸಮಗ್ರ ವಹಿವಾಟನ್ನು, ಭರ್ತಿ ಮಾಡುವುದು. ಇದು ಪ್ಯಾನ್ ಆಧಾರದಲ್ಲಿ ನೋಂದಣಿ ಹೊಂದಿರುವ ಎಲ್ಲಾ ತೆರಿಗೆದಾರರು ವಾಹಿವಾಟಿನ ಒಟ್ಟು ಮೊತ್ತವಾಗಿರುತ್ತದೆ.

4. ಭಾಗ–II, ವಾರ್ಷಿಕ ರಿಟರ್ನ್ ಸಲ್ಲಿಸುತ್ತಿರುವ ಹಣಕಾಸು ವರ್ಷದಲ್ಲಿನ ಎಲ್ಲಾ ಹೊರಮುಖ ಮತ್ತು ಒಳಮುಖ ಪೂರೈಕೆಗಳ ವಿವರಗಳನ್ನು ಒಳಗೊಂಡಿರುತ್ತದೆ. ಈ ಕೆಳಗಿನ ಸೂಚನೆಗಳಂತೆ ಭಾಗ–II ನ್ನು ಭರ್ತಿ ಮಾಡಬೇಕು.

ಕೋಷ್ಟಕ ಸಂಖ್ಯೆ	**ಸೂಚನೆಗಳು**
6ಎ	ಸಂಪೂರ್ಣ ಹಣಕಾಸು ವರ್ಷದಲ್ಲಿನ ಎಲ್ಲಾ ಖರ್ಚು ಪಟ್ಟಿ/ ಜಮಾ ಪಟ್ಟಿ, ಮುಂಗಡಗಳ, ಹಿಂದಿರುಗಿಸಿದ ಸರಕುಗಳು ಇವುಗಳ ನಿವ್ವಳ ಹೊರಮುಖ ಪೂರೈಕೆಗಳ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು. ಈ ವಿವರಗಳನ್ನು ಭರ್ತಿ ಮಾಡಲು ನಮೂನೆ ಜಿಎಸ್‌ಟಿಆರ್–4ರ ಕೋಷ್ಟಕ 6 ಮತ್ತು 7ನ್ನು ಬಳಸಿಕೊಳ್ಳಬಹುದಾಗಿರುತ್ತದೆ.
6ಬಿ	ನಿಶ್ಯೇಷ ದರ ವಿನಾಯಿತಿಯುಳ್ಳ ಮತ್ತು ಜಿಎಸ್‌ಟಿ ಅಲ್ಲದ ಪೂರೈಕೆಗಳ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು.
7ಎ	ಹಿಮ್ಮುಖ ವಿಧಿಸುವಿಕೆ ಆಧಾರದಲ್ಲಿ ತೆರಿಗೆ ಸಂದಾಯ ಮಾಡಬೇಕಾದಂತಹ ನೋಂದಾಯಿತ ವ್ಯಕ್ತಿಗಳಿಂದ

569

	ಸ್ವೀಕರಿಸಿದ ಎಲ್ಲಾ ಒಳಮುಖ ಪೂರೈಕೆಗಳ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು. ಈ ವಿವರಗಳನ್ನು ಭರ್ತಿ ಮಾಡಲು ನಮೂನೆ ಜಿಎಸ್‌ಟಿಆರ್–4ರ ಕೋಷ್ಟಕ 4ಬಿ, 5 & 8ಎ ಗಳನ್ನು ಬಳಸಿಕೊಳ್ಳಬಹುದಾಗಿರುತ್ತದೆ.
7ಬಿ	ಹಿಮ್ಮುಖ ವಿಧಿಸುವಿಕೆ ಆಧಾರದಲ್ಲಿ ತೆರಿಗೆ ಸಂದಾಯ ಮಾಡಬೇಕಾದಂತಹ ಅನೋಂದಾಯಿತ ವ್ಯಕ್ತಿಗಳಿಂದ (ಸೇವೆಗಳ ಆಮದನ್ನು ಹೊರತುಪಡಿಸಿ) ಸ್ವೀಕರಿಸಿದ ಎಲ್ಲಾ ಒಳಮುಖ ಪೂರೈಕೆಗಳ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು. ಈ ವಿವರಗಳನ್ನು ಭರ್ತಿ ಮಾಡಲು ನಮೂನೆ ಜಿಎಸ್‌ಟಿಆರ್–4ರ ಕೋಷ್ಟಕ 5 & 8ಎ ಗಳನ್ನು ಬಳಸಿಕೊಳ್ಳಬಹುದಾಗಿರುತ್ತದೆ.
7ಸಿ	ಹಣಕಾಸು ವರ್ಷದ ಅವಧಿಯಲ್ಲಿನ ಎಲ್ಲಾ ಆಮದಾದ ಸೇವೆಗಳ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು. ಈ ವಿವರಗಳನ್ನು ಭರ್ತಿ ಮಾಡಲು ನಮೂನೆ ಜಿಎಸ್‌ಟಿಆರ್–4ರ ಕೋಷ್ಟಕ 4ಸಿ, ಕೋಷ್ಟಕ 4ಡಿ & 5 ಗಳನ್ನು ಬಳಸಿಕೊಳ್ಳಬಹುದಾಗಿರುತ್ತದೆ.
8ಎ	ಪೂರೈಕೆದಾರನಿಂದ ತೆರಿಗೆ ಸಂದಾಯ ಮಾಡಲ್ಪಡಬೇಕಾದ ನೋಂದಾಯಿತ ವ್ಯಕ್ತಿಗಳಿಂದ ಸ್ವೀಕರಿಸಿದ ಎಲ್ಲಾ ಒಳಮುಖ ಪೂರೈಕೆಗಳ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು. ಈ ವಿವರಗಳನ್ನು ಭರ್ತಿ ಮಾಡಲು ನಮೂನೆ ಜಿಎಸ್‌ಟಿಆರ್–4ರ ಕೋಷ್ಟಕ 4ಎ & 5 ಗಳನ್ನು ಬಳಸಿಕೊಳ್ಳಬಹುದಾಗಿರುತ್ತದೆ.
8ಬಿ	ಹಣಕಾಸು ವರ್ಷದ ಅವಧಿಯಲ್ಲಿ ಎಲ್ಲಾ ಆಮದಾದ ಸರಕುಗಳ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು.

5. ಭಾಗ–IV, ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್ ನಿಂದ ಸೆಪ್ಟೆಂಬರ್ ವರೆಗಿನ ಅವಧಿಗಳ ರಿಟರ್ನ್‌ಗಳಲ್ಲಿ, ಹಿಂದಿನ ಹಣಕಾಸು ವರ್ಷದ ವಾರ್ಷಿಕ ರಿಟರ್ನ್ ಸಲ್ಲಿಸಲು ಕೊನೆಯ ದಿನಾಂಕ ಇವೆರಡರಲ್ಲಿ ಯಾವುದು ಮೊದಲೋ ಅದರಲ್ಲಿನ ಪೂರೈಕೆಗಳಿಗೆ ಮಾಡಿದ ತಿದ್ದುಪಡಿಗಳ ವಿವರಗಳನ್ನು ಹೊಂದಿರುತ್ತದೆ. (ಉದಾಹರಣೆಗೆ, ಏಪ್ರಿಲ್–ಸೆಪ್ಟೆಂಬರ್ 2018 ರಲ್ಲಿ ಘೋಷಿಸಿದ ವ್ಯವಹಾರಗಳನ್ನು, ಹಣಕಾಸು ವರ್ಷ 2017–18ರ ವಾರ್ಷಿಕ ರಿಟರ್ನ್‌ನಲ್ಲಿ ಘೋಷಿಸತಕ್ಕದ್ದು.). ಭಾಗ–V ಭರ್ತಿ ಮಾಡಲು ಸೂಚನೆಗಳು ಈ ಕೆಳಕಂಡಂತೆ ಇರುತ್ತವೆ.

ಕೋಷ್ಟಕ ಸಂಖ್ಯೆ.	**ಸೂಚನೆಗಳು**
10, 11, 12, 13 ಮತ್ತು 14	ಹಿಂದಿನ ಹಣಕಾಸು ವರ್ಷದ ರಿಟರ್ನ್‌ಗಳಲ್ಲಿ ಘೋಷಿಸಿದಂತಹ ಸೇರ್ಪಡೆಗಳು ಅಥವಾ ತಿದ್ದುಪಡಿಗಳು ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಸೆಪ್ಟೆಂಬರ್ ವರೆಗಿನ ನಮೂನೆ ಜಿಎಸ್‌ಟಿಆರ್–4 ನ ಕೋಷ್ಟಕ 5 (ಒಳಮುಖ ಪೂರೈಕೆಗಳಿಗೆ ಸಂಬಂಧಿಸಿದಂತೆ) ಅಥವಾ ಕೋಷ್ಟಕ 7 (ಹೊರಮುಖ ಪೂರೈಕೆಗಳಿಗೆ ಸಂಬಂಧಿಸಿದಂತೆ) ನಲ್ಲಿ ಈಗಾಗಲೇ ಘೋಷಿಸಿದಂತಹ ಪೂರೈಕೆಗಳಿಗೆ ಮಾಡಿದ ಅಥವಾ ಹಿಂದಿನ ಹಣಕಾಸು ವರ್ಷದ ವಾರ್ಷಿಕ ರಿಟರ್ನ್ ಸಲ್ಲಿಸಲು ಇರುವ ಕೊನೆಯ ದಿನಾಂಕ ಇವೆರಡರಲ್ಲಿ ಯಾವುದು ಮೊದಲು ಅದರಲ್ಲಿ ಅಂತಹ ವಿವರಗಳನ್ನು ಘೋಷಿಸತಕ್ಕದ್ದು.

6. ಭಾಗ–V, ಇತರ ಮಾಹಿತಿಯನ್ನು ಒಳಗೊಂಡಿರುತ್ತದೆ. ಈ ಕೆಳಗಿನ ಸೂಚನೆಗಳಂತೆ ಭಾಗ–II ನ್ನು ಭರ್ತಿ ಮಾಡಬೇಕು.

ಕೋಷ್ಟಕ ಸಂಖ್ಯೆ	**ಸೂಚನೆಗಳು**
15ಎ, 15ಬಿ, 15ಸಿ ಮತ್ತು	ಕ್ಲೇಮು ಮಾಡಿದ, ಮಂಜೂರಾದ, ತಿರಸ್ಕರಿಸಿದ ಮತ್ತು ಪ್ರಕ್ರಿಯೆಯಲ್ಲಿ ಬಾಕಿ ಇರುವ ಮರುಪಾವತಿಯ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು. ಕ್ಲೇಮು ಮಾಡಿದ ಮರುಪಾವತಿಯು, ಮಂಜೂರಾದ, ತಿರಸ್ಕರಿಸಲಾದ ಅಥವಾ ಪ್ರಕ್ರಿಯೆಯಲ್ಲಿ ಬಾಕಿ ಇರುವ ಮರುಪಾವತಿಗಳನ್ನು ಒಳಗೊಂಡಂತೆ, ಹಣಕಾಸು ವರ್ಷದಲ್ಲಿ ಕ್ಲೇಮು ಮಾಡಿದ ಎಲ್ಲಾ ಮರುಪಾವತಿಗಳ ಸಮಗ್ರ ಮೌಲ್ಯವಾಗಿರುತ್ತದೆ. ಮಂಜೂರಾದ

570

15ಡಿ	ಮರುಪಾವತಿ ಎಂದರೆ, ಎಲ್ಲಾ ಮಂಜೂರಾತಿ ಆದೇಶಗಳ ಸಮಗ್ರ ಮೌಲ್ಯವಾಗಿರುತ್ತದೆ. ಬಾಕಿ ಇರುವ ಮರುಪಾವತಿ ಎಂದರೆ, ಸ್ವೀಕೃತಿ ಪಡೆದಂತಹ ಎಲ್ಲಾ ಮರುಪಾವತಿ ಅರ್ಜಿಗಳ ಸಮಗ್ರ ಮೊತ್ತವಾಗಿರುತ್ತದೆ ಮತ್ತು ಸ್ವೀಕರಿಸಿದ ತಾತ್ಕಾಲಿಕ ಮರುಪಾವತಿಗಳನ್ನು ಹೊರತುಗೊಂಡಿರುತ್ತದೆ. ಜಿಎಸ್‌ಟಿ ಅಲ್ಲದೆ ಮರುಪಾವತಿ ಕ್ಲೇಮುಗಳ ವಿವರಗಳನ್ನು ಇವು ಒಳಗೊಂಡಿರುವುದಿಲ್ಲ.
15ಇ, 15ಎಫ್ ಮತ್ತು 15ಜಿ	ನ್ಯಾಯ ನಿರ್ಣಯ ಪ್ರಾಧಿಕಾರದಿಂದ ತಗಾದೆಯನ್ನು ದೃಢೀಕರಿಸಿ ಮಾಡಿದ ಆದೇಶಗಳಲ್ಲಿನ ತಗಾದೆಗಳ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು. ಮೇಲಿನ 15ಇ ನಲ್ಲಿ ಘೋಷಿಸಿದಂತಹ ಒಟ್ಟು ದೃಢೀಕರಿಸಿದ ತಗಾದೆಯಲ್ಲಿ ಸಂದಾಯ ಮಾಡಿದ ತೆರಿಗೆಗಳ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು ಮೇಲಿನ 15ಇ ನಲ್ಲಿ ವಸೂಲಿಗೆ ಬಾಕಿ ಇರುವ ತಗಾದೆಗಳ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು.
16ಎ	ಒಬ್ಬ ವ್ಯಕ್ತಿಯು ರಾಜಿ ತೆರಿಗೆ ಪದ್ಧತಿಯಲ್ಲಿ ತೆರಿಗೆ ಸಂದಾಯ ಮಾಡುವುದನ್ನು ಆಯ್ಕೆ ಮಾಡಿದ ಸಂದರ್ಭದಲ್ಲಿ, ಹಿಮ್ಮುಖಗೊಳಿಸಿದ ಎಲ್ಲಾ ಜಮೆಗಳ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು. ಈ ವಿವರಗಳನ್ನು ಭರ್ತಿ ಮಾಡಲು ನಮೂನೆ ಐಟಿಸಿ–03 ರಲ್ಲಿ ಒದಗಿಸಿದಂತಹ ವಿವರಗಳನ್ನು ಬಳಸಿಕೊಳ್ಳಬಹುದಾಗಿರುತ್ತದೆ.
16ಬಿ	ಒಬ್ಬ ನೋಂದಾಯಿತ ವ್ಯಕ್ತಿಯು, ರಾಜಿ ತೆರಿಗೆ ಪದ್ಧತಿಯಿಂದ ಹಿಂದೆ ಸರಿಯಲು ಆಯ್ಕೆ ಮಾಡಿದ ಸಂದರ್ಭದಲ್ಲಿ, ಉಪಯೋಗಿಸಿದ ಎಲ್ಲಾ ಜಮೆಗಳ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು. ಈ ವಿವರಗಳನ್ನು ಭರ್ತಿ ಮಾಡಲು ನಮೂನೆ ಐಟಿಸಿ–01 ರಲ್ಲಿ ಒದಗಿಸಿದಂತಹ ವಿವರಗಳನ್ನು ಬಳಸಿಕೊಳ್ಳಬಹುದಾಗಿರುತ್ತದೆ.
17	ಕೊನೆಯ ದಿನಾಂಕದ ನಂತರ ವಾರ್ಷಿಕ ರಿಟರ್ನ್ ಸಲ್ಲಿಸಿದರೆ, ವಿಳಂಬ ಶುಲ್ಕ ಸಂದಾಯ ಮಾಡಬೇಕಾಗುತ್ತದೆ.

7. ಈ ರಿಟರ್ನ್‌ನ ಕೊನೆಯ ಭಾಗದಲ್ಲಿ, ಈ ನಮೂನೆಯಲ್ಲಿ ಘೋಷಿಸಿಕೊಂಡ ಯಾವುದೇ ಹೆಚ್ಚುವರಿ ಭಾದ್ಯತೆಯನ್ನು ನಮೂನೆ ಡಿಆರ್‌ಸಿ–03ರ ಮೂಲಕ ಸಂದಾಯ ಮಾಡಲು ತೆರಿಗೆದಾರರಿಗೆ ಒಂದು ಆಯ್ಕೆಯನ್ನು ನೀಡತಕ್ಕದ್ದು. ತೆರಿಗೆದಾರರು, ನಮೂನೆ ಡಿಆರ್‌ಸಿ–03ರಲ್ಲಿ ಒದಗಿಸಿರುವ ಡ್ರಾಪ್‌ಡೌನ್‌ನಲ್ಲಿನ **"ವಾರ್ಷಿಕ ರಿಟರ್ನ್"** ಆಯ್ಕೆ ಮಾಡತಕ್ಕದ್ದು. ಅಂತಹ ಬಾಧ್ಯತೆಯನ್ನು ವಿದ್ಯುನ್ಮಾನ ಜಮೆ ಖಾತೆಯ ಮೂಲಕ ಮಾತ್ರ ಸಂದಾಯ ಮಾಡಲು ಸಾಧ್ಯ ಎಂಬುದನ್ನು ಗಮನಿಸಬಹುದು.";

18. ನಮೂನೆ ಜಿಎಸ್‌ಟಿಆರ್–9ಸಿ ಯ ಪ್ರತಿಯೋಜನೆ– ಸದರಿ ನಿಯಮಗಳ **ನಮೂನೆ ಜಿಎಸ್‌ಟಿಆರ್–9ಸಿ** ಗಾಗಿ ಕೆಳಗಿನ ನಮೂನೆಯನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ನಮೂನೆ ಜಿಎಸ್‌ಟಿಆರ್–9ಸಿ

(ನಿಯಮ 80(3)ನ್ನು ನೋಡಿ)

ಭಾಗ A ಸಮನ್ವಯ ವಿವರ ಪತ್ರ

ಭಾಗ.I	ಮೂಲ ವಿವರಗಳು	
1	ಹಣಕಾಸು ವರ್ಷ	
2	ಜಿಎಸ್‌ಟಿಐಎನ್	
3ಎ	ಕಾನೂನು ಸಮ್ಮತ ಹೆಸರು	ಸ್ವಯಂ ಪ್ರದರ್ಶಿತ
3ಬಿ	ವ್ಯವಹಾರದ ಹೆಸರು (ಇದ್ದರೆ)	ಸ್ವಯಂ ಪ್ರದರ್ಶಿತ
4	ಯಾವುದೇ ಅಧಿನಿಯಮದ ಅಡಿಯಲ್ಲಿ, ಲೆಕ್ಕಪರಿಶೋಧನೆಗೆ ನೀವು ಭಾದ್ಯರೇ? <<ದಯವಿಟ್ಟು ನಿರ್ದಿಷ್ಟಪಡಿಸಿ>>	
		(ಎಲ್ಲಾ ಕೋಷ್ಟಕಗಳಲ್ಲಿ ಮೊತ್ತ ರೂ. ಲಕ್ಷಗಳಲ್ಲಿ)

571

ಭಾಗ. II	ಲೆಕ್ಕಪರಿಶೋಧಿತ ವಾರ್ಷಿಕ ಹಣಕಾಸು ವಿವರ ಪತ್ರದ್ದು ಘೋಷಿಸಿಕೊಂಡ ವಹಿವಾಟು ಮತ್ತು ವಾರ್ಷಿಕ ರಿಟರ್ನ್‌ನಲ್ಲಿ ಘೋಷಿಸಿಕೊಂಡ ವಹಿವಾಟುಗಳ ನಡುವೆ ಸರಿ ಹೊಂದಾಣಿಕೆ		
5	ಒಟ್ಟು ವಹಿವಾಟಿನ ಸರಿ ಹೊಂದಾಣಿಕೆ		
A	ರಾಜ್ಯದ /ಕೇಂದ್ರಾಡಳಿತ ಪ್ರದೇಶದ ಲೆಕ್ಕಪರಿಶೋಧಿತ ಹಣಕಾಸು ವಿವರ ಪತ್ರ /ಪ್ರಕಾರದ ವಹಿವಾಟು (ರಫ್ತುಗಳನ್ನು ಒಳಗೊಂಡು) (ಒಂದೇ ಪ್ಯಾನ್‌ನಡಿಯಲ್ಲಿ ಇರುವ ವಿವಿಧ /ಅನೇಕ ಜಿ.ಎಸ್.ಟಿ.ಐ.ಎನ್ ಘಟಕಗಳಿಗೆ, ಲೆಕ್ಕಪರಿಶೋಧಿತ ಹಣಕಾಸು ವಿವರ ಪತ್ರದಿಂದ ವಾಹಿವಾಟನ್ನು ಪಡೆಯತಕ್ಕದ್ದು.)		
B	ಹಣಕಾಸು ವರ್ಷದ ಪ್ರಾರಂಭಕ್ಕೆ ಬಿಲ್ಲಾಗದಿರುವ ಆದಾಯ	(+)	
C	ಹಣಕಾಸು ವರ್ಷದ ಕೊನೆಗೆ ಸರಿಹೊಂದಿಸದ ಮುಂಗಡಗಳು	(+)	
D	ಅಧಿಸೂಚಿ–I ರಡಿಯಲ್ಲಿ ಪರಿಗಣಿತ ಪೂರೈಕೆ	(+)	
E	ಆದರೆ, ವಾರ್ಷಿಕ ರಿಟರ್ನ್‌ನಲ್ಲಿ ದಾಖಲಿಸಿದಂತಹ ಹಣಕಾಸು ವರ್ಷದ ಮುಕ್ತಾಯದ ನಂತರ, ನೀಡಲಾದ ಜಮಾ ಪಟ್ಟಿಗಳು	(–)	
F	ಜಿಎಸ್‌ಟಿ ಯಡಿಯಲ್ಲಿ ಅನುಮತಿ ಇಲ್ಲದ, ಆದರೆ ಲೆಕ್ಕಪರಿಶೋಧಿತ ವಾರ್ಷಿಕ ಹಣಕಾಸು ವಿವರಪತ್ರದಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿರುವಂತಹ ವಹಿವಾಟು/ವ್ಯವಹಾರ ರಿಯಾಯಿತಿಗಳು	(+)	
	ಏಪ್ರಿಲ್ 2017 ರಿಂದ ಜೂನ್ 2017ರ ವರೆಗಿನ ವಹಿವಾಟು	(–)	
	ಹಣಕಾಸು ವರ್ಷದ ಕೊನೆಗೆ ಬಿಲ್ಲಾಗದ ಆದಾಯ	(–)	
	ಹಣಕಾಸು ವರ್ಷದ ಪ್ರಾರಂಭಕ್ಕೆ ಸರಿಹೊಂದಿಸದ ಮುಂಗಡಗಳು	(–)	
G	ಜಿಎಸ್‌ಟಿಯಡಿಯಲ್ಲಿ ಅನುಮತಿ ಇಲ್ಲದ, ಆದರೆ ಲೆಕ್ಕಪರಿಶೋಧಿತ ವಾರ್ಷಿಕ ಹಣಕಾಸು ವಿವರ ಪತ್ರದಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿರುವಂತಹ ಜಮೆ ಚೀಟಿಗಳು	(+)	
H	ವಿಆವಗಳಿಂದ ಡಿಟಿಎ ಘಟಕಗಳಿಗೆ ಮಾಡಿದ ಸರಕುಗಳ ಪೂರೈಕೆಯ ಕಾರಣದಿಂದ ಆದ ಹೊಂದಾಣಿಕೆಗಳು	(–)	
I	ರಾಜಿ ತೆರಿಗೆ ಯೋಜನೆಯ ಅವಧಿಯಲ್ಲಿನ ವಹಿವಾಟು	(–)	
J	ಪ್ರಕರಣ 15 ಮತ್ತು ಅದರ ಸಂಬಂಧಿತ ನಿಯಮಗಳಡಿಯಲ್ಲಿ ವಹಿವಾಟಿನ ಹೊಂದಾಣಿಕೆಗಳು	(+/–)	
K	ವಿದೇಶಿ ವಿನಿಮಯದ ಏರಿಳಿತಗಳ ಕಾರಣದಿಂದಾದ ವಹಿವಾಟಿನ ಹೊಂದಾಣಿಕೆಗಳು	(+/–)	
L	ಮೇಲೆ ಪಟ್ಟಿ ಮಾಡದ ಯಾವುದೇ ಕಾರಣದಿಂದಾದ ವಹಿವಾಟಿನ ಹೊಂದಾಣಿಕೆಗಳು	(+/–)	
	ಮೇಲಿನಂತೆ ಹೊಂದಾಣಿಕೆಗಳ ನಂತರದ ವಾರ್ಷಿಕ ವಹಿವಾಟು		ಸ್ವಯಂ ಪ್ರದರ್ಶಿತ
M	ವಾರ್ಷಿಕ ರಿಟರ್ನ್‌ನಲ್ಲಿ (ಜಿಎಸ್‌ಟಿಆರ್ 9) ಘೋಷಿಸಿದಂತಹ ವಹಿವಾಟು		
N	ಸರಿ ಹೊಂದಾಣಿಕೆಯಾಗದ ವಹಿವಾಟು (ಕ್ಯೂ–ಪಿ)		ಎಟಿ1
O			
P			

572

Q R		
6	ವಾರ್ಷಿಕ ಒಟ್ಟು ವಹಿವಾಟಿನಲ್ಲಿರುವ ಸರಿ ಹೊಂದಾಣಿಕೆಯಾಗದ ವ್ಯತ್ಯಾಸಕ್ಕೆ ಕಾರಣಗಳು	
A	ಕಾರಣ 1	<<ಪಠ್ಯ>>
B	ಕಾರಣ 2	<<ಪಠ್ಯ>>
C	ಕಾರಣ 3	<<ಪಠ್ಯ>>
7	ತೆರಿಗೆದಾಯಕ ವಹಿವಾಟಿನ ಸರಿ ಹೊಂದಿಸುವಿಕೆ	
A	ಹೊಂದಾಣಿಕೆಗಳ ನಂತರದ ವಾರ್ಷಿಕ ವಹಿವಾಟು (ಮೇಲಿನ 5ಪಿ ಇಂದ)	ಸ್ವಯಂ ಪ್ರದರ್ಶಿತ
B	ವಿನಾಯಿತಿಯುಳ್ಳ, ನಿಶ್ಯೇಷ ದರ, ಜಿಎಸ್‌ಟಿ ಅಲ್ಲದ ಪೂರೈಕೆಗಳು ಮತ್ತು ಪೂರೈಕೆಯಲ್ಲದ ವಹಿವಾಟಿನ ಮೌಲ್ಯ	
C	ತೆರಿಗೆ ಸಂದಾಯ ಮಾಡಿರದ, ಶೂನ್ಯ ದರ ಪೂರೈಕೆಗಳು	
D	ಹಿಮ್ಮುಖ ವಿಧಿಸುವಿಕೆ ಆಧಾರದಲ್ಲಿ ಸ್ವೀಕರ್ತರಿಂದ ತೆರಿಗೆ ಸಂದಾಯ ಮಾಡಬೇಕಾದಂತಹ ಪೂರೈಕೆಗಳು	
E	ಮೇಲಿನ ಹೊಂದಾಣಿಕೆಗಳಂತೆ ತೆರಿಗೆದಾಯಕ ವಹಿವಾಟು (ಎ–ಬಿ–ಸಿ–ಡಿ)	ಸ್ವಯಂ ಪ್ರದರ್ಶಿತ
F	ವಾರ್ಷಿಕ ರಿಟರ್ನ್‌ನಲ್ಲಿ (ಜಿಎಸ್‌ಟಿಆರ್–9) ಸಘೋಷಿಸಿಕೊಂಡಿರುವ ಭಾದ್ಯತೆಯ ಪ್ರಕಾರ ತೆರಿಗೆದಾಯಕ ವಹಿವಾಟು	
G	ಸರಿ ಹೊಂದಾಣಿಕೆಯಾದ ತೆರಿಗೆದಾಯಕ ವಹಿವಾಟು (ಎಫ್–ಇ)	ಎಟಿ2
8	ತೆರಿಗೆದಾಯಕ ವಹಿವಾಟಿನಲ್ಲಿರುವ ಸರಿ ಹೊಂದಾಣಿಕೆಯಾಗದ ವ್ಯತ್ಯಾಸಕ್ಕೆ ಕಾರಣಗಳು	
A	ಕಾರಣ 1	<<ಪಠ್ಯ>>
B	ಕಾರಣ 2	<<ಪಠ್ಯ>>
C	ಕಾರಣ 3	<<ಪಠ್ಯ>>

ಭಾಗ. II ಸಂದಾಯ ಮಾಡಿದ ತೆರಿಗೆಯ ಸರಿ ಹೊಂದಾಣಿಕೆ

9 ದರವಾರು ತೆರಿಗೆ ಭಾದ್ಯತೆ ಮತ್ತು ಅದರ ಮೇಲೆ ಸಂದಾಯ ಮಾಡಬೇಕಾಗಿರುವ ಮೊತ್ತ, ಇವೆರಡರ ನಡುವಿನ ಸರಿ–ಹೊಂದಾಣಿಕೆ

			ಸಂದಾಯ ಮಾಡಬೇಕಾಗಿರುವ ತೆರಿಗೆ			
	ವಿವರ	ತೆರಿಗೆದಾಯಕ ಮೌಲ್ಯ	ಕೇಂದ್ರ ತೆರಿಗೆ	ರಾಜ್ಯ ತೆರಿಗೆ/ಕೇಂ. ಪ್ರದೇಶ ತೆರಿಗೆ	ಏಕೀಕೃತ ತೆರಿಗೆ	ಉಪಕರ (ಅನ್ವಯಿಸಿದರೆ)
	1	2	3	4	5	6
A	5%					
B	5%	(ಹಿಮ್ಮುಖ ವಿಧಿಸುವಿಕೆ)				
C	12%					
D	12%	(ಹಿಮ್ಮುಖ ವಿಧಿಸುವಿಕೆ)				
E	18%					

573

F	18%	(ಹಿಮ್ಮುಖ ವಿಧಿಸುವಿಕೆ)				
G	28%					
H	28%	(ಹಿಮ್ಮುಖ ವಿಧಿಸುವಿಕೆ)				
I	3%					
J	0.25%					
K	0.10%					
	ಬಡ್ಡಿ					
L	ವಿಳಂಬ ಶುಲ್ಕ					
M	ದಂಡ					
N	ಇತರೆ					
O	ಮೇಲಿನ ಕೋಷ್ಟಕಗಳಂತೆ ಸಂದಾಯ ಮಾಡಬೇಕಾಗಿರುವ ಒಟ್ಟು ಮೊತ್ತ		ಸ್ವಯಂ ಪ್ರದರ್ಶಿತ	ಸ್ವಯಂ ಪ್ರದರ್ಶಿತ	ಸ್ವಯಂ ಪ್ರದರ್ಶಿತ	ಸ್ವಯಂ ಪ್ರದರ್ಶಿತ
P	ವಾರ್ಷಿಕ ರಿಟರ್ನ್ (ಜಿಎಸ್‌ಟಿಆರ್ 9) ನಲ್ಲಿ ಘೋಷಿಸಿಕೊಂಡಿರುವಂತೆ ಸಂದಾಯ ಮಾಡಿದ ಒಟ್ಟು ಮೊತ್ತ					
Q	ಸರಿ ಹೊಂದಾಣಿಕೆಯಾಗದ ಸಂದಾಯವಾದ ಮೊತ್ತ					ಎಟಿ 1
R						
10	ಸರಿ ಹೊಂದಾಣಿಕೆಯಾಗದೆ ಸಂದಾಯವಾದ ಮೊತ್ತಕ್ಕೆ ಕಾರಣಗಳು					
A	ಕಾರಣ 1	<<ಪಠ್ಯ>>				
B	ಕಾರಣ 2	<<ಪಠ್ಯ>>				
C	ಕಾರಣ 3	<<ಪಠ್ಯ>>				
11	ಸಂದಾಯ ಮಾಡಬೇಕಾಗಿರುವ, ಆದರೆ ಸಂದಾಯ ಮಾಡಿರದ ಹೆಚ್ಚುವರಿ ಮೊತ್ತ (ಮೇಲಿನ ಕೋಷ್ಟಕ 6, 8 ಮತ್ತು 10ನಲ್ಲಿ ನಿರ್ದಿಷ್ಟ ಪಡಿಸಿರುವ ಕಾರಣಗಳಿಗಾಗಿ					
			ನಗದಿನ ಮೂಲಕ ಸಂದಾಯ ಮಾಡಬೇಕಾದುದು			
	ವಿವರಣೆ	ತೆರಿಗೆದಾಯಕ ಮೌಲ್ಯ	ಕೇಂದ್ರ ತೆರಿಗೆ	ರಾಜ್ಯ ತೆರಿಗೆ/ಕೇಂ. ಪ್ರದೇಶ ತೆರಿಗೆ	ಏಕೀಕೃತ ತೆರಿಗೆ	ಉಪಕರ (ಅನ್ವಯಿಸಿದರೆ)
	1	2	3	4	5	6
	5%					
	12%					
	18%					
	28%					
	3%					
	0.25%					
	0.10%					
	ಬಡ್ಡಿ					
	ವಿಳಂಬ ಶುಲ್ಕ					
	ದಂಡ					

574

	ಇತರೆ (ದಯವಿಟ್ಟು ನಿರ್ದಿಷ್ಟ ಪಡಿಸಿ)					

ಭಾಗ IV	ಹೂಡುವಳಿ ತೆರಿಗೆ ಜಮೆ (ಹೂ.ತೆ.ಜ) ಯ ಸರಿ–ಹೊಂದಾಣಿಕೆ	
12	ನಿವ್ವಳ ಹೂಡುವಳಿ ತೆರಿಗೆ ಜಮೆ (ಹೂ.ತೆ.ಜ) ಯ ಸರಿ–ಹೊಂದಾಣಿಕೆ	
A	ರಾಜ್ಯದ /ಕೇಂದ್ರಾಡಳಿತ ಪ್ರದೇಶದ ಲೆಕ್ಕಪರಿಶೋಧಿತ ಹಣಕಾಸು ವಿವರ ಪತ್ರ /ಒಕ್ಕಣಿಕೆಯ ಪ್ರಕಾರ ಉಪಯೋಗಿಸಿಕೊಂಡಿರುವಂತಹ ಹೂತೆಜ (ಒಂದೇ ಪ್ಯಾನ್ ಅಡಿಯಲ್ಲಿ ಇರುವ ಅನೇಕ ಜಿ.ಎಸ್.ಟಿ.ಐ.ಎನ್ ಘಟಕಗಳಿಗೆ, ಈ ವಿವರವನ್ನು ಲೆಕ್ಕಪತ್ರ ಪುಸ್ತಕಗಳಿಂದ ಪಡೆಯಬೇಕು.	
B	ಹಿಂದಿನ ಹಣಕಾಸು ವರ್ಷಗಳಲ್ಲಿ ದಾಖಿಲಿಸಿ, ಪ್ರಸಕ್ತ ಹಣಕಾಸು ವರ್ಷದಲ್ಲಿ ಕ್ಲೇಮು ಮಾಡಿದ ಹೂತೆಜ (+)	
C	ಪುಸ್ತಕ ಹಣಕಾಸು ವರ್ಷದಲ್ಲಿ ದಾಖಿಲಿಸಿ, ಮುಂದಿನ ಹಣಕಾಸು ವರ್ಷದಲ್ಲಿ ಕ್ಲೇಮು ಮಾಡಬೇಕಾಗಿರುವ ಹೂತೆಜ (–)	
D	ಲೆಕ್ಕಪರಿಶೋಧಿತ ಹಣಕಾಸು ವಿವರ ಪತ್ರ ಅಥವಾ ಲೆಕ್ಕಪತ್ರ ಪುಸ್ತಕಗಳ ಅನುಸಾರ ಉಪಯೋಗಿಸಿಕೊಂಡಿರುವ ಹೂ.ತೆ.ಜ	ಸ್ವಯಂ ಪ್ರದರ್ಶಿತ
E	ವಾರ್ಷಿಕ ರಿಟರ್ನ್‌ನಲ್ಲಿ (ಜಿಎಸ್‌ಟಿಆರ್ 9) ಕ್ಲೇಮು ಮಾಡಿರುವ ಹೂ.ತೆ.ಜ	
F	ಸರಿ–ಹೊಂದಾಣಿಕೆಯಾಗದ ಹೂ.ತೆ.ಜ	ಐಟಿಸಿ 1
13	ಹೂ.ತೆ.ಜ ಯಲ್ಲಿ ಸರಿ ಹೊಂದಾಣಿಕೆಯಾಗದ ವ್ಯತ್ಯಾಸಕ್ಕೆ ಕಾರಣಗಳು	
A	ಕಾರಣ 1	<<ಪಠ್ಯ>>
B	ಕಾರಣ 2	<<ಪಠ್ಯ>>
C	ಕಾರಣ 3	<<ಪಠ್ಯ>>

14 ಲೆಕ್ಕಪರಿಶೋಧಿತ ಹಣಕಾಸು ವಿವರ ಪತ್ರ ಅಥವಾ ಲೆಕ್ಕಪತ್ರ ಪುಸ್ತಕಗಳ ಅನುಸಾರ ವೆಚ್ಚಗಳ ಮೇಲೆ ಉಪಯೋಗಿಸಿಕೊಂಡಿರುವ ಹೂ.ತೆ.ಜ ಯ ಜೊತೆಗೆ ವಾರ್ಷಿಕ ರಿಟರ್ನ್ (ಜಿಎಸ್‌ಟಿಆರ್–9)ನಲ್ಲಿ ಘೋಷಿಸಿಕೊಂಡಿರುವ ಹೂ.ತೆ.ಜ ಯ ಸರಿ–ಹೊಂದಾಣಿಕೆ

	ವಿವರ	ಮೌಲ್ಯ	ಹೂ.ತೆ.ಜಯ ಒಟ್ಟು ಮೊತ್ತ	ಉಪಯೋಗಿಸಿಕೊಂಡಿರುವ ಅರ್ಹ ಹೂ.ತೆ.ಜ ಯ ಮೊತ್ತ
	1	2	3	4
A	ಖರೀದಿಗಳು			
B	ಸಾಗಾಣಿಕೆ			
C	ವಿದ್ಯುತ್ ಮತ್ತು ಇಂಧನ			
D	ಆಮದು ಮಾಡಿಕೊಂಡ ಸರಕುಗಳು (ವಿಆವ ಯಗಳಿಂದಾದ ಸ್ವೀಕರಣೆಗಳನ್ನು ಒಳಗೊಂಡು)			
E	ಬಾಡಿಗೆ ಮತ್ತು ವಿಮೆ			
F	ಕಳೆದು ಹೋದ, ಕಳ್ಳತನವಾದ, ನಾಶಗೊಂಡ, ಲೆಕ್ಕದಿಂದ ತೆಗೆದು ಹಾಕಿದ ಅಥವಾ ಉಡುಗೊರೆಯಾಗಿ ಅಥವಾ ಉಚಿತ ಮಾದರಿಗಳಾಗಿ ವಿಲೇ ಮಾಡಲಾದ ಸರಕುಗಳು			

575

G	ರಾಯಧನ			
H	ಉದ್ಯೋಗಿಗಳ ವೆಚ್ಚ (ಸಂಬಳ, ಕೂಲಿ, ಬೋನಸ್ ಮುಂತಾದವುಗಳು)			
I	ಪ್ರಮಾಣದ ಖರ್ಚುಗಳು/ವೆಚ್ಚಗಳು			
J	ಬ್ಯಾಂಕ್ ಶುಲ್ಕಗಳು			
K	ಮನರಂಜನೆ ಖರ್ಚುಗಳು/ವೆಚ್ಚಗಳು			
L	ಲೇಖನ ಸಾಮಗ್ರಿ ಖರ್ಚು/ವೆಚ್ಚಗಳು (ಅಂಚೆ ವೆಚ್ಚಗಳನ್ನು ಒಳಗೊಂಡು)			
M	ದುರಸ್ತಿ ಮತ್ತು ನಿರ್ವಹಣೆ			
N	ಮತ್ತಿತರ ವೆಚ್ಚಗಳು			
O	ಬಂಡವಾಳ ಸರಕುಗಳು			
P	ಇನ್ನಿತರ ಯಾವುದೇ ಖರ್ಚು/ವೆಚ್ಚ–1			
Q	ಇನ್ನಿತರ ಯಾವುದೇ ಖರ್ಚು/ವೆಚ್ಚ–2			
R	ಉಪಯೋಗಿಸಿಕೊಂಡ ಅರ್ಹ ಹೂ.ತೆ.ಜ ಒಟ್ಟು ಮೊತ್ತ			ಸ್ವಯಂ ಪ್ರದರ್ಶಿತ
S	ವಾರ್ಷಿಕ ರಿಟರ್ನ್ (ಜಿಎಸ್‌ಟಿಆರ್–9) ನಲ್ಲಿ ಕ್ಲೇಮು ಮಾಡಿರುವ ಹೂ.ತೆ.ಜ			
T	(ಐಟಿಸಿ 2) ಸರಿ ಹೊಂದಾಣಿಕೆಯಾಗದ ಹೂ.ತೆ.ಜ			

15	ಹೂ.ತೆ.ಜ ಯಲ್ಲಿ ಸರಿ ಹೊಂದಾಣಿಕೆಯಾಗದ ವ್ಯತ್ಯಾಸಕ್ಕೆ ಕಾರಣಗಳು	
A	ಕಾರಣ 1	<<ಪಠ್ಯ>>
B	ಕಾರಣ 2	<<ಪಠ್ಯ>>
C	ಕಾರಣ 3	<<ಪಠ್ಯ>>
16	ಸರಿ ಹೊಂದಾಣಿಕೆಯಾಗದ ಹೂ.ತೆ.ಜ ಯಲ್ಲಿನ ವ್ಯತ್ಯಾಸದ ಮೇಲೆ ಸಂದಾಯ ಮಾಡಬೇಕಾಗಿರುವ ತೆರಿಗೆ (ಮೇಲಿನ 13 ಮತ್ತು 15ರಲ್ಲಿ ನಿರ್ದಿಷ್ಟಪಡಿಸಿದ ಕಾರಣಗಳಿಗೆ)	
	ವಿವರ	ಸಂದಾಯ ಮಾಡಬೇಕಾಗಿರುವ ಮೊತ್ತ
	ಕೇಂದ್ರ ತೆರಿಗೆ	
	ರಾಜ್ಯ/ಕೇಂ. ಪ್ರದೇಶ ತೆರಿಗೆ	
	ಏಕೀಕೃತ ತೆರಿಗೆ	
	ಉಪಕರ	
	ಬಡ್ಡಿ	
	ದಂಡ	

ಭಾಗ.V	ಸರಿ ಹೊಂದಾಣಿಕೆಯಾಗದ ಕಾರಣಕ್ಕೆ ಉಂಟಾದ ಹೆಚ್ಚುವರಿ ಭಾದ್ಯತೆ ಮೇಲೆ ಲೆಕ್ಕಪರಿಶೋಧಕರ ಶಿಫಾರಸ್ಸುಗಳು					
			(ನಗದಿನ ಮೂಲಕ ಸಂದಾಯ ಮಾಡಬೇಕಾದುದು)			
	ವಿವರಣೆ	ತೆರಿಗೆದಾಯಕ ಮೌಲ್ಯ	ಕೇಂದ್ರ ತೆರಿಗೆ	ರಾಜ್ಯ ತೆರಿಗೆ/ಕೇಂ. ಪ್ರದೇಶ ತೆರಿಗೆ	ಏಕೀಕೃತ ತೆರಿಗೆ	ಉಪಕರ (ಅನ್ವಯಿಸಿದರೆ)
	1	2	3	4	5	6
	5%					

576

	12%					
	18%					
	28%					
	3%					

0.25%					
0.10%					
ಹೂ.ತೆ.ಜ					
ಬಡ್ಡಿ					
ವಿಳಂಬ ಶುಲ್ಕ					
ದಂಡ					
ವಾರ್ಷಿಕ ರಿಟರ್ನ್ (ಜಿಎಸ್‌ಟಿಆರ್–9) ನಲ್ಲಿ ಸೇರಿಸದ ಪೂರ್ಣಕೆಗಳ ಮೇಲೆ ಸಂದಾಯ ಮಾಡಿದ ಇನ್ನ್ಯಾವುದೇ ಮೊತ್ತ					
ಹಿಂದಿರುಗಿ ಸಂದಾಯ ಮಾಡಬೇಕಾಗಿರುವ ತಪ್ಪಾಗಿ ಪಡೆದ ಮರುಪಾವತಿ					
ಬಾಕಿ ಇರುವ ನಿಶ್ಚಯಿಸಬೇಕಾದ ತಗಾದೆಗಳು					
ಇತರೆ (ದಯವಿಟ್ಟು ನಿರ್ದಿಷ್ಟಪಡಿಸಿ)					

ಪರಿಶೀಲನೆ:

ಮೇಲೆ ನೀಡಲಾದ ಮಾಹಿತಿಯು, ನನ್ನ ತಿಳುವಳಿಕೆಯ ಮತ್ತು ನಂಬಿಕೆಯ ಮಟ್ಟಿಗೆ ಸರಿಯಾಗಿರುತ್ತದೆ ಮತ್ತು ಸತ್ಯವಾಗಿರುತ್ತದೆ. ಹಾಗೂ ಯಾವುದೇ ಮಾಹಿತಿಯನ್ನು ಅದರಿಂದ ಮರೆಮಾಚಿರುವುದಿಲ್ಲ ಎಂದು ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

** (ಲೆಕ್ಕಪರಿಶೋಧಕರ ಸಹಿ ಮತ್ತು ಮೊಹರು)
ಸ್ಥಳ_____
ಸಹಿ ಮಾಡುವವರ ಹೆಸರು_____
ಸದಸ್ಯತ್ವ ಸಂಖ್ಯೆ_____
ದಿನಾಂಕ_____
ಪೂರ್ಣ ವಿಳಾಸ_____

ನೋಂದಾಯಿತ ವ್ಯಕ್ತಿಯ ಪರಿಶೀಲನೆ:

ಲೆಕ್ಕಪರಿಶೋಧಕರಿಂದ ಸಿದ್ಧಪಿಸಲ್ಪಟ್ಟ ಮತ್ತು ಸೂಕ್ತವಾಗಿ ಸಹಿ ಮಾಡಲ್ಪಟ್ಟ ನಮೂನೆ ಜಿಎಸ್‌ಟಿಆರ್–9ಸಿ ಯಲ್ಲಿನ ಸರಿ ಹೊಂದಾಣಿಕೆ ವಿವರವನ್ನು ನಾನು ಅಪ್‌ಲೋಡ್ ಮಾಡುತ್ತಿದ್ದೇನೆ ಮತ್ತು ವಿವರ ಪತ್ರದಲ್ಲಿರುವ ಯಾವುದೂ ಸಹ ನನ್ನಿಂದ ಬದಲಾಯಿಸಲ್ಪಟ್ಟಿಲ್ಲವೆಂದೂ ಅಥವಾ ಹಾಳುಮಾಡಲ್ಪಟ್ಟಿಲ್ಲವೆಂದೂ ನಾನು ಈ ಮೂಲಕ ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ. ನಾನು, ಹಣಕಾಸು ವಿವರ ಪತ್ರ, ಲಾಭ ಮತ್ತು ನಷ್ಟ ತಃಖ್ತೆ ಮತ್ತು ಬ್ಯಾಲೆನ್ಸ್‌ಶೀಟ್ ಮತ್ತಿತರೆ, ಒಳಗೊಂಡ ಇತರೆ ವಿವರ ಪತ್ರಗಳನ್ನೂ ಸಹ ಅಪ್‌ಲೋಡ್ ಮಾಡುತ್ತಿದ್ದೇನೆ.

ಸಹಿ

577

ಸ್ಥಳ:
ದಿನಾಂಕ: ಅಧಿಕೃತ ಸಹಿದಾರನ ಹೆಸರು
ಪದನಾಮ/ಸ್ಥಾನ

ಸೂಚನೆಗಳು

1. ಬಳಸಿದ ಪದಗಳು
   (ಎ) ಜಿ.ಎಸ್.ಟಿ.ಐ.ಎನ್: ಸರಕು ಮತ್ತು ಸೇವಾ ತೆರಿಗೆ ಗುರುತಿನ ಸಂಖ್ಯೆ
2. ಈ ರಿಟರ್ನ್ ಸಲ್ಲಿಸುವ ಮುಂಚಿತವಾಗಿ ಹಣಕಾಸು ವರ್ಷ 2017–18ರ ಜಿಎಸ್‌ಟಿಆರ್–1, ನಮೂನೆ ಜಿಎಸ್‌ಟಿಆರ್–3ಬಿ ಮತ್ತು ನಮೂನೆ ಜಿಎಸ್‌ಟಿಆರ್–9ನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. 2017–18ನೇ ಹಣಕಾಸು ವರ್ಷದ ಈ ವಿವರ ಪತ್ರದಲ್ಲಿ ಜುಲೈ 2017 ರಿಂದ ಮಾರ್ಚ್ 2018ರ ಅವಧಿಯ ವಿವರಗಳನ್ನು ಒದಗಿಸಬೇಕು. ಪ್ರತಿಯೊಂದು ಜಿಎಸ್‌ಟಿಎನ್‌ಗೆ, ಈ ಸಮನ್ವಯ/ಸರಿಹೊಂದಿಕೆಯ ವಿವರ ಪತ್ರವನ್ನು ಪ್ರತ್ಯೇಕವಾಗಿ ಸಲ್ಲಿಸಬೇಕು.
3. ಈ ವಿವರ ಪತ್ರದಲ್ಲಿ ಉಲ್ಲೇಖಿಸಿರುವ ಪ್ರಸಕ್ತ ಹಣಕಾಸು ವರ್ಷ ಅಂದರೆ ಯಾವ ಹಣಕಾಸು ವರ್ಷಕ್ಕೆ ಸರಿಹೊಂದಿಕೆಯ ವಿವರ ಪತ್ರವನ್ನು ಸಲ್ಲಿಸಲಾಗುತ್ತಿದೆಯೋ ಆ ವರ್ಷ.
4. ಭಾಗ–II, ಲೆಕ್ಕಪರಿಶೋಧಿತ ವಾರ್ಷಿಕ ಹಣಕಾಸು ಪತ್ರದಲ್ಲಿ ವಿವರ ಘೋಷಣೆ ಮಾಡಿದ ವಾರ್ಷಿಕ ವಹಿವಾಟು ಮತ್ತು ಈ ಜಿಎಸ್‌ಟಿಎನ್‌ಗೆ ಸಂಬಂಧಿಸಿದ ನಮೂನೆ ಜಿಎಸ್‌ಟಿಆರ್–9ರಲ್ಲಿ ಒದಗಿಸಿದ ವಾರ್ಷಿಕ ರಿಟರ್ನ್‌ನಲ್ಲಿ ಘೋಷಿಸಿದ ವಹಿವಾಟು ಇವರೆಗಿನ ನಡುವಿನ ಸರಿಹೊಂದಿಸುವಿಕೆಯನ್ನು ಒಳಗೊಂಡಿರುತ್ತದೆ. ಈ ಕೆಳಗಿನ ಸೂಚನೆಗಳಂತೆ, ಈ ಭಾಗವನ್ನು ಭರ್ತಿ ಮಾಡಬೇಕು.

ಕೋಷ್ಟಕ ಸಂಖ್ಯೆ	**ಸೂಚನೆಗಳು**
5ಎ	ಲೆಕ್ಕಪರಿಶೋಧಿತ ವಾರ್ಷಿಕ ಹಣಕಾಸು ವಿವರ ಪತ್ರದಲ್ಲಿರುವ ವಹಿವಾಟನ್ನು ಇಲ್ಲಿ ಘೋಷಿಸತಕ್ಕದ್ದು. ಒಂದೇ ಪ್ಯಾನ್‌ಗೆ ಹಲವು ಜಿಎಸ್‌ಟಿಎನ್ ಗಳು (ರಾಜ್ಯವಾರು) ಇರುವ ಪ್ರಕರಣಗಳು ಇರಬಹುದು. ಇದು ಹಲವು ರಾಜ್ಯಗಳಲ್ಲಿ ಅಸ್ತಿತ್ವ/ ಉಪಸ್ಥಿತಿ ಹೊಂದಿರುವ ವ್ಯಕ್ತಿಗಳು/ವ್ಯವಹಾರ ಘಟಕಗಳಿಗೆ ಸಾಮಾನ್ಯವಾಗಿರುತ್ತದೆ. ಅಂತಹ ವ್ಯಕ್ತಿಗಳು/ ವ್ಯವಹಾರಿಕ ಘಟಕಗಳು ತಮ್ಮ ಜಿಎಸ್‌ಟಿಎನ್ ವಾರು ವಹಿವಾಟನ್ನು ಆಂತರಿಕವಾಗಿ ಪಡೆದು/ನಿರ್ಧರಿಸಿ, ಅದನ್ನು ಇಲ್ಲಿ ಘೋಷಿಸತಕ್ಕದ್ದು. ಇದು ರಫ್ತು ವಹಿವಾಟನ್ನು (ಇದ್ದರೆ) ಒಳಗೊಂಡಿರತಕ್ಕದ್ದು. ಲೆಕ್ಕಪರಿಶೋಧಿತ ವಾರ್ಷಿಕ ಹಣಕಾಸು ವಿವರ ಪತ್ರದ ಉಲ್ಲೇಖ, ಹಲವು ರಾಜ್ಯಗಳಲ್ಲಿ ಅಸ್ತಿತ್ವದಲ್ಲಿರುವ ವ್ಯಕ್ತಿಗಳ/ ವ್ಯವಹಾರ ಘಟಕಗಳ ಲೆಕ್ಕಪತ್ರಗಳ ಉಲ್ಲೇಖವನ್ನು ಒಳಗೊಂಡಿರುತ್ತದೆಂದು ಇಲ್ಲಿ ಗಮನಿಸಬಹುದಾಗಿರುತ್ತದೆ.
5ಬಿ	ಹಿಂದಿನ ಹಣಕಾಸು ವರ್ಷದಲ್ಲಿ ಸಂಚಯ ಪದ್ಧತಿಯ ಆಧಾರದಲ್ಲಿ ಲೆಕ್ಕಪತ್ರ ಪುಸ್ತಕಗಳಲ್ಲಿ ದಾಖಲು ಮಾಡಿ, ಪ್ರಸ್ತುತ ಹಣಕಾಸು ವರ್ಷಕ್ಕೆ ತೆಗೆದುಕೊಂಡು ಬಂದ, ಬಿಲ್ ಆಗದ ಆದಾಯವನ್ನು ಇಲ್ಲಿ ಘೋಷಿಸತಕ್ಕದ್ದು. ಅಂದರೆ, ಹಿಂದೆ ಅಂಗೀಕರಿಸಿದಂತಹ/ ಗುರುತಿಸಿದಂತಹ ಆದಾಯದ ಮೇಲೆ ಹಣಕಾಸು ವರ್ಷದ ಅವಧಿಯಲ್ಲಿ ಸರಕು ಮತ್ತು ಸೇವಾ ತೆರಿಗೆಯನ್ನು ಸಂದಾಯ ಮಾಡಬೇಕಾಗಿರುವುದೋ, ಅಂತಹ ಆದಾಯವನ್ನು ಇಲ್ಲಿ ಘೋಷಿಸತಕ್ಕದ್ದು. (ಉದಾಹರಣೆ, 2016–17ನೇ ಹಣಕಾಸು ವರ್ಷದ ಅವಧಿಗೆ ರೂ. ಹತ್ತು ಕೋಟಿ ಬಿಲ್ ಆಗದ ಆದಾಯವಿದ್ದು, ಪ್ರಸಕ್ತ ಹಣಕಾಸು ವರ್ಷದಲ್ಲಿ, ರೂ. ನಾಲ್ಕು ಕೋಟಿಗಳಿಗೆ ಸರಕು ಮತ್ತು ಸೇವಾ ತೆರಿಗೆ ಸಂದಾಯ ಮಾಡಿದ್ದರೆ, ಆಗ ರೂ. ನಾಲ್ಕು ಕೋಟಿಗಳ ಮೊತ್ತವನ್ನು ಇಲ್ಲಿ ಘೋಷಿಸತಕ್ಕದ್ದು)
5ಸಿ	ಸರಕು ಮತ್ತು ಸೇವಾ ತೆರಿಗೆ ಸಂದಾಯ ಮಾಡಿದಂತಹ ಮುಂಗಡಗಳ, ಆದರೆ ಲೆಕ್ಕಪರಿಶೋಧಿತ ಹಣಕಾಸು ವಿವರ ಪತ್ರದಲ್ಲಿ ಗುರುತಿಸದಂತಹ/ ಅಂಗೀಕರಿಸದಂತಹ ಆದಾಯದ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು.
5ಡಿ	ಕೇಂದ್ರ ಸರಕು ಮತ್ತು ಸೇವಾ ತೆರಿಗೆ ಅಧಿನಿಯಮ, 2017ರ ಅನುಸೂಚಿ–1 ರ ಅಡಿಯಲ್ಲಿ ಪರಿಗಣಿತ ಪೂರೈಕೆಗಳ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು. ಲೆಕ್ಕಪರಿಶೋಧಿತ ಹಣಕಾಸು ವಿವರ ಪತ್ರ

578

	ಭಾಗವಾಗಿರುವ ಯಾವುದೇ ಪರಿಗಣಿತ ಪೂರೈಕೆಯ ವಹಿವಾಟನ್ನು ಇಲ್ಲಿ ಸೇರಿಸುವ ಅವಶ್ಯಕತೆ ಇರುವುದಿಲ್ಲ.
5ಇ	ಪ್ರಸಕ್ತ ಹಣಕಾಸು ವರ್ಷದಲ್ಲಿ ಲೆಕ್ಕಕ್ಕೆ ತೆಗೆದುಕೊಂಡ ಪೂರೈಕೆಗಳಿಗೆ ಸಂಬಂಧಿಸಿದಂತೆ 31 ಮಾರ್ಚ್‌ನ ನಂತರ ನೀಡಲಾದ, ಆದರೆ ವಾರ್ಷಿಕ ರಿಟರ್ನ್‌ನಲ್ಲಿ (ಜಿಎಸ್‌ಟಿಆರ್–9)ರಲ್ಲಿ ದಾಖಲಿಸಿದಂತಹ ಜಮಾ ಪಟ್ಟಿಗಳ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು.
5ಎಫ್	ಸರಕು ಮತ್ತು ಸೇವಾ ತೆರಿಗೆಯನ್ನು ವಿಧಿಸಬಹುದಾದಂತಹ (ಅನುಮತಿ ಇಲ್ಲದಿರುವಾಗ) ಲೆಕ್ಕಪರಿಶೋಧಿತ ಹಣಕಾಸು ವಿವರ ಪತ್ರದಲ್ಲಿ ಲೆಕ್ಕಕ್ಕೆ ತೆಗೆದುಕೊಂಡಂತಹ ವ್ಯಾಪಾರ ರಿಯಾಯಿತಿಗಳನ್ನು ಇಲ್ಲಿ ಘೋಷಿಸತಕ್ಕದ್ದು.
5ಜಿ	ಏಪ್ರಿಲ್ 2017 ರಿಂದ ಜೂನ್ 2017ರವರೆಗಿನ ಅವಧಿಗೆ, ಲೆಕ್ಕಪರಿಶೋಧಿತ ಹಣಕಾಸು ವಿವರ ಪತ್ರದಲ್ಲಿ ಒಳಗೊಂಡಿರುವ ವಹಿವಾಟನ್ನು ಇಲ್ಲಿ ಘೋಷಿಸತಕ್ಕದ್ದು.
5ಹೆಚ್	ಅಂತಹ ಆದಾಯದ ಮೇಲೆ ಅದೇ ಹಣಕಾಸು ವರ್ಷದಲ್ಲಿ ಸರಕು ಮತ್ತು ಸೇವಾ ತೆರಿಗೆಯನ್ನು ಸಂದಾಯ ಮಾಡಬೇಕಿರದಂತಹ ಆದಾಯವನ್ನು ಪ್ರಸಕ್ತ ಹಣಕಾಸು ವರ್ಷದಲ್ಲಿ ಸಂಚಯ ಪದ್ಧತಿಯ ಆಧಾರದಲ್ಲಿ ಲೆಕ್ಕಪತ್ರ ಪುಸ್ತಕಗಳಲ್ಲಿ ದಾಖಲಿಸಿ ಬಿಲ್ ಆಗದ ಆದಾಯವನ್ನು ಇಲ್ಲಿ ಘೋಷಿಸಿಕೊಳ್ಳತಕ್ಕದ್ದು.
5ಐ	ಲೆಕ್ಕಪರಿಶೋಧಿತ ಹಣಕಾಸು ವಿವರ ಪತ್ರದಲ್ಲಿ ಆದಾಯವೆಂದು ಗುರುತಿಸಿದಂತಹ/ಅಂಗೀಕರಿಸಿದಂತಹ, ಆದರೆ ಸರಕು ಮತ್ತು ಸೇವಾ ತೆರಿಗೆಯನ್ನು ಸಂದಾಯ ಮಾಡಿರದಂತಹ ಮುಂಗಡಗಳ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು.
5ಜೆ	ಲೆಕ್ಕಪರಿಶೋಧಿತ ಹಣಕಾಸು ವಿವರ ಪತ್ರದಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿರುವ, ಆದರೆ ಕೇಂದ್ರ ಸರಕು ಮತ್ತು ಸೇವಾ ತೆರಿಗೆ ಅಧಿನಿಯಮದ ಪ್ರಕರಣ 34ರ ಅಡಿಯಲ್ಲಿ ಅಂಗೀಕಾರಾರ್ಹವಲ್ಲದ ಜಮೆ ಚೀಟಿಗಳ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು.
5ಕೆ	ವಿ.ಆ.ವಲಯಗಳಿಂದ ದೇಶಿಯ ಸ್ವಂತ ಪ್ರದೇಶಗಳ (ಡಿಟಿಎ) ಘಟಕಗಳಿಗೆ ಪೂರೈಸಿ, ಡಿಟಿಎ ಘಟಕಗಳಿಂದ ಬಿಲ್ ಆಫ್ ಎಂಟ್ರಿ ಸಲ್ಲಿಸಿದಂತಹ ಸರಕುಗಳ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು.
5ಎಲ್	ಪ್ರಸಕ್ತ ಹಣಕಾಸು ವರ್ಷದಲ್ಲಿ ನೋಂದಾಯಿತ ವ್ಯಕ್ತಿಗಳು ರಾಜಿ ತೆರಿಗೆ ಪದ್ಧತಿ/ಯೋಜನೆಯಿಂದ ಹೊರ ಹೋಗುವ ಆಯ್ಕೆ ಮಾಡಿದಂತಹ ಪ್ರಕರಣಗಳು ಇರಬಹುದು. ಲೆಕ್ಕಪರಿಶೋಧಿತ ಹಣಕಾಸು ವಿವರ ಪತ್ರದ ಪ್ರಕಾರ ಅಂತಹವರ ವಹಿವಾಟು, ರಾಜಿ ತೆರಿಗೆಯಲ್ಲಿ ಮತ್ತು ಸಾಮಾನ್ಯ ತೆರಿಗೆ ಇವೆರಡರ ಅಡಿಯಲ್ಲಿ ತೆರಿಗೆ ಸಂದಾಯ ಮಾಡುವ ವ್ಯಕ್ತಿಯ ವಹಿವಾಟನ್ನು ಒಳಗೊಂಡಿರುತ್ತದೆ. ಆದ್ದರಿಂದ, ರಾಜಿ ತೆರಿಗೆ ಯೋಜನೆಯಡಿಯಲ್ಲಿ ಸರಕು ಮತ್ತು ಸೇವಾ ತೆರಿಗೆ ಸಂದಾಯ ಮಾಡಿದಂತಹ ವಹಿವಾಟನ್ನು ಇಲ್ಲಿ ಘೋಷಿಸತಕ್ಕದ್ದು.
5ಎಮ್	ಕೇಂದ್ರ ಸರಕು ಮತ್ತು ಸೇವಾ ತೆರಿಗೆ ಅಧಿನಿಯಮ 2017ರ ಪ್ರಕರಣ 15 ಮತ್ತದರ ನಿಯಮಗಳ ಮೌಲ್ಯಮಾಪನ ತತ್ವಗಳಂತೆ, ತೆರಿಗೆದಾಯಕ ಮೌಲ್ಯ ಮತ್ತು ಬೆಲೆಪಟ್ಟಿ ಮೌಲ್ಯಗಳ ನಡುವೆ ವ್ಯತ್ಯಾಸಗಳಿರುವಂತಹ ಪ್ರಕರಣಗಳಿರಬಹುದು. ಆದ್ದರಿಂದ, ಪೂರೈಕೆಗಳ ಮೌಲ್ಯಮಾಪನದ ವ್ಯತ್ಯಾಸಗಳಿಂದ, ವಾರ್ಷಿಕ ರಿಟರ್ನ್ (ಜಿಎಸ್‌ಟಿಆರ್–9)ನಲ್ಲಿ ವರದಿ ಮಾಡಿರುವ ವಹಿವಾಟಗೂ ಮತ್ತು ವಾರ್ಷಿಕ ಲೆಕ್ಕಪರಿಶೋಧನೆ ಹಣಕಾಸು ವಿವರ ಪತ್ರದಲ್ಲಿ ವರದಿ ಮಾಡಿರುವ ವಹಿವಾಟಗೂ ಇರುವ ಯಾವುದೇ ವ್ಯತ್ಯಾಸವನ್ನು ಇಲ್ಲಿ ಘೋಷಿಸತಕ್ಕದ್ದು.
5ಎನ್	ವಿದೇಶಿ ವಿನಿಮಯ ಏರಿಳಿತದ ಕಾರಣದಿಂದ, ವಾರ್ಷಿಕ ರಿಟರ್ನ್(ಜಿಎಸ್‌ಟಿಆರ್–9) ಮತ್ತು ವಾರ್ಷಿಕ ಲೆಕ್ಕಪರಿಶೋಧನೆ ಹಣಕಾಸು ವಿವರ ಪತ್ರದಲ್ಲಿ ವರದಿ ಮಾಡಿರುವ ವಹಿವಾಟಿನಲ್ಲಿರುವ ವ್ಯತ್ಯಾಸವನ್ನು ಇಲ್ಲಿ ಘೋಷಿಸತಕ್ಕದ್ದು.
5ಓ	ಮೇಲೆ ಹೇಳಿದ ಯಾವುದೇ ಕಾರಣಗಳಿಂದ ಉಂಟಾಗದೇ ಇರುವ ವಾರ್ಷಿಕ ರಿಟರ್ನ್ (ಜಿಎಸ್‌ಟಿಆರ್–9) ಮತ್ತು ವಾರ್ಷಿಕ ಲೆಕ್ಕಪರಿಶೋಧನೆ ಹಣಕಾಸು ವಿವರ ಪತ್ರದಲ್ಲಿ ವರದಿ ಮಾಡಿರುವ ವಹಿವಾಟುಗಳಲ್ಲಿರುವ ವ್ಯತ್ಯಾಸವನ್ನು ಇಲ್ಲಿ ಘೋಷಿಸಿಕೊಳ್ಳತಕ್ಕದ್ದು.
5ಕ್ಯೂ	ವಾರ್ಷಿಕ ರಿಟರ್ನ್(ಜಿಎಸ್‌ಟಿಆರ್–9) ನಲ್ಲಿ ಘೋಷಿಸಿರುವಂತಹ ವಾರ್ಷಿಕ ವಹಿವಾಟನ್ನು ಇಲ್ಲಿ ಘೋಷಿಸಿಕೊಳ್ಳತಕ್ಕದ್ದು. ಈ ವಹಿವಾಟನ್ನು ವಾರ್ಷಿಕ ರಿಟರ್ನ್‌ನ (ಜಿಎಸ್‌ಟಿಆರ್–9) ಕ್ರ.ಸಂ. 5ಎನ್, 10

579

	ಮತ್ತು 11 ರಿಂದ ಪಡೆಯಬಹುದಾಗಿರುತ್ತದೆ.
6	ವಾರ್ಷಿಕ ಲೆಕ್ಕಪರಿಶೋಧನೆ ಹಣಕಾಸು ವಿವರ ಪತ್ರದಲ್ಲಿ ಘೋಷಿಸಿಕೊಂಡಿರುವ ವಹಿವಾಟು ಮತ್ತು ವಾರ್ಷಿಕ ರಿಟರ್ನ್‌ನ (ಜಿ.ಎಸ್.ಟಿ.ಆರ್–9) ರಲ್ಲಿ ಘೋಷಿಸಿಕೊಂಡಿರುವ ವಹಿವಾಟುಗಳ ನಡುವೆ ಸರಿ ಹೊಂದಾಣಿಕೆಯಾಗದಿರುವುದಕ್ಕೆ ಕಾರಣಗಳನ್ನು ಇಲ್ಲಿ ನಿರ್ದಿಷ್ಟಪಡಿಸತಕ್ಕದ್ದು.
7	ವಾರ್ಷಿಕ ರಿಟರ್ನ್‌ನಲ್ಲಿ (ಜಿ.ಎಸ್.ಟಿ.ಆರ್–9) ಘೋಷಿಸಿದ ತೆರಿಗೆದಾಯಕ ವಹಿವಾಟಿನೊಂದಿಗೆ ಹೊಂದಾಣಿಕೆಯ ನಂತರ ವಾರ್ಷಿಕ ಲೆಕ್ಕಪರಿಶೋಧಿತ ವಹಿವಾಟಿನಿಂದ ಹೊಂದಿಸಿದ ತೆರಿಗೆದಾಯಕ ವಹಿವಾಟನ್ನು ಈ ಕೋಷ್ಟಕವು ಒದಗಿಸುತ್ತದೆ.
7ಎ	ಮೇಲಿನ ಕೋಷ್ಟಕ 5ಪಿ ಇಂದ ಪಡೆಯಲಾದ ವಾರ್ಷಿಕ ವಹಿವಾಟು ಇಲ್ಲಿ ಸ್ವಯಂ ಪ್ರದರ್ಶಿತಗೊಳ್ಳುತ್ತದೆ.
7ಬಿ	ವಿನಾಯಿತಿಯುಳ್ಳ, ನಿಶ್ಯೇಷ ದರ ಜಿ.ಎಸ್.ಟಿ ಅಲ್ಲದ ಮತ್ತು ಪೂರೈಕೆಯಲ್ಲದ ವಹಿವಾಟಿನ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು. ಜಮಾಪಟ್ಟಿ, ಖರ್ಚುಪಟ್ಟಿ ಮತ್ತು ತಿದ್ದುಪಡಿಗಳನ್ನು (ಇದ್ದರೆ) ಕಳೆದ ನಿವ್ವಳ ಮೌಲ್ಯವನ್ನು ಇಲ್ಲಿ ವರದಿ ಮಾಡತಕ್ಕದ್ದು.
7ಸಿ	ತೆರಿಗೆ ಸಂದಾಯ ಮಾಡಿರದ, ಶೂನ್ಯ ದರ ಪೂರೈಕೆಗಳನ್ನು (**ವಿ.ಆ** ವಲಯಗಳಿಗೆ ಮಾಡಿದ ಪೂರೈಕೆಗಳನ್ನು ಒಳಗೊಂಡಂತೆ) ಇಲ್ಲಿ ಘೋಷಿಸತಕ್ಕದ್ದು. ಜಮಾಪಟ್ಟಿ, ಖರ್ಚುಪಟ್ಟಿ ಮತ್ತು ತಿದ್ದುಪಡಿಗಳನ್ನು (ಇದ್ದಾಗ) ಕಳೆದ ನಿವ್ವಳ ಮೌಲ್ಯವನ್ನು ಇಲ್ಲಿ ವರದಿ ಮಾಡತಕ್ಕದ್ದು.
7ಡಿ	ಹಿಮ್ಮುಖ ವಿಧಿಸುವಿಕೆ ಆಧಾರದಲ್ಲಿ ಸ್ವೀಕರ್ತನಿಂದ ತೆರಿಗೆ ಸಂದಾಯ ಮಾಡಬೇಕಾದಂತಹ ಪೂರೈಕೆಗಳ ಮೌಲ್ಯವನ್ನು ಇಲ್ಲಿ ಘೋಷಿಸಿಕೊಳ್ಳತಕ್ಕದ್ದು. ಜಮಾಪಟ್ಟಿ, ಖರ್ಚುಪಟ್ಟಿ ಮತ್ತು ತಿದ್ದುಪಡಿಗಳನ್ನು (ಇದ್ದಾಗ) ಕಳೆದ ನಿವ್ವಳ ಮೌಲ್ಯವನ್ನು ಇಲ್ಲಿ ವರದಿ ಮಾಡತಕ್ಕದ್ದು.
7ಇ	ಮೇಲಿನ ಕೋಷ್ಟಕ 7ಎ ನಲ್ಲಿ ಘೋಷಿಸಿರುವ ಹೊಂದಾಣಿಕೆಗಳ ನಂತರದ ವಾರ್ಷಿಕ ವಹಿವಾಟು ಮತ್ತು ಮೇಲಿನ ಕೋಷ್ಟಕ 7ಬಿ, 7ಸಿ ಮತ್ತು 7ಡಿ ಗಳಲ್ಲಿ ಘೋಷಿಸಿರುವ ಎಲ್ಲಾ ಪೂರೈಕೆಗಳು (ವಿನಾಯತಿಯುಳ್ಳ, ಜಿ.ಎಸ್.ಟಿ ಅಲ್ಲದ, ಹಿಮ್ಮುಖ ವಿಧಿಸುವಿಕೆ ಮುಂತಾದವುಗಳು) ಇವುಗಳ ನಡುವಿನ ವ್ಯತ್ಯಾಸದಿಂದ ತೆರಿಗೆದಾಯಕ ವಹಿವಾಟನ್ನು ಪಡೆಯುವುದು.
7ಎಫ್	ವಾರ್ಷಿಕ ರಿಟರ್ನ್ (ಜಿಎಸ್‌ಟಿಆರ್–9)ನ ಕೋಷ್ಟಕ (4ಎನ್–4ಜಿ)+(10–11) ರಲ್ಲಿರುವಂತೆ ಘೋಷಿಸಿರುವ ತೆರಿಗೆದಾಯಕ ವಹಿವಾಟನ್ನು ಇಲ್ಲಿ ಘೋಷಿಸತಕ್ಕದ್ದು.
8	ಮೇಲಿನ ಕೋಷ್ಟಕ 7ಇ ನಿಂದ ಪಡೆದಂತಹ ಹೊಂದಾಣಿಕೆ ಮಾಡಿದ ವಾರ್ಷಿಕ ತೆರಿಗೆದಾಯಕ ವಹಿವಾಟು ಮತ್ತು ಕೋಷ್ಟಕ 7ಎಫ್ ನಲ್ಲಿ ಘೋಷಿಸಿರುವ ತೆರಿಗೆದಾಯಕ ವಹಿವಾಟುಗಳ ನಡುವಿನ ಸರಿ ಹೊಂದಾಣಿಕೆಯಾಗದಿರುವುದಕ್ಕೆ ಕಾರಣಗಳನ್ನು ಇಲ್ಲಿ ನಿರ್ದಿಷ್ಟಪಡಿಸತಕ್ಕದ್ದು.

5. **ಭಾಗ–III**, ವಾರ್ಷಿಕ ರಿಟರ್ನ್‌ನಲ್ಲಿ (ಜಿಎಸ್‌ಟಿಆರ್–9) ನಲ್ಲಿ ಘೋಷಿಸಿದಂತೆ ವಾಸ್ತವವಾಗಿ ಸಂದಾಯ ಮಾಡಿದ ತೆರಿಗೆ ಮತ್ತು ಸರಿ ಹೊಂದಾಣಿಕೆ ವಿವರ ಪತ್ರದಲ್ಲಿ ಘೋಷಿಸಿರುವ ಸಂದಾಯ ಮಾಡಬೇಕಾದ ತೆರಿಗೆ, ಇವುಗಳ ಸರಿ ಹೊಂದಾಣಿಕೆಯನ್ನು ಒಳಗೊಂಡಿರುತ್ತದೆ. ಈ ಭಾಗವನ್ನು ಭರ್ತಿ ಮಾಡಲು ಸೂಚನೆಗಳು ಈ ಕೆಳಗಿನಂತೆ ಇರುತ್ತವೆ.

ಕೋಷ್ಟಕ ಸಂಖ್ಯೆ	**ಸೂಚನೆಗಳು**
9	ವಾರ್ಷಿಕ ರಿಟರ್ನ್ (ಜಿಎಸ್‌ಟಿಆರ್–9) ನಲ್ಲಿ ಘೋಷಿಸಿದಂತೆ ಸಂದಾಯ ಮಾಡಿರುವ ತೆರಿಗೆಯ ಮೊತ್ತ ಮತ್ತು ಸರಿ ಹೊಂದಾಣಿಕೆ ವಿವರ ಪತ್ರದಂತೆ ಸಂದಾಯ ಮಾಡಿರುವ ತೆರಿಗೆ ಮೊತ್ತಗಳ ನಡುವಿನ ಸರಿ ಹೊಂದಾಣಿಕೆಯನ್ನು, ಈ ಕೋಷ್ಟಕವು ಒದಗಿಸುತ್ತದೆ. ಹಿಮ್ಮುಖ ವಿಧಿಸುವಿಕೆ ಆಧಾರದಲ್ಲಿ, ಸ್ವೀಕರ್ತನು (ಅಂದರೆ ಯಾವ ವ್ಯಕ್ತಿಗಾಗಿ ಸರಿ ಹೊಂದಾಣಿಕೆ ವಿವರ ಪತ್ರವನ್ನು ಸಿದ್ಧಪಡಿಸಲಾಗಿದೆಯೋ), ತೆರಿಗೆ ಸಂದಾಯ ಮಾಡಿದಂತಹ ಪೂರೈಕೆಗಳನ್ನು, **"ಆರ್.ಸಿ"**ಶೀರ್ಷಿಕೆಯಡಿಯಲ್ಲಿ ಘೋಷಣೆ ಮಾಡತಕ್ಕದ್ದು.
9ಪಿ	ಕೋಷ್ಟಕ 9ಎ ಇಂದ 9ಓ ವರೆಗೆ ಘೋಷಿಸಿದ ಭಾದ್ಯತೆಯಂತೆ ಸಂದಾಯ ಮಾಡಬೇಕಾಗಿರುವ ಒಟ್ಟು ಮೊತ್ತ ಇಲ್ಲಿ ಸ್ವಯಂ ಪ್ರದರ್ಶಿತವಾಗುತ್ತದೆ.
9ಕ್ಯೂ	ವಾರ್ಷಿಕ ರಿಟರ್ನ್ (ಜಿಎಸ್‌ಟಿಆರ್–9) ನ ಕೋಷ್ಟಕ 9ರಲ್ಲಿ ಘೋಷಿಸಿದಂತೆ ಸಂದಾಯ

580

	ಮಾಡಬೇಕಾಗಿರುವ ಮೊತ್ತವನ್ನು ಇಲ್ಲಿ ಘೋಷಿಸತಕ್ಕದ್ದು. ವಾರ್ಷಿಕ ರಿಟರ್ನ್ (ಜಿಎಸ್‌ಟಿಆರ್–9)ರ ಕೋಷ್ಟಕ 10 ಅಥವಾ 11ರಂತೆ ಸಂದಾಯ ಮಾಡಿದ ವ್ಯತ್ಯಾಸದ ತೆರಿಗೆಯನ್ನು ಸಹ ಇದು ಒಳಗೊಂಡಿರಬೇಕು.
10	ಮೇಲಿನ ಕೋಷ್ಟಕ 9ಪಿ ನಲ್ಲಿ ಘೋಷಿಸಿದ ಸಂದಾಯ ಮಾಡಬೇಕಾಗಿರುವ/ಭಾದ್ಯತೆಯ ಮೊತ್ತ ಮತ್ತು ಕೋಷ್ಟಕ 9ಕ್ಯೂ ನಲ್ಲಿ ಸಂದಾಯ ಮಾಡಬೇಕಾಗಿರುವ ಮೊತ್ತ, ಇವೆರಡರ ನಡುವೆ ಸರಿ–ಹೊಂದಾಣಿಕೆ ಆಗದಿರುವುದಕ್ಕೆ ಕಾರಣಗಳನ್ನು ಇಲ್ಲಿ ನಿರ್ದಿಷ್ಟಪಡಿಸತಕ್ಕದ್ದು.
11	ಮೇಲಿನ ಕೋಷ್ಟಕ 6, 8 ಮತ್ತು 10 ರಲ್ಲಿ ನಿರ್ದಿಷ್ಟಪಡಿಸಿದ ಕಾರಣಗಳಿಗಾಗಿ ಸಂದಾಯ ಮಾಡಬೇಕಾಗಿರುವ ಯಾವುದೇ ಮೊತ್ತವನ್ನು ಇಲ್ಲಿ ಘೋಷಿಸತಕ್ಕದ್ದು.

6. ಭಾಗ–IV, ಹೂ.ತೆ.ಜ ಯ ಸರಿ ಹೊಂದಾಣಿಕೆಯನ್ನು ಒಳಗೊಂಡಿರುತ್ತದೆ. ಈ ಕೆಳಗಿನ ಸೂಚನೆಯಂತೆ ಭಾಗ– IVನ್ನು ಭರ್ತಿ ಮಾಡಬೇಕು.

ಕೋಷ್ಟಕ ಸಂಖ್ಯೆ	**ಸೂಚನೆಗಳು**
12ಎ	ಲೆಕ್ಕ ಪರಿಶೋಧಿತ ವಾರ್ಷಿಕ ಹಣಕಾಸು ವಿವರ ಪತ್ರದಲ್ಲಿರುವ ಹೂತೆಜ (ಹಿಮ್ಮುಖಗೊಳಿಸಿದ ನಂತರ)ಯನ್ನು ಇಲ್ಲಿ ಘೋಷಿಸತಕ್ಕದ್ದು. ಒಂದೇ ಪ್ಯಾನ್‌ಗೆ ಹಲವು ಜಿಎಸ್‌ಟಿಎನ್‌ಗಳು (ರಾಜ್ಯವಾರು) ಇರುವ ಪ್ರಕರಣಗಳು ಇರಬಹುದು. ಇದು ಹಲವು ರಾಜ್ಯಗಳಲ್ಲಿ ಅಸ್ತಿತ್ವ/ಉಪಸ್ಥಿತಿ ಹೊಂದಿರುವ ವ್ಯಕ್ತಿಗಳು/ವ್ಯವಹಾರ ಘಟಕಗಳಿಗೆ ಸಾಮಾನ್ಯವಾಗಿರುತ್ತದೆ. ಅಂತಹ ವ್ಯಕ್ತಿಗಳು/ವ್ಯವಹಾರ ಘಟಕಗಳು ಪ್ರತಿಯೊಂದು ಪ್ರತ್ಯೇಕ ಜಿಎಸ್‌ಟಿಐಎನ್‌ಗೆ ಹೂತಜಮೆಯನ್ನು ಅಂತರಿಕವಾಗಿ ಪಡೆದು/ನಿರ್ಧರಿಸಿ ಇಲ್ಲಿ ಘೋಷಿಸತಕ್ಕದ್ದು. ಲೆಕ್ಕಪರಿಶೋಧಿತ ವಾರ್ಷಿಕ ಹಣಕಾಸು ವಿವರ ಪತ್ರದ ಉಲ್ಲೇಖ ಹಲವು ರಾಜ್ಯಗಳಲ್ಲಿ ಅಸ್ತಿತ್ವದಲ್ಲಿರುವ ವ್ಯಕ್ತಿಗಳ/ವ್ಯವಹಾರ ಘಟಕಗಳ ಲೆಕ್ಕಪತ್ರಗಳ ಉಲ್ಲೇಖವನ್ನು ಒಳಗೊಂಡಿರುತ್ತದೆಂದು ಇಲ್ಲಿ ಗಮನಿಸಬಹುದಾಗಿರುತ್ತದೆ.
12ಬಿ	ಹಿಂದಿನ ಹಣಕಾಸು ವರ್ಷ(ಗಳ) ವಾರ್ಷಿಕ ಲೆಕ್ಕ ಪರಿಶೋಧಿತ ಹಣಕಾಸು ವಿವರ ಪತ್ರದಲ್ಲಿ ದಾಖಲಿಸಿದ ಆದರೆ ಸರಿ ಹೊಂದಾಣಿಕೆ ವಿವರ ಪತ್ರವನ್ನು ಸಲ್ಲಿಸುತ್ತಿರುವ ಹಣಕಾಸು ವರ್ಷದ ಹೂ.ತೆ.ಜ ಖಾತೆಯಲ್ಲಿ ಉಪಯೋಗಿಸಿಕೊಂಡಿರುವ ಯಾವುದೇ ಹೂ.ತೆ.ಜ.ಯನ್ನು ಇಲ್ಲಿ ಘೋಷಿಸತಕ್ಕದ್ದು. ಇದು, ಹಿಂದಿನ ವರ್ಷಗಳಲ್ಲಿ ದಾಖಲಿಸಿದ, ಆದರೆ 2017–18ರ ಅವಧಿಯ ಹಣಕಾಸು ವರ್ಷದಲ್ಲಿ ಉಪಯೋಗಿಸಿಕೊಂಡಿರುವ ಸ್ಥಿತ್ಯಂತರ ಜಮೆಯನ್ನು ಒಳಗೊಂಡಿರುತ್ತದೆ.
12ಸಿ	ಪ್ರಸಕ್ತ ಹಣಕಾಸು ವರ್ಷದ ವಾರ್ಷಿಕ ಲೆಕ್ಕ ಪರಿಶೋಧಿತ ಹಣಕಾಸು ವಿವರ ಪತ್ರದಲ್ಲಿ ದಾಖಲಿಸಿರುವ, ಆದರೆ ಸದರಿ ಹಣಕಾಸು ವರ್ಷದ ಹೂ.ತೆ.ಜ ಖಾತೆಗೆ ಜಮೆ ಆಗದಿರುವ ಯಾವುದೇ ಹೂ.ತೆ.ಜ ಯನ್ನು ಇಲ್ಲಿ ಘೋಷಿಸತಕ್ಕದ್ದು.
12ಡಿ	ಮೇಲಿನ ಕೋಷ್ಟಕ 12 ಎ, 12 ಬಿ ಮತ್ತು 12 ಸಿ ಗಳಲ್ಲಿ ಘೋಷಿಸಿದ ಮೊತ್ತಗಳಿಂದ/ಮೌಲ್ಯಗಳಿಂದ ಪಡೆದಂತಹ ವಾರ್ಷಿಕ ಲೆಕ್ಕಪರಿಶೋಧಿತ ಹಣಕಾಸು ವಿವರ ಪತ್ರ ಅಥವಾ ಲೆಕ್ಕಪತ್ರ ಪುಸ್ತಕಗಳಂತೆ ಉಪಯೋಗಿಸಿಕೊಂಡ ಹೂ.ತೆ.ಜ ಯು ಇಲ್ಲಿ ಸ್ವಯಂ ಪ್ರದರ್ಶಿತವಾಗುತ್ತದೆ.
12ಇ	ವಾರ್ಷಿಕ ರಿಟರ್ನ್ (ಜಿಎಸ್‌ಟಿಆರ್–9) ರ ಕೋಷ್ಟಕ 7ಜೆ ನಲ್ಲಿ ಘೋಷಿಸಿರುವಂತೆ ಬಳಕೆಗೆ ಲಭ್ಯವಿರುವ ನಿವ್ವಳ ಹೂ.ತೆ.ಜ ಯನ್ನು ಇಲ್ಲಿ ಘೋಷಿಸತಕ್ಕದ್ದು.
13	ವಾರ್ಷಿಕ ಲೆಕ್ಕ ಪರಿಶೋಧಿತ ಹಣಕಾಸು ವಿವರ ಪತ್ರ ಅಥವಾ ಲೆಕ್ಕ ಪತ್ರ ಪುಸ್ತಕಗಳಲ್ಲಿರುವ ಹೂ.ತೆ.ಜ (ಕೋಷ್ಟಕ 12–ಡಿ) ಮತ್ತು ವಾರ್ಷಿಕ ರಿಟರ್ನ್‌ನಲ್ಲಿ (ಜಿಎಸ್‌ಟಿಆರ್–9) ರಲ್ಲಿ ಉಪಯೋಗಿಸಿದ ನಿವ್ವಳ ಹೂ.ತೆ.ಜ (ಕೋಷ್ಟಕ 12 ಇ) ನಡುವೆ ಸರಿ ಹೊಂದಾಣಿಕೆ ಆಗದಿರುವುದಕ್ಕೆ/ ಅಸಮಂಜತೆಗಳಿಗೆ (Non-reconciliation) ಕಾರಣಗಳನ್ನು ಇಲ್ಲಿ ನಿರ್ದಿಷ್ಟಪಡಿಸತಕ್ಕದ್ದು.
14	ವಾರ್ಷಿಕ ಲೆಕ್ಕಪರಿಶೋಧಿತ ಹಣಕಾಸು ವಿವರ ಪತ್ರ ಅಥವಾ ಲೆಕ್ಕ ಪುಸ್ತಕಗಳಲ್ಲಿ ದಾಖಲಿಸಿದ ವೆಚ್ಚಗಳು ಮತ್ತು ವಾರ್ಷಿಕ ರಿಟರ್ನ್ (ಜಿಎಸ್‌ಟಿಆರ್–9) ನಲ್ಲಿ ಘೋಷಿಸಿದ ಹೂ.ತೆ.ಜ ನಡುವೆ ಸರಿ ಹೊಂದಾಣಿಕೆಗಾಗಿ ಈ ಕೋಷ್ಟಕ. ಈ ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಿರುವ ವಿವಿಧ ಉಪಶೀರ್ಷಿಕೆಗಳು,

581

	ವಾರ್ಷಿಕ ಲೆಕ್ಕ ಪರಿಶೋಧಿತ ಹಣಕಾಸು ವಿವರ ಪತ್ರ ಅಥವಾ ಲೆಕ್ಕಪತ್ರ ಪುಸ್ತಗಳಲ್ಲಿನ, ಹೂತೆಜ ಲಭ್ಯವಿರಬಹುದಾದಂತಹ ಅಥವಾ ಲಭ್ಯವಿಲ್ಲದಿರಬಹುದಾದ, ಸಾಮಾನ್ಯ ವೆಚ್ಚಗಳಾಗಿರುತ್ತವೆ. ಮುಂದುವರೆದು, ಇದು ಕೇವಲ, ಸಾಮಾನ್ಯವಾಗಿ ವೆಚ್ಚಗಳನ್ನು ದಾಖಲಿಸುವ ಶೀರ್ಷಿಕೆಗಳ ಒಂದು ಸೂಚಕ ಪಟ್ಟಿಯಾಗಿರುತ್ತದೆ. ತೆರಿಗೆ ಸಂದಾಯ ಮಾಡುವ ವ್ಯಕ್ತಿಗಳು ಈ ಶೀರ್ಷಿಕೆಗಳಲ್ಲಿ ಯಾವುದನ್ನು ಬೇಕಾದರೂ ಸೇರ್ಪಡೆ ಮಾಡಬಹುದಾಗಿರುತ್ತದೆ ಅಥವಾ ತೆಗೆದು ಹಾಕಬಹುದಾಗಿರುತ್ತದೆ, ಆದರೆ ಜಿಎಸ್‌ಟಿ ಸಂದಾಯ ಮಾಡಿದ/ಮಾಡಬೇಕಾಗಿರುವ ಎಲ್ಲಾ ವೆಚ್ಚ ಶೀರ್ಷಿಕೆಗಳನ್ನು ಇಲ್ಲಿ ಘೋಷಿಸಬೇಕಾಗಿರುತ್ತದೆ.
14ಆರ್	ಮೆಲಿನ ಕೋಷ್ಟಕ 14ಎ ಇಂದ 14 ಕ್ಯೂ ವರೆಗೆ ಘೋಷಿಸಿಕೊಂಡಿರುವ ಒಟ್ಟು ಹೂ.ತೆ.ಜ ಯು ಇಲ್ಲಿ ಸ್ವಯಂ ಪ್ರದರ್ಶಿತವಾಗುತ್ತದೆ.
14ಎಸ್	ವಾರ್ಷಿಕ ರಿಟರ್ನ್ (ಜಿಎಸ್‌ಟಿಆರ್–9) ರಲ್ಲಿ ಘೋಷಿಸಿಕೊಂಡಿರುವಂತಹ ನಿವ್ವಳ ಹೂ.ತೆ.ಜಯನ್ನು ಇಲ್ಲಿ ಘೋಷಿಸಿಕೊಳ್ಳತಕ್ಕದ್ದು. ಈ ಕೋಷ್ಟಕವನ್ನು ಭರ್ತಿ ಮಾಡಲು, ವಾರ್ಷಿಕ ರಿಟರ್ನ್ (ಜಿಎಸ್‌ಟಿಆರ್–9)ನ ಕೋಷ್ಟಕ 7ಜಿ ಯನ್ನು ಉಪಯೋಗಿಸಿಕೊಳ್ಳಬಹುದು.
15	ಕೋಷ್ಟಕ 14 ಆರ್‌ನಲ್ಲಿ ಘೋಷಿಸಿಕೊಂಡಿರುವ ವಿವಿಧ ವೆಚ್ಚಗಳ ಮೇಲಿನ ಉಪಯೋಗಿಸಿದ ಹೂ.ತೆ.ಜ ಮತ್ತು ಕೋಷ್ಟಕ 14 ಎಸ್ ನಲ್ಲಿ ಘೋಷಿಸಿಕೊಂಡಿರುವ ಹೂ.ತೆ.ಜಗಳ ನಡುವೆ ಸರಿ ಹೊಂದಾಣಿಕೆ ಆಗದಿರುವುದಕ್ಕೆ ಕಾರಣಗಳನ್ನು ಇಲ್ಲಿ ನಿರ್ದಿಷ್ಟಪಡಿಸತಕ್ಕದ್ದು.
16	ಮೇಲಿನ ಕೋಷ್ಟಕ 13 ಮತ್ತು 15 ರಲ್ಲಿ ನಿರ್ದಿಷ್ಟಪಡಿಸಿದ ಕಾರಣಗಳಿಗಾಗಿ ಸಂದಾಯ ಮಾಡಬೇಕಾಗಿರುವ ಯಾವುದೇ ಮೊತ್ತವನ್ನು ಇಲ್ಲಿ ಘೋಷಿಸತಕ್ಕದ್ದು.

7. ಭಾಗ–V, ವಹಿವಾಟಿನಲ್ಲಿ ಅಥವಾ ಹೂ.ತೆ.ಜ ಯಲ್ಲಿ ಸರಿ ಹೊಂದಾಣಿಕೆ ಆಗದಿರುವ ಕಾರಣಕ್ಕೆ. ತೆರಿಗೆ ಸಂದಾಯ ಮಾಡುವ ವ್ಯಕ್ತಿಯು, ಸಂದಾಯ ಮಾಡಬೇಕಾಗಿರುವ ಹೆಚ್ಚುವರಿ ಭಾದ್ಯತೆ ಬಗೆಗಿನ, ಲೆಕ್ಕ ಪರಿಶೋಧಕರ ಶಿಫಾರಸ್ಸುಗಳನ್ನು ಒಳಗೊಂಡಿರುತ್ತದೆ. ವಾರ್ಷಿಕ ರಿಟರ್ನ್‌ನಲ್ಲಿ ಸೇರಿಸದ ಪೂರೈಕೆಗಳಿಗೆ ಸಂದಾಯ ಮಾಡಬೇಕಾದ ಇನ್ನಾವುದೇ ಮೊತ್ತಗಳ ಬಗ್ಗೆಯೂ ಸಹ ಲೆಕ್ಕ ಪರಿಶೋಧಕರು ಶಿಫಾರಸ್ಸು ಮಾಡತಕ್ಕದ್ದು. ತಪ್ಪಾಗಿ ಪಡೆದ ಯಾವುದೇ ಮರುಪಾವತಿಯನ್ನು ಮತ್ತು ಸರಕಾರಕ್ಕೆ ಹಿಂದಿರುಗಿ ಸಂದಾಯ ಮಾಡತಕ್ಕ ವಿವರಗಳನ್ನು ಸಹ ಈ ಕೋಷ್ಟಕದಲ್ಲಿ ಘೋಷಿಸತಕ್ಕದ್ದು. ಕೊನೆಯದಾಗಿ, ಲೆಕ್ಕ ಪರಿಶೋಧಕರ ಶಿಫಾರಸ್ಸಿನಂತೆ ನಿಶ್ಚಯಿಸಲಾದ ಯಾವುದೇ ಬಾಕಿ ಇರುವ ತಗಾದೆಗಳನ್ನು ಈ ಕೋಷ್ಟಕದಲ್ಲಿ ಘೋಷಿಸಿಕೊಳ್ಳತಕ್ಕದ್ದು.

8. ಈ ರಿಟರ್ನ್‌ನ ಕೊನೆಯ ಭಾಗದಲ್ಲಿ, ಈ ನಮೂನೆಯಲ್ಲಿ ಘೋಷಿಸಿಕೊಂಡ ಯಾವುದೇ ಹೆಚ್ಚುವರಿ ಭಾದ್ಯತೆಯನ್ನು ನಮೂನೆ ಡಿಆರ್‌ಸಿ–03ರ ಮೂಲಕ ಸಂದಾಯ ಮಾಡಲು ತೆರಿಗೆದಾರರಿಗೆ ಒಂದು ಆಯ್ಕೆಯನ್ನು ನೀಡತಕ್ಕದ್ದು. ತೆರಿಗೆದಾರರು, ನಮೂನೆ ಡಿಆರ್‌ಸಿ–03ರಲ್ಲಿ ಒದಗಿಸಿರುವ ಡ್ರಾಪ್‌ಡೌನ್‌ನಲ್ಲಿ **"ಸರಿ ಹೊಂದಾಣಿಕೆ ವಿವರ ಪತ್ರ"** ಎಂಬುದನ್ನು ಆಯ್ಕೆ ಮಾಡತಕ್ಕದ್ದು. ಅಂತಹ ಭಾದ್ಯತೆಯನ್ನು ವಿದ್ಯುನ್ಮಾನ ನಗದು ಖಾತೆಯ ಮೂಲಕ ಮಾತ್ರ ಸಂದಾಯ ಮಾಡಲು ಸಾಧ್ಯ ಎಂಬುದನ್ನು ಗಮನಿಸಬಹುದು.

<u>ಭಾಗ ಬಿ– ಪ್ರಮಾಣೀಕರಣ</u>

III. ಲೆಕ್ಕ ಪರಿಶೋಧನೆ ಮಾಡಿದಂತಹ ವ್ಯಕ್ತಿಯು, ಸರಿ ಹೊಂದಾಣಿಕೆ ವಿವರ ಪತ್ರವನ್ನು (ನಮೂನೆ ಜಿಎಸ್‌ಟಿಆರ್–9ಸಿ) ದಾಖಲಿಸುವ ಪ್ರಕರಣಗಳಲ್ಲಿ, ನೀಡಬೇಕಾದ ಪ್ರಮಾಣೀಕರಣ.

ನಾನು/ನಾವು

(ಎ) ದಿನಾಂಕ ---------- ರಂತೆ ಆಯವ್ಯಯ ಪಟ್ಟಿಯನ್ನು

(ಬಿ) (---------- ರಿಂದ ಪ್ರಾರಂಭವಾಗಿ ---------- ವರೆಗೆ ಕೊನೆಯಾಗುವ ಅವಧಿಗೆ ಲಾಭ ಮತ್ತು ನಷ್ಟದ ತ:ಖ್ತೆಯನ್ನು /ಆದಾಯ ಮತ್ತು ವೆಚ್ಚದ ಖಾತೆಯನ್ನು, ಮತ್ತು

(ಸಿ) ಮೆ: ---------- (ಹೆಸರು) ---------- ವಿಳಾಸ ----------(ಜಿಎಸ್‌ಟಿಎನ್) ಇವರಿಗೆ ಸಂಬಂಧಿಸಿದ ---------- ಪ್ರಾರಂಭವಾಗಿ ---------- ಕೊನೆಯಾಗುವ ಅವಧಿಗೆ ನಗದು ಹರಿವು ವಿವರ ಪತ್ರ (ಕ್ಯಾಶ್ ಫ್ಲೋ ಸ್ಟೇಟ್‌ಮೆಂಟ್) ಗಳನ್ನು ಪರಿಶೀಲನೆ ಮಾಡಿದ್ದೇನೆ(ವೆ).

2. ನಮ್ಮ ಲೆಕ್ಕ ಪರಿಶೋಧನೆಯನ್ನು ಆಧರಿಸಿ ನಾನು/ನಾವು, ಸದರಿ ನೋಂದಾಯಿತ ವ್ಯಕ್ತಿಯು ಕೇಂಸಸೇತೆ/ಏಸಸೇತೆ/ಕಸಸೇತೆ ಅಧಿನಿಯಮ 2017ರ ಮತ್ತು ಅದರಡಿಯಲ್ಲಿ ಮಾಡಿದ/ ಹೊರಡಿಸಿದ ನಿಯಮಗಳು/ ಅಧಿಸೂಚನೆಗಳ ಅವಶ್ಯಕತೆಗನುಗುಣವಾಗಿ ಲೆಕ್ಕ ಪತ್ರ ಪುಸ್ತಕಗಳನ್ನು/ ದಾಖಲೆಗಳನ್ನು ಮತ್ತು ದಸ್ತಾವೇಜುಗಳನ್ನು ನಿರ್ವಹಿಸಿರುತ್ತಾರೆ,

* ---------- ಈ ಕೆಳಗಿನ ಲೆಕ್ಕಪತ್ರ ---------- ದಸ್ತಾವೇಜುಗಳನ್ನು ನಿರ್ವಹಿಸಿರುವುದಿಲ್ಲ ಎಂದು ವರದಿ ಮಾಡುತ್ತೇವೆ.

582

1.
2.
3.

3(ಎ) * ನಾನು/ನಾವು ಈ ಕೆಳಗಿನ ಅವಲೋಕನಗಳನ್ನು/ ವಿವರಣೆಯನ್ನು/ ವ್ಯತ್ಯಾಸಗಳನ್ನು/ ಅಸಮಂಜಸತೆಗಳನ್ನು (ಇದ್ದರೆ) ವರದಿ ಮಾಡುತ್ತಿದ್ದೇನೆ(ವೆ).

.....

.....

3(ಬಿ) *ಮುಂದುವರೆದು ನಾನು/ನಾವು ಈ ಕೆಳಗಿನಂತೆ ವರದಿ ಮಾಡುತ್ತಿದ್ದೇನೆ/ವೆ.

(ಎ) *ನಾನು/ನಾವು, ಲೆಕ್ಕ ಪರಿಶೋಧನೆಯ ಉದ್ದೇಶಕ್ಕೆ ಅತ್ಯವಶ್ಯಕವಾದ ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ನನ್ನ/ನಮ್ಮ ಅತ್ಯುತ್ತಮ ತಿಳುವಳಿಕೆ ಮತ್ತು ನಂಬಿಕೆಯ ಮಟ್ಟಕ್ಕೆ ಪಡೆದುಕೊಂಡಿರುತ್ತೇನೆ/ವೆ. ಲೆಕ್ಕಪರಿಶೋಧನೆಯ ಉದ್ದೇಶಕ್ಕೆ ಅತ್ಯವಶ್ಯಕವಾದ ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ನನ್ನ/ನಮ್ಮ ಅತ್ಯುತ್ತಮ ತಿಳುವಳಿಕೆ ಮತ್ತು ನಂಬಿಕೆಯ ಮಟ್ಟಕ್ಕೆ ಒದಗಿಸಿರುವುದಿಲ್ಲ/ ಭಾಗಶ: ಒದಗಿಸಿರುತ್ತಾರೆ.

(ಬಿ) ನನ್ನ/ನಮ್ಮ ಅಭಿಪ್ರಾಯದಲ್ಲಿ ನಾನು/ನಾವು ಮಾಡಿದ ಲೆಕ್ಕಪತ್ರ ಪುಸ್ತಕಗಳ ಪರಿಶೀಲನೆಯಿಂದ, ನೋಂದಾಯಿತ ವ್ಯಕ್ತಿಯು ಯುಕ್ತ ಲೆಕ್ಕಪತ್ರಗಳನ್ನು ನಿರ್ವಹಿಸಿರುತ್ತಾರೆ/ ನಿರ್ವಹಿಸಿರುವುದಿಲ್ಲ.

(ಸಿ) ಆಯವ್ಯಯ ಪಟ್ಟಿ, ಲಾಭ ಮತ್ತು ನಷ್ಟ ತ:ಖ್ತೆ/ಆದಾಯ ಮತ್ತು ವೆಚ್ಚ ವಿವರ ಪತ್ರ ಮತ್ತು ನಗದು ಹರಿವು ವಿವರ ಪತ್ರಗಳು ಮತ್ತು ರಾಜ್ಯದ ಪ್ರಧಾನ ವ್ಯವಹಾರ ಸ್ಥಳ ಮತ್ತು ಹೆಚ್ಚುವರಿ ವ್ಯವಹಾರ ಸ್ಥಳ ನಿರ್ವಹಿಸುತ್ತಿರುವ ಲೆಕ್ಕ ಪುಸ್ತಕಗಳು, ಒಂದಕ್ಕೊಂದು ತಾಳೆಯಾಗುತ್ತವೆ/ ತಾಳೆಯಾಗುವುದಿಲ್ಲ ಎಂದು ಪ್ರಮಾಣೀಕರಿಸುತ್ತೇನೆ/ವೆ.

4. ಕೇಂ.ಸ.ಸೇ.ತೆ/ ರಾಜ್ಯ ಸ.ಸೇ.ತೆ ಅಧಿನಿಯಮದ ಪ್ರಕರಣ 35(5) ರಡಿಯಲ್ಲಿ ಒದಗಿಸಬೇಕಾಗಿರುವ ದಾಖಲೆಗಳು/ ದಾಸ್ತಾವೇಜುಗಳು ಮತ್ತು ಕೇಂಸಸೇತೆ/ರಾಜ್ಯಸಸೇತೆ ಅಧಿನಿಯಮ, 2017ರ ಪ್ರಕರಣ 44(2)ರ ಅಡಿಯಲ್ಲಿ ಒದಗಿಸಬೇಕಾಗಿರುವ ಸರಿಹೊಂದಾಣಿಕೆ/ಸಮನ್ವಯ ವಿವರ ಪತ್ರವನ್ನು ನಮೂನೆ ಜಿಎಸ್‌ಟಿಆರ್ 9ಸಿ ಯೊಂದಿಗೆ ಲಗತ್ತಿಸಿದೆ.

5. ನನ್ನ/ನಮ್ಮ ಅಭಿಪ್ರಾಯದಲ್ಲಿ ಮತ್ತು ನನ್ನ/ನಮ್ಮ ಅತ್ಯುತ್ತಮ ಮಾಹಿತಿಗೆ ಮತ್ತು ನನಗೆ/ನಮಗೆ ನೀಡಿದ ವಿವರಣೆಗಳ ಅನುಸಾರ, ಸದರಿ ನಮೂನೆ ಜಿಎಸ್‌ಟಿಆರ್–9ಸಿ ನಲ್ಲಿ ನೀಡಿದ ವಿವರಗಳು, ಈ ಕೆಳಗಿನ ಅವಲೋಕನೆಗಳಿಗೆ/ಅರ್ಹತೆಗಳಿಗೆ/ ಔಚಿತ್ಯಗಳಿಗೆ (ಇದ್ದರೆ) ಒಳಪಟ್ಟಂತೆ ನಿಜ ಹಾಗೂ ಸರಿಯಾಗಿರುತ್ತದೆ.

(ಎ) _____
(ಬಿ) _____
(ಸಿ) _____

** (ಲೆಕ್ಕಪರಿಶೋಧಕರ ಸಹಿ ಮತ್ತು ಮೊಹರು)
ಸ್ಥಳ_____
ಸಹಿ ಮಾಡುವವರ ಹೆಸರು_____
ಸದಸ್ಯತ್ವ ಸಂಖ್ಯೆ_____
ದಿನಾಂಕ_____
ಪೂರ್ಣ ವಿಳಾಸ_____

IV. ಲೆಕ್ಕಪತ್ರಗಳ ಪರಿಶೋಧನೆ ಮಾಡಿದಂತಹ ವ್ಯಕ್ತಿಯ ಹೊರತು ಬೇರೊಬ್ಬ ವ್ಯಕ್ತಿಯು ಸರಿಹೊಂದಾಣಿಕೆ /ಸಮನ್ವಯ ವಿವರ ಪತ್ರ (ನಮೂನೆ ಜಿಎಸ್ ಟಿ ಆರ್–9 ಸಿ)ಯನ್ನು ಭರ್ತಿ ಮಾಡಿದಂತಹ ಪ್ರಕರಣಗಳಿಗೆ ಪ್ರಮಾಣೀಕರಣ

* ಮೆ॥ _____(ಕರದಾತನ ಹೆಸರು ಮತ್ತು ವಿಳಾಸ, ಜಿಎಸ್‌ಟಿಎನ್ ಸಹಿತ) ಇವರ

583

ಲೆಕ್ಕಪತ್ರಗಳ ಮತ್ತು ಹಣಕಾಸು ವಿವರ ಪತ್ರಗಳ ಲೆಕ್ಕಪರಿಶೋಧನೆಯನ್ನು ಮೆ॥_____ [ಲೆಕ್ಕಪರಿಶೋಧಕರ ಪೂರ್ಣ ಹೆಸರು ವಿಳಾಸ ಮತ್ತು ಸ್ಥಾನ (status)] ಸದಸ್ಯತ್ವ ಸಂಖ್ಯೆ_____ ಹೊಂದಿರುವ ಇವರು _____ ಅಧಿನಿಯಮದ ಉಪಬಂಧಗಳ ಅನುಸರಣೆಯಲ್ಲಿ ಮಾಡಿರುತ್ತಾರೆಂದು ನಾನು/ನಾವು ವರದಿ ಮಾಡುತ್ತೇನೆ/ವೆ.

ಕೆಳಗಿನ ದಾಖಲೆಗಳ ಪ್ರತಿಗಳ ಸಹಿತ ನಾವು ಸದರಿ ಲೆಕ್ಕಪರಿಶೋಧನೆ ವರದಿಯ ಒಂದು ಪ್ರತಿಯನ್ನು ಲಗತ್ತಿಸಿದ್ದೇವೆ.

(ಎ) ಆಯವ್ಯಯ ಪಟ್ಟಿ ದಿನಾಂಕ _____ದಂತೆ
(ಬಿ) _____ಪ್ರಾರಂಭವಾಗುವ ಮತ್ತು _____–ಕ್ಕೆ ಕೊನೆಗೊಳ್ಳುವ ಅವಧಿಗೆ ಲಾಭ ಮತ್ತು ನಷ್ಟ ತಃಖ್ತೆ/ಆದಾಯ ಮತ್ತು ವೆಚ್ಚ ತಃಖ್ತೆ
(ಸಿ) _____ಪ್ರಾರಂಭವಾಗುವ ಮತ್ತು _____–ಕ್ಕೆ ಕೊನೆಗೊಳ್ಳುವ ಅವಧಿಗೆ ನಗದು ಹರಿವು ವಿವರ ಪತ್ರ
(ಡಿ) ಸದರಿ ಅಧಿನಿಯಮದಂತೆ, ಲಾಭ ಮತ್ತು ನಷ್ಟ ತಃಖ್ತೆ/ಆದಾಯ ಮತ್ತು ವೆಚ್ಚ ತಃಖ್ತೆ/ ಆಯವ್ಯಯ ಪಟ್ಟಿಯ ಭಾಗವಾಗಬೇಕಾಗಿರುವ, ಅಥವಾ ಲಗತ್ತಿಸಬೇಕಾಗಿರುವ ದಾಖಲೆಗಳು

2. ನಾನು/ನಾವು, ಸದರಿ ನೋಂದಾಯಿತ ವ್ಯಕ್ತಿಯು

* ಏಸಸೇತೆ/ಕೇಂಸಸೇತೆ/ಕಸಸೇತೆ ಅಧಿನಿಯಮ 2017ರಲ್ಲಿ ಮಾಡಲಾದ/ ಹೊರಡಿಸಲಾದ ನಿಯಮಗಳು/ಅಧಿಸೂಚನೆಗಳ ಪ್ರಕಾರ ಈ ಕೆಳಗಿನ ಲೆಕ್ಕಪತ್ರ ಪುಸ್ತಕಗಳು, ದಾಖಲೆಗಳು ಮತ್ತು ದಸ್ತಾವೇಜುಗಳನ್ನು ನಿರ್ವಹಿಸಿರುತ್ತಾರೆ.

* ಏಸಸೇತೆ/ಕೇಂಸಸೇತೆ/ಕಸಸೇತೆ ಅಧಿನಿಯಮ 2017ರಲ್ಲಿ ಮಾಡಲಾದ/ ಹೊರಡಿಸಲಾದ ನಿಯಮಗಳು/ಅಧಿಸೂಚನೆಗಳ ಪ್ರಕಾರ ಈ ಕೆಳಗಿನ ಲೆಕ್ಕಪತ್ರ ಪುಸ್ತಕಗಳು, ದಾಖಲೆಗಳು ಮತ್ತು ದಸ್ತಾವೇಜುಗಳನ್ನು ನಿರ್ವಹಿಸಿರುವುದಿಲ್ಲ.

1.
2.
3.

ಎಂದು ವರದಿ ಮಾಡುತ್ತಿದ್ದೇನೆ/ವೆ.

3. ಕೇಂದ್ರ/ರಾಜ್ಯ ಸರಕು ಮತ್ತು ಸೇವಾ ತೆರಿಗೆ ಅಧಿನಿಯಮದ ಪ್ರಕರಣ 35(5) ರಡಿಯಲ್ಲಿ ಒದಗಿಸಬೇಕಾಗಿರುವ ದಾಖಲೆಗಳು (ದಸ್ತಾವೇಜುಗಳು ಮತ್ತು ಕೇಸಸೇರೆ/ರಾಜ್ಯಸಸೇತೆ ಅಧಿನಿಯಮದ ಪ್ರಕರಣ 44(2) ರಡಿಯಲ್ಲಿ ಒದಗಿಸಬೇಕಾಗಿರುವ ಸಮನ್ವಯ ವಿವರಪತ್ರವನ್ನು ನಮೂನೆ ಜಿಎಸ್‌ಟಿಆರ್–9ಸಿ ಯೊಂದಿಗೆ ಲಗತ್ತಿಸಿದೆ.

4. ನನ್ನ/ನಮ್ಮ ಅಭಿಪ್ರಾಯದಲ್ಲಿ, ಮತ್ತು ನನ್ನ/ನಮ್ಮ ಅತ್ಯುತ್ತಮ ಮಾಹಿತಿಗೆ ಮತ್ತು ನನಗೆ/ನಮಗೆ ನೀಡಿದ ವಿವರಣೆಗಳ ಪ್ರಕಾರ ಮತ್ತು ನಾನು/ನಾವು ಪರಿಶೀಲಿಸಿದ ಲೆಕ್ಕಪತ್ರ ಪುಸ್ತಕಗಳು ಮತ್ತು ಮತ್ತಿತರ ಪ್ರಸ್ತುತ ದಾಖಲೆಗಳ ಪ್ರಕಾರ, ಸದರಿ ನಮೂನೆ ಜಿಎಸ್‌ಟಿಆರ್–9ಸಿ ನಲ್ಲಿ ನೀಡಿದ ವಿವರಗಳು, ಈ ಕೆಳಕಂಡ ಅವಲೋಕನೆಗಳಿಗೆ/ಅರ್ಹತೆಗಳಿಗೆ, ಅವು ಇದ್ದಲ್ಲಿ ಒಳಪಟ್ಟಂತೆ ನಿಜ ಹಾಗು ಸರಿಯಾಗಿರುತ್ತವೆ.

(ಎ)
(ಬಿ)
(ಸಿ)

** (ಲೆಕ್ಕಪರಿಶೋಧಕರ ಸಹಿ ಮತ್ತು ಮೊಹರು)
ಸ್ಥಳ_____
ಸಹಿ ಮಾಡುವವರ ಹೆಸರು_____
ಸದಸ್ಯತ್ವ ಸಂಖ್ಯೆ_____
ದಿನಾಂಕ_____

584

ಪೂರ್ಣ ವಿಳಾಸ_____";

19. ಹೊಸ ನಮೂನೆ ಜಿಎಸ್‌ಟಿ ಆರ್‌ವಿಎನ್‌–01ರ ಸೇರ್ಪಡೆ:– ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಎಪಿಎಲ್‌–03**ರ ನಂತರ, ಈ ಕೆಳಗಿನ ಹೊಸ ನಮೂನೆಯನ್ನು ಸೇರಿಸತಕ್ಕದ್ದು, ಅಂದರೆ:–

"ನಮೂನೆ ಜಿಎಸ್‌ಟಿ ಆರ್‌ವಿಎನ್‌–01

[ನಿಯಮ 109ಬಿ ನೋಡಿ]

ಉಲ್ಲೇಖ ಸಂಖ್ಯೆ ದಿನಾಂಕ:

ಇವರಿಗೆ,

_____

_____

_____

ಜಿಎಸ್‌ಟಿಐಎನ್_____

ಆದೇಶ ಸಂಖ್ಯೆ_____

ದಿನಾಂಕ_____

ಪ್ರಕರಣ 108ರ ಅಡಿಯಲ್ಲಿ ನೋಟೀಸು

_____(ಅಧಿಕಾರಿಯ ಪದನಾಮ) ಇವರಿಂದ ಈ ಅಧಿಯಮದ/<ರಾಜ್ಯದ ಹೆಸರು> ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017/ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ,2017/ಸರಕು ಮತ್ತು ಸೇವೆಗಳ ತೆರಿಗೆ (ರಾಜ್ಯಗಳಿಗೆ ಪರಿಹಾರ) ಅಧಿನಿಯಮ, 2017 ಅಡಿಯಲ್ಲಿ ಹೊರಡಿಸಲಾದ ನಿರ್ಣಯ/ಆದೇಶವು ರಾಜಸ್ವದ ಹಿತಾಸಕ್ತಿಗೆ ಭಾದಕವಾಗುವಷ್ಟರ ಮಟ್ಟಿಗೆ ತಪ್ಪಾಗಿರುವುದು ಮತ್ತು ಕಾನೂನು ಬಾಹಿರವಾದುದು ಅಥವಾ ಅನುಚಿತವಾದುದು ಅಥವಾ ಕೆಲವೊಂದು ಮುಖ್ಯ ಸಂಗತಿಗಳನ್ನು ಗಣನೆಗೆ ತೆಗೆದುಕೊಂಡಿಲ್ಲದಿರುವುದು, ಈ ಕೆಳಗೆ ಸಹಿ ಮಾಡಿರುವ ನನ್ನ ಗಮನಕ್ಕೆ ಬಂದಿದ್ದು ಮತ್ತು ಆದ್ದರಿಂದ, ಇದರೊಂದಿಗೆ ಲಗತ್ತಿಸಿರುವ ದಾಖಲೆಯಲ್ಲಿ ನಿರ್ದಿಷ್ಟಪಡಿಸಿರುವ ಕಾರಣಾಧಾರಗಳಿಗೆ, ಪ್ರಕರಣ 108ರ ಅಡಿಯಲ್ಲಿ ಪುನರೀಕ್ಷಣೆ ಆದೇಶವನ್ನು ಹೊರಡಿಸಲು ಉದ್ದೇಶಿಸಿರುತ್ತೇನೆ.

ಈ ನೋಟೀಸು ಜಾರಿಯಾದ ಏಳು ಕಾರ್ಯನಿರತ ದಿನಗಳ ಬಳಸಿ, ಈ ನೋಟೀಸಿಗೆ ಉತ್ತರವನ್ನು ಒದಗಿಸಲು, ಈ ಮೂಲಕ ನಿಮಗೆ ನಿರ್ದೇಶಿಸಿದೆ.

ದಿನಾಂಕ ಡಿಡಿ/ಎಮ್‌ಎಮ್‌/ವೈವೈವೈವೈ ರಂದು ಹೆಚ್‌ಹೆಚ್‌/ಎಮ್‌ಎಮ್‌ ಸಮಯಕ್ಕೆ, ಈ ಕೆಳಗೆ ಸಹಿ ಮಾಡಿರುವ ನನ್ನ ಮುಂದೆ ಹಾಜರಾಗಲು, ಈ ಮೂಲಕ ನಿಮಗೆ ನಿರ್ದೇಶಿಸಿದೆ.

ನೀವು, ನಿಗದಿತ ದಿನಾಂಕದೊಳಗೆ ಉತ್ತರವನ್ನು ಒದಗಿಸಲು ವಿಫಲರಾದಲ್ಲಿ ಅಥವಾ ನೇಮಿತ ದಿನಾಂಕ ಮತ್ತು ಸಮಯದಲ್ಲಿ, ವೈಯಕ್ತಿಕ ವಿಚಾರಣೆಗೆ ಹಾಜರಾಗಲು ವಿಫಲರಾದಲ್ಲಿ, ಲಭ್ಯವಿರುವ ದಾಖಲೆಗಳು ಮತ್ತು ಅರ್ಹತೆಗಳ ಆಧಾರದ ಮೇಲೆ ಏಕ ಪಕ್ಷೀಯವಾಗಿ ಪ್ರಕರಣವನ್ನು ನಿರ್ಧರಿಸಲಾಗುವುದು.

ಸ್ಥಳ: ಸಹಿ:

ದಿನಾಂಕ: ಪದನಾಮ:

ವ್ಯಾಪ್ತಿ/ಕಛೇರಿ:";

585

20. ನಮೂನೆ ಜಿಎಸ್‌ಟಿ ಎಪಿಎಲ್‌–04ರ ಪ್ರತಿಯೋಜನೆ:– ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಎಪಿಎಲ್‌–04**ಕ್ಕಾಗಿ ಈ ಕೆಳಗಿನ ನಮೂನೆಯನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ನಮೂನೆ ಜಿಎಸ್‌ಟಿ ಎಪಿಎಲ್‌–04

[ನಿಯಮ 109ಬಿ, 113(1) ಮತ್ತು 115 ಗಳನ್ನು ನೋಡಿ]

ಅಪೀಲು ಪ್ರಾಧಿಕಾರ, ಪುನರೀಕ್ಷಣೆ ಪ್ರಾಧಿಕಾರ, ನ್ಯಾಯಾಧಿಕರಣ ಅಥವಾ ನ್ಯಾಯಾಲಯಗಳಿಂದ ಆದೇಶ ಹೊರಡಿಸಿದ ನಂತರದ ತಗಾದೆಯ ಸಾರಾಂಶ

ಉಲ್ಲೇಖ ಸಂಖ್ಯೆ ದಿನಾಂಕ

1. ಜಿಎಸ್‌ಟಿಐಎನ್‌/ತಾತ್ಕಾಲಿಕ ಗುರುತಿನ ಸಂಖ್ಯೆ/ವಿಶೇಷ ಗುರುತಿನ ಸಂಖ್ಯೆ–
2. ವ್ಯಕ್ತಿಯ/ಮನವಿದಾರರ ಹೆಸರು–
3. ವ್ಯಕ್ತಿಯ/ಮನವಿದಾರರ ವಿಳಾಸ–
4. ವಿರುದ್ಧ ಅಪೀಲು ಮಾಡಿರುವ ಆದೇಶ ಅಥವಾ ಪುನರೀಕ್ಷಣೆ ಮಾಡಲು ಉದ್ದೇಶಿಸಿರುವ ಆದೇಶ– ಸಂಖ್ಯೆ ದಿನಾಂಕ
5. ಅಪೀಲು ಸಂಖ್ಯೆ– ದಿನಾಂಕ
6. ವೈಯಕ್ತಿಕ ವಿಚಾರಣೆ–
7. ಸಂಕ್ಷಿಪ್ತ ಆದೇಶ–
8. ಆದೇಶದ ಸ್ಥಿತಿ ದೃಢಪಡಿಸಿದ/ಮಾರ್ಪಡಿಸಿದ/ತಿರಸ್ಕರಿಸಿದ–
9. ಅಪೀಲು/ಪುನರೀಕ್ಷಣೆ ನಂತರದ ತಗಾದೆಯ ಮೊತ್ತ

ವಿವರ	ಕೇಂದ್ರ ತೆರಿಗೆ		ರಾಜ್ಯ/ಕೇಂದ್ರ ತೆರಿಗೆ		ಏಕೀಕೃತ ತೆರಿಗೆ		ಉಪಕರ		ಒಟ್ಟು	
	ವಿವಾದದಲ್ಲಿರುವ ತಾಗದೆ ಹಿಂದಿನ ಆದೇಶ	ನಿರ್ಧರಿಸಲಾದ ಮೊತ್ತ	ವಿವಾದದಲ್ಲಿರುವ ತಾಗದೆ ಹಿಂದಿನ ಆದೇಶ	ನಿರ್ಧರಿಸಲಾದ ಮೊತ್ತ	ವಿವಾದದಲ್ಲಿರುವ ತಾಗದೆ ಹಿಂದಿನ ಆದೇಶ	ನಿರ್ಧರಿಸಲಾದ ಮೊತ್ತ	ವಿವಾದದಲ್ಲಿರುವ ತಾಗದೆ ಹಿಂದಿನ ಆದೇಶ	ನಿರ್ಧರಿಸಲಾದ ಮೊತ್ತ	ವಿವಾದದಲ್ಲಿರುವ ತಾಗದೆ ಹಿಂದಿನ ಆದೇಶ	ನಿರ್ಧರಿಸಲಾದ ಮೊತ್ತ
1	2	3	4	5	6	7	8	9	10	11
ಎ) ತೆರಿಗೆ										
ಬಿ) ಬಡ್ಡಿ										
ಸಿ) ದಂಡ										
ಡಿ) ಶುಲ್ಕ										
ಇ) ಇತರೆ										
ಎಫ್‌) ಮರುಪಾವತಿ										

10. ಪೂರೈಕೆಯ ಸ್ಥಳದ ವಾರು ಏಕೀಕೃತ ತೆರಿಗೆ ತಗಾದೆಯ ವಿವರಗಳು

ಪೂರೈಕೆಯ ಸ್ಥಳ (ರಾಜ್ಯ/ಕೇಂ.ಪ್ರ.ದ	ತಗಾದೆ	ತೆರಿಗೆ	ಬಡ್ಡಿ	ದಂಡ	ಇತರೆ	ಒಟ್ಟು

586

ಹೆಸರು)						
1	2	3	4	5	6	7
	ವಿವಾದದಲ್ಲಿರುವ ಮೊತ್ತ/ ಹಿಂದಿನ ಆದೇಶ					
	ನಿರ್ಧರಿಸಲಾದ ಮೊತ್ತ					

ಸ್ಥಳ:
ದಿನಾಂಕ:

ಸಹಿ:
ಮನವಿ ಪ್ರಾಧಿಕಾರ/ಪುನರೀಕ್ಷಣೆ ಪ್ರಾಧಿಕಾರ/
ನ್ಯಾಯಾಧಿಕರಣ/ವ್ಯಾಪ್ತಿ ಅಧಿಕಾರಿಯ ಹೆಸರು
ಪದನಾಮ:
ವ್ಯಾಪ್ತಿ:";

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

ನೇತ್ರಪ್ರಭ ಎಂ. ಧಾಯಾಪುಲೆ
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)
ಆರ್ಥಿಕ ಇಲಾಖೆ [ವಾ.ತೆ–I]

587

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಎ/2019)
ಸಂಖ್ಯೆ: ಆಇ 47 ಸಿ.ಎಸ್.ಎಲ್ 2017, ಬೆಂಗಳೂರು ದಿನಾಂಕ 13.03.2019

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ 27)ರ ಪ್ರಕರಣ 164ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಜಿಎಸ್‌ಟಿ ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017, ಇವುಗಳಿಗೆ ಮುಂದುವರೆದ ತಿದ್ದುಪಡಿ ತರಲು ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಅಂದರೆ:–

1. ಶೀರ್ಷಿಕೆ ಮತ್ತು ಪ್ರಾರಂಭ.– (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಎರಡನೇ ತಿದ್ದುಪಡಿ) ನಿಯಮಗಳು, 2019 ಎಂದು ಕರೆಯಬಹುದು.

(2) ಈ ನಿಯಮಗಳಲ್ಲಿ ಉಪಬಂಧಿಸಿದುದನ್ನುಳಿದು, ಅವು 2019ರ ಫೆಬ್ರುವರಿ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ಅಧ್ಯಾಯ–IIರ ಶೀರ್ಷಿಕೆಯ ತಿದ್ದುಪಡಿ.– ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017 (ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ)ರ ಅಧ್ಯಾಯ–IIರಲ್ಲಿ, ಶೀರ್ಷಿಕೆಯಲ್ಲಿ, **"ರಾಜಿ ತೆರಿಗೆ ನಿಯಮಗಳು"** ಪದಗಳಿಗಾಗಿ, **"ರಾಜಿ ತೆರಿಗೆ ವಿಧಿಸುವಿಕೆ"** ಪದಗಳನ್ನು ಪ್ರತಿಯೋಜಿಸತಕ್ಕದ್ದು.

3. ನಿಯಮ 7ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 7ರಲ್ಲಿ, ಕೋಷ್ಠಕದಲ್ಲಿ, ಕ್ರಮ ಸಂಖ್ಯೆ (3)ರಲ್ಲಿ, **"ಸರಕುಗಳ"** ಪದಕ್ಕಾಗಿ, **"ಸರಕು ಮತ್ತು ಸೇವೆಗಳ"** ಪದಗಳನ್ನು ಪ್ರತಿಯೋಜಿಸತಕ್ಕದ್ದು.

4. ನಿಯಮ 8ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 8ರಲ್ಲಿ,–

(i) ಮೊದಲನೇ ಪರಂತುಕವನ್ನು ಬಿಟ್ಟುಬಿಡತಕ್ಕದ್ದು;
(ii) ಎರಡನೇ ಪರಂತುಕದಲ್ಲಿ, **"ಮತ್ತು ಪರಂತು"** ಪದಗಳಿಗಾಗಿ, **"ಪರಂತು"** ಪದವನ್ನು ಪ್ರತಿಯೋಜಿಸತಕ್ಕದ್ದು.

5. ನಿಯಮ 11ರ ಪ್ರತಿಯೋಜನೆ.– ಸದರಿ ನಿಯಮಗಳ ನಿಯಮ 11ಕ್ಕಾಗಿ, ಈ ಕೆಳಗಿನದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"11. ಒಂದು ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿ ವಿವಿಧ ವ್ಯವಹಾರ ಸ್ಥಳಗಳಿಗೆ ಪ್ರತ್ಯೇಕ ನೋಂದಣಿ.– (1) ಒಂದು ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿ ವಿವಿಧ ವ್ಯವಹಾರ ಸ್ಥಳಗಳನ್ನು ಹೊಂದಿರುವ ಯಾವುದೇ ವ್ಯಕ್ತಿಯ ಅಂತಹ ವ್ಯವಹಾರ ಸ್ಥಳಕ್ಕೆ ಪ್ರತ್ಯೇಕ ನೋಂದಣಿ ಅಗತ್ಯವಿದ್ದಲ್ಲಿ, ಪ್ರಕರಣ 25ರ ಉಪ–ಪ್ರಕರಣ (2)ರ ಅಡಿಯಲ್ಲಿ ಈ ಕೆಳಗಿನ ನಿಬಂಧನೆಗಳಿಗೆ ಒಳಪಟ್ಟು, ಅಂಥ ಪ್ರತಿಯೊಂದು ವ್ಯವಹಾರ ಸ್ಥಳಕ್ಕೆ ಪ್ರತ್ಯೇಕ ನೋಂದಣಿಯನ್ನು ನೀಡತಕ್ಕದ್ದು, ಅಂದರೆ,–

(ಎ) ಅಂಥ ವ್ಯಕ್ತಿಯು ಪ್ರಕರಣ 2ರ ಖಂಡ 85ರಲ್ಲಿ ಪರಿಭಾಷಿಸಿದಂತೆ ಒಂದಕ್ಕಿಂತ ಹೆಚ್ಚಿನ ವ್ಯವಹಾರ ಸ್ಥಳ ಹೊಂದಿರಬೇಕು;

588

(ಬಿ) ಅಂಥ ವ್ಯಕ್ತಿಯು ಯಾವುದೇ ಇತರ ವ್ಯವಹಾರ ಸ್ಥಳದಲ್ಲಿ ಪ್ರಕರಣ 9ರ ಅಡಿ ತೆರಿಗೆ ಸಂದಾಯ ಮಾಡುತ್ತಿದ್ದರೆ ಅವನ ಇತರ ವ್ಯವಹಾರ ಸ್ಥಳಗಳಿಗಾಗಿ ಪ್ರಕರಣ 10ರ ಅಡಿ ತೆರಿಗೆ ಸಂದಾಯ ಮಾಡತಕ್ಕದ್ದಲ್ಲ;

(ಸಿ) ಅಂಥ ವ್ಯಕ್ತಿಯ ಇನ್ನೊಂದು ವ್ಯವಹಾರ ಸ್ಥಳಕ್ಕೆ ಮಾಡಿದ ಸರಕು ಅಥವಾ ಸೇವೆಗಳ ಅಥವಾ ಅವೆರಡರ ಪೂರೈಕೆಯ ಮೇಲೆ ಅಂಥ ವ್ಯಕ್ತಿಯ ಎಲ್ಲಾ ಪ್ರತ್ಯೇಕವಾಗಿ ನೋಂದಾಯಿತ ವ್ಯವಹಾರ ಸ್ಥಳಗಳು ಅಧಿನಿಯಮದ ಅಡಿ ತೆರಿಗೆ ಸಂದಾಯ ಮಾಡತಕ್ಕದ್ದು ಮತ್ತು ಸಂದರ್ಭಾನುಸಾರವಾಗಿ ಅಂಥ ಪೂರೈಕೆಗಾಗಿ ಒಂದು ತೆರಿಗೆ ಬೆಲೆಪಟ್ಟಿ ಅಥವಾ ಒಂದು ಪೂರೈಕೆಯ ಬಿಲ್ಲನ್ನು ನೀಡತಕ್ಕದ್ದು.

ವಿವರಣೆ.– ಖಂಡ (ಬಿ)ಯ ಉದ್ದೇಶಗಳಿಗಾಗಿ, ಒಬ್ಬ ನೋಂದಾಯಿತ ವ್ಯಕ್ತಿಯ ಪ್ರತ್ಯೇಕ ನೋಂದಣಿ ನೀಡಲಾಗಿರುವ ಯಾವುದೇ ವ್ಯವಹಾರ ಸ್ಥಳವು ಪ್ರಕರಣ 10ರ ಅಡಿ ತೆರಿಗೆ ಸಂದಾಯ ಮಾಡಲು ಅನರ್ಹವಾದರೆ, ಸದರಿ ವ್ಯಕ್ತಿಯ ಇತರ ಎಲ್ಲಾ ವ್ಯವಹಾರ ಸ್ಥಳಗಳು ಸದರಿ ಪ್ರಕರಣದ ಅಡಿ ತೆರಿಗೆ ಸಂದಾಯ ಮಾಡಲು ಅನರ್ಹವಾಗತಕ್ಕದ್ದು;

(2) ಒಂದು ವ್ಯವಹಾರ ಸ್ಥಳಕ್ಕಾಗಿ ಪ್ರತ್ಯೇಕ ನೋಂದಣಿಯನ್ನು ಪಡೆಯಲು ಆಯ್ಕೆ ಮಾಡಿಕೊಳ್ಳುವ ಒಬ್ಬ ನೋಂದಾಯಿತ ವ್ಯಕ್ತಿಯು ಅಂಥ ವ್ಯವಹಾರ ಸ್ಥಳಕ್ಕೆ ಸಂಬಂಧಿಸಿದಂತೆ **ನಮೂನೆ ಜಿಎಸ್‌ಟಿ ಆರ್‌ಇಜಿ–01**ನಲ್ಲಿ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸತಕ್ಕದ್ದು;

(3) ಈ ನಿಯಮದ ಅಡಿ ಸಲ್ಲಿಸಲಾದ ಒಂದು ಅರ್ಜಿಗೆ ನೋಂದಣಿಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಂಬಂಧಿಸಿದಂತೆ ನಿಯಮ 9 ಮತ್ತು ನಿಯಮ 10ರ ಉಪಬಂಧಗಳು, ಯಥೋಚಿತ ಬದಲಾವಣೆಗಳೊಂದಿಗೆ, ಅನ್ವಯವಾಗತಕ್ಕದ್ದು.".

6. ಹೊಸ ನಿಯಮ 21ಎ ಯ ಸೇರ್ಪಡೆ.– ಸದರಿ ನಿಯಮಗಳ ನಿಯಮ 21ರ ನಂತರ, ಈ ಕೆಳಗಿನ ನಿಯಮವನ್ನು ಸೇರಿಸತಕ್ಕದ್ದು, ಅಂದರೆ:–

"**21ಎ. ನೋಂದಣಿಯ ಅಮಾನತ್ತು.**– (1) ಒಬ್ಬ ನೋಂದಾಯಿತ ವ್ಯಕ್ತಿಯು ನಿಯಮ 20ರ ಅಡಿ ನೋಂದಣಿಯನ್ನು ರದ್ದು ಮಾಡಲು ಅರ್ಜಿ ಸಲ್ಲಿಸಿದ್ದಲ್ಲಿ, ನಿಯಮ 22ರ ಅಡಿ ನೋಂದಣಿಯ ರದ್ದತಿಗಾಗಿ ನಡಾವಳಿಗಳ ಮುಕ್ತಾಯವು ಬಾಕಿ ಇರುವಾಗ, ಅರ್ಜಿಯ ಸಲ್ಲಿಸುವಿಕೆಯ ದಿನಾಂಕದಿಂದ ಅಥವಾ ಯಾವ ದಿನಾಂಕದಿಂದ ರದ್ದತಿಯನ್ನು ಕೋರಲಾಗಿದೆಯೋ, ಅವುಗಳಲ್ಲಿ ಯಾವುದು ನಂತರದ್ದೋ ಅಂದಿನಿಂದ, ನೋಂದಣಿಯು ಅಮಾನತ್ತಿನಲ್ಲಿದೆಯೆಂದು ಪರಿಭಾವಿಸತಕ್ಕದ್ದು;

(2) ಪ್ರಕರಣ 29ರ ಅಡಿ ಅಥವಾ ನಿಯಮ 21ರ ಅಡಿ ಒಬ್ಬ ವ್ಯಕ್ತಿಯ ನೋಂದಣಿಯನ್ನು ರದ್ದು ಮಾಡುವ ಬಾಧ್ಯತೆ ಇದೆಯೆಂದು ಯುಕ್ತ ಅಧಿಕಾರಿಗೆ ನಂಬಲು ಕಾರಣಗಳಿದ್ದಲ್ಲಿ, ನಿಯಮ 22ರ ಅಡಿ ನೋಂದಣಿಯ ರದ್ದತಿಗಾಗಿ ನಡಾವಳಿಗಳ ಮುಕ್ತಾಯವು ಬಾಕಿ ಇರುವಾಗ, ಅವನು ಸದರಿ ವ್ಯಕ್ತಿಗೆ ಅಹವಾಲು ಸಲ್ಲಿಸಲು ಒಂದು ನ್ಯಾಯಸಮ್ಮತವಾದ ಅವಕಾಶವನ್ನು ನೀಡಿದ ನಂತರ, ಅಂಥ ವ್ಯಕ್ತಿಯ ನೋಂದಣಿಯನ್ನು ಅವನಿಂದ ನಿರ್ಧರಿಸಬಹುದಾದ ಒಂದು ದಿನಾಂಕದಿಂದ ಅಮಾನತ್ತಿನಲ್ಲಿ ಇಡಬಹುದು.

(3) ಉಪನಿಯಮ (1) ಅಥವಾ ಉಪನಿಯಮ (2)ರ ಅಡಿ ಯಾರ ನೋಂದಣಿಯು ಅಮಾನತ್ತಿನಲ್ಲಿ ಇಡಲ್ಪಟ್ಟಿದೆಯೋ ಆ ನೋಂದಾಯಿತ ವ್ಯಕ್ತಿಯು, ಅಮಾನತ್ತಿನ ಅವಧಿಯಲ್ಲಿ ಯಾವುದೇ ತೆರಿಗೆದಾಯಕ ಪೂರೈಕೆಯನ್ನು ಮಾಡತಕ್ಕದ್ದಲ್ಲ ಮತ್ತು ಪ್ರಕರಣ 39ರ ಅಡಿಯಲ್ಲಿ ಯಾವುದೇ ರಿಟರ್ನ್‌ಅನ್ನು ಒದಗಿಸಲು ಅವಶ್ಯಕವಾಗತಕ್ಕದ್ದಲ್ಲ.

589

(4) ಯುಕ್ತ ಅಧಿಕಾರಿಯಿಂದ ನಿಯಮ 22ರ ಅಡಿ ನಡಾವಳಿಗಳು ಮುಕ್ತಾಯವಾದಾಗ ಉಪನಿಯಮ (1) ಅಥವಾ ಉಪನಿಯಮ (2)ರ ಅಡಿಯಲ್ಲಿಯ ಅಮಾನತ್ತು ಹಿಂತೆಗೆದುಕೊಳ್ಳಲಾಗಿದೆಯೆಂದು ಪರಿಭಾವಿಸತಕ್ಕದ್ದು ಮತ್ತು ಅಂತಹ ಹಿಂತೆಗೆದುಕೊಳ್ಳುವಿಕೆಯು ಅಮಾನತ್ತು ಜಾರಿಗೆ ಬಂದ ದಿನಾಂಕದಿಂದ ಜಾರಿಗೆ ಬಂದಿದೆಯೆಂದು ಪರಿಭಾವಿಸತಕ್ಕದ್ದು.".

7. ಹೊಸ ನಿಯಮ 41ಎ ಯ ಸೇರ್ಪಡೆ.– ಸದರಿ ನಿಯಮಗಳ ನಿಯಮ 41ರ ನಂತರ, ಈ ಕೆಳಗಿನ ನಿಯಮವನ್ನು ಸೇರಿಸತಕ್ಕದ್ದು, ಅಂದರೆ:–

"41ಎ. ಒಂದು ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿ ವಿವಿಧ ವ್ಯವಹಾರ ಸ್ಥಳಗಳಿಗೆ ಪ್ರತ್ಯೇಕ ನೋಂದಣಿ ಪಡೆದಾಗ ಜಮೆಯ ವರ್ಗಾವಣೆ.– (1) ನಿಯಮ 11ರ ಉಪಬಂಧಗಳ ಪ್ರಕಾರ ಯಾವ ನೋಂದಾಯಿತ ವ್ಯಕ್ತಿಯು ವಿವಿಧ ವ್ಯವಹಾರ ಸ್ಥಳಗಳಿಗೆ ಪ್ರತ್ಯೇಕ ನೋಂದಣಿ ಪಡೆದಿದ್ದಾನೆಯೋ ಮತ್ತು ಯಾರು ಅವನ ವಿದ್ಯುನ್ಮಾನ ಜಮೆ ಖಾತೆಯಲ್ಲಿ ಉಳಿದಿರುವ ಹೂಡುವಳಿ ತೆರಿಗೆ ಜಮೆಯನ್ನು, ಪೂರ್ಣಯಾಗಿ ಅಥವಾ ಭಾಗಶಃವಾಗಿ, ಹೊಸದಾಗಿ ನೋಂದಾಯಿತ ಯಾವುದೇ ಅಥವಾ ಎಲ್ಲಾ ವ್ಯವಹಾರ ಸ್ಥಳಗಳಿಗೆ ವರ್ಗಾಯಿಸಲು ಉದ್ದೇಶಿಸುತ್ತಾನೋ, ಅವನು ಅಂತಹ ಪ್ರತ್ಯೇಕ ನೋಂದಣಿಗಳನ್ನು ಪಡೆದ ಮೂವತ್ತು ದಿನಗಳ ಒಳಗಾಗಿ ನೇರವಾಗಿ ಆಗಲಿ ಅಥವಾ ಆಯುಕ್ತರಿಂದ ಈ ಸಂಬಂಧ ಅಧಿಸೂಚಿಸಲ್ಪಟ್ಟ ಒಂದು ಸಹಾಯ ಕೇಂದ್ರದ ಮೂಲಕವಾಗಲಿ, **ನಮೂನೆ ಜಿಎಸ್‌ಟಿ ಐಟಿಸಿ–02ಎ** ಯಲ್ಲಿ ವಿವರಗಳನ್ನು ವಿದ್ಯುನ್ಮಾನವಾಗಿ ಒದಗಿಸತಕ್ಕದ್ದು:

ಪರಂತು, ಹೊಸದಾಗಿ ನೋಂದಾಯಿತ ಘಟಕಗಳಿಗೆ ಅವುಗಳ ನೋಂದಣಿಯ ಸಮಯದಲ್ಲಿ ಹೊಂದಿರುವ ಆಸ್ತಿಗಳ ಮೌಲ್ಯದ ಅನುಪಾತದಲ್ಲಿ ಹೂಡುವಳಿ ತೆರಿಗೆ ಜಮೆಯನ್ನು ವರ್ಗಾಯಿಸತಕ್ಕದ್ದು.

ವಿವರಣೆ.– ಈ ಉಪನಿಯಮದ ಉದ್ದೇಶಗಳಿಗಾಗಿ, **"ಆಸ್ತಿಗಳ ಮೌಲ್ಯ"** ಅಂದರೆ ಅವುಗಳ ಮೇಲಿನ ಹೂಡುವಳಿ ತೆರಿಗೆ ಜಮೆಯನ್ನು ಉಪಯೋಗಿಸಿರಲಿ ಅಥವಾ ಇಲ್ಲದಿರಲಿ ವ್ಯವಹಾರದ ಎಲ್ಲಾ ಆಸ್ತಿಗಳ ಮೌಲ್ಯ ಎಂದು ಈ ಮೂಲಕ ಸ್ಪಷ್ಟೀಕರಿಸಿದೆ.

(2) ಹೊಸದಾಗಿ ನೋಂದಾಯಿತ ವ್ಯಕ್ತಿಯು (ವರ್ಗಾಯಿಸಿಕೊಂಡವನು) ನೋಂದಾಯಿತ ವ್ಯಕ್ತಿ (ವರ್ಗಾವಣೆದಾರ)ನಿಂದ ಹಾಗೆ ಒದಗಿಸಿದ ವಿವರಗಳನ್ನು, ಸಾಮಾನ್ಯ ಪೋರ್ಟಲ್ ಮೇಲೆ ಒಪ್ಪಿಕೊಳ್ಳತಕ್ಕದ್ದು ಮತ್ತು, ಅಂತಹ ಒಪ್ಪಿಗೆಯ ನಂತರ **ನಮೂನೆ ಜಿಎಸ್‌ಟಿ ಐಟಿಸಿ–02ಎ** ಯಲ್ಲಿ ನಿರ್ದಿಷ್ಟ ಪಡಿಸಿದ ಉಪಯೋಗಿಸಿರದ ಹೂಡುವಳಿ ತೆರಿಗೆಯ ಜಮೆಯನ್ನು ಅವನ ವಿದ್ಯುನ್ಮಾನ ಜಮಾ ಖಾತೆಗೆ ಜಮೆ ಮಾಡತಕ್ಕದ್ದು.".

8. ನಿಯಮ 42ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 42ರಲ್ಲಿ, ಉಪ–ನಿಯಮ (1)ರಲ್ಲಿ, ಖಂಡ (i)ರಲ್ಲಿ, ವಿವರಣೆಯಲ್ಲಿ, **"ನಮೂದು 84"** ಪದ ಹಾಗೂ ಸಂಖ್ಯೆಗಳ ನಂತರ **"ಮತ್ತು ನಮೂದು 92ಎ"** ಪದಗಳು, ಸಂಖ್ಯೆಗಳು ಮತ್ತು ಅಕ್ಷರವನ್ನು ಸೇರಿಸತಕ್ಕದ್ದು.

9. ನಿಯಮ 43ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 43ರಲ್ಲಿ,

(i) ಉಪನಿಯಮ (1)ರಲ್ಲಿ, ಖಂಡ (ಜಿ)ಯಲ್ಲಿ, ವಿವರಣೆಯಲ್ಲಿ, **"ನಮೂದು 84"** ಪದ ಹಾಗೂ ಸಂಖ್ಯೆಗಳ ನಂತರ **"ಮತ್ತು ನಮೂದು 92ಎ"** ಪದಗಳು, ಸಂಖ್ಯೆಗಳು ಮತ್ತು ಅಕ್ಷರವನ್ನು ಸೇರಿಸತಕ್ಕದ್ದು;

(ii) ಉಪನಿಯಮ (2)ರಲ್ಲಿ, ವಿವರಣೆಯಲ್ಲಿ, ಖಂಡ (ಎ)ಯನ್ನು ಬಿಟ್ಟುಬಿಡತಕ್ಕದ್ದು.

10. ನಿಯಮ 53ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 53ರ ಉಪ–ನಿಯಮ (1)ರಲ್ಲಿ,

(i) "ಪ್ರಕರಣ 34ರಲ್ಲಿ ಉಲ್ಲೇಖಿಸಲಾದ ಜಮೆ ಅಥವಾ ಖರ್ಚು ಚೀಟಿ" ಪದಗಳು ಮತ್ತು ಸಂಖ್ಯೆಗಳನ್ನು

590

ಬಿಟ್ಟುಬಿಡತಕ್ಕದ್ದು;

(ii) ಖಂಡ (ಸಿ)ಯನ್ನು ಬಿಟ್ಟುಬಿಡತಕ್ಕದ್ದು;

(iii) ಖಂಡ (ಐ)ಯನ್ನು ಬಿಟ್ಟುಬಿಡತಕ್ಕದ್ದು;

(iv) ಉಪನಿಯಮ (1)ರ ನಂತರ ಈ ಕೆಳಗಿನ ಉಪನಿಯಮವನ್ನು ಸೇರಿಸತಕ್ಕದ್ದು, ಅಂದರೆ:–

"(1ಎ) ಪ್ರಕರಣ 34ರಲ್ಲಿ ಉಲ್ಲೇಖಿಸಲಾದ ಒಂದು ಜಮೆ ಅಥವಾ ಖರ್ಚು ಚೀಟಿಯು ಈ ಕೆಳಗಿನ ವಿವರಗಳನ್ನು ಒಳಗೊಂಡಿರತಕ್ಕದ್ದು, ಅಂದರೆ:–

(ಎ) ಪೂರೈಕೆದಾರನ ಹೆಸರು, ವಿಳಾಸ ಹಾಗೂ ಸರಕು ಮತ್ತು ಸೇವೆಗಳ ತೆರಿಗೆ ಗುರುತು ಸಂಖ್ಯೆ;

(ಬಿ) ದಾಖಲೆಯ ಸ್ವರೂಪ;

(ಸಿ) ಒಂದು ಹಣಕಾಸು ವರ್ಷಕ್ಕೆ ವಿಶಿಷ್ಟವಾಗಿರುವಂತಹ ಒಂದು ಅಥವಾ ವಿವಿಧ ಶ್ರೇಣಿಗಳಲ್ಲಿ, ಅಕ್ಷರಮಾಲೆ ಅಥವಾ ಸಂಖ್ಯೆಗಳು ಅಥವಾ "–" ಮತ್ತು "/" ಅನುಕ್ರಮವಾಗಿ ಚಿಹ್ನೆಗಳಾಗಿರುವ ಅಡ್ಡಗೆರೆ ಅಥವಾ ಸಣ್ಣ ಅಡ್ಡಗೆರೆ ಮತ್ತು ಓರೆಗೆರೆಗಳನ್ನು ಒಳಗೊಂಡ ಮತ್ತು ಅವುಗಳ ಯಾವುದೇ ಸಂಯೋಜನೆಯ ಹದಿನಾರು ಅಕ್ಷರಗಳನ್ನು ಮೀರದ ಒಂದು ಅನುಕ್ರಮವಾದ ಕ್ರಮಸಂಖ್ಯೆ;

(ಡಿ) ದಾಖಲೆಯ ನೀಡುವಿಕೆಯ ದಿನಾಂಕ;

(ಈ) ಸ್ವೀಕೃತಿದಾರನ ಹೆಸರು, ವಿಳಾಸ ಹಾಗೂ ಸರಕು ಮತ್ತು ಸೇವೆಗಳ ತೆರಿಗೆ ಗುರುತು ಸಂಖ್ಯೆ ಅಥವಾ ನೋಂದಾಯಿತನಾಗಿದ್ದಲ್ಲಿ ವಿಶಿಷ್ಟ ಗುರುತಿನ ಸಂಖ್ಯೆ;

(ಎಫ್) ಸ್ವೀಕೃತಿದಾರನ ಹೆಸರು ಮತ್ತು ವಿಳಾಸ ಹಾಗೂ ಅಂಥ ಸ್ವೀಕೃತಿದಾರನು ಅನೋಂದಾಯಿತನಾಗಿದ್ದಲ್ಲಿ, ರಾಜ್ಯದ ಹೆಸರು ಮತ್ತು ಅದರ ಸಂಕೇತದೊಂದಿಗೆ ಬಟವಾಡೆಯ ವಿಳಾಸ;

(ಜಿ) ಸಂಬಂಧಿತ ತೆರಿಗೆ ಬೆಲೆಪಟ್ಟಿ(ಗಳ)ಯ ಅಥವಾ ಸಂದರ್ಭಾನುಸಾರವಾಗಿ ಪೂರೈಕೆಯ ಬಿಲ್ಲು(ಗಳ) ಅನುಕ್ರಮ ಸಂಖ್ಯೆ(ಗಳು) ಮತ್ತು ದಿನಾಂಕ(ಗಳು);

(ಹೆಚ್) ಸರಕು ಮತ್ತು ಸೇವೆಗಳ ತೆರಿಗೆದಾಯಕ ಪೂರೈಕೆಗಳ ಮೌಲ್ಯ, ತೆರಿಗೆಯ ದರ ಮತ್ತು ಸ್ವೀಕೃತಿದಾರನಿಗೆ ಜಮೆ ಮಾಡಿದ ಅಥವಾ ಸಂದರ್ಭಾನುಸಾರವಾಗಿ ಖರ್ಚು ಹಾಕಿದ ತೆರಿಗೆಯ ಮೊತ್ತ; ಮತ್ತು

(ಐ) ಪೂರೈಕೆದಾರನ ಅಥವಾ ಅವನ ಅಧಿಕೃತ ಪ್ರತಿನಿಧಿಯ ಸಹಿ ಅಥವಾ ಡಿಜಿಟಲ್ ಸಹಿ.".

11. ನಿಯಮ 80ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 80ರಲ್ಲಿ, ಉಪನಿಯಮ (3)ರಲ್ಲಿ, "ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು" ಪದಗಳ ನಂತರ "ಪ್ರಕರಣ 35ರ ಉಪಪ್ರಕರಣ (5)ರ ಪರಂತುಕದಲ್ಲಿ ಉಲ್ಲೇಖಿಸಿದವರನ್ನು ಹೊರತುಪಡಿಸಿದಂತೆ," ಪದಗಳು, ಆವರಣಗಳು ಮತ್ತು ಸಂಖ್ಯೆಗಳನ್ನು ಸೇರಿಸತಕ್ಕದ್ದು.

12. ನಿಯಮ 83ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 83ರಲ್ಲಿ,–

(i) ಉಪನಿಯಮ (1)ರಲ್ಲಿ, ಖಂಡ (ಬಿ)ಯಲ್ಲಿ, "ಅಬಕಾರಿ ಮತ್ತು ಕಸ್ಟಮ್ಸ್‌ನ ಕೇಂದ್ರ ಮಂಡಳಿ" ಪದಗಳಿಗಾಗಿ "ಪರೋಕ್ಷ ತೆರಿಗೆಗಳ ಕೇಂದ್ರ ಮಂಡಳಿ" ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) ಉಪನಿಯಮ (3)ರಲ್ಲಿ, ಎರಡನೇ ಪರಂತುಕದಲ್ಲಿ, "ಹದಿನೆಂಟು ತಿಂಗಳುಗಳ' ಪದಗಳಿಗಾಗಿ "ಮೂವತ್ತು ತಿಂಗಳುಗಳ' ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(iii) ಉಪನಿಯಮ (8)ಕ್ಕಾಗಿ, ಈ ಕೆಳಗಿನ ಉಪನಿಯಮವನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"(8) ಒಬ್ಬ ನೋಂದಾಯಿತ ವ್ಯಕ್ತಿಯ ಪರವಾಗಿ, ಅವನು ಆ ರೀತಿ ಅಧಿಕರಿಸಿದ್ದರೆ, ಒಬ್ಬ ಸರಕು ಮತ್ತು ಸೇವೆಗಳ ತೆರಿಗೆ ವೃತ್ತಿಗಾರನು ಈ ಕೆಳಗಿನ ಯಾವುದೇ ಅಥವಾ ಎಲ್ಲಾ ಕೆಲಸಗಳನ್ನು ಕೈಗೊಳ್ಳಬಹುದು–

(ಎ) ಹೊರಮುಖ ಮತ್ತು ಒಳಮುಖ ಪೂರೈಕೆಗಳ ವಿವರಗಳನ್ನು ಒದಗಿಸುವುದು;

591

(ಬಿ) ಮಾಸಿಕ, ತ್ರೈಮಾಸಿಕ, ವಾರ್ಷಿಕ ಅಥವಾ ಅಂತಿಮ ರಿಟರ್ನ್ ಒದಗಿಸುವುದು;

(ಸಿ) ವಿದ್ಯುನ್ಮಾನ ನಗದು ಖಾತೆಯಲ್ಲಿ ಜಮೆಗಾಗಿ ಠೇವಣಿ ಮಾಡುವುದು;

(ಡಿ) ಮರುಪಾವತಿಗಾಗಿ ಕ್ಲೇಮು ಅರ್ಜಿ ಹಾಕುವುದು;

(ಈ) ನೋಂದಣಿಯ ತಿದ್ದುಪಡಿ ಅಥವಾ ರದ್ದತಿಗಾಗಿ ಒಂದು ಅರ್ಜಿ ಹಾಕುವುದು;

(ಎಫ್) ಇ–ವೇ ಬಿಲ್ ಸೃಜಿಸುವುದಕ್ಕಾಗಿ ಮಾಹಿತಿ ಒದಗಿಸುವುದು;

(ಜಿ) **ನಮೂನೆ ಜಿಎಸ್‌ಟಿ ಐಟಿಸಿ–04**ನಲ್ಲಿ ಚಲನ್‌ನ ವಿವರಗಳನ್ನು ಒದಗಿಸುವುದು;

(ಹೆಚ್) ನಿಯಮ 58ರ ಅಡಿಯ ದಾಖಲಾತಿಯ ತಿದ್ದುಪಡಿ ಅಥವಾ ರದ್ದತಿಗಾಗಿ ಒಂದು ಅರ್ಜಿ ಹಾಕುವುದು; ಮತ್ತು

(ಐ) ರಾಜಿ ತೆರಿಗೆ ಪದ್ದತಿ ಅಡಿ ತೆರಿಗೆ ಸಂದಾಯ ಮಾಡಲು ಅಥವಾ ಸದರಿ ಪದ್ದತಿಯಿಂದ ವಾಪಸಾಗಲು ಒಂದು ತಿಳಿಸುವಿಕೆ ಅರ್ಜಿ ಹಾಕುವುದು:

ಪರಂತು, ಮರುಪಾವತಿಗಾಗಿ ಒಂದು ಕ್ಲೇಮು ಅಥವಾ ನೋಂದಣಿಯ ತಿದ್ದುಪಡಿ ಅಥವಾ ರದ್ದತಿಗಾಗಿ ಒಂದು ಅರ್ಜಿ ಅಥವಾ ರಾಜಿ ತೆರಿಗೆ ಪದ್ದತಿ ಅಡಿ ತೆರಿಗೆ ಸಂದಾಯ ಮಾಡಲು ಅಥವಾ ಸದರಿ ಪದ್ದತಿಯಿಂದ ವಾಪಸಾಗಲು ಒಂದು ತಿಳಿಸುವಿಕೆಗಳಿಗಾಗಿ ನೋಂದಾಯಿತ ವ್ಯಕ್ತಿಯಿಂದ ಅಧಿಕೃತನಾದ ಸರಕು ಮತ್ತು ಸೇವೆಗಳ ತೆರಿಗೆ ವೃತ್ತಿಗಾರನಿಂದ ಅರ್ಜಿಯನ್ನು ಸಲ್ಲಿಸಲಾಗಿದ್ದಲ್ಲಿ, ಒಂದು ಧೃಡೀಕರಣವನ್ನು ನೋಂದಾಯಿತ ವ್ಯಕ್ತಿಯಿಂದ ಕೇಳತಕ್ಕದ್ದು ಮತ್ತು ಸದರಿ ವೃತ್ತಿಗಾರನಿಂದ ಸಲ್ಲಿಸಲಾಗಿರುವ ಅರ್ಜಿಯನ್ನು ನೋಂದಾಯಿತ ವ್ಯಕ್ತಿಗೆ ಸಾಮಾನ್ಯ ಪೋರ್ಟಲ್‌ನ ಮೇಲೆ ಒದಗಿಸತಕ್ಕದ್ದು ಮತ್ತು ನೋಂದಾಯಿತ ವ್ಯಕ್ತಿಯು ಅದಕ್ಕಾಗಿ ಅವನ ಒಪ್ಪಿಗೆಯನ್ನು ನೀಡುವವರೆಗೆ ಸದರಿ ಅರ್ಜಿಯ ಮೇಲೆ ಮುಂದಿನ ಕ್ರಮ ಕೈಗೊಳ್ಳತಕ್ಕದ್ದಲ್ಲ.".

13. ನಿಯಮ 85ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 85ರಲ್ಲಿ, ಉಪನಿಯಮ (3)ರಲ್ಲಿ, **"**ಪ್ರಕರಣ 49**"** ಪದ ಮತ್ತು ಸಂಖ್ಯೆಗಳ ನಂತರ **"**, ಪ್ರಕರಣ 49ಎ ಮತ್ತು ಪ್ರಕರಣ 49ಬಿ**"** ಅರ್ಥವಿರಾಮ ಚಿಹ್ನೆ, ಪದಗಳು, ಸಂಖ್ಯೆಗಳು ಮತ್ತು ಅಕ್ಷರಗಳನ್ನು ಸೇರಿಸತಕ್ಕದ್ದು.

14. ನಿಯಮ 86ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 86ರಲ್ಲಿ, ಉಪನಿಯಮ (2)ರಲ್ಲಿ, **"**ಪ್ರಕರಣ 49**"** ಪದ ಮತ್ತು ಸಂಖ್ಯೆಗಳ ನಂತರ **"**ಅಥವಾ ಪ್ರಕರಣ 49ಎ ಅಥವಾ ಪ್ರಕರಣ 49ಬಿ**"** ಪದಗಳು, ಸಂಖ್ಯೆಗಳು ಮತ್ತು ಅಕ್ಷರಗಳನ್ನು ಸೇರಿಸತಕ್ಕದ್ದು.

15. ನಿಯಮ 89ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 89ರಲ್ಲಿ, ಉಪನಿಯಮ (2)ರಲ್ಲಿ, ಖಂಡ (ಎಫ್)ಗಾಗಿ ಈ ಕೆಳಗಿನ ಖಂಡವನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"(ಎಫ್) ಒಂದು ವಿಶೇಷ ಆರ್ಥಿಕ ವಲಯ ಅಥವಾ ವಿಶೇಷ ಆರ್ಥಿಕ ವಲಯ ಅಭಿವೃದ್ಧಿದಾರನಿಗೆ ಮಾಡಲಾದ ಸರಕು ಅಥವಾ ಸೇವೆಗಳ ಅಥವಾ ಅವೆರಡರ ಪೂರೈಕೆಯ ಪ್ರಕರಣದಲ್ಲಿ ವಿಶೇಷ ಆರ್ಥಿಕ ವಲಯ ಅಥವಾ ವಿಶೇಷ ಆರ್ಥಿಕ ವಲಯ ಅಭಿವೃದ್ಧಿದಾರನಿಂದ ತೆರಿಗೆಯನ್ನು ಸಂಗ್ರಹಿಸಲಾಗಿಲ್ಲ ಎನ್ನುವ ಒಂದು ಘೋಷಣಾ ಪತ್ರ;".

16. ನಿಯಮ 91ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 91ರಲ್ಲಿ,=

(i) ಉಪನಿಯಮ (2)ರಲ್ಲಿ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:–

"ಪರಂತು, **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–04**ರಲ್ಲಿ ನೀಡಲಾದ ಆದೇಶವನ್ನು ಯುಕ್ತ ಅಧಿಕಾರಿಯಿಂದ ಮರುಕ್ರಮಬದ್ದಗೊಳಿಸುವುದು ಅವಶ್ಯವಾಗತಕ್ಕದ್ದಲ್ಲ.**"**; ಮತ್ತು

(ii) ಉಪನಿಯಮ (3)ರಲ್ಲಿ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:–

"ಪರಂತು, ಸಂದಾಯದ ಸೂಚನೆ ನೀಡಲಾಗಿದ್ದ ಹಣಕಾಸು ವರ್ಷದಲ್ಲಿಯೇ ಮರುಪಾವತಿಯ ಬಟವಾಡೆಯನ್ನು ಮಾಡದಿರದಿದ್ದಲ್ಲಿ, **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–05**ರಲ್ಲಿನ ಸಂದಾಯದ ಸೂಚನೆಯನ್ನು ಮರುಕ್ರಮಬದ್ದಗೊಳಿಸುವುದು ಅವಶ್ಯವಿರತಕ್ಕದ್ದು.".

592

17. ನಿಯಮ 92ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 92ರಲ್ಲಿ, ಉಪನಿಯಮ (4)ರಲ್ಲಿ, ಈ ಕೆಳಗಿನ ಪರಂತುಕಗಳನ್ನು ಸೇರಿಸತಕ್ಕದ್ದು, ಅಂದರೆ:–

"ಪರಂತು, **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–06**ರಲ್ಲಿ ನೀಡಲಾದ ಆದೇಶವನ್ನು ಯುಕ್ತ ಅಧಿಕಾರಿಯಿಂದ ಮರುಕ್ರಮಬದ್ದಗೊಳಿಸುವುದು ಅವಶ್ಯವಾಗತಕ್ಕದ್ದಲ್ಲ:

ಮತ್ತು ಪರಂತು, ಸಂದಾಯದ ಸೂಚನೆ ನೀಡಲಾಗಿದ್ದ ಹಣಕಾಸು ವರ್ಷದಲ್ಲಿಯೇ ಮರುಪಾವತಿಯ ಬಟವಾಡೆಯನ್ನು ಮಾಡದಿರದಿದ್ದಲ್ಲಿ ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–05ರಲ್ಲಿನ ಸಂದಾಯದ ಸೂಚನೆಯನ್ನು ಮರುಕ್ರಮಬದ್ದಗೊಳಿಸುವುದು ಅವಶ್ಯವಿರತಕ್ಕದ್ದು.".

18. ನಿಯಮ 96ಎ ಯ ತಿದ್ದುಪಡಿ.– ಸದರಿ ನಿಯಮಗಳ ನಿಯಮ 96ಎ ನಲ್ಲಿ, –

(i) ಶೀರ್ಷಿಕೆಯಲ್ಲಿ, "ರಫ್ತುಗಳ ಮೇಲೆ ಏಕೀಕೃತ ತೆರಿಗೆಯ ಮರುಪಾವತಿ" ಪದಗಳಿಗಾಗಿ, "ರಫ್ತು" ಪದವನ್ನು ಪ್ರತಿಯೋಜಿಸತಕ್ಕದ್ದು;

(ii) ಉಪನಿಯಮ (1)ರಲ್ಲಿ, ಖಂಡ (ಬಿ)ಯಲ್ಲಿ, "ಪರಿವರ್ತನೀಯ ವಿದೇಶಿ ವಿನಿಮಯ" ಪದಗಳ ನಂತರ, "ಅಥವಾ ಭಾರತೀಯ ರಿಸರ್ವ್ ಬ್ಯಾಂಕಿನಿಂದ ಎಲ್ಲೆಲ್ಲಿ ಅನುಮತಿಸಲಾಗಿದೆಯೋ ಅಲ್ಲಿ ಭಾರತೀಯ ರೂಪಾಯಿಗಳಲ್ಲಿ" ಪದಗಳನ್ನು ಸೇರಿಸತಕ್ಕದ್ದು.

19. **ನಮೂನೆ ಜಿಎಸ್‌ಟಿ ಆರ್‌ಇಜಿ–01ರ ತಿದ್ದುಪಡಿ**. – ಸದರಿ ನಿಯಮಗಳ ನಮೂನೆ **ಜಿಎಸ್‌ಟಿ ಆರ್‌ಇಜಿ–01**ನಲ್ಲಿ, ಸೂಚನೆ ಸಂಖ್ಯೆ 12ರಲ್ಲಿ, "ಶ್ರೇಣಿಗಳನ್ನು" ಪದಕ್ಕಾಗಿ "ಸ್ಥಳಗಳನ್ನು" ಪದವನ್ನು, "ಶ್ರೇಣಿಗಳಿಗೆ" ಪದಕ್ಕಾಗಿ "ಸ್ಥಳಗಳಿಗೆ" ಪದವನ್ನು ಮತ್ತು "ಶ್ರೇಣಿಗೆ" ಪದಕ್ಕಾಗಿ "ಸ್ಥಳಕ್ಕೆ" ಪದವನ್ನು ಪ್ರತಿಯೋಜಿಸತಕ್ಕದ್ದು.

20. **ನಮೂನೆ ಜಿಎಸ್‌ಟಿ ಆರ್‌ಇಜಿ–17ರ ತಿದ್ದುಪಡಿ**. – ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಆರ್‌ಇಜಿ–17**ರಲ್ಲಿ, ಕೊನೆಯಲ್ಲಿ, ಈ ಕೆಳಗಿನ "ಟಿಪ್ಪಣಿ"ಯನ್ನು ಅನುಕ್ರಮವಾಗಿ ಸೇರಿಸತಕ್ಕದ್ದು, ಅಂದರೆ:–

"ಟಿಪ್ಪಣಿ:– ನೋಂದಣಿಯ ಅಮಾನತ್ತು . . . . . (ದಿನಾಂಕ) ದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.".

21. **ನಮೂನೆ ಜಿಎಸ್‌ಟಿ ಆರ್‌ಇಜಿ–20ರ ತಿದ್ದುಪಡಿ**. – ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಆರ್‌ಇಜಿ–20**ರಲ್ಲಿ, ಕೊನೆಯಲ್ಲಿ, ಈ ಕೆಳಗಿನ "ಟಿಪ್ಪಣಿ"ಯನ್ನು ಸೇರಿಸತಕ್ಕದ್ದು, ಅಂದರೆ:–

"ಟಿಪ್ಪಣಿ:– ನಿಮ್ಮ ನೋಂದಣಿಯು . . . . . (ದಿನಾಂಕ) ದಿಂದ ಜಾರಿಗೆ ಬರುವಂತೆ ಅಮಾನತ್ತುಗೊಂಡಿದೆ.".

22. ಹೊಸ ನಮೂನೆ ಜಿಎಸ್‌ಟಿ ಐಟಿಸಿ–02ಎ ಯ ಸೇರ್ಪಡೆ.– ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಐಟಿಸಿ–02** ನಂತರ, ಈ ಕೆಳಗಿನ ನಮೂನೆಯನ್ನು ಸೇರಿಸತಕ್ಕದ್ದು, ಅಂದರೆ:–

"ನಮೂನೆ ಜಿಎಸ್‌ಟಿ ಐಟಿಸಿ–02ಎ

[ನೋಡಿ ನಿಯಮ 41ಎ]

ಪ್ರಕರಣ 25ರ ಉಪಪ್ರಕರಣ (2)ರಡಿಯಲ್ಲಿ ನೋಂದಣಿಯ ಫಲವಾಗಿ ಐಟಿಸಿಯ ವರ್ಗಾವಣೆಗಾಗಿ ಘೋಷಣಾಪತ್ರ

1.	ವರ್ಗಾವಣೆದಾರನ ಜಿಎಸ್‌ಟಿಐಎನ್	

593

2.	ವರ್ಗಾವಣೆದಾರನ ಕಾನೂನುಬದ್ಧ ಹೆಸರು	
3.	ವರ್ಗಾವಣೆದಾರನ ವ್ಯವಹಾರಿಕ ಹೆಸರು, ಅದು ಇದ್ದಲ್ಲಿ	
4.	ವರ್ಗಾಯಿಸಿಕೊಂಡವನ ಜಿಎಸ್‌ಟಿಐಎನ್	
5.	ವರ್ಗಾಯಿಸಿಕೊಂಡವನ ಕಾನೂನುಬದ್ಧ ಹೆಸರು	
6.	ವರ್ಗಾಯಿಸಿಕೊಂಡವನ ವ್ಯವಹಾರಿಕ ಹೆಸರು, ಅದು ಇದ್ದಲ್ಲಿ	

7. ವರ್ಗಾವಣೆ ಮಾಡಬೇಕಾದ ಐಟಿಸಿಯ ವಿವರಗಳು

ತೆರಿಗೆ	ಲಭ್ಯವಿರುವ ಹೊಂದಾಣಿಕೆಯಾದ ಐಟಿಸಿಯ ಮೊತ್ತ	ವರ್ಗಾವಣೆ ಮಾಡಬೇಕಾದ ಹೊಂದಾಣಿಕೆಯಾದ ಐಟಿಸಿಯ ಮೊತ್ತ
1	2	3
ಕೇಂದ್ರ ತೆರಿಗೆ		
ರಾಜ್ಯ ತೆರಿಗೆ		
ಕೇಂ.ಪ್ರ.ತೆರಿಗೆ		
ಏಕೀಕೃತ ತೆರಿಗೆ		
ಉಪಕರ		

8. ಪರಿಶೀಲನೆ

ಮೇಲೆ ನೀಡಲಾದ ಮಾಹಿತಿಯು ನನ್ನ ತಿಳುವಳಿಕೆ ಮತ್ತು ನಂಬಿಕೆಯ ಪ್ರಕಾರ ಸತ್ಯವಾಗಿರುತ್ತದೆ ಮತ್ತು ಸರಿಯಾಗಿರುತ್ತದೆ ಹಾಗೂ ಯಾವುದೇ ಮಾಹಿತಿಯನ್ನು ಇದರಿಂದ ಮರೆಮಾಚಿರುವುದಿಲ್ಲ ಎಂದು . . . . . ಆದ ನಾನು ಈ ಮೂಲಕ ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

ಪ್ರಾಧಿಕೃತ ಸಹಿದಾರನ ಸಹಿ
ಹೆಸರು
ಪದನಾಮ/ ಸ್ಥಾನ
ದಿನಾಂಕ:

ಸೂಚನೆಗಳು:

1. ವರ್ಗಾವಣೆದಾರನು, ಒಂದು ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿ ಒಂದು ಅಸ್ತಿತ್ವದಲ್ಲಿರುವ ನೋಂದಣಿಯನ್ನು ಹೊಂದಿರುವ ನೋಂದಾಯಿತ ವ್ಯಕ್ತಿಗೆ ಉಲ್ಲೇಖಿಸುತ್ತದೆ.
2. ವರ್ಗಾಯಿಸಿಕೊಳ್ಳುವವನು, ನಿಯಮ 11ರಡಿ ಒಂದು ಪ್ರತ್ಯೇಕ ನೋಂದಣಿಯನ್ನು ಪಡೆಯಲಾದ ವ್ಯವಹಾರ ಸ್ಥಳವನ್ನು ಉಲ್ಲೇಖಿಸುತ್ತದೆ.

23. ನಮೂನೆ ಜಿಎಸ್‌ಟಿ ಪಿಸಿಟಿ–05ರ ತಿದ್ದುಪಡಿ.– ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಪಿಸಿಟಿ–05**ರಲ್ಲಿ, ಕೋಷ್ಟಕದಲ್ಲಿ, ಕ್ರಮಸಂಖ್ಯೆ 5 ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ನಂತರ, ಈ ಕೆಳಗಿನದ್ದನ್ನು ಸೇರಿಸತಕ್ಕದ್ದು, ಅಂದರೆ:–

"6	ಇ–ವೇಬಿಲ್‌ನ ಸೃಷ್ಟಿಸುವುದಕ್ಕಾಗಿ ಮಾಹಿತಿಯನ್ನು ಒದಗಿಸಲು	
7	ನಮೂನೆ ಜಿಎಸ್‌ಟಿ ಐಟಿಸಿ–04ರಲ್ಲಿ ಚಲನ್‌ಗಳ ವಿವರಗಳನ್ನು ಒದಗಿಸಲು	
8	ನಿಯಮ 58ರ ಅಡಿಯಲ್ಲಿ ನೋಂದಣಿಯನ್ನು ರದ್ದುಮಾಡಲು ಅಥವಾ ತಿದ್ದುಪಡಿ ಮಾಡಲು ಅರ್ಜಿಯನ್ನು ಸಲ್ಲಿಸಲು	

594

9	ರಾಜೀ ಪದ್ದತಿಯಡಿಯಲ್ಲಿ ತೆರಿಗೆಯನ್ನು ತುಂಬಲು ಅಥವಾ ಸದರಿ ಪದ್ದತಿಯಿಂದ ಹಿಂತೆಗೆದುಕೊಳ್ಳಲು	

24. ನಮೂನೆ ಜಿಎಸ್‌ಟಿಆರ್‌–4ರ ತಿದ್ದುಪಡಿ.– ಸದರಿ ನಿಯಮಗಳ **ನಮೂನೆ ಜಿಎಸ್‌ಟಿಆರ್‌–4**ರಲ್ಲಿ, –

(i) ಖಂಡ 6ರಲ್ಲಿ, ಕೋಷ್ಟಕಕ್ಕಾಗಿ, ಈ ಕೆಳಗಿನ ಕೋಷ್ಟಕವನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ತೆರಿಗೆ ದರ	ಒಟ್ಟು ವಹಿವಾಟು	(2)ರಲ್ಲಿ ಘೋಷಿಸಿದ ವಹಿವಾಟಿನಲ್ಲಿ, ಸೇವೆಗಳ ವಹಿವಾಟು	ರಾಜೀ ತೆರಿಗೆಯ ಮೊತ್ತ	
			ಕೇಂದ್ರ ತೆರಿಗೆ	ರಾಜ್ಯ/ಕೇಂ.ಪ್ರ. ತೆರಿಗೆ
1	2	3	4	5";

(ii) ಖಂಡ 7ರಲ್ಲಿ, ಕೋಷ್ಟಕಕ್ಕಾಗಿ, ಈ ಕೆಳಗಿನ ಕೋಷ್ಟಕವನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ತ್ರೈಮಾಸಿಕ	ದರ	ಮೂಲ ವಿವರಗಳು				ಪರಿಷ್ಕರಿಸಿದ ವಿವರಗಳು			
		ಒಟ್ಟು ವಹಿವಾಟು	(3)ರಲ್ಲಿ ಘೋಷಿಸಿದ ವಹಿವಾಟಿನಲ್ಲಿ, ಸೇವೆಗಳ ವಹಿವಾಟು	ಕೇಂದ್ರ ತೆರಿಗೆ	ರಾಜ್ಯ/ ಕೇಂ.ಪ್ರ. ತೆರಿಗೆ	ಒಟ್ಟು ವಹಿವಾಟು	(7)ರಲ್ಲಿ ಘೋಷಿಸಿದ ವಹಿವಾಟಿನಲ್ಲಿ, ಸೇವೆಗಳ ವಹಿವಾಟು	ಕೇಂದ್ರ ತೆರಿಗೆ	ರಾಜ್ಯ/ ಕೇಂ.ಪ್ರ. ತೆರಿಗೆ
1	2	3	4	5	6	7	8	9	10";

25. ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–01ರ ತಿದ್ದುಪಡಿ.– ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–01**ರಲ್ಲಿ, ನಿಯಮ 89(2)(ಎಫ್)ರಡಿಯಲ್ಲಿನ ಘೋಷಣೆಗಾಗಿ, ಈ ಕೆಳಗಿನ ಘೋಷಣೆಯನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ಘೋಷಣೆ [ನಿಯಮ 89(2)(ಎಫ್)]

ಈ ಮರುಪಾವತಿಯ ಕ್ಲೇಮಿನಲ್ಲಿ ಸೇರಿದ ಸರಕು ಅಥವಾ ಸೇವೆಗಳು ಅಥವಾ ಅವೆರಡರ ಪೂರೈಕೆಗೆ ಸಂಬಂಧಿಸಿದಂತೆ ವಿಶೇಷ ಆರ್ಥಿಕ ವಲಯದ ಘಟಕ / ವಿಶೇಷ ಆರ್ಥಿಕ ವಲಯದ ಅಭಿವೃದ್ದಿದಾರರಿಂದ ತೆರಿಗೆಯನ್ನು ಸಂಗ್ರಹಿಸಿರುವುದಿಲ್ಲ ಎಂದು ಈ ಮೂಲಕ ಘೋಷಿಸುತ್ತೇನೆ.
ಸಹಿ
ಹೆಸರು
ಪದನಾಮ/ ಸ್ಥಾನ."

26. ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–01ಎ ನ ತಿದ್ದುಪಡಿ.– ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–01ಎ** ನಲ್ಲಿ, ಈ ಕೆಳಗಿನ ಘೋಷಣೆಯನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ಘೋಷಣೆ [ನಿಯಮ 89(2)(ಎಫ್)]

595

ಈ ಮರುಪಾವತಿಯ ಕ್ಲೇಮಿನಲ್ಲಿ ಸೇರಿದ ಸರಕು ಅಥವಾ ಸೇವೆಗಳು ಅಥವಾ ಅವೆರಡರ ಪೂರೈಕೆಗೆ ಸಂಬಂಧಿಸಿದಂತೆ ವಿಶೇಷ ಆರ್ಥಿಕ ವಲಯದ ಘಟಕ / ವಿಶೇಷ ಆರ್ಥಿಕ ವಲಯದ ಅಭಿವೃದ್ದಿದಾರರಿಂದ ತೆರಿಗೆಯನ್ನು ಸಂಗ್ರಹಿಸಿರುವುದಿಲ್ಲ ಎಂದು ಈ ಮೂಲಕ ಘೋಷಿಸುತ್ತೇನೆ.
ಸಹಿ
ಹೆಸರು
ಪದನಾಮ/ ಸ್ಥಾನ."

27. ನಮೂನೆ ಜಿಎಸ್‌ಟಿ ಎಪಿಎಲ್–01ರ ತಿದ್ದುಪಡಿ.– ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಎಪಿಎಲ್–01**ನಲ್ಲಿ, –

(ಎ) ಖಂಡ 15ಕ್ಕಾಗಿ, ಈ ಕೆಳಗಿನ ಖಂಡವನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"15. ಒಪ್ಪಿದ ಮೊತ್ತ ಮತ್ತು ಮುಂಗಡ–ಠೇವಣಿ:–

(ಎ) ಅವಶ್ಯಕವಿರುವ ಪಾವತಿಗಳ ವಿವರಗಳು

ವಿವರಗಳು			ಕೇಂದ್ರ ತೆರಿಗೆ	ರಾಜ್ಯ / ಕೇಂ.ಪ್ರ. ತೆರಿಗೆ	ಏಕೀಕೃತ ತೆರಿಗೆ	ಉಪಕರ	ಒಟ್ಟು ಮೊತ್ತ	
	ಎ) ಒಪ್ಪಿಕೊಂಡ ಮೊತ್ತ	ತೆರಿಗೆ/ ಉಪಕರ					ಒಟ್ಟು	ಒಟ್ಟು
		ಬಡ್ಡಿ					ಒಟ್ಟು	
		ದಂಡ					ಒಟ್ಟು	
		ಶುಲ್ಕ					ಒಟ್ಟು	
		ಇತರೆ ಥಾರ್ಜುಗಳು					ಒಟ್ಟು	
	ಬಿ) ಪೂರ್ವ ಠೇವಣಿ (ವ್ಯಾಜ್ಯದ ತೆರಿಗೆ /ಉಪಕರ ದ 10% ಆದರೆ ಪ್ರತ್ಯೇಕವಾಗಿ ಸಿಜಿಎಸ್‌ಟಿ, ಎಸ್‌ಜಿಎಸ್‌ಟಿ ಅಥವಾ ಉಪಕರಕ್ಕೆ ಸಂಬಂಧಿಸಿದಂತೆ ರೂ.25 ಕೋಟಿಗೆ ಮೀರದಂತೆ, ಅಥವಾ ಐಜಿಎಸ್‌ಟಿಗೆ ಸಂಬಂಧಿಸಿದಂತೆ ರೂ.50 ಕೋಟಿಗೆ ಮತ್ತು ಉಪಕರಕ್ಕೆ ಸಂಬಂಧಿಸಿದಂತೆ ರೂ.25 ಕೋಟಿ ಮೀರದಂತೆ)	ತೆರಿಗೆ / ಉಪಕರ					ಒಟ್ಟು	

(ಬಿ) ಒಪ್ಪಿಕೊಂಡ ಮೊತ್ತ ಮತ್ತು ಮುಂಗಡ–ಠೇವಣಿ (ವ್ಯಾಜ್ಯದ ತೆರಿಗೆ /ಉಪಕರ ದ 10% ಆದರೆ ಪ್ರತ್ಯೇಕವಾಗಿ ಸಿಜಿಎಸ್‌ಟಿ, ಎಸ್‌ಜಿಎಸ್‌ಟಿ ಅಥವಾ ಉಪಕರಕ್ಕೆ ಸಂಬಂಧಿಸಿದಂತೆ ರೂ.25 ಕೋಟಿಗೆ ಮೀರದಂತೆ, ಅಥವಾ ಐಜಿಎಸ್‌ಟಿಗೆ ಸಂಬಂಧಿಸಿದಂತೆ ರೂ.50 ಕೋಟಿಗೆ ಮತ್ತು ಉಪಕರಕ್ಕೆ ಸಂಬಂಧಿಸಿದಂತೆ ರೂ.25 ಕೋಟಿ ಮೀರದಂತೆ ಮುಂಗಡ–ಠೇವಣಿ)ಯ ಪಾವತಿಯ ವಿವರಗಳು

ಕ್ರ.ಸಂ	ವಿವರಣೆ	ಪಾವತಿಸಬೇಕಾದ ತೆರಿಗೆ	ನಗದು/ ಜಮಾ ಖಾತೆಯ ಮೂಲಕ ಪಾವತಿ	ಡೆಬಿಟ್ ನಮೂದು ಸಂ.	ಪಾವತಿಸಿದ ತೆರಿಗೆಯ ಮೊತ್ತ			
					ಕೇಂದ್ರ ತೆರಿಗೆ	ರಾಜ್ಯ / ಕೇಂ.ಪ್ರ. ತೆರಿಗೆ	ಏಕೀಕೃತ ತೆರಿಗೆ	ಉಪಕರ
	1 2	3	4	5	6	7	8	9

596

1.	ಏಕೀಕೃತ ತೆರಿಗೆ			ನಗದು ಖಾತೆ				
				ಜಮಾ ಖಾತೆ				
2.	ಕೇಂದ್ರ ತೆರಿಗೆ			ನಗದು ಖಾತೆ				
				ಜಮಾ ಖಾತೆ				
3.	ರಾಜ್ಯ / ಕೇಂ.ಪ್ರ.ತೆರಿಗೆ			ನಗದು ಖಾತೆ				
				ಜಮಾ ಖಾತೆ				
4.	ಉಪಕರ			ನಗದು ಖಾತೆ				
				ಜಮಾ ಖಾತೆ				

(ಸಿ) ಪಾವತಿಸಬೇಕಾದ ಮತ್ತು ಪಾವತಿಸಿದ ಬಡ್ಡಿ, ದಂಡ, ವಿಳಂಬ ಶುಲ್ಕ ಮತ್ತು ಯಾವುದೇ ಇತರೆ ಮೊತ್ತ

ಕ್ರ. ಸಂ	ವಿವರಣೆ	ಪಾವತಿಸಬೇಕಾದ ಮೊತ್ತ				ಡೆಬಿಟ್ ನಮೂದು ಸಂ.	ಪಾವತಿಸಿದ ತೆರಿಗೆಯ ಮೊತ್ತ			
		ಕೇಂದ್ರ ತೆರಿಗೆ	ರಾಜ್ಯ / ಕೇಂ.ಪ್ರ. ತೆರಿಗೆ	ಏಕೀಕೃತ ತೆರಿಗೆ	ಉಪಕರ		ಕೇಂದ್ರ ತೆರಿಗೆ	ರಾಜ್ಯ / ಕೇಂ.ಪ್ರ. ತೆರಿಗೆ	ಏಕೀಕೃತ ತೆರಿಗೆ	ಉಪಕರ
1	2	3	4	5	6	7	8	9	10	11

(ಬಿ) ಖಂಡ 17ರ ನಂತರ, ಈ ಕೆಳಗಿನದ್ದನ್ನು ಸೇರಿಸಲಾಗಿದೆ, ಅಂದರೆ:–

"18. ಕೋಷ್ಟಕದಲ್ಲಿ, ಖಂಡ 15 (ನಮೂದು (ಎ))ರ ಉಪಖಂಡ (ಎ)ನಲ್ಲಿ (ಅದು ಇದ್ದಲ್ಲಿ), ನಮೂದಿಸಿರುವ ಪಾವತಿಸಿದ ಏಕೀಕೃತ ತೆರಿಗೆಯ (ಒಪ್ಪಿಕೊಂಡ ಮೊತ್ತ ಮಾತ್ರ) ಪೂರೈಕೆಯ ಸ್ಥಳವಾರು ವಿವರಗಳು

ಪೂರೈಕೆಯ ಸ್ಥಳ (ರಾಜ್ಯ / ಕೇಂ.ಪ್ರ)ದ ಹೆಸರು	ತಗಾದೆ	ತೆರಿಗೆ	ಬಡ್ಡಿ	ದಂಡ	ಇತರೆ	ಒಟ್ಟು
1	2	3	4	5	6	7
	ಒಪ್ಪಿಕೊಂಡ ಮೊತ್ತ ಕೋಷ್ಟಕದಲ್ಲಿ, ಖಂಡ 15 (ನಮೂದು (ಎ))ರ ಉಪಖಂಡ (ಎ)".					

28. ನಮೂನೆ ಜಿಎಸ್‌ಟಿ ಎಪಿಎಲ್–05ರ ತಿದ್ದುಪಡಿ.– ಸದರಿ ನಿಯಮಗಳ ನಮೂನೆ ಜಿಎಸ್‌ಟಿ ಎಪಿಎಲ್–05ರಲ್ಲಿ. –

(ಎ) ಖಂಡ 14ರಲ್ಲಿ, –

(i) ಉಪಖಂಡ (ಎ)ನಲ್ಲಿ, ಕೋಷ್ಟಕದಲ್ಲಿ, "(ವ್ಯಾಜ್ಯದ ತೆರಿಗೆಯ ಶೇಕಡ 20%)" ಆವರಣಗಳು, ಸಂಖ್ಯೆಗಳು ಮತ್ತು ಪದಗಳಿಗಾಗಿ, "ಸಿಜಿಎಸ್‌ಟಿ ಮತ್ತು ಎಸ್‌ಜಿಎಸ್‌ಟಿ ಅಥವಾ ಉಪಕರಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ, ಆದರೆ ರೂ.50 ಕೋಟಿಯನ್ನು ಮೀರದ ಅಥವಾ ಐಜಿಎಸ್‌ಟಿಗೆ ಸಂಬಂಧಿಸಿದಂತೆ ರೂ.100 ಕೋಟಿಯನ್ನು ಮೀರದ ಮತ್ತು ಉಪಕರಕ್ಕೆ ಸಂಬಂಧಿಸಿದಂತೆ ರೂ.50 ಕೋಟಿ ಮೀರದ, ವ್ಯಾಜ್ಯದ ತೆರಿಗೆಯ ಅಥವಾ ಉಪಕರದ 20%" ಆವರಣಗಳು, ಸಂಖ್ಯೆಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) ಉಪಖಂಡ (ಬಿ)ಯಲ್ಲಿ, "ಮುಂಗಡ–ಠೇವಣಿ (ವ್ಯಾಜ್ಯದ ತೆರಿಗೆಯ ಶೇಕಡ 20%)" ಆವರಣಗಳು, ಪದಗಳು, ಸಂಖ್ಯೆಗಳು ಮತ್ತು ಅಕ್ಷರಗಳಿಗಾಗಿ, "ಮುಂಗಡ–ಠೇವಣಿ "ಸಿಜಿಎಸ್‌ಟಿ ಮತ್ತು ಎಸ್‌ಜಿಎಸ್‌ಟಿ ಅಥವಾ ಉಪಕರಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ, ಆದರೆ ರೂ.50 ಕೋಟಿಯನ್ನು ಮೀರದ ಅಥವಾ ಐಜಿಎಸ್‌ಟಿಗೆ ಸಂಬಂಧಿಸಿದಂತೆ ರೂ.100 ಕೋಟಿಯನ್ನು ಮೀರದ ಮತ್ತು ಉಪಕರಕ್ಕೆ ಸಂಬಂಧಿಸಿದಂತೆ ರೂ.50 ಕೋಟಿ ಮೀರದ, ವ್ಯಾಜ್ಯದ ತೆರಿಗೆಯ ಅಥವಾ ಉಪಕರದ 20%)" ಆವರಣಗಳು, ಪದಗಳು, ಸಂಖ್ಯೆಗಳು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು;

597

(ಬಿ) ಖಂಡ 14ರ ನಂತರ, ಈ ಕೆಳಗಿನದ್ದನ್ನು ಸೇರಿಸತಕ್ಕದ್ದು, ಅಂದರೆ:–

"15. ಕೋಷ್ಟಕದಲ್ಲಿ, ಖಂಡ 14 (ನಮೂದು (ಎ))ರ ಉಪಖಂಡ (ಎ)ನಲ್ಲಿ (ಅದು ಇದ್ದಲ್ಲಿ), ನಮೂದಿಸಿರುವ ಪಾವತಿಸಿದ ಏಕೀಕೃತ ತೆರಿಗೆಯ (ಒಪ್ಪಿಕೊಂಡ ಮೊತ್ತ ಮಾತ್ರ) ಪೂರೈಕೆಯ ಸ್ಥಳವಾರು ವಿವರಗಳು

ಪೂರೈಕೆಯ ಸ್ಥಳ (ರಾಜ್ಯ / ಕೇಂ.ಪ್ರ ದ ಹೆಸರು)	ತಗಾದೆ	ತೆರಿಗೆ	ಬಡ್ಡಿ	ದಂಡ	ಇತರೆ	ಒಟ್ಟು
1	2	3	4	5	6	7
	ಒಪ್ಪಿಕೊಂಡ ಮೊತ್ತ ಕೋಷ್ಟಕದಲ್ಲಿ, ಖಂಡ 14 (ನಮೂದು (ಎ))ರ ಉಪಖಂಡ (ಎ)".					

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಅವರ ಆದೇಶಾನುಸಾರ

ನೇತ್ರಪ್ರಭಾ ಎಂ.ಧಾಯಾಪುಲೆ
ಪ್ರಭಾರ ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

598

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಬಿ/2019)
ನಂ. ಆಇ 47 ಸಿಎಸ್ಎಲ್ 2017, ಬೆಂಗಳೂರು, ದಿನಾಂಕ 15.04.2019

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ 2017ರ (2017ರ ಕರ್ನಾಟಕ ಅಧಿನಿಯಮ 27), ಪ್ರಕರಣ 164 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಜಿಎಸ್ಟಿ ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017, ಇವುಗಳಿಗೆ ಮುಂದುವರಿದ ತಿದ್ದುಪಡಿ ತರಲು ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಅಂದರೆ:–

ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ:– (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಮೂರನೇಯ ತಿದ್ದುಪಡಿ) ನಿಯಮಗಳು, 2019, ಎಂದು ಕರೆಯಬಹುದು.

(2) ನಿಯಮ 5, 29.03.2019ರಿಂದ ಜಾರಿಗೆ ಬಂದಿದೆ ಎಂದು ಪರಿಭಾವಿಸತಕ್ಕದ್ದು ಮತ್ತು ಮಿಕ್ಕ ಎಲ್ಲಾ ನಿಯಮಗಳು 2019ರ ಏಪ್ರಿಲ್ 1ನೇ ದಿನದಿಂದ ಜಾರಿಗೆ ಬಂದಿವೆ ಎಂದು ಪರಿಭಾವಿಸತಕ್ಕದ್ದು.

2. ನಿಯಮ 41ರ ತಿದ್ದುಪಡಿ.– ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017 (ಇನ್ನು ಮುಂದೆ "ಸದರಿ ನಿಯಮಗಳು" ಎಂದು ಉಲ್ಲೇಖಿಸಲಾಗಿದೆ)ರಲ್ಲಿ, ನಿಯಮ 41ರಲ್ಲಿ, ಪರಂತುಕದ ನಂತರ, ಈ ಕೆಳಗಿನ ವಿವರಣೆಯನ್ನು ಸೇರಿಸತಕ್ಕದ್ದು, ಅಂದರೆ:–

"ವಿವರಣೆ:– ಈ ಉಪನಿಯಮದ ಉದ್ದೇಶಗಳಿಗಾಗಿ, "ಆಸ್ತಿಗಳ ಮೌಲ್ಯ" ಅಂದರೆ, ಅದರ ಹೂಡುವಳಿ ತೆರಿಗೆಯ ಜಮೆಯನ್ನು ಉಪಯೋಗಿಸಿರಲಿ ಅಥವಾ ಇಲ್ಲದಿರಲಿ, ವ್ಯವಹಾರದ ಎಲ್ಲಾ ಆಸ್ತಿಗಳ ಮೌಲ್ಯ ಎಂದು ಈ ಮೂಲಕ ಸ್ಪಷ್ಟೀಕರಿಸಿದೆ."

3. ನಿಯಮ 42ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 42ರಲ್ಲಿ, –

(1) ಉಪನಿಯಮ (1)ರಲ್ಲಿ, –

(ಎ) ಖಂಡ (ಎಫ್)ನಲ್ಲಿ, ಈ ಕೆಳಗಿನ ವಿವರಣೆಯನ್ನು ಸೇರಿಸತಕ್ಕದ್ದು, ಅಂದರೆ:–

"ವಿವರಣೆ: ಈ ಖಂಡದ ಉದ್ದೇಶಗಳಿಗಾಗಿ, ಸದರಿ ಅಧಿನಿಯಮದ ಅನುಸೂಚಿ II ರ ಖಂಡಿಕೆ 5ರ ಖಂಡ (ಬಿ)ಯಲ್ಲಿ ಸೇವೆಗಳ ಪೂರೈಕೆಯ ಸಂದರ್ಭದಲ್ಲಿ, ಮುಕ್ತಾಯದ ಪ್ರಮಾಣಪತ್ರದ ನೀಡಿಕೆಯ ಅಥವಾ ಯೋಜನೆಯ ಪ್ರಥಮ ಅನುಭೋಗದ, ಇವುಗಳಲ್ಲಿ ಯಾವುದು ಮೊದಲೋ ಅದರ, ದಿನಾಂಕದಂದು ಅಥವಾ ಅದಕ್ಕಿಂತ ಪೂರ್ವದಲ್ಲಿ ಕಾದಿರಿಸಿದ, ಅಥವಾ ಸದರಿ ದಿನಾಂಕದಲ್ಲಿ ಕಾದಿರಿಸಿಲ್ಲವಾದ, ಹೂಡುವಳಿಗಳು ಮತ್ತು ಹೂಡುವಳಿ ಸೇವೆಗಳು ಅಪಾರ್ಟ್ಮೆಂಟ್ಗಳ ನಿರ್ಮಾಣಕ್ಕಾಗಿ ಸಾಮಾನ್ಯವಾಗಿ ಬಳಸಲಾಗುವುದರಿಂದ T_4 ನ ಮೌಲ್ಯವು ನಿಮಾಣದ ಹಂತದಲ್ಲಿ ಶೂನ್ಯವಾಗಿರುತ್ತದೆ.";

(ಬಿ) ಖಂಡ (ಜಿ)ಯಲ್ಲಿ, "ನಮೂನೆ ಜಿಎಸ್ಟಿಆರ್–2" ಪದ, ಅಕ್ಷರಗಳು ಮತ್ತು ಸಂಖ್ಯೆಯ ನಂತರ, "ಮತ್ತು ನಮೂನೆ ಜಿಎಸ್ಟಿಆರ್–3ಬಿಯಲ್ಲಿ ಸಂಕ್ಷೇಪ ಮಟ್ಟದಲ್ಲಿ" ಪದಗಳು, ಅಕ್ಷರಗಳು ಮತ್ತು

599

ಸಂಖ್ಯೆಯನ್ನು ಸೇರಿಸತಕ್ಕದ್ದು;

(ಸಿ) ಖಂಡ (ಹೆಚ್)ನಲ್ಲಿ, –

(i) "(ಜಿ)" ಆವರಣಗಳು ಮತ್ತು ಅಕ್ಷರಕ್ಕಾಗಿ, "(ಎಫ್)" ಆವರಣಗಳು ಮತ್ತು ಅಕ್ಷರವನ್ನು ಪ್ರತಿಯೋಜಿಸತಕ್ಕದ್ದು;

(ಡಿ) ಖಂಡ (ಐ)ನಲ್ಲಿ, –

(i) ಪರಂತುಕದ ಮುನ್ನ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:–

"ಪರಂತು, ಸದರಿ ಅಧಿನಿಯಮದ ಅನುಸೂಚಿ II ರ ಖಂಡಿಕೆ 5ರ ಖಂಡ (ಬಿ)ಯಲ್ಲಿ ಸೇವೆಗಳ ಪೂರೈಕೆಯ ಸಂದರ್ಭದಲ್ಲಿ, ಒಂದು ತೆರಿಗೆ ಅವಧಿಗಾಗಿ 'E/F' ನ ಮೌಲ್ಯವನ್ನು ಪ್ರತಿ ಯೋಜನೆಗೆ ಪ್ರತ್ಯೇಕವಾಗಿ, E ಮತ್ತು F ನ ಮೌಲ್ಯಗಳನ್ನು ಈ ಕೆಳಗಿನಂತೆ ತೆಗೆದುಕೊಂಡು, ಲೆಕ್ಕಹಾಕತಕ್ಕದ್ದು:–

E = ಯಾವುದರ ನಿರ್ಮಾಣವನ್ನು ತೆರಿಗೆಯಿಂದ ವಿನಾಯಿತಗೊಂಡಿದೆಯೋ ಸೇರಿಸಿ ಯಾವುದರ ನಿರ್ಮಾಣವನ್ನು ತೆರಿಗೆಯಿಂದ ವಿನಾಯಿತಗೊಂಡಿರುವುದಿಲ್ಲವೋ, ಆದರೆ ಯಾವುದನ್ನು ಮುಕ್ತಾಯದ ಪ್ರಮಾಣಪತ್ರದ ನೀಡಿಕೆ ಅಥವಾ ಯೋಜನೆಯ ಪ್ರಥಮ ಅನುಭೋಗ, ಇವುಗಳಲ್ಲಿ ಯಾವುದು ಮೊದಲೋ, ಅದರ ನಂತರ, ಪ್ರಮೋಟರ್‌ನಿಂದ ಮಾರಾಟಕ್ಕಾಗಿ ಎಂದು ಗುರುತಿಸಲಾದವುಗಳನ್ನು ಹೊರತುಪಡಿಸಿ, ಅಪಾರ್ಟ್‌ಮೆಂಟುಗಳ ಸಮಗ್ರ ಕಾರ್ಪೆಟ್ ಏರಿಯಾ.

F= ಯೋಜನೆಯಲ್ಲಿನ ಅಪಾರ್ಟ್‌ಮೆಂಟುಗಳ ಸಮಗ್ರ ಕಾರ್ಪೆಟ್ ಏರಿಯಾ;

ವಿವರಣೆ 1: ಯೋಜನೆಯ ಮುಕ್ತಾಯದ ಪ್ರಮಾಣಪತ್ರದ ನೀಡಿಕೆಯು ಅಥವಾ ಯೋಜನೆಯ ಪ್ರಥಮ ಅನುಭೋಗವು ಆದಂತಹ ತೆರಿಗೆ ಅವಧಿಯಲ್ಲಿ E ನ ಮೌಲ್ಯವು, ಮುಕ್ತಾಯ ಪ್ರಮಾಣಪತ್ರದ ನೀಡಿಕೆಯ ಅಥವಾ ಯೋಜನೆಯ ಪ್ರಥಮ ಅನುಭೋಗದ, ಇವುಗಳಲ್ಲಿ ಯಾವುದು ಮೊದಲೋ ಅದರ ದಿನಾಂಕದ ತನಕ ಕಾದಿರಿಸಿಲ್ಲವಾದ ಅಪಾರ್ಟ್‌ಮೆಂಟುಗಳ ಸಮಗ್ರ ಕಾರ್ಪೆಟ್ ಏರಿಯಾ;

ವಿವರಣೆ 2: ಜೂನ್ 29, 2017ರ ಕರ್ನಾಟಕ ವಿಶೇಷ ರಾಜ್ಯಪತ್ರ, ಭಾಗ–IVA, ಸಂ. 601ರಲ್ಲಿ ಪ್ರಕಟವಾದ ಅಧಿಸೂಚನೆ (11/2017) ಸಂ.ಆಇ 48 ಸಿಎಸ್‌ಎಲ್ 2017, ದಿನಾಂಕ 29ನೇ ಜೂನ್, 2017ರಲ್ಲಿ, ಕಾಲಕಾಲಕ್ಕೆ ಮಾಡಲಾದ ತಿದ್ದುಪಡಿಯೊಂದಿಗೆ, ಕೋಷ್ಟಕದ ಕ್ರಮಸಂಖ್ಯೆ 3ರ, ನಮೂದುಗಳು (i), (ia), (ib), (ic) ಅಥವಾ (id)ಗಳಿಗಾಗಿ ನಿರ್ದಿಷ್ಟಪಡಿಸಿದ ದರಗಳಲ್ಲಿ ಯಾವುದರ ನಿರ್ಮಾಣದ ಮೇಲೆ ತೆರಿಗೆಯನ್ನು ತುಂಬಿದೆಯೋ ಅಥವಾ ತುಂಬಬೇಕಾಗಿದೆಯೋ ಆ ಅಪಾರ್ಟ್‌ಮೆಂಟುಗಳ ಕಾರ್ಪೆಟ್ ಏರಿಯಾವನ್ನು, ಜೂನ್ 29, 2017ರ ಕರ್ನಾಟಕ ವಿಶೇಷ ರಾಜ್ಯಪತ್ರ, ಭಾಗ–IVA, ಸಂ. 601ರಲ್ಲಿ ಪ್ರಕಟವಾದ ಅಧಿಸೂಚನೆ (11/2017) ಸಂ.ಆಇ 48 ಸಿಎಸ್‌ಎಲ್ 2017, ದಿನಾಂಕ 29ನೇ ಜೂನ್, 2017ರ, ಕಾಲಕಾಲಕ್ಕೆ ಮಾಡಲಾದ ತಿದ್ದುಪಡಿಯೊಂದಿಗೆ, ಖಂಡಿಕೆ 4ರಲ್ಲಿ, ವಿವರಣೆ (iv)ಯ ಹಿನ್ನೆಲೆಯಲ್ಲಿ 'E' ನ ಮೌಲ್ಯವನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು.".

(ii) ಪರಂತುಕದಲ್ಲಿ, "ಪರಂತು" ಪದಕ್ಕಾಗಿ, "ಮತ್ತು ಪರಂತು" ಪದಗಳನ್ನು

600

ಪ್ರತಿಯೋಜಿಸತಕ್ಕದ್ದು:

(ಇ) ಖಂಡ (ಎಲ್)ಗಾಗಿ, ಈ ಕೆಳಕಂಡ ಖಂಡವನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"(ಎಲ್) ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಕೇಂದ್ರಾಡಳಿತ ಪ್ರದೇಶ ತೆರಿಗೆ ಮತ್ತು ಏಕೀಕೃತ ತೆರಿಗೆಗಳ ಹೂಡುವಳಿ ತೆರಿಗೆ ಜಮೆಗಾಗಿ 'C3', 'D1' ಮತ್ತು 'D2' ಮೊತ್ತಗಳನ್ನು ಪ್ರತ್ಯೇಕವಾಗಿ ಲೆಕ್ಕಹಾಕತಕ್ಕದ್ದು ಮತ್ತು ನಮೂನೆ ಜಿಎಸ್‌ಟಿಆರ್–3ಬಿಯಲ್ಲಿ ಅಥವಾ ನಮೂನೆ ಡಿಆರ್‌ಸಿ–03ರ ಮೂಲಕ ಘೋಷಿಸತಕ್ಕದ್ದು;";

(ಎಫ್) ಖಂಡ "ಎಂ"ನಲ್ಲಿ, "ನೋಂದಾಯಿತ ವ್ಯಕ್ತಿಯ ಹೊರಮುಖ ತೆರಿಗೆ ಬಾಧ್ಯತೆಗೆ ಸೇರಿಸತಕ್ಕದ್ದು" ಪದಗಳಿಗಾಗಿ, "ನಮೂನೆ ಜಿಎಸ್‌ಟಿಆರ್–3ಬಿಯಲ್ಲಿ ಅಥವಾ ನಮೂನೆ ಡಿಆರ್‌ಸಿ–03ರ ಮೂಲಕ ನೋಂದಾಯಿತ ವ್ಯಕ್ತಿಯು ಹಿಂದಿರುಗಿಸುವುದು" ಪದಗಳನ್ನು ಪ್ರತಿಯೋಜಿಸತಕ್ಕದ್ದು;

(2) ಉಪನಿಯಮ (2)ರಲ್ಲಿ, "ಹೂಡುವಳಿ ತೆರಿಗೆ ಜಮೆ" ಪದಗಳಿಗಾಗಿ, "ಸದರಿ ಅಧಿನಿಯಮದ ಅನುಸೂಚಿ IIರ ಖಂಡಿಕೆ 5ರ ಖಂಡ (ಬಿ)ಯಲ್ಲಿ ಸೇವೆಗಳ ಪೂರೈಕೆಯ ಸಂದರ್ಭವನ್ನು ಹೊರತುಪಡಿಸಿದ, ಹೂಡುವಳಿ ತೆರಿಗೆ ಜಮೆ" ಪದಗಳು, ಅಕ್ಷರಗಳು, ಆವರಣಗಳು ಮತ್ತು ಸಂಖ್ಯೆಗಳನ್ನು ಪ್ರತಿಯೋಜಿಸತಕ್ಕದ್ದು;

(3) ಉಪನಿಯಮ (2)ರ ಖಂಡ (ಎ)ನಲ್ಲಿ "ನೋಂದಾಯಿತ ವ್ಯಕ್ತಿಯ ಹೊರಮುಖ ತೆರಿಗೆ ಬಾಧ್ಯತೆಗೆ ಸೇರಿಸತಕ್ಕದ್ದು" ಪದಗಳಿಗಾಗಿ, "ನಮೂನೆ ಜಿಎಸ್‌ಟಿಆರ್–3ಬಿಯಲ್ಲಿ ಅಥವಾ ನಮೂನೆ ಡಿಆರ್‌ಸಿ–03ರ ಮೂಲಕ ನೋಂದಾಯಿತ ವ್ಯಕ್ತಿಯು ಹಿಂದಿರುಗಿಸುವುದು" ಪದಗಳನ್ನು ಪ್ರತಿಯೋಜಿಸತಕ್ಕದ್ದು;

(4) ಉಪನಿಯಮ (2)ರ ನಂತರ, ಈ ಕೆಳಗಿನದ್ದನ್ನು ಸೇರಿಸತಕ್ಕದ್ದು, ಅಂದರೆ:–

"(3) ಸದರಿ ಅಧಿನಿಯಮದ ಅನುಸೂಚಿ II ರ ಖಂಡಿಕೆ 5ರ ಖಂಡ (ಬಿ)ಯಲ್ಲಿ ಸೇವೆಗಳ ಪೂರೈಕೆಯ ಸಂದರ್ಭದಲ್ಲಿ, ಕರ್ನಾಟಕ ವಿಶೇಷ ರಾಜ್ಯಪತ್ರ, ಭಾಗ–IVA, ಸಂ.601, ದಿನಾಂಕ 2017ರ ಜೂನ್ 29ರಲ್ಲಿ ಪ್ರಕಟವಾದ, ತಿದ್ದುಪಡಿಯಾದಂತೆ ದಿನಾಂಕ 2017ರ ಜೂನ್ 29ರ ಅಧಿಸೂಚನೆ (11/2017) ಸಂ. ಆಇ 48 ಸಿಎಸ್‌ಎಲ್ 2017ರ ಅನ್ವಯ, ದಿನಾಂಕ 2019ರ ಏಪ್ರಿಲ್ 1ರಂದು ದರಗಳ ಬದಲಾವಣೆಯ ಫಲವಾಗಿ ಹೂಡುವಳಿ ತೆರಿಗೆಯ ಜಮೆಯ ಸ್ಥಿತ್ಯಂತರವನ್ನು ಒಳಗಾಗದಿದ್ದ ಅಥವಾ ಒಳಗಾಗುವ ಅಗತ್ಯವಿಲ್ಲದ, ಪ್ರತಿಯೊಂದು ಚಾಲ್ತಿಯಲ್ಲಿರುವ ಯೋಜನೆಗಾಗಿ ಅಥವಾ 2019ರ ಏಪ್ರಿಲ್ 1ರಂದು ಅಥವಾ ಅದರ ನಂತರ ಪ್ರಾರಂಭವಾದ ಯೋಜನೆಗಾಗಿ, ಯೋಜನೆಯ ಪ್ರಾರಂಭ ಅಥವಾ ಜುಲೈ 1, 2017, ಇವುಗಳಲ್ಲಿ ಯಾವುದು ನಂತರವೋ ಅಂದಿನಿಂದ, ಯೋಜನೆಯ ಮುಕ್ತಾಯ ಅಥವಾ ಪ್ರಥಮ ಅನುಭೋಗ, ಇವುಗಳಲ್ಲಿ ಯಾವುದು ನಂತರವೋ ಅಲ್ಲಿಯವರೆಗೆ, ಯೋಜನೆಯ ಮುಕ್ತಾಯದ ಪ್ರಮಾಣಪತ್ರ ನೀಡಲಾದ ಅಥವಾ ಪ್ರಥಮ ಅನುಭೋಗ ಆದಂತಹ ಹಣಕಾಸು ವರ್ಷದ ಮುಕ್ತಾಯದ ನಂತರದ ಸೆಪ್ಟಂಬರ್ ತಿಂಗಳ ರಿಟರ್ನ್‌ಅನ್ನು ಸಲ್ಲಿಸಲು ಕಡೆಯ ದಿನಾಂಕದ ಮುನ್ನ, ಸದರಿ ಉಪನಿಯಮದಲ್ಲಿ ನಿಯಮಿಸಲಾದ ರೀತಿಯಲ್ಲಿ E ಮತ್ತು F ನ ಮೌಲ್ಯಗಳನ್ನು ಈ ಕೆಳಗೆ ತಿಳಿಸಿದಂತೆ ತೆಗೆದುಕೊಂಡು E/Fನ ಮೌಲ್ಯವನ್ನು ಲೆಕ್ಕಹಾಕತಕ್ಕದ್ದು ಮತ್ತು ಉಪನಿಯಮ (1)ರ ಅಡಿಯಲ್ಲಿ ನಿರ್ಧರಿಸಲಾದ ಹೂಡುವಳಿ ತೆರಿಗೆಯನ್ನು ಅಂತಿಮವಾಗಿ ಲೆಕ್ಕಹಾಕತಕ್ಕದ್ದು:

E = ಯಾವುದರ ನಿರ್ಮಾಣವನ್ನು ತೆರಿಗೆಯಿಂದ ವಿನಾಯಿತಗೊಂಡಿದೆಯೋ ಸೇರಿಸಿ ಯಾವುದರ ನಿರ್ಮಾಣವನ್ನು ತೆರಿಗೆಯಿಂದ ವಿನಾಯಿತಗೊಂಡಿರುವುದಿಲ್ಲವೋ, ಆದರೆ ಯಾವುದನ್ನು ಮುಕ್ತಾಯದ

601

ಪ್ರಮಾಣಪತ್ರದ ನೀಡಿಕೆಯ ಅಥವಾ ಯೋಜನೆಯ ಪ್ರಥಮ ಅನುಭೋಗದ, ಇವುಗಳಲ್ಲಿ ಯಾವುದು ಮೊದಲೋ, ಅದರ ದಿನಾಂಕದ ನಂತರ ಪ್ರಮೋಟರ್‌ನಿಂದ ಮಾರಾಟಕ್ಕಾಗಿ ಎಂದು ಗುರುತಿಸಲಾದವುಗಳನ್ನು ಹೊರತುಪಡಿಸಿ, ಅಪಾರ್ಟ್‌ಮೆಂಟುಗಳ ಒಟ್ಟು ಕಾರ್ಪೆಟ್ ಏರಿಯಾ.

F= ಯೋಜನೆಯಲ್ಲಿನ ಅಪಾರ್ಟ್‌ಮೆಂಟುಗಳ ಸಮಗ್ರ ಕಾರ್ಪೆಟ್ ಏರಿಯಾ;

ಮತ್ತು

(ಎ) 'D1' ಮತ್ತು 'D2'ಗೆ ಸಂಬಂಧಿಸಿದಂತೆ ಲೆಕ್ಕಹಾಕಲಾದ ಮೊತ್ತಗಳ ಒಟ್ಟು ಮೊತ್ತವನ್ನು 'D1' ಮತ್ತು 'D2'ಗೆ ಸಂಬಂಧಿಸಿದ ಉಪನಿಯಮ(1)ರ ಅಡಿಯಲ್ಲಿ ನಿರ್ಧರಿಸಲಾದ ಮೊತ್ತಗಳ ಒಟ್ಟು ಮೊತ್ತವನ್ನು ಮೀರಿದರೆ, ಅಂಥ ಹೆಚ್ಚುವರಿಯನ್ನು, ನೋಂದಯಿತ ವ್ಯಕ್ತಿಯು, ಯೋಜನೆಯ ಮುಕ್ತಾಯದ ಪ್ರಮಾಣಪತ್ರವನ್ನು ನೀಡಲಾದ ಅಥವಾ ಯೋಜನೆಯ ಪ್ರಥಮ ಅನುಭೋಗ ಆದ ಹಣಕಾಸು ವರ್ಷದ ಮುಕ್ತಾಯದ ನಂತರದ ಸೆಪ್ಟಂಬರ್ ತಿಂಗಳ ನಂತರದಲ್ಲದ ತಿಂಗಳಿನಲ್ಲಿ ನಮೂನೆ ಜಿಎಸ್‌ಟಿಆರ್–3ಬಿನಲ್ಲಿ ಅಥವಾ ನಮೂನೆ ಡಿಆರ್‌ಸಿ–03 ಮೂಲಕ, ಹಿಂಪಡೆಯತಕ್ಕದ್ದು ಮತ್ತು ಸದರಿ ವ್ಯಕ್ತಿಯು ಅಂಥ ಹೆಚ್ಚುವರಿ ಮೊತ್ತದ ಮೇಲೆ ಪ್ರಕರಣ 50ರ ಉಪಪ್ರಕರಣ (1)ರಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ನಂತರದ ಹಣಕಾಸು ವರ್ಷದ ಏಪ್ರಿಲ್ ಮೊದಲ ದಿನದಿಂದ ಪ್ರಾರಂಭಗೊಂಡು ಪಾವತಿಯ ದಿನಾಂಕದವರೆಗಿನ ಅವಧಿಗಾಗಿ ಬಡ್ಡಿಯನ್ನು ಪಾವತಿಸಲು ಬಾಧ್ಯನಾಗಿರತಕ್ಕದ್ದು; ಅಥವಾ

(ಬಿ) 'D1' ಮತ್ತು 'D2'ಗೆ ಸಂಬಂಧಿಸಿದಂತೆ ಲೆಕ್ಕಹಾಕಲಾದ ಮೊತ್ತಗಳ ಒಟ್ಟು ಮೊತ್ತವನ್ನು 'D1' ಮತ್ತು 'D2'ಗೆ ಸಂಬಂಧಿಸಿದ ಉಪನಿಯಮ(1)ರ ಅಡಿಯಲ್ಲಿ ನಿರ್ಧರಿಸಲಾದ ಮೊತ್ತಗಳ ಒಟ್ಟು ಮೊತ್ತವನ್ನು ಮೀರಿದರೆ, ಅಂಥ ಹೆಚ್ಚುವರಿಯನ್ನು, ನೋಂದಯಿತ ವ್ಯಕ್ತಿಯು, ಯೋಜನೆಯ ಮುಕ್ತಾಯದ ಪ್ರಮಾಣಪತ್ರವನ್ನು ನೀಡಲಾದ ಅಥವಾ ಯೋಜನೆಯ ಪ್ರಥಮ ಅನುಭೋಗ ಆದ ಹಣಕಾಸು ವರ್ಷದ ಮುಕ್ತಾಯದ ನಂತರದ ಸೆಪ್ಟಂಬರ್ ತಿಂಗಳ ನಂತರದಲ್ಲದ ತಿಂಗಳಿನಲ್ಲಿ, ಜಮೆಯಾಗಿ ಕ್ಲೇಮು ಮಾಡಬಹುದು.

(4) ಸದರಿ ಅಧಿನಿಯಮದ ಅನುಸೂಚಿ IIರ ಖಂಡಿಕೆ 5ರ ಖಂಡ (ಬಿ)ಯಲ್ಲಿನ ಸೇವೆಗಳ ಪೂರೈಕೆಯ ಸಂದರ್ಭದಲ್ಲಿ, ಕರ್ನಾಟಕ ವಿಶೇಷ ರಾಜ್ಯಪತ್ರ, ಭಾಗ–IVA, ಸಂ.601, ದಿನಾಂಕ 2017ರ ಜೂನ್ 29ರಲ್ಲಿ ಪ್ರಕಟವಾದ, ತಿದ್ದುಪಡಿಯಾದಂತೆ ದಿನಾಂಕ 2017ರ ಜೂನ್ 29ರ ಅಧಿಸೂಚನೆ (11/2017) ಸಂ. ಆಇ 48 ಸಿಎಸ್‌ಎಲ್ 2017ರ ಅನ್ವಯ, ದಿನಾಂಕ 2019ರ ಏಪ್ರಿಲ್ 1ರಂದು ದರಗಳ ಬದಲಾವಣೆಯ ಫಲವಾಗಿ ಹೂಡುವಳಿ ತೆರಿಗೆಯ ಜಮೆಯ ಸ್ಥಿತ್ಯಂತರವನ್ನು ಅನುಭವಿಸಿದ, ವಾಸಯೋಗ್ಯ ಸ್ಥಿರಾಸ್ತಿ ಯೋಜನೆ (ಆರ್‌ಆರ್‌ಇಪಿ)ಯಲ್ಲದ ಪ್ರತಿಯೊಂದು ಯೋಜನೆಯಲ್ಲಿನ ವಾಣಿಜ್ಯ ಭಾಗಕ್ಕೆ, ಯೋಜನೆಯ ಪ್ರಾರಂಭ ಅಥವಾ ಜುಲೈ 1, 2017, ಇವುಗಳಲ್ಲಿ ಯಾವುದು ನಂತರವೋ ಅಂದಿನಿಂದ, ಯೋಜನೆಯ ಮುಕ್ತಾಯ ಅಥವಾ ಪ್ರಥಮ ಅನುಭೋಗ, ಇವುಗಳಲ್ಲಿ ಯಾವುದು ನಂತರವೋ ಅಲ್ಲಿಯವರೆಗೆ, ಯೋಜನೆಯ ಮುಕ್ತಾಯದ ಪ್ರಮಾಣಪತ್ರ ನೀಡಲಾದ ಅಥವಾ ಪ್ರಥಮ ಅನುಭೋಗ ಆದಂತಹ ಹಣಕಾಸು ವರ್ಷದ ಮುಕ್ತಾಯದ ನಂತರದ ಸೆಪ್ಟಂಬರ್ ತಿಂಗಳ ರಿಟರ್ನ್‌ಅನ್ನು ಸಲ್ಲಿಸಲು ಕಡೆಯ ದಿನಾಂಕದ ಮುನ್ನ, ಉಪನಿಯಮ (1)ರ ಅಡಿಯಲ್ಲಿ ನಿರ್ಧರಿಸಲಾದ ಹೂಡುವಳಿ ತೆರಿಗೆಯನ್ನು ಅಂತಿಮವಾಗಿ ಲೆಕ್ಕಹಾಕತಕ್ಕದ್ದು.

(ಎ) ಯೋಜನೆಯಲ್ಲಿನ ವಾಣಿಜ್ಯ ಭಾಗದ ಮೇಲಿನ ಸಾಮೂಹಿಕ ಜಮೆಯ ಒಟ್ಟು ಮೊತ್ತ ($C3_{aggregate\_comm}$)ವನ್ನು ಈ ಕೆಳಕಂಡಂತೆ ಲೆಕ್ಕಹಾಕತಕ್ಕದ್ದು,

602

($C3_{aggregate\_comm}$)= [2017ರ ಜುಲೈ 1ರಿಂದ 2019ರ ಮಾರ್ಚ್ 31ರವರೆಗಿನ ತೆರಿಗೆ ಅವಧಿಗಳಿಗೆ ಉಪನಿಯಮ (1)ರ ಅಡಿಯಲ್ಲಿ ನಿರ್ಧರಿಸಿದ C3 ಮೊತ್ತಗಳ ಒಟ್ಟು ಮೊತ್ತ X (A_C/ A_T)] + [2019ರ ಏಪ್ರಿಲ್ 1ರಿಂದ ಪ್ರಾರಂಭವಾಗುವ ಯೋಜನೆಯ ಮುಕ್ತಾಯದ ಅಥವಾ ಪ್ರಥಮ ಅನುಭೋಗದ ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗಿನ ತೆರಿಗೆ ಅವಧಿಗಳಿಗಾಗಿ ಉಪನಿಯಮ (1)ರಡಿಯಲ್ಲಿ ನಿರ್ಧರಿಸಲಾದ C3 ಮೊತ್ತಗಳ ಒಟ್ಟು ಮೊತ್ತ]

ಇಲ್ಲಿ,

A_C = ಯೋಜನೆಯಲ್ಲಿನ ವಾಣಿಜ್ಯ ಅಪಾರ್ಟ್‌ಮೆಂಟುಗಳ ಒಟ್ಟು ಕಾರ್ಪೆಟ್ ಏರಿಯಾ

A_T = ಯೋಜನೆಯಲ್ಲಿನ ಎಲ್ಲಾ ಅಪಾರ್ಟ್‌ಮೆಂಟುಗಳ ಒಟ್ಟು ಕಾರ್ಪೆಟ್ ಏರಿಯಾ

(ಬಿ) ಯೋಜನೆಯಲ್ಲಿನ ವಾಣಿಜ್ಯ ಭಾಗದ ಮೇಲಿನ ಅಂತಿಮ ಅರ್ಹ ಸಾಮೂಹಿಕ ಜಮೆಯ ಒಟ್ಟು ಮೊತ್ತ ($C3_{final\_comm}$)ವನ್ನು ಈ ಕೆಳಕಂಡಂತೆ ಲೆಕ್ಕಹಾಕತಕ್ಕದ್ದು,

$C3_{final\_comm} = C3_{aggregate\_comm}$ x (E/F)

ಇಲ್ಲಿ,

E = ಯೋಜನೆಯ ಮುಕ್ತಾಯ ಪ್ರಮಾಣ ಪತ್ರದ ನೀಡಿಕೆಯ ಅಥವಾ ಪ್ರಥಮ ಅನುಭೋಗದ (ಇವುಗಳಲ್ಲಿ ಯಾವುದು ಮೊದಲೋ ಅದು) ದಿನಾಂಕದವರೆಗೆ ಕಾಯ್ದಿರಿಸದ ವಾಣಿಜ್ಯ ಅಪಾರ್ಟ್‌ಮೆಂಟುಗಳ ಒಟ್ಟು ಕಾರ್ಪೆಟ್ ಏರಿಯಾ.

F = A_C = ಯೋಜನೆಯಲ್ಲಿನ ವಾಣಿಜ್ಯ ಅಪಾರ್ಟ್‌ಮೆಂಟುಗಳ ಒಟ್ಟು ಕಾರ್ಪೆಟ್ ಏರಿಯಾ.

(ಸಿ) $C3_{aggregate\_comm}$ ಯು $C3_{final_comm}$ಗಿಂತಲೂ ಹೆಚ್ಚಾದಲ್ಲಿ, ಅಂಥ ಹೆಚ್ಚುವರಿಯನ್ನು ನೋಂದಾಯಿತ ವ್ಯಕ್ತಿಯು, ಯೋಜನೆಯ ಮುಕ್ತಾಯದ ಪ್ರಮಾಣಪತ್ರವನ್ನು ನೀಡಲಾದ ಅಥವಾ ಯೋಜನೆಯ ಪ್ರಥಮ ಅನುಭೋಗ ಆದ ಹಣಕಾಸು ವರ್ಷದ ಮುಕ್ತಾಯದ ನಂತರದ ಸೆಪ್ಟಂಬರ್ ತಿಂಗಳ ನಂತರದಲ್ಲದ ತಿಂಗಳಿನಲ್ಲಿ ನಮೂನೆ ಜಿಎಸ್‌ಟಿಆರ್–3ಬಿನಲ್ಲಿ ಅಥವಾ ನಮೂನೆ ಡಿಆರ್‌ಸಿ–03 ಮೂಲಕ, ಹಿಂಪಡೆಯತಕ್ಕದ್ದು ಮತ್ತು ಸದರಿ ವ್ಯಕ್ತಿಯು ಅಂಥ ಹೆಚ್ಚುವರಿ ಮೊತ್ತದ ಮೇಲೆ ಪ್ರಕರಣ 50ರ ಉಪಪ್ರಕರಣ (1)ರಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ನಂತರದ ಹಣಕಾಸು ವರ್ಷದ ಏಪ್ರಿಲ್ ಮೊದಲ ದಿನದಿಂದ ಪ್ರಾರಂಭಗೊಂಡು ಪಾವತಿಯ ದಿನಾಂಕದವರೆಗಿನ ಅವಧಿಗಾಗಿ ಬಡ್ಡಿಯನ್ನು ಪಾವತಿಸಲು ಬಾಧ್ಯನಾಗಿರತಕ್ಕದ್ದು;

(ಡಿ) $C3_{final\_comm}$ ಯು $C3_{aggregate\_comm}$ ಗಿಂತಲೂ ಹೆಚ್ಚಾದಲ್ಲಿ, ಅಂಥ ಹೆಚ್ಚುವರಿಯನ್ನು, ನೋಂದಾಯಿತ ವ್ಯಕ್ತಿಯು, ಯೋಜನೆಯ ಮುಕ್ತಾಯದ ಪ್ರಮಾಣಪತ್ರವನ್ನು ನೀಡಲಾದ ಅಥವಾ ಯೋಜನೆಯ ಪ್ರಥಮ ಅನುಭೋಗ ಆದ ಹಣಕಾಸು ವರ್ಷದ ಮುಕ್ತಾಯದ

603

ನಂತರದ ಸೆಪ್ಟಂಬರ್ ತಿಂಗಳ ನಂತರದಲ್ಲದ ತಿಂಗಳಿನಲ್ಲಿ, ಜಮೆಯಾಗಿ ಕ್ಲೇಮು ಮಾಡಬಹುದು.

(5) ಕರ್ನಾಟಕ ವಿಶೇಷ ರಾಜ್ಯಪತ್ರ, ಭಾಗ–IVA, ಸಂ.601, ದಿನಾಂಕ 2017ರ ಜೂನ್ 2017ರಲ್ಲಿ ಪ್ರಕಟವಾದ, ತಿದ್ದುಪಡಿಯಾದಂತೆ ದಿನಾಂಕ 2017ರ ಜೂನ್ 29ರ ಅಧಿಸೂಚನೆ (11/2017) ಸಂ. ಆಇ 48 ಸಿಎಸ್ಎಲ್ 2017ರ ಅನ್ವಯ, ದಿನಾಂಕ 2019ರ ಏಪ್ರಿಲ್ 1ರಂದು ದರಗಳ ಬದಲಾವಣೆಯ ಫಲವಾಗಿ ಹೂಡುವಳಿ ತೆರಿಗೆಯ ಜಮೆಯ ಸ್ಥಿತ್ಯಂತರವನ್ನು ಅನುಭವಿಸಿದ, ಒಂದು ಆರ್ಆರ್ಇಪಿಯ ಮುಕ್ತಾಯ ಅಥವಾ ಪ್ರಥಮ ಅನುಭೋಗದ ಮೇಲೆ ಅಂತಿಮವಾಗಿ ಉಪನಿಯಮ (1)ರ ಅಡಿಯಲ್ಲಿ ಹೂಡುವಳಿ ತೆರಿಗೆಯನ್ನು ನಿರ್ಧರಿಸುವ ಅವಶ್ಯಕವಿರತಕ್ಕದ್ದಲ್ಲ.

(6) ಒಂದಕ್ಕಿಂತ ಹೆಚ್ಚಾದ ಯೋಜನೆಗಳಿಗಾಗಿ ಯಾವುದೇ ಹೂಡುವಳಿಯನ್ನು ಅಥವಾ ಹೂಡುವಳಿ ಸೇವೆಯನ್ನು ಬಳಸಲಾಗಿದ್ದರೆ, ಅಂಥ ಹೂಡುವಳಿ ಅಥವಾ ಹೂಡುವಳಿ ಸೇವೆಗೆ ಸಂಬಂಧಿಸಿದ ಹೂಡುವಳಿ ತೆರಿಗೆ ಜಮೆಯನ್ನು ಪ್ರತಿಯೊಂದು ಯೋಜನೆಗೆ ನ್ಯಾಯೋಚಿತ ರೀತಿಯಲ್ಲಿ ಹಂಚಿಕೆಯಾಗತಕ್ಕದ್ದು ಮತ್ತು ಪ್ರತಿಯೊಂದು ಯೋಜನೆಗೆ ಸಂಬಂಧಿಸಿದ ಜಮೆಯ ವಾಪಸಾತಿಯನ್ನು ಉಪನಿಯಮ (3)ರ ಪ್ರಕಾರ ಮಾಡತಕ್ಕದ್ದು.".

4. ನಿಯಮ 43ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 43ರಲ್ಲಿ, –

(i) ಉಪನಿಯಮ (1)ರಲ್ಲಿ, –

(ಎ) ಖಂಡ (ಎ)ನಲ್ಲಿ, "ನಮೂನೆ ಜಿಎಸ್ಟಿಆರ್–2" ಪದ, ಅಕ್ಷರಗಳು ಮತ್ತು ಸಂಖ್ಯೆಗಾಗಿ, "ಮತ್ತು ನಮೂನೆ ಜಿಎಸ್ಟಿಆರ್–3ಬಿ" ಪದಗಳು, ಅಕ್ಷರಗಳು ಮತ್ತು ಸಂಖ್ಯೆಯನ್ನು ಸೇರಿಸತಕ್ಕದ್ದು;

(ಬಿ) ಖಂಡ (ಬಿ)ಯಲ್ಲಿ, "ನಮೂನೆ ಜಿಎಸ್ಟಿಆರ್–2" ಪದ, ಅಕ್ಷರಗಳು ಮತ್ತು ಸಂಖ್ಯೆಗಾಗಿ, "ಮತ್ತು ನಮೂನೆ ಜಿಎಸ್ಟಿಆರ್–3ಬಿ" ಪದಗಳು, ಅಕ್ಷರಗಳು ಮತ್ತು ಸಂಖ್ಯೆಯನ್ನು ಸೇರಿಸತಕ್ಕದ್ದು;

(ಸಿ) ಖಂಡ (ಬಿ)ಯ ನಂತರ, ಈ ಕೆಳಕಂಡ ವಿವರಣೆಯನ್ನು ಸೇರಿಸತಕ್ಕದ್ದು, ಅಂದರೆ:–

"ವಿವರಣೆ: ಈ ಖಂಡದ ಉದ್ದೇಶಕ್ಕಾಗಿ, ಬಂಡವಾಳ ಸರಕುಗಳನ್ನು ಯೋಜನೆಯ ಮುಕ್ತಾಯದ ಪ್ರಮಾಣಪತ್ರದ ನೀಡಿಕೆಯ ಅಥವಾ ಪ್ರಥಮ ಅನುಭೋಗದ, ಇವುಗಳಲ್ಲಿ ಯಾವುದು ಮೊದಲೋ ಅದು, ದಿನಾಂಕದಂದು ಅಥವಾ ಅದಕ್ಕಿಂತಲು ಮೊದಲು ಕಾಯ್ದಿರಿಸಿದ ಮತ್ತು ಅಂಥ ದಿನಾಂಕದವರೆಗೆ ಕಾಯ್ದಿರಿಸದ ಅಪಾರ್ಟ್ಮೆಂಟುಗಳ ನಿರ್ಮಾಣದಲ್ಲಿ ಸಾಮಾನ್ಯವಾಗಿ ಬಳಸಲಾಗಿರಬಹುದಾದ ಕಾರಣ, ಸದರಿ ಅಧಿನಿಯಮದ ಅನುಸೂಚಿ II ರ ಖಂಡಿಕೆ 5ರ ಖಂಡ (ಬಿ)ಯಲ್ಲಿ ಸೇವೆಗಳ ಪೂರೈಕೆಯ ಸಂದರ್ಭದಲ್ಲಿ, ವಿನಾಯಿತ ಪೂರೈಕೆಯಲ್ಲದ ಆದರೆ ಶೂನ್ಯ–ದರದ ಪೂರೈಕೆಗಳನ್ನು ಒಳಗೊಂಡ, ಪೂರೈಕೆಗಳನ್ನು ಮಾಡಲು ಉಪಯೋಗಿಸಿದ ಅಥವಾ ಪ್ರತ್ಯೇಕವಾಗಿ ಉಪಯೋಗಿಸಲು ಉದ್ದೇಶಿಸಿದ ಬಂಡವಾಳ ಸರಕುಗಳಿಗೆ ಸಂಬಂಧಿಸಿದಂತೆ ಹೂಡುವಳಿ ತೆರಿಗೆಯ ಮೊತ್ತವು ನಿರ್ಮಾಣದ ಹಂತದಲ್ಲಿ ಶೂನ್ಯವಾಗಿರತಕ್ಕದ್ದು.

(ಡಿ) ಖಂಡ (ಜಿ)ಯಲ್ಲಿ,

(ಎ) ""'ಎಫ್' ತೆರಿಗೆ ಅವಧಿಯಲ್ಲಿ ನೋಂದಾಯಿತ ವ್ಯಕ್ತಿಯ ಒಟ್ಟು ವಹಿವಾಟುವಾಗಿರುತ್ತದೆ" ಎಂಬ ಅಕ್ಷರ ಮತ್ತು ಪದಗಳಿಗಾಗಿ "'ಎಫ್' ತೆರಿಗೆ ಅವಧಿಯಲ್ಲಿ ನೋಂದಾಯಿತ ವ್ಯಕ್ತಿಯ

604

ರಾಜ್ಯದೊಳಗಿನ ಒಟ್ಟು ವಹಿವಾಟುವಾಗಿರುತ್ತದೆ" ಅಕ್ಷರ ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಪರಂತುಕದ ಮುನ್ನ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ,–

"ಪರಂತು, ಸದರಿ ಅಧಿನಿಯಮದ ಅನುಸೂಚಿ II ರ ಖಂಡಿಕೆ 5ರ ಖಂಡ (ಬಿ)ಯಲ್ಲಿ ಸೇವೆಗಳ ಪೂರೈಕೆಯ ಸಂದರ್ಭದಲ್ಲಿ, ಒಂದು ತೆರಿಗೆ ಅವಧಿಗಾಗಿ 'E/F' ನ ಮೌಲ್ಯವನ್ನು, ಪ್ರತಿಯೊಂದು ಯೋಜನೆಗೆ ಪ್ರತ್ಯೇಕವಾಗಿ, ಈ ಕೆಳಗೆ ತಿಳಿಸಿದಂತೆ 'E' ಮತ್ತು 'F' ನ ಮೌಲ್ಯಗಳನ್ನು ತೆಗೆದುಕೊಂಡು ಲೆಕ್ಕಹಾಕತಕ್ಕದ್ದು:

E = ಯಾವುದರ ನಿರ್ಮಾಣವನ್ನು ತೆರಿಗೆಯಿಂದ ವಿನಾಯಿತಗೊಂಡಿದೆಯೋ ಸೇರಿಸಿ ಯಾವುದರ ನಿರ್ಮಾಣವನ್ನು ತೆರಿಗೆಯಿಂದ ವಿನಾಯಿತಗೊಂಡಿರುವುದಿಲ್ಲವೋ, ಆದರೆ ಯಾವುದನ್ನು ಮುಕ್ತಾಯದ ಪ್ರಮಾಣಪತ್ರದ ನೀಡಿಕೆಯ ಅಥವಾ ಯೋಜನೆಯ ಪ್ರಥಮ ಅನುಭೋಗದ, ಇವುಗಳಲ್ಲಿ ಯಾವುದು ಮೊದಲೋ, ಅದರ ದಿನಾಂಕದ ನಂತರ, ಪ್ರಮೋಟರ್‌ನಿಂದ ಮಾರಾಟಕ್ಕಾಗಿ ಎಂದು ಗುರುತಿಸಲಾದವುಗಳನ್ನು ಹೊರತುಪಡಿಸಿದಂತೆ, ಅಪಾರ್ಟ್‌ಮೆಂಟುಗಳ ಸಮಗ್ರ ಕಾರ್ಪೆಟ್ ಏರಿಯಾ.

F= ಯೋಜನೆಯಲ್ಲಿನ ಅಪಾರ್ಟ್‌ಮೆಂಟುಗಳ ಸಮಗ್ರ ಕಾರ್ಪೆಟ್ ಏರಿಯಾ;

ವಿವರಣೆ 1: ಯೋಜನೆಯ ಮುಕ್ತಾಯದ ಪ್ರಮಾಣಪತ್ರದ ನೀಡಿಕೆಯು ಅಥವಾ ಯೋಜನೆಯ ಪ್ರಥಮ ಅನುಭೋಗವು ಆದಂತಹ ತೆರಿಗೆ ಅವಧಿಯಲ್ಲಿ E ನ ಮೌಲ್ಯವು, ಮುಕ್ತಾಯದ ಪ್ರಮಾಣಪತ್ರದ ನೀಡಿಕೆಯ ಅಥವಾ ಯೋಜನೆಯ ಪ್ರಥಮ ಅನುಭೋಗದ, ಇವುಗಳಲ್ಲಿ ಯಾವುದು ಮೊದಲೋ ಅದರ, ದಿನಾಂಕದ ತನಕ ಕಾದಿರಿಸಿಲ್ಲವಾದ ಅಪಾರ್ಟ್‌ಮೆಂಟುಗಳ ಸಮಗ್ರ ಕಾರ್ಪೆಟ್ ಏರಿಯಾ;

ವಿವರಣೆ 2: ಜೂನ್ 29, 2017ರ ಕರ್ನಾಟಕ ವಿಶೇಷ ರಾಜ್ಯ ಪತ್ರ, ಭಾಗ –IVA, ಸಂ. 601ರಲ್ಲಿ ಪ್ರಕಟವಾದ ಅಧಿಸೂಚನೆ (11/2017) ಸಂ.ಆಇ 48 ಸಿಎಸ್‌ಎಲ್ 2017, ದಿನಾಂಕ 29ನೇ ಜೂನ್, 2017ರಲ್ಲಿ, ಕಾಲಕಾಲಕ್ಕೆ ಮಾಡಲಾದ ತಿದ್ದುಪಡಿಯೊಂದಿಗೆ, ಕೋಷ್ಟಕದ ಕ್ರಮಸಂಖ್ಯೆ 3ರ, ನಮೂದುಗಳು (i), (ia), (ib), (ic) ಅಥವಾ (id)ಗಳಿಗಾಗಿ ನಿರ್ದಿಷ್ಟಪಡಿಸಿದ ದರಗಳಲ್ಲಿ ಯಾವುದರ ನಿರ್ಮಾಣದ ಮೇಲೆ ತೆರಿಗೆಯನ್ನು ತುಂಬಿದೆಯೋ ಅಥವಾ ತುಂಬಬೇಕಾಗಿದೆಯೋ ಆ ಅಪಾರ್ಟ್‌ಮೆಂಟುಗಳ ಕಾರ್ಪೆಟ್ ಏರಿಯಾವನ್ನು, ಜೂನ್ 29, 2017ರ ಕರ್ನಾಟಕ ವಿಶೇಷ ರಾಜ್ಯಪತ್ರ, ಭಾಗ –IVA, ಸಂ. 601ರಲ್ಲಿ ಪ್ರಕಟವಾದ ಅಧಿಸೂಚನೆ (11/2017) ಸಂ.ಆಇ 48 ಸಿಎಸ್‌ಎಲ್ 2017, ದಿನಾಂಕ 29ನೇ ಜೂನ್, 2017ರ, ಕಾಲಕಾಲಕ್ಕೆ ಮಾಡಲಾದ ತಿದ್ದುಪಡಿಯೊಂದಿಗೆ, ಖಂಡಿಕೆ 4ರಲ್ಲಿ, ವಿವರಣೆ (iv)ರ ಹಿನ್ನೆಲೆಯಲ್ಲಿ 'E'ನ ಮೌಲ್ಯವನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು.".

(ಸಿ) ಪರಂತುಕದಲ್ಲಿ, "ಪರಂತು" ಪದಕ್ಕಾಗಿ, "ಮತ್ತು ಪರಂತು" ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಇ) ಖಂಡ (ಹೆಚ್)ನ ನಂತರ, ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅಂದರೆ,–

"(ಐ) ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಕೇಂದ್ರಾಡಳಿತ ಪ್ರದೇಶ ತೆರಿಗೆ ಮತ್ತು ಏಕೀಕೃತ ತೆರಿಗೆಯ ಹೂಡುವಳಿ ತೆರಿಗೆ ಜಮೆಗಾಗಿ Te ಮೊತ್ತವನ್ನು ಪ್ರತ್ಯೇಕವಾಗಿ ಲೆಕ್ಕಹಾಕತಕ್ಕದ್ದು ಮತ್ತು ನಮೂನೆ

605

ಜಿಎಸ್‌ಟಿಆರ್–3ಬಿಯಲ್ಲಿ ಘೋಷಿಸತಕ್ಕದ್ದು.";

(ii) ಉಪನಿಯಮ (2)ಕ್ಕಾಗಿ, ಈ ಕೆಳಗಿನದ್ದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"(2) ಸದರಿ ಅಧಿನಿಯಮದ ಅನುಸೂಚಿ II ರ ಖಂಡಿಕೆ 5ರ ಖಂಡ (ಬಿ)ಯಲ್ಲಿ ಸೇವೆಗಳ ಪೂರೈಕೆಯ ಸಂದರ್ಭದಲ್ಲಿ, ವಿನಾಯಿತ ಪೂರೈಕೆಗಳಿಗೆ ಸಂಬಂಧಿಸಿದ ಸಾಮಾನ್ಯ ಜಮೆಯ ಮೊತ್ತವನ್ನು (Te^{final}), ಪ್ರತಿಯೊಂದು ಯೋಜನೆಗೆ ಪ್ರತ್ಯೇಕವಾಗಿ, ಯೋಜನೆಯ ಪ್ರಾರಂಭ ಅಥವಾ ಜುಲೈ 1, 2017, ಇವುಗಳಲ್ಲಿ ಯಾವುದು ನಂತರವೋ ಅಂದಿನಿಂದ, ಯೋಜನೆಯ ಮುಕ್ತಾಯ ಅಥವಾ ಪ್ರಥಮ ಅನುಭೋಗ, ಇವುಗಳಲ್ಲಿ ಯಾವುದು ನಂತರವೋ ಅಲ್ಲಿಯವರೆಗೆ, ಯೋಜನೆಯ ಮುಕ್ತಾಯದ ಪ್ರಮಾಣಪತ್ರ ನೀಡಲಾದ ಅಥವಾ ಪ್ರಥಮ ಅನುಭೋಗ ಆದಂತಹ ಹಣಕಾಸು ವರ್ಷದ ಮುಕ್ತಾಯದ ನಂತರದ ಸೆಪ್ಟಂಬರ್ ತಿಂಗಳ ರಿಟರ್ನ್‌ಅನ್ನು ಸಲ್ಲಿಸಲು ಕಡೆಯ ದಿನಾಂಕದ ಮುನ್ನ, ಅಂತಿಮವಾಗಿ ಲೆಕ್ಕಹಾಕತಕ್ಕದ್ದು:

$$Te^{final} = [(E1 + E2 + E3) / F] \times Tc^{final},$$

ಇಲ್ಲಿ,

E1 = ಯಾವುದರ ನಿರ್ಮಾಣವು ತೆರಿಗೆಯಿಂದ ವಿನಾಯಿತಯಾಗಿದೆಯೋ ಅಂತಹ ಅಪಾರ್ಟ್‌ಮೆಂಟ್‌ಗಳ ಒಟ್ಟು ಕಾರ್ಪೆಟ್ ಏರಿಯಾ

E2 = [ಅಂಥ ಅಪಾರ್ಟ್‌ಮೆಂಟುಗಳ ಕಾರ್ಪೆಟ್ ಏರಿಯಾ] $\times [V_1 / (V_1 + V_2)]$, –

ಇಲ್ಲಿ,

V_1 = ತೆರಿಗೆಯಿಂದ ವಿನಾಯಿತವಾದ ಅಂಥ ಅಪಾರ್ಟ್‌ಮೆಂಟುಗಳ ಪೂರೈಕೆಯ ಒಟ್ಟು ಮೌಲ್ಯ;

V_2 = ತೆರಿಗೆದಾಯಕವಾದ ಅಂಥ ಅಪಾರ್ಟ್‌ಮೆಂಟುಗಳ ಪೂರೈಕೆಯ ಒಟ್ಟು ಮೌಲ್ಯ;

E3 = ಯಾವುದರ ನಿರ್ಮಾಣವು ತೆರಿಗೆಯಿಂದ ವಿನಾಯಿತವಾಗಿಲ್ಲವೋ, ಆದರೆ ಯೋಜನೆಯ ಮುಕ್ತಾಯದ ಪ್ರಮಾಣಪತ್ರದ ನೀಡಿಕೆ ಅಥವಾ ಪ್ರಥಮ ಅನುಭೋಗ, ಇವುಗಳಲ್ಲಿ ಯಾವುದು ಮೊದಲೋ ಅದರ ದಿನಾಂಕದ ತನಕ ಕಾಯ್ದಿರಿಸಿಲ್ಲವಾದ, ಅಪಾರ್ಟ್‌ಮೆಂಟುಗಳ ಒಟ್ಟು ಕಾರ್ಪೆಟ್ ಏರಿಯಾ:

F = ಯೋಜನೆಯಲ್ಲಿನ ಅಪಾರ್ಟ್‌ಮೆಂಟುಗಳ ಒಟ್ಟು ಕಾರ್ಪೆಟ್ ಏರಿಯಾ:

Tc^{final} = ಯೋಜನೆಯಲ್ಲಿ ಬಳಸಿದ ಎಲ್ಲಾ ಬಂಡವಾಳ ಸರಕುಗಳಿಗೆ ಸಂಬಂಧಿಸಿದ A^{final}ಗಳ ಒಟ್ಟು ಮೊತ್ತ ಮತ್ತು ಪ್ರತಿಯೊಂದು ಬಂಡವಾಳ ಸರಕಿನ A^{final}ಅನ್ನು ಈ ಕೆಳಕಂಡಂತೆ ಲೆಕ್ಕಹಾಕತಕ್ಕದ್ದು,

A^{final} = A X (ಯೋಜನೆಗಾಗಿ ಬಂಡವಾಳ ಸರಕುಗಳನ್ನು ಉಪಯೋಗಿಸಿದ ತಿಂಗಳುಗಳ ಸಂಖ್ಯೆ/60)

606

ಮತ್ತು

(ಎ) Te^{final} ನ ಮೌಲ್ಯವು ಉಪನಿಯಮ (1)ರಡಿಯಲ್ಲಿ ಪ್ರತಿಯೊಂದು ತೆರಿಗೆ ಅವಧಿಗಾಗಿ ನಿರ್ಧರಿಸಲಾದ Teಯ ಮೊತ್ತಗಳ ಒಟ್ಟು ಮೊತ್ತವನ್ನು ಮೀರಿದ್ದರೆ, ಅಂಥ ಹೆಚ್ಚುವರಿಯನ್ನು, ನೋಂದಯಿತ ವ್ಯಕ್ತಿಯು, ಯೋಜನೆಯ ಮುಕ್ತಾಯದ ಪ್ರಮಾಣಪತ್ರವನ್ನು ನೀಡಲಾದ ಅಥವಾ ಯೋಜನೆಯ ಪ್ರಥಮ ಅನುಭೋಗ ಆದ ಹಣಕಾಸು ವರ್ಷದ ಮುಕ್ತಾಯದ ನಂತರದ ಸೆಪ್ಟಂಬರ್ ತಿಂಗಳ ನಂತರದಲ್ಲದ ತಿಂಗಳಿನಲ್ಲಿ ನಮೂನೆ ಜಿಎಸ್‌ಟಿಆರ್–3ಬಿನಲ್ಲಿ ಅಥವಾ ನಮೂನೆ ಡಿಆರ್‌ಸಿ–03 ಮೂಲಕ, ಹಿಂಪಡೆಯತಕ್ಕದ್ದು ಮತ್ತು ಸದರಿ ವ್ಯಕ್ತಿಯು ಅಂಥ ಹೆಚ್ಚುವರಿ ಮೊತ್ತದ ಮೇಲೆ ಪ್ರಕರಣ 50ರ ಉಪಪ್ರಕರಣ (1)ರಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ನಂತರದ ಹಣಕಾಸು ವರ್ಷದ ಏಪ್ರಿಲ್ ಮೊದಲ ದಿನದಿಂದ ಪ್ರಾರಂಭಗೊಂಡು ಪಾವತಿಯ ದಿನಾಂಕದವರೆಗಿನ ಅವಧಿಗಾಗಿ ಬಡ್ಡಿಯನ್ನು ಪಾವತಿಸಲು ಬಾಧ್ಯನಾಗಿರತಕ್ಕದ್ದು;

(ಬಿ) ಉಪನಿಯಮ (1)ರಡಿಯಲ್ಲಿ ಪ್ರತಿಯೊಂದು ತೆರಿಗೆ ಅವಧಿಗಾಗಿ ನಿರ್ಧರಿಸಲಾದ Teಯ ಮೊತ್ತಗಳ ಒಟ್ಟು ಮೊತ್ತವು Te^{final} ನ ಮೌಲ್ಯವನ್ನು ಮೀರಿದ್ದರೆ, ಅಂಥ ಹೆಚ್ಚುವರಿಯನ್ನು, ನೋಂದಾಯಿತ ವ್ಯಕ್ತಿಯು, ಯೋಜನೆಯ ಮುಕ್ತಾಯದ ಪ್ರಮಾಣಪತ್ರವನ್ನು ನೀಡಲಾದ ಅಥವಾ ಯೋಜನೆಯ ಪ್ರಥಮ ಅನುಭೋಗ ಆದ ಹಣಕಾಸು ವರ್ಷದ ಮುಕ್ತಾಯದ ನಂತರದ ಸೆಪ್ಟಂಬರ್ ತಿಂಗಳ ನಂತರದಲ್ಲದ ತಿಂಗಳಿನಲ್ಲಿ, ಜಮೆಯಾಗಿ ಕ್ಲೇಮು ಮಾಡಬಹುದು.

ವಿವರಣೆ.– Tc^{final} ನ ಲೆಕ್ಕಹಾಕುವ ಉದ್ದೇಶಕ್ಕಾಗಿ, ತಿಂಗಳಿನ ಭಾಗವನ್ನು ಒಂದು ಪೂರ್ಣವಾದ ತಿಂಗಳು ಎಂದು ಪರಿಗಣಿಸತಕ್ಕದ್ದು.

(3) ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಕೇಂದ್ರಾಡಳಿತ ಪ್ರದೇಶ ತೆರಿಗೆ ಮತ್ತು ಏಕೀಕೃತ ತೆರಿಗೆಯ ಹೂಡುವಳಿ ತೆರಿಗೆ ಜಮೆಗಾಗಿ Te^{final} ಮತ್ತು Tc^{final} ಮೊತ್ತವನ್ನು ಪ್ರತ್ಯೇಕವಾಗಿ ಲೆಕ್ಕಹಾಕತಕ್ಕದ್ದು.

(4) ಒಂದಕ್ಕಿಂತ ಹೆಚ್ಚಿನ ಯೋಜನೆಗಳಿಗಾಗಿ ಯಾವುದೇ ಬಂಡವಾಳ ಸರಕನ್ನು ಉಪಯೋಗಿಸಿದ್ದರೆ, ಅಂಥ ಬಂಡವಾಳ ಸರಕಿಗೆ ಸಂಬಂಧಿಸಿದ ಹೂಡುವಳಿ ತೆರಿಗೆ ಜಮೆಯನ್ನು ಪ್ರತಿಯೊಂದು ಯೋಜನೆಗಾಗಿ ನ್ಯಾಯೋಚಿತ ಆಧಾರದ ಮೇಲೆ ಹಂಚಿಕೆ ಮಾಡತಕ್ಕದ್ದು ಮತ್ತು ಪ್ರತಿಯೊಂದು ಯೋಜನೆಗೆ ಸಂಬಂಧಿಸಿದ ಜಮೆಯ ವಾಪಸಾತಿಯನ್ನು ಉಪನಿಯಮ (2)ರ ಪ್ರಕಾರ ಮಾಡತಕ್ಕದ್ದು.

(5) ಯೋಜನೆಗಾಗಿ ಉಪಯೋಗಿಸಿದ ಯಾವುದೇ ಬಂಡವಾಳ ಸರಕು, ಯೋಜನೆ ಮುಕ್ತಾಯವಾದಾಗ ಅದರ ಉಪಯುಕ್ತತೆ ಉಳಿದಿದ್ದರೆ, ಉಳಿಕೆ ಉಪಯುಕ್ತತೆಗೆ ಸಂಬಂಧಿಸಿದ ಹೂಡುವಳಿ ತೆರಿಗೆ ಜಮೆಯನ್ನು ಆ ಬಂಡವಾಳ ಸರಕು ಮುಂದುವರೆದು ಉಪಯೋಗಿಸಿದ ಯೋಜನೆಯಲ್ಲಿ ಉಪಯೋಗಿಸತಕ್ಕದ್ದು;";

(iii) ವಿವರಣೆಯನ್ನು "ವಿವರಣೆ 1" ಎಂದು ನಮೂದಿಸತಕ್ಕದ್ದು ಮತ್ತು ಹಾಗೆ ನಮೂದುಗೊಂಡ ವಿವರಣೆ 1ರ ನಂತರ, ಈ ಕೆಳಗಿನ ವಿವರಣೆಯನ್ನು ಸೇರಿಸತಕ್ಕದ್ದು, ಅಂದರೆ:–

"ವಿವರಣೆ 2: ನಿಯಮ 42 ಮತ್ತು ಈ ನಿಯಮದ ಉದ್ದೇಶಗಳಿಗಾಗಿ, –

607

(i) "ಅಪಾರ್ಟ್‌ಮೆಂಟ್" ಪದಾವಳಿಯು ಸ್ಥಿರಾಸ್ತಿ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 2016 (2016ರ ಕೇಂದ್ರ ಅಧಿನಿಯಮ 16)ರಲ್ಲಿ ಅದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ii) "ಯೋಜನೆ" ಪದಾವಳಿಯು ಒಂದು ಸ್ಥಿರಾಸ್ಥಿಯ ಯೋಜನೆ ಅಥವಾ ಒಂದು ವಾಸಯೋಗ್ಯ ಸ್ಥಿರಾಸ್ತಿಯ ಯೋಜನೆ ಎಂಬ ಅರ್ಥವನ್ನು ಹೊಂದಿರತಕ್ಕದ್ದು;

(iii) "ಸ್ಥಿರಾಸ್ತಿಯ ಯೋಜನೆ (ಆರ್‌ಇಪಿ)" ಪದಾವಳಿಯು ಸ್ಥಿರಾಸ್ತಿ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 2016 (2016ರ ಕೇಂದ್ರ ಅಧಿನಿಯಮ 16)ರ ಪ್ರಕರಣ 2ರ ಖಂಡ (ಝಡ್‌ಎನ್)ನಲ್ಲಿ ಅದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(iv) "ವಾಸಯೋಗ್ಯ ಸ್ಥಿರಾಸ್ತಿಯ ಯೋಜನೆ (ಆರ್‌ಆರ್‌ಇಪಿ)" ಪದಾವಳಿಯು ಒಂದು ಆರ್‌ಇಪಿಯಲ್ಲಿನ ಎಲ್ಲಾ ಅಪಾರ್ಟ್‌ಮೆಂಟುಗಳ ಒಟ್ಟು ಕಾರ್ಪೆಟ್ ಏರಿಯಾದ ಶೇಕಡಾ 15ನ್ನು ಮೀರಿಲ್ಲದ ವಾಣಿಜ್ಯ ಅಪಾರ್ಟ್‌ಮೆಂಟುಗಳ ಕಾರ್ಪೆಟ್ ಏರಿಯಾ ಹೊಂದಿರುವ ಒಂದು ಆರ್‌ಇಪಿ;

(v) "ಪ್ರಮೋಟರ್" ಪದಾವಳಿಯು ಸ್ಥಿರಾಸ್ತಿ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 2016 (2016ರ ಕೇಂದ್ರ ಅಧಿನಿಯಮ 16)ರ ಪ್ರಕರಣ 2ರ ಖಂಡ (ಝಡ್‌ಕೆ)ನಲ್ಲಿ ಅದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(vi) "ವಾಸಯೋಗ್ಯ ಅಪಾರ್ಟ್‌ಮೆಂಟ್" ಪದಾವಳಿಯು ಸ್ಥಿರಾಸ್ತಿ ನಿಯಂತ್ರಣ ಪ್ರಾಧಿಕಾರ ಅಥವಾ ಸಕ್ಷಮ ಪ್ರಾಧಿಕಾರಕ್ಕೆ ವಾಸಯೋಗ್ಯ ಉಪಯೋಗಕ್ಕೆ ಉದ್ದೇಶಿತವೆಂದು ಘೋಷಿಸಿಲಾದ ಒಂದು ಅಪಾಟಮೆಂಟ್ ಎಂದು ಅರ್ಥೈಸತಕ್ಕದ್ದು;

(vii) "ವಾಣಿಜ್ಯ ಅಪಾರ್ಟ್‌ಮೆಂಟ್"ಅನ್ನು ವಾಸಯೋಗ್ಯ ಅಪಾರ್ಟ್‌ಮೆಂಟ್ ಅಲ್ಲದ ಒಂದು ಅಪಾರ್ಟ್‌ಮೆಂಟ್ ಎಂದು ಅರ್ಥೈಸತಕ್ಕದ್ದು;

(viii) "ವಾಸಯೋಗ್ಯ ಅಪಾರ್ಟ್‌ಮೆಂಟ್" ವ್ಯಾಖ್ಯಾನದಲ್ಲಿ ಹೇಳಿರುವ "ಸಕ್ಷಮ ಪ್ರಾಧಿಕಾರ" ಪದಾವಳಿಯು ತನ್ನ ಕ್ಷೇತ್ರವ್ಯಾಪ್ತಿಯಲ್ಲಿನ ಭೂಮಿಯ ಮೇಲೆ ಅಧಿಕಾರವನ್ನು ಚಲಾಯಿಸುವ ಮತ್ತು ಅಂಥ ಸ್ಥಿರಾಸ್ತಿಯ ಅಭಿವೃದ್ಧಿಗಾಗಿ ಅನುಮತಿಯನ್ನು ನೀಡುವ ಅಧಿಕಾರವಿರುವ, ಸ್ಥಳೀಯ ಪ್ರಾಧಿಕಾರ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದ ಸರ್ಕಾರದಿಂದ ಕಾಲಕಾಲಕ್ಕೆ ಜಾರಿಯಲ್ಲಿರುವ ಯಾವುದೇ ಕಾನೂನಿನಡಿಯಲ್ಲಿ ಸೃಷ್ಟಿಸಲಾದ ಅಥವಾ ಸ್ಥಾಪಿಸಲಾದ ಯಾವುದೇ ಪ್ರಾಧಿಕಾರ ಎಂದು ಅರ್ಥೈಸತಕ್ಕದ್ದು;

(ix) "ಸ್ಥಿರಾಸ್ತಿ ನಿಯಂತ್ರಣ ಪ್ರಾಧಿಕಾರ" ಪದಾವಳಿ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದಿಂದ ಸ್ಥಿರಾಸ್ತಿ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 2016 (2016ರ ಕೇಂದ್ರ ಅಧಿನಿಯಮ 16)ರ ಪ್ರಕರಣ 20ರ ಉಪಪ್ರಕರಣ (1)ರಡಿಯಲ್ಲಿ ಸ್ಥಾಪಿಸಲಾದ ಪ್ರಾಧಿಕಾರ ಎಂದು ಅರ್ಥೈಸತಕ್ಕದ್ದು;

608

(x) **"ಕಾರ್ಪೆಟ್ ಏರಿಯಾ"** ಪದಾವಳಿ ಸ್ಥಿರಾಸ್ತಿ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 2016 (2016ರ ಕೇಂದ್ರ ಅಧಿನಿಯಮ 16)ರ ಪ್ರಕರಣ 2ರ ಖಂಡ (ಕೆ)ಯಲ್ಲಿ ಅದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(xi) **"**ಯೋಜನೆಯ ಸಮಾಪ್ತಿಯ ಪ್ರಮಾಣಪತ್ರ ನೀಡಲಾದ ದಿನಾಂಕ ಅಥವಾ ಪ್ರಥಮ ಅನುಭೋಗದ, ಅಂದು ಅಥವಾ ಅದಕ್ಕೂ ಮೊದಲು ಕಾಯ್ದಿರಿಸಿದ ಒಂದು ಅಪಾರ್ಟ್‌ಮೆಂಟ್**"** ಈ ಕೆಳಗಿನ ಮೂರು ಷರತ್ತುಗಳನ್ನು ಪೂರೈಸುವ ಒಂದು ಅಪಾರ್ಟ್‌ಮೆಂಟ್ ಎಂದು ಅರ್ಥೈಸತಕ್ಕದ್ದು, ಅಂದರೆ –

(ಎ) ಅಪಾರ್ಟ್‌ಮೆಂಟ್‌ನ ನಿರ್ಮಾಣದ ಸೇವೆಯ ಭಾಗದ ಪೂರೈಕೆಯ ಸಮಯವು ಅಂಥ ದಿನಾಂಕದಂದು ಅಥವಾ ಅದಕ್ಕಿಂತ ಮೊದಲು ಇರಬೇಕು;

(ಬಿ) ಕನಿಷ್ಟ ಒಂದು ಕಂತಿಗೆ ಸಮನಾದ ಪ್ರತಿಫಲವು ಅಂಥ ದಿನಾಂಕದಂದು ಅಥವಾ ಅದಕ್ಕೂ ಮೊದಲು ನೋಂದಾಯಿತ ವ್ಯಕ್ತಿಯ ಬ್ಯಾಂಕ್ ಖಾತೆಗೆ ಜಮಾ ಆಗಿರಬೇಕು;

(ಸಿ) ಒಂದು ಹಂಚಿಕೆ ಪತ್ರ ಅಥವಾ ಮಾರಾಟ ಕರಾರು ಅಥವಾ ಸದರಿ ದಿನಾಂಕದಂದು ಅಥವಾ ಅದಕ್ಕಿಂತ ಮೊದಲು ಅಪಾರ್ಟ್‌ಮೆಂಟಿನ ಕಾಯ್ದಿರಿಸುವಿಕೆಯನ್ನು ನೀಡಿದ ಬಗ್ಗೆ ಸಾಕ್ಷಿಯಾದ ಯಾವುದೇ ಇತರ ಅಂತಹುದೇ ದಾಖಲಾತಿ ನೀಡಿರಬೇಕು.

(xii) **"**ಚಾಲ್ತಿಯಲ್ಲಿರುವ ಯೋಜನೆ**"** ಪದಾವಳಿ ತಿದ್ದುಪಡಿಯಾದಂತೆ, ದಿನಾಂಕ 2017ರ ಜೂನ್ 29ರ ಕರ್ನಾಟಕ ವಿಶೇಷ ರಾಜ್ಯಪತ್ರ, ಭಾಗ IVA, ಸಂ. 601ರಲ್ಲಿ ಪ್ರಕಟವಾದ ಅಧಿಸೂಚನೆ (11/2017) ಸಂ. ಆಇ 48 ಸಿಎಸ್‌ಎಲ್ 2017, ದಿನಾಂಕ 29 ಜೂನ್, 2017ರಲ್ಲಿ ಅದಕ್ಕೆ ನೀಡಲಾದ ಅದೇ ಅರ್ಥವನ್ನು ಹೊಂದಿರತಕ್ಕದ್ದು;

(xiii) **"**ಏಪ್ರಿಲ್ 1, 2019ರಂದು ಅಥವಾ ಅದರ ನಂತರ ಪ್ರಾರಂಭಗೊಳ್ಳುವ ಯೋಜನೆ**"** ಪದಾವಳಿ ತಿದ್ದುಪಡಿಯಾದಂತೆ, ದಿನಾಂಕ 2017ರ ಜೂನ್ 29ರ ಕರ್ನಾಟಕ ವಿಶೇಷ ರಾಜ್ಯಪತ್ರ, ಭಾಗ IVA, ಸಂ. 601ರಲ್ಲಿ ಪ್ರಕಟವಾದ ಅಧಿಸೂಚನೆ (11/2017) ಸಂ. ಆಇ 48 ಸಿಎಸ್‌ಎಲ್ 2017, ದಿನಾಂಕ 29 ಜೂನ್, 2017ರಲ್ಲಿ ಅದಕ್ಕೆ ನೀಡಲಾದ ಅದೇ ಅರ್ಥವನ್ನು ಹೊಂದಿರತಕ್ಕದ್ದು;**"**.

5. ಹೊಸ ನಿಯಮ 88ಎ ಸೇರ್ಪಡೆ.– ಸದರಿ ನಿಯಮಗಳ ನಿಯಮ 88ರ ನಂತರ, ಈ ಕೆಳಗಿನದ್ದನ್ನು ಸೇರಿಸತಕ್ಕದ್ದು, ಅಂದರೆ:–

"88ಎ. ಹೂಡುವಳಿ ತೆರಿಗೆ ಜಮೆಯ ಉಪಯೋಗಿಸುವಿಕೆಯ ಅನುಕ್ರಮಿಕೆ.– ಏಕೀಕೃತ ತೆರಿಗೆಗೆ ಸಂಬಂಧಿಸಿದ ಹೂಡುವಳಿ ತೆರಿಗೆ ಜಮೆಯನ್ನು ಏಕೀಕೃತ ತೆರಿಗೆಯ ಪಾವತಿಗಾಗಿ ಮೊದಲು ಉಪಯೋಗಿಸತಕ್ಕದ್ದು, ಮತ್ತು ಬಾಕಿಯಾಗುವ ಮೊತ್ತವನ್ನು, ಯಾವುದಾದರೂ ಇದ್ದಲ್ಲಿ, ಕೇಂದ್ರ ತೆರಿಗೆಯ ಮತ್ತು ರಾಜ್ಯ ತೆರಿಗೆ ಅಥವಾ ಸಂದರ್ಭಾನುಸಾರವಾಗಿ, ಕೇಂದ್ರಾಡಳಿತ ಪ್ರದೇಶ ತೆರಿಗೆಯ, ಯಾವುದೇ ಅನುಕ್ರಮದಲ್ಲಿ, ಪಾವತಿಗಾಗಿ ಉಪಯೋಗಿಸಿಕೊಳ್ಳಬಹುದು:

609

ಪರಂತು, ಕೇಂದ್ರ ತೆರಿಗೆ, ರಾಜ್ಯ ತೆರಿಗೆ ಅಥವಾ ಕೇಂದ್ರಾಡಳಿತ ಪ್ರದೇಶ ತೆರಿಗೆಗೆ ಸಂಬಂಧಿಸಿದ ಹೂಡುವಳಿ ತೆರಿಗೆ ಜಮೆಯನ್ನು ಏಕೀಕೃತ ತೆರಿಗೆ, ಕೇಂದ್ರ ತೆರಿಗೆ, ರಾಜ್ಯ ತೆರಿಗೆ ಅಥವಾ ಸಂದರ್ಭಾನುಸಾರವಾಗಿ, ಕೇಂದ್ರಾಡಳಿತ ಪ್ರದೇಶ ತೆರಿಗೆಯ ಪಾವತಿಗಾಗಿ, ಏಕೀಕೃತ ತೆರಿಗೆಗೆ ಸಂಬಂಧಿಸಿದ ಲಭ್ಯವಿರುವ ಹೂಡುವಳಿ ತೆರಿಗೆಯ ಜಮೆಯನ್ನು ಮೊದಲು ಪೂರ್ಣವಾಗಿ ಉಪಯೋಗಿಸಿದ ನಂತರವೇ ಉಪಯೋಗಿಸತಕ್ಕದ್ದು.".

6. ನಿಯಮ 100ರ ಪ್ರತಿಯೋಜನೆ.– ಸದರಿ ನಿಯಮಗಳ ನಿಯಮ 100ಕ್ಕಾಗಿ, ಈ ಕೆಳಗಿನದ್ದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"**100. ಕೆಲವು ಪ್ರಕರಣಗಳಲ್ಲಿ ಕರನಿರ್ಧರಣೆ.**– (1) ಪ್ರಕರಣ 62ರ ಉಪಪ್ರಕರಣ (1)ರ ಅಡಿಯಲ್ಲಿ ಮಾಡಿದ ಕರನಿರ್ಧರಣೆಯ ಆದೇಶವನ್ನು **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–13**ರಲ್ಲಿ ನೀಡತಕ್ಕದ್ದು ಮತ್ತು ಅದರ ಸಾರಾಂಶವನ್ನು **ನಮೂನೆ ಜಿಎಸ್‌ಟಿ ಡಿಆರ್‌ಸಿ–07**ರಲ್ಲಿ ವಿದ್ಯುನ್ಮಾನ ರೀತಿಯಲ್ಲಿ ಅಪ್‌ಲೋಡ್ ಮಾಡತಕ್ಕದ್ದು.

(2) ಯುಕ್ತ ಅಧಿಕಾರಿಯು ಪ್ರಕರಣ 63ರ ಉಪಬಂಧಗಳಿಗೆ ಅನುಸಾರವಾಗಿ ತೆರಿಗೆದಾಯಕ ವ್ಯಕ್ತಿಗೆ ಅತ್ಯುತ್ತಮ ವಿವೇಚನೆಯ ಆಧಾರದ ಮೇಲೆ ಕರನಿರ್ಧರಣೆಯನ್ನು ಮಾಡಲು ಕಾರಣಗಳನ್ನು ಒಳಗೊಂಡ ನೋಟೀಸನ್ನು **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–14**ರಲ್ಲಿ ನೀಡತಕ್ಕದ್ದು ಮತ್ತು ಅದರ ಸಾರಾಂಶವನ್ನು **ನಮೂನೆ ಜಿಎಸ್‌ಟಿ ಡಿಆರ್‌ಸಿ–01**ರಲ್ಲಿ ವಿದ್ಯುನ್ಮಾನ ರೀತಿಯಲ್ಲಿ ಜಾರಿ ಮಾಡತಕ್ಕದ್ದು ಮತ್ತು ಅಂಥ ವ್ಯಕ್ತಿಗೆ ತನ್ನ ಅಹವಾಲನ್ನು, ಅವು ಇದ್ದಲ್ಲಿ, ಸಲ್ಲಿಸಲು ಹದಿನೈದು ದಿನಗಳ ಸಮಯವನ್ನು ನೀಡಿ, **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–15**ರಲ್ಲಿ ಒಂದು ಆದೇಶವನ್ನು ಮಾಡತಕ್ಕದ್ದು ಮತ್ತು ಅದರ ಸಾರಾಂಶವನ್ನು ವಿದ್ಯುನ್ಮಾನ ರೀತಿಯಲ್ಲಿ **ನಮೂನೆ ಜಿಎಸ್‌ಟಿ ಡಿಆರ್‌ಸಿ–07**ರಲ್ಲಿ ಅಪ್‌ಲೋಡ್ ಮಾಡತಕ್ಕದ್ದು.

(3) ಪ್ರಕರಣ 64ರ ಉಪಪ್ರಕರಣ (1)ರ ಅಡಿಯಲ್ಲಿ ಕರನಿರ್ಧರಣೆಯ ಆದೇಶವನ್ನು **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–16**ರಲ್ಲಿ ನೀಡತಕ್ಕದ್ದು ಮತ್ತು ಆದೇಶದ ಸಾರಾಂಶವನ್ನು ವಿದ್ಯುನ್ಮಾನ ರೀತಿಯಲ್ಲಿ **ನಮೂನೆ ಜಿಎಸ್‌ಟಿ ಡಿಆರ್‌ಸಿ–07**ರಲ್ಲಿ ಅಪ್‌ಲೋಡ್ ಮಾಡತಕ್ಕದ್ದು.

(4) ಪ್ರಕರಣ 64ರ ಉಪಪ್ರಕರಣ (2)ರಲ್ಲಿ ಉಲ್ಲೇಖಿಸಲಾದ ವ್ಯಕ್ತಿಯು ಕರನಿರ್ಧರಣಾ ಆದೇಶದ ಹಿಂಪಡೆಯುದಕ್ಕಾಗಿ ಅರ್ಜಿಯನ್ನು **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–17**ರಲ್ಲಿ ಸಲ್ಲಿಸಬಹುದು.

(5) ಹಿಂಪಡೆತದ ಆದೇಶ ಅಥವಾ ಸಂದರ್ಭಾನುಸಾರವಾಗಿ, ಪ್ರಕರಣ 64ರ ಉಪಪ್ರಕರಣ (2)ರ ಅಡಿಯಲ್ಲಿನ ಅರ್ಜಿಯ ತಳ್ಳಿಹಾಕುವಿಕೆಯನ್ನು **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–18**ರಲ್ಲಿ ನೀಡತಕ್ಕದ್ದು.

7. ನಿಯಮ 142ರ ಪ್ರತಿಯೋಜನೆ.– ಸದರಿ ನಿಯಮಗಳ ನಿಯಮ 142ಕ್ಕಾಗಿ, ಈ ಕೆಳಗಿನದ್ದನ್ನು ಪ್ರತಿಯೋಜಿಸತಕ್ಕದ್ದು. ಅಂದರೆ:–

"**142. ಅಧಿನಿಯಮದ ಅಡಿಯಲ್ಲಿ ಪಾವತಿಸಬೇಕಾದ ಮೊತ್ತಗಳ ತಗಾದೆಗಾಗಿ ನೋಟೀಸು ಮತ್ತು ಆದೇಶ.**–

(1) ಯುಕ್ತ ಅಧಿಕಾರಿಯು

(ಎ) ಪ್ರಕರಣ 52 ಅಥವಾ ಪ್ರಕರಣ 73 ಅಥವಾ ಪ್ರಕರಣ 74 ಅಥವಾ ಪ್ರಕರಣ 76 ಅಥವಾ ಪ್ರಕರಣ 122 ಅಥವಾ ಪ್ರಕರಣ 123 ಅಥವಾ ಪ್ರಕರಣ 124 ಅಥವಾ ಪ್ರಕರಣ 125 ಅಥವಾ ಪ್ರಕರಣ 127 ಅಥವಾ ಪ್ರಕರಣ 129 ಅಥವಾ ಪ್ರಕರಣ 130 ರ ಅಡಿಯಲ್ಲಿ ನೀಡಲಾದ ನೋಟೀಸಿನ ಸಂಗಡ, **ನಮೂನೆ ಜಿಎಸ್‌ಟಿ ಡಿಆರ್‌ಸಿ–01**ರಲ್ಲಿ ಅದರ ಸಾರಾಂಶವನ್ನು,

610

(ಬಿ) ಪಾವತಿಸಬೇಕಾದ ಮೊತ್ತದ ವಿವರಗಳನ್ನು ನಿರ್ದಿಷ್ಟಪಡಿಸಿದಂತೆ, ಪ್ರಕರಣ 73ರ ಉಪಪ್ರಕರಣ (3)ರ ಅಥವಾ ಪ್ರಕರಣ 74ರ ಉಪಪ್ರಕರಣ (3)ರ ಅಡಿಯಲ್ಲಿನ ವಿವರಪತ್ರದ ಸಂಗಡ, ನಮೂನೆ ಜಿಎಸ್‌ಟಿ ಡಿಆರ್‌ಸಿ–02ರಲ್ಲಿ ಅದರ ಸಾರಾಂಶವನ್ನು

ವಿದ್ಯುನ್ಮಾನ ರೀತಿಯಲ್ಲಿ ಜಾರಿ ಮಾಡತಕ್ಕದ್ದು

(2) ನೋಟೀಸಿನ ಅಥವಾ ವಿವರಪತ್ರದ ಜಾರಿಗೆ ಮೊದಲು, ತೆರಿಗೆಯನ್ನು ವಿಧಿಸಲ್ಪಡುವ ವ್ಯಕಿಯು ಪ್ರಕರಣ 73ರ ಉಪಪ್ರಕರಣ (5)ರ ಉಪಬಂಧಗಳ ಅನುಸಾರವಾಗಿ ತೆರಿಗೆ ಮತ್ತು ಬಡ್ಡಿಯನ್ನು ಅಥವಾ ಸಂದರ್ಭಾನುಸಾರವಾಗಿ, ಪ್ರಕರಣ 74ರ ಉಪಪ್ರಕರಣ (5)ರ ಉಪಬಂಧಗಳ ಅನುಸಾರವಾಗಿ ತೆರಿಗೆ, ಬಡ್ಡಿ ಮತ್ತು ದಂಡವನ್ನು ಪಾವತಿಸಿದರೆ ಅಥವಾ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ, ಬಾಧ್ಯನಾಗಿರುವ ತೆರಿಗೆ, ಬಡ್ಡಿ, ದಂಡ ಅಥವಾ ಬೇರೆ ಯಾವುದೇ ಮೊತ್ತವನ್ನು, ಯಾವುದೇ ವ್ಯಕ್ತಿಯು ಪಾವತಿಸಿದರೆ, ಅವನು ಯುಕ್ತ ಅಧಿಕಾರಿಗೆ ಅಂಥ ಪಾವತಿಯನ್ನು **ನಮೂನೆ ಜಿಎಸ್‌ಟಿ ಡಿಆರ್‌ಸಿ–03**ರಲ್ಲಿ ಮಾಹಿತಿ ನೀಡತಕ್ಕದ್ದು ಮತ್ತು ಯುಕ್ತ ಅಧಿಕಾರಿಯು ಸದರಿ ವ್ಯಕ್ತಿಯು ಮಾಡಿದ ಪಾವತಿಯನ್ನು ಸ್ವೀಕರಿಸಿ, ಒಂದು ಸ್ವೀಕೃತಿ ಪತ್ರವನ್ನು **ನಮೂನೆ ಜಿಎಸ್‌ಟಿ ಡಿಆರ್‌ಸಿ–04**ರಲ್ಲಿ ನಿಡತಕ್ಕದ್ದು.

(3) ಉಪನಿಯಮ (1)ರ ಅಡಿಯಲ್ಲಿನ ನೋಟೀಸು ಜಾರಿಯಾದ ಮೂವತ್ತು ದಿನಗಳ ಒಳಗಾಗಿ, ತೆರಿಗೆಯನ್ನು ವಿಧಿಸಲ್ಪಡುವ ವ್ಯಕ್ತಿಯು ಪ್ರಕರಣ 73ರ ಉಪಪ್ರಕರಣ (8)ರ ಅಡಿಯಲ್ಲಿ ತೆರಿಗೆ ಮತ್ತು ಬಡ್ಡಿಯ ಅಥವಾ ಸಂದರ್ಭಾನುಸಾರವಾಗಿ, ಪ್ರಕರಣ 74ರ ಉಪಪ್ರಕರಣ (8)ರ ಅಡಿಯಲ್ಲಿ ತೆರಿಗೆ, ಬಡ್ಡಿ ಮತ್ತು ದಂಡದ ಪಾವತಿಯನ್ನು ಮಾಡಿದ್ದರೆ, ಅಥವಾ ಸಂಬಂಧಿಸಿದ ವ್ಯಕ್ತಿಯು, ಪ್ರಕರಣ 129ರ ಉಪಪ್ರಕರಣ (1)ರಲ್ಲಿ ಉಲ್ಲೇಖಿಸಲಾದ ಮೊತ್ತದ ಪಾವತಿಯನ್ನು ಸರಕುಗಳ ಮತ್ತು ಸಾಗಾಣಿಕೆ ವಾಹನದ ತಡೆಹಿಡಿಯುವಿಕೆ ಅಥವಾ ವಶಕ್ಕೆ ಪಡೆಯುವಿಕೆಯ ಹದಿನಾಲ್ಕು ದಿನಗಳ ಒಳಗಾಗಿ ಮಾಡಿದ್ದರೆ, ಅವನು ಅಂಥ ಪಾವತಿಯ ಮಾಹಿತಿಯನ್ನು **ನಮೂನೆ ಜಿಎಸ್‌ಟಿ ಡಿಆರ್‌ಸಿ–03**ಯಲ್ಲಿ ಯುಕ್ತ ಅಧಿಕಾರಿಗೆ ನೀಡತಕ್ಕದ್ದು ಮತ್ತು ಸದರಿ ನೋಟೀಸಿಗೆ ಸಂಬಂಧಿಸಿದಂತೆ ನಡಾವಳಿಗಳ ಮುಕ್ತಾಯದ ಆದೇಶವನ್ನು ಯುಕ್ತ ಅಧಿಕಾರಿಯು **ನಮೂನೆ ಜಿಎಸ್‌ಟಿ ಡಿಆರ್‌ಸಿ–05**ರಲ್ಲಿ ನೀಡತಕ್ಕದ್ದು.

(4) ಪ್ರಕರಣ 73ರ ಉಪಪ್ರಕರಣ (9)ರಲ್ಲಿ ಅಥವಾ ಪ್ರಕರಣ 74ರ ಉಪಪ್ರಕರಣ (9)ರಲ್ಲಿ ಅಥವಾ ಪ್ರಕರಣ 76ರ ಉಪಪ್ರಕರಣ (3)ರಲ್ಲಿ ಉಲ್ಲೇಖಿಸಲಾದ ಅಹವಾಲನ್ನು ಅಥವಾ ಯಾವುದರ ಸಾರಾಂಶವನ್ನು ಉಪಪ್ರಕರಣ (1)ರ ಅಡಿಯಲ್ಲಿ ವಿದ್ಯುನ್ಮಾನ ರೀತಿಯಲ್ಲಿ **ನಮೂನೆ ಜಿಎಸ್‌ಟಿ ಡಿಆರ್‌ಸಿ–01**ರಲ್ಲಿ ಅಪ್‌ಲೋಡ್ ಮಾಡಲಾಗಿದೆಯೋ, ಯಾವುದೇ ಪ್ರಕರಣದಡಿಯಲ್ಲಿ ನೀಡಲಾದ ಯಾವುದೇ ನೋಟೀಸಿಗೆ ಅಂಥ ಉತ್ತರವನ್ನು, **ನಮೂನೆ ಜಿಎಸ್‌ಟಿ ಡಿಆರ್‌ಸಿ–06**ರಲ್ಲಿ ಸಲ್ಲಿಸತಕ್ಕದ್ದು.

(5) ಪ್ರಕರಣ 52 ಅಥವಾ ಪ್ರಕರಣ 62 ಅಥವಾ ಪ್ರಕರಣ 63 ಅಥವಾ ಪ್ರಕರಣ 64 ಅಥವಾ ಪ್ರಕರಣ 73 ಅಥವಾ ಪ್ರಕರಣ 74 ಅಥವಾ ಪ್ರಕರಣ 75 ಅಥವಾ ಪ್ರಕರಣ 76 ಅಥವಾ ಪ್ರಕರಣ 122 ಅಥವಾ ಪ್ರಕರಣ 123 ಅಥವಾ ಪ್ರಕರಣ 124 ಅಥವಾ ಪ್ರಕರಣ 125 ಅಥವಾ ಪ್ರಕರಣ 127 ಅಥವಾ ಪ್ರಕರಣ 129 ಅಥವಾ ಪ್ರಕರಣ 130ರ ಅಡಿಯಲ್ಲಿ ನೀಡಲಾದ ಆದೇಶದ ಸಾರಾಂಶವನ್ನು, ತೆರಿಗೆಯನ್ನು ವಿಧಿಸಲಾದ ವ್ಯಕ್ತಿಯು ಪಾವತಿಸಬೇಕಾದ ನಿರ್ದಿಷ್ಟಪಡಿಸಿದ ತೆರಿಗೆ, ಬಡ್ಡಿ ಮತ್ತು ದಂಡದ ಮೊತ್ತವನ್ನು, **ನಮೂನೆ ಜಿಎಸ್‌ಟಿ ಡಿಆರ್‌ಸಿ–07**ರಲ್ಲಿ ವಿದ್ಯುನ್ಮಾನ ರೀತಿಯಲ್ಲಿ ಅಪ್‌ಲೋಡ್ ಮಾಡತಕ್ಕದ್ದು,

(6) ಉಪನಿಯಮ (5)ರಲ್ಲಿ ಉಲ್ಲೇಖಿಸಲಾದ ಆದೇಶವನ್ನು ವಸೂಲಾತಿಗಾಗಿ ನೀಡಲಾದ ನೋಟೀಸು ಎಂದು ಪರಿಗಣಿಸತಕ್ಕದ್ದು.

(7) ಪ್ರಕರಣ 161ರ ಉಪಬಂಧಗಳಿಗೆ ಅನುಸಾರವಾಗಿ ಆದೇಶದ ಪರಿಷ್ಕರಣೆಯನ್ನು ಮಾಡಿದಾಗ ಅಥವಾ ಸಿಸ್ಟಂನಲ್ಲಿ ಅಪ್‌ಲೋಡ್ ಮಾಡಲಾದ ಒಂದು ಆದೇಶವನ್ನು ಹಿಂಪಡೆದಾಗ, ಪರಿಷ್ಕರಣೆಯ ಆದೇಶದ ಅಥವಾ ಹಿಂಪಡೆತದ ಆದೇಶದ ಸಾರಾಂಶವನ್ನು **ನಮೂನೆ ಜಿಎಸ್‌ಟಿ ಡಿಆರ್‌ಸಿ–08**ರಲ್ಲಿ ವಿದ್ಯುನ್ಮಾನ ರೀತಿಯಲ್ಲಿ

611

ಯುಕ್ತ ಅಧಿಕಾರಿಯು ಅಪ್‌ಲೋಡ್ ಮಾಡತಕ್ಕದ್ದು.".

8. ನಮೂನೆ ಜಿಎಸ್‌ಟಿ ಡಿಆರ್‌ಸಿ–01ರ ಪ್ರತಿಯೋಜನೆ.– ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಡಿಆರ್‌ಸಿ–01**ಕ್ಕಾಗಿ, ಈ ಕೆಳಗಿನ ನಮೂನೆಯನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ನಮೂನೆ ಜಿಎಸ್‌ಟಿ ಡಿಆರ್‌ಸಿ–01

[ನೋಡಿ ನಿಯಮ 100(2) & 142(1)9ಎ)]

ಉಲ್ಲೇಖ ಸಂ: ದಿನಾಂಕ

ಗೆ,

. . . . . ಜಿಎಸ್‌ಟಿಐಎನ್/ ತಾತ್ಕಾಲಿಕ ಗುರುತಿನ ಸಂ

. . . . . ಹೆಸರು

. . . . . ವಿಳಾಸ

ತೆರಿಗೆ ಅವಧಿ . . . . . ಆ.ವ. . . . . ಅಧಿನಿಯಮ . . .

ಎಸ್‌ಸಿಎನ್‌ಅನ್ನು ನೀಡಲಾದ ಪ್ರಕರಣ/ ಉಪಪ್ರಕರಣ –

ಎಸ್‌ಸಿಎನ್ ಉಲ್ಲೇಖ ಸಂ. ದಿನಾಂಕ

ಕಾರಣ ಕೇಳುವ ನೋಟೀಸಿನ ಸಾರಾಂಶ

ಪ್ರಕರಣದ ಸಂಕ್ಷಿಪ್ತ ವಿವರಗಳು:

ಕಾರಣಗಳು:

ತೆರಿಗೆ ಮತ್ತು ಇತರೆ ಬಾಧ್ಯತೆಗಳು:

ಮೊತ್ತಗಳು ರೂಪಾಯಿಗಳಲ್ಲಿ

ಕ್ರ.ಸಂ	ತೆರಿಗೆ ದರ	ವಹಿವಾಟು	ತೆರಿಗೆ ಅವಧಿ		ಅಧಿ ನಿಯಮ	ಪಿಒಎಸ್ (ಪೂರೈಕೆಯ ಸ್ಥಳ)	ತೆರಿಗೆ	ಬಡ್ಡಿ	ದಂಡ	ಇತರೆ	ಒಟ್ಟು
			ಇಂದ	ಗೆ							
1	2	3	4	5	6	7	8	9	10	11	12
ಒಟ್ಟು											

ಸಹಿ
ಹೆಸರು
ಪದನಾಮ
ಕ್ಷೇತ್ರವ್ಯಾಪ್ತಿ
ವಿಳಾಸ

ಸೂಚನೆ:

ಅನ್ವಯವಾಗುವ ಫೀಲ್ಡ್‌ಗಳನ್ನು ಮಾತ್ರ ತುಂಬಬಹುದು

ಮೇಲಿನ ಕೋಷ್ಟಕದ ಅಂಕಣ ಸಂಖ್ಯೆ 2,3,4 ಮತ್ತು 5 ಅಂದರೆ ತೆರಿಗೆ ದರ, ವಹಿವಾಟು ಮತ್ತು ತೆರಿಗೆ ಅವಧಿ

612

ಕಡ್ಡಾಯವಲ್ಲ

ಪೂರೈಕೆಯ ಸ್ಥಳ (ಪಿಒಎಸ್) ವಿವರಗಳು ಐಜಿಎಸ್‌ಟಿ ಅಧಿನಿಯಮದ ಅಡಿಯಲ್ಲಿ ತಗಾದೆ ಸೃಷ್ಟಿಯಾಗಿದ್ದರೆ ಮಾತ್ರ ಅವಶ್ಯಕವಾಗಿರತಕ್ಕದ್ದು.".

9. ನಮೂನೆ ಜಿಎಸ್‌ಟಿ ಡಿಆರ್‌ಸಿ–02ರ ಪ್ರತಿಯೋಜನೆ.– ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಡಿಆರ್‌ಸಿ–02**ಕ್ಕಾಗಿ, ಈ ಕೆಳಗಿನ ನಮೂನೆಯನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ನಮೂನೆ ಜಿಎಸ್‌ಟಿ ಡಿಆರ್‌ಸಿ–02

[ನೋಡಿ ನಿಯಮ 142(1)(ಬಿ)]

ಉಲ್ಲೇಖ ಸಂ. ದಿನಾಂಕ

ಗೆ,

. . . . . ಜಿಎಸ್‌ಟಿಐಎನ್/ ತಾತ್ಕಾಲಿಕ ಗುರುತಿನ ಸಂ

. . . . . ಹೆಸರು

. . . . . ವಿಳಾಸ

ತೆರಿಗೆ ಅವಧಿ . . . . . ಆ.ವ. . . . . .

ವಿವರಪಟ್ಟಿ ನೀಡಲಾದ ಪ್ರಕರಣ/ ಉಪಪ್ರಕರಣ –

ಎಸ್‌ಸಿಎನ್ ಉಲ್ಲೇಖ ಸಂ. ದಿನಾಂಕ ವಿವರಪಟ್ಟಿ ಉಲ್ಲೇಖ ಸಂ. ದಿನಾಂಕ

ವಿವರಪಟ್ಟಿಯ ಸಾರಾಂಶ

ಪ್ರಕರಣದ ಸಂಕ್ಷಿಪ್ತ ವಿವರಗಳು:

ಕಾರಣಗಳು:

ತೆರಿಗೆ ಮತ್ತು ಇತರೆ ಬಾಧ್ಯತೆಗಳು:

ಮೊತ್ತಗಳು ರೂಪಾಯಿಗಳಲ್ಲಿ

ಕ್ರ. ಸಂ	ತೆರಿಗೆ ದರ	ವಹಿವಾಟು	ತೆರಿಗೆ ಅವಧಿ		ಅಧಿ ನಿಯಮ	ಪಿಒಎಸ್ (ಪೂರೈಕೆಯ ಸ್ಥಳ)	ತೆರಿಗೆ	ಬಡ್ಡಿ	ದಂಡ	ಇತರೆ	ಒಟ್ಟು
			ಇಂದ	ಗೆ							
1	2	3	4	5	6	7	8	9	10	11	12
ಒಟ್ಟು											

ಸಹಿ
ಹೆಸರು
ಪದನಾಮ
ಕ್ಷೇತ್ರವ್ಯಾಪ್ತಿ
ವಿಳಾಸ

ಸೂಚನೆ:

ಅನ್ವಯವಾಗುವ ಫೀಲ್ಡ್‌ಗಳನ್ನು ಮಾತ್ರ ತುಂಬಬಹುದು

ಮೇಲಿನ ಕೋಷ್ಟಕದ ಅಂಕಣ ಸಂಖ್ಯೆ 2,3,4 ಮತ್ತು 5 ಅಂದರೆ ತೆರಿಗೆ ದರ, ವಹಿವಾಟು ಮತ್ತು ತೆರಿಗೆ ಅವಧಿ

613

ಕಡ್ಡಾಯವಲ್ಲ

ಪೂರೈಕೆಯ ಸ್ಥಳ (ಪಿಒಎಸ್) ವಿವರಗಳು ಐಜಿಎಸ್‌ಟಿ ಅಧಿನಿಯಮದ ಅಡಿಯಲ್ಲಿ ತಗಾದೆ ಸೃಷ್ಟಿಯಾಗಿದ್ದರೆ ಮಾತ್ರ ಅವಶ್ಯಕವಾಗಿರತಕ್ಕದ್ದು.".

10. ನಮೂನೆ ಜಿಎಸ್‌ಟಿ ಡಿಆರ್‌ಸಿ–07ನ ಪ್ರತಿಯೋಜನೆ.– ಸದರಿ ನಿಯಮಗಳ ನಮೂನೆ ಜಿಎಸ್‌ಟಿ ಡಿಆರ್‌ಸಿ–07ಕ್ಕಾಗಿ, ಈ ಕೆಳಗಿನ ನಮೂನೆಯನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ನಮೂನೆ ಜಿಎಸ್‌ಟಿ ಡಿಆರ್‌ಸಿ–07

[ನೋಡಿ ನಿಯಮ 100(1), 100(2), 100(3) & 142(5)]

ಆದೇಶದ ಸಾರಾಂಶ

ಉಲ್ಲೇಖ ಸಂ. ದಿನಾಂಕ:

1. ಆದೇಶದ ವಿವರಗಳು
   (ಎ) ಆದೇಶದ ಸಂ. :
   (ಬಿ) ಆದೇಶದ ದಿನಾಂಕ :
   (ಸಿ) ಹಣಕಾಸು ವರ್ಷ:
   (ಡಿ) ತೆರಿಗೆ ಅವಧಿ: ಇಂದ ಗೆ

2. ಒಳಗೊಂಡಿರುವ ವಿಷಯಗಳು :

3. ಸರಕು / ಸೇವೆಗಳ ವಿವರಣೆ (ಅನ್ವಯಿಸುತ್ತಿದ್ದರೆ):

ಕ್ರ.ಸಂ	ಹೆಚ್‌ಎಸ್‌ಎನ್ ಕೋಡ್	ವಿವರಣೆ

4. ಅಧಿನಿಯಮದ ಪ್ರಕರಣ(ಗಳು), ಯಾವುದರಡಿಯಲ್ಲಿ ತಗಾದೆ ಸೃಷ್ಟಿಯಾಗಿದೆಯೋ ಅವು:

5. ತಗಾದೆಯ ವಿವರಗಳು:

ಮೊತ್ತಗಳು ರೂಪಾಯಿಗಳಲ್ಲಿ

ಕ್ರ. ಸಂ	ತೆರಿಗೆ ದರ	ವಹಿವಾಟು	ತೆರಿಗೆ ಅವಧಿ		ಅಧಿ ನಿಯಮ	ಪಿಒಎಸ್ (ಪೂರೈಕೆಯ ಸ್ಥಳ)	ತೆರಿಗೆ	ಬಡ್ಡಿ	ದಂಡ	ಇತರೆ	ಒಟ್ಟು
			ಇಂದ	ಗೆ							
1	2	3	4	5	6	7	8	9	10	11	12
ಒಟ್ಟು											

ನಿಮಗೆ ಪಾವತಿಯನ್ನು ದಿನಾಂಕದೊಳಗಾಗಿ ಮಾಡಲು ಈ ಮೂಲಕ ನಿರ್ದೇಶಿಸಿದೆ, ತಪ್ಪಿದ್ದಲ್ಲಿ ಬಾಕಿಯಾಗಿ ಉಳಿದಿರುವ ಮೊತ್ತಗಳ ವಸೂಲಾತಿಗಾಗಿ ನಿಮ್ಮ ವಿರುದ್ಧ ನಡಾವಳಿಗಳನ್ನು ಪ್ರಾರಂಭಿಸಲಾಗುವುದು.

ಸಹಿ
ಹೆಸರು
ಪದನಾಮ
ಕ್ಷೇತ್ರವ್ಯಾಪ್ತಿ
ವಿಳಾಸ

614

ಗೆ

. . . . . (ಜಿಎಸ್‌ಟಿಐಎನ್)

. . . . . (ಹೆಸರು)

. . . . . (ವಿಳಾಸ)

ಸೂಚನೆ:

ಅನ್ವಯವಾಗುವ ಫೀಲ್ಡ್‌ಗಳನ್ನು ಮಾತ್ರ ತುಂಬಬಹುದು

ಮೇಲಿನ ಕೋಷ್ಟಕದ ಅಂಕಣ ಸಂಖ್ಯೆ 2,3,4 ಮತ್ತು 5 ಅಂದರೆ ತೆರಿಗೆ ದರ, ವಹಿವಾಟು ಮತ್ತು ತೆರಿಗೆ ಅವಧಿ ಕಡ್ಡಾಯವಲ್ಲ

ಪೂರೈಕೆಯ ಸ್ಥಳ (ಪಿಒಎಸ್) ವಿವರಗಳು ಐಜಿಎಸ್‌ಟಿ ಅಧಿನಿಯಮದ ಅಡಿಯಲ್ಲಿ ತಗಾದೆ ಸೃಷ್ಟಿಯಾಗಿದ್ದರೆ ಮಾತ್ರ ಅವಶ್ಯಕವಾಗಿರತಕ್ಕದ್ದು.".

11. ನಮೂನೆ ಜಿಎಸ್‌ಟಿ ಡಿಆರ್‌ಸಿ–08ರ ಪ್ರತಿಯೋಜನೆ.– ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಡಿಆರ್‌ಸಿ–08**ಕ್ಕಾಗಿ, ಈ ಕೆಳಗಿನ ನಮೂನೆಯನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ನಮೂನೆ ಜಿಎಸ್‌ಟಿ ಡಿಆರ್‌ಸಿ–08

[ನೋಡಿ ನಿಯಮ 142(7)]

ಉಲ್ಲೇಖ ಸಂ. ದಿನಾಂಕ:

ಪರಿಷ್ಕರಣೆ / ಹಿಂಪಡೆತದ ಆದೇಶ ಸಾರಾಂಶ

1. ಆದೇಶದ ವಿವರಗಳು:	
(ಎ) ಹಣಹಾಸು ವರ್ಷ, ಅವಶ್ಯವಿದ್ದಲ್ಲಿ	
(ಬಿ) ತೆರಿಗೆ ಅವಧಿ, ಅದು ಇದ್ದಲ್ಲಿ	
(ಸಿ) ಪ್ರಕರಣ, ಯಾವುದರಡಿಯಲ್ಲಿ ಆದೇಶ ಮಾಡಲಾಗಿದೆ	
(ಡಿ) ಮೂಲ ಆದೇಶದ ಸಂ.	
(ಇ) ಮೂಲ ಆದೇಶದ ದಿನಾಂಕ	
(ಎಫ್) ಪರಿಷ್ಕರಣಾ ಆದೇಶದ ಸಂ.	
(ಜಿ) ಪರಿಷ್ಕರಣಾ ಆದೇಶದ ದಿನಾಂಕ	
(ಹೆಚ್) ಎಆರ್‌ಎನ್, ಅರ್ಜಿ ಹಾಕಿದ್ದಲ್ಲಿ	
(ಐ) ಎಆರ್‌ಎನ್ ದಿನಾಂಕ	

2. ಮೇಲೆ ಉಲ್ಲೇಖಿಸಲಾದ ಆದೇಶದ ಪರಿಷ್ಕರಣೆಗಾಗಿ ನಿಮ್ಮ ಅರ್ಜಿಯನ್ನು ಪರಿಶೀಲಿಸಲಾಗಿದೆ ☐

3. ಸದರಿ ಆದೇಶದ ಪರಿಷ್ಕರಣೆಯು ಅವಶ್ಯಕವೆಂದು ನನ್ನ ಗಮನಕ್ಕೆ ಬಂದಿರತ್ತದೆ (ಪರಿಷ್ಕರಣೆಗೆ ಕಾರಣಗಳನ್ನು ಲಗತ್ತಿಸಲಾದ ಅನುಸೂಚಿಯಂತೆ) ☐

4. ಮೇಲೆ ಉಲ್ಲೇಖಿಸಿದ ಆದೇಶವನ್ನು (ಪ್ರಕರಣ 129ರಡಿಯಲ್ಲಿ ನೀಡಿದ) ಹಿಂಪಡೆಯುವುದು ಅವಶ್ಯವಿದೆ ☐

5. ಸರಕು / ಸೇವಗಳ ವಿವರಗಳು

ಕ್ರ.ಸಂ	ಹೆಚ್‌ಎಸ್‌ಎನ್ ಕೋಡ್	ವಿವರಣೆ

615

6. ಅಧಿನಿಯಮದ ಪ್ರಕರಣ(ಗಳು), ಯಾವುದರಡಿಯಲ್ಲಿ ತಗಾದೆ ಸೃಷ್ಟಿಯಾಗಿದೆಯೋ ಅವು:

7. ಪರಿಷ್ಕರಣೆಯ ನಂತರ ತಗಾದೆಯ, ಅವು ಇದ್ದಲ್ಲಿ, ವಿವರಗಳು:

ಮೊತ್ತಗಳು ರೂಪಾಯಿಗಳಲ್ಲಿ

ಕ್ರ.ಸಂ	ತೆರಿಗೆ ದರ	ವಹಿವಾಟು	ತೆರಿಗೆ ಅವಧಿ		ಅಧಿ ನಿಯಮ	ಪಿಒಎಸ್ (ಪೂರೈಕೆಯ ಸ್ಥಳ)	ತೆರಿಗೆ	ಬಡ್ಡಿ	ದಂಡ	ಇತರೆ	ಒಟ್ಟು
			ಇಂದ	ಗೆ							
1	2	3	4	5	6	7	8	9	10	11	12
ಒಟ್ಟು											

ನಿಮಗೆ ಪಾವತಿಯನ್ನು ದಿನಾಂಕದೊಳಗಾಗಿ ಮಾಡಲು ಈ ಮೂಲಕ ನಿರ್ದೇಶಿಸಿದೆ, ತಪ್ಪಿದ್ದಲ್ಲಿ ಬಾಕಿಯಾಗಿ ಉಳಿದಿರುವ ಮೊತ್ತಗಳ ವಸೂಲಾತಿಗಾಗಿ ನಿಮ್ಮ ವಿರುದ್ಧ ನಡಾವಳಿಗಳನ್ನು ಪ್ರಾರಂಭಿಸಲಾಗುವುದು.

ಸಹಿ
ಹೆಸರು
ಪದನಾಮ
ಕ್ಷೇತ್ರವ್ಯಾಪ್ತಿ
ವಿಳಾಸ

ಗೆ
. . . . . (ಜಿಎಸ್‌ಟಿಐಎನ್)
. . . . . (ಹೆಸರು)
. . . . . (ವಿಳಾಸ)

ಸೂಚನೆ:
ಅನ್ವಯವಾಗುವ ಫೀಲ್ಡ್‌ಗಳನ್ನು ಮಾತ್ರ ತುಂಬಬಹುದು
ಮೇಲಿನ ಕ್ರಮ ಸಂ.7ರಲ್ಲಿನ ಕೋಷ್ಟಕದ ಅಂಕಣ ಸಂಖ್ಯೆ 2,3,4 ಮತ್ತು 5 ಅಂದರೆ ತೆರಿಗೆ ದರ, ವಹಿವಾಟು ಮತ್ತು ತೆರಿಗೆ ಅವಧಿ ಕಡ್ಡಾಯವಲ್ಲ
ಪೂರೈಕೆಯ ಸ್ಥಳ (ಪಿಒಎಸ್) ವಿವರಗಳು ಐಜಿಎಸ್‌ಟಿ ಅಧಿನಿಯಮದ ಅಡಿಯಲ್ಲಿ ತಗಾದೆ ಸೃಷ್ಟಿಯಾಗಿದ್ದರೆ ಮಾತ್ರ ಅವಶ್ಯಕವಾಗಿರತಕ್ಕದ್ದು.
ಪ್ರಕರಣ 129ರಲ್ಲಿ ನೀಡಲಾದ ಆದೇಶವನ್ನು ಹಿಂಪಡೆಯಲಾಗಿದ್ದರೆ, ಕ್ರಮ ಸಂಖ್ಯೆ 7ರಲ್ಲಿನ ತಗಾದೆಯ ಕೋಷ್ಟಕವನ್ನು ತುಂಬತಕ್ಕದ್ದಲ್ಲ.".

12. ನಮೂನೆ ಜಿಎಸ್‌ಟಿ ಎಎಸ್‌ಎಂಟಿ–13ರ ಪ್ರತಿಯೋಜನೆ.– ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–13**ಗಾಗಿ, ಈ ಕೆಳಗಿನ ನಮೂನೆಯನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ನಮೂನೆ ಜಿಎಸ್‌ಟಿ ಎಎಸ್‌ಎಂಟಿ–13

[ನೋಡಿ ನಿಯಮ 100(1)]

ಉಲ್ಲೇಖ ಸಂ. ದಿನಾಂಕ:

ಗೆ
. . . . . (ಜಿಎಸ್‌ಟಿಐಎನ್)
. . . . . (ಹೆಸರು)

616

. . . . . (ವಿಳಾಸ)

ತೆರಿಗೆ ಅವಧಿ ಇಂದ ಗೆ ಹಣಕಾಸು ವರ್ಷ ರಿಟರ್ನ್ ವಿಧ
ನೋಟೀಸಿನ ಉಲ್ಲೇಖ ಸಂ. ದಿನಾಂಕ

ಅಧಿನಿಯಮ / ನಿಯಮಗಳು ಉಪಬಂಧಗಳು

ಪ್ರಕರಣ 62ರ ಅಡಿಯಲ್ಲಿ ಕರನಿರ್ಧರಣೆ

ಪ್ರಸ್ತಾವನೆ – << ಸ್ಟಾಂಡರ್ಡ್>>

ಸದರಿ ತೆರಿಗೆ ಅವಧಿಗಾಗಿ ರಿಟರ್ನ್ನ್ನು ಸಲ್ಲಿಸಲು ವಿಫಲನಾದಕ್ಕಾಗಿ ಅಧಿನಿಯಮದ ಪ್ರಕರಣ 46ರಡಿಯಲ್ಲಿ ಮೇಲಿನ ಉಲ್ಲೇಖದ ನೋಟೀಸನ್ನು ನೋಟೀಸನ್ನು ನೀಡಲಾಗಿತ್ತು. ಇಲಾಖೆಯ ಬಳಿಯಿರುವ ದಾಖಲಾತಿಗಳಿಂದ ಕಂಡುಬರುವುದೇನೆಂದರೆ ನೀವು ಈ ದಿನಾಂಕದವರೆಗೂ ಸದರಿ ರಿಟರ್ನ್ನ್ನು ಸಲ್ಲಿಸಿರುವುದಿಲ್ಲ.

ಆದ್ದರಿಂದ, ಇಲಾಖೆಯ ಬಳಿಯಿರುವ ಮಾಹಿತಿಯ ಆಧಾರದ ಮೇಲೆ, ನಿಮ್ಮಿಂದ ನಿರ್ಧರಿಸಿದ ಮತ್ತು ಪಾವತಿಸಬೇಕಾದ ಮೊತ್ತವು ಈ ಕೆಳಕಂಡಂತಿರುತ್ತದೆ:

ವಿಷಯದ ಪರಿಚಯ
ಚರ್ಚೆಗಳು ಮತ್ತು ವಿಚಾರಣಾ ಫಲಗಳು:
ಮುಕ್ತಾಯ :
ನಿರ್ಧರಿಸಲಾದ ಮತ್ತು ಪಾವತಿಸಬೇಕಾದ ಮೊತ್ತ (ಅನುಸೂಚಿಯಲ್ಲಿ ವಿವರಗಳು):

ಮೊತ್ತಗಳು ರೂಪಾಯಿಗಳಲ್ಲಿ

ಕ್ರ. ಸಂ	ತೆರಿಗೆ ದರ	ವಹಿವಾಟು	ತೆರಿಗೆ ಅವಧಿ		ಅಧಿನಿಯಮ	ಪಿಒಎಸ್ (ಪೂರೈಕೆಯ ಸ್ಥಳ)	ತೆರಿಗೆ	ಬಡ್ಡಿ	ದಂಡ	ಇತರೆ	ಒಟ್ಟು
			ಇಂದ	ಗೆ							
1	2	3	4	5	6	7	8	9	10	11	12
ಒಟ್ಟು											

ಆದೇಶವನ್ನು ನೀಡಲಾದ ದಿನಾಂಕದವರೆಗೆ ಬಡ್ಡಿಯನ್ನು ಲೆಕ್ಕಹಾಕಲಾಗಿದೆಯೆಂದು ನಿಮ್ಮ ಗಮನಕ್ಕೆ ತರಲಾಗಿದೆ. ಪಾವತಿಯನ್ನು ಮಾಡುವಲ್ಲಿ, ಆದೇಶದ ದಿನಾಂಕ ಮತ್ತು ಪಾವತಿಯ ದಿನಾಂಕದ ಮಧ್ಯದ ಅವಧಿಗಾಗಿ ಬಡ್ಡಿಯನ್ನು ಲೆಕ್ಕಹಾಕತಕ್ಕದ್ದು ಮತ್ತು ಆದೇಶದಲ್ಲಿ ಹೇಳಲಾದ ಬಾಕಿಗಳ ಜೊತೆಯಲ್ಲಿ ಪಾವತಿಸತಕ್ಕದ್ದು.

ಈ ಆದೇಶದ ಜಾರಿಯ ದಿನಾಂಕದಿಂದ 30 ದಿನಗಳ ಅವಧಿಯ ಒಳಗಾಗಿ ನೀವು ರಿಟರ್ನ್ನ್ನು ಸಲ್ಲಿಸಿದರೆ, ಆದೇಶವನ್ನು ಹಿಂಪಡೆಯಲಾಗಿದೆ ಎಂದು ಪರಿಭಾವಿಸತಕ್ಕದ್ದೆಂದೂ ಸಹ ನಿಮಗೆ ತಿಳಿಸಲಾಗಿದೆ; ತಪ್ಪಿದ್ದಲ್ಲಿ, ಮೇಲೆ ಹೇಳಿರುವ ಅವಧಿಯ ನಂತರ, ನಿಮ್ಮ ವಿರುದ್ಧ ಸುಸ್ತಿಯಲ್ಲಿರುವ ಬಾಕಿಗಳ ವಸೂಲಾತಿಗಾಗಿ ನಡಾವಳಿಗಳನ್ನು ಪ್ರಾರಂಭಿಸಲಾಗುವುದು.

ಸಹಿ
ಹೆಸರು
ಪದನಾಮ
ಕ್ಷೇತ್ರವ್ಯಾಪ್ತಿ

617

ವಿಳಾಸ

ಸೂಚನೆ:
ಅನ್ವಯವಾಗುವ ಫೀಲ್ಡ್‌ಗಳನ್ನು ಮಾತ್ರ ತುಂಬಬಹುದು
ಮೇಲಿನ ಕೋಷ್ಟಕದ ಅಂಕಣ ಸಂಖ್ಯೆ 2,3,4 ಮತ್ತು 5 ಅಂದರೆ ತೆರಿಗೆ ದರ, ವಹಿವಾಟು ಮತ್ತು ತೆರಿಗೆ ಅವಧಿ ಕಡ್ಡಾಯವಲ್ಲ
ಪೂರೈಕೆಯ ಸ್ಥಳ (ಪಿಒಎಸ್) ವಿವರಗಳು ಐಜಿಎಸ್‌ಟಿ ಅಧಿನಿಯಮದ ಅಡಿಯಲ್ಲಿ ತಗಾದೆ ಸೃಷ್ಟಿಯಾಗಿದ್ದರೆ ಮಾತ್ರ ಅವಶ್ಯಕವಾಗಿರತಕ್ಕದ್ದು.".

13. ನಮೂನೆ ಜಿಎಸ್‌ಟಿ ಎಎಸ್‌ಎಂಟಿ–15ಯ ಪ್ರತಿಯೋಜನೆ.– ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–15**ಕ್ಕಾಗಿ, ಈ ಕೆಳಗಿನ ನಮೂನೆಯನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ನಮೂನೆ ಜಿಎಸ್‌ಟಿ ಎಎಸ್‌ಎಂಟಿ–15
[ನೋಡಿ ನಿಯಮ 100(2)]

ಉಲ್ಲೇಖ ಸಂ. ದಿನಾಂಕ:
ಗೆ,
. . . . . (ಜಿಎಸ್‌ಟಿಐಎನ್)
. . . . . (ಹೆಸರು)
. . . . . (ವಿಳಾಸ)

ತೆರಿಗೆ ಅವಧಿ: ಹಣಕಾಸು ವರ್ಷ:
ಎಸ್‌ಸಿಎನ್ ಉಲ್ಲೇಖ ಸಂ.: ದಿನಾಂಕ:

ಪ್ರಕರಣ 63ರಡಿಯಲ್ಲಿ ಕೇಂದ್ರದ ಕರನಿರ್ಧರಣಾ ಆದೇಶ

ಪ್ರಸ್ತಾವನೆ – << ಸ್ಟಾಂಡರ್ಡ್>>

ಮೇಲೆ ಉಲ್ಲೇಖಿಸಲಾದ ನೋಟೀಸನ್ನು ನಿಮಗೆ, ಅಧಿನಿಯಮದ ಅಡಿಯಲ್ಲಿ ನೋಂದಾಯಿತರಾಗುವ ಬಾಧ್ಯತೆಯಿದ್ದರೂ ಸಹ, ಒಬ್ಬ ಅನೋಂದಾಯಿತ ವ್ಯಕ್ತಿಯಾಗಿ ವ್ಯವಹಾರ ನಡೆಸುವುದನ್ನು ಮುಂದುವರೆಸಿರುವುದಕ್ಕೆ ಕಾರಣಗಳನ್ನು ವಿವರಿಸಲು, ನೀಡಲಾಗಿತ್ತು.

ಅಥವಾ

ಮೇಲೆ ಉಲ್ಲೇಖಿಸಲಾದ ನೋಟೀಸನ್ನು ನಿಮಗೆ, ನಿಮ್ಮ ನೋಂದಣಿಯನ್ನು ಪ್ರಕರಣ 29ರ ಉಪಪ್ರಕರಣ (2)ರ ಅಡಿಯಲ್ಲಿ . . . . . ದಿಂದ ಜಾರಿಗೆ ಬರುವಂತೆ ರದ್ದಪಡಿಸಲಾದ್ದರಿಂದ . . . . . ಅವಧಿಗಾಗಿ ನೀವು ತೆರಿಗೆಯನ್ನು ಏಕೆ ತೆರಿಗೆಯನ್ನು ಪಾವತಿಸಬಾರದೆಂದು ಕಾರಣಗಳನ್ನು ವಿವರಿಸಲು ನೀಡಲಾಗಿತ್ತು.

ನೀವು ಉತ್ತರವನ್ನು ಸಲ್ಲಿಸಿಲ್ಲ ಅಥವಾ . . . . . ದಿನಾಂಕ(ಗಳು)ದಂದು ನಡೆದ ನಡಾವಳಿಗಳಲ್ಲಿ ನಿಮ್ಮ ಉತ್ತರವನನು ಉಚಿತವಾಗಿ ಪರಿಗಣಿಸಲಾಗಿದೆ.

618

ಇಲಾಖೆಯಲ್ಲಿ ಲಭ್ಯವಿರುವ ಮಾಹಿತಿಯ / ನಡಾವಳಿಗಳಲ್ಲಿ ಹಾಜರುಪಡಿಸಿದ ದಾಖಲೆಗಳ ಆಧಾರದ ಮೇಲೆ ನಿರ್ಧರಿಸಿದ ಮತ್ತು ನಿಮ್ಮಿಂದ ಪಾವತಿಸಬೇಕಾದ ಮೊತ್ತವು ಈ ಕೆಳಕಂಡಂತೆ ಇರುತ್ತದೆ:

ವಿಷಯದ ಪರಿಚಯ:
ಸಲ್ಲಿಕೆಗಳು, ಅವು ಇದ್ದಲ್ಲಿ :
ಸಲ್ಲಿಕೆಗಳು:
ಮುಕ್ತಾಯ (ನಡಾವಳಿಗಳನ್ನು ಬಿಟ್ಟುಬಿಡಲು ಅಥವಾ ತಗಾದೆಯನ್ನು ಸೃಷ್ಟಿಸಲು) :
ನಿರ್ಧರಿಸಲಾದ ಮತ್ತು ಪಾವತಿಸಬೇಕಾದ ಮೊತ್ತ:

ಮೊತ್ತಗಳು ರೂಪಾಯಿಗಳಲ್ಲಿ

ಕ್ರ. ಸಂ	ತೆರಿಗೆ ದರ	ವಹಿವಾಟು	ತೆರಿಗೆ ಅವಧಿ		ಅಧಿ ನಿಯಮ	ಪಿಒಎಸ್ (ಪೂರೈಕೆಯ ಸ್ಥಳ)	ತೆರಿಗೆ	ಬಡ್ಡಿ	ದಂಡ	ಇತರೆ	ಒಟ್ಟು
			ಇಂದ	ಗೆ							
1	2	3	4	5	6	7	8	9	10	11	12
ಒಟ್ಟು											

ಆದೇಶವನ್ನು ನೀಡಲಾದ ದಿನಾಂಕದವರೆಗೆ ಬಡ್ಡಿಯನ್ನು ಲೆಕ್ಕಹಾಕಲಗಿದೆಯೆಂದು ನಿಮ್ಮ ಗಮನಕ್ಕೆ ತರಲಾಗಿದೆ. ಪಾವತಿಯನ್ನು ಮಾಡುವಲ್ಲಿ, ಆದೇಶದ ದಿನಾಂಕ ಮತ್ತು ಪಾವತಿಯ ದಿನಾಂಕದ ಮಧ್ಯದ ಅವಧಿಗಾಗಿ ಬಡ್ಡಿಯನ್ನು ಲೆಕ್ಕಹಾಕತಕ್ಕದ್ದು ಮತ್ತು ಆದೇಶದಲ್ಲಿ ಹೇಳಲಾದ ಬಾಕಿಗಳ ಜೊತೆಯಲ್ಲಿ ಪಾವತಿಸತಕ್ಕದ್ದು.

ನಿಮ್ಮನ್ನು ಈ ಮೂಲಕ . . . . . ದಿನಾಂಕದೊಳಗೆ ಪಾವತಿಯನ್ನು ಮಾಡಲು ನಿರ್ದೇಶಿಸಲಾಗಿದೆ; ತಪ್ಪಿದ್ದಲ್ಲಿ, ನಿಮ್ಮ ವಿರುದ್ಧ ಸುಸ್ತಿಯಲ್ಲಿರುವ ಬಾಕಿಗಳ ವಸೂಲಾತಿಗಾಗಿ ನಡಾವಳಿಗಳನ್ನು ಪ್ರಾರಂಭಿಸಲಾಗುವುದು.

ಸಹಿ
ಹೆಸರು
ಪದನಾಮ
ಕ್ಷೇತ್ರವ್ಯಾಪ್ತಿ
ವಿಳಾಸ

ಸೂಚನೆ:
ಅನ್ವಯವಾಗುವ ಫೀಲ್ಡ್‌ಗಳನ್ನು ಮಾತ್ರ ತುಂಬಬಹುದು
ಮೇಲಿನ ಕೋಷ್ಟಕದ ಅಂಕಣ ಸಂಖ್ಯೆ 2,3,4 ಮತ್ತು 5 ಅಂದರೆ ತೆರಿಗೆ ದರ, ವಹಿವಾಟು ಮತ್ತು ತೆರಿಗೆ ಅವಧಿ ಕಡ್ಡಾಯವಲ್ಲ
ಪೂರೈಕೆಯ ಸ್ಥಳ (ಪಿಒಎಸ್) ವಿವರಗಳು ಐಜಿಎಸ್‌ಟಿ ಅಧಿನಿಯಮದ ಅಡಿಯಲ್ಲಿ ತಗಾದೆ ಸೃಷ್ಟಿಯಾಗಿದ್ದರೆ ಮಾತ್ರ ಅವಶ್ಯಕವಾಗಿರತಕ್ಕದ್ದು.".

14. ನಮೂನೆ ಜಿಎಸ್‌ಟಿ ಎಎಸ್‌ಎಂಟಿ–16ರ ಪ್ರತಿಯೋಜನೆ.– ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–16**ಕ್ಕಾಗಿ, ಈ ಕೆಳಗಿನ ನಮೂನೆಯನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ನಮೂನೆ ಜಿಎಸ್‌ಟಿ ಎಎಸ್‌ಎಂಟಿ–16
[ನೋಡಿ ನಿಯಮ 100(3)]

619

ಉಲ್ಲೇಖ ಸಂ. ದಿನಾಂಕ:

ಗೆ,
. . . . . (ಜಿಎಸ್‌ಟಿಐಎನ್)
. . . . . (ಹೆಸರು)
. . . . . (ವಿಳಾಸ)
ತೆರಿಗೆ ಅವಧಿ: ಹಣಕಾಸು ವರ್ಷ:

ಪ್ರಕರಣ 64ರ ಅಡಿಯಲ್ಲಿ ಕರನಿರ್ಧರಣೆಯ ಆದೇಶ

ಪ್ರಸ್ತಾವನೆ: << ಸ್ಟಾಂಡರ್ಡ್ >>

. . . . . (ವಿಳಾಸ) ದ ಗೋದಾಮಿನಲ್ಲಿ ಅಥವಾ . . . . . (ವಿಳಾಸ)ದಲ್ಲಿ ನಿಲ್ಲಿಸಿದ್ದ . . . (ವಾಹನದ ವಿವರ)ದಲ್ಲಿ ದಾಸ್ತಾನಿನಲ್ಲಿದ್ದ ಸರಕುಗಳನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲವೆಂದು ನನ್ನ ಗಮನಕ್ಕೆ ಬಂದಿರುತ್ತದೆ ಮತ್ತು ನೀವು ಈ ಸರಕುಗಳಿಗಾಗಿ ಲೆಕ್ಕವನ್ನು ಅಥವಾ ಸರಕುಗಳ ವಿವರವನ್ನು ತೋರಿಸುವ ಯಾವುದೇ ದಾಖಲಾತಿಯನ್ನು ಹಾಜರು ಪಡಿಸಲು ವಿಫಲರಾಗಿರುತ್ತೀರಿ.

ಆದ್ದರಿಂದ ಅಂಥ ಸರಕುಗಳ ಮೇಲೆ ಬಾಕಿ ತೆರಿಗೆಯ ನಿರ್ಧರಣೆ ಮಾಡಲು ಈ ಕೆಳಕಂಡಂತೆ ಮುಂದುವರೆಯುತ್ತಿದ್ದೇನೆ:

ವಿಷಯದ ಪರಿಚಯ:
ಸಲ್ಲಿಕೆಗಳು, ಅವು ಇದ್ದಲ್ಲಿ :
ಸಲ್ಲಿಕೆಗಳು:
ಮುಕ್ತಾಯ (ನಡಾವಳಿಗಳನ್ನು ಬಿಟ್ಟುಬಿಡಲು ಅಥವಾ ತಗಾದೆಯನ್ನು ಸೃಷ್ಟಿಸಲು) :
ನಿರ್ಧರಿಸಲಾದ ಮತ್ತು ಪಾವತಿಸಬೇಕಾದ ಮೊತ್ತ:

ಮೊತ್ತಗಳು ರೂಪಾಯಿಗಳಲ್ಲಿ

ಕ್ರ.ಸಂ	ತೆರಿಗೆ ದರ	ವಹಿವಾಟು	ತೆರಿಗೆ ಅವಧಿ		ಅಧಿನಿಯಮ	ಪಿಒಎಸ್ (ಪೂರೈಕೆಯ ಸ್ಥಳ)	ತೆರಿಗೆ	ಬಡ್ಡಿ	ದಂಡ	ಇತರೆ	ಒಟ್ಟು
			ಇಂದ	ಗೆ							
1	2	3	4	5	6	7	8	9	10	11	12
ಒಟ್ಟು											

ಆದೇಶವನ್ನು ನೀಡಲಾದ ದಿನಾಂಕದವರೆಗೆ ಬಡ್ಡಿಯನ್ನು ಲೆಕ್ಕಹಾಕಲಾಗಿದೆಯೆಂದು ನಿಮ್ಮ ಗಮನಕ್ಕೆ ತರಲಾಗಿದೆ. ಪಾವತಿಯನ್ನು ಮಾಡುವಲ್ಲಿ, ಆದೇಶದ ದಿನಾಂಕ ಮತ್ತು ಪಾವತಿಯ ದಿನಾಂಕದ ಮಧ್ಯದ ಅವಧಿಗಾಗಿ ಬಡ್ಡಿಯನ್ನು ಲೆಕ್ಕಹಾಕತಕ್ಕದ್ದು ಮತ್ತು ಆದೇಶದಲ್ಲಿ ಹೇಳಲಾದ ಬಾಕಿಗಳ ಜೊತೆಯಲ್ಲಿ ಪಾವತಿಸತಕ್ಕದ್ದು.

ನಿಮ್ಮನ್ನು ಈ ಮೂಲಕ . . . . . ದಿನಾಂಕದೊಳಗೆ ಪಾವತಿಯನ್ನು ಮಾಡಲು ನಿರ್ದೇಶಿಸಲಾಗಿದೆ; ತಪ್ಪಿದ್ದಲ್ಲಿ, ನಿಮ್ಮ ವಿರುದ್ಧ ಸುಸ್ತಿಯಲ್ಲಿರುವ ಬಾಕಿಗಳ ವಸೂಲಾತಿಗಾಗಿ ನಡಾವಳಿಗಳನ್ನು ಪ್ರಾರಂಭಿಸಲಾಗುವುದು.

ಸಹಿ
ಹೆಸರು
ಪದನಾಮ

620

ಕ್ಷೇತ್ರವ್ಯಾಪ್ತಿ
ವಿಳಾಸ

ಸೂಚನೆ:
ಅನ್ವಯವಾಗುವ ಫೀಲ್ಡ್‌ಗಳನ್ನು ಮಾತ್ರ ತುಂಬಬಹುದು
ಮೇಲಿನ ಕೋಷ್ಟಕದ ಅಂಕಣ ಸಂಖ್ಯೆ 2,3,4 ಮತ್ತು 5 ಅಂದರೆ ತೆರಿಗೆ ದರ, ವಹಿವಾಟು ಮತ್ತು ತೆರಿಗೆ ಅವಧಿ ಕಡ್ಡಾಯವಲ್ಲ
ಪೂರೈಕೆಯ ಸ್ಥಳ (ಪಿಒಎಸ್) ವಿವರಗಳು ಐಜಿಎಸ್‌ಟಿ ಅಧಿನಿಯಮದ ಅಡಿಯಲ್ಲಿ ತಗಾದೆ ಸೃಷ್ಟಿಯಾಗಿದ್ದರೆ ಮಾತ್ರ ಅವಶ್ಯಕವಾಗಿರತಕ್ಕದ್ದು.".

15. ನಮೂನೆ ಜಿಎಸ್‌ಟಿ ಸಿಪಿಡಿ–02ರ ತಿದ್ದುಪಡಿ.– ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಸಿಪಿಡಿ–02**ರಲ್ಲಿ, ಕೋಷ್ಟಕದ ಕೆಳಗೆ ಕೋಷ್ಟಕ ಮತ್ತು ಟಿಪ್ಪಣಿಗಾಗಿ, ಈ ಕೆಳಗಿನ ಕೋಷ್ಟಕ ಮತ್ತು ಟಿಪ್ಪಣಿಯನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ಕ್ರಮ ಸಂಖ್ಯೆ	ಅಪರಾಧ	ಅಧಿನಿಯಮ	ರಾಜಿಯಾಗುವ ಮೊತ್ತ (ರೂ.)
(1)	(2)	(3)	(4)

ಟಿಪ್ಪಣಿ:–

(1) ತೆರಿಗೆದಾಯಕ ವ್ಯಕ್ತಿಯಿಂದ ಮಾಡಲಾದ ಅಪರಾಧವು ಅಂಕಣ (2)ರಲ್ಲಿ ನಿರ್ದಿಷ್ಟಪಡಿಸಿದ ಒಂದಕ್ಕಿಂತ ಹೆಚ್ಚಿನ ಕ್ಯಾಟಗರಿಗಳಲ್ಲಿ ಬಿದ್ದರೆ, ರಾಜಿಯಾಗುವ ಮೊತ್ತವು ಅಂಕಣ (3)ರಲ್ಲಿ ನಿರ್ದಿಷ್ಟಪಡಿಸಿದ ಮೊತ್ತವಾಗಿರುವ ಮೊತ್ತವಾಗಿರತಕ್ಕದ್ದು, ಅದು ಕ್ಯಾಟಗರೈಸ್ ಮಾಡಬಹುದಾದ ರಾಜಿಯಾಗಲು ಬೇಡಿದ ಅಪರಾಧದ ಕ್ಯಾಟಗರಿಗಳಿಗಾಗಿ ನಿರ್ದಿಷ್ಟಪಡಿಸಿದ ಮೊತ್ತಗಳ ಗರಿಷ್ಠವಾಗಿರುತ್ತದೆ.

(2) ಈ ಮೊತ್ತವನ್ನು ಮೈನರ್ ಶೀರ್ಷಿಕೆ "ಇತರೆ" ಯಡಿಯಲ್ಲಿ ಪಾವತಿಸಬಹುದು.".

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಅವರ ಆದೇಶಾನುಸಾರ

ನೇತ್ರಪ್ರಭಾ ಎಂ.ಧಾಯಾಪುಲೆ
ಪ್ರಭಾರ ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

621

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಸಿ/2019)
ಸಂಖ್ಯೆ: ಆಇ 47 ಸಿ.ಎಸ್.ಎಲ್ 2017, ಬೆಂಗಳೂರು ದಿನಾಂಕ 28.05.2019

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ 27)ರ ಪ್ರಕರಣ 164ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಜಿಎಸ್‌ಟಿ ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆಗಳ ನಿಯಮಗಳು, 2017ರ ಮುಂದುವರೆದ ತಿದ್ದುಪಡಿ ಮಾಡಲು ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಅಂದರೆ:–

1. ಶೀರ್ಷಿಕೆ ಮತ್ತು ಪ್ರಾರಂಭ: (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ನಾಲ್ಕನೇ ತಿದ್ದುಪಡಿ) ನಿಯಮಗಳು, 2019, ಎಂದು ಕರೆಯಬಹುದು.

(2) ಈ ನಿಯಮಗಳಲ್ಲಿ ಉಪಬಂಧಿಸಿದುದನ್ನು ಹೊರತುಪಡಿಸಿ, ಅವು 2019ರ ಏಪ್ರಿಲ್ ಇಪ್ಪತ್ತಮೂರನೇ ದಿನಾಂಕದಿಂದ ಜಾರಿಗೆ ಬಂದಿವೆಯೆಂದು ಪರಿಭಾವಿಸತಕ್ಕದ್ದು.

2. ನಿಯಮ 23ರ ತಿದ್ದುಪಡಿ.– ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017 (ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ)ರ ನಿಯಮ 23ರಲ್ಲಿ, ಉಪನಿಯಮ (1)ರಲ್ಲಿ, ಒಂದನೇ ಪರಂತುಕದ ನಂತರ, ಈ ಕೆಳಗಿನ ಪರಂತುಕಗಳನ್ನು ಸೇರಿಸತಕ್ಕದ್ದು, ಅಂದರೆ:–

"ಮತ್ತು ಪರಂತು, ನೋಂದಣಿಯ ರದ್ದತಿಯ ಆದೇಶದ ದಿನಾಂಕದಿಂದ ನೋಂದಣಿಯ ರದ್ದತಿಯ ಹಿಂತೆಗೆದುಕೊಳ್ಳುವಿಕೆಯ ಆದೇಶದ ದಿನಾಂಕದ ಅವಧಿಗಾಗಿ ಬಾಕಿ ಇರುವ ಎಲ್ಲಾ ರಿಟರ್ನ್‌ಗಳನ್ನು ನೋಂದಣಿಯ ರದ್ದತಿಯ ಹಿಂತೆಗೆದುಕೊಳ್ಳುವಿಕೆಯ ಆದೇಶದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗಾಗಿ ಸದರಿ ವ್ಯಕ್ತಿಯಿಂದ ಒದಗಿಸತಕ್ಕದ್ದು:

ಅಲ್ಲದೆ ಪರಂತು, ನೋಂದಣಿಯನ್ನು ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ರದ್ದು ಮಾಡಿದ್ದಲ್ಲಿ, ನೋಂದಣಿಯ ರದ್ದತಿಯ ಆದೇಶದ ದಿನಾಂಕದಿಂದ ನೋಂದಣಿಯ ರದ್ದತಿಯ ಹಿಂತೆಗೆದುಕೊಳ್ಳುವಿಕೆಯ ಆದೇಶದ ದಿನಾಂಕದ ಅವಧಿಗೆ ಸಂಬಂಧಿಸಿದ ಎಲ್ಲಾ ರಿಟರ್ನ್‌ಗಳನ್ನು ನೋಂದಣಿಯ ರದ್ದತಿಯ ಹಿಂತೆಗೆದುಕೊಳ್ಳುವಿಕೆಯ ಆದೇಶದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗಾಗಿ ನೋಂದಾಯಿತ ವ್ಯಕ್ತಿಯು ಒದಗಿಸತಕ್ಕದ್ದು.".

3. ನಿಯಮ 62ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 62ರಲ್ಲಿ,–

(ಎ) ಶೀರ್ಷಿಕೆಯಲ್ಲಿ, "ರಾಜಿ ತೆರಿಗೆಯ ಪೂರೈಕೆದಾರನಿಂದ ತ್ರೈಮಾಸಿಕ ರಿಟರ್ನಿನ ಸಲ್ಲಿಕೆಯ ನಮೂನೆ ಮತ್ತು ವಿಧಾನ" ಪದಗಳಿಗಾಗಿ, "ಹೇಳಿಕೆ ಮತ್ತು ರಿಟರ್ನಿನ ಸಲ್ಲಿಕೆಯ ನಮೂನೆ ಮತ್ತು ವಿಧಾನ" ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಉಪ–ನಿಯಮ (1)ಕ್ಕಾಗಿ ಈ ಕೆಳಗಿನದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"(1) ಪ್ರಕರಣ 10ರ ಅಡಿ ತೆರಿಗೆ ಸಂದಾಯಿಸುವ ಅಥವಾ ಕರ್ನಾಟಕ ವಿಶೇಷ ರಾಜ್ಯಪತ್ರ, ಭಾಗ–IVಎ, ಸಂ.222, ದಿನಾಂಕ 7ನೇ ಮಾರ್ಚ್, 2019ರಲ್ಲಿ ಪ್ರಕಟಿತವಾದ ಕರ್ನಾಟಕ ಸರ್ಕಾರದ ಅಧಿಸೂಚನೆ

622

(02/2019) ಸಂ. ಆಇ 48 ಸಿಎಸ್‌ಎಲ್ 2017, ದಿನಾಂಕ 7ನೇ ಮಾರ್ಚ್, 2019ರ ಸೌಲಭ್ಯ ಪಡೆಯುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು–

(i) ಸಂದರ್ಭಾನುಸಾರವಾಗಿ, ಪ್ರತಿಯೊಂದು ತ್ರೈಮಾಸಿಕ ಅಥವಾ ಅದರ ಭಾಗಕ್ಕಾಗಿ, ಅಂತಹ ತ್ರೈಮಾಸಿಕದ ನಂತರದ ತಿಂಗಳಿನ 18ನೇ ದಿನದವರೆಗೆ, ಸ್ವಯಂ–ನಿರ್ಧರಿತ ತೆರಿಗೆಯ ಸಂದಾಯದ ವಿವರಗಳನ್ನು **ನಮೂನೆ ಸಿಎಮ್‌ಪಿ–08**ರಲ್ಲಿ, ಒಂದು ಹೇಳಿಕೆಯನ್ನು ಒದಗಿಸತಕ್ಕದ್ದು; ಮತ್ತು

(ii) ಸಂದರ್ಭಾನುಸಾರವಾಗಿ, ಪ್ರತಿಯೊಂದು ಹಣಕಾಸು ವರ್ಷ ಅಥವಾ ಅದರ ಭಾಗಕ್ಕಾಗಿ, ಅಂತಹ ಹಣಕಾಸು ವರ್ಷದ ನಂತರದ ಏಪ್ರಿಲ್‌ನ ಮೂವತ್ತನೇ ದಿನದವರೆಗೆ, **ನಮೂನೆ ಜಿಎಸ್‌ಟಿಆರ್–04**ರಲ್ಲಿ, ಒಂದು ರಿಟರ್ನ್‌ನ್ನು ಒದಗಿಸತಕ್ಕದ್ದು;

(iii) ವಿದ್ಯುನ್ಮಾನವಾಗಿ ಸಾಮಾನ್ಯ ಪೋರ್ಟಲ್ ಮೂಲಕ ನೇರವಾಗಿ ಅಥವಾ ಆಯುಕ್ತರಿಂದ ಅಧಿಸೂಚಿತವಾದ ಒಂದು ಸಹಾಯ ಕೇಂದ್ರದ ಮೂಲಕ.";

(ಸಿ) ಉಪ–ನಿಯಮ (2)ರಲ್ಲಿ, "ಉಪ–ನಿಯಮ (1)ರ ಅಡಿಯಲ್ಲಿ ರಿಟರ್ನ್‌ನ್ನು ಒದಗಿಸುವ ಪ್ರತಿಯೊಬ್ಬ ವ್ಯಕ್ಯಿಯು, ವಿದ್ಯುನ್ಮಾನ ನಗದು ಖಾತೆಯಲ್ಲಿ ಖರ್ಚು ಹಾಕುವದರ ಮೂಲಕ, ಅಧಿನಿಯಮ ಅಥವಾ ಈ ನಿಯಮಗಳ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆ, ಬಡ್ಡಿ, ದಂಡ, ಶುಲ್ಕ ಅಥವಾ ಇತರ ಮೊತ್ತಗಳ ಆತನ ಬಾಧ್ಯತೆಯನ್ನು" ಪದಗಳು, ಆವರಣಗಳು ಮತ್ತು ಸಂಖ್ಯೆಗಾಗಿ, "ಉಪನಿಯಮ (1)ರ ಅಡಿಯಲ್ಲಿ ಹೇಳಿಕೆಯನ್ನು ಒದಗಿಸುವ ಪ್ರತಿಯೊಬ್ಬ ವ್ಯಕ್ಯಿಯು, ವಿದ್ಯುನ್ಮಾನ ನಗದು ಖಾತೆಯಲ್ಲಿ ಖರ್ಚು ಹಾಕುವುದರ ಮೂಲಕ, ಅಧಿನಿಯಮ ಅಥವಾ ಈ ನಿಯಮಗಳ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆ ಅಥವಾ ಬಡ್ಡಿಯ ಆತನ ಬಾಧ್ಯತೆಯನ್ನು" ಪದಗಳು, ಆವರಣಗಳು ಮತ್ತು ಸಂಖ್ಯೆಯನ್ನು ಪ್ರತಿಯೋಜಿಸತಕ್ಕದ್ದು;

(ಡಿ) ಉಪನಿಯಮ (4)ರಲ್ಲಿ,

(i) ''ಪ್ರಕರಣ (10)ರ ಅಡಿಯಲ್ಲಿ ಹಣಕಾಸು ವರ್ಷದ ಆರಂಭದಿಂದ ತೆರಿಗೆಯನ್ನು ಸಂದಾಯ ಮಾಡಲು ಆಯ್ಕೆ ಮಾಡಿಕೊಂಡಿರುವ" ಪದಗಳು, ಆವರಣಗಳು ಮತ್ತು ಸಂಖ್ಯೆಯ ನಂತರ " ಅಥವಾ ಕರ್ನಾಟಕ ವಿಶೇಷ ರಾಜ್ಯಪತ್ರ, ಭಾಗ–IVಎ, ಸಂ. 222, ದಿನಾಂಕ 7ನೇ ಮಾರ್ಚ್ 2019ರಲ್ಲಿ ಪ್ರಕಟಿತ ಕರ್ನಾಟಕ ಸರ್ಕಾರದ ಅಧಿಸೂಚನೆ (02/2019) ಸಂ. ಆಇ 48 ಸಿಎಸ್‌ಎಲ್ 2017, ದಿನಾಂಕ 7ನೇ ಮಾರ್ಚ್ 2019ರ ಅನುಕೂಲವನ್ನು ಪಡೆಯಲು ಆಯ್ಕೆ ಮಾಡಿಕೊಂಡಿರುವ" ಪದಗಳು, ಆವರಣಗಳು, ಅಕ್ಷರಗಳು ಮತ್ತು ಸಂಖ್ಯೆಗಳನ್ನು ಸೇರಿಸತಕ್ಕದ್ದು;

(ii) ವಿವರಣೆಯಲ್ಲಿ, "ರಾಜಿ ತೆರಿಗೆಯನ್ನು ಆಯ್ಕೆ ಮಾಡಿಕೊಳ್ಳುವ" ಪದಗಳ ನಂತರ " ಅಥವಾ ಕರ್ನಾಟಕ ವಿಶೇಷ ರಾಜ್ಯಪತ್ರ, ಭಾಗ–IVಎ, ಸಂ. 222, ದಿನಾಂಕ 7ನೇ ಮಾರ್ಚ್ 2019ರಲ್ಲಿ ಪ್ರಕಟಿತ ಕರ್ನಾಟಕ ಸರ್ಕಾರದ ಅಧಿಸೂಚನೆ (02/2019) ಸಂ. ಆಇ 48 ಸಿಎಸ್‌ಎಲ್ 2017, ದಿನಾಂಕ 7ನೇ ಮಾರ್ಚ್ 2019ರ ಅನುಕೂಲವನ್ನು ಪಡೆಯಲು ಆಯ್ಕೆ ಮಾಡಿಕೊಂಡಿರುವ" ಪದಗಳು, ಆವರಣಗಳು, ಅಕ್ಷರಗಳು ಮತ್ತು ಸಂಖ್ಯೆಗಳನ್ನು ಸೇರಿಸತಕ್ಕದ್ದು;

(ಇ) ಉಪನಿಯಮ (5)ರಲ್ಲಿ, "ಹಣಕಾಸು ವರ್ಷದ ತರುವಾಯ ಬರುವ ಸೆಪ್ಟೆಂಬರ್ ತಿಂಗಳಿಗೆ ಕೊನೆಗೊಳ್ಳುವ ತ್ರೈಮಾಸಿಕಕ್ಕೆ ರಿಟರ್ನ್‌ನ್ನು ಒದಗಿಸುವುದಕ್ಕಾಗಿ ಅಥವಾ ನಿಕಟಪೂರ್ವ ಹಣಕಾಸು ವರ್ಷದ ವಾರ್ಷಿಕ ರಿಟರ್ನ್‌ನ್ನು ಒದಗಿಸುವುದಕ್ಕಾಗಿ ಇರುವ ಗಡುವು ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ, ಅಲ್ಲಿಯ ವರೆಗೆ ಪ್ರಕರಣ 9ರ ಅಡಿಯಲ್ಲಿನ ತೆರಿಗೆಯ ಸಂದಾಯಕ್ಕಾಗಿ ತಾನು ಆಯ್ಕೆ ಮಾಡಿಕೊಳ್ಳುವ ಹಿಂದಿನ ಅವಧಿಗೆ ಸಂಬಂಧಿಸಿದ ವಿವರಗಳನ್ನು, **ನಮೂನೆ ಜಿಎಸ್‌ಟಿಆರ್–04**ರಲ್ಲಿ" ಪದಗಳು, ಅಕ್ಷರಗಳು ಮತ್ತು ಸಂಖ್ಯೆಗಳಿಗಾಗಿ "ಯಾವ ತ್ರೈಮಾಸಿಕದಲ್ಲಿ ಹಿಂದೆ ಸರಿಯುವ ಆಯ್ಕೆ ಮಾಡಿಕೊಂಡಿರುವ ದಿನಾಂಕವು ಬರುವುದೋ ಅದರ ನಂತರ ಬರುವ ತಿಂಗಳಿನ 18ನೇ ದಿನದವರೆಗೆ ಅವನು ರಾಜಿ ಪದ್ಧತಿಯ ಅಡಿಯಲ್ಲಿ ಸಂದಾಯ ಮಾಡಿರುವ

623

ತೆರಿಗೆಯ ಅವಧಿಗಾಗಿ **ನಮೂನೆ ಜಿಎಸ್‌ಟಿ ಸಿಎಮ್‌ಪಿ–08**ರಲ್ಲಿ ಒಂದು ಹೇಳಿಕೆ ಮತ್ತು ಅಂತಹ ಹಿಂದೆ ಸರಿಯುವಿಕೆಯು ಇರುವ ಹಣಕಾಸು ವರ್ಷದ ಮುಕ್ತಾಯದ ನಂತರ ಬರುವ ಏಪ್ರಿಲ್‌ನ ಮೂವತ್ತನೇ ದಿನದ ವರೆಗೆ ಅಂಥ ಅವಧಿಗಾಗಿ **ನಮೂನೆ ಜಿಎಸ್‌ಟಿಆರ್–04**ರಲ್ಲಿ ಒಂದು ರಿಟರ್ನನ್ನು" ಪದಗಳು, ಅಕ್ಷರಗಳು ಮತ್ತು ಸಂಖ್ಯೆಗಳನ್ನು ಪ್ರತಿಯೋಜಿಸತಕ್ಕದ್ದು;

(ಎಫ್) ಉಪನಿಯಮ (5)ರ ನಂತರ, ಈ ಕೆಳಗಿನದ್ದನ್ನು ಸೇರಿಸತಕ್ಕದ್ದು, ಅಂದರೆ:–

"(6) ಕರ್ನಾಟಕ ವಿಶೇಷ ರಾಜ್ಯಪತ್ರ, ಭಾಗ–IVಎ, ಸಂ. 222, ದಿನಾಂಕ 7ನೇ ಮಾರ್ಚ್ 2019ರಲ್ಲಿ ಪ್ರಕಟಿತ ಕರ್ನಾಟಕ ಸರ್ಕಾರದ ಅಧಿಸೂಚನೆ (02/2019) ಸಂ. ಆಇ 48 ಸಿಎಸ್‌ಎಲ್ 2017, ದಿನಾಂಕ 7ನೇ ಮಾರ್ಚ್ 2019ರ ಅನುಕೂಲವನ್ನು ಪಡೆಯಲು ಆಯ್ಕೆ ಮಾಡಿಕೊಂಡಿರುವ ಒಬ್ಬ ನೋಂದಾಯಿತ ವ್ಯಕ್ತಿಯು, ಅಗತ್ಯವಿರುವಲ್ಲಿ, ಯಾವ ತ್ರೈಮಾಸಿಕದಲ್ಲಿ ಹಿಂದೆ ಸರಿಯಲು ಆಯ್ಕೆ ಮಾಡಿಕೊಂಡಿರುವ ದಿನಾಂಕವು ಬರುವುದೋ ಅದರ ನಂತರ ಬರುವ ತಿಂಗಳಿನ 18ನೇ ದಿನದವರೆಗೆ ಅವನು ಸದರಿ ಅಧಿಸೂಚನೆಯ ಅಡಿಯಲ್ಲಿ ಸಂದಾಯ ಮಾಡಿರುವ ತೆರಿಗೆಯ ಅವಧಿಗಾಗಿ **ನಮೂನೆ ಜಿಎಸ್‌ಟಿ ಸಿಎಮ್‌ಪಿ–08**ರಲ್ಲಿ ಒಂದು ಹೇಳಿಕೆ ಮತ್ತು ಅಂತಹ ಹಿಂದೆ ಸರಿಯುವಿಕೆಯು ಆಗುವ ಹಣಕಾಸು ವರ್ಷದ ಮುಕ್ತಾಯದ ನಂತರ ಬರುವ ಏಪ್ರಿಲ್‌ನ ಮೂವತ್ತನೇ ದಿನದವರೆಗೆ ಅಂತಹ ಅವಧಿಗಾಗಿ **ನಮೂನೆ ಜಿಎಸ್‌ಟಿಆರ್–04**ರಲ್ಲಿ ಒಂದು ರಿಟರ್ನನ್ನು ಒದಗಿಸತಕ್ಕದ್ದು."

4. ನಮೂನೆ ಜಿಎಸ್‌ಟಿ ಸಿಎಮ್‌ಪಿ–08ರ ಸೇರ್ಪಡೆ.– ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಸಿಎಮ್‌ಪಿ–07**ರ ನಂತರ, ಈ ಕೆಳಗಿನ ನಮೂನೆಯನ್ನು ಸೇರಿಸತಕ್ಕದ್ದು, ಅಂದರೆ:–

"ನಮೂನೆ ಜಿಎಸ್‌ಟಿ ಸಿಎಮ್‌ಪಿ–08

(ನೋಡಿ ನಿಯಮ 62)

ಸ್ವಯಂ–ನಿರ್ಧರಿತ ತೆರಿಗೆಯ ಸಂದಾಯಕ್ಕಾಗಿ ಹೇಳಿಕೆ

									ಹಣಕಾಸಿನ ವರ್ಷ							
									ತ್ರೈಮಾಸಿಕ							
1.	ಜಿಎಸ್‌ಟಿಎನ್															

2.	**(ಎ)**	**ನ್ಯಾಯಸಮ್ಮತ ಹೆಸರು**	**< ಸ್ವಯಂ >**
	(ಬಿ)	**ವ್ಯವಹಾರದ ಹೆಸರು**	**< ಸ್ವಯಂ >**
	(ಸಿ)	**ಎಆರ್‌ಎನ್**	**< ಸ್ವಯಂ > (ಸಲ್ಲಿಸಿದ ನಂತರ)**
	(ಡಿ)	**ಸಲ್ಲಿಸಿದ ದಿನಾಂಕ**	**< ಸ್ವಯಂ > (ಸಲ್ಲಿಸಿದ ನಂತರ)**

3. ಸ್ವಯಂ–ನಿರ್ಧರಿಸಿದ ಬಾಧ್ಯತೆಯ ಸಾರಾಂಶ
(ಮುಂಗಡಗಳು, ಕ್ರೆಡಿಟ್ ಮತ್ತು ಡೆಬಿಟ್ ನೋಟ್‌ಗಳು ಮತ್ತು ತಿದ್ದುಪಡಿಗಳ ಕಾರಣ ಯಾವುದೇ ಇತರ ಹೊಂದಾಣಿಕೆಗಳು ಇತ್ಯಾದಿ.ಗಳ ನಿವ್ವಳ)
(ಎಲ್ಲಾ ಕೋಷ್ಟಕಗಳಲ್ಲಿ ಮೊತ್ತಗಳು ರೂಪಾಯಿಗಳಲ್ಲಿ)

ಕ್ರ.ಸಂ.	ವಿವರಣೆ	ಮೌಲ್ಯ	ವಿಕೀಕೃತ ತೆರಿಗೆ	ಕೇಂದ್ರ ತೆರಿಗೆ	ರಾಜ್ಯ / ಕೇಂ.ಪ್ರ. ತೆರಿಗೆ	ಉಪಕರ
1	2	3	4	5	6	7
1.	ಹೊರಮುಖ ಪೂರೈಕೆಗಳು (ವಿನಾಯಿತ ಪೂರೈಕೆಗಳನ್ನು ಒಳಗೊಂಡಂತೆ)					
2.	ಹಿಮ್ಮುಖ ವಿಧಿಸುವಿಕೆಯನ್ನು ಆಕರ್ಷಿಸುವ ಒಳಮುಖ ಪೂರೈಕೆಗಳು (ಸೇವೆಗಳ ಆಮದನ್ನು ಒಳಗೊಂಡಂತೆ)					

624

3.	ಪಾವತಿಸತಕ್ಕ ತೆರಿಗೆ (1+2)					
4.	ಪಾವತಿಸತಕ್ಕ ಬಡ್ಡಿ, ಅದ ಇದ್ದಲ್ಲಿ					
5.	ಪಾವತಿಸಿದ ತೆರಿಗೆ ಮತ್ತು ಬಡ್ಡಿ					

4. ಪರಿಶೀಲನೆ.

_____ಎಂಬ ನಾನು ಮೇಲೆ ನೀಡಲಾದ ಮಾಹಿತಿಯು ನನ್ನ ತಿಳುವಳಿಕೆಗೆ ಮತ್ತು ನಂಬಿಕೆಯ ಪ್ರಕಾರ ಸತ್ಯವಾಗಿರುತ್ತದೆ ಮತ್ತು ಸರಿಯಾಗಿರುತ್ತದೆ ಹಾಗೂ ಯಾವುದೇ ಮಾಹಿತಿಯನ್ನು ಇದರಿಂದ ಮರೆಮಾಚಿರುವುದಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

ಸಹಿ

ಸ್ಥಳ: ಪ್ರಾಧಿಕೃತ ಸಹಿದಾರನ ಹೆಸರು

ದಿನಾಂಕ: ಪದನಾಮ/ಸ್ಥಾನ

ಸೂಚನೆಗಳು:

1. ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ ಪ್ರಕರಣ 10ರ ಉಪಬಂಧಗಳಡಿಯಲ್ಲಿ ತೆರಿಗೆಯನ್ನು ಪಾವತಿಸುವ ಅಥವಾ ಅಧಿಸೂಚನೆ (02/2019) ಸಂ.ಆಇ 48 ಸಿಎಸ್ಎಲ್ 2017 ದಿನಾಂಕ ಮಾರ್ಚ್ 7, 2019ರ ಪ್ರಯೋಜನವನ್ನು ಉಪಯೋಗಿಸುವ ಕರದಾತನು ಕಡೆಯ ದಿನಾಂಕದೊಳಗೆ ತ್ರೈಮಾಸಿಕ ಆಧಾರದ ಮೇಲೆ ತೆರಿಗೆಯನ್ನು ಪಾವತಿಮಾಡತಕ್ಕದ್ದು.
2. ಮುಂಗಡಗಳು, ಕ್ರೆಡಿಟ್/ಡೆಬಿಟ್ ನೋಟ್‌ಗಳು ಅಥವಾ ಪರಿಷ್ಕರಣೆಯ ಕಾರಣದಿಂದ ಹೊಂದಾಣಿಕೆ ಬಾಧ್ಯತೆಗೆ ವಿರುದ್ಧವಾಗಿ ವರದಿ ಮಾಡತಕ್ಕದ್ದು.
3. ಹೊಂದಾಣಿಕೆಯ ನಂತರ ಅಂಥ ಮೌಲ್ಯವು ಋಣಾತ್ಮಕವಾಗಿದ್ದರೆ, ಋಣಾತ್ಮಕ ಮೌಲ್ಯವನ್ನು ವರದಿ ಮಾಡಬಹುದು.
4. ಪಾವತಿಸಬೇಕಾದ ಒಟ್ಟು ತೆರಿಗೆಯು ಮೌಲ್ಯವು ಋಣಾತ್ಮಕವಾದರೆ, ಅದನ್ನು ಮುಂದಿನ ತೆರಿಗೆ ಅವಧಿಗೆ ಆ ತೆರಿಗೆ ಅವಧಿಯಲ್ಲಿ ಉಪಯೋಗಿಸಿಕೊಳ್ಳಲು ಕ್ಯಾರಿ ಫಾರ್ವರ್ಡ್ ಮಾಡಬಹುದು.
5. ಕಡೆಯ ದಿನಾಂಕದ ನಂತರ ಪಾವತಿಯನ್ನು ಮಾಡಿದ್ದರೆ ಬಡ್ಡಿಯನ್ನು ವಿಧಿಸತಕ್ಕದ್ದು.
6. ತ್ರೈಮಾಸಿಕದಲ್ಲಿ ತೆರಿಗೆ ಬಾಧ್ಯತೆಯು ಇಲ್ಲದಿದ್ದಲ್ಲಿ **"ಶೂನ್ಯ"** ವಿವರಪಟ್ಟಿಯನ್ನು ಸಲ್ಲಿಸತಕ್ಕದ್ದು.**"**.

5. ನಮೂನೆ ಜಿಎಸ್‌ಟಿ ಆರ್‌ಇಜಿ–01ರ ತಿದ್ದುಪಡಿ.– ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಆರ್‌ಇಜಿ–01**ರಲ್ಲಿ, ಸೂಚನೆ ಸಂಖ್ಯೆ 16ರ ನಂತರ, ಈ ಕೆಳಗಿನ ಸೂಚನೆಯನ್ನು ಸೇರಿಸತಕ್ಕದ್ದು, ಅಂದರೆ:–

"17. ತಿದ್ದುಪಡಿಯಾದಂತೆ, ದಿನಾಂಕ ಮಾರ್ಚ್ 7, 2019ರ ಅಧಿಸೂಚನೆ (02/2019) ಸಂ.ಆಇ 48 ಸಿಎಸ್ಎಲ್ 2017ರ ಪ್ರಯೋಜನವನ್ನು ಉಪಯೋಗಿಸಿಕೊಂಡು ತೆರಿಗೆಯನ್ನು ಪಾವತಿಸಲು ಉದ್ದೇಶಿಸುವ ಕರದಾತರು ಈ ನಮೂನೆಯ ಕ್ರಮ ಸಂಖ್ಯೆ 5 ಮತ್ತು 6.1(iii) ನಲ್ಲಿ ಅಂಥ ಆಯ್ಕೆಯನ್ನು ಸೂಚಿಸತಕ್ಕದ್ದು.**"**.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಅವರ ಆದೇಶಾನುಸಾರ

ನೇತ್ರಪ್ರಭಾ ಎಂ.ಧಾಯಾಪುಲೆ
ಪ್ರಭಾರ ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

625

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಡಿ/2019)
ಸಂಖ್ಯೆ: ಆಇ 47 ಸಿ.ಎಸ್.ಎಲ್ 2017, ಬೆಂಗಳೂರು ದಿನಾಂಕ 26.07.2019

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ 27)ರ ಪ್ರಕರಣ 164ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಜಿಎಸ್‌ಟಿ ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರಕು ಮತ್ತು ಸೇವಾ ತೆರಿಗೆಗಳ ನಿಯಮಗಳು, 2017ರ ಮುಂದುವರೆದ ತಿದ್ದುಪಡಿ ಮಾಡಲು ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಅಂದರೆ:–

1. ಶೀರ್ಷಿಕೆ ಮತ್ತು ಪ್ರಾರಂಭ: (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಐದನೆಯ ತಿದ್ದುಪಡಿ) ನಿಯಮಗಳು, 2019, ಎಂದು ಕರೆಯಬಹುದು.

(2) ಈ ನಿಯಮಗಳಲ್ಲಿ ಉಪಬಂಧಿಸಿದುದನ್ನು ಹೊರತುಪಡಿಸಿ, ಅವು 2019ರ ಜೂನ್ ಇಪ್ಪತ್ತೆಂಟನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ಹೊಸ ನಿಯಮ 10ಎ ಯ ಸೇರ್ಪಡೆ.– ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017 (ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ)ರ ನಿಯಮ 10ರ ನಂತರ, ಈ ಕೆಳಗಿನ ನಿಯಮವನ್ನು ಸೇರಿಸತಕ್ಕದ್ದು, ಅಂದರೆ:

> **"10ಎ. ಬ್ಯಾಂಕ್ ಖಾತೆಯ ವಿವರಗಳನ್ನು ಒದಗಿಸುವುದು.**– ಸಾಮಾನ್ಯ ಪೋರ್ಟಲ್ ಮೇಲೆ **ನಮೂನೆ ಜಿಎಸ್‌ಟಿ ಆರ್‌ಇಜಿ–06**ನಲ್ಲಿ ನೋಂದಣಿಯ ಪ್ರಮಾಣಪತ್ರವನ್ನು ಲಭ್ಯ ಮಾಡಿದ ಹಾಗೂ ಸರಕು ಮತ್ತು ಸೇವೆಗಳ ತೆರಿಗೆ ಗುರುತು ಸಂಖ್ಯೆಯು ಹಂಚಿಕೆಯಾದ ನಂತರ, ನಿಯಮ 12ರ ಅಡಿ ಅಥವಾ ಸಂದರ್ಭಾನುಸಾರವಾಗಿ ನಿಯಮ 16ರ ಅಡಿಯಲ್ಲಿ ನೋಂದಣಿಯು ಮಂಜೂರಾಗಿರುವ ಅಂಥವರನ್ನು ಹೊರತುಪಡಿಸಿ, ನೋಂದಾಯಿತ ವ್ಯಕ್ತಿಯು, ಆದಷ್ಟು ಶೀಘ್ರವಾಗಿ, ಆದರೆ ನೋಂದಣಿಯು ಮಂಜೂರಾದ ದಿನಾಂಕದಿಂದ ನಲವತ್ತೈದು ದಿನಗಳು ಅಥವಾ ಪ್ರಕರಣ 39ರ ಅಡಿಯಲ್ಲಿ ಬಾಧ್ಯವಾಗಿರುವ ರಿಟರ್ನ್ ಒದಗಿಸಬೇಕಾಗಿರುವ ದಿನಾಂಕವನ್ನು ಮೀರದಂತೆ, ಅವುಗಳಲ್ಲಿ ಯಾವುದು ಮೊದಲೋ, ಬ್ಯಾಂಕ್ ಖಾತೆಯ ಬಗೆಗಿನ ವಿವರಗಳ ಮಾಹಿತಿಯನ್ನು ಅಥವಾ ಇತರ ಯಾವುದೇ ಉಪಬಂಧದ ಅನುಸರಣೆಗಾಗಿ ಸಾಮಾನ್ಯ ಪೋರ್ಟಲ್ ಮೇಲೆ ಅವಶ್ಯವಿರಬಹುದಾದ ಯಾವುದೇ ಇತರ ಮಾಹಿತಿಯನ್ನು ಒದಗಿಸತಕ್ಕದ್ದು.";

3. ನಿಯಮ 21ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 21ರಲ್ಲಿ, ಖಂಡ (ಸಿ) ನಂತರ, ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅಂದರೆ:–

> **"**(ಡಿ) ನಿಯಮ 10ಎ ಯ ಉಪಬಂಧಗಳನ್ನು ಉಲ್ಲಂಘಿಸಿದರೆ,**"**

4. ಹೊಸ ನಿಯಮ 32ಎ ಯ ಸೇರ್ಪಡೆ.– ಸದರಿ ನಿಯಮಗಳ ನಿಯಮ 32ರ ನಂತರ, 2019ರ ಜುಲೈ ಒಂದನೇ ದಿನಾಂಕದಿಂದ ಜಾರಿಯಾಗುವಂತೆ, ಈ ಕೆಳಗಿನ ನಿಯಮವನ್ನು ಸೇರಿಸತಕ್ಕದ್ದು, ಅಂದರೆ:

> **"32ಎ. ಕೇರಳ ಪ್ರವಾಹ ಉಪಕರ ಅನ್ವಯವಾಗುವ ಪ್ರಕರಣಗಳಲ್ಲಿ ಪೂರೈಕೆಯ ಮೌಲ್ಯ.**– ಕೇರಳ ಹಣಕಾಸು ಮಸೂದೆ, 2019ರ ಖಂಡ 14ರ ಅಡಿಯಲ್ಲಿ ಕೇರಳ ಪ್ರವಾಹ ಉಪಕರ ವಿಧಿಸಲಾದ ಸರಕು ಅಥವಾ

626

ಸೇವೆಗಳ ಅಥವಾ ಅವೆರಡರ ಪೂರೈಕೆಯ ಮೌಲ್ಯವು, ಅಧಿನಿಯಮದ ಪ್ರಕರಣ 15ರ ನಿಬಂಧನೆಗಳಿಗೆ ಒಳಪಟ್ಟು ನಿರ್ಧರಿಸಿದ ಮೌಲ್ಯ ಎಂದು ಪರಿಭಾವಿಸತಕ್ಕದ್ದು, ಆದರೆ ಸದರಿ ಉಪಕರವನ್ನು ಒಳಗೊಂಡಿರತಕ್ಕದ್ದಲ್ಲ."

5. ನಿಯಮ 46ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 46ರಲ್ಲಿ, ಐದನೆಯ ಪರಂತುಕದ ನಂತರ, ನಂತರ ಅಧಿಸೂಚಿಸುವ ದಿನಾಂಕದಿಂದ ಜಾರಿಗೆ ಬರುವಂತೆ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:–

"ಅಲ್ಲದೆ ಪರಂತು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರವು ಅಧಿಸೂಚನೆಯ ಮೂಲಕ ಮತ್ತು ಅದರಲ್ಲಿ ಹೇಳಿರುವ ಷರತ್ತುಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು, ತೆರಿಗೆ ಬೆಲೆಪಟ್ಟಿಯು ಕ್ಷಿಪ್ರ ಪ್ರತಿಕ್ರಿಯೆ (QR) ಸಂಕೇತವನ್ನು ಹೊಂದತಕ್ಕದ್ದು ಎಂದು ನಿರ್ದಿಷ್ಟಪಡಿಸಬಹುದು."

6. ನಿಯಮ 49ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 49ರಲ್ಲಿ, ಮೂರನೆಯ ಪರಂತುಕದ ನಂತರ, ನಂತರ ಅಧಿಸೂಚಿಸುವ ದಿನಾಂಕದಿಂದ ಜಾರಿಗೆ ಬರುವಂತೆ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:

"ಅಲ್ಲದೆ ಪರಂತು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರವು ಅಧಿಸೂಚನೆಯ ಮೂಲಕ ಮತ್ತು ಅದರಲ್ಲಿ ಹೇಳಿರುವ ಷರತ್ತುಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು, ಪೂರೈಕೆಯ ಬಿಲ್ಲು ಕ್ಷಿಪ್ರ ಪ್ರತಿಕ್ರಿಯೆ (QR) ಸಂಕೇತವನ್ನು ಹೊಂದತಕ್ಕದ್ದು ಎಂದು ನಿರ್ದಿಷ್ಟಪಡಿಸಬಹುದು."

7. ನಿಯಮ 66ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 66ರಲ್ಲಿ, ಉಪನಿಯಮ (2)ರಲ್ಲಿ,–

(ಎ) "ಪೂರೈಕೆದಾರರುಗಳಿಗೆ **ನಮೂನೆ ಜಿಎಸ್‌ಟಿಆರ್–2ಎ**ಯ ಭಾಗ ಸಿಯಲ್ಲಿ ಮತ್ತು **ನಮೂನೆ ಜಿಎಸ್‌ಟಿಆರ್–4ಎ** ಯಲ್ಲಿ" ಪದಗಳು, ಸಂಖ್ಯೆಗಳು ಮತ್ತು ಅಕ್ಷರಗಳಿಗಾಗಿ "ಮುರುಗಡೆ ಮಾಡಿಸಿಕೊಳ್ಳುವವರಿಗೆ" ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) "ಸಲ್ಲಿಸಲು ಇರುವ ಗಡುವು ದಿನಾಂಕದ ನಂತರ' ಪದಗಳನ್ನು ಬಿಟ್ಟು ಬಿಡತಕ್ಕದ್ದು;

(ಸಿ) "**ನಮೂನೆ ಜಿಎಸ್‌ಟಿಆರ್–7**ನ್ನು" ಪದಗಳು, ಸಂಖ್ಯೆ ಮತ್ತು ಅಕ್ಷರಗಳ ಮೊದಲು, "ದೃಢೀಕರಣದ ನಂತರ ಮುರುಗಡೆಯಾದ ತೆರಿಗೆಯ ಮೊತ್ತವನ್ನು ಅವನ ವಿದ್ಯುನ್ಮಾನ ನಗದು ಖಾತೆಯಲ್ಲಿ ಕ್ಲೇಮು ಮಾಡಲು" ಪದಗಳನ್ನು ಸೇರಿಸತಕ್ಕದ್ದು.

8. ನಿಯಮ 67ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 67ರಲ್ಲಿ, ಉಪನಿಯಮ (2)ರಲ್ಲಿ,–

(ಎ) "**ನಮೂನೆ ಜಿಎಸ್‌ಟಿಆರ್–2ಎ**ಯ ಭಾಗ ಸಿ ಯಲ್ಲಿ" ಪದಗಳು, ಸಂಖ್ಯೆ ಮತ್ತು ಅಕ್ಷರಗಳನ್ನು ಬಿಟ್ಟು ಬಿಡತಕ್ಕದ್ದು;

(ಬಿ) "ಸಲ್ಲಿಸಲು ಇರುವ ಗಡುವು ದಿನಾಂಕದ ನಂತರ" ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಸಿ) "**ನಮೂನೆ ಜಿಎಸ್‌ಟಿಆರ್–8**ನ್ನು" ಪದಗಳು, ಸಂಖ್ಯೆ ಮತ್ತು ಅಕ್ಷರಗಳ ಮೊದಲು, "ದೃಢೀಕರಣದ ನಂತರ ಸಂಗ್ರಹಿಸಲಾದ ತೆರಿಗೆಯ ಮೊತ್ತವನ್ನು ಅವನ ವಿದ್ಯುನ್ಮಾನ ನಗದು ಖಾತೆಯಲ್ಲಿ ಕ್ಲೇಮು ಮಾಡಲು" ಪದಗಳನ್ನು ಸೇರಿಸತಕ್ಕದ್ದು.

627

9. ನಿಯಮ 87ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 87ರಲ್ಲಿ,–

(ಎ) ಉಪನಿಯಮ (2)ರಲ್ಲಿ, ಎರಡನೆಯ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

(ಬಿ) ಉಪನಿಯಮ (9)ರಲ್ಲಿ,

(i) **"ನಮೂನೆ ಜಿಎಸ್‌ಟಿಆರ್–02**ರಲ್ಲಿ**"** ಪದಗಳು, ಅಕ್ಷರಗಳು ಮತ್ತು ಸಂಖ್ಯೆಗಳನ್ನು ಬಿಟ್ಟು ಬಿಡತಕ್ಕದ್ದು;

(ii) "ನಿಯಮ 87ರ ಉಪಬಂಧಗಳಿಗೆ ಅನುಸಾರವಾಗಿ**"** ಪದಗಳು ಮತ್ತು ಸಂಖ್ಯೆಗಳನ್ನು ಬಿಟ್ಟು ಬಿಡತಕ್ಕದ್ದು.

(ಸಿ) ಉಪನಿಯಮ (12)ರ ನಂತರ, ನಂತರ ಅಧಿಸೂಚಿಸುವ ದಿನಾಂಕದಿಂದ ಜಾರಿಯಾಗುವಂತೆ, ಈ ಕೆಳಗಿನ ಉಪನಿಯಮವನ್ನು ಸೇರಿಸತಕ್ಕದ್ದು, ಅಂದರೆ:

"(13) ಒಬ್ಬ ನೋಂದಾಯಿತ ವ್ಯಕ್ತಿಯು, ಅಧಿನಿಯಮದ ಅಡಿಯಲ್ಲಿಯ ವಿದ್ಯುನ್ಮಾನ ನಗದು ಖಾತೆಯಲ್ಲಿ ಲಭ್ಯ ಇರುವ ತೆರಿಗೆ, ಬಡ್ಡಿ, ದಂಡ, ಶುಲ್ಕದ ಮೊತ್ತ ಅಥವಾ ಇತರ ಯಾವುದೇ ಮೊತ್ತವನ್ನು ಏಕೀಕೃತ ತೆರಿಗೆ, ಕೇಂದ್ರ ತೆರಿಗೆ, ರಾಜ್ಯ ತೆರಿಗೆ ಅಥವಾ ಕೇಂದ್ರಾಡಳಿತ ಪ್ರದೇಶ ತೆರಿಗೆ ಅಥವಾ ಉಪಕರಕ್ಕಾಗಿ ವಿದ್ಯುನ್ಮಾನ ನಗದು ಖಾತೆಗೆ **"ನಮೂನೆ ಜಿಎಸ್‌ಟಿ ಪಿಎಮ್‌ಟಿ–09**ರಲ್ಲಿ ವರ್ಗಾಯಿಸಬಹುದು,**"**

10. ನಿಯಮ 91ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 91ರಲ್ಲಿ, ಉಪನಿಯಮ (3)ರಲ್ಲಿ, ನಂತರ ಅಧಿಸೂಚಿಸುವ ದಿನಾಂಕದಿಂದ ಜಾರಿಯಾಗುವಂತೆ, **"**ಸಂದಾಯದ ಸೂಚನೆ**"** ಪದಗಳಿಗಾಗಿ, **"**ಸಂದಾಯದ ಆದೇಶ**'** ಪದಗಳನ್ನು ಪ್ರತಿಯೋಜಿಸತಕ್ಕದ್ದು.

11. ನಿಯಮ 92ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 92ರಲ್ಲಿ, ನಂತರ ಅಧಿಸೂಚಿಸುವ ದಿನಾಂಕದಿಂದ ಜಾರಿಯಾಗುವಂತೆ,–

(ಎ) ಉಪನಿಯಮ (4)ರಲ್ಲಿ, **"**ಸಂದಾಯದ ಸೂಚನೆ**"** ಪದಗಳಿಗಾಗಿ, **"**ಸಂದಾಯದ ಆದೇಶ**'** ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಉಪನಿಯಮ (4)ರಲ್ಲಿ, **"**ಒಂದು ಆದೇಶವನ್ನು ಮಾಡತಕ್ಕದ್ದು ಮತ್ತು**"** ಪದಗಳ ನಂತರ, **"**ಒಂದು ಒಟ್ಟುಗೂಡಿಸಿದ ಪಾವತಿ ಸೂಚನೆಯ ಆಧಾರದ ಮೇಲೆ**"** ಪದಗಳನ್ನು ಸೇರಿಸತಕ್ಕದ್ದು;

(ಸಿ) ಉಪನಿಯಮ (4)ರ ನಂತರ, ಈ ಕೆಳಗಿನ ಉಪನಿಯಮವನ್ನು ಸೇರಿಸತಕ್ಕದ್ದು, ಅಂದರೆ:–

"(4ಎ) ಉಪನಿಯಮ (4)ರ ಅಡಿ ನೀಡಿದ ಒಟ್ಟುಗೂಡಿಸಿದ ಪಾವತಿ ಸೂಚನೆಯ ಆಧಾರದ ಮೇಲೆ ಕೇಂದ್ರ ಸರ್ಕಾರವು ಮರುಪಾವತಿಯನ್ನು ಬಟವಾಡೆ ಮಾಡತಕ್ಕದ್ದು.**"**;

(ಡಿ) ಉಪನಿಯಮ (5)ರಲ್ಲಿ, **"**ಸೂಚನೆಯನ್ನು**"** ಪದಕ್ಕಾಗಿ **"**ಆದೇಶವನ್ನು**"** ಪದವನ್ನು ಪ್ರತಿಯೋಜಿಸತಕ್ಕದ್ದು.

628

12. ನಿಯಮ 94ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 94ರಲ್ಲಿ, ನಂತರ ಅಧಿಸೂಚಿಸುವ ದಿನಾಂಕದಿಂದ ಜಾರಿಯಾಗುವಂತೆ, "ಸಂದಾಯದ ಸೂಚನೆ" ಪದಗಳಿಗಾಗಿ, "ಸಂದಾಯದ ಆದೇಶ' ಪದಗಳನ್ನು ಪ್ರತಿಯೋಜಿಸತಕ್ಕದ್ದು.

13. ಹೊಸ ನಿಯಮ 95ಎ ಯ ಸೇರ್ಪಡೆ.– ಸದರಿ ನಿಯಮಗಳ ನಿಯಮ 95ರ ನಂತರ, 2019ರ ಜುಲೈ ಒಂದನೇ ದಿನಾಂಕದಿಂದ ಜಾರಿಯಾಗುವಂತೆ, ಈ ಕೆಳಗಿನ ನಿಯಮವನ್ನು ಸೇರಿಸತಕ್ಕದ್ದು, ಅಂದರೆ:–

"95ಎ. ಹೊರಹೋಗುತ್ತಿರುವ ಒಬ್ಬ ಅಂತರ–ರಾಷ್ಟ್ರೀಯ ಯಾತ್ರಿಗೆ ತೆರಿಗೆ ಮುಕ್ತ ಪೂರೈಕೆಗಳನ್ನು ಮಾಡುವ ಒಂದು ಅಂತರ–ರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ಗಮನ ಪ್ರದೇಶದಲ್ಲಿ ವಲಸೆ ಕೌಂಟರುಗಳ ಆಚೆ ಸ್ಥಾಪಿಸಲಾದ ಬಿಡಿ ಮಾರಾಟದ ಮಳಿಗೆಗಳಿಗೆ ತೆರಿಗೆಗಳ ಮರುಪಾವತಿ.–

(1) ಭಾರತವನ್ನು ಬಿಟ್ಟು ಹೊರಹೋಗುತ್ತಿರುವ ಒಬ್ಬ ಅಂತರ–ರಾಷ್ಟ್ರೀಯ ಯಾತ್ರಿಗೆ ಸ್ಥಳೀಯ ಸರಕುಗಳನ್ನು ಪೂರೈಸುತ್ತಿರುವ, ಒಂದು ಅಂತರ–ರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ಗಮನ ಪ್ರದೇಶದಲ್ಲಿ ವಲಸೆ ಕೌಂಟರುಗಳ ಆಚೆ ಸ್ಥಾಪಿಸಲಾದ ಬಿಡಿ ಮಾರಾಟದ ಮಳಿಗೆಯು ಅಂತಹ ಸರಕುಗಳ ಒಳಮುಖ ಪೂರೈಕೆಗಳ ಮೇಲೆ ಅದು ಪಾವತಿಸಿರುವ ತೆರಿಗೆಯ ಮರುಪಾವತಿಯನ್ನು ಕ್ಲೇಮು ಮಾಡಲು ಅರ್ಹವಾಗಿರತಕ್ಕದ್ದು;

(2) ಅವನ ಒಳಮುಖ ಪೂರೈಕೆಗಳ ಮೇಲೆ ಪಾವತಿಸಿರುವ ತೆರಿಗೆಯ ಮರುಪಾವತಿಯನ್ನು ಕ್ಲೇಮು ಮಾಡುವ ಬಿಡಿ ಮಾರಾಟದ ಮಳಿಗೆಯು, ನೇರವಾಗಿ ಆಗಲಿ ಅಥವಾ ಆಯುಕ್ತರಿಂದ ಅಧಿಸೂಚಿತ ಸಹಾಯ ಕೇಂದ್ರದ ಮೂಲಕವಾಗಲಿ ಸಂದರ್ಭಾನುಸಾರವಾಗಿ ಮಾಸಿಕ ಅಥವಾ ತ್ರೈಮಾಸಿಕ ಆಧಾರದ ಮೇಲೆ ಸಾಮಾನ್ಯ ಪೋರ್ಟಲ್ ಮೇಲೆ **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–10**ಬಿಯಲ್ಲಿ ಮರುಪಾವತಿಯ ಕ್ಲೇಮಿಗಾಗಿ ಅರ್ಜಿಯನ್ನು ಒದಗಿಸತಕ್ಕದ್ದು;

(3) ಸಂದರ್ಭಾನುಸಾರವಾಗಿ ಆ ತಿಂಗಳು ಅಥವಾ ತ್ರೈಮಾಸಿಕದಲ್ಲಿ ಮಾಡಿದ ಪೂರೈಕೆಗಾಗಿ ನೀಡಿದ ಬೆಲೆಪಟ್ಟಿಗಳ ಸ್ವಯಂ–ಪ್ರಮಾಣಿತ ಒಟ್ಟುಗೂಡಿಸಿದ ವಿವರವನ್ನು ಸಂಬಂಧಿಸಿದ ಖರೀದಿ ಬೆಲೆಪಟ್ಟಿಯೊಂದಿಗೆ ಮರುಪಾವತಿ ಅರ್ಜಿಯೊಂದಿಗೆ ಒದಗಿಸತಕ್ಕದ್ದು.

(4) ಅಂತಹ ಬಿಡಿ ಮಾರಾಟದ ಮಳಿಗೆಯು ಪಾವತಿಸಿದ ತೆರಿಗೆಯ ಮರುಪಾವತಿಯು,–

(ಎ) ಅಂತಹ ಬಿಡಿ ಮಾರಾಟದ ಮಳಿಗೆಯಿಂದ ಸ್ವೀಕರಿಸಲಾದ ಸರಕುಗಳ ಒಳಮುಖ ಪೂರೈಕೆಯು ಒಬ್ಬ ನೋಂದಾಯಿತ ವ್ಯಕ್ತಿಯಿಂದ ಒಂದು ತೆರಿಗೆ ಬೆಲೆಪಟ್ಟಿಯೊಂದಿಗೆ ಆಗಿದ್ದರೆ;

(ಬಿ) ಅಂತಹ ಸರಕುಗಳನ್ನು ಅಂತಹ ಬಿಡಿ ಮಾರಾಟದ ಮಳಿಗೆಯಿಂದ ಒಬ್ಬ ಹೊರ ಹೋಗುತ್ತಿರುವ ಅಂತರ ರಾಷ್ಟ್ರೀಯ ಯಾತ್ರಿಗೆ ವಿದೇಶಿ ವಿನಿಮಯ ಪಡೆದು ಯಾವುದೇ ತೆರಿಗೆ ವಿಧಿಸದೆ ಪೂರೈಸಿದ್ದರೆ;

(ಸಿ) ಒಳಮುಖ ಪೂರೈಕೆಗಾಗಿ ತೆರಿಗೆ ಬೆಲೆಪಟ್ಟಿಯಲ್ಲಿ ಬಿಡಿ ಮಾರಾಟದ ಮಳಿಗೆಯ ಹೆಸರು ಹಾಗೂ ಸರಕು ಮತ್ತು ಸೇವೆಗಳ ತೆರಿಗೆ ಗುರುತು ಸಂಖ್ಯೆಯನ್ನು ನಮೂದಿಸಿದ್ದರೆ; ಮತ್ತು

(ಡಿ) ನಿರ್ದಿಷ್ಟ ಪಡಿಸಬಹುದಾದ ಅಂತಹ ಇತರ ನಿಬಂಧನೆಗಳು ಮತ್ತು ಷರತ್ತುಗಳನ್ನು ಪಾಲಿಸಿದ್ದರೆ, ಲಭ್ಯವಾಗತಕ್ಕದ್ದು.

629

(5) ನಿಯಮ 92ರ ಉಪಬಂಧಗಳು, ಅವಶ್ಯಕ ವ್ಯತ್ಯಾಸಗಳೊಂದಿಗೆ ಈ ನಿಯಮದ ಅಡಿಯಲ್ಲಿಯ ಮರುಪಾವತಿಯ ಮಂಜೂರು ಮತ್ತು ಪಾವತಿಗಾಗಿ ಅನ್ವಯಿಸತಕ್ಕದ್ದು.

ವಿವರಣೆ.– ಈ ನಿಯಮದ ಉದ್ದೇಶಗಳಿಗಾಗಿ, "ಹೊರಹೋಗುತ್ತಿರುವ ಅಂತರ–ರಾಷ್ಟ್ರೀಯ ಯಾತ್ರಿ" ಪದಾವಳಿಯು, ಸಾಮಾನ್ಯವಾಗಿ ಭಾರತದಲ್ಲಿ ವಾಸಿಯಲ್ಲದ ನ್ಯಾಯಸಮ್ಮತ ವಲಸೆರಹಿತ ಕಾರಣಗಳಿಗಾಗಿ ಆರು ತಿಂಗಳುಗಳನ್ನು ಮೀರದ ಅವಧಿಯ ವಸತಿಗಾಗಿ ಭಾರತವನ್ನು ಪ್ರವೇಶಿಸಿದ ಎಂದು ಅರ್ಥೈಸತಕ್ಕದ್ದು."

14. ನಿಯಮ 128ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 128ರಲ್ಲಿ,–

(ಎ) ಉಪನಿಯಮ (1)ರಲ್ಲಿ, "ಎರಡು ತಿಂಗಳ ಒಳಗಾಗಿ' ಪದಗಳ ನಂತರ "ಅಥವಾ ಲಿಖಿತವಾಗಿ ದಾಖಲಿಸಿದ ಕಾರಣಗಳಿಗಾಗಿ ಪ್ರಾಧಿಕಾರದಿಂದ ಹಾಗೆ ಅನುಮತಿಸಬಹುದಾದ ಒಂದು ತಿಂಗಳನ್ನು ಮೀರದ ಅಂತಹ ಹೆಚ್ಚಿನ ಅವಧಿಯೊಳಗಾಗಿ" ಪದಗಳನ್ನು ಸೇರಿಸತಕ್ಕದ್ದು;

(ಬಿ) ಉಪನಿಯಮ (2)ರಲ್ಲಿ,

(i) "ಮೇಲಿನ ಅರ್ಜಿಗಳನ್ನು" ಪದಗಳ ನಂತರ "ಅಥವಾ ಸ್ಥಾಯಿ ಸಮಿತಿಯಿಂದ ಕಳುಹಿಸಲಾದ ಅಂಥವುಗಳನ್ನು" ಪದಗಳನ್ನು ಸೇರಿಸತಕ್ಕದ್ದು;

(ii) "ಅರ್ಜಿಯನ್ನು" ಪದದ ನಂತರ "ಒಂದು ಲಿಖಿತ ಅರ್ಜಿಯ ಪಡೆಯುವಿಕೆಯ ಎರಡು ತಿಂಗಳೊಳಗಾಗಿ ಅಥವಾ ಲಿಖಿತವಾಗಿ ದಾಖಲಿಸಿದ ಕಾರಣಗಳಿಗಾಗಿ ಪ್ರಾಧಿಕಾರದಿಂದ ಹಾಗೆ ಅನುಮತಿಸಬಹುದಾದ ಒಂದು ತಿಂಗಳನ್ನು ಮೀರದ ಅಂತಹ ಹೆಚ್ಚಿನ ಅವಧಿಯೊಳಗಾಗಿ" ಪದಗಳನ್ನು ಸೇರಿಸತಕ್ಕದ್ದು.

15. ನಿಯಮ 129ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 129ರಲ್ಲಿ, ಉಪನಿಯಮ (6)ರಲ್ಲಿ, "ಸ್ವೀಕರಿಸಿದ ಮೂರು ತಿಂಗಳ ಒಳಗಾಗಿ" ಪದಗುಚ್ಛದಲ್ಲಿ ಉಪಯೋಗಿಸಿರುವ "ಮೂರು" ಪದಕ್ಕಾಗಿ "ಆರು" ಪದವನ್ನು ಪ್ರತಿಯೋಜಿಸತಕ್ಕದ್ದು.

16. ನಿಯಮ 132ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 132ರಲ್ಲಿ, ಉಪನಿಯಮ (1)ರಲ್ಲಿ, "ಲಾಭಬಡಕತನ ನಿರೋಧಕ ಡೈರೆಕ್ಟರ್ ಜನರಲ್" ಪದಗಳ ಮೊದಲು "ಪ್ರಾಧಿಕಾರ" ಪದವನ್ನು ಸೇರಿಸತಕ್ಕದ್ದು.

17. ನಿಯಮ 133ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 133ರಲ್ಲಿ,

(ಎ) ಉಪನಿಯಮ (1)ರಲ್ಲಿ, "ಮೂರು" ಪದಕ್ಕಾಗಿ "ಆರು" ಪದವನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಉಪನಿಯಮ (2)ರ ನಂತರ, ಈ ಕೆಳಗಿನ ಉಪನಿಯಮವನ್ನು ಸೇರಿಸತಕ್ಕದ್ದು, ಅಂದರೆ:–

"(2ಎ) ಉಪನಿಯಮ (1)ರ ಅಡಿಯಲ್ಲಿ ನಿರ್ಧರಣೆಯ ಪ್ರಕ್ರಿಯೆಯಲ್ಲಿ ನಿಯಮ 129ರ ಉಪನಿಯಮ (6)ರ ಅಡಿ ಸಲ್ಲಿಸಲಾದ ವರದಿಯ ಮೇಲೆ ಲಾಭಬಡಕತನ ನಿರೋಧಕ ಡೈರೆಕ್ಟರ್ ಜನರಲ್‌ರಿಂದ ಪ್ರಾಧಿಕಾರವು ಸ್ಪಷ್ಟೀಕರಣವನ್ನು, ಯಾವುದಾದರೂ ಇದ್ದರೆ, ಕೇಳಬಹುದು.";

(ಸಿ) ಉಪನಿಯಮ (3)ರಲ್ಲಿ, ಖಂಡ (ಸಿ)ಯಲ್ಲಿ, "ಮೇಲಿನ ಖಂಡದ ಅಡಿಯಲ್ಲಿ ನಿರ್ಧರಿಸಲಾದ ಮೊತ್ತದ ಶೇಕಡಾ ಐವತ್ತಕ್ಕೆ ಸಮನಾದ ಒಂದು ಮೊತ್ತದ ಠೇವಣಿಯನ್ನು" ಪದಗಳ ನಂತರ "ಹೆಚ್ಚಿನ ಮೊತ್ತದ ಸಂಗ್ರಹಣೆಯ ದಿನಾಂಕದಿಂದ ಅಂತಹ ಮೊತ್ತದ ಠೇವಣಿಯ ದಿನಾಂಕದ ವರೆಗೆ ಶೇಕಡಾ ಹದಿನೆಂಟರ ದರದ ಬಡ್ಡಿಯೊಂದಿಗೆ" ಪದಗಳನ್ನು ಸೇರಿಸತಕ್ಕದ್ದು;

(ಡಿ) ಉಪನಿಯಮ (3)ರಲ್ಲಿ, ವಿವರಣೆಯಲ್ಲಿ, "ಯಾವುದರ ಮೇಲೆ ಪ್ರಾಧಿಕಾರವು ಒಂದು ಆದೇಶವನ್ನು ಮಾಡುತ್ತದೆಯೋ ಆ ರಾಜ್ಯ" ಪದಗಳ ನಂತರ "ಕೇಂದ್ರಾಡಳಿತ ಪ್ರದೇಶ' ಪದಗಳನ್ನು ಸೇರಿಸತಕ್ಕದ್ದು;

(ಈ) ಉಪನಿಯಮ (4)ರ ನಂತರ, ಈ ಕೆಳಗಿನ ಉಪನಿಯಮವನ್ನು ಸೇರಿಸತಕ್ಕದ್ದು, ಅಂದರೆ:–

"(5) (ಎ) ಉಪ–ನಿಯಮ (4)ರಲ್ಲಿ ಏನೇ ಒಳಗೊಂಡಿದ್ದರೂ, ನಿಯಮ 129ರ ಉಪ–ನಿಯಮ (6)ರಲ್ಲಿ ಉಲ್ಲೇಖಿಸಲಾದ ಲಾಭಬಡಕತನ ನಿರೋಧಕ ಡೈರೆಕ್ಟರ್ ಜನರಲ್‌ರ ವರದಿ ಸ್ವೀಕೃತವಾದಾಗ ಪ್ರಾಧಿಕಾರವು ಸದರಿ ವರದಿಯಲ್ಲಿ ಒಳಗೊಂಡಿರುವದನ್ನು ಹೊರತು ಪಡಿಸಿ ಸರಕು ಅಥವಾ ಸೇವೆಗಳು ಅಥವಾ ಅವೆರಡಕ್ಕೂ ಸಂಬಂಧಿಸಿದಂತೆ ಪ್ರಕರಣ 171ರ ಉಲ್ಲಂಘನೆಯಾಗಿದೆ ಎಂದು ನಂಬಲು ಕಾರಣಗಳಿದ್ದಲ್ಲಿ, ಅದು, ಲಿಖಿತವಾಗಿ ದಾಖಲಿಸಿದ ಕಾರಣಗಳಿಗಾಗಿ, ಉಪ–ನಿಯಮ (1)ರಲ್ಲಿ ನಿರ್ದಿಷ್ಟ ಪಡಿಸಿದ ಕಾಲಮಿತಿಯೊಳಗಾಗಿ, ಲಾಭಬಡಕತನ ನಿರೋಧಕ ಡೈರೆಕ್ಟರ್ ಜನರಲ್‌ರಿಗೆ ಅಧಿನಿಯಮ ಮತ್ತು ಈ ನಿಯಮಗಳ ಸಂಬಂಧಿಸಿದಂತೆ ತನಿಖೆ ಅಥವಾ ವಿಚಾರಣೆಯನ್ನು ಮಾಡಿಸಲು ನಿರ್ದೇಶಿಸಬಹುದು.

(ಬಿ) ಖಂಡ (ಎ) ಅಡಿಯಲ್ಲಿಯ ತನಿಖೆ ಅಥವಾ ವಿಚಾರಣೆಯು ಒಂದು ಹೊಸ ತನಿಖೆ ಅಥವಾ ವಿಚಾರಣೆಯೆಂದು ಪರಿಭಾವಿಸತಕ್ಕದ್ದು ಮತ್ತು ನಿಯಮ 129ರ ಎಲ್ಲಾ ಉಪಬಂಧಗಳು ಅವಶ್ಯಕ ವ್ಯತ್ಯಾಸಗಳೊಂದಿಗೆ ಅಂತಹ ತನಿಖೆ ಅಥವಾ ವಿಚಾರಣೆಗೆ ಅನ್ವಯಿಸತಕ್ಕದ್ದು.".

18. ನಿಯಮ 138ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 138ರಲ್ಲಿ, ಉಪ–ನಿಯಮ (10)ರಲ್ಲಿ,–

(ಎ) ಕೋಷ್ಟಕದಲ್ಲಿ, ಅಂಕಣ (3)ರಲ್ಲಿ, ಕ್ರಮ ಸಂ. 1ರಿಂದ ಕ್ರಮ ಸಂ. 4ರ ಎದುರು, "ಮೀರಿದ ಆಯಾಮದ ಕಾರ್ಗೋ" ಪದಗಳ ನಂತರ, "ಅಥವಾ ಅದರಲ್ಲಿ ನೌಕೆಯಿಂದ ಸಾಗಾಣಿಕೆಯ ಕನಿಷ್ಠ ಒಂದು ಭಾಗ ಹೊಂದಿರುವ ಬಹು–ವಿಧಾನಗಳ ಸರಕು ಸಾಗಾಣಿಕೆ" ಪದಗಳನ್ನು ಸೇರಿಸತಕ್ಕದ್ದು;

(ಬಿ) ಎರಡನೆಯ ಪರಂತುಕದ ನಂತರ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:–

"ಅಲ್ಲದೆ ಪರಂತು, ಇ–ವೇ ಬಿಲ್ಲಿನ ಸಿಂಧುತ್ವವನ್ನು ಅದರ ಮುಕ್ತಾಯದ ಸಮಯದಿಂದ ಎಂಟು ಘಂಟೆಗಳ ಒಳಗಾಗಿ ವಿಸ್ತರಿಸಬಹುದು."

19. ನಿಯಮ 138ಇ ಯ ತಿದ್ದುಪಡಿ.– ಸದರಿ ನಿಯಮಗಳ ನಿಯಮ 138ಇ ಯಲ್ಲಿ,–

(ಎ) "ಪ್ರಕರಣ 10ರ ಅಡಿಯಲ್ಲಿ ತೆರಿಗೆ ಸಂದಾಯ ಮಾಡುತ್ತಿರುವ" ಪದಗಳ ನಂತರ, "ಅಥವಾ ಕರ್ನಾಟಕ ವಿಶೇಷ ರಾಜ್ಯಪತ್ರ, ಭಾಗ–IVಎ, ಸಂ. 222, ದಿನಾಂಕ 7ನೆ ಮಾರ್ಚ್ 2019ರಲ್ಲಿ ಪ್ರಕಟಿಸಲಾದ ಕರ್ನಾಟಕ ಸರ್ಕಾರದ ಅಧಿಸೂಚನೆ (02/2019) ಸಂ. ಆಇ 48 ಸಿಎಸ್‌ಎಲ್ 2017 ದಿನಾಂಕ 7ನೆ ಮಾರ್ಚ್ 2019ರ ಸೌಲಭ್ಯ ಪಡೆಯುತ್ತಿರುವ" ಪದಗಳು, ಸಂಖ್ಯೆಗಳು ಮತ್ತು ಅಕ್ಷರಗಳನ್ನು ಸೇರಿಸತಕ್ಕದ್ದು;

(ಬಿ) "ರಿಟರ್ನ್" ಪದಕ್ಕಾಗಿ **"ನಮೂನೆ ಜಿಎಸ್‌ಟಿ ಸಿಎಮ್‌ಪಿ–08**ರಲ್ಲಿ ಹೇಳಿಕೆ"ಪದಗಳು,ಅಕ್ಷರಗಳು ಮತ್ತು ಸಂಖ್ಯೆಗಳನ್ನು ಪ್ರತಿಯೋಜಿಸತಕ್ಕದ್ದು;

(ಸಿ) "ತೆರಿಗೆ ಅವಧಿಗಳು" ಪದಗಳಿಗಾಗಿ "ತ್ರೈಮಾಸಿಕಗಳು" ಪದವನ್ನು ಪ್ರತಿಯೋಜಿಸತಕ್ಕದ್ದು.

20. ನಮೂನೆ ಜಿಎಸ್‌ಟಿ ಆರ್‌ಈಜಿ–01ರ ತಿದ್ದುಪಡಿ.– ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಆರ್‌ಈಜಿ–01**ರಲ್ಲಿ, "ಅಪ್‌ಲೋಡ್ ಮಾಡಬೇಕಾದ ದಸ್ತಾವೇಜುಗಳ ಪಟ್ಟಿ"ಗೆ ಅನುಬಂಧಿಸಿದ ಕೋಷ್ಟಕದಲ್ಲಿ, ಕ್ರಮ ಸಂ. 4ರ ಎದುರು,

631

ಶೀರ್ಷಿಕೆಯಲ್ಲಿ, "ಬ್ಯಾಂಕ್ ಖಾತೆಗೆ ಸಂಬಂಧ ಪಟ್ಟ ಪುರಾವೆ" ಪದಗಳ ನಂತರ, "ಅಂತಹ ಖಾತೆಯ ವಿವರಗಳನ್ನು ಒದಗಿಲಾಗಿದ್ದಲ್ಲಿ" ಪದಗಳನ್ನು ಸೇರಿಸತಕ್ಕದ್ದು.

21. ನಮೂನೆ ಜಿಎಸ್‌ಟಿ ಆರ್‌ಇಜಿ–07ನ ತಿದ್ದುಪಡಿ.– ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಆರ್‌ಇಜಿ–07**ರಲ್ಲಿ, ಭಾಗ–ಬಿಯಲ್ಲಿ, ಈ ಕೆಳಗಿನ ನಮೂದನ್ನು ಸೇರಿಸತಕ್ಕದ್ದು, ಅಂದರೆ:–

"12ಎ. ಬ್ಯಾಂಕ್ ಖಾತೆ(ಗಳ) ವಿವರಗಳು (ಐಚ್ಛಿಕ)

ಅರ್ಜಿದಾರನಿಂದ ನಿರ್ವಹಿಸಲಾಗುತ್ತಿರುವ ಬ್ಯಾಂಕ್ ಖಾತೆಗಳ ಒಟ್ಟು ಸಂಖ್ಯೆ (10 ಬ್ಯಾಂಕ್ ಖಾತೆಗಳನ್ನು ವರದಿ ಮಾಡಬಹುದು)	

ಬ್ಯಾಂಕ್ ಖಾತೆ 1ರ ವಿವರಗಳು

ಖಾತೆಯ ಸಂಖ್ಯೆ													
ಖಾತೆಯ ವಿಧ							ಐಎಫ್‌ಎಸ್‌ಸಿ						
ಬ್ಯಾಂಕ್‌ನ ಹೆಸರು													
ಶಾಖೆಯ ವಿಳಾಸ	ಸ್ವಯಂ ತುಂಬಿಕೊಳ್ಳತಕ್ಕದ್ದು (ಎಡಿಟ್ ಮೋಡ್)												

ಟಿಪ್ಪಣಿ – ಹೆಚ್ಚಿನ ಬ್ಯಾಂಕ್ ಖಾತೆಗಳನ್ನು ಸೇರಿಸಿ.".

22. ನಮೂನೆ ಜಿಎಸ್‌ಟಿ ಆರ್‌ಇಜಿ–12ನ ತಿದ್ದುಪಡಿ.– ಸದರಿ ನಿಯಮಗಳ ನಮೂನೆ ಜಿಎಸ್‌ಟಿ ಆರ್‌ಇಜಿ–12ರಲ್ಲಿ, ನಮೂದು 12ರ ನಂತರ, ಈ ಕೆಳಗಿನ ನಮೂದನ್ನು ಸೇರಿಸತಕ್ಕದ್ದು, ಅಂದರೆ:–

"13. ಬ್ಯಾಂಕ್ ಖಾತೆ(ಗಳ) ವಿವರಗಳು (ಐಚ್ಛಿಕ)

ಅರ್ಜಿದಾರನಿಂದ ನಿರ್ವಹಿಸಲಾಗುತ್ತಿರುವ ಬ್ಯಾಂಕ್ ಖಾತೆಗಳ ಒಟ್ಟು ಸಂಖ್ಯೆ (10 ಬ್ಯಾಂಕ್ ಖಾತೆಗಳನ್ನು ವರದಿ ಮಾಡಬಹುದು)	

ಬ್ಯಾಂಕ್ ಖಾತೆ 1ರ ವಿವರಗಳು

ಖಾತೆಯ ಸಂಖ್ಯೆ													
ಖಾತೆಯ ವಿಧ							ಐಎಫ್‌ಎಸ್‌ಸಿ						
ಬ್ಯಾಂಕ್‌ನ ಹೆಸರು													
ಶಾಖೆಯ ವಿಳಾಸ	ಸ್ವಯಂ ತುಂಬಿಕೊಳ್ಳತಕ್ಕದ್ದು (ಎಡಿಟ್ ಮೋಡ್)												

ಟಿಪ್ಪಣಿ – ಹೆಚ್ಚಿನ ಬ್ಯಾಂಕ್ ಖಾತೆಗಳನ್ನು ಸೇರಿಸಿ".

23. ನಮೂನೆ ಜಿಎಸ್‌ಟಿಆರ್–4ರ ಪ್ರತಿಯೋಜನೆ.– ಸದರಿ ನಿಯಮಗಳ **ನಮೂನೆ ಜಿಎಸ್‌ಟಿಆರ್–4**ಕ್ಕಾಗಿ, ಈ ಕೆಳಗಿನ ನಮೂನೆಯನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ನಮೂನೆ ಜಿಎಸ್‌ಟಿಆರ್ –4

[ನಿಯಮ 62 ನೋಡಿ]

ರಾಜೀ ಪದ್ಧತಿಯನ್ನು ಆಯ್ಕೆಮಾಡಿಕೊಂಡ ಅಥವಾ ಅಧಿಸೂಚನೆ ಸಂ.02/2019–ಕೇಂದ್ರ ತೆರಿಗೆ (ದರ)ದ ಪ್ರಯೋಜನವನ್ನು ಉಪಯೋಗಿಸಿದ ನೋಂದಾಯಿತ ವ್ಯಕ್ತಿಗಾಗಿ ತ್ರೈಮಾಸಿಕ ರಿಟರ್ನ್

ವರ್ಷ				

632

1.		ಜಿಎಸ್‌ಟಿಐಎನ್	
2.	(ಎ)	ನೋಂದಾಯಿತ ವ್ಯಕ್ತಿಯ ಕಾನೂನುಸಮ್ಮತ ಹೆಸರು	(ಸ್ವಯಂ ಜನ್ಯವಾಗುತ್ತದೆ)
	(ಬಿ)	ವ್ಯವಹಾರಿಕ ಹೆಸರು, ಯಾವುದಾದರೂ ಇದ್ದಲ್ಲಿ	(ಸ್ವಯಂ ಜನ್ಯವಾಗುತ್ತದೆ)
3.	(ಎ)	ಹಿಂದಿನ ಹಣಕಾಸು ವರ್ಷದಲ್ಲಿನ ಸಮಗ್ರ ವಹಿವಾಟು	
	(ಬಿ)	ಎಆರ್‌ಎನ್	<ಸ್ವಯಂ ಜನ್ಯವಾಗುತ್ತದೆ> (ಸಲ್ಲಿಸಿದ ನಂತರ)>
	(ಸಿ)	ಎಆರ್‌ಎನ್‌ನ ದಿನಾಂಕ	<ಸ್ವಯಂ ಜನ್ಯವಾಗುತ್ತದೆ> (ಸಲ್ಲಿಸಿದ ನಂತರ)>

4. ಅವುಗಳ ಮೇಲೆ ಹಿಮ್ಮುಖ ವಿಧಿಸುವಿಕೆಯಲ್ಲಿ ತೆರಿಗೆಯನ್ನು ಸಂದಾಯ ಮಾಡಬೇಕಿರುವ ಒಳಮುಖ ಪೂರೈಕೆಗಳು

ಪೂರೈಕೆದಾರನ ಜಿಎಸ್‌ಟಿಐಎನ್	ಬೆಲೆಪಟ್ಟಿಯ ವಿವರಗಳು			ದರ	ತೆರಿಗೆದಾಯಕ ಮೌಲ್ಯ	ತೆರಿಗೆಯ ಮೊತ್ತ				ಪೂರೈಕೆಯ ಸ್ಥಳ (ರಾಜ್ಯದ
	ಸಂಖ್ಯೆ	ದಿನಾಂಕ	ಮೌಲ್ಯ			ಏಕೀಕೃತ ತೆರಿಗೆ	ಕೇಂದ್ರ ತೆರಿಗೆ	ರಾಜ್ಯ/ ಕೇಂ.ಪ್ರ ತೆರಿಗೆ	ಉಪಕರ	
1	2	3	4	5	6	7	8	9	10	11
4ಎ. ಒಬ್ಬ ನೋಂದಾಯಿತ ಪೂರೈಕೆದಾರನಿಂದ ಸ್ವೀಕರಿಸಿದ ಒಳಮುಖ ಪೂರೈಕೆಗಳು (ಹಿಮ್ಮುಖ ವಿಧಿಸುವಿಕೆಯನ್ನು ಆಕರ್ಷಿಸುವ ಪೂರೈಕೆಗಳನ್ನು ಹೊರತುಪಡಿಸಿದಂತೆ)										
4ಬಿ. ಒಬ್ಬ ನೋಂದಾಯಿತ ಪೂರೈಕೆದಾರನಿಂದ ಸ್ವೀಕರಿಸಿದ ಒಳಮುಖ ಪೂರೈಕೆಗಳು(ಹಿಮ್ಮುಖ ವಿಧಿಸುವಿಕೆಯನ್ನು ಆಕರ್ಷಿಸುವವು)										
4ಸಿ. ಒಬ್ಬ ನೋಂದಾಯಿತನಲ್ಲದ ಪೂರೈಕೆದಾರನಿಂದ ಸ್ವೀಕರಿಸಿದ ಒಳಮುಖ ಪೂರೈಕೆಗಳು										
4ಡಿ. ಸೇವೆಯ ಆಮದು										

5. ನಮೂನೆ ಜಿಎಸ್‌ಟಿ ಸಿಎಂಪಿ–08ರ ಪ್ರಕಾರ ಸ್ವಯಂ–ನಿರ್ಧರಿಸಿದ ಬಾಧ್ಯತೆಯ ಸಾರಾಂಶ (ನೀಡಲಾದ ಖರ್ಚು ಚೀಟಿಗಳು/ಜಮೆ ಚೀಟಿಗಳು ಮತ್ತು ಅವುಗಳ ತರುವಾಯದ ತಿದ್ದುಪಡಿಗಳನ್ನು ಒಳಗೊಂಡಂತೆ)

ಕ್ರ.ಸಂ.	ವಿವರಣೆ	ಮೌಲ್ಯ	ತೆರಿಗೆಯ ಮೊತ್ತ			
			ಏಕೀಕೃತ ತೆರಿಗೆ	ಕೇಂದ್ರ ತೆರಿಗೆ	ರಾಜ್ಯ/ ಕೇಂ.ಪ್ರ. ತೆರಿಗೆ	ಉಪಕರ
1	2	3	4	5	6	7
1.	ಹೊರಮುಖ ಪೂರೈಕೆಗಳು (ವಿನಾಯಿತ ಪೂರೈಕೆಗಳನ್ನು ಒಳಗೊಂಡ)	<ಸ್ವಯಂ>	<ಸ್ವಯಂ>	<ಸ್ವಯಂ>	<ಸ್ವಯಂ>	<ಸ್ವಯಂ>
2.	ಹಿಮ್ಮುಖ ವಿಧಿಸುವಿಕೆಯನ್ನು ಆಕರ್ಷಿಸುವ ಒಳಮುಖ ಪೂರೈಕೆಗಳು,	<ಸ್ವಯಂ>	<ಸ್ವಯಂ>	<ಸ್ವಯಂ>	<ಸ್ವಯಂ>	<ಸ್ವಯಂ>

633

	ಸೇವೆಗಳ ಆಮದುಗಳನ್ನು ಒಳಗೊಂಡಂತೆ					
3.	ಪಾವತಿಸಿದ ತೆರಿಗೆ (1+2)	<ಸ್ವಯಂ>	<ಸ್ವಯಂ>	<ಸ್ವಯಂ>	<ಸ್ವಯಂ>	<ಸ್ವಯಂ>
4.	ಪಾವತಿಸಿದ ಬಡ್ಡಿ, ಅವು ಇದ್ದಲ್ಲಿ	<ಸ್ವಯಂ>	<ಸ್ವಯಂ>	<ಸ್ವಯಂ>	<ಸ್ವಯಂ>	<ಸ್ವಯಂ>

6. ವರ್ಷದಲ್ಲಿ ಹೊರಮುಖ ಪೂರೈಕೆಗಳು / ಹಿಮ್ಮುಖ ವಿಧಿಸುವಿಕೆಯನ್ನು ಆಕರ್ಷಿಸುವ ಒಳಮುಖ ಪೂರೈಕೆಗಳ ತೆರಿಗೆ ದರವಾರು ವಿವರಗಳು (ನೀಡಲಾದ ಖರ್ಚು ಚೀಟಿಗಳು/ಜಮೆ ಚೀಟಿಗಳು ಮತ್ತು ಅವುಗಳ ತರುವಾಯದ ತಿದ್ದುಪಡಿಗಳನ್ನು ಒಳಗೊಂಡಂತೆ)

ಕ್ರ.ಸಂ	ಪೂರೈಕೆಯ ವಿಧ (ಹೊರಮುಖ / ಒಳಮುಖ)	ತೆರಿಗೆ ದರ (%)	ಮೌಲ್ಯ	ತೆರಿಗೆಯ ಮೊತ್ತ			
				ಏಕೀಕೃತ ತೆರಿಗೆ	ಕೇಂದ್ರ ತೆರಿಗೆ	ರಾಜ್ಯ/ ಕೇಂ.ಪ್ರ. ತೆರಿಗೆ	ಉಪಕರ
1	**2**	**3**	**4**	**5**	**6**	**7**	8
				<ಸ್ವಯಂ>	<ಸ್ವಯಂ>	<ಸ್ವಯಂ>	<ಸ್ವಯಂ>
				<ಸ್ವಯಂ>	<ಸ್ವಯಂ>	<ಸ್ವಯಂ>	<ಸ್ವಯಂ>
				<ಸ್ವಯಂ>	<ಸ್ವಯಂ>	<ಸ್ವಯಂ>	<ಸ್ವಯಂ>
		ಒಟ್ಟು		<ಸ್ವಯಂ>	<ಸ್ವಯಂ>	<ಸ್ವಯಂ>	<ಸ್ವಯಂ>

7. ಸ್ವೀಕರಿಸಿದ ಟಿಡಿಎಸ್ / ಟಿಸಿಎಸ್ ಜಮೆ

ಕಡಿತಗೊಳಿಸುವವನ / ಇ–ವಾಣಿಜ್ಯ ನಿರ್ವಾಹಕನ ಜಿಎಸ್‌ಟಿಐಎನ್	ಒಟ್ಟು ಮೌಲ್ಯ	ಮೊತ್ತ	
		ಕೇಂದ್ರ ತೆರಿಗೆ	ರಾಜ್ಯ / ಕೇಂ.ಪ್ರ. ತೆರಿಗೆ
1	2	3	4

8. ಪಾವತಿಸಬೇಕಾದ ಮತ್ತು ಪಾವತಿಸಿದ ತೆರಿಗೆ, ಬಡ್ಡಿ, ವಿಳಂಬ ಶುಲ್ಕ

ಕ್ರ. ಸಂ	ತೆರಿಗೆಯ ವಿಧ	ಪಾವತಿಸಬೇಕಾದ ತೆರಿಗೆಯ ಮೊತ್ತ (ಕೋಷ್ಟಕ 6ದ ಪ್ರಕಾರ)	ಆಗಲೇ ಪಾವತಿಸಿದ ತೆರಿಗೆ ಮೊತ್ತ (ನಮೂನೆ ಜಿಎಸ್‌ಟಿ ಸಿಎಂಪಿ–08 ಮೂಲಕ)	ಪಾವತಿಸಿದ ತೆರಿಗೆಯ ಬಾಕಿ ಮೊತ್ತ, ಅವು ಇದ್ದಲ್ಲಿ (3–4)	ಪಾವತಿಸಬೇಕಾದ ಬಡ್ಡಿ	ಪಾವತಿಸಿದ ಬಡ್ಡಿ	ಪಾವತಿಸಬೇಕಾದ ವಿಳಂಬ ಶುಲ್ಕ	ಪಾವತಿಸಿದ ವಿಳಂಬ ಶುಲ್ಕ
1	2	3	4	5	6	7	8	9
1.								
2.								
3.								
4.								

9. ವಿದ್ಯುನ್ಮಾನ ನಗದು ಖಾತೆಯಿಂದ ಕ್ಲೇಮು ಮಾಡಿದ ಮರುಪಾವತಿ

ವಿವರಣೆ	ತೆರಿಗೆ	ಬಡ್ಡಿ	ದಂಡ	ಶುಲ್ಕ	ಇತರೆ	ಡೆಬಿಟ್ ನಮೂದು ಸಂ.ಗಳು
1	2	3	4	5	6	7
(ಎ) ಏಕೀಕೃತ ತೆರಿಗೆ						
(ಬಿ) ಕೇಂದ್ರ ತೆರಿಗೆ						
(ಸಿ) ರಾಜ್ಯ / ಕೇಂ.ಪ್ರ. ತೆರಿಗೆ						
(ಡಿ) ಉಪಕರ						
ಬ್ಯಾಂಕ್ ಖಾತೆಯ ವಿವರಗಳು (ಡ್ರಾಪ್ ಡೌನ್)						

634

ಪರಿಶೀಲನೆ

ಮೇಲೆ ನೀಡಲಾದ ಮಾಹಿತಿಯು ನನ್ನ ತಿಳುವಳಿಕೆಯ ಮತ್ತು ನಂಬಿಕೆ ಮಟ್ಟಿಗೆ ಸತ್ಯವಾಗಿರುತ್ತದೆ ಮತ್ತು ಸರಿಯಾಗಿರುತ್ತದೆ ಹಾಗೂ ಯಾವುದೇ ಮಾಹಿತಿಯನ್ನು ಅದರಿಂದ ಮರೆಮಾಚಿರುವುದಿಲ್ಲ ಎಂದು ನಾನು, ಈ ಮೂಲಕ ಶ್ರದ್ಧಾಪೂರ್ವಕವಾ ದೃಢೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

ಪ್ರಾಧಿಕೃತ ಸಹಿದಾರನ ಸಹಿ

ಸ್ಥಳ
ದಿನಾಂಕ

ಪ್ರಾಧಿಕೃತ ಸಹಿದಾರನ ಹೆಸರು
ಪದನಾಮ/ ಸ್ಥಾನ

ಸೂಚನೆಗಳು:–

1. ಉಪಯೋಗಿಸಿದ ಪದಗಳು
   (ಎ) ಜಿಎಸ್‌ಟಿಐಎನ್: ಸರಕು ಮತ್ತು ಸೇವೆಗಳ ತೆರಿಗೆ ಗುರುತಿನ ಸಂಖ್ಯೆ
   (ಬಿ) ಟಿಡಿಎಸ್ : ಮೂಲದಲ್ಲಿ ಕಟಾಯಿಸಿದ ತೆರಿಗೆ
   (ಸಿ) ಟಿಸಿಎಸ್ : ಮೂಲದಲ್ಲಿ ಸಂಗ್ರಹಿಸಿದ ತೆರಿಗೆ
2. ಪ್ರತಿಯೊಂದು ಹಣಕಾಸು ವರ್ಷ ಅಥವಾ ಅದರ ಭಾಗಕ್ಕಾಗಿ, ನಮೂನೆ ಜಿಎಸ್‌ಟಿಆರ್–4ನಲ್ಲಿನ ವಿವರಗಳನ್ನು, ಅಂಥ ಹಣಕಾಸು ವರ್ಷದ ಮುಕ್ತಾಯದ ನಂತರದ ಏಪ್ರಿಲ್ ಮೂವತ್ತನೇಯ ದಿನದ ತನಕ ಸಲ್ಲಿಸತಕ್ಕದ್ದು.
3. ಅತ್ಯಂತ ನಿಕಟವಾದ ಹಣಕಾಸು ವರ್ಷಕ್ಕಾಗಿ ಕರದಾತನ ಸಮಗ್ರ ವಹಿವಾಟು ಸ್ವಯಂ ತುಂಬಲಾಗುತ್ತದೆ.
4. ಒಳಮುಖ ಪೂರೈಕೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು, ಒಟ್ಟಾರೆಯ ಆಧಾರದ ಮೇಲೆ, ದರವಾರು, ಜಿಎಸ್‌ಟಿಐಎನ್ ವಾರು, ಕೋಷ್ಟಕ 4ರಲ್ಲಿ ಹಿಡಿಯತಕ್ಕದ್ದು:
   (i) ಕೋಷ್ಟಕ 4ಎ ನೋಂದಾಯಿತ ಪೂರೈಕೆದಾರನಿಂದ ಒಳಮುಖ ಪೂರೈಕೆಗಳನ್ನು, ಯಾವುದರ ಮೇಲೆ ಹಿಮ್ಮುಖ ವಿಧಿಸುವಿಕೆಯು ಆಕರ್ಷಿತವಾಗುತ್ತದೆಯೋ ಅವನ್ನು ಹೊರತುಪಡಿಸಿದ, ಹಿಡಿದಿಡಲು
   (ii) ಕೋಷ್ಟಕ 4ಬಿ ನೋಂದಾಯಿತ ಪೂರೈಕೆದಾರನಿಂದ ಹಿಮ್ಮುಖ ವಿಧಿಸುವಿಕೆ ಆಕರ್ಷಿತವಾಗುವ ಒಳಮುಖ ಪೂರೈಕೆಗಳನ್ನು ಹಿಡಿದಿಡಲು
   (iii) ಕೋಷ್ಟಕ 4ಸಿ ಅನೋಂದಾಯಿತ ಪೂರೈಕೆದಾರನಿಂದ ಆಗುವ ಪೂರೈಕೆಗಳನ್ನು ಹಿಡಿದಿಡಲು
   (iv) ಕೋಷ್ಟಕ 4ಡಿ ಸೇವೆಗಳ ಆಮದನ್ನು ಹಿಡಿದಿಡಲು
5. ಕೋಷ್ಟಕ 5 ಹಣಕಾಸು ವರ್ಷದಲ್ಲಿ ನಮೂನೆ ಜಿಎಸ್‌ಟಿ ಸಿಎಂಪಿ–08ರಲ್ಲಿ ಹಿಂದೆ ಘೋಷಿಸಿದ ಹೊರಮುಖ ಪೂರೈಕೆಗಳ (ವಿನಾಯಿತ ಪೂರೈಕೆಗಳನ್ನು ಒಳಗೊಂಡಂತೆ) ಮತ್ತು ಸೇವೆಗಳ ಆಮದನ್ನು ಒಳಗೊಂಡ ಹಿಮ್ಮುಖ ವಿಧಿಸುವಿಕೆಯನ್ನು ಆಕರ್ಷಿಸುವ ಒಳಮುಖ ಪೂರೈಕೆಗ ವಿವರಗಳನ್ನು ಹಿಡಿದಿಡಲು
6. ತೆರಿಗೆ ಕಡಿತಗೊಳಿಸುವವನಿಂದ / ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕನಿಂದ ಸ್ವೀಕರಿಸಿದ ಟಿಡಿಎಸ್/ಟಿಸಿಎಸ್ ಜಮೆಯು ಕೋಷ್ಟಕ 7ರಲ್ಲಿ ಸ್ವಯಂ–ತುಂಬಲಾಗುತ್ತದೆ.".

24. **ನಮೂನೆ ಜಿಎಸ್‌ಟಿಆರ್–9ರ ತಿದ್ದುಪಡಿ.**– ಸದರಿ ನಿಯಮಗಳ **ನಮೂನೆ ಜಿಎಸ್‌ಟಿಆರ್–9**ರಲ್ಲಿ, –

(ಎ) ಕೋಷ್ಟಕದಲ್ಲಿ, ಕ್ರಮ ಸಂ.8ರಲ್ಲಿ, ಅಂಕಣ 2ರಲ್ಲಿ, ಸಿ ಸಾಲಿನಲ್ಲಿ, "ಏಪ್ರಿಲ್ – ಸೆಪ್ಟಂಬರ್ 2018ರ" ಪದಗಳು ಮತ್ತು ಸಂಖ್ಯೆಗಳಿಗಾಗಿ, "ಏಪ್ರಿಲ್ 2018ರಿಂದ ಮಾರ್ಚ್ 2019ರವರೆಗಿನ" ಸಂಖ್ಯೆಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಕೋಷ್ಟಕದಲ್ಲಿ, ಭಾಗ Vರಲ್ಲಿ, ಅಂಕಣ 2ರಲ್ಲಿ, ಶೀರ್ಷಿಕೆಗಾಗಿ, "ಏಪ್ರಿಲ್ 2018ರಿಂದ ಮಾರ್ಚ್ 2019ತನಕದ ಮಧ್ಯದ ರಿಟರ್ನ್‌ಗಳಲ್ಲಿ ಘೋಷಿಸಿದ, ಹಣಕಾಸು ವರ್ಷ 2017–18ಕ್ಕಾಗಿಯ ವ್ಯವಹಾರಗಳ ವಿವರಗಳು" ಪದಗಳು,

635

ಸಂಖ್ಯೆಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಸಿ) ಸೂಚನೆಗಳಲ್ಲಿ, ಕ್ರಮ ಸಂಖ್ಯೆ 3ನ್ನು ಬಿಟ್ಟುಬಿಡತಕ್ಕದ್ದು;

(ಡಿ) ಸೂಚನೆಗಳಲ್ಲಿ, ಕ್ರಮ ಸಂ. 4ರಲ್ಲಿ, "ಎಲ್ಲಾ ಪೂರೈಕೆಗಳನ್ನು, ಈ ಭಾಗದಲ್ಲಿ ಘೋಷಿಸತಕ್ಕದ್ದು ಎಂಬುದನ್ನು ಗಮನಿಸಬಹುದು." ಪದಗಳಿಂದ ಕೊನೆಗೊಳ್ಳುವ ವಾಕ್ಯದ ನಂತರ, ಈ ಕೆಳಗಿನ ಪದಗಳು, ಅಕ್ಷರಗಳು ಮತ್ತು ಸಂಖ್ಯೆಗಳನ್ನು ಸೇರಿಸತಕ್ಕದ್ದು, ಅಂದರೆ:–

"ನಮೂನೆ ಜಿಎಸ್‌ಟಿಆರ್–1 ಮತ್ತು ನಮೂನೆ ಜಿಎಸ್‌ಟಿಆರ್–3ಬಿಯಲ್ಲಿ ಘೋಷಿಸದ ಆ.ವ. 2017–18ಕ್ಕಾಗಿ ಹೆಚ್ಚುವರಿ ಬಾಧ್ಯತೆಯನ್ನು ಈ ರಿಟರ್ನ್‌ನಲ್ಲಿ ಘೋಷಿಸಬಹುದೆಂದು ಗಮನಿಸಬಹುದಾಗಿದೆ. ಆದರೆ, ಕರದಾತರು ತನ್ನ ರಿಟರ್ನ್‌ಗಳಲ್ಲಿ ಆ.ವ.2017–18ರಲ್ಲಿ ಕ್ಲೇಮು ಮಾಡದ ಹೂಡುವಳಿ ತೆರಿಗೆ ಜಮೆಯನ್ನು ಕ್ಲೇಮು ಮಾಡುವಂತಿಲ್ಲ."

(ಇ) ಸೂಚನೆಗಳಲ್ಲಿ, ಕ್ರಮ ಸಂ.5ರಲ್ಲಿ, ಕೋಷ್ಟಕದಲ್ಲಿ, ಅಂಕಣ 2ರಲ್ಲಿ, –

(i) ಕ್ರಮ ಸಂ.8ಎ ಯ ಎದುರು, "ಜಿಎಸ್‌ಟಿಆರ್–1ರಲ್ಲಿ ಘೋಷಿಸಿದ ಎಲ್ಲಾ ಹೂ.ತೆ.ಜಗಳ ಸಮಗ್ರ ಮೊತ್ತವಾಗಿರುತ್ತದೆ." ಪದಗಳು, ಅಕ್ಷರಗಳು ಮತ್ತು ಸಂಖ್ಯೆಯ ನಂತರ, ಈ ಕೆಳಗಿನ ಪದಗಳು, ಅಕ್ಷರ ಮತ್ತು ಸಂಖ್ಯೆಗಳನ್ನು ಸೇರಿಸತಕ್ಕದ್ದು, ಅಂದರೆ:–

"2019ರ ಮೇ 1ರಂದು ಸೃಷ್ಟಿಸಲಾದಂತಹ ನಮೂನೆ ಜಿಎಸ್‌ಟಿಆರ್–2ಎ ಈ ಕೋಷ್ಟಕದಲ್ಲಿ ಸ್ವಯಂ ತುಂಬತಕ್ಕದ್ದು ಎಂಬುದನ್ನು ಗಮನಿಸಬಹುದು.";

(ii) ಕ್ರಮ ಸಂ.8ಸಿಗೆ ವಿರುದ್ಧವಾಗಿ, "ಸೆಪ್ಟಂಬರ್ 2018ವರೆಗೆ" ಪದಗಳಿಗಾಗಿ "2018ರಿಂದ ಮಾರ್ಚ್ 2019ರವರೆಗೆ" ಪದಗಳು ಮತ್ತು ಸಂಖ್ಯೆಗಳನ್ನು ಪ್ರತಿಯೋಜಿಸತಕ್ಕದ್ದು;

(ಎಫ್) ಸೂಚನೆಗಳಲ್ಲಿ, ಕ್ರಮ ಸಂ.7ರಲ್ಲಿ, –

(i) ನಮೂದುಗಳಿಗಾಗಿ, "ಹಿಂದಿನ ಹಣಕಾಸು ವರ್ಷಕ್ಕಾಗಿನ ವ್ಯವಹಾರಗಳನ್ನು ಆದರೆ ಏಪ್ರಿಲ್ 2018ರಿಂದ ಮಾರ್ಚ್ 2019ರ ನಡುವೆ ನಮೂನೆ ಜಿಎಸ್‌ಟಿಆರ್–3ಬಿಯಲ್ಲಿ ಪಾವತಿಸಿದ, ವಿವರಗಳನ್ನು ಭಾಗ V ಒಳಗೊಳ್ಳುತ್ತದೆ. ಈ ಕೆಳಕಂಡ ಸೂಚನೆಗಳಂತೆ ಭಾಗ–V ಭರ್ತಿ ಮಾಡುವುದು." ನಮೂದುಗಳನ್ನು ಪ್ರತಿಯೋಜಿಸತಕ್ಕದ್ದು;

(ii) ಕೋಷ್ಟಕದಲ್ಲಿ, ಅಂಕಣ 2ರಲ್ಲಿ –

(ಎ) ಕ್ರಮ ಸಂ. 10 & 11ರ ವಿರುದ್ಧವಾಗಿ, "ಪ್ರಸಕ್ತ ಹಣಕಾಸು ವರ್ಷದ ಸೆಪ್ಟಂಬರ್‌ವರೆಗೆ ಅಥವಾ ಹಿಂದಿನ ಹಣಕಾಸು ವರ್ಷಕ್ಕಾಗಿ ವಾರ್ಷಿಕ ರಿಟರ್ನ್‌ನ್ನು ಸಲ್ಲಿಸಿದ ದಿನಾಂಕ, ಯಾವುದು ಮೊದಲೋ ಅದು" ಪದಗಳಿಗಾಗಿ, "2018ರಿಂದ ಮಾರ್ಚ್ 2019ವರೆಗೆ" ಸಂಖ್ಯೆಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಕ್ರಮ ಸಂ.12ರ ವಿರುದ್ಧವಾಗಿ, "ಪ್ರಸಕ್ತ ಹಣಕಾಸು ವರ್ಷದ ಸೆಪ್ಟಂಬರ್‌ವರೆಗೆ ಅಥವಾ ಹಿಂದಿನ ಹಣಕಾಸು ವರ್ಷಕ್ಕಾಗಿ ವಾರ್ಷಿಕ ರಿಟರ್ನ್‌ನ್ನು ಸಲ್ಲಿಸಿದ ದಿನಾಂಕ, ಯಾವುದು ಮೊದಲೋ ಅದು" ಪದಗಳಿಗಾಗಿ, "2018ರಿಂದ ಮಾರ್ಚ್ 2019ವರೆಗೆ" ಸಂಖ್ಯೆಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಸಿ) ಕ್ರಮ ಸಂ.13ರ ವಿರುದ್ಧವಾಗಿ, "ಪ್ರಸಕ್ತ ಹಣಕಾಸು ವರ್ಷದ ಸೆಪ್ಟಂಬರ್‌ವರೆಗೆ ಅಥವಾ ಹಿಂದಿನ ಹಣಕಾಸು ವರ್ಷಕ್ಕಾಗಿ ವಾರ್ಷಿಕ ರಿಟರ್ನ್‌ನ್ನು ಸಲ್ಲಿಸಿದ ದಿನಾಂಕ, ಯಾವುದು ಮೊದಲೋ ಅದು" ಪದಗಳಿಗಾಗಿ, "2018ರಿಂದ ಮಾರ್ಚ್ 2019ವರೆಗೆ" ಸಂಖ್ಯೆಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು;

25. ಹೊಸ ನಮೂನೆ ಜಿಎಸ್‌ಟಿ ಪಿಎಂಟಿ–09ರ ಸೇರ್ಪಡೆ.– ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಪಿಎಂಟಿ–07**ರ

636

ನಂತರ, ಮುಂದೆ ಅಧಿಸೂಚಿಸಬಹುದಾದ ದಿನಾಂಕದಿಂದ ಜಾರಿಗೆ ಬರುವಂತೆ, ಈ ಕೆಳಗಿನ ನಮೂನೆಯನ್ನು ಸೇರಿಸತಕ್ಕದ್ದು, ಅಂದರೆ:–

"ನಮೂನೆ ಜಿಎಸ್‌ಟಿ ಪಿಎಂಟಿ–09

[ನೋಡಿ ನಿಯಮ 87(13)]

ವಿದ್ಯುನ್ಮಾನ ನಗದು ಖಾತೆಯಲ್ಲಿ ಒಂದು ಲೆಕ್ಕ ಶೀರ್ಷಿಕೆಯಿಂದ ಮತ್ತೊಂದು ಲೆಕ್ಕ ಶೀರ್ಷಿಕೆಗೆ ಮೊತ್ತದ ವರ್ಗಾವಣೆ

1.	ಜಿಎಸ್‌ಟಿಐಎನ್	
2.	(ಎ) ಕಾನೂನುಸಮ್ಮತ ಹೆಸರು	<ಸ್ವಯಂ>
	(ಬಿ) ವ್ಯವಹಾರದ ಹೆಸರು, ಅದು ಇದ್ದಲ್ಲಿ	<ಸ್ವಯಂ>
3.	ಎಆರ್‌ಎನ್	
4.	ಎಆರ್‌ಎನ್ ದಿನಾಂಕ	

5. ಒಂದು ಲೆಕ್ಕ ಶೀರ್ಷಿಕೆಯಿಂದ ಮತ್ತೊಂದು ಲೆಕ್ಕ ಶೀರ್ಷಿಕೆಗೆ ಮೊತ್ತದ ವರ್ಗಾವಣೆ ಮಾಡಬೇಕಾದ ಮೊತ್ತದ ವಿವರಗಳು

ಇಂದ ವರ್ಗಾವಣೆ ಮಾಡಬೇಕಾದ ಮೊತ್ತ			ಗೆ ವರ್ಗಾವಣೆ ಮಾಡಬೇಕಾದ ಮೊತ್ತ		
ಮೇಜರ್ ಶೀರ್ಷಿಕೆ	ಮೈನರ್ ಶೀರ್ಷಿಕೆ	ಲಭ್ಯವಿರುವ ಮೊತ್ತ	ಮೇಜರ್ ಶೀರ್ಷಿಕೆ	ಮೈನರ್ ಶೀರ್ಷಿಕೆ	ಲಭ್ಯವಿರುವ ಮೊತ್ತ
1	2	3	4	5	6
< ಕೇಂದ್ರ ತೆರಿಗೆ, ರಾಜ್ಯ / ಕೇಂ.ಪ್ರ. ತೆರಿಗೆ, ಏಕೀಕೃತ ತೆರಿಗೆ, ಉಪಕರ>	ತೆರಿಗೆ		< ಕೇಂದ್ರ ತೆರಿಗೆ, ರಾಜ್ಯ / ಕೇಂ.ಪ್ರ. ತೆರಿಗೆ, ಏಕೀಕೃತ ತೆರಿಗೆ, ಉಪಕರ>	ತೆರಿಗೆ	
	ಬಡ್ಡಿ			ಬಡ್ಡಿ	
	ದಂಡ			ದಂಡ	
	ಶುಲ್ಕ			ಶುಲ್ಕ	
	ಇತರೆ			ಇತರೆ	
	ಒಟ್ಟು			ಒಟ್ಟು	

6. ಪರಿಶೀಲನೆ

ನಾನು ಮೇಲೆ ನೀಡಲಾದ ಮಾಹಿತಿಯು ನನ್ನ ತಿಳುವಳಿಕೆಗೆ ಮತ್ತು ನಂಬಿಕೆಯ ಪ್ರಕಾರ ಸತ್ಯವಾಗಿರುತ್ತದೆ ಮತ್ತು ಸರಿಯಾಗಿರುತ್ತದೆ ಹಾಗೂ ಯಾವುದೇ ಮಾಹಿತಿಯನ್ನು ಇದರಿಂದ ಮರೆಮಾಚಿರುವುದಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

ಸಹಿ

ಸ್ಥಳ: ಪ್ರಾಧಿಕೃತ ಸಹಿದಾರನ ಹೆಸರು

ದಿನಾಂಕ: ಪದನಾಮ/ಸ್ಥಾನ

ಸೂಚನೆಗಳು:

1. ಮೇಜರ್ ಶೀರ್ಷಿಕೆ – ಏಕೀಕೃತ ತೆರಿಗೆ, ಕೇಂದ್ರ ತೆರಿಗೆ, ರಾಜ್ಯ / ಕೇಂ.ಪ್ರ. ತೆರಿಗೆ ಮತ್ತು ಉಪಕರವನ್ನು ಸೂಚಿಸುತ್ತದೆ.
2. ಮೈನರ್ ಶೀರ್ಷಿಕೆ – ತೆರಿಗೆ, ಬಡ್ಡಿ, ದಂಡ, ಶುಲ್ಕ ಮತ್ತಿ ಇತರೆ ಯನ್ನು ಸೂಚಿಸುತ್ತದೆ.
3. ಒಂದು ಮೇಜರ್ / ಮೈನರ್ ಶೀರ್ಷಿಕೆಯಿಂದ ಮತ್ತೊಂದು ಮೇಜರ್ / ಮೈನರ್ ಶೀರ್ಷಿಕೆಗೆ ಮೊತ್ತವನ್ನು ವರ್ಗಾವಣೆ ಮಾಡಲು ಇಚ್ಛಿಸಲಾದಲ್ಲಿ ನಮೂನೆಯನ್ನು ತುಂಬಬಹುದು

637

4. ಒಂದೇ ಮೇಜರ್ ಶೀರ್ಷಿಕೆಯಡಿಯಲ್ಲಿನ ಒಂದು ಮೈನರ್ ಶೀರ್ಷಿಕೆಯಿಂದ ಮತ್ತೊಂದು ಮೈನರ್ ಶೀರ್ಷಿಕೆಗೆ ಮೊತ್ತವನ್ನು ವರ್ಗಾವಣೆ ಮಾಡಬಹುದು
5. ವರ್ಗಾವಣೆಯ ಸಮಯದಲ್ಲಿ ಆ ಶೀರ್ಷಿಕೆಯಡಿಯಲ್ಲಿ ಬಾಕಿಯಿದ್ದಲ್ಲಿ ಮಾತ್ರ ಆ ಶೀರ್ಷಿಕೆಯಿಂದ ಮೊತ್ತವನ್ನು ವರ್ಗಾವಣೆ ಮಾಡಬಹುದು."

26. ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–05ನ ತಿದ್ದುಪಡಿ.– ಸದರಿ ನಿಯಮಗಳ ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–05ನಲ್ಲಿ, ಮುಂದೆ ಅಧಿಸೂಚಿಸಬಹುದಾದ ದಿನಾಂಕದಿಂದ ಜಾರಿಗೆ ಬರುವಂತೆ, –

(ಎ) ಮೂರನೇ ಸಾಲಿನಲ್ಲಿ "ಅಡ್ವೈಸ್" ಪದಕ್ಕಾಗಿ, "ಆದೇಶ" ಪದವನ್ನು ಪ್ರತಿಯೋಜಿಸತಕ್ಕದ್ದು;

(ಬಿ) ನಾಲ್ಕನೇ ಸಾಲಿನಲ್ಲಿ "ಅಡ್ವೈಸ್" ಪದಕ್ಕಾಗಿ, "ಆದೇಶ" ಪದವನ್ನು ಪ್ರತಿಯೋಜಿಸತಕ್ಕದ್ದು;

(ಸಿ) ಆರನೇ ಸಾಲಿನಲ್ಲಿ, "ಗೆ <ಕೇಂದ್ರ> ಪಿಎಒ/ ಟ್ರೇಜ಼ರಿ/ ಆರ್‌ಬಿಐ / ಬ್ಯಾಂಕ್" ಪದಗಳು ಮತ್ತು ಅಕ್ಷರಗಳಿಗಾಗಿ, "ಗೆ ಪಿಎಒ, ಸಿಬಿಐಸಿ" ಪದಗಳು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

27. ಹೊಸ ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–10ಬಿಯ ಸೇರ್ಪಡೆ.– ಸದರಿ ನಿಯಮಗಳ ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–10ರ ನಂತರ, 2019ರ ಜುಲೈ 1ನೇ ದಿನದಿಂದ ಜಾರಿಗೆ ಬರುವಂತೆ, ಈ ಕೆಳಗಿನ ನಮೂನೆಯನ್ನು ಸೇರಿಸಲಾಗಿದೆ, ಅಂದರೆ:–

"ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–10ಬಿ

[ನೋಡಿ ನಿಯಮ 95ಎ]

ಡ್ಯೂಟಿ ಫ್ರೀ ಅಂಗಡಿಗಳು / ಡ್ಯೂಟಿ ಪೇಯ್ಡ್ ಅಂಗಡಿಗಳಿಂದ (ಚಿಲ್ಲರೆ ಔಟ್‌ಲೆಟ್ಗಳು) ಮರುಪಾವತಿಗಾಗಿ ಅರ್ಜಿ

1. ಜಿಎಸ್‌ಟಿಐಎನ್
2. ಹೆಸರು
3. ವಿಳಾಸ
4. ತೆರಿಗೆ ಅವಧಿ (ಮಾಸಿಕ/ತ್ರೈಮಾಸಿಕ) : ಇಂದ <ದಿದಿ/ತಿಂತಿಂ/ವವವವ> ಗೆ <ದಿದಿ/ತಿಂತಿಂ/ವವವವ>
5. ಮರುಪಾವತಿ ಕ್ಲೇಮಿನ ಮೊತ್ತ : <ಐಎನ್‌ಆರ್> <ಪದಗಳಲ್ಲಿ>
6. ಸ್ವೀಕರಿಸಿದ ಸರಕುಗಳ ಒಳಮುಖ ಪೂರೈಕೆಗಳ ವಿವರಗಳು ಮತ್ತು ಸಂಬಂಧಿತ ಹೊರಮುಖ ಪೂರೈಕೆಗಳ ವಿವರಗಳು:

ಪೂರೈಕೆಯ ವಿವರಗಳು															
ಒಳಮುಖ ಪೂರೈಕೆಗಳು											ಸಂಬಂಧಪಟ್ಟ ಹೊರಮುಖ ಪೂರೈಕೆಗಳು			
ಜಿಎಸ್‌ಟಿ ಐಎನ್	ಬೆಲೆಪಟ್ಟಿಯ ವಿವರಗಳು				ದರ	ತೆರಿಗೆದಾಯಕ ಮೌಲ್ಯ	ತೆರಿಗೆಯ ಮೊತ್ತ				ಬೆಲೆಪಟ್ಟಿಯ ವಿವರಗಳು			
	ಸಂ/ದಿನಾಂಕ	ಹೆಚ್ ಎಸ್ ಎನ್ ಕೋಡ್	ಪರಿಮಾಣ	ಮೌಲ್ಯ			ಏಕೀಕೃತ ತೆರಿಗೆ	ಕೇಂದ್ರ ತೆರಿಗೆ	ರಾಜ್ಯ/ ಕೇಂ.ಪ್ರ. ತೆರಿಗೆ	ಉಪಕರ	ಸಂ/ದಿನಾಂಕ	ಹೆಚ್ ಎಸ್ ಎನ್ ಕೋಡ್	ಪರಿಮಾಣ	ತೆರಿಗೆದಾಯಕ ಮೌಲ್ಯ

7. ಮರುಪಾವತಿಗಾಗಿ ಅರ್ಜಿ ಸಲ್ಲಿಸಿದ

ಕೇಂದ್ರ ತೆರಿಗೆ	ರಾಜ್ಯ/ ಕೇಂ.ಪ್ರ.ತೆರಿಗೆ	ಏಕೀಕೃತ ತೆರಿಗೆ	ಉಪಕರ	ಒಟ್ಟು
<ಒಟ್ಟು>	<ಒಟ್ಟು>	<ಒಟ್ಟು>	<ಒಟ್ಟು>	<ಒಟ್ಟು>

8. ಬ್ಯಾಂಕ್ ಖಾತೆಯ ವಿವರಗಳು

638

i. ಬ್ಯಾಂಕ್ ಖಾತೆಯ ಸಂಖ್ಯೆ

ii. ಬ್ಯಾಂಕ್ ಖಾತೆಯ ವಿಧ

iii. ಬ್ಯಾಂಕ್‌ನ ಹೆಸರು

iv. ಖಾತೆದಾರನ / ನಿರ್ವಾಹಕನ ಹೆಸರು:

v. ಬ್ಯಾಂಕ್ ಶಾಖೆಯ ವಿಳಾಸ

vi. ಐಎಫ್‌ಎಸ್‌ಸಿ :

vii. ಎಂಐಸಿಆರ್ :

9. ಘೋಷಣೆ

ನಾನು, _____ , _____ (ಡ್ಯೂಟಿ ಫ್ರೀ ಅಂಗಡಿ / ಡ್ಯೂಟಿ ಪೇಯ್ಡ್ ಅಂಗಡಿ – ರೀಟೇಲ್ ಔಟ್‌ಲೆಟ್ ನ ಹೆಸರು)ನ ಪ್ರಾಧಿಕೃತ ಪ್ರತಿನಿಧಿಯಾಗಿ ಈ ಮೂಲಕ ಪ್ರಮಾಣೀಕರಿಸಿ ಮತ್ತು ಘೋಷಿಸುವುದೇನೆಂದರೆ, –

(i) ಈ ಅರ್ಜಿಯಲ್ಲಿ ಸಲ್ಲಿಸಿದ ಹೊರಮುಖ ಪೂರೈಕೆಗಳಿಗೆ ಸಂಬಂಧಿಸಿದ ಯಾವುದೇ ಬೆಲೆಪಟ್ಟಿಗಳಿಗಾಗಿ ಮರುಪಾವತಿಯನ್ನು ಕ್ಲೇಮು ಮಾಡಿರುವುದಿಲ್ಲ.

(ii) ಮೇಲೆ ನೀಡಲಾದ ಮಾಹಿತಿಯು ನನ್ನ ತಿಳುವಳಿಕೆಗೆ ಮತ್ತು ನಂಬಿಕೆಯ ಪ್ರಕಾರ ಸತ್ಯವಾಗಿರುತ್ತದೆ ಮತ್ತು ಸರಿಯಾಗಿರುತ್ತದೆ

ಪ್ರಾಧಿಕೃತ ಸಹಿದಾರನ ಸಹಿ

ಸ್ಥಳ: ಹೆಸರು

ದಿನಾಂಕ: ಪದನಾಮ/ಸ್ಥಾನ

ಸೂಚನೆಗಳು:

1. ರೀಟೇಲ್ ಔಟ್‌ಲೆಟ್‌ಗಳಿಂದ ರಿಟರ್ನ್‌ನ್ನು ಸಲ್ಲಿಸುವ ಅನುಕ್ರಮವನ್ನು ಅವಲಂಬಿಸಿ ಮರುಪಾವತಿಗಾಗಿ ಅರ್ಜಿಯನ್ನು ಮಾಸಿಕ/ ತ್ರೈಮಾಸಿಕವಾಗಿ ಸಲ್ಲಿಸತಕ್ಕದ್ದು.
2. ಒಂದು ಒಳಮುಖ ಪೂರೈಕೆಯ ಬೆಲೆಪಟ್ಟಿಗೆ ಸಂಬಂಧಿಸಿದಂತೆ ಒಂದು ಬಾರಿ ಮಾತ್ರ ಅರ್ಜಿಯನ್ನು ಸಲ್ಲಿಸತಕ್ಕದ್ದು. ಆದ್ದರಿಂದ, ಸಂಪೂರ್ಣವಾಗಿ ಪೂರೈಕೆಯಾಗಿರುವ ಸರಕುಗಳ ಸ್ವೀಕರಿಸಿದ ಅಂಥ ಒಳಮುಖ ಪೂರೈಕೆಯ ಬೆಲೆಪಟ್ಟಿಗಳಿಗಾಗಿ ಮಾತ್ರ ಮರುಪಾವತಿಗಾಗಿ ಅರ್ಜಿ ಸಲ್ಲಿಸಬೇಕೆಂದು ಅಡ್ವೈಸ್ ಮಾಡಲಾಗಿದೆ.
3. ತಾನು ಘೋಷಿಸಿದ ಎಲ್ಲಾ ಬೆಲೆಪಟ್ಟಿಗಳಲ್ಲಿ ಪೂರೈಕೆದಾರನ ಜಿಎಸ್‌ಟಿಐಎನ್ ಮತ್ತು ಸಂಬಂಧಿಸಿದ ಡ್ಯೂಟಿ ಫ್ರೀ ಅಂಗಡಿ/ ಡ್ಯೂಟಿ ಪೇಯ್ಡ್ ಅಂಗಡಿ (ರೀಟೇಲ್ ಔಟ್‌ಲೆಟ್)ನ ಜಿಎಸ್‌ಟಿಐಎನ್ ಅವುಗಳ ಮೇಲೆ ಸ್ಫುಟವಾಗಿ ಗುರುತಿಸಲಾಗಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು.
4. ಮರುಪಾವತಿಯ ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲಾತಿಗಳು:
   ಎ) ಯಾವುಗಳ ಮೇಲೆ ಮರುಪಾವತಿಯನ್ನು ಕ್ಲೇಮು ಮಾಡಲಾಗಿದೆ ಆ ಎಲ್ಲಾ ಸ್ಥಳೀಯ ಸರಕುಗಳನ್ನು ಡ್ಯೂಟಿ ಫ್ರೀ ಅಂಗಡಿ/ ಡ್ಯೂಟಿ ಪೇಯ್ಡ್ ಅಂಗಡಿ (ರೀಟೇಲ್ ಔಟ್‌ಲೆಟ್)ನಿಂದ ಸ್ವೀಕರಿಸಲಾಗಿದೆ ಎಂದು ಅಂಡರ್‌ಟೇಕಿಂಗ್
   ಬಿ) ಸ್ಥಳೀಯ ಸರಕುಗಳನ್ನು ಅರ್ಹ ಹೊರಹೋಗುವ ಅಂತರ್‌ರಾಷ್ಟ್ರೀಯ ಟೂರಿಸ್ಟ್‌ಗೆ ಮಾರಾಟ ಮಾಡಲಾಗಿದೆ ಎಂದು ಅಂಡರ್‌ಟೇಕಿಂಗ್
   ಸಿ) ಅರ್ಜಿಯನ್ನು ಸಲ್ಲಿಸಿದ ಅವಧಿಗಾಗಿಯ ರಿಟರ್ನ್‌ಗಳ ಪ್ರತಿ.".

28. **ನಮೂನೆ ಜಿಎಸ್‌ಟಿ ಡಿಆರ್‌ಸಿ–03**ಯ ಪ್ರತಿಯೋಜನೆ.– ಸದರಿ ನಿಯಮಗಳ ನಮೂನೆ ಜಿಎಸ್‌ಟಿ ಡಿಆರ್‌ಸಿ–

639

03ಗಾಗಿ ಈ ಕೆಳಗಿನ ನಮೂನೆಯನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ನಮೂನೆ ಜಿಎಸ್‌ಟಿ ಡಿಆರ್‌ಸಿ–03

[ನೋಡಿ ನಿಯಮ 142(2) & 142(3)]

ಸ್ವಯಂಪ್ರೇರಿತವಾಗಿ ಪಾವತಿ ಮಾಡಿದ ಅಥವಾ ಕಾರಣ ಕೇಳುವ ನೋಟೀಸಿಗೆ (ಎಸ್‌ಸಿಎನ್) ಅಥವಾ ವಿವರಪಟ್ಟಿಗೆ ವಿರುದ್ಧವಾಗಿ ಮಾಡಿದ ಪಾವತಿಯ ತಿಳಿಸುವಿಕೆ

1.	ಜಿಎಸ್‌ಟಿಐಎನ್		
2.	ಹೆಸರು	<ಸ್ವಯಂ>	
3.	ಪಾವತಿಯ ಕಾರಣ	<< ಡ್ರಾಪ್ ಡೌನ್>> ಲೆಕ್ಕಪರಿಶೋಧನೆ, ತನಿಖೆ, ಸ್ವಯಂಪ್ರೇರಿತ, ಎಸ್‌ಸಿಎನ್, ವಾರ್ಷಿಕ ರಿಟರ್ನ್, ಮರುಹೊಂದಾಣಿಕೆ ವಿವರಪಟ್ಟಿ, ಇತರೆ (ನಿರ್ದಿಷ್ಟ ಪಡಿಸಿ)	
4.	ಯಾವ ಪ್ರಕರಣದಡಿಯಲ್ಲಿ ಸ್ವಯಂಪ್ರೇರಿತ ಪಾವತಿಯನ್ನು ಮಾಡಲಾಗಿದೆ	<< ಡ್ರಾಪ್ ಡೌನ್>>	
5.	ಕಾರಣ ಕೇಳುವ ನೋಟೀಸಿನ ವಿವರಗಳು, ಅದನ್ನು ನೀಡಿದ 30ದಿನಗಳ ಒಳಗೆ ಪಾವತಿಯನ್ನು ಮಾಡಿದ್ದಲ್ಲಿ	ಉಲ್ಲೇಖ ಸಂ.	ನೀಡಿಕೆಯ ದಿನಾಂಕ
6.	ಹಣಕಾಸು ವರ್ಷ		
7.	ಅಪ್ಲಿಕಬಲ್ ಆದಲ್ಲಿ, ಬಡ್ಡಿ ಮತ್ತು ದಂಡವನ್ನು ಒಳಗೊಂಡಂತೆ, ಮಾಡಿದ ಪಾವತಿಗಳ ವಿವರಗಳು		

ಕ್ರ.ಸಂ.	ತೆರಿಗೆ ಅವಧಿ	ಅಧಿನಿಯಮ	ಪೂರೈಕೆಯ ಸಮಯ (ಪಿಒಎಸ್)	ತೆರಿಗೆ/ಉಪಕರ	ಬಡ್ಡಿ	ದಂಡ, ಅನ್ವಯವಾದಲ್ಲಿ	ಇತರೆ	ಒಟ್ಟು	ಉಪಯೋಗಿಸಿದ ಖಾತೆ (ನಗದು/ಜಮಾ)	ಡೆಬಿಟ್ ನಮೂದು ಸಂ.	ಡೆಬಿಟ್ ನಮೂದಿನ ದಿನಾಂಕ
1	2	3	4	5	6	7	8	9	10	11	12

8. ಕಾರಣಗಳು, ಅವು ಇದ್ದಲ್ಲಿ – << ಟೆಕ್ಸ್ಟ್ ಬಾಕ್ಸ್ >>

9. ಪರಿಶೀಲನೆ

ನಾನು ಮೇಲೆ ನೀಡಲಾದ ಮಾಹಿತಿಯು ನನ್ನ ತಿಳುವಳಿಕೆಗೆ ಮತ್ತು ನಂಬಿಕೆಯ ಪ್ರಕಾರ ಸತ್ಯವಾಗಿರುತ್ತದೆ ಮತ್ತು ಸರಿಯಾಗಿರುತ್ತದೆ ಹಾಗೂ ಯಾವುದೇ ಮಾಹಿತಿಯನ್ನು ಇದರಿಂದ ಮರೆಮಾಚಿರುವುದಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

ಪ್ರಾಧಿಕೃತ ಸಹಿದಾರನ ಸಹಿ
ಹೆಸರು
ಪದನಾಮ/ಸ್ಥಾನ
ದಿನಾಂಕ: ___".

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಅವರ ಆದೇಶಾನುಸಾರ

ಕೆ.ಸಾವಿತ್ರಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

640

ಕರ್ನಾಟಕ ಸರ್ಕಾರ

ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಡಿಎ/2019)

ನಂ. ಆಇ 47 ಸಿಎಸ್ಎಲ್ 2017, ಬೆಂಗಳೂರು, ದಿನಾಂಕ 30.09.2019

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ 2017ರ (2017ರ ಕರ್ನಾಟಕ ಅಧಿನಿಯಮ 27), ಪ್ರಕರಣ 164ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 2019ರ ಸೆಪ್ಟಂಬರ್ 24ನೇ ದಿನವನ್ನು, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಐದನೇಯ ತಿದ್ದುಪಡಿ) ನಿಯಮಗಳು, 2019 [2019ರ ಜುಲೈ 26ನೇ ದಿನಾಂಕದ ಕರ್ನಾಟಕ ರಾಜ್ಯಪತ್ರ, ಅಸಾಧಾರಣ, ಭಾಗ IVA, ಸಂ. 647ರಲ್ಲಿ ಪ್ರಕಟಿಸಲಾದ 2019ರ ಜುಲೈ 26ನೇ ದಿನಾಂಕದ ಅಧಿಸೂಚನೆ (4–ಡಿ/2019) ಸಂ. ಆಇ 47 ಸಿಎಸ್ಎಲ್ 2017] ದ ನಿಯಮ 10, 11, 12 ಮತ್ತು 26 ರ ಉಪಬಂಧಗಳು ಜಾರಿಗೆ ಬರುವ ಮತ್ತು ಜಾರಿಗೆ ಬಂದಿದೆ ಎಂದು ಪರಿಭಾವಿಸಲಾದ ದಿನಾಂಕವಾಗಿರತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಅವರ ಆದೇಶಾನುಸಾರ

ಕೆ.ಸಾವಿತ್ರಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

641

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಡಿಬಿ/2019)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ: 21.12.2019.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (5ನೇ ತಿದ್ದುಪಡಿ), ನಿಯಮ, 2019, ನಿಯಮ 5 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ವಿಶೇಷ ರಾಜ್ಯಪತ್ರಿಕೆ ಭಾಗ–IVA ಸಂಖ್ಯೆ 647 ದಿನಾಂಕ 26ನೇ ಜುಲೈ, 2019ರಲ್ಲಿ ಅಧಿಸೂಚನೆ ಆಇ 47 ಸಿಎಸ್ಎಲ್ 2017 (ಸಂ.4–ಡಿ/2019) ದಿನಾಂಕ 26.07.2019ರಂದು ಪ್ರಕಟವಾದ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳನ್ನು ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಈ ಮೂಲಕ ಮೇಲೆ ಹೇಳಿದ ನಿಯಮಗಳು, 1ನೇ ಏಪ್ರಿಲ್, 2020 ರಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

ಕೆ. ಸಾವಿತ್ರಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ [ವಾ.ತೆ–1]

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಇ/2019)
ನಂ. ಆಇ 47 ಸಿಎಸ್ಎಲ್ 2017, ಬೆಂಗಳೂರು, ದಿನಾಂಕ 04.09.2019

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ 2017ರ (2017ರ ಕರ್ನಾಟಕ ಅಧಿನಿಯಮ 27), ಪ್ರಕರಣ 164ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಜಿಎಸ್ಟಿ ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017, ಗೆ ಮುಂದುವರೆದ ತಿದ್ದುಪಡಿ ತರಲು ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಅಂದರೆ:–

ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ:**– (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಆರನೆಯ ತಿದ್ದುಪಡಿ) ನಿಯಮಗಳು, 2019, ಎಂದು ಕರೆಯಬಹುದು.

(2) ಈ ನಿಯಮಗಳಲ್ಲಿ ಉಪಬಂಧಿಸಿದುದನ್ನು ಉಳಿದು, ಈ ನಿಯಮಗಳು 2019ರ ಜುಲೈ 18ನೇ ದಿನದಿಂದ ಜಾರಿಗೆ ಬಂದಿವೆ ಎಂದು ಪರಿಭಾವಿಸತಕ್ಕದ್ದು.

2. ನಿಯಮ 12ರ ತಿದ್ದುಪಡಿ:– ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017 (ಇನ್ನು ಮುಂದೆ **"**ಸದರಿ ನಿಯಮಗಳು**"** ಎಂದು ಉಲ್ಲೇಖಿಸಲಾಗಿದೆ)ರಲ್ಲಿ, ನಿಯಮ 12ರಲ್ಲಿ, ಉಪನಿಯಮ (1ಎ)ನಲ್ಲಿ,

642

(ಎ) "ನೋಂದಣಿಗಾಗಿ ಅರ್ಜಿ ಸಲ್ಲಿಸುವ ಒಬ್ಬ ವ್ಯಕ್ತಿಯು" ಪದಗಳ ನಂತರ, "ಕಟಾಯಿಸುವ ಅಥವಾ" ಪದಗಳನ್ನು ಸೇರಿಸತಕ್ಕದ್ದು;

(ಬಿ) "ಪ್ರಕರಣ 52ರ" ಪದಗಳ ಮೊದಲು, "ಪ್ರಕರಣ 51, ಅಥವಾ, ಸಂದರ್ಭಾನುಸಾರವಾಗಿ," ಪದಗಳು ಮತ್ತು ಸಂಖ್ಯೆಗಳನ್ನು ಸೇರಿಸತಕ್ಕದ್ದು.

3. ನಿಯಮ 46ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 46ರಲ್ಲಿ, ನಾಲ್ಕನೇ ಪರಂತುಕದಲ್ಲಿ, 2019ರ ಸೆಪ್ಟಂಬರ್ 1ನೇ ದಿನದಿಂದ ಜಾರಿಗೆ ಬರುವಂತೆ, "ಮತ್ತೂ ಪರಂತು, ಒಬ್ಬ ನೋಂದಾಯಿತ ವ್ಯಕ್ತಿಯು" ಪದಗಳ ನಂತರ, ", ಮಲ್ಟಿಪ್ಲೆಕ್ಸ್ ಪರದೆಗಳಲ್ಲಿ ಸಿನೆಮಾಟೋಗ್ರಾಫ್‌ಗಳ ಪ್ರದರ್ಶನಕ್ಕೆ ಪ್ರವೇಶಾವಕಾಶದ ಕಾರಣವಾಗಿ ಸೇವೆಗಳ ಪೂರೈಕೆ ಮಾಡುತ್ತಿರುವ ಒಬ್ಬ ನೋಂದಾಯಿತ ವ್ಯಕ್ತಿಯನ್ನು ಹೊರತುಪಡಿಸಿದಂತೆ," ಪದಗಳನ್ನು ಸೇರಿಸತಕ್ಕದ್ದು.

4. ನಿಯಮ 54ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 54ರಲ್ಲಿ, ಉಪನಿಯಮ (4)ರ ನಂತರ, 2019ರ ಸೆಪ್ಟಂಬರ್ 1ನೇ ದಿನದಿಂದ ಜಾರಿಗೆ ಬರುವಂತೆ, ಈ ಕೆಳಗಿನ ಉಪನಿಯಮವನ್ನು ಸೇರಿಸತಕ್ಕದ್ದು, ಅಂದರೆ:–

"(4ಎ) ಮಲ್ಟಿಪ್ಲೆಕ್ಸ್ ಪರದೆಗಳಲ್ಲಿ ಸಿನೆಮಾಟೋಗ್ರಾಫ್‌ಗಳ ಪ್ರದರ್ಶನಕ್ಕೆ ಪ್ರವೇಶಾವಕಾಶದ ಕಾರಣವಾಗಿ ಸೇವೆಗಳ ಪೂರೈಕೆ ಮಾಡುತ್ತಿರುವ ಒಬ್ಬ ನೋಂದಾಯಿತ ವ್ಯಕ್ತಿಯು, ಒಂದು ವಿದ್ಯುನ್ಮಾನ ಟಿಕೇಟನ್ನು ನೀಡಲು ಅವಶ್ಯಪಡಿಸತಕ್ಕದ್ದು ಮತ್ತು ಸದರಿ ವಿದ್ಯುನ್ಮಾನ ಟಿಕೇಟನ್ನು ಅಂಥ ಟಿಕೇಟು ಸೇವೆಯ ಸ್ವೀಕರಿಸುವವನ ವಿವರಗಳನ್ನು ಒಳಗೊಂಡಿಲ್ಲದಿದ್ದರೂ ಆದರೆ, ನಿಯಮ 46ರಲ್ಲಿ ತಿಳಿಸಿರುವಂತೆ ಇತರೆ ಮಾಹಿತಿಯನ್ನು ಒಳಗೊಂಡಿದ್ದರೆ, ಅಧಿನಿಯಮದ ಎಲ್ಲಾ ಉದ್ದೇಶಗಳಿಗಾಗಿ ಒಂದು ತೆರಿಗೆ ಬೆಲೆಪಟ್ಟಿ ಎಂದು ಪರಿಭಾವಿಸತಕ್ಕದ್ದು:

ಪರಂತು, ಮಲ್ಟಿಪ್ಲೆಕ್ಸ್ ಪರದೆಗಳಲ್ಲದ ಪರದೆಯಲ್ಲಿ ಅಂಥ ಸೇವೆಯ ಪೂರೈಕೆದಾರನು, ತನ್ನ ಆಯ್ಕೆಯ ಮೇರೆಗೆ, ಮೇಲಿನ ವಿಧಿವಿಧಾನವನ್ನು ಪಾಲಿಸಬಹುದು.".

5. ಹೊಸ ನಿಯಮ 83ಬಿ ಯ ಸೇರ್ಪಡೆ.– ಸದರಿ ನಿಯಮಗಳ ನಿಯಮ 83ಎಯ ನಂತರ, ಸರ್ಕಾರದಿಂದ ಅಧಿಸೂಚಿತವಾಗಬಹುದಾದ ಅಂಥ ದಿನದಿಂದ ಜಾರಿಗೆ ಬರುವಂತೆ, ಈ ಕೆಳಗಿನ ನಿಯಮವನ್ನು ಸೇರಿಸತಕ್ಕದ್ದು, ಅಂದರೆ:–

"**83ಬಿ. ಸರಕು ಮತ್ತು ಸೇವೆಗಳ ತೆರಿಗೆ ವೃತ್ತಿದಾರನ ನೋಂದಣಿಯ ಬಿಟ್ಟುಕೊಡುವಿಕೆ.**– (1) ತನ್ನ ನೋಂದಣಿಯನ್ನು ಬಿಟ್ಟುಕೊಡಲು ಇಚ್ಛಿಸುವ ಒಬ್ಬ ಸರಕು ಮತ್ತು ಸೇವೆಗಳ ತೆರಿಗೆ ವೃತ್ತಿದಾರನು **ನಮೂನೆ ಜಿಎಸ್‌ಟಿ ಪಿಸಿಟಿ–06**ರಲ್ಲಿ ಒಂದು ಅರ್ಜಿಯನ್ನು ವಿದ್ಯುನ್ಮಾನ ರೀತಿಯಲ್ಲಿ, ಸಾಮಾನ್ಯ ಪೋರ್ಟಲ್‌ನಲ್ಲಿ, ನೇರವಾಗಿಯಾಗಲೀ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲೀ, ಸಲ್ಲಿಸತಕ್ಕದ್ದು.

(2) ಆಯುಕ್ತರು, ಅಥವಾ ಅವರಿಂದ ಪ್ರಾಧೀಕೃತನಾದ ಒಬ್ಬ ಅಧಿಕಾರಿಯು, ತನಗೆ ಸರಿಯೆಂದು ಪರಿಭಾವಿಸಿದ ಅಂಥ ಪರಿಶೀಲನೆಯನ್ನು ಮಾಡಿದ ನಂತರ ಮತ್ತು **ನಮೂನೆ ಜಿಎಸ್‌ಟಿ ಪಿಸಿಟಿ–07**ರ ಆದೇಶದಲ್ಲಿ, ಅಂಥ ವೃತ್ತಿದಾರನ ನೋಂದಣಿಯನ್ನು ರದ್ದುಪಡಿಸಬಹುದು.".

6. ನಿಯಮ 138ಇ ಯ ತಿದ್ದುಪಡಿ.– ಸದರಿ ನಿಯಮಗಳ ನಿಯಮ 138ಇ ಯಲ್ಲಿ, ಮೊದಲನೇ ಪರಂತುಕದಲ್ಲಿ,–

(ಎ) "ಪರಂತು, ಆಯುಕ್ತರು" ಪದಗಳ ನಂತರ ", **ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–05**ರಲ್ಲಿ ಒಬ್ಬ ನೋಂದಾಯಿತ ವ್ಯಕ್ತಿಯಿಂದ ಸಲ್ಲಿಸಲಾದ ಒಂದು ಅರ್ಜಿಯ ಸ್ವೀಕೃತಿಯ ನಂತರ," ಪದಗಳು, ಸಂಜ್ಞೆಗಳು, ಸಂಖ್ಯೆಗಳನ್ನು ಸೇರಿಸತಕ್ಕದ್ದು;

643

(ಬಿ) **"**ಲಿಖಿತವಾಗಿ ದಾಖಲಿಸಬೇಕಾದ ಕಾರಣಗಳಿಗಾಗಿ, ಆದೇಶದ ಮೂಲಕ**"** ಪದಗಳಿಗಾಗಿ, **"**ಲಿಖಿತವಾಗಿ ದಾಖಲಿಸಬೇಕಾದ ಕಾರಣಗಳಿಗಾಗಿ, **ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–06**ರಲ್ಲಿನ ಆದೇಶದ ಮೂಲಕ**"** ಪದಗಳು, ಸಂಖ್ಯೆಗಳನ್ನು ಪ್ರತಿಯೋಜಿಸತಕ್ಕದ್ದು.

7. ಹೊಸ ನಮೂನೆ ಜಿಎಸ್‌ಟಿ ಪಿಸಿಟಿ–06 ಮತ್ತು ನಮೂನೆ ಜಿಎಸ್‌ಟಿ ಪಿಸಿಟಿ–07ಗಳ ಸೇರ್ಪಡೆ.– ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಪಿಸಿಟಿ–05**ರ ನಂತರ, ಸರ್ಕಾರದಿಂದ ಅಧಿಸೂಚಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರುವಂತೆ, ಕೆಳಗಿನ ನಮೂನೆಗಳನ್ನು ಸೇರಿಸತಕ್ಕದ್ದು, ಅಂದರೆ:–

"ನಮೂನೆ ಜಿಎಸ್‌ಟಿ ಪಿಸಿಟಿ–06

[ನೋಡಿ ನಿಯಮ 83ಬಿ]

ಜಿಎಸ್‌ಟಿ ವೃತ್ತಿದಾರ ನೋಂದಣಿಯ ರದ್ದತಿಗಾಗಿ ಅರ್ಜಿ

1. ಜಿಎಸ್‌ಟಿಪಿ ನೋಂದಣಿ ಸಂಖ್ಯೆ	
2. ಜಿಎಸ್‌ಟಿ ವೃತ್ತಿದಾರನ ಹೆಸರು	<< ಸ್ವಯಂ ತುಂಬುತ್ತದೆ>>
3. ವಿಳಾಸ	<< ಸ್ವಯಂ ತುಂಬುತ್ತದೆ>>
4. ನೊಂದಣಿಯ ರದ್ದತಿಯ ಜಾರಿಯ ದಿನಾಂಕ	

ಈ ಕೆಳಗೆ ಕಾಣಿಸಿದ ಕಾರಣಗಳಿಗಾಗಿ ಜಿಎಸ್‌ಟಿ ವೃತ್ತಿದಾರನಾಗಿ ನೋಂದಣಿಯನ್ನು ರದ್ದುಪಡಿಸಲು ಈ ಮೂಲಕ ಕೋರುತ್ತೇನೆ:

1.

2.

3.

ಘೋಷಣೆ

ಮೇಲಿನ ಘೋಷಣೆಯು, ನನ್ನ ತಿಳುವಳಿಕೆ ಮತ್ತು ನಂಬಿಕೆಯ ಪ್ರಕಾರ ಸತ್ಯವಾಗಿದೆ ಮತ್ತು ಸರಿಯಾಗಿದೆ. ಅಂಥ ನೊಂದಣಿಯ ರದ್ದತಿಗೆ ಮುನ್ನ ನನ್ನ ಕಾರ್ಯಗಳಿಗಾಗಿ ಬಾಧ್ಯನಾಗಿ ಮುಂದುವರೆಯುತ್ತೇನೆ ಎಂದು ಒಪ್ಪಿಕೊಳ್ಳುತ್ತೇನೆ.

ಸ್ಥಳ (ಸಹಿ)
ದಿನಾಂಕ

ನಮೂನೆ ಜಿಎಸ್‌ಟಿ ಪಿಸಿಟಿ–07

[ನೋಡಿ ನಿಯಮ 83ಬಿ]

ಜಿಎಸ್‌ಟಿ ವೃತ್ತಿದಾರ ನೋಂದಣಿಯ ರದ್ದತಿಯ ಆದೇಶ

1. ಜಿಎಸ್‌ಟಿಪಿ ನೋಂದಣಿ ಸಂಖ್ಯೆ	
2. ಜಿಎಸ್‌ಟಿ ವೃತ್ತಿದಾರನ ಹೆಸರು	<< ಸ್ವಯಂ ತುಂಬುತ್ತದೆ>>
3. ವಿಳಾಸ	<< ಸ್ವಯಂ ತುಂಬುತ್ತದೆ>>
4. ಸಂಖ್ಯೆ ಮತ್ತು ಅರ್ಜಿಯ ದಿನಾಂಕ	

644

5. ನೊಂದಣಿಯ ರದ್ದತಿಯ ಜಾರಿಯ ದಿನಾಂಕ	

ಘೋಷಣೆ

ಜಿಎಸ್‌ಟಿ ಪ್ರಾಕ್ಟಿಷನರ್ ಆಗಿ ನಿಮ್ಮ ನೋಂದಣಿಯನ್ನು . . . . . ದಿನಾಂಕದಿಂದ ಜಾರಿಗೆ ಬರುವಂತೆ ರದ್ದು ಮಾಡಲಾಗಿದೆ ಎಂದು ತಿಳಿಸಲಾಗಿದೆ.

ಸ್ಥಳ (ಸಹಿ)

ದಿನಾಂಕ:"

8. ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–01ರ ತಿದ್ದುಪಡಿ.– ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–01**ನಲ್ಲಿ, ಅನುಸೂಚಿ–1ರಲ್ಲಿ, ವಿವರಪಟ್ಟಿ 5ಬಿಗಾಗಿ, ಕೆಳಗಿನ ವಿವರಪಟ್ಟಿಯನ್ನು ಪ್ರತಿಯೋಜಿಸಲಾಗಿದೆ, ಅಂದರೆ:–

"**ವಿವರಪಟ್ಟಿ 5ಬಿ** [ನಿಯಮ 89(2)(ಜಿ)]

ಮರುಪಾವತಿಯ ವಿಧ: ಪರಿಭಾವಿತ ರಫ್ತುಗಳಿಗಾಗಿ (ಮೊತ್ತಗಳು ರೂ.ಗಳಲ್ಲಿ)

ಕ್ರ. ಸಂ.	ಪೂರೈಕೆದಾರನಿಂದ ಮರುಪಾವತಿಯನ್ನು ಕ್ಲೇಮು ಮಾಡಲಾದಲ್ಲಿ ಹೊರಮುಖ ಪೂರೈಕೆಗಳ ಬೆಲೆಪಟ್ಟಿಗಳು, ಕ್ರೆಡಿಟ್ ನೋಟ್‌ಗಳು / ಡೆಬಿಟ್ ನೋಟ್‌ಗಳು / ಸ್ವೀಕರಿಸುವವನಿಂದ ಮರುಪಾವತಿ ಕ್ಲೇಮು ಮಾಡಲಾದಲ್ಲಿ ಒಳಮುಖ ಪೂರೈಕೆಗಳ ಬೆಲೆಪಟ್ಟಿಯ ವಿವರಗಳು					ಪಾವತಿಸಿದ ತೆರಿಗೆ			
	ಪೂರೈಕೆದಾರನ ಜಿಎಸ್‌ಟಿಐಎನ್	ಸಂ.	ದಿನಾಂಕ	ತೆರಿಗೆ ದಾಯಕ ಮೌಲ್ಯ	ವಿಧ (ಬೆಲೆಪಟ್ಟಿ/ ಕ್ರೆಡಿಟ್ ನೋಟ್ / ಡೆಬಿಟ್ ನೊಟ್)	ವಿಕೀಕೃತ ತೆರಿಗೆ	ಕೇಂದ್ರ ತೆರಿಗೆ	ರಾಜ್ಯ ತೆರಿಗೆ / ಕೇಂ.ಪ್ರ. ತೆರಿಗೆ	ಉಪ ಕರ
1	2	3	4	5	6	7	8	9	10

9. ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–01ಎ ನ ತಿದ್ದುಪಡಿ.– ಸದರಿ ನಿಯಮಗಳ ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–01ಎ ನಲ್ಲಿ, ಅನುಸೂಚಿ–01ರಲ್ಲಿ, ವಿವರಪಟ್ಟಿ 5ಬಿ ಗಾಗಿ, ಈ ಕೆಳಗಿನ ವಿವರಪಟ್ಟಿಯನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ಮರುಪಾವತಿಯ ವಿಧ: ಪರಿಭಾವಿತ ರಫ್ತುಗಳಿಗಾಗಿ (ಮೊತ್ತಗಳು ರೂ.ಗಳಲ್ಲಿ)

ಕ್ರ.ಸಂ.	ಪೂರೈಕೆದಾರನಿಂದ ಮರುಪಾವತಿಯನ್ನು ಕ್ಲೇಮು ಮಾಡಲಾದಲ್ಲಿ ಹೊರಮುಖ ಪೂರೈಕೆಗಳ ಬೆಲೆಪಟ್ಟಿಗಳು, ಕ್ರೆಡಿಟ್ ನೋಟ್‌ಗಳು / ಡೆಬಿಟ್ ನೋಟ್‌ಗಳು / ಸ್ವೀಕರಿಸುವವನಿಂದ ಮರುಪಾವತಿ ಕ್ಲೇಮು ಮಾಡಲಾದಲ್ಲಿ ಒಳಮುಖ ಪೂರೈಕೆಗಳ ಬೆಲೆಪಟ್ಟಿಯ ವಿವರಗಳು					ಪಾವತಿಸಿದ ತೆರಿಗೆ			
	ಪೂರೈಕೆದಾರನ ಜಿಎಸ್‌ಟಿ ಐಎನ್	ಸಂ.	ದಿನಾಂಕ	ತೆರಿಗೆದಾಯಕ ಮೌಲ್ಯ	ವಿಧ (ಬೆಲೆಪಟ್ಟಿ/ ಕ್ರೆಡಿಟ್ ನೋಟ್ / ಡೆಬಿಟ್ ನೊಟ್)	ವಿಕೀಕೃತ ತೆರಿಗೆ	ಕೇಂದ್ರ ತೆರಿಗೆ	ರಾಜ್ಯ ತೆರಿಗೆ / ಕೇಂ.ಪ್ರ. ತೆರಿಗೆ	ಉಪಕರ
1	2	3	4	5	6	7	8	9	10".

645

10. ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–05 ಮತ್ತು ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–06ಗಳ ಸೇರ್ಪಡೆ.–
ಸದರಿ ನಿಯಮಗಳಲ್ಲಿ, ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–04ರ ನಂತರ, ಈ ಕೆಳಗಿನ ನಮೂನೆಗಳನ್ನು ಸೇರಿಸತಕ್ಕದ್ದು, ಅಂದರೆ:–

"ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–05
[ನೋಡಿ ನಿಯಮ 138ಇ]

ಇ–ವೇಬಿಲ್ಲಿನ ಸೃಷ್ಟಿಯ ಸೌಲಭ್ಯದ ತಡೆಹಿಡಿಯುವಿಕೆಯ ತೆರವುಗೊಳಿಸಲು ಅರ್ಜಿ

1.	ಜಿಎಸ್‌ಟಿಐಎನ್	
2.	ಕಾನೂನುಸಮ್ಮತ ಹೆಸರು	
3.	ವ್ಯವಹಾರದ ಹೆಸರು	
4.	ವಿಳಾಸ	

5.	ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–01ನ ಭಾಗ ಎರಲ್ಲಿ ಮಾಹಿತಿಯನ್ನು ಸಲ್ಲಿಸುವ ಸೌಲಭ್ಯ (ಅಂದರೆ ಎ–ವೇಬಿಲ್ ಸೃಷ್ಟಿಸುವ ಸೌಲಭ್ಯ)ವನ್ನು ತಡೆಹಿಡಿಯುವಿಕೆಯ ಜಾರಿ ದಿನಾಂಕ	<<ಸ್ವಯಂ>>
6.	ಇ–ವೇಬಿಲ್‌ನ ಸೃಷ್ಟಿಸುವ ಸೌಲಭ್ಯದ ತಡೆಹಿಡಿಯುವಿಕೆಯನ್ನು ತೆರವುಗೊಳಿಸಲು ಕಾರಣಗಳು	<ಬಳಕೆದಾರನಿಂದ ಮಾಹಿತಿ>
(i)		
(ii)		
(iii)		
7.	ತಪ್ಪಿರುವ ಅವಧಿಗಾಗಿ ರಿಟರ್ನ್‌ಗಳನ್ನು ಸಲ್ಲಿಸಲು ನಿರೀಕ್ಷಿತ ದಿನಾಂಕ	

8. ಪರಿಶೀಲನೆ.
_____ಎಂಬ ನಾನು ಮೇಲೆ ನೀಡಲಾದ ಮಾಹಿತಿಯು ನನ್ನ ತಿಳುವಳಿಕೆಗೆ ಮತ್ತು ನಂಬಿಕೆಯ ಪ್ರಕಾರ ಸತ್ಯವಾಗಿರುತ್ತದೆ ಮತ್ತು ಸರಿಯಾಗಿರುತ್ತದೆ ಹಾಗೂ ಯಾವುದೇ ಮಾಹಿತಿಯನ್ನು ಇದರಿಂದ ಮರೆಮಾಚಿರುವುದಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

ಪ್ರಾಧಿಕೃತ ಸಹಿದಾರನ ಸಹಿ
ಸ್ಥಳ: ಹೆಸರು
ದಿನಾಂಕ: ಪದನಾಮ/ಸ್ಥಾನ

ನಮೂನೆ ಜಿಎಸ್‌ಟಿ ಇಡಬ್ಲ್ಯೂಬಿ–06
[ನೋಡಿ ನಿಯಮ 138ಇ]

ಉಲ್ಲೇಖ ಸಂ: ದಿನಾಂಕ:

646

ಗೆ
. . . . . (ಜಿಎಸ್‌ಟಿಐಎನ್)
. . . . . (ಹೆಸರು)
. . . . . (ವಿಳಾಸ)

ಇ–ವೇಬಿಲ್‌ನ ಸೃಷ್ಟಿಗಾಗಿ ಸೌಲಭ್ಯದ ತಡೆಹಿಡಿಯುವಿಕೆಯ ತೆರವಿಗಾಗಿ ಅರ್ಜಿಯನ್ನು ಅನುಮತಿಸುವ / ತಿರಸ್ಕರಿಸುವ ಆದೇಶ

ಅರ್ಜಿ ಎಆರ್‌ಎನ್ ದಿನಾಂಕ:

ಕರ್ನಾಟಕ ಸರಕು ಮತ್ತು ಸೇವಗಳ ತೆರಿಗೆ ನಿಯಮಗಳು, 2017ರ ನಿಯಮ 138ಇಯ ಉಪಬಂಧಗಳಿಗೆ ಅನುಸಾರವಾಗಿ ಮೇಲೆ ಹೇಳಿರುವ ನೋಂದಾಯಿತ ವ್ಯಕ್ತಿಗೆ ಸಂಬಂಧಿಸಿದಂತೆ ಇ–ವೇಬಿಲ್‌ನ ಸೃಷ್ಟಿಸುವ ಸೌಲಭ್ಯವನ್ನು . . . . . ದಿನಾಂಕದಿಂದ ಜಾರಿಗೆ ಬರುವಂತೆ ತಡೆಹಿಡಿಯಲಾಗಿತ್ತು.
ಪ್ರಕರಣದ ವಸ್ತುಸ್ಥಿತಿಗಳನ್ನು ಮತ್ತು ಮೇಲೆ ಹೇಳಿರುವ ನೋಂದಾಯಿತ ವ್ಯಕ್ತಿಯು ಸಲ್ಲಿಸಿದ ಅರ್ಜಿಯನ್ನು / ಸಲ್ಲಿಕೆಗಳನ್ನು ನಾನು ಕಾಳಜಿಪೂರ್ವಕವಾಗಿ ಪರಿಗಣಿಸಿದ್ದೇನೆ.
ನಾನು ಈ ಮೂಲಕ ಅರ್ಜಿಯನ್ನು ಒಪ್ಪಿಕೊಂಡಿದ್ದೇನೆ ಮತ್ತು ಈ ಕೆಳಕಂಡ ಆಧಾರಗಳ ಮೇಲೆ ಇ–ವೇಬಿಲ್‌ನ ಸೃಷ್ಟಿಯ ಸೌಲಭ್ಯದ ತಡೆಹಿಡಿಯುವಿಕೆಯ ತೆರವುಗೊಳಿಸಲು ಆದೇಶ ಮಾಡಿದ್ದೇನೆ:

1.
2.

ನೋಂದಾಯಿತ ವ್ಯಕ್ತಿಯು, ಕರ್ನಾಟಕ ಸರಕು ಮತ್ತು ಸೇವಗಳ ತೆರಿಗೆ ನಿಯಮಗಳು, 2017ರ ನಿಯಮ 138ಇಯ ಉಪಬಂಧಗಳಿಗೆ ಅನುಸಾರವಾಗಿ ತಪ್ಪಿತಸ್ಥನಾಗಿ ಮುಂದುವರೆದಲ್ಲಿ, ... ದಿನಾಂಕದ ನಂತರ ಇ–ವೇಬಿಲ್‌ನ ಸೃಷ್ಟಿಯ ಸೌಲಭ್ಯವನ್ನು ಸಿಸ್ಟಂ ತಡೆಹಿಡಿಯುತ್ತದೆ ಎಂದು ದಯವಿಟ್ಟು ಗಮನಿಸಿ.

ಅಥವಾ

ಪ್ರಕರಣದ ವಸ್ತುಸ್ಥಿತಿಗಳನ್ನು ಮತ್ತು ಮೇಲೆ ಹೇಳಿರುವ ನೋಂದಾಯಿತ ವ್ಯಕ್ತಿಯು ಸಲ್ಲಿಸಿದ ಅರ್ಜಿಯನ್ನು / ಸಲ್ಲಿಕೆಗಳನ್ನು ನಾನು ಕಾಳಜಿಪೂರ್ವಕವಾಗಿ ಪರಿಗಣಿಸಿದ್ದೇನೆ.
ನಾನು ಈ ಮೂಲಕ ಈ ಕೆಳಕಂಡ ಆಧಾರಗಳ ಮೇಲೆ ಇ–ವೇಬಿಲ್‌ನ ಸೃಷ್ಟಿಯ ಸೌಲಭ್ಯದ ತಡೆಹಿಡಿಯುವಿಕೆಯ ತೆರವುಗೊಳಿಸಲು ಅರ್ಜಿಯನ್ನು ತಿರಸ್ಕರಿಸಿದ್ದೇನೆ:

1.
2.

ಸಹಿ
ಹೆಸರು
ಪದನಾಮ
ಕ್ಷೇತ್ರವ್ಯಾಪ್ತಿ
ವಿಳಾಸ

ಟಿಪ್ಪಣಿ: ವಿವರವಾದ ಆದೇಶ/ ಕಾರಣಗಳಿಗಾಗಿ ಪ್ರತ್ಯೇಕ ದಾಖಲೆಗಳನ್ನು ಲಗತ್ತಿಸಬಹುದು.".

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಅವರ ಆದೇಶಾನುಸಾರ

647

ಕೆ.ಸಾವಿತ್ರಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

648

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಎಫ್/2019)
ಸಂಖ್ಯೆ: ಆಇ 47 ಸಿ.ಎಸ್.ಎಲ್ 2017, ಬೆಂಗಳೂರು, ದಿನಾಂಕ 30.10.2019

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ 27)ರ ಪ್ರಕರಣ 164ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಜಿಎಸ್‌ಟಿ ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರಕು ಮತ್ತು ಸೇವಾ ತೆರಿಗೆಗಳ ನಿಯಮಗಳು, 2017ರ ಮುಂದುವರೆದ ತಿದ್ದುಪಡಿ ಮಾಡಿ, ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ ಅಂದರೆ:–

ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ: (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಏಳನೆಯ ತಿದ್ದುಪಡಿ) ನಿಯಮಗಳು, 2019, ಎಂದು ಕರೆಯಬಹುದು.

(2) ಈ ನಿಯಮಗಳಲ್ಲಿ ಉಪಬಂಧಿಸಿದುದನ್ನುಳಿದು, ಅವು 2019ರ ಅಕ್ಟೋಬರ್ ಒಂಬತ್ತನೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ನಿಯಮ 21ಎಯ ತಿದ್ದುಪಡಿ.– ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017 (ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ)ರ ನಿಯಮ 21ಎ ಯಲ್ಲಿ,–

(1) ಉಪನಿಯಮ (3)ರಲ್ಲಿ, ಈ ಕೆಳಗಿನ ವಿವರಣೆಯನ್ನು ಸೇರಿಸತಕ್ಕದ್ದು, ಅಂದರೆ:–

"ವಿವರಣೆ.– ಈ ಉಪನಿಯಮದ ಉದ್ದೇಶಗಳಿಗಾಗಿ, **"**ತೆರಿಗೆದಾಯಕ ಪೂರೈಕೆಗಳನ್ನು ಮಾಡತಕ್ಕದ್ದಲ್ಲ**"** ಪದಾವಳಿಯು, ನೋಂದಾಯಿತ ವ್ಯಕ್ತಿಯು ಒಂದು ತೆರಿಗೆ ಬೆಲೆಪಟ್ಟಿಯನ್ನು ನೀಡತಕ್ಕದ್ದಲ್ಲ ಮತ್ತು, ಅದರಂತೆ, ಅಮಾನತ್ತಿನ ಅವಧಿಯಲ್ಲಿ ಅವನಿಂದ ಮಾಡಿದ ಪೂರೈಕೆಗಳ ಮೇಲೆ ತೆರಿಗೆಯನ್ನು ಆಕರಿಸತಕ್ಕದ್ದಲ್ಲ ಎಂದು ಅರ್ಥೈಸತಕ್ಕದ್ದು.**"**;

(2) ಉಪನಿಯಮ (4)ರ ನಂತರ, ಈ ಕೆಳಗಿನ ಉಪನಿಯಮವನ್ನು ಸೇರಿಸತಕ್ಕದ್ದು, ಅಂದರೆ:–

"(5) ನೋಂದಣಿಯ ಅಮಾನತ್ತಿನ ಹಿಂಪಡೆಯುವಿಕೆಯ ಪರಿಣಾಮವನ್ನು ಹೊಂದಿರುವ ಯಾವುದೇ ಆದೇಶವನ್ನು ನೀಡಿದ್ದಲ್ಲಿ, ಪ್ರಕರಣ 31ರ ಉಪನಿಯಮ (3)ರ ಖಂಡ (ಎ) ಮತ್ತು ಪ್ರಕರಣ 40ರ ಅನುಬಂಧಗಳು ಮತ್ತು ಅವುಗಳಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯು ಅಮಾನತ್ತಿನ ಅವಧಿಯಲ್ಲಿ ಮಾಡಿದ ಪೂರೈಕೆಗಳ ಸಂಬಂಧದಲ್ಲಿ ಅನ್ವಯಿಸತಕ್ಕದ್ದು.**"**.

3. ನಿಯಮ 36ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 36ರಲ್ಲಿ, ಉಪನಿಯಮ (3)ರ ನಂತರ, ಈ ಕೆಳಗಿನ ಉಪನಿಯಮವನ್ನು ಸೇರಿಸತಕ್ಕದ್ದು, ಅಂದರೆ:–

"(4) ಪ್ರಕರಣ 37ರ ಉಪಪ್ರಕರಣ (1)ರ ಅಡಿಯಲ್ಲಿ ಪೂರೈಕೆದಾರರಿಂದ ಅಪ್‌ಲೋಡ್ ಮಾಡದೇ ಇರುವ ಬೆಲೆಪಟ್ಟಿಗಳು ಅಥವಾ ಖರ್ಚು ಚೀಟಿಗಳ ವಿವರಗಳಿಗೆ ಸಂಬಂಧಿಸಿದಂತೆ ಒಬ್ಬ ನೋಂದಾಯಿತ ವ್ಯಕ್ತಿಯಿಂದ ಬಳಸಿಕೊಳ್ಳಬಹುದಾದ ಹೂಡುವಳಿ ತೆರಿಗೆ ಜಮೆಯು, ಪ್ರಕರಣ 37ರ ಉಪಪ್ರಕರಣ (1)ರ ಅಡಿಯಲ್ಲಿ ಪೂರೈಕೆದಾರರಿಂದ ಅಪ್‌ಲೋಡ್ ಮಾಡಿರುವ ಬೆಲೆಪಟ್ಟಿಗಳು ಅಥವಾ ಖರ್ಚು ಚೀಟಿಗಳ ವಿವರಗಳಲ್ಲಿ ಲಭ್ಯವಿರುವ ಅರ್ಹ ಜಮೆಯ ಶೇಕಡಾ 20ನ್ನು ಮೀರತಕ್ಕದ್ದಲ್ಲ.**"**.

649

4. ನಿಯಮ 61ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 61ರಲ್ಲಿ,–

(1) ಉಪನಿಯಮ (5)ಕ್ಕಾಗಿ, ಈ ಕೆಳಗಿನ ಉಪನಿಯಮವನ್ನು, 2017ರ ಜುಲೈ ಒಂದನೆಯ ದಿನಾಂಕದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು, ಅಂದರೆ:–

"(5) ಪ್ರಕರಣ 37ರ ಅಡಿ **ನಮೂನೆ ಜಿಎಸ್‌ಟಿಆರ್–1**ರಲ್ಲಿ ಅಥವಾ ಪ್ರಕರಣ 38ರ ಅಡಿ **ನಮೂನೆ ಜಿಎಸ್‌ಟಿಆರ್–2**ರಲ್ಲಿ ವಿವರಗಳನ್ನು ಒದಗಿಸುವುದಕ್ಕಾಗಿ ಸಮಯ ಮಿತಿಯನ್ನು ಹೆಚ್ಚಿಸಲಾಗಿದ್ದಲ್ಲಿ, ಪ್ರಕರಣ 39ರ ಉಪಪ್ರಕರಣ (1)ರಲ್ಲಿ ನಿರ್ದಿಷ್ಟಪಡಿಸಿದ ರಿಟರ್ನ್ಸ್‌ನ್ನು, ಅಧಿಸೂಚನೆಯ ಮೂಲಕ ಆಯುಕ್ತರು ನಿರ್ದಿಷ್ಟ ಪಡಿಸಬಹುದಾದ ಅಂತಹ ರೀತಿ ಮತ್ತು ಅಂತಹ ನಿಬಂಧನೆಗಳಿಗೆ ಒಳಪಟ್ಟು, **ನಮೂನೆ ಜಿಎಸ್‌ಟಿಆರ್–3ಬಿ**ಯಲ್ಲಿ ವಿದ್ಯುನ್ಮಾನವಾಗಿ ನೇರವಾಗಿ ಸಾಮಾನ್ಯ ಪೋರ್ಟಲ್ ಮೂಲಕ ಅಥವಾ ಆಯುಕ್ತರಿಂದ ಅಧಿಸೂಚಿತ ಒಂದು ಸಹಾಯ ಕೇಂದ್ರದ ಮೂಲಕ ಒದಗಿಸತಕ್ಕದ್ದು;

ಪರಂತು, ಉಪನಿಯಮ (1)ರ ಅಡಿ ಉಲ್ಲೇಖಿಸಲಾದ ಒಬ್ಬ ವ್ಯಕ್ತಿಯಿಂದ **ನಮೂನೆ ಜಿಎಸ್‌ಟಿಆರ್–3ಬಿ**ಯಲ್ಲಿ ರಿಟರ್ನ್ಸ್‌ನ್ನು ಒದಗಿಸುವುದು ಅವಶ್ಯಕವಿದ್ದಲ್ಲಿ ಅಂತಹ ವ್ಯಕ್ತಿಯು **ನಮೂನೆ ಜಿಎಸ್‌ಟಿಆರ್–3ರ**ಲ್ಲಿ ರಿಟರ್ನ್ಸ್‌ನ್ನು ಒದಗಿಸುವುದು ಅವಶ್ಯಕವಿರತಕ್ಕದ್ದಲ್ಲ.";

(2) 1ನೆಯ ಜುಲೈ 2017ರಿಂದ ಜಾರಿಯಾಗುವಂತೆ ಉಪನಿಯಮ (6)ನ್ನು ಬಿಟ್ಟುಬಿಡತಕ್ಕದ್ದು.

5. ನಿಯಮ 83ಎಯ ತಿದ್ದುಪಡಿ.– ಸದರಿ ನಿಯಮಗಳ ನಿಯಮ 83ಎ ಯಲ್ಲಿ, ಉಪನಿಯಮ (6)ರಲ್ಲಿ, ಖಂಡ (i)ಕ್ಕಾಗಿ, ಈ ಕೆಳಗಿನ ಖಂಡವನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"(i) ನಿಯಮ 83ರ ಉಪನಿಯಮ (1)ರ ಖಂಡ (ಬಿ)ಯಲ್ಲಿ ಉಲ್ಲೇಖಿಸಲಾದ ಪ್ರತಿಯೊಬ್ಬ ವ್ಯಕ್ತಿಯು ಮತ್ತು ಸದರಿ ನಿಯಮದ ಉಪನಿಯಮ (2)ರ ಅಡಿ ಸರಕು ಮತ್ತು ಸೇವೆಗಳ ತೆರಿಗೆ ವೃತ್ತಿದಾರನೆಂದು ನೋಂದಾಯಿತನಾಗಿರುವ ಪ್ರತಿಯೊಬ್ಬ ವ್ಯಕ್ತಿಯು ಸದರಿ ನಿಯಮದ ಉಪನಿಯಮ (3)ರ ಎರಡನೆಯ ಪರಂತುಕದಲ್ಲಿ ನಿರ್ದಿಷ್ಟಪಡಿಸಿದ ಅವಧಿಯ ಒಳಗಾಗಿ ಪರೀಕ್ಷೆಯಲ್ಲಿ ಉತ್ತೀರ್ಣನಾಗುವುದು ಅವಶ್ಯಕವಿರುತ್ತದೆ."

6. ನಿಯಮ 91ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 91ರಲ್ಲಿ,–

(1) ಉಪನಿಯಮ (3)ರಲ್ಲಿ, 2019ರ ಸೆಪ್ಟೆಂಬರ್ 24ನೆಯ ದಿನಾಂಕದಿಂದ ಜಾರಿಗೆ ಬರುವಂತೆ, "ಮತ್ತು ಅದು," ಪದಗಳ ನಂತರ, "ಒಂದು ಕ್ರೋಢೀಕೃತ ಸಂದಾಯದ ಸೂಚನೆಯ ಆಧಾರದ ಮೇಲೆ;" ಪದಗಳನ್ನು ಸೇರಿಸತಕ್ಕದ್ದು;

(2) ಉಪನಿಯಮ (3)ರ ನಂತರ, 2019ರ ಸೆಪ್ಟೆಂಬರ್ 24ನೆಯ ದಿನಾಂಕದಿಂದ ಜಾರಿಗೆ ಬರುವಂತೆ, ಈ ಕೆಳಗಿನ ಉಪನಿಯಮವನ್ನು ಸೇರಿಸತಕ್ಕದ್ದು, ಅಂದರೆ:–

"(4) ಉಪನಿಯಮ (3)ರ ಅಡಿ ನೀಡಲಾದ ಕ್ರೋಢೀಕೃತ ಸಂದಾಯದ ಸೂಚನೆಯ ಆಧಾರದ ಮೇಲೆ ಕೇಂದ್ರ ಸರ್ಕಾರವು ಮರುಪಾವತಿಯನ್ನು ಬಟವಾಡೆ ಮಾಡತಕ್ಕದ್ದು."

7. ನಿಯಮ 97ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 97ರಲ್ಲಿ,–

(1) ಉಪನಿಯಮ (7)ರ ನಂತರ, 2017ರ ಜುಲೈ ಒಂದನೆಯ ದಿನಾಂಕದಿಂದ ಜಾರಿಗೆ ಬರುವಂತೆ, ಈ ಕೆಳಗಿನ ಉಪನಿಯಮವನ್ನು ಸೇರಿಸತಕ್ಕದ್ದು, ಅಂದರೆ:–

"(7ಎ) ಗ್ರಾಹಕ ವ್ಯವಹಾರಗಳ ಇಲಾಖೆಯ ಗ್ರಾಹಕ ಕ್ಷೇಮಾಭಿವೃದ್ಧಿ ಚಟುವಟಿಕೆಗಳಿಗಾಗಿ ನಿಧಿಯ ಲಭ್ಯತೆಯು ವಾರ್ಷಿಕವಾಗಿ ಇಪ್ಪತ್ತೈದು ಕೋಟಿ ರೂಪಾಯಿಗಳಿಗಿಂತ ಕಡಿಮೆ ಇರದಿದ್ದಲ್ಲಿ, ಸರಕು ಮತ್ತು ಸೇವೆಗಳ ತೆರಿಗೆಯ ಬಗ್ಗೆ ಪ್ರಚಾರ ಅಥವಾ ಗ್ರಾಹಕ ಅರಿವು ಮೂಡಿಸುವಿಕೆಗಾಗಿ, ಪ್ರತಿ ವರ್ಷ ನಿಧಿಗೆ ಜಮೆಯಾದ ಮೊತ್ತದ ಶೇಕಡಾ 50ರಷ್ಟನ್ನು ಸಮಿತಿಯು ಮಂಡಳಿಗೆ ಲಭ್ಯ ಮಾಡತಕ್ಕದ್ದು.";

650

(2) ಉಪನಿಯಮ (8)ರಲ್ಲಿ, 2017ರ ಜುಲೈ ಒಂದನೆಯ ದಿನಾಂಕದಿಂದ ಜಾರಿಗೆ ಬರುವಂತೆ, ಖಂಡ (ಇ)ಯನ್ನು ಬಿಟ್ಟು ಬಿಡತಕ್ಕದ್ದು.

8. ನಿಯಮ 117ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 117ರಲ್ಲಿ,–

(1) ಉಪನಿಯಮ (1ಎ)ಯಲ್ಲಿ, **"**31ನೆಯ ಮಾರ್ಚ್, 2019**"** ಪದ, ಅಕ್ಷರಗಳು ಮತ್ತು ಸಂಖ್ಯೆಗಳಿಗಾಗಿ, **"**31ನೆಯ ಡಿಸೆಂಬರ್, 2019**"** ಪದ, ಅಕ್ಷರಗಳು ಮತ್ತು ಸಂಖ್ಯೆಗಳನ್ನು ಪ್ರತಿಯೋಜಿಸತಕ್ಕದ್ದು;

(2) ಉಪನಿಯಮ (4)ರಲ್ಲಿ, ಖಂಡ (ಬಿ)ಯಲ್ಲಿ, ಉಪಖಂಡ (iii)ರಲ್ಲಿ, ಪರಂತುಕದಲ್ಲಿ, **"**30ನೆಯ ಏಪ್ರಿಲ್, 2019**"** ಪದ, ಅಕ್ಷರಗಳು ಮತ್ತು ಸಂಖ್ಯೆಗಳಿಗಾಗಿ, **"**31ನೆಯ ಜನವರಿ, 2020**"** ಪದ, ಅಕ್ಷರಗಳು ಮತ್ತು ಸಂಖ್ಯೆಗಳನ್ನು ಪ್ರತಿಯೋಜಿಸತಕ್ಕದ್ದು.

9. ನಿಯಮ 142ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 142ರಲ್ಲಿ,–

(1) ಉಪ–ನಿಯಮ (1)ರ ನಂತರ, ಈ ಕೆಳಗಿನ ಉಪನಿಯಮವನ್ನು ಸೇರಿಸತಕ್ಕದ್ದು, ಅಂದರೆ:–

"(1ಎ) ಯುಕ್ತ ಅಧಿಕಾರಿಯು, ಸಂದರ್ಭಾನುಸಾರವಾಗಿ, ಪ್ರಕರಣ 73ರ ಉಪಪ್ರಕರಣ (1) ಅಥವಾ ಪ್ರಕರಣ 74ರ ಉಪಪ್ರಕರಣ (1)ರ ಅಡಿಯಲ್ಲಿ ತೆರಿಗೆ, ಬಡ್ಡಿ ಮತ್ತು ದಂಡ ವಿಧಿಸಬೇಕಾದ ವ್ಯಕ್ತಿಗೆ ನೋಟೀಸು ಜಾರಿ ಮಾಡುವ ಮೊದಲು, **ನಮೂನೆ ಜಿಎಸ್‌ಟಿ ಡಿಆರ್‌ಸಿ–01ಎ**ಯ **ಭಾಗ ಎ**ಯಲ್ಲಿ, ಸದರಿ ಅಧಿಕಾರಿಯಿಂದ ಖಚಿತ ಪಡಿಸಿಕೊಂಡಂತೆ ಯಾವುದೇ ತೆರಿಗೆ, ಬಡ್ಡಿ ಮತ್ತು ದಂಡದ ವಿವರಗಳನ್ನು ತಿಳಿಸತಕ್ಕದ್ದು.';

(2) ಉಪನಿಯಮ (2)ರಲ್ಲಿ, **"**ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ,**""** ಪದಗಳ ನಂತರ, **"**ಅವನ ಸ್ವಂತ ಖಚಿತಪಡಿಸಿಕೊಳ್ಳುವಿಕೆಯ ಮೇಲೆಯಾಗಲಿ ಅಥವಾ ಉಪನಿಯಮ (1ಎ) ಅಡಿಯಲ್ಲಿ ಯುಕ್ತ ಅಧಿಕಾರಿಯಿಂದ ತಿಳಿಸಿದಂತೆಯಾಗಲಿ,**"** ಪದಗಳು, ಸಂಖ್ಯೆ ಮತ್ತು ಅಕ್ಷರವನ್ನು ಸೇರಿಸತಕ್ಕದ್ದು;

(3) ಉಪನಿಯಮ (2)ರ ನಂತರ, ಈ ಕೆಳಗಿನ ಉಪನಿಯಮವನ್ನು ಸೇರಿಸತಕ್ಕದ್ದು, ಅಂದರೆ:–

"(2ಎ) ಉಪನಿಯಮ (1ಎ)ಯಲ್ಲಿ ಉಲ್ಲೇಖಿಸಿರುವ ವ್ಯಕ್ತಿಯು ಅವನಿಗೆ ತಿಳಿಸಲಾದ ಮೊತ್ತವನ್ನು ಭಾಗಶಃ ಸಂದಾಯ ಮಾಡಿದ್ದಲ್ಲಿ ಅಥವಾ ಪ್ರಸ್ತಾವಿತ ಬಾಧ್ಯತೆಯ ವಿರುದ್ಧ ಯಾವುದಾದರೂ ಸಲ್ಲಿಕೆಗಳನ್ನು ಸಲ್ಲಿಸಲು ಬಯಸುತ್ತಿದ್ದರೆ, ಅವನು ಅಂತಹ ಸಲ್ಲಿಕೆಯನ್ನು **ನಮೂನೆ ಜಿಎಸ್‌ಟಿ ಡಿಆರ್‌ಸಿ–01ಎ**ಯ **ಭಾಗ ಬಿ**ಯಲ್ಲಿ, ಮಾಡಬಹುದು.**"**.

10. ನಮೂನೆ ಜಿಎಸ್‌ಟಿ ಡಿಆರ್‌ಸಿ–01ಎಯ ಸೇರ್ಪಡೆ.– ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಡಿಆರ್‌ಸಿ–01**ರ ನಂತರ, ಈ ಕೆಳಗಿನ ನಮೂನೆಯನ್ನು ಸೇರಿಸತಕ್ಕದ್ದು, ಅಂದರೆ:–

"ನಮೂನೆ ಜಿಎಸ್‌ಟಿ ಡಿಆರ್‌ಸಿ–01ಎ

[ನಿಯಮ 142 (1ಎ) ನೋಡಿ]

ಪ್ರಕರಣ 73(5)/74(5)ರ ಅಡಿಯಲ್ಲಿ ಪಾವತಿಸಬೇಕಾದದ್ದು ಎಂದು ಖಚಿತ ಪಡಿಸಿದ ತೆರಿಗೆಯ ತಿಳಿಸುವಿಕೆಯ ಪತ್ರ

ಭಾಗ ಎ

ಸಂ.:

ದಿನಾಂಕ;

ಪ್ರಕರಣ ಐಡಿ ಸಂ.;

ಗೆ,

ಜಿಎಸ್‌ಟಿಐಎನ್.....

ಹೆಸರು.....

ವಿಳಾಸ.....

651

ವಿಷಯ.: ಪ್ರಕರಣದ ನಡಾವಳಿಯ ಉಲ್ಲೇಖ ಸಂಖ್ಯೆ.....– ಪ್ರಕರಣ 73(5)/ ಪ್ರಕರಣ 74(5)ರ ಅಡಿ ಬಾಧ್ಯತೆಯ ತಿಳಿಸುವಿಕೆ– ಬಗ್ಗೆ.

ಮೇಲಿನ ನಡಾವಳಿಗಳನ್ನು ದಯವಿಟ್ಟು ಉಲ್ಲೇಖಿಸಿ. ಈ ಬಗ್ಗೆ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಲಭ್ಯವಿರುವ ಮಾಹಿತಿಯ ಪ್ರಕಾರ ಈ ಕೆಳಗೆ ಸಹಿ ಮಾಡಿರುವವರಿಂದ ಖಚಿತ ಪಡಿಸಿಕೊಂಡಿರುವಂತೆ, ಪ್ರಕರಣ 73(5)/ಪ್ರಕರಣ 74(5)ರ ಅಡಿ ನೀವು ಸಂದಾಯಿಸಬೇಕಾದ ತೆರಿಗೆ, ಬಡ್ಡಿ ಮತ್ತು ದಂಡದ ಮೊತ್ತವು, ಈ ಕೆಳಗಿನಂತಿರುತ್ತದೆ;

ಅಧಿನಿಯಮ	ಅವಧಿ	ತೆರಿಗೆ			
ಸಿಜಿಎಸ್‌ಟಿ					
ಎಸ್‌ಜಿಎಸ್‌ಟಿ/ ಯುಟಿಜಿಎಸ್‌ಟಿ					
ಐಜಿಎಸ್‌ಟಿ					
ಉಪಕರ					
ಒಟ್ಟು					

ಕಾರಣಗಳು ಮತ್ತು ಒಟ್ಟು ಮೊತ್ತವನ್ನು ಈ ಕೆಳಗಿನಂತೆ ಲಗತ್ತಿಸಲಾಗಿದೆ/ಕೊಡಲಾಗಿದೆ:

.....ರೊಳಗಾಗಿ ಮೇಲೆ ಖಚಿತ ಪಡಿಸಿಕೊಳ್ಳಲಾಗಿರುವಂತೆ ತೆರಿಗೆಯ ಮೊತ್ತವನ್ನು, ಅನ್ವಯಿಸಬಹುದಾದ ಬಡ್ಡಿಯೊಂದಿಗೆ, ಸಂದಾಯ ಮಾಡಲು ಈ ಮೂಲಕ ನಿಮಗೆ ಸಲಹೆ ಕೊಡಲಾಗಿದೆ ತಪ್ಪಿದಲ್ಲಿ, ಪ್ರಕರಣ 73(1)ರ ಅಡಿ ಕಾರಣ ಕೇಳುವ ನೋಟೀಸನ್ನು ನೀಡಲಾಗುವದು.

.....ರೊಳಗಾಗಿ ಮೇಲೆ ಖಚಿತ ಪಡಿಸಿಕೊಳ್ಳಲಾಗಿರುವಂತೆ ತೆರಿಗೆಯ ಮೊತ್ತವನ್ನು, ಅನ್ವಯಿಸಬಹುದಾದ ಬಡ್ಡಿ ಮತ್ತು ಪ್ರಕರಣ 74(5)ರ ಅಡಿ ದಂಡದೊಂದಿಗೆ, ಸಂದಾಯ ಮಾಡಲು ಈ ಮೂಲಕ ನಿಮಗೆ ಸಲಹೆ ಕೊಡಲಾಗಿದೆ ತಪ್ಪಿದಲ್ಲಿ, ಪ್ರಕರಣ 74(1)ರ ಅಡಿ ಕಾರಣ ಕೇಳುವ ನೋಟೀಸನ್ನು ನೀಡಲಾಗುವದು.

ಮೇಲೆ ಖಚಿತ ಪಡಿಸಿಕೊಳ್ಳಲಾಗಿರುವಿಕೆಯ ವಿರುದ್ಧ ಯಾವುದಾದರೂ ಸಲ್ಲಿಕೆಗಳನ್ನು ನೀವು ಸಲ್ಲಿಸಬಯಸಿದ್ದಲ್ಲಿ, ಅವುಗಳನ್ನು .....ರ ಒಳಗೆ ಈ ನಮೂನೆಯ ಭಾಗ ಬಿ ಯಲ್ಲಿ ಸಲ್ಲಿಸಬಹುದು.

ಯುಕ್ತ ಅಧಿಕಾರಿ
ಸಹಿ.....
ಹೆಸರು.....
ಪದನಾಮ.....

ಲಗತ್ತು ಅಪ್‌ಲೋಡ್ ಮಾಡಿ

ಭಾಗ ಬಿ

[ನಿಯಮ 142 (2ಎ) ನೋಡಿ]

652

ಕಾರಣ ಕೇಳುವ ನೋಟೀಸಿನ ಜಾರಿಯ ಮೊದಲು ಸಂದಾಯಕ್ಕಾಗಿ ತಿಳಿಸುವಿಕೆಗೆ ಪ್ರತ್ಯುತ್ತರ

ಸಂ. ದಿನಾಂಕ:

ಗೆ,

ಯುಕ್ತ ಅಧಿಕಾರಿ,

ವಿಭಾಗ/ಕ್ಷೇತ್ರವ್ಯಾಪ್ತಿ.

ವಿಷಯ.: ಪ್ರಕರಣದ ನಡಾವಳಿಯ ಉಲ್ಲೇಖ ಸಂಖ್ಯೆ.....– ಪ್ರಕರಣ 73(5)/ ಪ್ರಕರಣ 74(5)ರ ಅಡಿ ಬಾಧ್ಯತೆಯ ತಿಳಿಸಿದ್ದಕ್ಕೆ ಪ್ರತಿಕ್ರಿಯೆಯಾಗಿ ಸಂದಾಯ/ಸಲ್ಲಿಕೆಗಳು – ಬಗ್ಗೆ.

ಪ್ರಕರಣ ಐಡಿ.....ಗೆ ಸಂಬಂಧಿಸಿದಂತೆ ತಿಳಿಸುವಿಕೆ ಐಡಿ.....ಯನ್ನು ದಯವಿಟ್ಟು ಉಲ್ಲೇಖಿಸಿ ಅದರ ಮೂಲಕ ಪ್ರಕರಣ 73(5)/ ಪ್ರಕರಣ 74(5)ರ ಅಡಿ ಖಚಿತ ಪಡಿಸಿಕೊಂಡಂತೆ ಸಂದಾಯಿಸಬೇಕಾದ ತೆರಿಗೆ ಬಾಧ್ಯತೆಯನ್ನು ತಿಳಿಸಲಾಗಿತ್ತು.

ಈ ಬಗ್ಗೆ,

ಎ. ಈ ಬಗ್ಗೆ ತಿಳಿಸಲಾಗುವದೇನೆಂದರೆ, ...ಮೂಲಕ ರೂ.....ಗಳ ಮಟ್ಟಿಗೆ ಸದರಿ ಬಾಧ್ಯತೆಯನ್ನು ಭಾಗಶಃ ತೀರಿಸಲಾಗಿದೆ ಮತ್ತು ಉಳಿದಿರುವ ಬಾಧ್ಯತೆಯ ಸಂಬಂಧವಾಗಿ ಸಲ್ಲಿಕೆಗಳನ್ನು ಈ ಕೆಳಗಿನಂತೆ ಲಗತ್ತಿಸಲಾಗಿದೆ/ಕೊಡಲಾಗಿದೆ:

ಅಥವಾ

ಬಿ. ಸದರಿ ಬಾಧ್ಯತೆಯು ಸ್ವೀಕಾರಾರ್ಹವಲ್ಲ ಮತ್ತು ಈ ಸಂಬಂಧವಾಗಿ ಸಲ್ಲಿಕೆಗಳನ್ನು ಈ ಕೆಳಗಿನಂತೆ ಲಗತ್ತಿಸಲಾಗಿದೆ/ಕೊಡಲಾಗಿದೆ:

ಯುಕ್ತ ಅಧಿಕಾರಿ
ಸಹಿ.....
ಹೆಸರು.....
ಪದನಾಮ.....
ಲಗತ್ತು ಅಪ್‌ಲೋಡ್ ಮಾಡಿ"

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

ಕೆ. ಸಾವಿತ್ರಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ [ವಾ.ತೆ–1]

653

ಕರ್ನಾಟಕ ಸರ್ಕಾರ
ಆರ್ಥಿಕ ಇಲಾಖೆ

ಅಧಿಸೂಚನೆ (4–ಜಿ/ 2019)
ಸಂ.ಆಇ 47 ಸಿಎಸ್ಎಲ್ 2017, ಬೆಂಗಳೂರು, ದಿನಾಂಕ 10.12.2019

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ 27)ರ ಪ್ರಕರಣ 164ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಜಿಎಸ್ಟಿ ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರಕು ಮತ್ತು ಸೇವಾ ತೆರಿಗೆಗಳ ನಿಯಮಗಳು, 2017ರ ಮುಂದುವರೆದ ತಿದ್ದುಪಡಿ ಮಾಡಿ, ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ ಅಂದರೆ:–

ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ: (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಎಂಟನೆಯ ತಿದ್ದುಪಡಿ) ನಿಯಮಗಳು, 2019, ಎಂದು ಕರೆಯಬಹುದು.

(2) ಈ ನಿಯಮಗಳಲ್ಲಿ ಉಪಬಂಧಿಸಿದುದನ್ನುಳಿದು, ಅವು 2019ರ ನವಂಬರ್ 14ನೇ ದಿನದಿಂದ ಜಾರಿಗೆ ಬರತಕ್ಕದ್ದು.

2. ನಮೂನೆ ಜಿಎಸ್ಟಿ ಆರ್ಎಫ್ಡಿ–01ರ ತಿದ್ದುಪಡಿ.– ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017 (ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ)ರಲ್ಲಿ, ನಮೂನೆ ಜಿಎಸ್ಟಿ ಆರ್ಎಫ್ಡಿ–01ರಲ್ಲಿ, ಅನುಬಂಧ 1ರಲ್ಲಿ, –

(1) ವಿವರಪತ್ರ 1ಎ ಗಾಗಿ, ಈ ಕೆಳಕಂಡ ವಿವರಪತ್ರವನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ವಿವರಪತ್ರ 1ಎ [ನಿಯಮ 89(2)(ಹೆಚ್)]
ಮರುಪಾವತಿ ವಿಧ: ವಿಲೋಮ ತೆರಿಗೆ ಪದ್ದತಿಯ ಕಾರಣದಿಂದ ಸಂಚಯಿತ ಐಟಿಸಿ [ಪ್ರಕರಣ 54(3)ಕ್ಕಾಗಿನ ಮೊದಲನೆಯ ಪರಂತುಕದ ಖಂಡ (ii)]

ಕ್ರ.ಸಂ	ಸ್ವೀಕರಿಸಲಾದ ಹೂಡುವಳಿಗಳ ಒಳಮುಖ ಪೂರೈಕೆಗಳ ದಸ್ತಾವೇಜಿನ ವಿವರಗಳು							ಒಳಮುಖ ಪೂರೈಕೆಗಳ ಮೇಲೆ ಪಾವತಿಸಿದ ತೆರಿಗೆ			ನೀಡಲಾದ ಹೊರಮುಖ ಪೂರೈಕೆಗಳ ದಸ್ತಾವೇಜಿನ ವಿವರಗಳು					ಹೊರಮುಖ ಪೂರೈಕೆಗಳ ಮೇಲೆ ಪಾವತಿಸಿದ ತೆರಿಗೆ		
	ಒಳವಮುಖ ಪೂರೈಕೆಯ ವಿಧ	ಪೂರೈಕೆದಾರನ ಜಿಎಸ್ಟಿಐಎನ್ / ತನ್ನ ಜಿಎಸ್ಟಿಐಎನ್	ದಸ್ತಾವೇಜಿನ ವಿಧ	ಸಂ./ಬಿ/ಇ	ಬಂದರು ಕೋಡ್	ದಿನಾಂಕ	ತೆರಿಗೆದಾಯಕ ಮೌಲ್ಯ	ದಿನಾಂಕ	ಏಕೀಕೃತ ತೆರಿಗೆ	ಕೇಂದ್ರ ತೆರಿಗೆ	ರಾಜ್ಯ/ಕೇಂ. ಪ್ರ.ತೆರಿಗೆ	ಹೊರಮುಖ ಪೂರೈಕೆಯ ವಿಧ	ಸಂ,	ದಿನಾಂಕ	ತೆರಿಗೆದಾಯಕ ಮೌಲ್ಯ	ಏಕೀಕೃತ ತೆರಿಗೆ	ಕೇಂದ್ರ ತೆರಿಗೆ	ರಾಜ್ಯ/ಕೇಂ. ಪ್ರ.ತೆರಿಗೆ
1	2	3	4	5	6	7	8	9	10	11	12	13	14	15	16	17	18	19
											ಬಿ2ಬಿ/ ಬಿ2ಸಿ							.";

654

(2) ವಿವರಪತ್ರ 2ಕ್ಕಾಗಿ, ಈ ಕೆಳಕಂಡ ವಿವರಪತ್ರವನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

'ವಿವರಪತ್ರ 2 [ನಿಯಮ 89(2)9ಸಿ)]

ಮರುಪಾವತಿ ವಿದ: ತೆರಿಗೆಯ ಪಾವತಿಯ ಸಹಿತ ಸೇವೆಗಳ ರಫ್ತು (ಸಂಚಯಿತ ಐಟಿಸಿ)

ಕ್ರ. ಸಂ	ದಸ್ತಾವೇಜಿನ ವಿವರಗಳು					ಏಕೀಕೃತ ತೆರಿಗೆ	ಉಪಕರ	ಬಿಆರ್‌ಸಿ / ಎಫ್‌ಐಆರ್‌ಸಿ		
	ದಸ್ತಾವೇಜಿನ ವಿಧ	ಸಂ.	ದಿನಾಂಕ	ಮೌಲ್ಯ	ತೆರಿಗೆದಾಯಕ ಮೌಲ್ಯ			ಸಂ.	ದಿನಾಂಕ	ಮೌಲ್ಯ
1	2	3	4	5	7	8	9	10	11	12
										";"

3. ವಿವರಪತ್ರ 3ಕ್ಕಾಗಿ, ಈ ಕೆಳಕಂಡ ವಿವರಪತ್ರವನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

ಕ್ರ. ಸಂ	ದಸ್ತಾವೇಜಿನ ವಿವರ				ಸರಕುಗಳು/ ಸೇವೆಗಳು (ಜಿ/ ಎಸ್)	ಷಿಪ್ಪಿಂಗ್ ಬಿಲ್ / ರಫ್ತು ಬಿಲ್			ಇಜಿಎಂ ವಿವರ		ಬಿಆರ್‌ಸಿ / ಎಫ್‌ಐಆರ್‌ಸಿ		
	ದಸ್ತಾವೇಜಿನ ವಿಧ	ಸಂ.	ದಿನಾಂಕ	ಮೌಲ್ಯ		ಬಂದರು ಕೋಡ್	ಸಂ.	ದಿನಾಂಕ	ಉಲ್ಲೇಖ ಸಂ.	ದಿನಾಂಕ	ಸಂ.	ದಿನಾಂಕ	ಮೌಲ್ಯ
1	2	3	4	5	6	7	8	9	10	11	12	13	14
													";"

(4) ವಿವರಪತ್ರ 4ಕ್ಕಾಗಿ, ಈ ಕೆಳಕಂಡ ವಿವರಪತ್ರವನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ವಿವರಪತ್ರ 4 [ನಿಯಮ 89(2)(ಡಿ) ಮತ್ತು ನಿಯಮ 89(2)(ಇ)]

ಮರುಪಾವತಿ ವಿಧ: ಎಸ್‌ಇಝಡ್ ಘಟಕ / ಎಸ್‌ಇಝಡ್ ಡೆವಲಪರ್ ಗೆ (ತೆರಿಗೆಯ ಪಾವತಿಯ ಮೇಲೆ) ಮಾಡಿದ ಪೂರೈಕೆದಾರನ ಕಾರಣದಿಂದ

ಸ್ವೀಕರಿಸುವವನ ಜಿಎಸ್‌ಟಿಐಎನ್	ದಸ್ತಾವೇಜಿನ ವಿವರಗಳು				ಷಿಪ್ಪಿಂಗ್ ಬಿಲ್ / ರಫ್ತಿನ ಬಿಲ್ / ಎಸ್‌ಇಝಡ್‌ನಿಂದ ಮೇಲುರುಜು ಮಾಡಿದ ಬೆಲೆಪಟ್ಟಿ		ತೆರಿಗೆದಾಯಕ ಮೌಲ್ಯ	ಏಕೀಕೃತ ತೆರಿಗೆ	ಉಪಕರ
	ದಸ್ತಾವೇಜಿನ ವಿಧ	ಸಂ.	ದಿನಾಂಕ	ಮೌಲ್ಯ	ಸಂ.	ದಿನಾಂಕ			
1	2	3	4	5	6	7	8	9	10
									";"

(5) ವಿವರಪತ್ರ 4 ರ ನಂತರ, ಈ ಕೆಳಕಂಡ ವಿವರಪತ್ರವನ್ನು ಸೇರಿಸತಕ್ಕದ್ದು, ಅಂದರೆ:–

"ವಿವರಪತ್ರ 4ಎ

ಡಿಟಿಎನಿಂದ ಎಸ್‌ಇಝಡ್ ಸ್ವೀಕರಿಸಿದ ಪೂರೈಕೆಗಳ ಕಾರಣದಿಂದ ಮರುಪಾವತಿ – ತೆರಿಗೆಯನ್ನು ಪಾವತಿಸಿದ

ಪೂರೈಕೆದಾರನ ಜಿಎಸ್‌ಟಿಐಎನ್	ದಸ್ತಾವೇಜಿನ ವಿವರಗಳು	ಷಿಪ್ಪಿಂಗ್ ಬಿಲ್ / ರಫ್ತಿನ ಬಿಲ್ / ಎಸ್‌ಇಝಡ್‌ನಿಂದ ಮೇಲುರುಜು ಮಾಡಿದ ಬೆಲೆಪಟ್ಟಿಗಳು	ತೆರಿಗೆದಾಯಕ ಮೌಲ್ಯ	ಏಕೀಕೃತ ತೆರಿಗೆ	ಉಪಕರ

655

	ದಸ್ತಾವೇಜಿನ ವಿಧ	ಸಂಖ್ಯೆ	ದಿನಾಂಕ	ಮೌಲ್ಯ	ಸಂ	ದಿನಾಂಕ			
1	2	3	4	5	6	7	8	9	10
									”;

(6) ವಿವರಪತ್ರ 5ಕ್ಕಾಗಿ, ಈ ಕೆಳಕಂಡ ವಿವರಪತ್ರವನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

“ವಿವರಪತ್ರ 5 [ನಿಯಮ 89(2)(ಡಿ) ಮತ್ತು ನಿಯಮ 89(2)(ಇ)]

ಮರುಪಾವತಿ ವಿಧ: ಎಸ್ಇಝೆಡ್ ಘಟಕ ಅಥವಾ ಎಸ್ಇಝೆಡ್ ಅಭಿವೃದ್ಧಿದಾರನಿಗೆ ಮಾಡಿದ ಪೂರೈಕೆಗಳ ಕಾರಣದಿಂದ (ತೆರಿಗೆ ಪಾವತಿ ಇಲ್ಲದಂತೆ)

ಕ್ರ. ಸಂ.	ದಸ್ತಾವೇಜಿನ ವಿವರಗಳು				ಸರಕುಗಳು / ಸೇವೆಗಳು (ಜಿ / ಎಸ್)	ಷಿಪ್ಪಿಂಗ್ ಬಿಲ್ / ರಫ್ತಿನ ಬಿಲ್ / ಮೇಲುರುಜು ಮಾಡಿದ ಬೆಲೆಪಟ್ಟಿಗಳು	
	ದಸ್ತಾವೇಜಿನ ವಿಧ	ಸಂಖ್ಯೆ	ದಿನಾಂಕ	ಮೌಲ್ಯ		ಸಂ.	ದಿನಾಂಕ
1	2	3	4	5	6	7	8
							”;

(7) ವಿವರಪತ್ರ 5ಬಿ ಗಾಗಿ, ಈ ಕೆಳಕಂಡ ವಿವರಪತ್ರವನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

“ವಿವರಪತ್ರ 5ಬಿ [ನಿಯಮ 89(2)(ಜಿ)]

ಮರುಪಾವತಿ ವಿಧ: ಪೂರೈಕೆದಾರನು ಕ್ಲೇಮು ಮಾಡಿದ ಭಾವಿತ ರಫ್ತುಗಳ ಕಾರಣದಿಂದ

ಕ್ರ. ಸಂ.	ಪೂರೈಕೆದಾರನು ಮರುಪಾವತಿಯ ಕ್ಲೇಮು ಮಾಡಿದ್ದಲ್ಲಿ, ಒಳಮುಖ ಪೂರೈಕೆಗಳ ದಸ್ತಾವೇಜಿನ ವಿವರಗಳು				ಪಾವತಿಸಿದ ತೆರಿಗೆ			
	ದಸ್ತಾವೇಜಿನ ವಿಧ	ಸಂ.	ದಿನಾಂಕ	ತೆರಿಗೆದಾಯಕ ಮೌಲ್ಯ	ಏಕೀಕೃತ ತೆರಿಗೆ	ಕೇಂದ್ರ ತೆರಿಗೆ	ರಾಜ್ಯ / ಕೇಂದ್ರಾಡಳಿತ ಪ್ರದೇಶ ತೆರಿಗೆ	ಉಪಕರ
1	2	3	4	5	6	7	8	9
								”;

“ವಿವರಪತ್ರ 5ಬಿ [ನಿಯಮ 89(2)(ಜಿ)]

ಮರುಪಾವತಿ ವಿಧ: ಸ್ವೀಕೃತಿದಾರನು ಕ್ಲೇಮು ಮಾಡಿದ ಭಾವಿತ ರಫ್ತುಗಳ ಕಾರಣದಿಂದ

ಕ್ರ. ಸಂ.	ಪೂರೈಕೆದಾರನ ಜಿಎಸ್ಟಿಐಎನ್	ಸ್ವೀಕೃತಿದಾರನು ಮರುಪಾವತಿಯ ಕ್ಲೇಮು ಮಾಡಿದ್ದಲ್ಲಿ, ಒಳಮುಖ ಪೂರೈಕೆಗಳ ದಸ್ತಾವೇಜಿನ ವಿವರಗಳು				ಪಾವತಿಸಿದ ತೆರಿಗೆ			
		ದಸ್ತಾವೇಜಿನ ವಿಧ	ಸಂ.	ದಿನಾಂಕ	ತೆರಿಗೆದಾಯಕ ಮೌಲ್ಯ	ಏಕೀಕೃತ ತೆರಿಗೆ	ಕೇಂದ್ರ ತೆರಿಗೆ	ರಾಜ್ಯ / ಕೇಂದ್ರಾಡಳಿತ ಪ್ರದೇಶ ತೆರಿಗೆ	ಉಪಕರ
1	2	3	4	5	6	7	8	9	10
									”;

(8) ವಿವರಪತ್ರ 6ಕ್ಕಾಗಿ, ಈ ಕೆಳಕಂಡ ವಿವರಪತ್ರವನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

“ವಿವರಪತ್ರ 6 [ನಿಯಮ 89(2)(ಜೆ)]

656

ಮರುಪಾವತಿ ವಿಧ: ಪಿಓಎಸ್‌ನ ಬದಲಾವಣೆಯ ಕಾರಣದಿಂದ (ಅಂತರ್–ರಾಜ್ಯದಿಂದ ರಾಜ್ಯದೊಳಗಿನ ಮತ್ತು ಅದಲುಬದಲು)

ದಸ್ತಾವೇಜಿನ ವಿಧ ಬಿ2ಸಿ / ನೋಂದಾಯಿತ	ಸ್ವೀಕೃತಿದಾರನ ಜಿಎಸ್‌ಟಿಐಎನ್ / ಯೂಐಎನ್	ಹೆಸರು (ಬಿ2ಸಿ ಯಾಗಿದ್ದಲ್ಲಿ)	ದಸ್ತಾವೇಜಿನ ವಿವರಗಳು				
			ದಸ್ತಾವೇಜಿನ ವಿಧ	ಸಂ.	ದಿನಾಂಕ	ಮೌಲ್ಯ	ತೆರಿಗೆದಾಯಕ ಮೌಲ್ಯ
1	2	3	4	5	6	7	8

ಹಿಂದೆ ರಾಜ್ಯದೊಳಗಿನ / ಅಂತರ್–ರಾಜ್ಯ ವಹಿವಾಟೆಂದು ಪರಿಗಣಿಸಲಾದ ವ್ಯವಹಾರವನ್ನು ಒಳಗೊಂಡ ದಸ್ತಾವೇಜುಗಳ ವಿವರಗಳು					
ಅಂತರ್ / ಒಳಗಿನ	ಏಕೀಕೃತ ತೆರಿಗೆ	ಕೇಂದ್ರ ತೆರಿಗೆ	ರಾಜ್ಯ / ಕೇಂ.ಪ್ರ.ತೆರಿಗೆ	ಉಪಕರ	ಪಿಓಎಸ್
9	10	11	12	13	14
					";

3. ನಮೂನೆ ಜಿಎಸ್‌ಟಿಆರ್–9ರ ತಿದ್ದುಪಡಿ.– ಸದರಿ ನಿಯಮಗಳಲ್ಲಿ, ನಮೂನೆ ಜಿಎಸ್‌ಟಿಆರ್–9ರಲ್ಲಿ,

(1) ಕೋಷ್ಟಕದಲ್ಲಿ, –

(ಎ) ಕ್ರಮ ಸಂಖ್ಯೆ 8ಸಿಯಲ್ಲಿ, ಅಂಕಣ 2ರಲ್ಲಿ, –

(i) **"**2017–18ರಲ್ಲಿ ಸ್ವೀಕರಿಸಿದ**"** ಪದಗಳು ಮತ್ತು ಸಂಖ್ಯೆಗಳ ಮೊದಲು, **"**2017–18ರ ಹಣಕಾಸು ವರ್ಷಕ್ಕಾಗಿ,**"** ಪದಗಳು, ಸಂಖ್ಯೆಗಳನ್ನು ಸೇರಿಸತಕ್ಕದ್ದು;

(ii) **"**ಆದರೆ ವಿಶೇಷ ಆರ್ಥಿಕ ವಲಯಗಳಿಂದ ಸ್ವೀಕರಿಸಿದ ಸೇವೆಗಳನ್ನು ಒಳಗೊಂಡು)**"** ಪದಗಳ ನಂತರ ಈ ಕೆಳಗಿನ ನಮೂದಗಳನ್ನು ಸೇರಿಸತಕ್ಕದ್ದು, ಅಂದರೆ:–

"2018–19ರ ಹಣಕಾಸು ವರ್ಷಕ್ಕಾಗಿ, 2018–19ರಲ್ಲಿ ಸ್ವೀಕರಿಸಿದ, ಆದರೆ ಏಪ್ರಿಲ್ 2019ರಿಂದ ಸೆಪ್ಟೆಂಬರ್ 2019ರ ಅವಧಿಯಲ್ಲಿ ಉಪಯೋಗಿಸಿಕೊಂಡ ಒಳಮುಖ ಪೂರೈಕೆಗಳ (ಆಮದುಗಳು ಹಿಮ್ಮುಖ ವಿಧಿಸುವಿಕೆ ಭಾದ್ಯತೆ ಇರುವ ಒಳಮುಖ ಪೂರೈಕೆಗಳನ್ನು ಹೊರತುಪಡಿಸಿ, ಆದರೆ ವಿಶೇಷ ಆರ್ಥಿಕ ವಲಯಗಳಿಂದ ಸ್ವೀಕರಿಸಿದ ಸೇವೆಗಳನ್ನು ಒಳಗೊಂಡು) ಮೇಲೆ ಐಟಿಸಿ**";**

(ಬಿ) ಭಾಗ Vರಲ್ಲಿ,

(i) **"**ಏಪ್ರಿಲ್ 2018ರಿಂದ ಮಾರ್ಚ್ 2019ತನಕದ**"** ಪದಗಳ ಮೊದಲು, **"**2017–18ರ ಹಣಕಾಸು ವರ್ಷಕ್ಕಾಗಿ,**"** ಪದಗಳು, ಸಂಖ್ಯೆಗಳನ್ನು ಸೇರಿಸತಕ್ಕದ್ದು;

(ii) **"**2017–18ಕ್ಕಾಗಿಯ ವ್ಯವಹಾರಗಳ ವಿವರಗಳು**"** ಪದಗಳು ಮತ್ತು ಸಂಖ್ಯೆಗಳಿಂದ ಕೊನೆಯಾಗುವ ಶೀರ್ಷಿಕೆಯ ನಂತರ ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–

"2018–19ರ ಹಣಕಾಸು ವರ್ಷಕ್ಕಾಗಿ, ಏಪ್ರಿಲ್ 2019ರಿಂದ ಸೆಪ್ಟಂಬರ್ 2019ರ ನಡುವಿನ ರಿಟರ್ನ್‌ಗಳಲ್ಲಿ ಘೋಷಿಸಿದ 2018–19 ಹಣಕಾಸು ವರ್ಷಕ್ಕಾಗಿನ ವ್ಯವಹಾರಗಳ ವಿವರಗಳು**";**

(2) ಸೂಚನೆಗಳಲ್ಲಿ,

(ಎ) ಖಂಡಿಕೆ 2ಕ್ಕಾಗಿ, ಈ ಕೆಳಕಂಡ ಖಂಡಿಕೆಯನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

657

"2. ಈ ರಿಟರ್ನ್‌ನ್ನು ಸಲ್ಲಿಸುವ ಮೊದಲು, ರಿಟರ್ನ್‌ನ್ನು ಸಲ್ಲಿಸಲಾಗುತ್ತಿರುವ ಅವಧಿಗಾಗಿನ ಹಣಕಾಸು ವರ್ಷಕ್ಕಾಗಿ ಎಲ್ಲಾ ನಮೂನೆ ಜಿಎಸ್‌ಟಿಆರ್–1 ಮತ್ತು ನಮೂನೆ ಜಿಎಸ್‌ಟಿಆರ್–3ಬಿಗಳನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ ಮತ್ತು 2017–18ರ ಹಣಕಾಸು ವರ್ಷಕ್ಕಾಗಿ, ಜುಲೈ 2017ರಿಂದ ಮಾರ್ಚ್ 2018ರ ನಡುವಿನ ಅವಧಿಯ ವಿವರಗಳನ್ನು ಈ ರಿಟರ್ನ್‌ನಲ್ಲಿ ಒದಗಿಸಬೇಕಾಗಿದೆ."

(ಬಿ) ಖಂಡಿಕೆ 4ರಲ್ಲಿ, –

(i) "ಜುಲೈ 2017 ಮತ್ತು ಮಾರ್ಚ್ 2018ರ ನಡುವಿನ" ಪದಗಳು ಮತ್ತು ಸಂಖ್ಯೆಗಳ ಮೊದಲು, "2017–18ರ ಹಣಕಾಸು ವರ್ಷಕ್ಕಾಗಿ" ಸಂಖ್ಯೆಗಳು ಮತ್ತು ಪದಗಳನ್ನು ಸೇರಿಸತಕ್ಕದ್ದು;

(ii) "ಆ.ವ. 2017–18ಕ್ಕಾಗಿ" ಅಕ್ಷರಗಳು ಮತ್ತು ಸಂಖ್ಯೆಗಳ ನಂತರ, "ಅಥವಾ ಆ.ವ. 2018–19ಕ್ಕಾಗಿ" ಅಕ್ಷರಗಳು ಮತ್ತು ಸಂಖ್ಯೆಗಳನ್ನು ಸೇರಿಸತಕ್ಕದ್ದು;

(iii) "ಕರದಾತರು ತನ್ನ ರಿಟರ್ನ್‌ಗಳಲ್ಲಿ ಆ.ವ.2017–18ರಲ್ಲಿ ಕ್ಲೇಮು ಮಾಡದ" ಪದಗಳು, ಅಕ್ಷರಗಳು ಮತ್ತು ಸಂಖ್ಯೆಗಳಿಗಾಗಿ, "ಕರದಾತರು ಈ ರಿಟರ್ನ್‌ನ ಮೂಲಕ" ಪದಗಳನ್ನು ಪ್ರತಿಯೋಜಿಸಲಾಗಿದೆ;

(iv) ಕೋಷ್ಟಕದಲ್ಲಿ, ಎರಡನೆಯ ಅಂಕಣದಲ್ಲಿ, –

(I) ಕ್ರಮ ಸಂಖ್ಯೆ 4ಐನಲ್ಲಿ, "ಕೋಷ್ಟಕ 9ಬಿ ಅನ್ನು ಬಳಸಿಕೊಳ್ಳಬಹುದಾಗಿರುತ್ತದೆ." ನಮೂದುಗಳ ನಂತರ, ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–

"2017–18 ಮತ್ತು 2018–19ರ ಆ.ವ.ಕ್ಕಾಗಿ, ಈ ಕೋಷ್ಟಕದಲ್ಲಿ ಅಂಥ ವಿವರಗಳನ್ನು ಪ್ರತ್ಯೇಕವಾಗಿ ಒಪ್ಪಿಸಲು ಯಾವುದೇ ಕಷ್ಟವಾದಲ್ಲಿ, ಕೋಷ್ಟಕ 4ಬಿಯಿಂದ ಕೋಷ್ಟಕ 4ಇಯನ್ನು ಕ್ರೆಡಿಟ್ ನೋಟ್‌ಗಳ ನಿವ್ವಳದೊಂದಿಗೆ ಭರ್ತಿಮಾಡಲು ನೋಂದಾಯಿತ ವ್ಯಕ್ತಿಗೆ ಆಯ್ಕೆಯಿರತಕ್ಕದ್ದು."

(II) ಕ್ರಮ ಸಂಖ್ಯೆ 4ಜೆಯಲ್ಲಿ, "ಕೋಷ್ಟಕ 9ಬಿ ಅನ್ನು ಬಳಸಿಕೊಳ್ಳಬಹುದಾಗಿರುತ್ತದೆ." ನಮೂದುಗಳ ನಂತರ, ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–

"2017–18 ಮತ್ತು 2018–19ರ ಆ.ವ.ಕ್ಕಾಗಿ, ಈ ಕೋಷ್ಟಕದಲ್ಲಿ ಅಂಥ ವಿವರಗಳನ್ನು ಪ್ರತ್ಯೇಕವಾಗಿ ಒಪ್ಪಿಸಲು ಯಾವುದೇ ಕಷ್ಟವಾದಲ್ಲಿ, ಕೋಷ್ಟಕ 4ಬಿಯಿಂದ ಕೋಷ್ಟಕ 4ಇಯನ್ನು ಡೆಬಿಟ್ ನೋಟ್‌ಗಳ ನಿವ್ವಳದೊಂದಿಗೆ ಭರ್ತಿಮಾಡಲು ನೋಂದಾಯಿತ ವ್ಯಕ್ತಿಗೆ ಆಯ್ಕೆಯಿರತಕ್ಕದ್ದು."

(III) ಕ್ರಮ ಸಂಖ್ಯೆ 4ಕೆ ಮತ್ತು 4ಎಲ್‌ನಲ್ಲಿ, "ಕೋಷ್ಟಕ 9ಸಿ ಗಳನ್ನು ಬಳಸಿಕೊಳ್ಳಬಹುದಾಗಿರುತ್ತದೆ." ನಮೂದುಗಳ ನಂತರ, ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–

"2017–18 ಮತ್ತು 2018–19ರ ಆ.ವ.ಕ್ಕಾಗಿ, ಈ ಕೋಷ್ಟಕದಲ್ಲಿ ಅಂಥ ವಿವರಗಳನ್ನು ಪ್ರತ್ಯೇಕವಾಗಿ ಒಪ್ಪಿಸಲು ಯಾವುದೇ ಕಷ್ಟವಾದಲ್ಲಿ, ಕೋಷ್ಟಕ 4ಬಿಯಿಂದ ಕೋಷ್ಟಕ 4ಇಯನ್ನು ತಿದ್ದುಪಡಿಗಳ ನಿವ್ವಳದೊಂದಿಗೆ ಭರ್ತಿಮಾಡಲು ನೋಂದಾಯಿತ ವ್ಯಕ್ತಿಗೆ ಆಯ್ಕೆಯಿರತಕ್ಕದ್ದು."

(IV) ಕ್ರಮ ಸಂಖ್ಯೆ 5ಡಿ, 5ಇ ಮತ್ತು 5ಎಫ್‌ನಲ್ಲಿ, "ಪೂರೈಕೆ ಅಲ್ಲಿ ಮೌಲ್ಯವನ್ನು ಜಿಎಸ್‌ಟಿ ಅಲ್ಲದ ಪೂರೈಕೆಯಡಿಯಲ್ಲಿ ಘೋಷಿಸತಕ್ಕದ್ದು." ನಮೂದುಗಳ ನಂತರ, ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–

"2017–18 ಮತ್ತು 2018–19ರ ಆ.ವ.ಕ್ಕಾಗಿ, ನೋಂದಾಯಿತ ವ್ಯಕ್ತಿಗೆ, ವಿನಾಯಿತ, ಶೂನ್ಯದರದ ಮತ್ತು ಜಿಎಸ್‌ಟಿಯಲ್ಲದ ಪೂರೈಕೆಗಳಾಗಿ ಪ್ರತ್ಯೇಕವಾಗಿಯಾಗಲೀ ಅಥವಾ ಈ ಮೂರು ಶೀರ್ಷಿಕೆಗಳಿಗಾಗಿ ಒಟ್ಟಾದ ಮಾಹಿತಿಯನ್ನು "ವಿನಾಯಿತ" ಸಾಲಿನಲ್ಲಿ ಮಾತ್ರವಾಗಲೀ ವರದಿ ಮಾಡಲು ಆಯ್ಕೆಯಿರತಕ್ಕದ್ದು.";

658

(V) ಕ್ರಮ ಸಂಖ್ಯೆ 5ಹೆಚ್‌ನಲ್ಲಿ, "ಕೋಷ್ಟಕ 9ಬಿಯನ್ನು ಬಳಸಿಕೊಳ್ಳಬಹುದಾಗಿರುತ್ತದೆ." ಪದಗಳಿಂದ ಕೊನೆಯಾಗುವ ನಮೂದುಗಳ ನಂತರ, ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–

"2017–18 ಮತ್ತು 2018–19ರ ಆ.ವ.ಕ್ಕಾಗಿ, ಈ ಕೋಷ್ಟಕದಲ್ಲಿ ಅಂಥ ವಿವರಗಳನ್ನು ಪ್ರತ್ಯೇಕವಾಗಿ ಒಪ್ಪಿಸಲು ಯಾವುದೇ ಕಷ್ಟವಾದಲ್ಲಿ, ಕೋಷ್ಟಕ 5ಎಯಿಂದ ಕೋಷ್ಟಕ 5ಎಫ್‌ಯನ್ನು ಕ್ರೆಡಿಟ್ ನೋಟ್‌ಗಳ ನಿವ್ವಳದೊಂದಿಗೆ ಭರ್ತಿಮಾಡಲು ನೋಂದಾಯಿತ ವ್ಯಕ್ತಿಗೆ ಆಯ್ಕೆಯಿರತಕ್ಕದ್ದು."

(VI) ಕ್ರಮ ಸಂಖ್ಯೆ 5ಐನಲ್ಲಿ, "ಕೋಷ್ಟಕ 9ಬಿಯನ್ನು ಬಳಸಿಕೊಳ್ಳಬಹುದಾಗಿರುತ್ತದೆ." ಪದಗಳಿಂದ ಕೊನೆಯಾಗುವ ನಮೂದುಗಳ ನಂತರ, ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–

"2017–18 ಮತ್ತು 2018–19ರ ಆ.ವ.ಕ್ಕಾಗಿ, ಈ ಕೋಷ್ಟಕದಲ್ಲಿ ಅಂಥ ವಿವರಗಳನ್ನು ಪ್ರತ್ಯೇಕವಾಗಿ ಒಪ್ಪಿಸಲು ಯಾವುದೇ ಕಷ್ಟವಾದಲ್ಲಿ, ಕೋಷ್ಟಕ 5ಎಯಿಂದ ಕೋಷ್ಟಕ 5ಎಫ್‌ಯನ್ನು ಡೆಬಿಟ್ ನೋಟ್‌ಗಳ ನಿವ್ವಳದೊಂದಿಗೆ ಭರ್ತಿಮಾಡಲು ನೋಂದಾಯಿತ ವ್ಯಕ್ತಿಗೆ ಆಯ್ಕೆಯಿರತಕ್ಕದ್ದು."

(VII) ಕ್ರಮ ಸಂಖ್ಯೆ 5ಜೆ ಮತ್ತು 5ಕೆನಲ್ಲಿ, "ಕೋಷ್ಟಕ 9ಸಿಯನ್ನು ಬಳಸಿಕೊಳ್ಳಬಹುದಾಗಿರುತ್ತದೆ." ಪದಗಳಿಂದ ಕೊನೆಯಾಗುವ ನಮೂದುಗಳ ನಂತರ, ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–

"2017–18 ಮತ್ತು 2018–19ರ ಆ.ವ.ಕ್ಕಾಗಿ, ಈ ಕೋಷ್ಟಕದಲ್ಲಿ ಅಂಥ ವಿವರಗಳನ್ನು ಪ್ರತ್ಯೇಕವಾಗಿ ಒಪ್ಪಿಸಲು ಯಾವುದೇ ಕಷ್ಟವಾದಲ್ಲಿ, ಕೋಷ್ಟಕ 5ಎಯಿಂದ ಕೋಷ್ಟಕ 5ಎಫ್‌ಯನ್ನು ತಿದ್ದುಪಡಿಗಳ ನಿವ್ವಳದೊಂದಿಗೆ ಭರ್ತಿಮಾಡಲು ನೋಂದಾಯಿತ ವ್ಯಕ್ತಿಗೆ ಆಯ್ಕೆಯಿರತಕ್ಕದ್ದು."

(ಸಿ) ಖಂಡಿಕೆ 5ರಲ್ಲಿ, ಕೋಷ್ಟಕದಲ್ಲಿ, ಎರಡನೆಯ ಅಂಕಣದಲ್ಲಿ, –

(i) ಕ್ರಮ ಸಂಖ್ಯೆ 6ಬಿಯಲ್ಲಿ, "ಇದನ್ನು ಕೆಳಗಿನ 6(ಹೆಚ್)ನಲ್ಲಿ ಪ್ರತ್ಯೇಕವಾಗಿ ಘೋಷಿಸಬೇಕು" ಪದಗಳು, ಸಂಖ್ಯೆ, ಆವರಣಗಳು ಮತ್ತು ಅಕ್ಷರಗಳಿಂದ ಕೊನೆಯಾಗುವ ನಮೂದುಗಳ ನಂತರ, ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–

"2017–18 ಮತ್ತು 2018–19ರ ಆ.ವ.ಕ್ಕಾಗಿ, ಹೂಡುವಳಿ ತೆರಿಗೆ ಜಮೆಯ ಭಾಗಗಳನ್ನು ಹೂಡುವಳಿಗಳು, ಬಂಡವಾಳ ಸರಕುಗಳು ಮತ್ತು ಹೂಡುವಳಿ ಸೇವೆಗಳಾಗಿಯಾಗಲೀ ವರದಿ ಮಾಡುವ ಅಥವಾ ಎಲ್ಲಾ ಹೂಡುವಳಿ ತೆರಿಗೆ ಜಮೆಯನ್ನು "ಹೂಡುವಳಿಗಳು" ಸಾಲಿನಲ್ಲಿ ಮಾತ್ರ ವರದಿ ಮಾಡುವ ಆಯ್ಕೆಯು ನೋಂದಾಯಿತ ವ್ಯಕ್ತಿಗೆ ಇರತಕ್ಕದ್ದು.";

(ii) ಕ್ರಮ ಸಂಖ್ಯೆ 6ಸಿ ಮತ್ತು ಕ್ರಮ ಸಂಖ್ಯೆ 6ಡಿಯಲ್ಲಿ, "ಕೋಷ್ಟಕ 4(ಎ)(3) ಅನ್ನು ಬಳಸಿಕೊಳ್ಳಬಹುದಾಗಿರುತ್ತದೆ." ಪದಗಳಿಂದ ಕೊನೆಯಾಗುವ ನಮೂದುಗಳ ನಂತರ, ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–

"2017–18 ಮತ್ತು 2018–19ರ ಆ.ವ.ಕ್ಕಾಗಿ, ಹೂಡುವಳಿ ತೆರಿಗೆ ಜಮೆಯ ಭಾಗಗಳನ್ನು ಹೂಡುವಳಿಗಳು, ಬಂಡವಾಳ ಸರಕುಗಳು ಮತ್ತು ಹೂಡುವಳಿ ಸೇವೆಗಳಾಗಿಯಾಗಲೀ ವರದಿ ಮಾಡುವ ಅಥವಾ ಎಲ್ಲಾ ಹೂಡುವಳಿ ತೆರಿಗೆ ಜಮೆಯನ್ನು "ಹೂಡುವಳಿಗಳು" ಸಾಲಿನಲ್ಲಿ ಮಾತ್ರ ವರದಿ ಮಾಡುವ ಆಯ್ಕೆಯು ನೋಂದಾಯಿತ ವ್ಯಕ್ತಿಗೆ ಇರತಕ್ಕದ್ದು.

2017–18 ಮತ್ತು 2018–19ರ ಆ.ವ.ಕ್ಕಾಗಿ, ಕೋಷ್ಟಕ 6ಸಿ ಮತ್ತು ಕೋಷ್ಟಕ 6ಡಿಯನ್ನು

659

ಪ್ರತ್ಯೇಕವಾಗಿಯಾಗಿ ವರದಿ ಮಾಡುವ ಅಥವಾ ಕೋಷ್ಟಕ 6ಸಿ ಮತ್ತು 6ಡಿಯ ಸಂಗ್ರಹಿತವಾದ ವಿವರಗಳನ್ನು ಕೋಷ್ಟಕ 6ಡಿಯಲ್ಲಿ ಮಾತ್ರ ವರದಿ ಮಾಡುವ ಆಯ್ಕೆ ಇರತಕ್ಕದ್ದು.";

(iii) ಕ್ರಮ ಸಂಖ್ಯೆ 6ಇ ನಲ್ಲಿ, "ಕೋಷ್ಟಕ 4(ಎ)(1) ಅನ್ನು ಬಳಸಿಕೊಳ್ಳಬಹುದಾಗಿರುತ್ತದೆ." ಪದಗಳಿಂದ ಕೊನೆಯಾಗುವ ನಮೂದುಗಳ ನಂತರ, ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–

"2017–18 ಮತ್ತು 2018–19ರ ಆ.ವ.ಕ್ಕಾಗಿ, ಹೂಡುವಳಿ ತೆರಿಗೆ ಜಮೆಯ ಭಾಗಗಳನ್ನು ಹೂಡುವಳಿಗಳು ಮತ್ತು ಬಂಡವಾಳ ಸರಕುಗಳಾಗಿ ವರದಿ ಮಾಡುವ ಅಥವಾ ಎಲ್ಲಾ ಹೂಡುವಳಿ ತೆರಿಗೆ ಜಮೆಯನ್ನು "ಹೂಡುವಳಿಗಳು" ಸಾಲಿನಲ್ಲಿ ಮಾತ್ರ ವರದಿ ಮಾಡುವ ಆಯ್ಕೆಯು ನೋಂದಾಯಿತ ವ್ಯಕ್ತಿಗೆ ಇರತಕ್ಕದ್ದು.";

(iv) ಕ್ರಮ ಸಂಖ್ಯೆ 7ಎ, 7ಬಿ, 7ಸಿ, 7ಡಿ, 7ಇ, 7ಎಫ್, 7ಜಿ ಮತ್ತು 7ಹೆಚ್ ನಲ್ಲಿ, "ನಮೂನೆ ಜಿಎಸ್‌ಟಿಆರ್–9ರ ಕೋಷ್ಟಕ 7ಇ ನಲ್ಲಿ ದಾಖಲಾಗಿರುತ್ತದೆ." ಪದಗಳು, ಸಂಖ್ಯೆಗಳು ಮತ್ತು ಅಕ್ಷರಗಳಿಂದ ಕೊನೆಯಾಗುವ ನಮೂದುಗಳ ನಂತರ, ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–

"2017–18 ಮತ್ತು 2018–19ರ ಆ.ವ.ಕ್ಕಾಗಿ, ಹಿಂದಿರುಗಿಸುವಿಕೆಯ ತನ್ನ ಮಾಹಿತಿಯನ್ನು ಪ್ರತ್ಯೇಕವಾಗಿ ಕೋಷ್ಟಕ 7ಎ ಯಿಂದ 7ಇವರೆಗೆ ಭರ್ತಿಮಾಡುವ ಅಥವಾ ಹಿಂದಿರುಗಿಸುವಿಕೆಯ ಎಲ್ಲಾ ಮೊತ್ತವನ್ನು ಕೋಷ್ಟಕ 7ಹೆಚ್‌ನಲ್ಲಿ ಮಾತ್ರ ವರದಿ ಮಾಡುವ ಆಯ್ಕೆ ನೋಂದಾಯಿತ ವ್ಯಕ್ತಿಗೆ ಇರತಕ್ಕದ್ದು. ಆದರೆ, ಟಿಆರ್‌ಎಎನ್–1 ಜಮೆ (ಕೋಷ್ಟಕ 7ಎಫ್) ಮತ್ತು ಟಿಆರ್‌ಎಎನ್–2 (ಕೋಷ್ಟಕ 7ಜಿ) ಕಾರಣದಿಂದಾದ ಹಿಂದಿರುಗಿಸುವಿಕೆಗಳನ್ನು ಕಡ್ಡಾಯವಾಗಿ ವರದಿಮಾಡತಕ್ಕದ್ದು.";

(v) ಕ್ರಮ ಸಂಖ್ಯೆ 8ಎ ನಲ್ಲಿ, –

(I) "ಹಣಕಾಸು ವರ್ಷ 2017–18ರಲ್ಲಿ" ಪದಗಳು ಮತ್ತು ಸಂಖ್ಯೆಗಳಿಗಾಗಿ, "ರಿಟರ್ನ್‌ನ್ನು ಒದಗಿಸಲಾಗುತ್ತಿರುವ ಹಣಕಾಸು ವರ್ಷಕ್ಕಾಗಿ" ಪದಗಳನ್ನು ಪ್ರತಿಯೋಜಿಸತಕ್ಕದ್ದು;

(II) "2019ರ ಮೇ 1ರಂದು ಸೃಷ್ಟಿಸಲಾದಂತಹ ನಮೂನೆ ಜಿಎಸ್‌ಟಿಆರ್–2ಎ " ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳ ಮೊದಲು, "2017–18ರ ಆ.ವ.ಕ್ಕಾಗಿ," ಸಂಖ್ಯೆಗಳು ಮತ್ತು ಅಕ್ಷರಗಳನ್ನು ಸೇರಿಸತಕ್ಕದ್ದು;

(III) ''ಒಟ್ಟು ಜಮೆ ಈ ಕೋಷ್ಟಕದಲ್ಲಿ ಸ್ವಯಂ ಪ್ರದರ್ಶಿತಗೊಳ್ಳುತ್ತದೆ." ಪದಗಳಿಂದ ಕೊನೆಗೊಳ್ಳುವ ನಮೂದುಗಳ ನಂತರ, ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–

"ನೋಂದಾಯಿತ ವ್ಯಕ್ತಿಗೆ, 2018–19ರ ಆ.ವ.ಕ್ಕಾಗಿ, 2019ರ ನವೆಂಬರ್ 1ರಂತೆ ಸೃಷ್ಟಿಸಲಾದ ನಮೂನೆ ಜಿಎಸ್‌ಟಿಆರ್–2ಎಯು ಈ ಕೋಷ್ಟಕದಲ್ಲಿ ಸ್ವಯಂಪ್ರದರ್ಶಿತಗೊಳ್ಳತಕ್ಕದ್ದೆಂದು ಗಮನಿಸಬಹುದಾಗಿದೆ. 2017–18 ಮತ್ತು 2018–19ರ ಆ.ವ.ಕ್ಕಾಗಿ, ಕೋಷ್ಟಕ 8ಎ ಯಿಂದ 8ಡಿವರೆಗಿನ ವಿವರಗಳನ್ನು ನ್ಯಾಯಬದ್ಧವಾಗಿ ಸಹಿ ಮಾಡಿ, ಪಿಡಿಎಫ್ ಫಾರ್ಮಾಟ್‌ನಲ್ಲಿ, ನಮೂನೆ ಜಿಎಸ್‌ಟಿಆರ್–9ಸಿಯಲ್ಲಿ (ಸಿಎ ಪ್ರಮಾಣಪತ್ರವಿಲ್ಲದೆ) ಅಪ್‌ಲೋಡ್ ಮಾಡುವ ಆಯ್ಕೆಯಿರತಕ್ಕದ್ದು.";

660

(vi) ಕ್ರಮ ಸಂಖ್ಯೆ 8ಬಿಯಲ್ಲಿ, "ಇಲ್ಲಿ ಸ್ವಯಂ ಪ್ರದರ್ಶಿತಗೊಳ್ಳುತ್ತದೆ." ಪದಗಳಿಂದ ಕೊನೆಗೊಳ್ಳುವ ನಮೂದುಗಳ ನಂತರ, ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–

"ನೋಂದಾಯಿತ ವ್ಯಕ್ತಿಗೆ, 2017–18 ಮತ್ತು 2018–19ರ ಆ.ವ.ಕ್ಕಾಗಿ, ಕೋಷ್ಟಕ 8ಎ ಯಿಂದ 8ಡಿವರೆಗಿನ ನಮೂದುಗಳಿಗಾಗಿ ವಿವರಗಳನ್ನು ನ್ಯಾಯಬದ್ದವಾಗಿ ಸಹಿ ಮಾಡಿ, ಪಿಡಿಎಫ್ ಫಾರ್ಮಾಟ್‌ನಲ್ಲಿ, ನಮೂನೆ ಜಿಎಸ್‌ಟಿಆರ್–9ಸಿಯಲ್ಲಿ (ಸಿಎ ಪ್ರಮಾಣಪತ್ರವಿಲ್ಲದೆ) ಅಪ್‌ಲೋಡ್ ಮಾಡುವ ಆಯ್ಕೆಯಿರತಕ್ಕದ್ದು.";

(vii) ಕ್ರಮ ಸಂಖ್ಯೆ 8ಸಿಯಲ್ಲಿ,–

(I) "ಜುಲೈ 2017 ರಿಂದ ಮಾರ್ಚ್ 2018ರ ಅವಧಿಯಲ್ಲಿ" ಪದಗಳ ಮೊದಲು, "2017–18ರ ಆ.ವ. ಕ್ಕಾಗಿ," ಸಂಖ್ಯೆಗಳು ಮತ್ತು ಅಕ್ಷರಗಳನ್ನು ಸೇರಿಸತಕ್ಕದ್ದು;

(II) "ಇಲ್ಲಿ ಘೋಷಿಸಸತಕ್ಕದ್ದು." ಪದಗಳಿಂದ ಕೊನೆಗೊಳ್ಳುವ ನಮೂದುಗಳ ನಂತರ, ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–

"2018–19ರ ಆ.ವ.ಕ್ಕಾಗಿ, ಏಪ್ರಿಲ್ 2018ರಿಂದ ಮಾರ್ಚ್ 2019ರತನಕ ಸ್ವೀಕರಿಸಿದ, ಆದರೆ ಅವುಗಳ ಮೇಲೆ ಜಮೆಯನ್ನು ಏಪ್ರಿಲ್ 2019ರಿಂದ ಸೆಪ್ಟಂಬರ್ 2019ರ ನಡುವೆ ಪಡೆದ, ಎಲ್ಲಾ ಒಳಮುಖ ಪೂರೈಕೆಗಳ (ಹಿಮ್ಮುಖ ವಿಧಿಸುವಿಕೆ ಆಧಾರದ ಮೇಲೆ ತೆರಿಗೆಯನ್ನು ಪಾವತಿಸಬೇಕಾದವುಗಳನ್ನು ಹೊರತುಪಡಿಸಿದಂತೆ ಆದರೆ ಎಸ್‌ಇಝಡ್‌ಗಳೀಮದ ಸ್ವೀಕರಿಸಿದ ಸೇವೆಗಳ ಪೂರೈಕೆಯನ್ನು ಒಳಗೊಂಡಂತೆ) ಮೇಲೆ ಉಪಯೋಗಿಸಿದ ಹೂಡುವಳಿ ತೆರಿಗೆ ಜಮೆಯ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು.";

(III) ''ಕೋಷ್ಟಕ 4(ಎ)(5) ಅನ್ನು ಬಳಸಿಕೊಳ್ಳಬಹುದಾಗಿರುತ್ತದೆ." ಪದಗಳಿಂದ ಕೊನೆಗೊಳ್ಳುವ ನಮೂದುಗಳ ನಂತರ, ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–

"ನೋಂದಾಯಿತ ವ್ಯಕ್ತಿಗೆ, 2017–18 ಮತ್ತು 2018–19ರ ಆ.ವ.ಕ್ಕಾಗಿ, ಕೋಷ್ಟಕ 8ಎ ಯಿಂದ 8ಡಿವರೆಗಿನ ನಮೂದುಗಳಿಗಾಗಿ ವಿವರಗಳನ್ನು ನ್ಯಾಯಬದ್ದವಾಗಿ ಸಹಿ ಮಾಡಿ, ಪಿಡಿಎಫ್ ಫಾರ್ಮಾಟ್‌ನಲ್ಲಿ, ನಮೂನೆ ಜಿಎಸ್‌ಟಿಆರ್–9ಸಿಯಲ್ಲಿ (ಸಿಎ ಪ್ರಮಾಣಪತ್ರವಿಲ್ಲದೆ) ಅಪ್‌ಲೋಡ್ ಮಾಡುವ ಆಯ್ಕೆಯಿರತಕ್ಕದ್ದು.";

(viii) ಕ್ರಮ ಸಂಖ್ಯೆ 8ಡಿಯಲ್ಲಿ, "8ಡಿ ಸಾಲಿನಲ್ಲಿರುವ ಮೌಲ್ಯವು ಋಣಾತ್ಮಕವಾಗಿರುತ್ತದೆ." ಪದಗಳಿಂದ ಕೊನೆಗೊಳ್ಳುವ ನಮೂದುಗಳ ನಂತರ, ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–

"ನೋಂದಾಯಿತ ವ್ಯಕ್ತಿಗೆ, 2017–18 ಮತ್ತು 2018–19ರ ಆ.ವ.ಕ್ಕಾಗಿ, ಕೋಷ್ಟಕ 8ಎ ಯಿಂದ 8ಡಿವರೆಗಿನ ನಮೂದುಗಳಿಗಾಗಿ ವಿವರಗಳನ್ನು ನ್ಯಾಯಬದ್ದವಾಗಿ ಸಹಿ ಮಾಡಿ, ಪಿಡಿಎಫ್ ಫಾರ್ಮಾಟ್‌ನಲ್ಲಿ, ನಮೂನೆ ಜಿಎಸ್‌ಟಿಆರ್–9ಸಿಯಲ್ಲಿ (ಸಿಎ ಪ್ರಮಾಣಪತ್ರವಿಲ್ಲದೆ) ಅಪ್‌ಲೋಡ್ ಮಾಡುವ ಆಯ್ಕೆಯಿರತಕ್ಕದ್ದು.";

(ಡಿ) ಖಂಡಿಕೆ 7ರಲ್ಲಿ,–

(i) "ಹಿಂದಿನ ಹಣಕಾಸು ವರ್ಷಕ್ಕಾಗಿನ ವ್ಯವಹಾರಗಳನ್ನು" ಪದಗಳ ಮೊದಲು, "2017–18ರ ಆ.ವ.ಕ್ಕಾಗಿ," ಸಂಖ್ಯೆಗಳು ಮತ್ತು ಅಕ್ಷರಗಳನ್ನು ಸೇರಿಸತಕ್ಕದ್ದು;

(ii) "ವಿವರಗಳನ್ನು ಭಾಗ V ಒಳಗೊಳ್ಳುತ್ತದೆ." ಪದಗಳಿಂದ ಕೊನೆಗೊಳ್ಳುವ ನಮೂದುಗಳ ನಂತರ, ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–

661

"2018–19ರ ಆ.ವ.ಕ್ಕಾಗಿ, ಹಿಂದಿನ ಹಣಕಾಸು ವರ್ಷಕ್ಕಾಗಿನ ವ್ಯವಹಾರಗಳನ್ನು, ಆದರೆ ಏಪ್ರಿಲ್ 2018ರಿಂದ ಮಾರ್ಚ್ 2019ರ ನಡುವೆ ನಮೂನೆ ಜಿಎಸ್‌ಟಿಆರ್–3ಬಿಯಲ್ಲಿ ಪಾವತಿಸಿದ, ವಿವರಗಳನ್ನು ಭಾಗ V ಒಳಗೊಳ್ಳುತ್ತದೆ."

(iii) ಕೋಷ್ಟಕದಲ್ಲಿ, ಎರಡನೆಯ ಅಂಕಣದಲ್ಲಿ, –

(I) ಕ್ರಮ ಸಂಖ್ಯೆ 10 & 11ರಲ್ಲಿ,

(1.) "ಹಿಂದಿನ ಹಣಕಾಸು ವರ್ಷದ ರಿಟರ್ನ್‌ಗಳಲ್ಲಿ ಘೋಷಿಸಿದಂತಹ" ಪದಗಳ ಮೊದಲು, "2017–18ರ ಆ.ವ.ಕ್ಕಾಗಿ" ಸಂಖ್ಯೆಗಳು ಮತ್ತು "

(2.) "ಅಂತಹ ತಿದ್ದುಪಡಿಗಳ ವಿವರಗಳನ್ನು ಇಲ್ಲಿ ಘೋಷಿಸತಕ್ಕದ್ದು." ಪದಗಳಿಂದ ಕೊನೆಗೊಳ್ಳುವ ನಮೂದುಗಳ ನಂತರ, ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–

"2018–19ರ ಆ.ವ.ಕ್ಕಾಗಿ, ಹಿಂದಿನ ಹಣಕಾಸು ವರ್ಷದ ರಿಟರ್ನ್‌ಗಳಲ್ಲಿ ಈಗಾಗಲೇ ಘೋಷಿಸಲಾದ ಯಾವುದೇ ಪೂರೈಕೆಗಳಿಗೆ ಸೇರಿಸುವಿಕೆ ಅಥವಾ ತಿದ್ದುಪಡಿಗಳನ್ನು, ಆದರೆ ಅಂಥ ತಿದ್ದುಪಡಿಗಳನ್ನು ಏಪ್ರಿಲ್ 2019ರಿಂದ ಸೆಪ್ಟಂಬರ್ 2019ವರೆಗಿನ ನಮೂನೆ ಜಿಎಸ್‌ಟಿಆರ್–1ನ ಕೋಷ್ಟಕ 9ಎ, ಕೋಷ್ಟಕ 9ಬಿ ಮತ್ತು ಕೋಷ್ಟಕ 9ಸಿಯಲ್ಲಿ ಒದಗಿಸಿದ್ದವು, ಇಲ್ಲಿ ಘೋಷಿಸತಕ್ಕದ್ದು.";

(II) ಕ್ರಮ ಸಂಖ್ಯೆ 12ರಲ್ಲಿ,–

(1.) "ಹಿಂದಿನ ಹಣಕಾಸು ವರ್ಷದಲ್ಲಿ ಉಪಯೋಗಿಸಿದ" ಪದಗಳ ಮೊದಲು, "2017–18ರ ಆ.ವ.ಕ್ಕಾಗಿ" ಅಕ್ಷರಗಳು ಮತ್ತು ಸಂಖ್ಯೆಗಳನ್ನು ಸೇರಿಸತಕ್ಕದ್ದು;

(2.) "ಜಿಎಸ್‌ಟಿಆರ್–3ಬಿ ರ ಕೋಷ್ಟಕ 4(ಬಿ) ಅನ್ನು ಬಳಸಿಕೊಳ್ಳಬಹುದಾಗಿರುತ್ತದೆ." ಪದಗಳಿಂದ ಕೊನೆಗೊಳ್ಳುವ ನಮೂದುಗಳ ನಂತರ, ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–

"2018–19ರ ಆ.ವ.ಕ್ಕಾಗಿ, ಹಿಂದಿನ ಹಣಕಾಸು ವರ್ಷದಲ್ಲಿ ಸ್ವೀಕರಿಸಿದ ಆದರೆ ಏಪ್ರಿಲ್ 2019ರಿಂದ ಸೆಪ್ಟಂಬರ್ 2019ರ ತಿಂಗಳುಗಳಿಗಾಗಿ ಒದಗಿಸಿದ ರಿಟರ್ನ್‌ಗಳಲ್ಲಿ ಹಿಂಪಡೆದ, ಐಟಿಸಿಯ ಹಿಂಪಡೆಯುವಿಕೆಯ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು. ಈ ವಿವರಗಳನ್ನು ಭರ್ತಿಮಾಡಲು ನಮೂನೆ ಜಿಎಸ್‌ಟಿಆರ್–3ಬಿಯ ಕೋಷ್ಟಕ 4(ಬಿ) ಯನ್ನು ಬಳಸಬಹುದು. 2017–18 ಮತ್ತು 2018–19ರ ಆ.ವ.ಕ್ಕಾಗಿ, ನೋಂದಾಯಿತ ವ್ಯಕ್ತಿಯು ಈ ಕೋಷ್ಟಕವನ್ನು ಭರ್ತಿಮಾಡದೇ ಇರುವ ಆಯ್ಕೆಯು ಇರತಕ್ಕದ್ದು.";

(III) ಕ್ರಮ ಸಂಖ್ಯೆ 13ರಲ್ಲಿ,–

(1.) "ಹಿಂದಿನ ಹಣಕಾಸು ವರ್ಷದಲ್ಲಿ ಸ್ವೀಕರಿಸಿದ" ಪದಗಳ ಮೊದಲು, "2017–18ರ ಆ.ವ.ಕ್ಕಾಗಿ" ಅಕ್ಷರಗಳು ಮತ್ತು ಸಂಖ್ಯೆಗಳನ್ನು ಸೇರಿಸತಕ್ಕದ್ದು;

(2.) ''ವಾರ್ಷಿಕ ರಿಟರ್ನ್‌ನಲ್ಲಿ ಒದಗಿಸತಕ್ಕದ್ದು." ಪದಗಳಿಂದ ಕೊನೆಗೊಳ್ಳುವ ನಮೂದುಗಳ ನಂತರ, ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–

"2018–19ರ ಆ.ವ.ಕ್ಕಾಗಿ, ಹಿಂದಿನ ಹಣಕಾಸು ವರ್ಷದಲ್ಲಿ ಸರಕು ಮತ್ತು ಸೇವೆಗಳ ಸೀಕೃತಿಗಾಗಿ ಐಟಿಸಿಯನ್ನು, ಆದರೆ ಅದರ ಮೇಲಿನ ಐಟಿಸಿಯನ್ನು ಏಪ್ರಿಲ್ 2019ರೀಮದ ಸೆಪ್ಟಂಬರ್ 2019ರ ತಿಂಗಳುಗಳಿಗಾಗಿ ಸಲ್ಲಿಸಿದ

662

ರಿಟರ್ನ್‌ಗಳಲ್ಲಿ ಉಪಯೋಗಿಸಿದುದು, ಇಲ್ಲಿ ಘೋಷಿಸತಕ್ಕದ್ದು. ಈ ವಿವರಗಳನ್ನು ಭರ್ತಿಮಾಡಲು ನಮೂನೆ ಜಿಎಸ್‌ಟಿಆರ್–3ಬಿಯ ಕೋಷ್ಟಕ 4(ಎ)ಯನ್ನು ಉಪಯೋಗಿಸಬಹುದು. ಆದರೂ, ಪ್ರಕರಣ 16ರ ಉಪಪ್ರಕರಣ (2)ರ ಎರಡನೆಯ ಪರಂತುಕದ ಅನುಸಾರವಾಗಿ ಆ.ವ. 2018–19ರಲ್ಲಿ ಹಿಂದಿರುಗಿಸಿದ, ಆದರೆ ಆ.ವ. 2019–20ರಲ್ಲಿ ಮರುಕ್ಲೇಮು ಮಾಡಿದ, ಯಾವುದೇ ಐಟಿಸಿಯನ್ನು, 2019–20 ಆ.ವ.ಕ್ಕಾಗಿ ವಾರ್ಷಿಕ ರಿಟರ್ನ್‌ನಲ್ಲಿ ಅಂಥ ಮರುಕ್ಲೇಮು ಮಾಡಿದ ಐಟಿಸಿಯ ವಿವರಗಳನ್ನು ಒದಗಿಸತಕ್ಕದ್ದು. ಆ.ವ. 2017–18 ಮತ್ತು 2018–19ಕ್ಕಾಗಿ, ಈ ಕೋಷ್ಟಕವನ್ನು ಭರ್ತಿಮಾಡದೇ ಇರುವ ಆಯ್ಕೆಯು ನೋಂದಾಯಿತ ವ್ಯಕ್ತಿಗೆ ಇರತಕ್ಕದ್ದು.";

(ಇ) ಖಂಡಿಕೆ 8ರಲ್ಲಿ, ಕೋಷ್ಟಕದಲ್ಲಿ, ಎರಡನೆಯ ಅಂಕಣದಲ್ಲಿ, –

(i) ಕ್ರಮ ಸಂಖ್ಯೆ 15ಎ, 15ಬಿ, 15ಸಿ ಮತ್ತು 15ಡಿಯಲ್ಲಿ, "ಜಿಎಸ್‌ಟಿ ಅಲ್ಲದ ಮರುಪಾವತಿ ಕ್ಲೇಮುಗಳ ವಿವರಗಳನ್ನು ಇವು ಒಳಗೊಂಡಿರುವುದಿಲ್ಲ." ಪದಗಳ ನಂತರ, "ಆ.ವ. 2017–18 ಮತ್ತು 2018–19ಕ್ಕಾಗಿ, ಈ ಕೋಷ್ಟಕವನ್ನು ಭರ್ತಿಮಾಡದೇ ಇರುವ ಆಯ್ಕೆಯು ನೋಂದಾಯಿತ ವ್ಯಕ್ತಿಗೆ ಇರತಕ್ಕದ್ದು." ಪದಗಳು, ಅಕ್ಷರಗಳು ಮತ್ತು ಸಂಖ್ಯೆಗಳನ್ನು ಸೇರಿಸತಕ್ಕದ್ದು;

(ii) ಕ್ರಮ ಸಂಖ್ಯೆ 15ಇ, 15ಎಫ್ ಮತ್ತು 15ಜಿಯಲ್ಲಿ, "ಬಾಕಿ ಇರುವ ತಗಾದೆಗಳ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು." ಪದಗಳ ನಂತರ, "ಆ.ವ. 2017–18 ಮತ್ತು 2018–19ಕ್ಕಾಗಿ, ಈ ಕೋಷ್ಟಕವನ್ನು ಭರ್ತಿಮಾಡದೇ ಇರುವ ಆಯ್ಕೆಯು ನೋಂದಾಯಿತ ವ್ಯಕ್ತಿಗೆ ಇರತಕ್ಕದ್ದು." ಪದಗಳು, ಅಕ್ಷರಗಳು ಮತ್ತು ಸಂಖ್ಯೆಗಳನ್ನು ಸೇರಿಸತಕ್ಕದ್ದು;

(iii) ಕ್ರಮ ಸಂಖ್ಯೆ 16ಎನಲ್ಲಿ, "ಜಿಎಸ್‌ಟಿಆರ್–3ಬಿಯ ಕೋಷ್ಟಕ 5ಅನ್ನು ಬಳಸಿಕೊಳ್ಳಬಹುದಾಗಿರುತ್ತದೆ." ಪದಗಳು, ಸಂಖ್ಯೆಗಳು ಮತ್ತು ಅಕ್ಷರಗಳ ನಂತರ, "ಆ.ವ. 2017–18 ಮತ್ತು 2018–19ಕ್ಕಾಗಿ, ಈ ಕೋಷ್ಟಕವನ್ನು ಭರ್ತಿಮಾಡದೇ ಇರುವ ಆಯ್ಕೆಯು ನೋಂದಾಯಿತ ವ್ಯಕ್ತಿಗೆ ಇರತಕ್ಕದ್ದು." ಪದಗಳು, ಅಕ್ಷರಗಳು ಮತ್ತು ಸಂಖ್ಯೆಗಳನ್ನು ಸೇರಿಸತಕ್ಕದ್ದು;

(iv) ಕ್ರಮ ಸಂಖ್ಯೆ 16ಬಿ ಮತ್ತು ಕ್ರಮ ಸಂಖ್ಯೆ 16ಸಿಯಲ್ಲಿ, "ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು." ಪದಗಳ ನಂತರ, "ಆ.ವ. 2017–18 ಮತ್ತು 2018–19ಕ್ಕಾಗಿ, ಈ ಕೋಷ್ಟಕವನ್ನು ಭರ್ತಿಮಾಡದೇ ಇರುವ ಆಯ್ಕೆಯು ನೋಂದಾಯಿತ ವ್ಯಕ್ತಿಗೆ ಇರತಕ್ಕದ್ದು." ಪದಗಳು, ಅಕ್ಷರಗಳು ಮತ್ತು ಸಂಖ್ಯೆಗಳನ್ನು ಸೇರಿಸತಕ್ಕದ್ದು;

(v) ಕ್ರಮ ಸಂಖ್ಯೆ 17 ಮತ್ತು 18ರಲ್ಲಿ, "ಸಾರಾಂಶ ವಿವರಗಳನ್ನು ಘೋಷಿಸುವ ಅವಶ್ಯಕತೆ ಇರುತ್ತದೆ." ಪದಗಳ ನಂತರ, "ಆ.ವ. 2017–18 ಮತ್ತು 2018–19ಕ್ಕಾಗಿ, ಈ ಕೋಷ್ಟಕವನ್ನು ಭರ್ತಿಮಾಡದೇ ಇರುವ ಆಯ್ಕೆಯು ನೋಂದಾಯಿತ ವ್ಯಕ್ತಿಗೆ ಇರತಕ್ಕದ್ದು." ಪದಗಳು, ಅಕ್ಷರಗಳು ಮತ್ತು ಸಂಖ್ಯೆಗಳನ್ನು ಸೇರಿಸತಕ್ಕದ್ದು;

4. ನಮೂನೆ ಜಿಎಸ್‌ಟಿಆರ್–9ಸಿಯ ತಿದ್ದುಪಡಿ.– ಸದರಿ ನಿಯಮಗಳಲ್ಲಿ, ನಮೂನೆ ಜಿಎಸ್‌ಟಿಆರ್–9ಸಿಯಲ್ಲಿ,–

(1) ಸೂಚನೆಗಳಲ್ಲಿ,

(ಎ) ಖಂಡಿಕೆ 2ರಲ್ಲಿ,

663

(i) "ಹಣಕಾಸು ವರ್ಷ 2017–18ರ" ಸಂಖ್ಯೆಗಳು ಮತ್ತು ಪದಗಳಿಗಾಗಿ, "ಪ್ರಸಕ್ತ ಹಣಕಾಸು ವರ್ಷದ" ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) "2017–18ನೇ ಹಣಕಾಸು ವರ್ಷದ" ಸಂಖ್ಯೆಗಳು ಮತ್ತು ಪದಗಳ ಮೊದಲು, "2017–18ರ ಆ.ವ.ಕ್ಕಾಗಿ" ಸಂಖ್ಯೆಗಳು ಮತ್ತು ಅಕ್ಷರಗಳನ್ನು ಸೇರಿಸತಕ್ಕದ್ದು;

(ಬಿ) ಖಂಡಿಕೆ 4ರಲ್ಲಿ, ಕೋಷ್ಟಕದಲ್ಲಿ, ಎರಡನೆಯ ಅಂಕಣದಲ್ಲಿ,–

(i) ಕ್ರಮ ಸಂಖ್ಯೆ 5ಬಿಯಲ್ಲಿ "ಅಂತಹ ಆದಾಯವನ್ನು ಇಲ್ಲಿ ಘೋಷಿಸತಕ್ಕದ್ದು." ಪದಗಳಿಂದ ಕೊನೆಗೊಳ್ಳುವ ನಮೂದುಗಳ ನಂತರ ಮತ್ತು ಕ್ರಮ ಸಂಖ್ಯೆ 5ಸಿಯಲ್ಲಿ "ಆದಾಯದ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು." ಪದಗಳಿಂದ ಕೊನೆಗೊಳ್ಳುವ ನಮೂದುಗಳ ನಂತರ, ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–

"2017–18 ಮತ್ತು 2018–19 ಆ.ವ.ಕ್ಕಾಗಿ, ಈ ಕೋಷ್ಟಕವನ್ನು ಭರ್ತಿಮಾಡದೇ ಇರಲು ನೋಂದಾಯಿತ ವ್ಯಕ್ತಿಗೆ ಆಯ್ಕೆಯಿರತಕ್ಕದ್ದು. ವರದಿ ಮಾಡಬೇಕಾದ ಅವಶ್ಯಕತೆಯಿರುವ ಯಾವುದೇ ಹೊಂದಾಣಿಕೆಗಳು ಇದ್ದಲ್ಲಿ, ಅವುಗಳನ್ನು ಕೋಷ್ಟಕ 5ಒ ನಲ್ಲಿ ವರದಿ ಮಾಡಬಹುದು."

(ii) ಕ್ರಮ ಸಂಖ್ಯೆ 5ಡಿಯಲ್ಲಿ, "ವಹಿವಾಟನ್ನು ಇಲ್ಲಿ ಸೇರಿಸುವ ಅವಶ್ಯಕತೆ ಇರುವುದಿಲ್ಲ." ಪದಗಳಿಂದ ಕೊನೆಗೊಳ್ಳುವ ನಮೂದುಗಳ ನಂತರ, ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–

"2017–18 ಮತ್ತು 2018–19 ಆ.ವ.ಕ್ಕಾಗಿ, ಈ ಕೋಷ್ಟಕವನ್ನು ಭರ್ತಿಮಾಡದೇ ಇರಲು ನೋಂದಾಯಿತ ವ್ಯಕ್ತಿಗೆ ಆಯ್ಕೆಯಿರತಕ್ಕದ್ದು. ವರದಿ ಮಾಡಬೇಕಾದ ಅವಶ್ಯಕತೆಯಿರುವ ಯಾವುದೇ ಹೊಂದಾಣಿಕೆಗಳು ಇದ್ದಲ್ಲಿ, ಅವುಗಳನ್ನು ಕೋಷ್ಟಕ 5ಒ ನಲ್ಲಿ ವರದಿ ಮಾಡಬಹುದು."

(iii) ಕ್ರಮ ಸಂಖ್ಯೆ 5ಇ ಮತ್ತು ಕ್ರಮ ಸಂಖ್ಯೆ 5ಎಫ್‌ನಲ್ಲಿ, "ಇಲ್ಲಿ ಘೋಷಿಸತಕ್ಕದ್ದು." ಪದಗಳಿಂದ ಕೊನೆಗೊಳ್ಳುವ ನಮೂದುಗಳ ನಂತರ, ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–

"2017–18 ಮತ್ತು 2018–19 ಆ.ವ.ಕ್ಕಾಗಿ, ಈ ಕೋಷ್ಟಕವನ್ನು ಭರ್ತಿಮಾಡದೇ ಇರಲು ನೋಂದಾಯಿತ ವ್ಯಕ್ತಿಗೆ ಆಯ್ಕೆಯಿರತಕ್ಕದ್ದು. ವರದಿ ಮಾಡಬೇಕಾದ ಅವಶ್ಯಕತೆಯಿರುವ ಯಾವುದೇ ಹೊಂದಾಣಿಕೆಗಳು ಇದ್ದಲ್ಲಿ, ಅವುಗಳನ್ನು ಕೋಷ್ಟಕ 5ಒ ನಲ್ಲಿ ವರದಿ ಮಾಡಬಹುದು."

(iv) ಕ್ರಮ ಸಂಖ್ಯೆ 5ಜಿಯಲ್ಲಿ, "ಇಲ್ಲಿ ಘೋಷಿಸತಕ್ಕದ್ದು." ಪದಗಳಿಂದ ಕೊನೆಗೊಳ್ಳುವ ನಮೂದುಗಳ ನಂತರ, ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–

"2017–18 ಮತ್ತು 2018–19 ಆ.ವ.ಕ್ಕಾಗಿ, ಈ ಕೋಷ್ಟಕವನ್ನು ಭರ್ತಿಮಾಡದೇ ಇರಲು ನೋಂದಾಯಿತ ವ್ಯಕ್ತಿಗೆ ಆಯ್ಕೆಯಿರತಕ್ಕದ್ದು. ವರದಿ ಮಾಡಬೇಕಾದ ಅವಶ್ಯಕತೆಯಿರುವ ಯಾವುದೇ ಹೊಂದಾಣಿಕೆಗಳು ಇದ್ದಲ್ಲಿ, ಅವುಗಳನ್ನು ಕೋಷ್ಟಕ 5ಒ ನಲ್ಲಿ ವರದಿ ಮಾಡಬಹುದು."

(v) ಕ್ರಮ ಸಂಖ್ಯೆ 5ಹೆಚ್, ಕ್ರಮ ಸಂಖ್ಯೆ 5ಐ, ಕ್ರಮ ಸಂಖ್ಯೆ 5ಜೆ, ಕ್ರಮ ಸಂಖ್ಯೆ 5ಕೆ, ಕ್ರಮ ಸಂಖ್ಯೆ 5ಎಲ್, ಕ್ರಮ ಸಂಖ್ಯೆ 5ಎಂ ಮತ್ತು ಕ್ರಮ ಸಂಖ್ಯೆ 5ಎನ್ ಗಳಲ್ಲಿ, "ಇಲ್ಲಿ

664

ಘೋಷಿಸತಕ್ಕದ್ದು." ಪದಗಳಿಂದ ಕೊನೆಗೊಳ್ಳುವ ನಮೂದುಗಳ ನಂತರ, ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–

"2017–18 ಮತ್ತು 2018–19 ಆ.ವ.ಕ್ಕಾಗಿ, ಈ ಕೋಷ್ಟಕವನ್ನು ಭರ್ತಿಮಾಡದೇ ಇರಲು ನೋಂದಾಯಿತ ವ್ಯಕ್ತಿಗೆ ಆಯ್ಕೆಯಿರತಕ್ಕದ್ದು. ವರದಿ ಮಾಡಬೇಕಾದ ಅವಶ್ಯಕತೆಯಿರುವ ಯಾವುದೇ ಹೊಂದಾಣಿಕೆಗಳು ಇದ್ದಲ್ಲಿ, ಅವುಗಳನ್ನು ಕೋಷ್ಟಕ 5ಒ ನಲ್ಲಿ ವರದಿ ಮಾಡಬಹುದು."

(ಸಿ) ಖಂಡಿಕೆ 6ರಲ್ಲಿ, ಎರಡನೆಯ ಅಂಕಣದಲ್ಲಿ,–

(i) ಕ್ರಮ ಸಂಖ್ಯೆ 12ಬಿಯಲ್ಲಿ, "ಸ್ಥಿತ್ಯಂತರ ಜಮೆಯನ್ನು ಒಳಗೊಂಡಿರುತ್ತದೆ." ಪದಗಳಿಂದ ಕೊನೆಗೊಳ್ಳುವ ನಮೂದುಗಳ ನಂತರ, ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–
"ಆ.ವ. 2017–18 ಮತ್ತು 2018–19ಕ್ಕಾಗಿ, ಈ ಕೋಷ್ಟಕವನ್ನು ಭರ್ತಿಮಾಡದಿರುವ ಆಯ್ಕೆಯು ನೋಂದಾಯಿತ ವ್ಯಕ್ತಿಗೆ ಇರತಕ್ಕದ್ದು."

(ii) ಕ್ರಮ ಸಂಖ್ಯೆ 12ಸಿಯಲ್ಲಿ, "ಇಲ್ಲಿ ಘೋಷಿಸತಕ್ಕದ್ದು." ಪದಗಳಿಂದ ಕೊನೆಗೊಳ್ಳುವ ನಮೂದುಗಳ ನಂತರ, ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–
"ಆ.ವ. 2017–18 ಮತ್ತು 2018–19ಕ್ಕಾಗಿ, ಈ ಕೋಷ್ಟಕವನ್ನು ಭರ್ತಿಮಾಡದಿರುವ ಆಯ್ಕೆಯು ನೋಂದಾಯಿತ ವ್ಯಕ್ತಿಗೆ ಇರತಕ್ಕದ್ದು."

(iii) ಕ್ರಮ ಸಂಖ್ಯೆ 14ರಲ್ಲಿ, "ಇಲ್ಲಿ ಘೋಷಿಸಬೇಕಾಗಿರುತ್ತದೆ." ಪದಗಳಿಂದ ಕೊನೆಗೊಳ್ಳುವ ನಮೂದುಗಳ ನಂತರ, ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–
"ಆ.ವ. 2017–18 ಮತ್ತು 2018–19ಕ್ಕಾಗಿ, ಈ ಕೋಷ್ಟಕವನ್ನು ಭರ್ತಿಮಾಡದಿರುವ ಆಯ್ಕೆಯು ನೋಂದಾಯಿತ ವ್ಯಕ್ತಿಗೆ ಇರತಕ್ಕದ್ದು."

(2) ಭಾಗ ಬಿಗಾಗಿ, ಈ ಕೆಳಕಂಡದ್ದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

ಭಾಗ ಬಿ– ಪ್ರಮಾಣೀಕರಣ

V. ಲೆಕ್ಕ ಪರಿಶೋಧನೆ ಮಾಡಿದಂತಹ ವ್ಯಕ್ತಿಯು, ಸರಿ ಹೊಂದಾಣಿಕೆ ವಿವರ ಪತ್ರವನ್ನು (ನಮೂನೆ ಜಿಎಸ್‌ಟಿಆರ್–9ಸಿ) ದಾಖಲಿಸುವ ಪ್ರಕರಣಗಳಲ್ಲಿ, ನೀಡಬೇಕಾದ ಪ್ರಮಾಣೀಕರಣ.

ನಾನು/ನಾವು

(ಎ) ದಿನಾಂಕ ---------- ರಂತೆ ಆಯವ್ಯಯ ಪಟ್ಟಿಯನ್ನು

(ಬಿ) (---------- ರಿಂದ ಪ್ರಾರಂಭವಾಗಿ ---------- ವರೆಗೆ ಕೊನೆಯಾಗುವ ಅವಧಿಗೆ ಲಾಭ ಮತ್ತು ನಷ್ಟದ ತ:ಖ್ತೆಯನ್ನು /ಆದಾಯ ಮತ್ತು ವೆಚ್ಚದ ಖಾತೆಯನ್ನು, ಮತ್ತು

(ಸಿ) ಮೆ: ---------- (ಹೆಸರು) ---------- ವಿಳಾಸ ---------- (ಜಿಎಸ್‌ಟಿಎನ್) ಇವರಿಗೆ ಸಂಬಂಧಿಸಿದ ---------- ಪ್ರಾರಂಭವಾಗಿ ---------- ಕೊನೆಯಾಗುವ ಅವಧಿಗೆ ನಗದು ಹರಿವು ವಿವರ ಪತ್ರ (ಕ್ಯಾಶ್ ಫ್ಲೋ ಸ್ಟೇಟ್‌ಮೆಂಟ್) ಗಳನ್ನು ಪರಿಶೀಲನೆ

665

ಮಾಡಿದ್ದೇನೆ(ವೆ).

2. ನಮ್ಮ ಲೆಕ್ಕ ಪರಿಶೋಧನೆಯನ್ನು ಆಧರಿಸಿ ನಾನು/ನಾವು, ಸದರಿ ನೋಂದಾಯಿತ ವ್ಯಕ್ತಿಯು ಕೇಂಸಸೇತೆ/ಏಸಸೇತೆ/ಕಸಸೇತೆ ಅಧಿನಿಯಮ 2017ರ ಮತ್ತು ಅದರಡಿಯಲ್ಲಿ ಮಾಡಿದ/ ಹೊರಡಿಸಿದ ನಿಯಮಗಳು/ ಅಧಿಸೂಚನೆಗಳ ಅವಶ್ಯಕತೆಗನುಗುಣವಾಗಿ ಲೆಕ್ಕ ಪತ್ರ ಪುಸ್ತಕಗಳನ್ನು/ ದಾಖಲೆಗಳನ್ನು ಮತ್ತು ದಸ್ತಾವೇಜುಗಳನ್ನು ನಿರ್ವಹಿಸಿರುತ್ತಾರೆ,

* ---------- ಈ ಕೆಳಗಿನ ಲೆಕ್ಕಪತ್ರ ---------- ದಸ್ತಾವೇಜುಗಳನ್ನು ನಿರ್ವಹಿಸಿರುವುದಿಲ್ಲ ಎಂದು ವರದಿ ಮಾಡುತ್ತೇವೆ.

1.
2.
3.

3(ಎ) * ನಾನು/ನಾವು ಈ ಕೆಳಗಿನ ಅವಲೋಕನಗಳನ್ನು/ ವಿವರಣೆಯನ್ನು/ ವ್ಯತ್ಯಾಸಗಳನ್ನು/ ಅಸಮಂಜಸತೆಗಳನ್ನು (ಇದ್ದರೆ) ವರದಿ ಮಾಡುತ್ತಿದ್ದೇನೆ(ವೆ).

.....

.....

3(ಬಿ) *ಮುಂದುವರೆದು ನಾನು/ನಾವು ಈ ಕೆಳಗಿನಂತೆ ವರದಿ ಮಾಡುತ್ತಿದ್ದೇನೆ/ವೆ.

(ಎ) *ನಾನು/ನಾವು, ಲೆಕ್ಕ ಪರಿಶೋಧನೆಯ ಉದ್ದೇಶಕ್ಕೆ ಅತ್ಯವಶ್ಯಕವಾದ ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ನನ್ನ/ನಮ್ಮ ಅತ್ಯುತ್ತಮ ತಿಳುವಳಿಕೆ ಮತ್ತು ನಂಬಿಕೆಯ ಮಟ್ಟಕ್ಕೆ ಪಡೆದುಕೊಂಡಿರುತ್ತೇನೆ/ವೆ. ಲೆಕ್ಕಪರಿಶೋಧನೆಯ ಉದ್ದೇಶಕ್ಕೆ ಅತ್ಯವಶ್ಯಕವಾದ ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ನನ್ನ/ನಮ್ಮ ಅತ್ಯುತ್ತಮ ತಿಳುವಳಿಕೆ ಮತ್ತು ನಂಬಿಕೆಯ ಮಟ್ಟಕ್ಕೆ ಒದಗಿಸಿರುವುದಿಲ್ಲ/ ಭಾಗಶ: ಒದಗಿಸಿರುತ್ತಾರೆ.

(ಬಿ) ನನ್ನ/ನಮ್ಮ ಅಭಿಪ್ರಾಯದಲ್ಲಿ ನಾನು/ನಾವು ಮಾಡಿದ ಲೆಕ್ಕಪತ್ರ ಪುಸ್ತಕಗಳ ಪರಿಶೀಲನೆಯಿಂದ, ನೋಂದಾಯಿತ ವ್ಯಕ್ತಿಯು ಯುಕ್ತ ಲೆಕ್ಕಪತ್ರಗಳನ್ನು ನಿರ್ವಹಿಸಿರುತ್ತಾರೆ/ ನಿರ್ವಹಿಸಿರುವುದಿಲ್ಲ.

(ಸಿ) ಆಯವ್ಯಯ ಪಟ್ಟಿ, ಲಾಭ ಮತ್ತು ನಷ್ಟ ತ:ಖ್ತೆ/ಆದಾಯ ಮತ್ತು ವೆಚ್ಚ ವಿವರ ಪತ್ರ ಮತ್ತು ನಗದು ಹರಿವು ವಿವರ ಪತ್ರಗಳು ಮತ್ತು ರಾಜ್ಯದ ಪ್ರಧಾನ ವ್ಯವಹಾರ ಸ್ಥಳ ಮತ್ತು ಹೆಚ್ಚುವರಿ ವ್ಯವಹಾರ ಸ್ಥಳ ನಿರ್ವಹಿಸುತ್ತಿರುವ ಲೆಕ್ಕ ಪುಸ್ತಕಗಳು, ಒಂದಕ್ಕೊಂದು ತಾಳೆಯಾಗುತ್ತವೆ/ ತಾಳೆಯಾಗುವುದಿಲ್ಲ ಎಂದು ಪ್ರಮಾಣೀಕರಿಸುತ್ತೇನೆ/ವೆ.

4. ಕೇಂ.ಸ.ಸೇ.ತೆ/ ರಾಜ್ಯ ಸ.ಸೇ.ತೆ ಅಧಿನಿಯಮದ ಪ್ರಕರಣ 35(5) ರಡಿಯಲ್ಲಿ ಒದಗಿಸಬೇಕಾಗಿರುವ ದಾಖಲೆಗಳು/ ದಾಸ್ತಾವೇಜುಗಳು ಮತ್ತು ಕೇಂಸಸೇತೆ/ರಾಜ್ಯಸಸೇತೆ ಅಧಿನಿಯಮ, 2017ರ ಪ್ರಕರಣ 44(2)ರ ಅಡಿಯಲ್ಲಿ ಒದಗಿಸಬೇಕಾಗಿರುವ ಸರಿಹೊಂದಾಣಿಕೆ/ಸಮನ್ವಯ ವಿವರ ಪತ್ರವನ್ನು ನಮೂನೆ ಜಿಎಸ್‌ಟಿಆರ್ 9ಸಿ ಯೊಂದಿಗೆ ಲಗತ್ತಿಸಿದೆ.

5. ನನ್ನ/ನಮ್ಮ ಅಭಿಪ್ರಾಯದಲ್ಲಿ ಮತ್ತು ನನ್ನ/ನಮ್ಮ ಅತ್ಯುತ್ತಮ ಮಾಹಿತಿಗೆ ಮತ್ತು ನನಗೆ/ನಮಗೆ ನೀಡಿದ ವಿವರಣೆಗಳ ಅನುಸಾರ, ಸದರಿ ನಮೂನೆ ಜಿಎಸ್‌ಟಿಆರ್–9ಸಿ ನಲ್ಲಿ ನೀಡಿದ ವಿವರಗಳು, ಈ ಕೆಳಗಿನ ಅವಲೋಕನೆಗಳಿಗೆ/ಅರ್ಹತೆಗಳಿಗೆ/ ಔಚಿತ್ಯಗಳಿಗೆ (ಇದ್ದರೆ) ಒಳಪಟ್ಟಂತೆ ನಿಜ ಹಾಗೂ ಸರಿಯಾಗಿರುತ್ತದೆ.

666

(ಎ) _____
(ಬಿ) _____
(ಸಿ) _____

** (ಲೆಕ್ಕಪರಿಶೋಧಕರ ಸಹಿ ಮತ್ತು ಮೊಹರು)
ಸ್ಥಳ_____
ಸಹಿ ಮಾಡುವವರ ಹೆಸರು_____
ಸದಸ್ಯತ್ವ ಸಂಖ್ಯೆ_____
ದಿನಾಂಕ_____
ಪೂರ್ಣ ವಿಳಾಸ_____

VI. <u>ಲೆಕ್ಕಪತ್ರಗಳ ಪರಿಶೋಧನೆ ಮಾಡಿದಂತಹ ವ್ಯಕ್ತಿಯ ಹೊರತು ಬೇರೊಬ್ಬ ವ್ಯಕ್ತಿಯು ಸರಿಹೊಂದಾಣಿಕೆ /ಸಮನ್ವಯ ವಿವರ ಪತ್ರ (ನಮೂನೆ ಜಿಎಸ್ ಟಿ ಆರ್–9 ಸಿ)ಯನ್ನು ಭರ್ತಿ ಮಾಡಿದಂತಹ ಪ್ರಕರಣಗಳಿಗೆ ಪ್ರಮಾಣೀಕರಣ</u>

* ಮೆ॥ _____(ಕರದಾತನ ಹೆಸರು ಮತ್ತು ವಿಳಾಸ, ಜಿಎಸ್‌ಟಿಎನ್ ಸಹಿತ) ಇವರ ಲೆಕ್ಕಪತ್ರಗಳ ಮತ್ತು ಹಣಕಾಸು ವಿವರ ಪತ್ರಗಳ ಲೆಕ್ಕಪರಿಶೋಧನೆಯನ್ನು ಮೆ॥_____ [ಲೆಕ್ಕಪರಿಶೋಧಕರ ಪೂರ್ಣ ಹೆಸರು ವಿಳಾಸ ಮತ್ತು ಸ್ಥಾನ (status)] ಸದಸ್ಯತ್ವ ಸಂಖ್ಯೆ_____ ಹೊಂದಿರುವ ಇವರು _____ ಅಧಿನಿಯಮದ ಉಪಬಂಧಗಳ ಅನುಸರಣೆಯಲ್ಲಿ ಮಾಡಿರುತ್ತಾರೆಂದು ನಾನು/ನಾವು ವರದಿ ಮಾಡುತ್ತೇನೆ/ವೆ.

ಕೆಳಗಿನ ದಾಖಲೆಗಳ ಪ್ರತಿಗಳ ಸಹಿತ ನಾವು ಸದರಿ ಲೆಕ್ಕಪರಿಶೋಧನೆ ವರದಿಯ ಒಂದು ಪ್ರತಿಯನ್ನು ಲಗತ್ತಿಸಿದ್ದೇವೆ.

(ಎ) ಆಯವ್ಯಯ ಪಟ್ಟಿ ದಿನಾಂಕ _____ದಂತೆ

(ಬಿ) _____ಪ್ರಾರಂಭವಾಗುವ ಮತ್ತು _____–ಕ್ಕೆ ಕೊನೆಗೊಳ್ಳುವ ಅವಧಿಗೆ ಲಾಭ ಮತ್ತು ನಷ್ಟ ತಃಖ್ತೆ/ಆದಾಯ ಮತ್ತು ವೆಚ್ಚ ತಃಖ್ತೆ

(ಸಿ) _____ಪ್ರಾರಂಭವಾಗುವ ಮತ್ತು _____–ಕ್ಕೆ ಕೊನೆಗೊಳ್ಳುವ ಅವಧಿಗೆ ನಗದು ಹರಿವು ವಿವರ ಪತ್ರ

(ಡಿ) ಸದರಿ ಅಧಿನಿಯಮದಂತೆ, ಲಾಭ ಮತ್ತು ನಷ್ಟ ತಃಖ್ತೆ/ಆದಾಯ ಮತ್ತು ವೆಚ್ಚ ತಃಖ್ತೆ/ ಆಯವ್ಯಯ ಪಟ್ಟಿಯ ಭಾಗವಾಗಬೇಕಾಗಿರುವ, ಅಥವಾ ಲಗತ್ತಿಸಬೇಕಾಗಿರುವ ದಾಖಲೆಗಳು

2. ನಾನು/ನಾವು, ಸದರಿ ನೋಂದಾಯಿತ ವ್ಯಕ್ತಿಯು

* ಏಸಸೇತೆ/ಕೇಂಸಸೇತೆ/ಕಸಸೇತೆ ಅಧಿನಿಯಮ 2017ರಲ್ಲಿ ಮಾಡಲಾದ/ ಹೊರಡಿಸಲಾದ ನಿಯಮಗಳು/ ಅಧಿಸೂಚನೆಗಳ ಪ್ರಕಾರ ಈ ಕೆಳಗಿನ ಲೆಕ್ಕಪತ್ರ ಪುಸ್ತಕಗಳು, ದಾಖಲೆಗಳು ಮತ್ತು ದಸ್ತಾವೇಜುಗಳನ್ನು ನಿರ್ವಹಿಸಿರುತ್ತಾರೆ.

667

* ಏಸಸೇತೆ/ಕೇಂಸಸೇತೆ/ಕಸಸೇತೆ ಅಧಿನಿಯಮ 2017ರಲ್ಲಿ ಮಾಡಲಾದ/ ಹೊರಡಿಸಲಾದ ನಿಯಮಗಳು/ ಅಧಿಸೂಚನೆಗಳ ಪ್ರಕಾರ ಈ ಕೆಳಗಿನ ಲೆಕ್ಕಪತ್ರ ಪುಸ್ತಕಗಳು, ದಾಖಲೆಗಳು ಮತ್ತು ದಸ್ತಾವೇಜುಗಳನ್ನು ನಿರ್ವಹಿಸಿರುವುದಿಲ್ಲ.

1.

2.

3.

ಎಂದು ವರದಿ ಮಾಡುತ್ತಿದ್ದೇನೆ/ವೆ.

3. ಕೇಂದ್ರ/ರಾಜ್ಯ ಸರಕು ಮತ್ತು ಸೇವಾ ತೆರಿಗೆ ಅಧಿನಿಯಮದ ಪ್ರಕರಣ 35(5) ರಡಿಯಲ್ಲಿ ಒದಗಿಸಬೇಕಾಗಿರುವ ದಾಖಲೆಗಳು (ದಸ್ತಾವೇಜುಗಳು ಮತ್ತು ಕೇಸಸೇರೆ/ರಾಜ್ಯಸಸೇತೆ ಅಧಿನಿಯಮದ ಪ್ರಕರಣ 44(2) ರಡಿಯಲ್ಲಿ ಒದಗಿಸಬೇಕಾಗಿರುವ ಸಮನ್ವಯ ವಿವರಪತ್ರವನ್ನು ನಮೂನೆ ಜಿಎಸ್‌ಟಿಆರ್–9ಸಿ ಯೊಂದಿಗೆ ಲಗತ್ತಿಸಿದೆ.

4. ನನ್ನ/ನಮ್ಮ ಅಭಿಪ್ರಾಯದಲ್ಲಿ, ಮತ್ತು ನನ್ನ/ನಮ್ಮ ಅತ್ಯುತ್ತಮ ಮಾಹಿತಿಗೆ ಮತ್ತು ನನಗೆ/ನಮಗೆ ನೀಡಿದ ವಿವರಣೆಗಳ ಪ್ರಕಾರ ಮತ್ತು ನಾನು/ನಾವು ಪರಿಶೀಲಿಸಿದ ಲೆಕ್ಕಪತ್ರ ಪುಸ್ತಕಗಳು ಮತ್ತು ಮತ್ತಿತರ ಪ್ರಸ್ತುತ ದಾಖಲೆಗಳ ಪ್ರಕಾರ, ಸದರಿ ನಮೂನೆ ಜಿಎಸ್‌ಟಿಆರ್–9ಸಿ ನಲ್ಲಿ ನೀಡಿದ ವಿವರಗಳು, ಈ ಕೆಳಕಂಡ ಅವಲೋಕನೆಗಳಿಗೆ/ಅರ್ಹತೆಗಳಿಗೆ, ಅವು ಇದ್ದಲ್ಲಿ ಒಳಪಟ್ಟಂತೆ ನಿಜ ಹಾಗು ಸಮಂಜಸವಾಗಿರುತ್ತವೆ.

(ಎ)

(ಬಿ)

(ಸಿ)

** (ಲೆಕ್ಕಪರಿಶೋಧಕರ ಸಹಿ ಮತ್ತು ಮೊಹರು)
ಸ್ಥಳ_____
ಸಹಿ ಮಾಡುವವರ ಹೆಸರು_____
ಸದಸ್ಯತ್ವ ಸಂಖ್ಯೆ_____
ದಿನಾಂಕ_____
ಪೂರ್ಣ ವಿಳಾಸ_____";

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

ಕೆ.ಸಾವಿತ್ರಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ [ವಾ.ತೆ–1]

668

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ
ಅಧಿಸೂಚನೆ (4–ಹೆಚ್/2019)
ಸಂಖ್ಯೆ: ಆಇ 47 ಸಿಎಸ್ಎಲ್ 2017, ಬೆಂಗಳೂರು, ದಿನಾಂಕ 10.01.2020

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ 27)ರ ಪ್ರಕರಣ 164ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಜಿಎಸ್ಟಿ ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರಕು ಮತ್ತು ಸೇವಾ ತೆರಿಗೆಗಳ ನಿಯಮಗಳು, 2017ರ ಮುಂದುವರೆದ ತಿದ್ದುಪಡಿ ಮಾಡಿ, ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ ಅಂದರೆ:–

ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ: (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಒಂಬತ್ತನೆಯ ತಿದ್ದುಪಡಿ) ನಿಯಮಗಳು, 2019, ಎಂದು ಕರೆಯಬಹುದು.

(2) ಈ ನಿಯಮಗಳಲ್ಲಿ ಉಪಬಂಧಿಸಿದುದನ್ನುಳಿದು, ಅವು 2019ರ ಡಿಸೆಂಬರ್ 13ನೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ನಿಯಮ 48ರ ತಿದ್ದುಪಡಿ.– ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಿಯಮ 48ರಲ್ಲಿ, ಉಪನಿಯಮ (3)ರ ನಂತರ, ಕೆಳಕಂಡ ಉಪನಿಯಮಗಳನ್ನು ಸೇರಿಸತಕ್ಕದ್ದು, ಅಂದರೆ:–

"(4) ಒಂದು ಬೆಲೆಪಟ್ಟಿ ಉಲ್ಲೇಖ ಸಂಖ್ಯೆಯನ್ನು ಪಡೆದುಕೊಂಡ ನಂತರ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಷರತ್ತುಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು ಮತ್ತು ಅಂಥ ರೀತಿಯಲ್ಲಿ ಸರಕು ಮತ್ತು ಸೇವೆಗಳ ತೆರಿಗೆ ವಿದ್ಯುನ್ಮಾನ ಪೋರ್ಟಲ್ ಮೇಲೆ **ನಮೂನೆ ಜಿಎಸ್ಟಿ ಐಎನ್ವಿ–01**ರಲ್ಲಿ ಒಳಗೊಂಡಿರುವ ಅಂಥ ವಿವರಗಳನ್ನು ಸೇರಿಸುವ ಮೂಲಕ ಅದರಲ್ಲಿ ಒಳಗೊಂಡಿರುವ ಮಾಹಿತಿಯನ್ನು ಅಪ್ಲೋಡ್ ಮಾಡುವ ಮೂಲಕ ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಸರ್ಕಾರದಿಂದ ಅಧಿಸೂಚಿಸಬಹುದಾದ ಅಂಥ ವರ್ಗದ ನೋಂದಾಯಿತ ವ್ಯಕ್ತಿಗಳಿಂದ ಬೆಲೆಪಟ್ಟಿಯನ್ನು ತಯಾರಿಸತಕ್ಕದ್ದು.

(5) ಉಪನಿಯಮ (4)ರಲ್ಲಿ ನಿರ್ದಿಷ್ಟಪಡಿಸಿದ ರೀತಿಯನ್ನು ಹೊರತುಪಡಿಸಿ ಇತರ ಯಾವುದೇ ರೀತಿಯಲ್ಲಿ ಸದರಿ ಉಪನಿಯಮವು ಅನ್ವಯವಾಗುವ ವ್ಯಕ್ತಿಯಿಂದ ನೀಡಲಾದ ಪ್ರತಿ ಬೆಲೆಪಟ್ಟಿಯನ್ನು ಒಂದು ಬೆಲೆಪಟ್ಟಿ ಎಂದು ಪರಿಗಣಿಸತಕ್ಕದ್ದಲ್ಲ.

(6) ಉಪನಿಯಮ (4)ರಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ತಯಾರಿಸಿದ ಒಂದು ಬೆಲೆಪಟ್ಟಿಗೆ ಉಪನಿಯಮ (1) ಮತ್ತು (2)ರ ಉಪಬಂಧಗಳು ಅನ್ವಯಿಸತಕ್ಕದ್ದಲ್ಲ.".

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

ಕೆ. ಸಾವಿತ್ರಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ [ವಾ.ತೆ–1]

669

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಐ/2019)
ಸಂಖ್ಯೆ: ಆಇ 47 ಸಿ.ಎಸ್.ಎಲ್ 2017, ಬೆಂಗಳೂರು, ದಿನಾಂಕ 21.01.2020

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ 27)ರ ಪ್ರಕರಣ 164ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಜಿಎಸ್‌ಟಿ ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆಗಳ ನಿಯಮಗಳು, 2017ರ ಮುಂದುವರೆದ ತಿದ್ದುಪಡಿ ಮಾಡಲು, ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ ಅಂದರೆ:–

ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ: (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ನಿಯಮಗಳು, 2020 ಎಂದು ಕರೆಯಬಹುದು.

(2) ಈ ನಿಯಮಗಳಲ್ಲಿ ಉಪಬಂಧಿಸಿದುದನ್ನುಳಿದು, ಅವು 2019ರ ಡಿಸೆಂಬರ್ 26ನೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ನಿಯಮ 36ರ ತಿದ್ದುಪಡಿ.– ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017 (ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ)ರ, ನಿಯಮ 36ರಲ್ಲಿ, ಉಪನಿಯಮ (4)ರಲ್ಲಿ, **"ಶೇಕಡಾ 20"** ಪದ ಮತ್ತು ಸಂಖ್ಯೆಗಳಿಗಾಗಿ, **"ಶೇಕಡಾ 10"** ಪದ ಮತ್ತು ಸಂಖ್ಯೆಗಳನ್ನು, 2020ರ ಜನವರಿ 1ರಿಂದ ಜಾರಿಯಾಗುವಂತೆ, ಪ್ರತಿಯೋಜಿಸತಕ್ಕದ್ದು.

3. ಹೊಸ ನಿಯಮ 86ಎಯ ಸೇರ್ಪಡೆ.– ಸದರಿ ನಿಯಮಗಳಲ್ಲಿ, ನಿಯಮ 86ರ ನಂತರ, ಕೆಳಕಂಡ ನಿಯಮವನ್ನು ಸೇರಿಸತಕ್ಕದ್ದು, ಅಂದರೆ:–

"86ಎ. ವಿದ್ಯುನ್ಮಾನ ಜಮೆ ಖಾತೆಯಲ್ಲಿ ಲಭ್ಯವಿರುವ ಮೊತ್ತದ ಬಳಕೆಯ ಷರತ್ತುಗಳು.–

(1) ಆಯುಕ್ತರು ಅಥವಾ ಅವರಿಂದ ಈ ಸಂಬಂಧದಲ್ಲಿ ಪ್ರಾಧಿಕೃತನಾದ, ಸಹಾಯಕ ಆಯುಕ್ತರ ಶ್ರೇಣಿಗಿಂತ ಕಡಿಮೆಯಿಲ್ಲದ ಅಧಿಕಾರಿಯು, –

ಎ) ಹೂಡುವಳಿ ತೆರಿಗೆಯ ಜಮೆಯನ್ನು ತೆರಿಗೆ ಬೆಲೆಪಟ್ಟಿಗಳು ಅಥವಾ ಖರ್ಚು ಚೀಟಿಗಳು ಅಥವಾ ನಿಯಮ 36ರ ಅಡಿ ನಿಯಮಿಸಿದ ದಾಖಲೆಯ ಬಲದ ಮೇಲೆ

i. ಅಸ್ತಿತ್ವದಲ್ಲಿಲ್ಲದವನೆಂದು ಅಥವಾ ನೋಂದಣಿಯನ್ನು ಪಡೆದುಕೊಂಡಿರುವ ಅಂಥ ಯಾವುದೇ ಸ್ಥಳದಲ್ಲಿ ವ್ಯವಹಾರವನ್ನು ನಿರ್ವಹಿಸುತ್ತಿಲ್ಲವೆಂದು ಕಂಡು ಬಂದಿರುವ ಒಬ್ಬ ನೋಂದಾಯಿತ ವ್ಯಕ್ತಿಯಿಂದ ನೀಡಲಾಗಿರುವ; ಅಥವಾ

ii. ಸರಕುಗಳು ಅಥವಾ ಸೇವೆಗಳು ಅಥವಾ ಅವೆರಡರ ಸ್ವೀಕೃತಿ ಇಲ್ಲದೆ; ಅಥವಾ

ಬಿ) ಯಾವುದೇ ಪೂರೈಕೆಗೆ ಸಂಬಂಧಿಸಿದಂತೆ ಹೂಡುವಳಿ ತೆರಿಗೆಯ ಜಮೆಯನ್ನು ತೆರಿಗೆ ಬೆಲೆಪಟ್ಟಿಗಳು ಅಥವಾ ಖರ್ಚು ಚೀಟಿಗಳು ಅಥವಾ ನಿಯಮ 36ರ ಅಡಿ ನಿಯಮಿಸಿದ ದಾಖಲೆಗಳ ಬಲದ ಮೇಲೆ ಯಾವುದವುಗಳಿಗೆ ಸಂಬಂಧಿಸಿದಂತೆ ವಿಧಿಸಲಾದ ತೆರಿಗೆಯನ್ನು ಸರ್ಕಾರಕ್ಕೆ ಸಂದಾಯ

670

ಮಾಡಿರುವುದಿಲ್ಲ; ಅಥವಾ

ಸಿ) ಅಸ್ತಿತ್ವದಲ್ಲಿಲ್ಲದವನೆಂದು ಅಥವಾ ನೋಂದಣಿಯನ್ನು ಪಡೆದುಕೊಂಡಿರುವ ಅಂಥ ಯಾವುದೇ ಸ್ಥಳದಲ್ಲಿ ವ್ಯವಹಾರವನ್ನು ನಿರ್ವಹಿಸುತ್ತಿಲ್ಲವೆಂದು ಕಂಡುಬಂದಿರುವ ಒಬ್ಬ ನೋಂದಾಯಿತ ವ್ಯಕ್ತಿಯು ಹೂಡುವಳಿ ತೆರಿಗೆ ಜಮೆಯನ್ನು ಪಡೆಯುತ್ತಿರುವ; ಅಥವಾ

ಡಿ) ಹೂಡುವಳಿ ತೆರಿಗೆಯ ಯಾವುದೇ ಜಮೆಯನ್ನು ಪಡೆಯುತ್ತಿರುವ ಒಬ್ಬ ನೋಂದಾಯಿತ ವ್ಯಕ್ತಿಯು ತೆರಿಗೆ ಬೆಲೆಪಟ್ಟಿಗಳು ಅಥವಾ ಖರ್ಚು ಚೀಟಿಗಳು ಅಥವಾ ನಿಯಮ 36ರ ಅಡಿ ನಿಯಮಿಸಿದ ದಾಖಲೆಗಳನ್ನು ಹೊಂದಿರುವುದಿಲ್ಲದಿರುವ,

ವಿದ್ಯುನ್ಮಾನ ಜಮೆ ಖಾತೆಯಲ್ಲಿ ಲಭ್ಯವಿರುವ ಹೂಡುವಳಿ ತೆರಿಗೆಯ ಜಮೆಯನ್ನು ಮೋಸದಿಂದ ತೆಗೆದುಕೊಂಡಿದೆ ಅಥವಾ ಅದು ಅನರ್ಹವಾಗಿದೆ, ಎಂದು ನಂಬಲು ಕಾರಣಗಳಿದ್ದರೆ, ಪ್ರಕರಣ 49ರ ಅಡಿಯಲ್ಲಿಯ ಯಾವುದೇ ಬಾಧ್ಯತೆಯ ತೀರಿಸುವಿಕೆಗಾಗಿ ಅಥವಾ ಬಳಕೆಯಾಗಿರದ ಯಾವುದೇ ಮೊತ್ತದ ಮರುಪಾವತಿಯ ಕ್ಲೇಮಿಗಾಗಿ ವಿದ್ಯುನ್ಮಾನ ಜಮೆ ಖಾತೆಯಲ್ಲಿಯ ಅಂಥ ಜಮೆಗೆ ಸಮವಾದ ಒಂದು ಮೊತ್ತವನ್ನು ಖರ್ಚು ಹಾಕಲು, ಲಿಖಿತವಾಗಿ ದಾಖಲಿಸಿದ ಕಾರಣಗಳಿಗಾಗಿ, ಅನುಮತಿಸದಿರಬಹುದು.

(2) ಆಯುಕ್ತರು ಅಥವಾ ಉಪನಿಯಮ (1)ರ ಅಡಿ ಅವರಿಂದ ಪ್ರಾಧಿಕೃತನಾದ ಅಧಿಕಾರಿಯು, ಮೇಲಿನಂತೆ ವಿದ್ಯುನ್ಮಾನ ಜಮೆ ಖಾತೆಯಲ್ಲಿ ಖರ್ಚು ಹಾಕಲು ಅನುಮತಿಸದಿರುವುದಕ್ಕಾಗಿನ ಪರಿಸ್ಥಿತಿಗಳು ಉಳಿದಿಲ್ಲವೆಂದು ಯುಕ್ತವಾಗಿ ಮನದಟ್ಟು ಮಾಡಿಕೊಂಡ ಮೇಲೆ, ಅಂಥ ಖರ್ಚನ್ನು ಅನುಮತಿಸಬಹುದು.

(3) ಅಂಥ ನಿರ್ಬಂಧವು, ಅಂಥ ನಿರ್ಬಂಧವನ್ನು ವಿಧಿಸಿದ ದಿನಾಂಕದಿಂದ ಒಂದು ವರ್ಷದ ಅವಧಿಯ ಮುಕ್ತಾಯದ ನಂತರ, ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕದ್ದು.

4. ನಿಯಮ 138ಇ ಯ ತಿದ್ದುಪಡಿ.– ಸದರಿ ನಿಯಮಗಳಲ್ಲಿ, ನಿಯಮ 138ಇಯಲ್ಲಿ, ಖಂಡ (ಬಿ) ನಂತರ, ಕೆಳಕಂಡ ಖಂಡವನ್ನು, 2020ರ ಜನವರಿ 1ರಿಂದ ಜಾರಿಗೆ ಬರುವಂತೆ, ಸೇರಿಸತಕ್ಕದ್ದು, ಅಂದರೆ:–

"(ಸಿ) ಯಾವುದೇ ಎರಡು ತಿಂಗಳುಗಳು ಅಥವಾ ಸಂದರ್ಭಾನುಸಾರವಾಗಿ, ತ್ರೈಮಾಸಿಕಗಳಿಗಾಗಿ ಹೊರಮುಖ ಪೂರೈಕೆಗಳ ವಿವರಪಟ್ಟಿಯನ್ನು ಒದಗಿಸಿಲ್ಲದ ಖಂಡ (ಎ)ಯಲ್ಲಿ ನಿರ್ದಿಷ್ಟಪಡಿಸಿದ ಒಬ್ಬ ವ್ಯಕ್ತಿಯನ್ನು ಹೊರತುಪಡಿಸಿದಂಥ ಒಬ್ಬ ವ್ಯಕ್ತಿಯಾಗಿದ್ದು."

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

ಕೆ. ಸಾವಿತ್ರಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ [ವಾ.ತೆ–1]



ಕರ್ನಾಟಕ ಸರಕು ಮತ್ತು ಸೇವೆಗಳ

ತೆರಿಗೆ ಅಧಿನಿಯಮ, 2017

ಅಧಿಸೂಚನೆಗಳು

(ಕಾನೂನು ಮತ್ತು ತೊಂದರೆ ನಿವಾರಣೆ ಆದೇಶ)

ದಿನಾಂಕ: 01–07–2017 ರಿಂದ 31–12–2019

ಕರ್ನಾಟಕ ಸರಕು ಮತ್ತು ಸೇವೆಗಳ

ತೆರಿಗೆ ಅಧಿನಿಯಮ, 2017

ಅಧಿಸೂಚನೆಗಳು

(ಕಾನೂನು ಮತ್ತು ತೊಂದರೆ ನಿವಾರಣೆ ಆದೇಶ)

ದಿನಾಂಕ: 01–07–2017 ರಿಂದ 31–12–2019

ಕರ್ನಾಟಕ ಸರಕು ಮತ್ತು ಸೇವೆಗಳ
ತೆರಿಗೆ ನಿಯಮಗಳು, 2017
ಅಧಿಸೂಚನೆಗಳು
(ಕಾನೂನು ಮತ್ತು ತೊಂದರೆ ನಿವಾರಣೆ ಆದೇಶ)
ದಿನಾಂಕ 01–07–2017 ರಿಂದ 31–12–2019

ಕ್ರಮ ಸಂಖ್ಯೆ	ಅಧಿಸೂಚನೆ	ಪುಟ ಸಂಖ್ಯೆ
1	ಅಧಿಸೂಚನೆ (1), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	1
2	ಅಧಿಸೂಚನೆ (2), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	1
3	ಅಧಿಸೂಚನೆ (3), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	2–3
4	ಅಧಿಸೂಚನೆ (3–ಎ/2017), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	3
5	ಅಧಿಸೂಚನೆ (5/2017), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	3–4
6	ಅಧಿಸೂಚನೆ (6/2017), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	4–6
7	ಅಧಿಸೂಚನೆ (6–ಎ/2017), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	6
8	ಅಧಿಸೂಚನೆ (7/2017), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	7
9	ಅಧಿಸೂಚನೆ (9/2017), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	8
10	ಅಧಿಸೂಚನೆ (13/2017), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	8–9
11	ಅಧಿಸೂಚನೆ (14/2017), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	9
12	ಅಧಿಸೂಚನೆ (15/2017), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	10
13	ಅಧಿಸೂಚನೆ (17/2017), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	10–11
14	ಅಧಿಸೂಚನೆ (18/2017), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	11–12
15	ಅಧಿಸೂಚನೆ (19/2017), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	12–13
16	ಅಧಿಸೂಚನೆ (20/2017), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	13
17	ಅಧಿಸೂಚನೆ (21/2017), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	14
18	ಅಧಿಸೂಚನೆ (22/2017), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	14–15
19	ತಿದ್ದೋಲೆ	15
20	ಅಧಿಸೂಚನೆ (23–ಎ/2017), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	16
21	ಅಧಿಸೂಚನೆ (23–ಬಿ/2017), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	16
22	ಅಧಿಸೂಚನೆ (24/2017), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	17
23	ಅಧಿಸೂಚನೆ (25/2017), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	17
24	ಅಧಿಸೂಚನೆ (01/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	18

ಕ್ರಮ ಸಂಖ್ಯೆ	ಅಧಿಸೂಚನೆ	ಪುಟ ಸಂಖ್ಯೆ
25	ಅಧಿಸೂಚನೆ (02/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	18–19
26	ಅಧಿಸೂಚನೆ (03/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	19
27	ಅಧಿಸೂಚನೆ (04/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	20
28	ಅಧಿಸೂಚನೆ (05/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	20
29	ಅಧಿಸೂಚನೆ (06/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	21
30	ಅಧಿಸೂಚನೆ (07/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	21
31	ಅಧಿಸೂಚನೆ (08/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	22
32	ಅಧಿಸೂಚನೆ (09/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	22
33	ಅಧಿಸೂಚನೆ (10/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	23
34	ಅಧಿಸೂಚನೆ (11/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	24
35	ಅಧಿಸೂಚನೆ (12/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	24–25
36	ಅಧಿಸೂಚನೆ (13/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	26–27
37	ಅಧಿಸೂಚನೆ (14/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	27–28
38	ಅಧಿಸೂಚನೆ (15/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	28–29
39	ಅಧಿಸೂಚನೆ (16/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	29
40	ಅಧಿಸೂಚನೆ (17/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	30–31
41	ಅಧಿಸೂಚನೆ (18/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	31–32
42	ಅಧಿಸೂಚನೆ (19/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	32
43	ಅಧಿಸೂಚನೆ (20/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	33
44	ಅಧಿಸೂಚನೆ (21/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	33–36
45	ತಿದ್ದೋಲೆ	36
46	ಅಧಿಸೂಚನೆ (22/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	37–38
47	ಅಧಿಸೂಚನೆ (23/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	38
48	ಅಧಿಸೂಚನೆ (24/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	39
49	ಅಧಿಸೂಚನೆ (25/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	39–40
50	ಅಧಿಸೂಚನೆ (26/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	40
51	ಅಧಿಸೂಚನೆ (27/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	41
52	ಅಧಿಸೂಚನೆ (28/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	41–42
53	ಅಧಿಸೂಚನೆ (29/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	42–43

ಕ್ರಮ ಸಂಖ್ಯೆ	ಅಧಿಸೂಚನೆ	ಪುಟ ಸಂಖ್ಯೆ
54	ಅಧಿಸೂಚನೆ (30/2018), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	43
55	ಅಧಿಸೂಚನೆ (01/2019), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	44
56	ಅಧಿಸೂಚನೆ (02/2019), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	45
57	ತಿದ್ದೋಲೆ	45
58	ಅಧಿಸೂಚನೆ (03/2019), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	46
59	ಅಧಿಸೂಚನೆ (04/2019), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	46–47
60	ಅಧಿಸೂಚನೆ (05/2019), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	47–48
61	ಅಧಿಸೂಚನೆ (06/2019), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	48–49
62	ಅಧಿಸೂಚನೆ (07/2019), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	49–50
63	ಅಧಿಸೂಚನೆ (08/2019), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	50–51
64	ಅಧಿಸೂಚನೆ (09/2019), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	51–52
65	ಅಧಿಸೂಚನೆ (10/2019), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	52
66	ಅಧಿಸೂಚನೆ (11/2019), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	52–53
67	ಅಧಿಸೂಚನೆ (12/2019), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	53–54
68	ಅಧಿಸೂಚನೆ (13/2019), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	54
69	ಅಧಿಸೂಚನೆ (14/2019), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	55
70	ಅಧಿಸೂಚನೆ (15/2019), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	55
71	ಅಧಿಸೂಚನೆ (16/2019), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	56
72	ಅಧಿಸೂಚನೆ (17/2019), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	56–57
73	ಅಧಿಸೂಚನೆ (18/2019), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	58
74	ಅಧಿಸೂಚನೆ (19/2019), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	58–59
75	ಅಧಿಸೂಚನೆ (20/2019), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	59–60
76	ಅಧಿಸೂಚನೆ (21/2019), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	60–61
77	ಅಧಿಸೂಚನೆ (22/2019), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	61–62
78	ಅಧಿಸೂಚನೆ (23/2019), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	62–63
79	ಅಧಿಸೂಚನೆ (24/2019), ಸಂಖ್ಯೆ ಆ.ಇ 47 ಸಿಎಸ್ ಎಲ್ 2017	63
	ಕಾನೂನು ಮತ್ತು ತೊಂದರೆ ನಿವಾರಣೆ ಆದೇಶ –2017	
1	ಆದೇಶ ಸಂಖ್ಯೆ 01/2017 ಸಂಖ್ಯೆ ಆ.ಇ 47 ಸಿಎಸ್ ಎಲ್ 2017	64
2	ಆದೇಶ ಸಂಖ್ಯೆ 01/2018 ಸಂಖ್ಯೆ ಆ.ಇ 47 ಸಿಎಸ್ ಎಲ್ 2017	65

ಕ್ರಮ ಸಂಖ್ಯೆ	ಅಧಿಸೂಚನೆ	ಪುಟ ಸಂಖ್ಯೆ
3	ಆದೇಶ ಸಂಖ್ಯೆ 02/2018 ಸಂಖ್ಯೆ ಆ.ಇ 47 ಸಿಎಸ್ ಎಲ್ 2017	66–67
4	ಆದೇಶ ಸಂಖ್ಯೆ 03/2018 ಸಂಖ್ಯೆ ಆ.ಇ 47 ಸಿಎಸ್ ಎಲ್ 2017	67–68
5	ಆದೇಶ ಸಂಖ್ಯೆ 04/2018 ಸಂಖ್ಯೆ ಆ.ಇ 47 ಸಿಎಸ್ ಎಲ್ 2017	68–69
6	ಆದೇಶ ಸಂಖ್ಯೆ 01/2019 ಸಂಖ್ಯೆ ಆ.ಇ 47 ಸಿಎಸ್ ಎಲ್ 2017	69–70
7	ತಿದ್ದೋಲೆ	71
8	ಆದೇಶ ಸಂಖ್ಯೆ 02/2019 ಸಂಖ್ಯೆ ಆ.ಇ 47 ಸಿಎಸ್ ಎಲ್ 2017	71–72
9	ಆದೇಶ ಸಂಖ್ಯೆ 03/2019 ಸಂಖ್ಯೆ ಆ.ಇ 47 ಸಿಎಸ್ ಎಲ್ 2017	72–73
10	ಆದೇಶ ಸಂಖ್ಯೆ 04/2019 ಸಂಖ್ಯೆ ಆ.ಇ 47 ಸಿಎಸ್ ಎಲ್ 2017	73
11	ಆದೇಶ ಸಂಖ್ಯೆ 05/2019 ಸಂಖ್ಯೆ ಆ.ಇ 47 ಸಿಎಸ್ ಎಲ್ 2017	74–75
12	ಆದೇಶ ಸಂಖ್ಯೆ 06/2019 ಸಂಖ್ಯೆ ಆ.ಇ 47 ಸಿಎಸ್ ಎಲ್ 2017	76
13	ಆದೇಶ ಸಂಖ್ಯೆ 07/2019 ಸಂಖ್ಯೆ ಆ.ಇ 47 ಸಿಎಸ್ ಎಲ್ 2017	77
14	ಆದೇಶ ಸಂಖ್ಯೆ 08/2019 ಸಂಖ್ಯೆ ಆ.ಇ 47 ಸಿಎಸ್ ಎಲ್ 2017	78
15	ಆದೇಶ ಸಂಖ್ಯೆ 09/2019 ಸಂಖ್ಯೆ ಆ.ಇ 47 ಸಿಎಸ್ ಎಲ್ 2017	79–80
16	ಆದೇಶ ಸಂಖ್ಯೆ 10/2019 ಸಂಖ್ಯೆ ಆ.ಇ 47 ಸಿಎಸ್ ಎಲ್ 2017	80–81

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (1)
ಸಂಖ್ಯೆ. ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ:28.06.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 1ರ ಉಪಪ್ರಕರಣ (3)ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 2017ರ ಜೂನ್ 28ನೇ ದಿನವನ್ನು, ಸದರಿ ಅಧಿನಿಯಮದ ಪ್ರಕರಣಗಳಾದ 1, 2, 3, 4, 5, 10, 22, 23, 24, 25, 26, 27, 28, 29, 30, 139, 146 ಮತ್ತು 164ರ ಉಪಬಂಧಗಳು ಜಾರಿಗೆ ಬರುವ ದಿನಾಂಕವನ್ನಾಗಿ, ಈ ಮೂಲಕ ಗೊತ್ತುಪಡಿಸಲಾಗಿದೆ.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (2)
ಸಂಖ್ಯೆ. ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ:29.06.2017.

ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕೇಂದ್ರ ಅಧಿನಿಯಮ 13) ಪ್ರಕರಣ 20ದೊಂದಿಗೆ ಓದಲಾದ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 146ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ನೋಂದಣಿ, ತೆರಿಗೆಯ ಸಂದಾಯ, ರಿಟರ್ನಗಳನ್ನು ಒದಗಿಸುವ, ಏಕೀಕೃತ ತೆರಿಗೆಯ ಲೆಕ್ಕಾಚಾರ ಮತ್ತು ಇತ್ಯರ್ಥ, ಮತ್ತು ವಿದ್ಯುನ್ಮಾನ ವೇ ಬಿಲ್ಲಿಗೆ, ಅನುಕೂಲ ಕಲ್ಪಿಸುವುದಕ್ಕಾಗಿ ಮತ್ತು ಸದರಿ ಪ್ರಕರಣದ ಉದ್ದೇಶಗಳಿಗಾಗಿ, ಸಾಮಾನ್ಯ ಸರಕು ಮತ್ತು ಸೇವೆಗಳ ತೆರಿಗೆಯ ವಿದ್ಯುನ್ಮಾನ ಪೋರ್ಟಲ್ ಆಗಿ **www.gst.gov.in**ಅನ್ನು ಈ ಮೂಲಕ ಅಧಿಸೂಚಿಸಿದೆ.

ವಿವರಣೆ.– ಈ ಅಧಿಸೂಚನೆಯ ಉದ್ದೇಶಗಳಿಗಾಗಿ, **www.gst.gov.in**ಎಂದರೆ, ಕಂಪನಿಗಳ ಅಧಿನಿಯಮ, 2013ರ (2013ರ ಕೇಂದ್ರ ಅಧಿನಿಯಮ 18) ಪ್ರಕರಣ 8ರ ಉಪಬಂಧಗಳ ಅಡಿಯಲ್ಲಿ ನಿಗಮಿತವಾದ ಕಂಪನಿಯಾದ ಸರಕು ಮತ್ತು ಸೇವೆಗಳ ತೆರಿಗೆ ಜಾಲದಿಂದ ನಿರ್ವಹಿಸಲ್ಪಡುವ ಜಾಲತಾಣವಾಗಿದೆ.

2. ಈ ಅಧಿಸೂಚನೆಯು 2017ರ ಜೂನ್ 28ನೇ ದಿನದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ

ಆರ್ಥಿಕ ಸಚಿವಾಲಯ

ಅಧಿಸೂಚನೆ (3)

ಸಂಖ್ಯೆ. ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ:28.06.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ "ಸದರಿ ಅಧಿನಿಯಮ" ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 10ರ ಉಪಪ್ರಕರಣ (1)ರ ಪರಂತುಕದ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಹಿಂದಿನ ಹಣಕಾಸು ವರ್ಷದಲ್ಲಿ ಎಪ್ಪತ್ತೈದು ಲಕ್ಷ ರೂಪಾಯಿಗಳನ್ನು ಮೀರದ ಸಮಗ್ರ ವಹಿವಾಟು ಹೊಂದಿದ ಒಬ್ಬ ಅರ್ಹ ನೋಂದಾಯಿತ ವ್ಯಕ್ತಿಯು, ತಾನು ಸಂದಾಯ ಮಾಡಬೇಕಾದ ರಾಜ್ಯ ತೆರಿಗೆಯ ಬದಲಾಗಿ, ಕೆಳಕಂಡ ದರದಲ್ಲಿ ಲೆಕ್ಕಹಾಕಲಾದ ಒಂದು ಮೊತ್ತದಲ್ಲಿ ಸಂದಾಯ ಮಾಡಲು ಆಯ್ಕೆ ಮಾಡಿಕೊಳ್ಳಬಹುದು,–

(i) ತಯಾರಿಕನಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿನ ವಹಿವಾಟಿನ ಶೇಕಡಾ ಒಂದರಷ್ಟು,

(ii) ಸದರಿ ಅಧಿನಿಯಮದ ಅನುಸೂಚಿ IIರ ಕಂಡಿಕೆ 6ರ ಖಂಡ (ಬಿ)ದಲ್ಲಿ ಉಲ್ಲೇಖಿಸಿರುವ ಪೂರೈಕೆಗಳನ್ನು ಮಾಡುವುದರಲ್ಲಿ ತೊಡಗಿರುವ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿನ ವಹಿವಾಟಿನ ಶೇಕಡಾ ಎರಡುವರೆಯಷ್ಟು; ಮತ್ತು

(iii) ಇತರ ಪೂರೈಕೆದಾರರುಗಳ ಸಂದರ್ಭದಲ್ಲಿ ರಾಜ್ಯದಲ್ಲಿನ ವಹಿವಾಟಿನ ಶೇಕಡಾ ಅರ್ಧದಷ್ಟು;

ಪರಂತು ಅಂಥ ವ್ಯಕ್ತಿಯು, ಈ ಕೆಳಕಂಡ ಕೋಷ್ಟಕದಲ್ಲಿನ ಕಾಲಂ (3)ರಲ್ಲಿ ನಿರ್ದಿಷ್ಟಪಡಿಸಿರುವ ವಿವರಣೆಯ ಮತ್ತು ಸದರಿ ಕೋಷ್ಟಕದ ಕಾಲಂ (2)ರ ಸಂವಾದಿ ನಮೂದಿನಲ್ಲಿ ನಿರ್ದಿಷ್ಟಪಡಿಸಿರುವ ದರದ ವಸ್ತು, ಉಪ–ಶಿರೋನಾಮೆ, ಶಿರೋನಾಮೆ ಅಥವಾ ಸಂದರ್ಭಾನುಸಾರ ಅಧ್ಯಾಯದ ಅಡಿಯಲ್ಲಿ ಬರುವ, ಸರಕುಗಳ ಉತ್ಪಾದಕನಾದರೆ, ಆ ನೋಂದಾಯಿತ ವ್ಯಕ್ತಿಯು ಸದರಿ ಅಧಿನಿಯಮದ ಪ್ರಕರಣ 10ರ ಉಪಪ್ರಕರಣ (1)ರ ಅಡಿಯಲ್ಲಿನ ರಾಜಿ ತೆರಿಗೆ ವಿಧಿಸುವಿಕೆಯನ್ನು ಆಯ್ಕೆ ಮಾಡಿಕೊಳ್ಳಲು ಅರ್ಹನಿರತಕ್ಕದ್ದಲ್ಲ.

ಕೋಷ್ಟಕ

ಕ್ರಮ ಸಂ.	**ದರದ ವಸ್ತು / ಶಿರೋನಾಮೆ/ ಉಪ–ಶಿರೋನಾಮೆ/ ಅಧ್ಯಾಯ**	**ವಿವರಣೆ**
(1)	**(2)**	**(3)**
1.	2105 00 00	ಐಸ್‌ಕ್ರೀಮ್ ಮತ್ತು ಇತರೆ ಖಾದ್ಯ ಮಂಜುಗಡ್ಡೆ, ಕೋಕೋವನ್ನು ಒಳಗೊಂಡಿರಲಿ ಅಥವಾ ಇಲ್ಲದಿರಲಿ
2.	2106 90 20	ಪಾನ್ ಮಸಾಲ
3.	24	ಎಲ್ಲಾ ಸರಕುಗಳು, ಅಂದರೆ, ತಂಬಾಕು ಮತ್ತು ತಯಾರಿಸಿದ ತಂಬಾಕಿನ ಪರ್ಯಾಯಗಳು

ವಿವರಣೆ.–

(1) ಈ ಕೋಷ್ಟಕದಲ್ಲಿ "ದರದವಸ್ತು", "ಉಪ–ಶಿರೋನಾಮೆ" "ಶಿರೋನಾಮೆ" ಮತ್ತು "ಅಧ್ಯಾಯ" ಎನ್ನತಕ್ಕದ್ದು, ಸೀಮಾಸುಂಕ ಟ್ಯಾರಿಫ್ ಅಧಿನಿಯಮ, 1975ರ (1975ರ ಕೇಂದ್ರ ಅಧಿನಿಯಮ 51) ರ ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂತೆ, ಅನುಕ್ರಮವಾಗಿ, ದರದ ವಸ್ತು, ಉಪ–ಶಿರೋನಾಮೆ, ಶಿರೋನಾಮೆ ಮತ್ತು ಅಧ್ಯಾಯವಾಗಿರತಕ್ಕದ್ದು.

(2) ಸೀಮಾಸುಂಕ ಟ್ಯಾರಿಫ್ ಅಧಿನಿಯಮ, 1975ರ (1975ರ ಕೇಂದ್ರ ಅಧಿನಿಯಮ 51) ರ ಮೊದಲನೇ ಅನುಸೂಚಿಯ ಅರ್ಥವಿವರಣೆಯ ನಿಯಮಗಳು, ಪ್ರಕರಣ ಮತ್ತು ಅಧ್ಯಾಯದ ಟಿಪ್ಪಣಿಗಳು ಹಾಗೂ ಮೊದಲನೇ

ಅನುಸೂಚಿಯ ಸಾಮಾನ್ಯ ವಿವರಣಾ ಟಿಪ್ಪಣಿಗಳನ್ನು ಒಳಗೊಂಡಂತೆ, ಆಗಬಹುದಾದಷ್ಟು ಮಟ್ಟಿಗೆ, ಈ ಅಧಿಸೂಚನೆಯ ಅರ್ಥವಿವರಣೆಗೆ ಅನ್ವಯವಾಗತಕ್ಕದ್ದು.

2. ಈ ಅಧಿಸೂಚನೆಯು 2017ರ ಜುಲೈ 1ನೇ ದಿನದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (3–ಎ/2017)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:13.10.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 10ರ ಉಪಪ್ರಕರಣ (1) ರಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯಪತ್ರ, ಭಾಗ–IVA, ಸಂ.583, ದಿನಾಂಕ 28ನೇ ಜೂನ್, 2017ರಲ್ಲಿ ಪ್ರಕಟವಾದ ಅಧಿಸೂಚನೆ ಸಂ.(3) ಆಇ 47 ಸಿಎಸ್ಎಲ್ 2017 ದಿನಾಂಕ 28ನೇ ಜೂನ್, 2017ರಲ್ಲಿ ಈ ಕೆಳಕಂಡ ತಿದ್ದುಪಡಿಗಳನ್ನು ಈ ಮೂಲಕ ಮಾಡುತ್ತದೆ, ಅಂದರೆ:–

ಸದರಿ ಅಧಿಸೂಚನೆಯಲ್ಲಿ, –

"ಎಪ್ಪತ್ತೈದು ಲಕ್ಷ" ಪದಗಳಿಗಾಗಿ "ಒಂದು ಕೋಟಿ" ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (5/2017)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:29.06.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 23ರ ಉಪಪ್ರಕರಣ (2)ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ತೆರಿಗೆದಾಯಕ ಸರಕು ಮತ್ತು ಸೇವೆಗಳು ಅಥವಾ ಅವುಗಳೆರೆಡರ ಪೂರೈಕೆಯಲ್ಲಿ ಮಾತ್ರ ತೊಡಗಿರುವ, ಅದರ ಮೇಲಿನ ಒಟ್ಟು ತೆರಿಗೆಯನ್ನು ಹಿಮ್ಮುಖ ವಿಧಿಸುವಿಕೆಯ ಆಧಾರದಲ್ಲಿ ಸಂದಾಯ ಮಾಡಲು, ಅಂಥ ಸರಕು ಮತ್ತು ಸೇವೆಗಳು ಅಥವಾ ಅವುಗಳೆರೆಡರ ಸ್ವೀಕರಿಸುವವನು, ಸದರಿ ಅಧಿನಿಯಮದ ಪ್ರಕರಣ 9ರ ಉಪಪ್ರಕರಣ (3)ರ ಅಡಿಯಲ್ಲಿ ಬಾಧ್ಯನಿರುವಂತಹ, ವ್ಯಕ್ತಿಗಳನ್ನು ಮೇಲೆ ಹೇಳಲಾದ ಅಧಿನಿಯಮದ ಅಡಿಯಲ್ಲಿ ನೋಂದಣಿ ಪಡೆಯುವುದರಿಂದ

ವಿನಾಯತಿಗೊಳಿಸಬಹುದಾದ ವ್ಯಕ್ತಿಗಳ ಪ್ರವರ್ಗ ಎಂದು ಈ ಮೂಲಕ ನಿರ್ದಿಷ್ಟಪಡಿಸುತ್ತದೆ.

2. ಈ ಅಧಿಸೂಚನೆಯು 2017ರ ಜೂನ್ 29ನೇ ದಿನದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (6/2017)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:15.09.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 23ರ ಉಪಪ್ರಕರಣ (2) ರಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರಕುಶಲ ವಸ್ತುಗಳ ತೆರಿಗೆದಾಯಕ ಪೂರೈಕೆಗಳನ್ನು ಮಾಡುತ್ತಿರುವ ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿಗಳನ್ನು,, ಮೇಲೆ ಹೇಳಿದ ಅಧಿನಿಯಮದ ಅಡಿಯಲ್ಲಿ ನೊಂದಣಿಯನ್ನು ಪಡೆಯಲು ವಿನಾಯಿತಿಸಿದ ವ್ಯಕ್ತಿಗಳ ಗುಂಪು ಎಂದು ಈ ಮೂಲಕ ನಿರ್ದಿಷ್ಟಪಡಿಸುತ್ತದೆ :

ಪರಂತು, ಅಖಿಲ ಭಾರತದ ಆಧಾರದ ಮೇಲೆ ಲೆಕ್ಕಹಾಕಬೇಕಾದ, ಅಂಥ ಪೂರೈಕೆಗಳ ಸಮಗ್ರ ಮೌಲ್ಯವು, ಒಂದು ಹಣಕಾಸು ವರ್ಷದಲ್ಲಿ ಇಪ್ಪತ್ತು ಲಕ್ಷಗಳ ಮೊತ್ತವನ್ನು ಮೀರಿರಬಾರದು.

2. ಹಿಂದಿನ ಖಂಡಿಕೆಯಲ್ಲಿ ಹೇಳಿದ ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿಗಳು ಒಂದು ಶಾಶ್ವತ ಖಾತೆಯ ಸಂಖ್ಯೆಯನ್ನು ಪಡೆಯತಕ್ಕದ್ದು ಮತ್ತು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಿಯಮ 138ರ ಉಪಬಂಧಗಳಿಗೆ ಅನುಸಾರವಾಗಿ ಒಂದು ಇ–ವೇಬಿಲ್ಲನ್ನು ಸೃಷ್ಟಿಸತಕ್ಕದ್ದು.

3. ಸದರಿ ವಿನಾಯಿತಿಯು, ಕರಕುಶಲ ವಸ್ತುಗಳ ಅಂತರ್–ರಾಜ್ಯ ತೆರಿಗೆದಾಯಕ ಪೂರೈಕೆಗಳನ್ನು ಮಾಡುತ್ತಿರುವ ಮತ್ತು ಭಾರತದ ರಾಜ್ಯಪತ್ರ, ಅಸಾಧಾರಣ, ಭಾಗ–II, ಪ್ರಕರಣ 3, ಉಪಪ್ರಕರಣ (i) ಸಂ. ಜಿ.ಎಸ್.ಆರ್.(ಇ) ದಿನಾಂಕ 14ನೇ ಸೆಪ್ಟಂಬರ್, 2017ರಲ್ಲಿ ಪ್ರಕಟವಾದ ಅಧಿಸೂಚನೆ ಸಂ.8/2017– ಏಕೀಕೃತ ತೆರಿಗೆ ದಿನಾಂಕ 14ನೇ ಸೆಪ್ಟಂಬರ್, 2017ರ ಸೌಲಭ್ಯವನ್ನು ಉಪಯೋಗಿಸುತ್ತಿರುವ ಅಂಥ ವ್ಯಕ್ತಿಗಳಿಗೆ ಲಭ್ಯವಿರತಕ್ಕದ್ದು.

ವಿವರಣೆ – ಈ ಅಧಿಸೂಚನೆಯ ಅವಶ್ಯಕತೆಗಳಿಗಾಗಿ, **"ಕರಕುಶಲ ವಸ್ತುಗಳು"** ಪದಾವಳಿಯು ಈ ಕೆಳಗಿನ ಕೋಷ್ಟಕದ ಅಂಕಣ (2)ರಲ್ಲಿ ಹೆಸರಿಸಲಾದ ಮತ್ತು ಅದಕ್ಕೆ ಅನುಗುಣವಾದ ಅಂಕಣ (3)ರಲ್ಲಿ ಹೆಸರಿಸಿದ ಹಾರ್ಮೊನೈಸ್ಡ್ ಸಿಸ್ಟಂ ಆಫ್ ನಾಮೆನ್ಕ್ಲೇಚರ್ (ಹೆಚ್ಎಸ್ಎನ್) ಕೋಡ್, ಕುಶಲಕರ್ಮಿಗಳು, ಯಾವುದಾದರೂ ಯಂತ್ರಗಳನ್ನು ತಯಾರಿಕೆಯಲ್ಲಿ ಸ್ವಲ್ಪ ಮಟ್ಟಿಗೆ ಬಳಸಿದರಾದರೂ ಸಹ, ಬಹುತೇಕ ಕೈಗಳಿಂದ ಮಾಡಿದ ಉತ್ಪನ್ನಗಳು ಎಂದು ಅರ್ಥೈಸುವುದು:–

ಕೋಷ್ಟಕ

ಕ್ರ.ಸಂ	ಉತ್ಪನ್ನಗಳು	ಹೆಚ್ ಎಸ್ ಎನ್ ಕೋಡ್
(1)	(2)	(3)
1.	ಚರ್ಮ ವಸ್ತುಗಳು (ಬ್ಯಾಗ್‌ಗಳು, ಪರ್ಸ್‌ಗಳಯ, ಸ್ಯಾಡ್ಲೆರಿ, ಹಾರ್ನೆಸ್, ಗಾರ್ಮೆಂಟ್‌ಗಳನ್ನು ಒಳಗೊಂಡಂತೆ)	4201, 4202, 4203
2.	ಕೆತ್ತಲಾದ ಮರದ ಉತ್ಪನ್ನಗಳು (ಬಾಕ್ಸ್‌ಗಳು, ಇನ್ಲೇ ಕೆಲಸ, ಕೇಸುಗಳು, ಕ್ಯಾಸ್ಕುಗಳನ್ನು ಒಳಗೊಂಡಂತೆ)	4415, 4416
3.	ಕೆತ್ತಲಾದ ಮರದ ಉತ್ಪನ್ನಗಳು (ಟೇಬಲ್ ಮತ್ತು ಕಿಚನ್‌ವೇರ್ ಒಳಗೊಂಡಂತೆ)	4419
4.	ಕೆತ್ತಲಾದ ಮರದ ಉತ್ಪನ್ನಗಳು	4420
5.	ಮರದ ಟರ್ನಿಂಗ್ ಮತ್ತು ಲ್ಯಾಕರ್ ವೇರ್	4421
6.	ಮಿದಿರಿನ ಉತ್ಪನ್ನಗಳು (ಡೆಕೊರೇಟೀವ್ ಮತ್ತು ಯುಟಿಲಿಟಿ ಐಟಂಗಳು)	46
7.	ಹುಲ್ಲು, ಎಲೆ ಮತ್ತು ರೀಡ್ ಮತ್ತು ಫೈಬರ್ ಉತ್ಪನ್ನಗಳು, ಚಾಪೆಗಳು, ಪೌಚುಗಳು, ವ್ಯಾಲೆಟ್‌ಗಳು	4601, 4602
8.	ಪೇಪರ್‌ಮಾಶೆ ಉತ್ಪನ್ನಗಳು	4823
9.	ಜವಳಿ (ಕೈಮಗ್ಗ ಉತ್ಪನ್ನಗಳು)	50, 58, 62, 63 ಒಳಗೊಂಡಂತೆ
10.	ಜವಳಿ ಕೈ ಪ್ರಿಂಟಿಂಗ್	50, 52, 54
11.	ಝರಿ ದಾರ	5605
12.	ಕಾರ್ಪೆಟ್, ರಗ್ಗು ಮತ್ತು ಡರ್ರಿಗಳು	57
13.	ಜವಳಿ ಕೈ ಎಂಬ್ರಾಯ್ಡರಿ	58
14.	ರಂಗ ಪೋಷಾಕುಗಳು	61, 62, 63
15.	ಕಾಯರ್ ಉತ್ಪನ್ನಗಳು (ಚಾಪೆಗಳು ಮತ್ತು ಹಾಸಿಗೆಗಳನ್ನು ಒಳಗೊಂಡಂತೆ)	5705, 9404
16.	ಚರ್ಮದ ಪಾದರಕ್ಷೆಗಳು	6403, 6405
17.	ಕೆತ್ತಿದ ಶಿಲಾ ಉತ್ಪನ್ನಗಳು (ವಿಗ್ರಹಗಳು, ಮೂರ್ತಿಗಳು, ಪ್ರಾಣಿಗಳ ಆಕೃತಿಗಳು, ಬರವಣಿಗೆ ಸೆಟ್‌ಗಳು, ಆಷ್‌ಟ್ರೇ, ಮೋಂಬತ್ತಿ ಸ್ಟಾಂಡುಗಳು)	6802
18.	ಶಿಲೆಗಳ ಇನ್‌ಲೇ ವರ್ಕ್	68
19.	ಕುಂಬಾರಿಕೆ ಮತ್ತು ಜೇಡಿಯ ಉತ್ಪನ್ನಗಳು, ಟೆರ್ರಕೋಟಾ ಸೇರಿದಂತೆ	6901, 6909, 6911, 6912, 6913, 6914
20.	ಮೆಟಲ್ ಟೇಬಲ್ ಮತ್ತು ಕಿಚನ್ ವೇರ್ (ತಾಮ್ರ, ಕಂಚಿನ ವೇರ್)	7418
21.	ಮೆಟಲ್ ಮೂರ್ತಿಗಳು, ವಿಗ್ರಹಗಳು/ ಮೂರ್ತಿಗಳು ವಾಜುಗಳು, ಅರ್ನ್‌ಗಳು ಮತ್ತು ಕ್ರಾಸುಗಳು ಅಧ್ಯಾಯ 73 ಮತ್ತು 74ರ ಮೆಟಲ್‌ಗಳ ಡೆಕೊರೇಷನ್‌ಗಾಗಿ ಉಪಯೋಗಿದವಂತಹುದು	8306
22.	ಮೆಟಲ್ ಬಿದ್ರಿ ವೇರ್	8306
23.	ಸಂಗೀತ ಉಪಕರಣಗಳು	92
24.	ಕೊಂಬು ಮತ್ತು ಮೂಳೆಯ ಉತ್ಪನ್ನಗಳು	96
25.	ಶಂಖ ಶೆಲ್ ಕ್ರಾಫ್ಟ್‌ಗಳು	96
26.	ಬಿದಿರಿನ ಫರ್ನಿಚರ್, ಕೆನ್/ ರಟ್ಟನ್ ಫರ್ನಿಚರ್	

27.	ಗೊಂಬೆಗಳು ಮತ್ತು ಆಟಿಕೆಗಳು	9503
28.	ಜಾನಪದ ವರ್ಣಚಿತ್ರಗಳು, ಮಧುಬನಿ, ಪಟಚಿತ್ರ, ರಾಜಾಸ್ಥಾನಿ ಸೂಕ್ಷ್ಮಕಲೆ	97

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (6–ಎ/2017)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:13.10.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 23ರ ಉಪಪ್ರಕರಣ (2) ರಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯಪತ್ರ, ಭಾಗ–IVA, ಸಂ.887, ದಿನಾಂಕ 15ನೇ ಸೆಪ್ಟಂಬರ್, 2017ರಲ್ಲಿ ಪ್ರಕಟವಾದ ಅಧಿಸೂಚನೆ (6/2017) ಸಂ. ಆಇ 47 ಸಿಎಸ್ಎಲ್ 2017 ದಿನಾಂಕ 15ನೇ ಸೆಪ್ಟಂಬರ್, 2017ರಲ್ಲಿ ಈ ಕೆಳಕಂಡ ತಿದ್ದುಪಡಿಗಳನ್ನು ಈ ಮೂಲಕ ಮಾಡಿದೆ, ಅಂದರೆ:–

2. ಸದರಿ ಅಧಿಸೂಚನೆಯಲ್ಲಿ, ಕೋಷ್ಟಕದಲ್ಲಿ –

(1) ಕ್ರಮ ಸಂಖ್ಯೆ 9 ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳಿಗಾಗಿ, ಈ ಕೆಳಕಂಡವುಗಳನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"9.	ಜವಳಿ (ಕೈಮಗ್ಗ ಉತ್ಪನ್ನಗಳು), ಕೈಯಿಂದ ಮಾಡಿದ ಶಾಲುಗಳು, ಸ್ಟೋಲ್‌ಗಳು ಮತ್ತು ಸ್ಕಾರ್ವ್ಸಗಳು	50, 58, 61, 62, 63 ಒಳಗೊಂಡಂತೆ";

(2) ಕ್ರಮ ಸಂಖ್ಯೆ 28ರ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ನಂತರ, ಈ ಕೆಳಗಿನದ್ದನ್ನು ಸೇರಿಸತಕ್ಕದ್ದು, ಅಂದರೆ:–

"29.	ಚೈನ್ ಸ್ಟಿಚ್	ಯಾವುದೇ ಅಧ್ಯಾಯ
30.	ಕ್ರಿವೆಲ್, ನಾಮ್ಡಾ, ಗಬ್ಬ	ಯಾವುದೇ ಅಧ್ಯಾಯ
31.	ವಿಕರ್ ವಿಲ್ಲೋ ಉತ್ಪನ್ನಗಳು	ಯಾವುದೇ ಅಧ್ಯಾಯ
32.	ತೋರಣ್	ಯಾವುದೇ ಅಧ್ಯಾಯ
33.	ಶೋಲಾದಿಂದ ಮಾಡಿದ ಉತ್ಪನ್ನಗಳು	ಯಾವುದೇ ಅಧ್ಯಾಯ"

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (7/2017)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:15.09.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 1ರ ಉಪಪ್ರಕರಣ (3)ರಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಸರ್ಕಾರವು, 2017ರ ಸೆಪ್ಟಂಬರ್ 18ನೆ ದಿನವನ್ನು, ಸದರಿ ಅಧಿನಿಯಮದ ಪ್ರಕರಣ 51ರ ಉಪಪ್ರಕರಣ (1)ರ ಖಂಡ (ಎ) ಮತ್ತು (ಬಿ) ಯಲ್ಲಿ ನಿರ್ದಿಷ್ಟಪಡಿಸಿದ ವ್ಯಕ್ತಿಗಳಿಗೆ ಮತ್ತು ಸದರಿ ಅಧಿನಿಯಮದ ಪ್ರಕರಣ 51ರ ಉಪಪ್ರಕರಣ (1)ರ ಖಂಡ (ಡಿ)ಯ ಅಡಿಯಲ್ಲಿ ಈ ಕೆಳಗೆ ನಿರ್ದಿಷ್ಟ ಪಡಿಸಿದ ವ್ಯಕ್ತಿಗಳಿಗೆ, ಅಂದರೆ:–

(ಎ) ಯಾವುದೇ ಕಾರ್ಯವನ್ನು ಮಾಡಲು, ಮಾಲಿಕತ್ವ ಅಥವಾ ನಿಯಂತ್ರಣದ ವಿಧಾನದಲ್ಲಿ ಶೇಕಡಾ ಐವತ್ತೊಂದು ಅಥವಾ ಹೆಚ್ಚಿನ ಭಾಗವಹಿಸುವಿಕೆಯಿರುವ –

(i) ಸಂಸತ್ತಿನ ಅಥವಾ ಒಂದು ರಾಜ್ಯದ ಶಾಸಕಾಂಗದ ಅಧಿನಿಯಮದಿಂದ ಸ್ಥಾಪಿತವಾದ; ಅಥವಾ

(ii) ಯಾವುದೇ ಸರ್ಕಾರದಿಂದ ಸ್ಥಾಪಿಸಲ್ಪಟ್ಟ;

ಒಂದು ಪ್ರಾಧಿಕಾರ ಅಥವಾ ಒಂದು ಮಂಡಳಿ ಅಥವಾ ಯಾವುದೇ ಇತರ ಸಂಸ್ಥೆ;

(ಬಿ) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ, ಸಂಘಗಳ ನೋಂದಣಿ ಅಧಿನಿಯಮ, 1860 (1860ರ ಕೇಂದ್ರ ಅಧಿನಿಯಮ)ದ ಅಡಿಯಲ್ಲಿ ಸ್ಥಾಪಿತವಾದ ಸಂಘ;

(ಸಿ) ಸಾರ್ವಜನಿಕ ವಲಯದ ಉದ್ದಿಮೆ (ಪಬ್ಲಿಕ್ ಸೆಕ್ಟಾರ್ ಅಂಡರ್ಟೇಕಿಂಗ್)

ಸಂಬಂಧಿಸಿದಂತೆ, ಸದರಿ ಅಧಿನಿಯಮದ ಪ್ರಕರಣ 51ರ ಉಪಪ್ರಕರಣ (1)ರ ಉಪಬಂಧಗಳು ಜಾರಿಗೆ ಬರುವ ದಿನಾಂಕವೆಂದು ನಿಯಮಿತಗೊಳಿಸುತ್ತದೆ:

ಪರಂತು, ಸದರಿ ವ್ಯಕ್ತಿಗಳು ತೆರಿಗೆದಾಯಕ ಸರಕು ಅಥವಾ ಸೇವೆಗಳ ಪೂರೈಕೆದಾರನಿಗೆ ಮಾಡುವ ಪಾವತಿಯಿಂದ ಅಥವಾ ಜಮೆಯಿಂದ, ಸರ್ಕಾರದಿಂದ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಮುಂದೆ ಅಧಿಸೂಚಿಸಲಾಗುವ ದಿನಾಂಕದಿಂದ ಜಾರಿಗೆ ಬರುವಂತೆ, ತೆರಿಗೆಯನ್ನು ಮುರುಗಡೆ ಮಾಡಲು ಬಾಧ್ಯನಾಗಿರುತ್ತಾನೆ.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (9/2017)
ಸಂಖ್ಯೆ. ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ:29.06.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 1ರ ಉಪಪ್ರಕರಣ (3)ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 2017ರ ಜುಲೈ 1ನೇ ದಿನವನ್ನು, ಸದರಿ ಅಧಿನಿಯಮದ 6ರಿಂದ 9, 11ರಿಂದ 21, 31ರಿಂದ 41, ಪ್ರಕರಣ 42ರ ಉಪಪ್ರಕರಣ (9)ರ ಪರಂತುಕವನು ಹೊರತುಪಡಿಸಿದಂತೆ 42, ಪ್ರಕರಣ 43ರ ಉಪಪ್ರಕರಣ (9)ರ ಪರಂತುಕವನು ಹೊರತುಪಡಿಸಿದಂತೆ 43, 44 ರಿಂದ 50, 53 ರಿಂದ 138, 140 ರಿಂದ 145, 147 ರಿಂದ 163, 165 ರಿಂದ 174ರ ಉಪಬಂಧಗಳು ಜಾರಿಗೆ ಬರುವ ದಿನಾಂಕವನ್ನಾಗಿ, ಈ ಮೂಲಕ ಗೊತ್ತುಪಡಿಸಿದೆ.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (13/2017)
ಸಂಖ್ಯೆ. ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ:29.06.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕ ಅಧಿನಿಯಮ 27) ಪ್ರಕರಣ 50ರ ಉಪಪ್ರಕರಣ (1) ಮತ್ತು (3) ಹಾಗೂ ಪ್ರಕರಣ 54ರ ಉಪಪ್ರಕರಣ (12) ಮತ್ತು ಪ್ರಕರಣ 56ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಸರಕು ಮತ್ತು ಸೇವೆಗಳ ತೆರಿಗೆ ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಈ ಕೆಳಕಂಡ ಕೋಷ್ಠಕದ ಅಂಕಣ (2)ರಲ್ಲಿ ನಿರ್ದಿಷ್ಟಪಡಿಸಿರುವ ಪ್ರಕರಣಗಳ ಉದ್ದೇಶಗಳಿಗಾಗಿ, ಸದರಿ ಕೋಷ್ಠಕದ ಅಂಕಣ (3)ರ ಸಂವಾದಿ ನಮೂದಿನಲ್ಲಿ ನಮೂದಿಸಲಾಗಿರುವಂತೆ ವಾರ್ಷಿಕವಾಗಿ ಬಡ್ಡಿ ದರವನ್ನು ಈ ಮೂಲಕ ನಿಗಿಧಿಪಡಿಸುತ್ತದೆ.

ಕೋಷ್ಠಕ

ಕ್ರಮ ಸಂಖ್ಯೆ	ಪ್ರಕರಣ	ಬಡ್ಡಿಯ ದರ
(1)	(2)	(3)
1.	ಪ್ರಕರಣ 50ರ ಉಪಪ್ರಕರಣ (1)	ಶೇಕಡ 18
2.	ಪ್ರಕರಣ 50ರ ಉಪಪ್ರಕರಣ (3)	ಶೇಕಡ 24
3.	ಪ್ರಕರಣ 54ರ ಉಪಪ್ರಕರಣ (12)	ಶೇಕಡ 6
4.	ಪ್ರಕರಣ 56	ಶೇಕಡ 6
5.	ಪ್ರಕರಣ 56ರ ಪರಂತುಕ	ಶೇಕಡ 9

2. ಈ ಅಧಿಸೂಚನೆಯು 2017ರ ಜುಲೈ 1ನೇ ದಿನದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (14/2017)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:13.10.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ "ಕರ್ನಾಟಕ ಜಿಎಸ್ಟಿ ಅಧಿನಿಯಮ" ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 6ರ ಉಪಪ್ರಕರಣ (1)ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ಮಂಡಳಿಯಲ್ಲಿನ ಆಯುಕ್ತರಿಂದ ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ 12) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ "ಸಿಜಿಎಸ್ಟಿ ಅಧಿನಿಯಮ" ಎಂದು ಉಲ್ಲೇಖಿಸಲಾಗಿದೆ)ದ ಪ್ರಕರಣ 54 ಅಥವಾ ಪ್ರಕರಣ 55ರ ಉದ್ದೇಶಗಳಿಗಾಗಿ ಯುಕ್ತ ಅಧಿಕಾರಿಗಳೆಂದು ಪ್ರಾಧಿಕೃತಗೊಳಿಸಿದ ಸಿಜಿಎಸ್ಟಿ ಅಧಿನಿಯಮದ ಅಡಿಯಲ್ಲಿ ನೇಮಕವಾದ ಅಧಿಕಾರಿಗಳನ್ನು (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ "ಸದರಿ ಅಧಿಕಾರಿಗಳು" ಎಂದು ಉಲ್ಲೇಖಿಸಲಾಗಿದೆ), ಸದರಿ ಅಧಿಕಾರಿಗಳ ಭೌಗೋಳಿಕ ಕ್ಷೇತ್ರವ್ಯಾಪ್ತಿಯಲ್ಲಿ ಸ್ಥಿತರಾಗಿರುವ ಸದರಿ ಅಧಿಕಾರಿಗಳಿಗೆ ಮರುಪಾವತಿಯ ಮಂಜೂರಾತಿಗಾಗಿ ಅರ್ಜಿ ಸಲ್ಲಿಸುವ ನೋಂದಾಯಿತ ವರ್ತಕರಿಗೆ ಸಂಬಂಧಿಸಿದಂತೆ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ ಪ್ರಕರಣ 54 ಅಥವಾ ಪ್ರಕರಣ 55ರ, ಅದರಡಿಯಲ್ಲಿ ಮಾಡಿದ ನಿಯಮಗಳೊಂದಿಗೆ ಓದಿಕೊಂಡಂತೆ, ಅಡಿಯಲ್ಲಿ ಮರುಪಾವತಿಯನ್ನು ಮಂಜೂರು ಮಾಡುವ ಉದ್ದೇಶಕ್ಕಾಗಿ ಯುಕ್ತ ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (15/2017)
ಸಂಖ್ಯೆ. ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ:13.10.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ "ಸದರಿ ಅಧಿನಿಯಮ" ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 148ರಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ಹಿಂದಿನ ಹಣಕಾಸು ವರ್ಷದಲ್ಲಿ ಒಂದು ಕೋಟಿ ಐವತ್ತು ಲಕ್ಷಗಳನ್ನು ಮೀರದ ಸಮಗ್ರ ವಹಿವಾಟು ಹೊಂದಿರುವ ಮತ್ತು ಸದರಿ ಅಧಿನಿಯಮದ ಪ್ರಕರಣ 10ರಡಿಯಲ್ಲಿ ರಾಜೀ ವಿಧಿಸುವಿಕೆಗೆ ಆಯ್ಕೆ ಮಾಡದ ನೋಂದಾಯಿತ ವ್ಯಕ್ತಿಗಳನ್ನು, ಸದರಿ ಅಧಿನಿಯಮದ ಪ್ರಕರಣ 14ರ ಉಪಬಂಧಗಳನ್ನು ಆಕರ್ಷಿಸುವ ಸಂದರ್ಭಗಳಲ್ಲಿ ಒಳಗೊಂಡಂತೆ, ಸದರಿ ಅಧಿನಿಯಮದ ಪ್ರಕರಣ 12ರ ಉಪಪ್ರಕರಣ (2)ರ ಖಂಡ (ಎ)ನಲ್ಲಿ ಪೂರೈಕೆಯ ಸಮಯವೆಂದು ನಿರ್ದಿಷ್ಟ ಪಡಿಸಿದಂದು ಸರಕುಗಳ ಹೊರಮುಖ ಪೂರೈಕೆಗಳ ಮೇಲೆ ರಾಜ್ಯ ತೆರಿಗೆಯನ್ನು ಭರಿಸತಕ್ಕ ವ್ಯಕ್ತಿಗಳ ಸಮೂಹವೆಂದು ಅಧಿಸೂಚಿಸುತ್ತದೆ ಮತ್ತು ಅವರು ಸದರಿ ಅಧಿನಿಯಮದ ಅಧ್ಯಾಯ IXರಲ್ಲಿ ಸೂಚಿಸಿದ ಮತ್ತು ಅದರಡಿಯಲ್ಲಿ ಮಾಡಲಾದ ನಿಯಮಗಳ ಪ್ರಕಾರ ವಿವರಗಳನ್ನು ಮತ್ತು ರಿಟರ್ನ್‌ಗಳನ್ನು ಸಲ್ಲಿಸತಕ್ಕದ್ದು ಮತ್ತು ಅಂಥ ನೋಂದಾಯಿತ ವ್ಯಕ್ತಿಗಳ ಸಮೂಹದಿಂದ ತೆರಿಗೆಯ ಪಾವತಿಗಾಗಿ ನಿಯಮಿಸಿದ ಅವಧಿಯು ಸದರಿ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿದ ಅಂಥದ್ದಾಗಿರತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (17/2017)
ಸಂಖ್ಯೆ. ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ:19.10.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 147ರಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ಕೆಳಗಿನ ಕೋಷ್ಟಕದ ಅಂಕಣ (2)ರಲ್ಲಿ ನಮೂದುಸಿರುವ ಸರಕುಗಳ ಪೂರೈಕೆಗಳನ್ನು ಭಾವಿತ ರಫ್ತುಗಳೆಂದು ಅಧಿಸೂಚಿಸುತ್ತದೆ, ಅಂದರೆ:–

ಕ್ರ.ಸಂ.	ಪೂರೈಕೆಯ ವಿವರಣೆ
(1)	(2)
1.	ಮುಂಗಡ ಪ್ರಾಧೀಕರಣೆಯ ಎದುರು ಒಬ್ಬ ನೋಂದಾಯಿತ ವ್ಯಕ್ತಿಯಿಂದಾದ ಸರಕುಗಳ ಪೂರೈಕೆ
2.	ರಫ್ತು ಉತ್ತೇಜನ ಬಂಡವಾಳ ಸರಕುಗಳ ಪ್ರಾಧೀಕರಣೆಯ ಎದುರು ಒಬ್ಬ ನೋಂದಾಯಿತ ವ್ಯಕ್ತಿಯಿಂದಾದ ಬಂಡವಾಳ ಸರಕುಗಳ ಪೂರೈಕೆ

3.	ರಫ್ತು ಓರಿಯಂಟೆಡ್ ಘಟಕಕ್ಕೆ ಒಬ್ಬ ನೋಂದಾಯಿತ ವ್ಯಕ್ತಿಯಿಂದಾದ ಸರಕುಗಳ ಪೂರೈಕೆ
4.	ದಿನಾಂಕ ಜೂನ್ 30, 2017ರ ಅಧಿಸೂಚನೆ ಸಂ. 50/2017– ಸೀಮಾಸುಂಕ (ತಿದ್ದುಪಡಿಯಾದಂತೆ) ಮುಂಗಡ ಪ್ರಾಧೀಕರಣೆಯ ಎದುರು ಒಂದು ಬ್ಯಾಂಕ್ ಅಥವಾ ಪಬ್ಲಿಕ್ ಸೆಕ್ಟರ್ ಅಂಡರ್‌ಟೇಕಿಂಗ್‌ನಿಂದ ಚಿನ್ನದ ಪೂರೈಕೆ

ವಿವರಣೆ:–

ಈ ಅಧಿಸೂಚನೆಯ ಉದ್ದೇಶಗಳಿಗಾಗಿ, –

(ಎ) **"ಮುಂಗಡ ಪ್ರಾಧೀಕರಣ"**ವನ್ನು ಆಮದಿಗಾಗಿ ಅಥವಾ ಭೌತಿಕ ರಫ್ತುಗಳಿಗಾಗಿ ಪ್ರೀ–ಇಂಪೋರ್ಟ್ ಆಧಾರದ ಮೇಲೆ ಹೂಡುವಳಿಗಳ ರಾಷ್ಟ್ರದೊಳಗಿನ ಪಡೆಯುವಿಕೆಗಾಗಿ ಫಾರಿನ್ ಟ್ರೇಡ್ ಪಾಲಿಸಿ 2015–20ರ ಅಧ್ಯಾಯ 4ರಡಿಯಲ್ಲಿ ಫಾರಿನ್ ಟ್ರೇಡ್‌ನ ಡೈರೆಕ್ಟರ್ ಜನರಲ್ ನೀಡಿದ ಒಂದು ಪ್ರಾಧೀಕರಣವೆಂದು ಅರ್ಥೈಸುವುದು.

(ಬಿ) ರಫ್ತು ಉತ್ತೇಜನ ಬಂಡವಾಳ ಸರಕುಗಳ ಪ್ರಾಧೀಕರಣವನ್ನು ಭೌತಿಕ ರಫ್ತುಗಳಿಗಾಗಿ ಬಂಡವಾಳ ಸರಕುಗಳ ಆಮದಿಗಾಗಿ ಫಾರಿನ್ ಟ್ರೇಡ್ ಪಾಲಿಸಿ 2015–20ರ ಅಧ್ಯಾಯ 5ರಡಿಯಲ್ಲಿ ಫಾರಿನ್ ಟ್ರೇಡ್‌ನ ಡೈರೆಕ್ಟರ್ ಜನರಲ್ ನೀಡಿದ ಒಂದು ಪ್ರಾಧೀಕರಣವೆಂದು ಅರ್ಥೈಸುವುದು.

(ಸಿ) **"ರಫ್ತು ಓರಿಯಂಟೆಡ್ ಘಟಕ"**ವೆಂದರೆ ಫಾರಿನ್ ಟ್ರೇಡ್ ಪಾಲಿಸಿ 2015–20ರ ಅಧ್ಯಾಯ 5ರಡಿಯಲ್ಲಿನ ಉಪಬಂಧಗಳಿಗನುಸಾರವಾಗಿ ಒಪ್ಪಲಾದ ಒಂದು ರಫ್ತು ಓರಿಯಂಟೆಡ್ ಘಟಕ ಅಥವಾ ವಿದ್ಯುನ್ಮಾನ ಹಾರ್ಡ್‌ವೇರ್ ತಾಂತ್ರಿಕ ಪಾರ್ಕ್ ಘಟಕ ಅಥವಾ ಸಾಫ್ಟ್‌ವೇರ್ ತಾಂತ್ರಿಕ ಪಾರ್ಕ್ ಘಟಕ ಅಥವಾ ಜೀವ–ತಾಂತ್ರಿಕ ಪಾರ್ಕ್ ಘಟಕ.

2. ಈ ಅಧಿಸೂಚನೆಯು 2017ರ ಅಕ್ಟೋಬರ್ 18ನೇ ದಿನದಿಂದ ಜಾರಿಗೆ ಬಂದಿರುವುದೆಂದು ಪರಿಭಾವಿಸತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (18/2017)
ಸಂಖ್ಯೆ. ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ:19.10.2017.

ಅಧಿಸೂಚನೆ ಸಂಖ್ಯೆ (17/2017) ಆಇ 47 ಸಿಎಸ್‌ಎಲ್ 2017 ದಿನಾಂಕ 19ನೇ ಅಕ್ಟೋಬರ್, 2017 ದೊಡನೆ ಓದಿಕೊಂಡ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಿಯಮ 89ರ ಉಪನಿಯಮ (2)ರ ಖಂಡ (ಜಿ)ಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಕೆಳಗಿನ ಕೋಷ್ಟಕದ ಅಂಕಣ (2)ರಲ್ಲಿ ವಿವರಿಸಲಾದ ಕೆಳಗಿನವುಗಳನ್ನು ಮರುಪಾವತಿಯನ್ನು ಕ್ಲೇಮು ಮಾಡುವುದಕ್ಕಾಗಿ ಭಾವಿತ ರಫ್ತುಗಳ ಪೂರೈಕೆಗಳ ಪೂರೈಕೆದಾರನಿಂದ ಹಾಜರುಪಡಿಸಲು ಅವಶ್ಯವಿರುವ ಪುರಾವೆಗಳೆಂದು ಅಧಿಸೂಚಿಸುತ್ತದೆ, ಅಂದರೆ:–

ಕೋಷ್ಟಕ

ಕ್ರ.ಸಂ	ಪುರಾವೆ
(1)	(2)
1.	ಮುಂಗಡ ಪ್ರಾಧೀಕರಣವನ್ನು ಹೊಂದಿರುವ ಅಥವಾ ಸಂದರ್ಭಾನುಸಾರವಾಗಿ, ರಫ್ತು ಉತ್ತೇಜನ ಬಂಡವಾಳ ಸರಕುಗಳ ಪ್ರಾಧೀಕರಣವನ್ನು ಹೊಂದಿರುವವನ ಕ್ಷೇತ್ರವ್ಯಾಪ್ತಿಯ ತೆರಿಗೆ ಅಧಿಕಾರಿಯಿಂದ, ಸದರಿ ಭಾವಿತ ರಫ್ತುಗಳನ್ನು ಸದರಿ ಮುಂಗಡ ಪ್ರಾಧೀಕರಣವನ್ನು ಹೊಂದಿರುವವನು ಅಥವಾ ರಫ್ತು ಉತ್ತೇಜನ ಬಂಡವಾಳ ಸರಕುಗಳ ಪ್ರಾಧೀಕರಣವನ್ನು ಹೊಂದಿರುವವನು ಸ್ವೀಕರಿಸಿದ್ದಾನೆಂಬುದಕ್ಕೆ, ಸ್ವೀಕೃತಿ ಅಥವಾ ಸ್ವೀಕರಿಸುವ ರಫ್ತು ಓರಿಯಂಟೆಡ್ ಘಟಕದಿಂದ ಸದರಿ ಭಾವಿತ ರಫ್ತುಗಳ ಪೂರೈಕೆಗಳನ್ನು ಅದು ಸ್ವೀಕರಿಸಿದೆ ಎಂದು ಸಹಿಮಾಡಿದ, ಯಾವುದರಡಿಯಲ್ಲಿ ಪೂರೈಕೆದಾರನು ಮಾಡಿರುವ ಅಂಥ ಪೂರೈಕೆಗಳ ತೆರಿಗೆ ಬೆಲೆಪಟ್ಟಿಯ ಪ್ರತಿ
2.	ಭಾವಿತ ರಫ್ತು ಪೂರೈಕೆಗಳನ್ನು ಸ್ವೀಕರಿಸುವವನಿಂದ, ಅಂಥ ಪೂರೈಕೆಗಳ ಮೇಲಿನ ಹೂಡುವಳಿ ತೆರಿಗೆ ಜಮೆಯನ್ನು ತನ್ನಿಂದ ಉಪಯೋಗಿಸಲಾಗಿಲ್ಲವೆಂಬುದಕ್ಕೆ, ಒಂದು ಮುಚ್ಚಳಿಕೆ
3.	ಭಾವಿತ ರಫ್ತು ಪೂರೈಕೆಗಳನ್ನು ಸ್ವೀಕರಿಸುವವನಿಂದ, ಅಂಥ ಪೂರೈಕೆಗಳಿಗೆ ಸಂಬಂಧಿಸಿದಂತೆ ತಾನು ಮರುಪಾವತಿಯನ್ನು ಕ್ಲೇಮು ಮಾಡುವುದಿಲ್ಲವೆಂದೂ ಮತ್ತು ಪೂರೈಕೆದಾರನು ಮರುಪಾವತಿಯನ್ನು ಕ್ಲೇಮು ಮಾಡಬಹುದೆಂಬುದಕ್ಕೆ, ಒಂದು ಮುಚ್ಚಳಿಕೆ

2. ಈ ಅಧಿಸೂಚನೆಯು 2017ರ ಅಕ್ಟೋಬರ್ 18ನೇ ದಿನದಿಂದ ಜಾರಿಗೆ ಬಂದಿರುವುದೆಂದು ಪರಿಭಾವಿಸತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (19/2017)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:15.11.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 148ರಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ಹಿಂದಿನ ಹಣಕಾಸು ವರ್ಷದಲ್ಲಿ ಅಥವಾ ಪ್ರಸಕ್ತ ಹಣಕಾಸು ವರ್ಷದಲ್ಲಿ ರೂ.1.5 ಕೋಟಿಗಳವರೆಗಿನ ಸಮಗ್ರ ವಹಿವಾಟು ಹೊಂದಿರುವ ನೋಂದಾಯಿತ ವ್ಯಕ್ತಿಗಳನ್ನು, ಸರಕು ಅಥವಾ ಸೇವೆಗಳು ಅಥವಾ ಅವೆರಡರ ಹೊರಮುಖ ಪೂರೈಕೆಗಳ ವಿವರಗಳನ್ನು ಸಲ್ಲಿಸುವುದಕ್ಕಾಗಿ ಈ ಕೆಳಗೆ ವಿವರಿಸಿದ ವಿಶೇಷ ವಿಧಾನವನ್ನು ಪಾಲಿಸತಕ್ಕ ನೋಂದಾಯಿತ ವ್ಯಕ್ತಿಗಳ ಸಮೂಹವೆಂದು ಅಧಿಸೂಚಿಸುತ್ತದೆ.

2. ಸದರಿ ವ್ಯಕ್ತಿಗಳು ಕೆಳಗಿನ ಕೋಷ್ಟಕದ ಅಂಕಣ (2)ರಲ್ಲಿ ನಿರ್ದಿಷ್ಟಪಡಿಸಿದಂತಹ ತ್ರೈಮಾಸಿಕದಲ್ಲಿ ಮಾಡಿದ ಸರಕು ಅಥವಾ ಸೇವೆಗಳು ಅಥವಾ ಅವೆರಡರ ಹೊರಮುಖ ಪೂರೈಕೆಯ ವಿವರಗಳನ್ನು ನಮೂನೆ ಜಿಎಸ್‌ಟಿಆರ್–2ರಲ್ಲಿ, ಅಂಕಣ (3)ರಲ್ಲಿ ಸಂಬಂಧಿಸಿದ ನಮೂದಿಗೆ ನಿರ್ದಿಷ್ಟಪಡಿಸಿದ ಕಾಲಾವಧಿಯವರೆಗೆ ಸಲ್ಲಿಸತಕ್ಕದ್ದು, ಅಂದರೆ:–

ಕೋಷ್ಟಕ

ಕ್ರ. ಸಂ.	ನಮೂನೆ ಜಿಎಸ್‌ಟಿಆರ್–1ರಲ್ಲಿ ವಿವರಗಳನ್ನು ಸಲ್ಲಿಸಲಾಗಿರುವಂತಹ ತ್ರೈಮಾಸಿಕ	ನಮೂನೆ ಜಿಎಸ್‌ಟಿಆರ್–1ರಲ್ಲಿ ವಿವರಗಳನ್ನು ಸಲ್ಲಿಸುವುದಕ್ಕಾಗಿ ಕಾಲಾವಧಿ
(1)	(2)	(3)
1.	ಜುಲೈ – ಸೆಪ್ಟಂಬರ್, 2017	31ನೇ ಡಿಸೆಂಬರ್, 2017
2.	ಅಕ್ಟೋಬರ್ – ಡಿಸೆಂಬರ್, 2017	15ನೇ ಫೆಬ್ರವರಿ, 2018
3.	ಜನವರಿ – ಮಾರ್ಚ್, 2018	30ನೇ ಏಪ್ರಿಲ್, 2018

3. ಜುಲೈ 2017 ರಿಂದ ಮಾರ್ಚ್ 2018ರ ತಿಂಗಳುಗಳಿಗಾಗಿ, ಪ್ರಕರಣ 38ರ ಉಪಪ್ರಕರಣ (2) ಅಥವಾ ಸಂದರ್ಭಾನುಸಾರವಾಗಿ, ಪ್ರಕರಣ 39ರ ಉಪಪ್ರಕರಣ (1)ರ ಅಡಿಯಲ್ಲಿ ವಿವರಗಳನ್ನು ಅಥವಾ ರಿಟರ್ನ್‌ನ್ನು ಸಲ್ಲಿಸಲು ವಿಶೇಷ ವಿಧಾನ ಅಥವಾ ಕಾಲಾವಧಿಯ ವಿಸ್ತರಣೆಯನ್ನು ಅಧಿಕೃತ ರಾಜ್ಯಪತ್ರದಲ್ಲಿ ನಂತರದಲ್ಲಿ ಅಧಿಸೂಚಿಸತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (20/2017)
ಸಂಖ್ಯೆ. ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ:15.11.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ "ಸದರಿ ಅಧಿನಿಯಮ"ವೆಂದು ಉಲ್ಲೇಖಿಸಿದೆ) ಪ್ರಕರಣ 128ರಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ನಿಗದಿತ ದಿನಾಂಕದೊಳಗೆ ಅಕ್ಟೋಬರ್ 2017 ಮತ್ತು ನಂತರದ ತಿಂಗಳುಗಳಿಗಾಗಿ ನಮೂನೆ ಜಿಎಸ್‌ಟಿಆರ್–3ಬಿಯಲ್ಲಿ ರಿಟರ್ನ್‌ನ್ನು ಸಲ್ಲಿಸಲು ವಿಫಲರಾದದ್ದಕ್ಕಾಗಿ ಯಾವುದೇ ನೋಂದಾಯಿತ ವ್ಯಕ್ತಿಯಿಂದ ಪಾವತಿಸಬೇಕಾದ, ಅಂಥ ವಿಫಲತೆ ಮುಂದುವರೆದಂತಹ ಪ್ರತಿ ದಿನಕ್ಕಾಗಿ ಇಪ್ಪತ್ತೈದು ರೂಪಾಯಿಗಳ ಮೊತ್ತವನ್ನು ಮೀರಿದ, ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿನ ವಿಳಂಬ ಶುಲ್ಕದ ಮೊತ್ತವನ್ನು ಮನ್ನಾ ಮಾಡುತ್ತದೆ:

ಪರಂತು, ಸದರಿ ರಿಟರ್ನ್‌ನಲ್ಲಿ ಪಾವತಿಸಬೇಕಾದ ರಾಜ್ಯ ತೆರಿಗೆಯ ಒಟ್ಟು ಮೊತ್ತವು ಶೂನ್ಯವಾಗಿದ್ದರೆ, ನಿಗದಿತ ದಿನಾಂಕದೊಳಗೆ ಅಕ್ಟೋಬರ್ 2017 ಮತ್ತು ನಂತರದ ತಿಂಗಳುಗಳಿಗಾಗಿ ಸದರಿ ರಿಟರ್ನ್‌ನ್ನು ಸಲ್ಲಿಸಲು ವಿಫಲರಾದದ್ದಕ್ಕಾಗಿ ಅಂಥ ನೋಂದಾಯಿತ ವ್ಯಕ್ತಿಯಿಂದ ಪಾವತಿಸಬೇಕಾದ, ಅಂಥ ವಿಫಲತೆ ಮುಂದುವರೆದಂತಹ ಪ್ರತಿ ದಿನಕ್ಕಾಗಿ ಹತ್ತು ರೂಪಾಯಿಗಳ ಮೊತ್ತವನ್ನು ಮೀರಿದ, ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿನ ವಿಳಂಬ ಶುಲ್ಕದ ಮೊತ್ತವು ಮನ್ನಾ ಆಗತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (21/2017)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:15.11.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ "ಸದರಿ ಅಧಿನಿಯಮ"ವೆಂದು ಉಲ್ಲೇಖಿಸಿದೆ) ಪ್ರಕರಣ 128ರಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ಸದರಿ ಅಧಿನಿಯಮದ ಪ್ರಕರಣ 52ರ ಅಡಿಯಲ್ಲಿ ಮೂಲದಲ್ಲಿ ತೆರಿಗೆಯನ್ನು ಸಂಗ್ರಹಿಸಲು ಅವಶ್ಯವಿರುವ ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕ ಮೂಲಕ ಪ್ರಕರಣ 9ರ ಉಪಪ್ರಕರಣ (5)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಪೂರೈಕೆಗಳನ್ನು ಹೊರತುಪಡಿಸಿದ, ಮತ್ತು ಒಂದು ಹಣಕಾಸು ವರ್ಷದಲ್ಲಿ ಇಪ್ಪತ್ತು ಲಕ್ಷಗಳ ಮೊತ್ತವನ್ನು ಮೀರದ, ಭಾರತದಾದ್ಯಂತ ಆಧಾರದಲ್ಲಿ ಲೆಕ್ಕ ಮಾಡಲಾದ, ಸಮಗ್ರ ವಹಿವಾಟನ್ನು ಹೊಂದಿರುವ, ಸೇವೆಗಳ ಪೂರೈಕೆಗಳನ್ನು ಮಾಡುವ ವ್ಯಕ್ತಿಗಳನ್ನು ಸದರಿ ಅಧಿನಿಯಮದ ಅಡಿಯಲ್ಲಿ ನೋಂದಣಿಯನ್ನು ಪಡೆಯಲು ವಿನಾಯತಿ ನೀಡಲಾದ ವ್ಯಕ್ತಿಗಳ ಸಮೂಹವೆಂದು ಈ ಮೂಲಕ ನಿರ್ದಿಷ್ಟಪಡಿಸುತ್ತದೆ.

ಪರಂತು, ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿದ, ಸಂವಿಧಾನದ ಅನುಚ್ಛೇದ 279ಎದ ಖಂಡ (4)ರ ಉಪಖಂಡ (ಜಿ)ನಲ್ಲಿ ನಿರ್ದಿಷ್ಟಪಡಿಸಿದಂತಹ "ವಿಶೇಷ ಗುಂಪಿನ ರಾಜ್ಯ"ಗಳ ಸಂದರ್ಭದಲ್ಲಿ, ಭಾರತದಾದ್ಯಂತ ಆಧಾರದಲ್ಲಿ ಲೆಕ್ಕ ಮಾಡಲಾದ, ಅಂಥ ಪೂರೈಕೆಗಳ ಸಮಗ್ರ ಮೌಲ್ಯವು ಹತ್ತು ಲಕ್ಷ ರೂಪಾಯಿಗಳ ಒಂದು ಮೊತ್ತವನ್ನು ಮೀರತಕ್ಕದ್ದಲ್ಲ.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (22/2017)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:15.11.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ "ಸದರಿ ಅಧಿನಿಯಮ"ವೆಂದು ಉಲ್ಲೇಖಿಸಿದೆ) ಪ್ರಕರಣ 148ರಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮತ್ತು ದಿನಾಂಕ 13ನೇ ಅಕ್ಟೋಬರ್, 2017ರ ಕರ್ನಾಟಕದ ವಿಶೇಷ ರಾಜ್ಯಪತ್ರ, ಭಾಗ IVA, ಸಂ.942ರಲ್ಲಿ ಪ್ರಕಟಿತವಾದ ಅಧಿಸೂಚನೆ (15/2017) ಸಂ. ಆಇ 47 ಸಿಎಸ್ಎಲ್ 2017 ದಿನಾಂಕ 13ನೇ ಅಕ್ಟೋಬರ್, 2017, ನ್ನು ರದ್ದುಪಡಿಸಿ, ಅಂಥ ರದ್ದುಪಡಿಸುವಿಕೆಗೆ ಮುನ್ನ ಮಾಡಿರುವ ಅಥವಾ ಮಾಡದೇ ಇರುವ ಕಾರ್ಯಗಳಿಗೆ ಸಂಬಂಧಿಸುವುದನ್ನು ಉಳಿದು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ಸದರಿ ಅಧಿನಿಯಮದ ಪ್ರಕರಣ 10ರ ಅಡಿಯಲ್ಲಿ ರಾಜಿ ವಿಧಿಸುವಿಕೆಗಾಗಿ ಆಯ್ಕೆ ಮಾಡಿಕೊಳ್ಳದ ನೋಂದಾಯಿತ ವ್ಯಕ್ತಿಯನ್ನು ಸದರಿ ಅಧಿನಿಯಮದ ಪ್ರಕರಣ 12ರ ಉಪಪ್ರಕರಣ (2)ರ ಖಂಡ (ಎ)ನಲ್ಲಿ ನಿರ್ದಿಷ್ಟಪಡಿಸಿದ ಪೂರೈಕೆಯ ಸಮಯದಲ್ಲಿ ಸರಕುಗಳ ಹೊರಮುಖ ಪೂರೈಕೆಗಳ ಮೇಲೆ, ಸದರಿ ಅಧಿನಿಯಮದ ಪ್ರಕರಣ 14ರ ಉಪಬಂಧಗಳನ್ನು ಆಕರ್ಷಿಸುವ ಸಂದರ್ಭಗಳನ್ನು ಒಳಗೊಂಡಂತೆ, ರಾಜ್ಯ ತೆರಿಗೆಯನ್ನು ತುಂಬತಕ್ಕ ವ್ಯಕ್ತಿಗಳ ಸಮೂಹವೆಂದು ಅಧಿಸೂಚಿಸಿದೆ ಮತ್ತು ಅದರಂತೆ ಅವರು ಸದರಿ ಅಧಿನಿಯಮದ ಅಧ್ಯಾಯ IXರಲ್ಲಿ ಮತ್ತು

ಅದರಡಿಯಲ್ಲಿ ಮಾಡಿದ ನಿಯಮಗಳಡಿಯಲ್ಲಿ ತಿಳಿಸಿರುವಂತೆ ವಿವರಗಳನ್ನು ಮತ್ತು ರಿಟರ್ನ್ಗಳನ್ನು ಸಲ್ಲಿಸತಕ್ಕದ್ದು ಮತ್ತು ಅಂಥ ನೋಂದಾಯಿತ ವ್ಯಕ್ತಿಗಳ ಸಮೂಹದಿಂದ ತೆರಿಗೆ ಪಾವತಿಗಾಗಿ ನಿಯಮಿಸಿದ ಅವಧಿಯು ಸದರಿ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿದಂತದ್ದಾಗಿರತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ತಿದ್ದೋಲೆ
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:01.01.2018.

1. ಕರ್ನಾಟಕ ವಿಶೇಷ ರಾಜ್ಯಪತ್ರ, ಭಾಗ–IVA, ಸಂ. 1313, ದಿನಾಂಕ 29ನೇ ಡಿಸೆಂಬರ್, 2017ರಲ್ಲಿ ಪ್ರಕಟವಾದ ಅಧಿಸೂಚನೆ (23/2017) ಸಂ. ಆಇ 47 ಸಿಎಸ್ಎಲ್ 2017, ದಿನಾಂಕ 29ನೇ ಡಿಸೆಂಬರ್ 2017ರಲ್ಲಿ, ಖಂಡಿಕೆ 1ರಲ್ಲಿ, "ಬಳಸತಕ್ಕ" ಪದವನ್ನು "ಬಳಸಬಹುದಾದ" ಪದವಾಗಿ ಓದಿಕೊಳ್ಳತಕ್ಕದ್ದು.

2. ಕರ್ನಾಟಕ ವಿಶೇಷ ರಾಜ್ಯಪತ್ರ, ಭಾಗ–IVA, ಸಂ. 1312, ದಿನಾಂಕ 29ನೇ ಡಿಸೆಂಬರ್, 2017ರಲ್ಲಿ ಪ್ರಕಟವಾದ ಅಧಿಸೂಚನೆ (24/2017) ಸಂ. ಆಇ 47 ಸಿಎಸ್ಎಲ್ 2017, ದಿನಾಂಕ 29ನೇ ಡಿಸೆಂಬರ್ 2017ರಲ್ಲಿ, "ನಿಗದಿತ ದಿನಾಂಕದೊಳಗೆ ಸದರಿ ರಿಟರ್ನ್ನ್ನು ಸಲ್ಲಿಸಲು ವಿಫಲರಾದದ್ದಕ್ಕಾಗಿ ಅಂಥ ನೋಂದಾಯಿತ ವ್ಯಕ್ತಿಯಿಂದ ಪಾವತಿಸಬೇಕಾದ, ಅಂಥ ವಿಫಲತೆ ಮುಂದುವರೆದಂತಹ ಪ್ರತಿ ದಿನಕ್ಕಾಗಿ ಹತ್ತು ರೂಪಾಯಿಗಳ ಮೊತ್ತವನ್ನು ಮೀರಿದ, ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿನ ವಿಳಂಬ ಶುಲ್ಕದ ಮೊತ್ತವು" ಪದಗಳಿಗಾಗಿ "ಸದರಿ ರಿಟರ್ನ್ನ್ನು ಸಲ್ಲಿಸಲು ವಿಫಲರಾದದ್ದಕ್ಕಾಗಿ ಯಾವುದೇ ನೋಂದಾಯಿತ ವ್ಯಕ್ತಿಯಿಂದ ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿ ಪಾವತಿಸಬೇಕಾದ ವಿಳಂಬ ಶುಲ್ಕದ ಮೊತ್ತವು" ಪದಗಳಾಗಿ ಓದಿಕೊಳ್ಳತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (23–ಎ/2017)
ಸಂಖ್ಯೆ. ಆಇ 48 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:06.09.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 128ರಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ನಿಗದಿತ ಸಮಯದ ಒಳಗೆ ಜುಲೈ 2017ರ ತಿಂಗಳಿಗಾಗಿ ನಮೂನೆ ಜಿಎಸ್ಟಿಆರ್–3ಬಿಯಲ್ಲಿ ರಿಟರ್ನ್ಸ್ನ್ನು ಸಲ್ಲಿಸಲು ವಿಫಲನಾದ ಎಲ್ಲಾ ನೋಂದಾಯಿತ ವ್ಯಕ್ತಿಗಳಿಗಾಗಿ ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿ ಪಾವತಿಸಬೇಕಾದ ವಿಳಂಬ ಶುಲ್ಕವನ್ನು ಈ ಮೂಲಕ ಮನ್ನಾ ಮಾಡುತ್ತದೆ.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (23–ಬಿ/2017)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:24.10.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 128ರಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ನಿಗದಿತ ಸಮಯದ ಒಳಗೆ ಆಗಸ್ಟ್ ಮತ್ತು ಸೆಪ್ಟಂಬರ್ 2017ರ ತಿಂಗಳುಗಳಿಗಾಗಿ ನಮೂನೆ ಜಿಎಸ್ಟಿಆರ್–3ಬಿಯಲ್ಲಿ ರಿಟರ್ನ್ಸ್ನ್ನು ಸಲ್ಲಿಸಲು ವಿಫಲನಾದ ಎಲ್ಲಾ ನೋಂದಾಯಿತ ವ್ಯಕ್ತಿಗಳಿಗಾಗಿ ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿ ಪಾವತಿಸಬೇಕಾದ ವಿಳಂಬ ಶುಲ್ಕವನ್ನು ಈ ಮೂಲಕ ಮನ್ನಾ ಮಾಡುತ್ತದೆ.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (24/2017)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:29.12.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ "ಸದರಿ ಅಧಿನಿಯಮ"ವೆಂದು ಉಲ್ಲೇಖಿಸಿದೆ) ಪ್ರಕರಣ 128ರಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ನಿಗದಿತ ದಿನಾಂಕದೊಳಗೆ ನಮೂನೆ ಜಿಎಸ್ಟಿಆರ್–4ರಲ್ಲಿ ರಿಟರ್ನ್ಸ್ನ್ನು ಸಲ್ಲಿಸಲು ವಿಫಲರಾದದ್ದಕ್ಕಾಗಿ ಯಾವುದೇ ನೋಂದಾಯಿತ ವ್ಯಕ್ತಿಯಿಂದ ಪಾವತಿಸಬೇಕಾದ, ಅಂಥ ವಿಫಲತೆ ಮುಂದುವರೆದಂತಹ ಪ್ರತಿ ದಿನಕ್ಕಾಗಿ ಇಪ್ಪತ್ತೈದು ರೂಪಾಯಿಗಳ ಮೊತ್ತವನ್ನು ಮೀರಿದ, ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿನ ವಿಳಂಬ ಶುಲ್ಕದ ಮೊತ್ತವನ್ನು ಮನ್ನಾ ಮಾಡುತ್ತದೆ:

ಪರಂತು, ಸದರಿ ರಿಟರ್ನ್ಸ್ನಲ್ಲಿ ಪಾವತಿಸಬೇಕಾದ ರಾಜ್ಯ ತೆರಿಗೆಯ ಒಟ್ಟು ಮೊತ್ತವು ಶೂನ್ಯವಾಗಿದ್ದರೆ, ನಿಗದಿತ ದಿನಾಂಕದೊಳಗೆ ಸದರಿ ರಿಟರ್ನ್ಸ್ನ್ನು ಸಲ್ಲಿಸಲು ವಿಫಲರಾದದ್ದಕ್ಕಾಗಿ ಅಂಥ ನೋಂದಾಯಿತ ವ್ಯಕ್ತಿಯಿಂದ ಪಾವತಿಸಬೇಕಾದ, ಅಂಥ ವಿಫಲತೆ ಮುಂದುವರೆದಂತಹ ಪ್ರತಿ ದಿನಕ್ಕಾಗಿ ಹತ್ತು ರೂಪಾಯಿಗಳ ಮೊತ್ತವನ್ನು ಮೀರಿದ, ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿನ ವಿಳಂಬ ಶುಲ್ಕದ ಮೊತ್ತವು ಮನ್ನಾ ಆಗತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (25/2017)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:29.11.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 164ರಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 2018ರ ಫೆಬ್ರವರಿ 1ನೇ ದಿನವನ್ನು, ಕರ್ನಾಟಕ ವಿಶೇಷ ರಾಜ್ಯಪತ್ರ, ಭಾಗ–IVA, ಸಂ.849 ದಿನಾಂಕ 30ನೇ ಆಗಸ್ಟ್, 2017ರಲ್ಲಿ ಪ್ರಕಟವಾದ ಅಧಿಸೂಚನೆ (4–ಡಿ/ 2017) ಸಂ. ಆಇ 47 ಸಿಎಸ್ಎಲ್ 2017 ದಿನಾಂಕ 30ನೇ ಆಗಸ್ಟ್, 2017ರ ಕ್ರಮ ಸಂಖ್ಯೆ 9 ಮತ್ತು 10ರ ಉಪಬಂಧಗಳು ಜಾರಿಗೆ ಬರುವ ದಿನಾಂಕವೆಂದು ನಿಯಮಿಸುತ್ತದೆ.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (1/2018)
ಸಂಖ್ಯೆ. ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ:01.01.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 10ರ ಉಪಪ್ರಕರಣ (1)ರಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಕರ್ನಾಟಕ ವಿಶೇಷ ರಾಜ್ಯಪತ್ರ, ಭಾಗ–IVA, ಸಂ.583 ದಿನಾಂಕ 28ನೇ ಜೂನ್, 2017ರಲ್ಲಿ ಪ್ರಕಟವಾದ ಅಧಿಸೂಚನೆ (3) ಸಂ. ಆಇ 47 ಸಿಎಸ್‌ಎಲ್ 2017 ದಿನಾಂಕ 28ನೇ ಜೂನ್, 2017ರಲ್ಲಿ ಈ ಕೆಳಕಂಡ ಮುಂದುವರೆದ ತಿದ್ದುಪಡಿಗಳನ್ನು ಮಾಡುತ್ತದೆ, ಅಂದರೆ:–

ಸದರಿ ಅಧಿಸೂಚನೆಯಲ್ಲಿ, ಮೊದಲನೇಯ ಖಂಡಿಕೆಯಲ್ಲಿ, –

(ಎ) ಖಂಡ (i) ರಲ್ಲಿ, "ಶೇಕಡಾ ಒಂದರಷ್ಟು" ಪದಗಳಿಗಾಗಿ, "ಶೇಕಡಾ ಅರ್ಧದಷ್ಟು" ಪದಗಳನ್ನು ಪ್ರತಿಯೋಜಿಸಲಾಗಿದೆ;

(ಬಿ) ಖಂಡ (iii)ರಲ್ಲಿ, "ವಹಿವಾಟಿನ ಶೇಕಡಾ ಅರ್ಧದಷ್ಟು" ಪದಗಳಿಗಾಗಿ, "ಸರಕುಗಳ ತೆರಿಗೆದಾಯಕ ಪೂರೈಕೆಗಳ ವಹಿವಾಟಿನ ಶೇಕಡಾ ಅರ್ಧದಷ್ಟು" ಪದಗಳನ್ನು ಪ್ರತಿಯೋಜಿಸಲಾಗಿದೆ.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (02/2018)
ಸಂಖ್ಯೆ. ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ:23.01.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ "ಸದರಿ ಅಧಿನಿಯಮ"ವೆಂದು ಉಲ್ಲೇಖಿಸಿದೆ) ಪ್ರಕರಣ 128ರಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ನಿಗದಿತ ದಿನಾಂಕದೊಳಗೆ ನಮೂನೆ ಜಿಎಸ್‌ಟಿಆರ್–1ರಲ್ಲಿ ಯಾವುದೇ ತಿಂಗಳಿನ/ತ್ರೈಮಾಸಿಕಕ್ಕಾಗಿ ಹೊರಮುಖ ಪೂರೈಕೆಗಳ ವಿವರಗಳನ್ನು ಸಲ್ಲಿಸಲು ವಿಫಲರಾದದ್ದಕ್ಕಾಗಿ ಯಾವುದೇ ನೋಂದಾಯಿತ ವ್ಯಕ್ತಿಯಿಂದ ಪಾವತಿಸಬೇಕಾದ, ಅಂಥ ವಿಫಲತೆ ಮುಂದುವರೆದಂತಹ ಪ್ರತಿ ದಿನಕ್ಕಾಗಿ ಇಪ್ಪತ್ತೈದು ರೂಪಾಯಿಗಳ ಮೊತ್ತವನ್ನು ಮೀರಿದ, ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿನ ವಿಳಂಬ ಶುಲ್ಕದ ಮೊತ್ತವನ್ನು ಮನ್ನಾ ಮಾಡುತ್ತದೆ:

ಪರಂತು, ಸದರಿ ಯಾವುದೇ ತಿಂಗಳು/ ತ್ರೈಮಾಸಿಕದಲ್ಲಿ ಯಾವುದೇ ಹೊರಮುಖ ಪೂರೈಕೆಗಳು ಇರದಿದ್ದಲ್ಲಿ, ನಿಗದಿತ ದಿನಾಂಕದೊಳಗೆ, ಸದರಿ ವಿವರಗಳನ್ನು ಸಲ್ಲಿಸಲು ವಿಫಲರಾದದ್ದಕ್ಕಾಗಿ ಅಂಥ ನೋಂದಾಯಿತ

ವ್ಯಕ್ತಿಯಿಂದ ಪಾವತಿಸಬೇಕಾದ, ಅಂಥ ವಿಫಲತೆ ಮುಂದುವರೆದಂತಹ ಪ್ರತಿ ದಿನಕ್ಕಾಗಿ ಹತ್ತು ರೂಪಾಯಿಗಳ ಮೊತ್ತವನ್ನು ಮೀರಿದ, ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿನ ವಿಳಂಬ ಶುಲ್ಕದ ಮೊತ್ತವು ಮನ್ನಾ ಆಗತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (03/2018)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:23.01.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ "ಸದರಿ ಅಧಿನಿಯಮ"ವೆಂದು ಉಲ್ಲೇಖಿಸಿದೆ) ಪ್ರಕರಣ 128ರಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ನಿಗದಿತ ದಿನಾಂಕದೊಳಗೆ ನಮೂನೆ ಜಿಎಸ್ಟಿಆರ್–5ರಲ್ಲಿ ರಿಟರ್ನ್ಸ್ನ್ನು ಸಲ್ಲಿಸಲು ವಿಫಲರಾದದ್ದಕ್ಕಾಗಿ ಯಾವುದೇ ನೋಂದಾಯಿತ ವ್ಯಕ್ತಿಯಿಂದ ಪಾವತಿಸಬೇಕಾದ, ಅಂಥ ವಿಫಲತೆ ಮುಂದುವರೆದಂತಹ ಪ್ರತಿ ದಿನಕ್ಕಾಗಿ ಇಪ್ಪತ್ತೈದು ರೂಪಾಯಿಗಳ ಮೊತ್ತವನ್ನು ಮೀರಿದ, ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿನ ವಿಳಂಬ ಶುಲ್ಕದ ಮೊತ್ತವನ್ನು ಮನ್ನಾ ಮಾಡುತ್ತದೆ:

ಪರಂತು, ಸದರಿ ರಿಟರ್ನ್ಸ್ನಲ್ಲಿ ಪಾವತಿಸಬೇಕಾದ ಕೇಂದ್ರ ತೆರಿಗೆಯ ಒಟ್ಟು ಮೊತ್ತವು ಶೂನ್ಯವಾಗಿದ್ದರೆ, ನಿಗದಿತ ದಿನಾಂಕದೊಳಗೆ ಸದರಿ ವಿವರಗಳನ್ನು ಸಲ್ಲಿಸಲು ವಿಫಲರಾದದ್ದಕ್ಕಾಗಿ ಅಂಥ ನೋಂದಾಯಿತ ವ್ಯಕ್ತಿಯಿಂದ ಪಾವತಿಸಬೇಕಾದ, ಅಂಥ ವಿಫಲತೆ ಮುಂದುವರೆದಂತಹ ಪ್ರತಿ ದಿನಕ್ಕಾಗಿ ಹತ್ತು ರೂಪಾಯಿಗಳ ಮೊತ್ತವನ್ನು ಮೀರಿದ, ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿನ ವಿಳಂಬ ಶುಲ್ಕದ ಮೊತ್ತವು ಮನ್ನಾ ಆಗತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (04/2018)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:23.01.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ "ಸದರಿ ಅಧಿನಿಯಮ"ವೆಂದು ಉಲ್ಲೇಖಿಸಿದೆ) ಪ್ರಕರಣ 128ರಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿನ ನಿಗದಿತ ದಿನಾಂಕದೊಳಗೆ, ನಮೂನೆ ಜಿಎಸ್ಟಿಆರ್–5ಎ ನಲ್ಲಿ ರಿಟರ್ನ್ಸ್ನ್ನು ಸಲ್ಲಿಸಲು ವಿಫಲರಾದದ್ದಕ್ಕಾಗಿ ಯಾವುದೇ ನೋಂದಾಯಿತ ವ್ಯಕ್ತಿಯಿಂದ ಪಾವತಿಸಬೇಕಾದ, ಅಂಥ ವಿಫಲತೆ ಮುಂದುವರೆದಂತಹ ಪ್ರತಿ ದಿನಕ್ಕಾಗಿ ಇಪ್ಪತ್ತೈದು ರೂಪಾಯಿಗಳ ಮೊತ್ತವನ್ನು ಮೀರಿದ, ವಿಳಂಬ ಶುಲ್ಕದ ಮೊತ್ತವನ್ನು ಮನ್ನಾ ಮಾಡುತ್ತದೆ:

ಪರಂತು, ಸದರಿ ರಿಟರ್ನ್ಸ್ನಲ್ಲಿ ಪಾವತಿಸಬೇಕಾದ ಏಕೀಕೃತ ತೆರಿಗೆಯ ಒಟ್ಟು ಮೊತ್ತವು ಶೂನ್ಯವಾಗಿದ್ದರೆ, ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿನ ನಿಗದಿತ ದಿನಾಂಕದೊಳಗೆ, ಸದರಿ ವಿವರಗಳನ್ನು ಸಲ್ಲಿಸಲು ವಿಫಲರಾದದ್ದಕ್ಕಾಗಿ ಅಂಥ ನೋಂದಾಯಿತ ವ್ಯಕ್ತಿಯಿಂದ ಪಾವತಿಸಬೇಕಾದ, ಅಂಥ ವಿಫಲತೆ ಮುಂದುವರೆದಂತಹ ಪ್ರತಿ ದಿನಕ್ಕಾಗಿ ಹತ್ತು ರೂಪಾಯಿಗಳ ಮೊತ್ತವನ್ನು ಮೀರಿದ, ವಿಳಂಬ ಶುಲ್ಕದ ಮೊತ್ತವು ಮನ್ನಾ ಆಗತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (05/2018)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:23.01.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ "ಸದರಿ ಅಧಿನಿಯಮ"ವೆಂದು ಉಲ್ಲೇಖಿಸಿದೆ) ಪ್ರಕರಣ 128ರಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ನಿಗದಿತ ದಿನಾಂಕದೊಳಗೆ ನಮೂನೆ ಜಿಎಸ್ಟಿಆರ್–6ರಲ್ಲಿ ರಿಟರ್ನ್ಸ್ನ್ನು ಸಲ್ಲಿಸಲು ವಿಫಲರಾದದ್ದಕ್ಕಾಗಿ ಯಾವುದೇ ನೋಂದಾಯಿತ ವ್ಯಕ್ತಿಯಿಂದ ಪಾವತಿಸಬೇಕಾದ, ಅಂಥ ವಿಫಲತೆ ಮುಂದುವರೆದಂತಹ ಪ್ರತಿ ದಿನಕ್ಕಾಗಿ ಇಪ್ಪತ್ತೈದು ರೂಪಾಯಿಗಳ ಮೊತ್ತವನ್ನು ಮೀರಿದ, ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿನ ವಿಳಂಬ ಶುಲ್ಕದ ಮೊತ್ತವನ್ನು ಮನ್ನಾ ಮಾಡುತ್ತದೆ:

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (06/2018)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:23.01.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 128ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ದಿನಾಂಕ 23ನೇ ಜನವರಿ, 2018ರ ಕರ್ನಾಟಕದ ವಿಶೇಷ ರಾಜ್ಯಪತ್ರ, ಭಾಗ IVA, ಸಂ.179ರಲ್ಲಿ ಪ್ರಕಟಿತವಾದ ಕರ್ನಾಟಕ ಸರ್ಕಾರದ ಅಧಿಸೂಚನೆ (4/2018) ಸಂ. ಆಇ 47 ಸಿಎಸ್ಎಲ್ 2017 ದಿನಾಂಕ 23ನೇ ಜನವರಿ, 2018ನ್ನು, ಅಂಥ ಹಿಂಪಡೆಯುವಿಕೆಗೆ ಮುನ್ನ ಮಾಡಿರುವ ಅಥವಾ ಮಾಡದೇ ಇರುವ ಕಾರ್ಯಗಳಿಗೆ ಸಂಬಂಧಿಸುವುದನ್ನು ಉಳಿದು, ಹಿಂಪಡೆಯುತ್ತದೆ.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (07/2018)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:07.03.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 128ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ದಿನಾಂಕ 23ನೇ ಜನವರಿ, 2018ರ ಕರ್ನಾಟಕದ ವಿಶೇಷ ರಾಜ್ಯಪತ್ರ, ಭಾಗ IVA, ಸಂ.179ರಲ್ಲಿ ಪ್ರಕಟಿತವಾದ ಕರ್ನಾಟಕ ಸರ್ಕಾರದ ಅಧಿಸೂಚನೆ (4/2018) ಸಂ. ಆಇ 47 ಸಿಎಸ್ಎಲ್ 2017 ದಿನಾಂಕ 23ನೇ ಜನವರಿ, 2018ನ್ನು, ಅಂಥ ಹಿಂಪಡೆಯುವಿಕೆಗೆ ಮುನ್ನ ಮಾಡಿರುವ ಅಥವಾ ಮಾಡದೇ ಇರುವ ಕಾರ್ಯಗಳಿಗೆ ಸಂಬಂಧಿಸುವುದನ್ನು ಉಳಿದು, ಹಿಂಪಡೆಯುತ್ತದೆ.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (08/2018)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:23.03.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 164ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 2018ರ ಏಪ್ರಿಲ್ 1ನೇ ದಿನವನ್ನು, ಕರ್ನಾಟಕ ರಾಜ್ಯ ಪತ್ರ, ಅಸಾಧಾರಣ, ಭಾಗ–IVA, ಸಂಖ್ಯೆ 455, ದಿನಾಂಕ ಮಾರ್ಚ್ 14, 2018ರಲ್ಲಿ ಪ್ರಕಟಗೊಂಡ ಅಧಿಸೂಚನೆ (4–ಎನ್/ 2017) ಸಂ. ಆಇ 47 ಸಿಎಸ್ಎಲ್ 2017 ದಿನಾಂಕ ಮಾರ್ಚ್ 15, 2018ರ ನಿಯಮ 2 [ಖಂಡ (7)ನ್ನು ಹೊರತುಪಡಿಸಿ], 3, 4, 5, 6 ಮತ್ತು 7ಗಳ ಉಪಬಂಧಗಳು ಜಾರಿಗೆ ಬರುವ ದಿನಾಂಕವನ್ನಾಗಿ, ಈ ಮೂಲಕ ಗೊತ್ತುಪಡಿಸಲಾಗಿದೆ.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (09/2018)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:11.04.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ **"ಸದರಿ ಅಧಿನಿಯಮ"** ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 148ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಹಿಂದಿನ ಹಣಕಾಸು ವರ್ಷದಲ್ಲಿ ಅಥವಾ ಪ್ರಸಕ್ತ ಹಣಕಾಸು ವರ್ಷದಲ್ಲಿ ರೂ.1.5 ಕೋಟಿಯ ವರೆಗಿನ ಸಮಗ್ರ ವಹಿವಾಟನ್ನು ಹೊಂದಿರುವ ನೋಂದಾಯಿತ ವ್ಯಕ್ತಿಗಳನ್ನು, ಸರಕು ಅಥವಾ ಸೇವೆಗಳು ಅಥವಾ ಅವೆರಡರ ಹೊರಮುಖ ಪೂರೈಕೆಗಳ ವಿವರಗಳನ್ನು ಸಲ್ಲಿಸುವುದಕ್ಕಾಗಿ ಈ ಕೆಳಗೆ ಹೇಳಲಾದ ವಿಶೇಷ ವಿಧಾನವನ್ನು ಪಾಲಿಸತಕ್ಕವರೆಂದು ಈ ಮೂಲಕ ಅಧಿಸೂಚಿಸಿದೆ.

2. ಸದರಿ ವ್ಯಕ್ತಿಗಳು, ಏಪ್ರಿಲ್‌ನಿಂದ ಜೂನ್, 2018ರ ತ್ರೈಮಾಸಿಕದಲ್ಲಿ ಸರಕು ಅಥವಾ ಸೇವೆಗಳು ಅಥವಾ ಅವೆರಡರ ಹೊರಮುಖ ಪೂರೈಕೆಯ ವಿವರಗಳನ್ನು 2018ರ ಜುಲೈ 31ನೇ ದಿನದವರೆಗೆ ನಮೂನೆ ಜಿಎಸ್‌ಟಿಆರ್–1ರಲ್ಲಿ ಸಲ್ಲಿಸಬಹುದು.

3. ಏಪ್ರಿಲ್‌ನಿಂದ ಜೂನ್ 2018ರವರೆಗಿನ ತಿಂಗಳುಗಳ, ಸದರಿ ಅಧಿನಿಯಮದ ಪ್ರಕರಣ 38ರ ಉಪಪ್ರಕರಣ (2)ರ ಮತ್ತು ಪ್ರಕರಣ 39ರ ಉಪಪ್ರಕರಣ (1)ರ ಅಡಿಯಲ್ಲಿ ವಿವರ ಅಥವಾ ಸಂದರ್ಭಾನುಸಾರವಾಗಿ, ರಿಟರ್ನ್‌ಅನ್ನು ಸಲ್ಲಿಸುವುದಕ್ಕಾಗಿ ಕಾಲಮಿತಿಯನ್ನು ಅಧಿಕೃತ ರಾಜ್ಯಪತ್ರದಲ್ಲಿ ನಂತರದಲ್ಲಿ ಅಧಿಸೂಚಿಸಲಾಗುವುದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ

ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ

ಆರ್ಥಿಕ ಸಚಿವಾಲಯ

ಅಧಿಸೂಚನೆ (10/2018)

ಸಂಖ್ಯೆ. ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ:11.04.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ "ಸದರಿ ಅಧಿಸೂಚನೆ" ಎಂದು ಉಲ್ಲೇಖಿಸಲಾಗಿದೆ)ರ ಪ್ರಕರಣ 55ರ ಪ್ರಕಾರ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಅಧಿಸೂಚನೆಯ ಮೂಲಕ, ಸಂಯುಕ್ತ ರಾಷ್ಟ್ರ ಸಂಘದ ಯಾವುದೇ ವಿಶೇಷ ಏಜನ್ಸಿಯನ್ನು ಅಥವಾ ಸಂಯುಕ್ತ ರಾಷ್ಟ್ರ (ವಿಶೇಷ ಸ್ಥಾನಮಾನ ನತ್ತು ಉನ್ಮುಕ್ತಿಗಳು) ಅಧಿನಿಯಮ 1947ರ (ಕೇಂದ್ರ ಅಧಿನಿಯಮ 46)ರ ಅಡಿಯಲ್ಲಿ ಅಧಿಸೂಚಿಸಲಾದ ಯಾವುದೇ ಬಹುಪಕ್ಷೀಯ ಹಣಕಾಸು ಸಂಸ್ಥೆ ಮತ್ತು ಸಂಘಟನೆ, ವಿದೇಶಗಳ ಕಾನ್ಸುಲೇಟ್ ಅಥವಾ ರಾಯಭಾರ ಸಂಸ್ಥೆ, ಮತ್ತು ಈ ಸಂಬಂಧ ನಿರ್ದಿಷ್ಟಪಡಿಸಬಹುದಾದ ಯಾವುದೇ ಇತರ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗವನ್ನು (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ "ನಿರ್ದಿಷ್ಟಪಡಿಸಿದ ವ್ಯಕ್ತಿಗಳು" ಎಂದು ಉಲ್ಲೇಖಿಸಲಾಗಿದೆ), ಅವರಿಂದ ಸ್ವೀಕರಿಸಲ್ಪಡುವ ಅಧಿಸೂಚಿತ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗಳ ಮೇಲಿನ ತೆರಿಗೆಗಳ ಮರುಪಾವತಿಯನ್ನು, ನಿಯಮಿಸಬಹುದಾದ ಅಂಥ ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು, ಕ್ಲೇಮು ಮಾಡಲು ಅರ್ಹನಾಗಿರತಕ್ಕದ್ದು;

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017 ಅಂದರೆ ಕಾಲಕಾಲಕ್ಕೆ ತಿದ್ದುಪಡಿಯಾದಂತೆ ದಿನಾಂಕ 29ನೇ ಜೂನ್, 2017ರ ಕರ್ನಾಟಕದ ವಿಶೇಷ ರಾಜ್ಯಪತ್ರ, ಭಾಗ IVAನಲ್ಲಿ ಪ್ರಕಟಿತವಾದ ಕರ್ನಾಟಕ ಸರ್ಕಾರದ ಅಧಿಸೂಚನೆ (4/2017) ಸಂ. ಆಇ 47 ಸಿಎಸ್‌ಎಲ್ 2017 ದಿನಾಂಕ 29ನೇ ಜೂನ್, 2017 ರೊಡನೆ ಓದಲಾದ ಸದರಿ ಅಧಿನಿಯಮದ ಪ್ರಕರಣ 55ರಲ್ಲಿ ತೆರಿಗೆಗಳ ಮರುಪಾವತಿಯ ಕ್ಲೇಮಿಗಾಗಿ ಕರ್ನಾಟಕ ಸರ್ಕಾರವು ಷರತ್ತುಗಳನ್ನು ಮತ್ತು ನಿರ್ಬಂಧಗಳನ್ನು ಹಾಕಲಾಗಿದೆ.

ಸದರಿ ಅಧಿನಿಯಮದ ಪ್ರಕರಣ 54ರ ಉಪಪ್ರಕರಣ (2)ರಂತೆ, ಸದರಿ ಅಧಿನಿಯಮದ ಪ್ರಕರಣ 55ರ ಅಡಿಯಲ್ಲಿ ಅಧಿಸೂಚಿಸಿದ ಅಂಥ ನಿರ್ದಿಷ್ಟಪಡಿಸಿದ ವ್ಯಕ್ತಿಗಳು ಸರಕುಗಳ ಅಥವಾ ಸೇವೆಗಳ ಅಥವಾ ಅವೆರಡರ ಒಳಮುಖ ಪೂರೈಕೆಗಳ ಮೇಲೆ ಪಾವತಿಸಿದ ತೆರಿಗೆಯ ಮರುಪಾವತಿಗೆ ಅರ್ಹರಿದ್ದು, ಅವರು ಅಂಥ ಮರುಪಾವತಿಗಾಗಿ ಅರ್ಜಿಯನ್ನು, ನಿಯಮಿಸಿದ ಅಂಥ ನಮೂನೆಯಲ್ಲಿ ಮತ್ತು ಅಂಥ ವಿಧಾನದಲ್ಲಿ, ಅಂಥ ಪೂರೈಕೆಯನ್ನು ಸ್ವೀಕರಿಸಿದ ತ್ರೈಮಾಸಿಕದ ಕಡೆಯ ದಿನಾಂಕದಿಂದ ಆರು ತಿಂಗಳು ಮುಗಿಯುವುದರೊಳಗಾಗಿ ಸಲ್ಲಿಸಬಹುದು;

ಸದರಿ ಅಧನಿಯಮದ ಪ್ರಕರಣ 55ರ ಅಡಿಯಲ್ಲಿ ಮರುಪಾವತಿಯ ಕ್ಲೇಮುಗಳನ್ನು ಸಲ್ಲಿಸುವ ಸೌಲಭ್ಯವನ್ನು ಇತ್ತೀಚೆಗೆ ಸಾಮಾನ್ಯ ಪೋರ್ಟಲ್‌ನಲ್ಲಿ ಲಭ್ಯ ಮಾಡಲಾಗಿದೆ;

ಈಗ, ಆದ್ದರಿಂದ, ಸದರಿ ಅಧಿನಿಯಮದ ಪ್ರಕರಣ 148ರಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಅಂಥ ಪೂರೈಕೆಗಳನ್ನು ಸ್ವೀಕರಿಸಿದ ತ್ರೈಮಾಸಿಕದ ಕಡೆಯ ದಿನಾಂಕದಿಂದ ಹದಿನೆಂಟು ತಿಂಗಳು ಮುಗಿಯುವ ಮುನ್ನ, ನಿರ್ದಿಷ್ಟಪಡಿಸಿದ ಅಂಥ ನಮೂನೆ ಮತ್ತು ವಿಧಾನದಲ್ಲಿ, ತನ್ನ ಕ್ಷೇತ್ರವ್ಯಾಪ್ತಿಯ ತೆರಿಗೆ ಪ್ರಾಧಿಕಾರಕ್ಕೆ, ಸರಕುಗಳ ಅಥವಾ ಸೇವೆಗಳ ಅಥವಾ ಅವೆರಡರ ಒಳಮುಖ ಪೂರೈಕೆಗಳ ಮೇಲೆ ಪಾವತಿಸಿದ ತೆರಿಗೆಯ ಮರುಪಾವತಿಗಾಗಿ ಅರ್ಜಿಯನ್ನು ಸಲ್ಲಿಸತಕ್ಕ ವ್ಯಕ್ತಿಗಳ ಸಮೂಹ ಎಂದು ನಿರ್ದಿಷ್ಟಪಡಿಸಿದ ವ್ಯಕ್ತಿಗಳನ್ನು ಈ ಮೂಲಕ ಅಧಿಸೂಚಿಸುತ್ತದೆ.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (11/2018)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:14.05.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 128ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, 2017ರ ಡಿಸೆಂಬರ್ 27ನೆ ದಿನದಂದು ಅಥವಾ ಅದಕ್ಕೂ ಮುಂಚೆ ಸಾಮಾನ್ಯ ಪೋರ್ಟಲ್‌ನ ಮೇಲೆ ನಮೂನೆ ಜಿಎಸ್‌ಟಿ ಟಿಆರ್‌ಎಎನ್–1ನಲ್ಲಿನ ಘೋಷಣಾಪತ್ರವನ್ನು ಸಲ್ಲಿಸಲಾದ ಆದರೆ ಫೈಲ್ ಮಾಡದ ನೋಂದಾಯಿತ ವ್ಯಕ್ತಿಗಳ ಸಮೂಹಕ್ಕಾಗಿ, ಅಕ್ಟೋಬರ್ 2017ರಿಂದ ಏಪ್ರಿಲ್ 2018ರ ಪ್ರತಿ ತಿಂಗಳುಗಳಿಗಾಗಿ ಕಡೆಯ ದಿನಾಂಕದೊಳಗೆ ನಮೂನೆ ಜಿಎಸ್‌ಟಿಆರ್–3ಬಿಯಲ್ಲಿ ರಿಟರ್ನ್‌ನ್ನು ಸಲ್ಲಿಸಲು ವಿಫಲರಾದುದಕ್ಕಾಗಿ ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿ ಪಾವತಿಸಬೇಕಾದ ವಿಳಂಬ ಶುಲ್ಕವನ್ನು ಈ ಮೂಲಕ ಮನ್ನಾ ಮಾಡುತ್ತದೆ:

ಪರಂತು ಅಂಥ ನೋಂದಾಯಿತ ವ್ಯಕ್ತಿಗಳು ನಮೂನೆ ಜಿಎಸ್‌ಟಿ ಟಿಆರ್‌ಎಎನ್–1ರಲ್ಲಿ ಘೋಷಣಾಪತ್ರವನ್ನು 2018ರ ಮೇ 10ದಿನದಂದು ಅಥವಾ ಅದಕ್ಕೂ ಮುಂಚೆ ಮತ್ತು ಅಂಥ ಪ್ರತಿ ತಿಂಗಳುಗಳಿಗೆ ನಮೂನೆ ಜಿಎಸ್‌ಟಿಆರ್–3ಬಿಯಲ್ಲಿ ರಿಟರ್ನ್‌ನ್ನು 2018ರ ಮೇ 31ನೇ ದಿನದಂದು ಅಥವಾ ಅದಕ್ಕೂ ಮುಂಚೆ ಸಲ್ಲಿಸಿರಬೇಕು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (12/2018)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:13.06.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ "ಸದರಿ ಅಧಿನಿಯಮ" ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 67ರ ಉಪಪ್ರಕರಣ (8)ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕೆಳಗಿನ ಅನುಸೂಚಿಯಲ್ಲಿ ಹೆಸರಿಸಲಾದ ಸರಕು ಮತ್ತು ಸರಕುಗಳ ಸಮೂಹ (ಇನ್ನು ಮುಂದೆ "ಸದರಿ ಸರಕುಗಳು" ಎಂದು ಉಲ್ಲೇಖಿಸಲಾಗಿದೆ)ವನ್ನು, ಅಂಥ ಸರಕುಗಳ ಕೆಟ್ಟು ಹೋಗುವ ಅಥವಾ ಅಪಾಯಕಾರಿ ಲಕ್ಷಣ, ಕಾಲಾಂತರದಲ್ಲಿ ಮೌಲ್ಯದದಲ್ಲಾಗುವ ಸವಕಳಿ, ದಾಸ್ತಾನಿನ ಸ್ಥಳದ ನಿರ್ಬಂಧಗಳು ಅಥವಾ ಇನ್ನಿತರ ಯಾವುದೇ ವಿಚಾರಗಳನ್ನು

ಗಮನದಲ್ಲಿಟ್ಟುಕೊಂಡು, ಸದರಿ ಅಧಿನಿಯಮದ ಪ್ರಕರಣ 67ರ ಉಪಪ್ರಕರಣ (2)ರ ಅಡಿಯಲ್ಲಿ ವಶಕ್ಕೆ ಪಡೆದ ನಂತರ ಆದಷ್ಟು ಬೇಗನೆ ವಿಲಾವಾರಿ ಮಾಡಬಹುದು.

ಅನುಸೂಚಿ

(1) ಉಪ್ಪು ಮತ್ತು ನೀರನ್ನು ಹೀರುವಂತಹ ಪದಾರ್ಥಗಳು

(2) ಹಸಿ (ನೆನೆದ ಮತ್ತು ಉಪ್ಪು ಹಾಕಿದ) ಚರ್ಮಗಳು

(3) ವೃತ್ತಪತ್ರಿಕೆಗಳು ಮತ್ತು ನಿಯತಕಾಲಿಕಗಳು

(4) ಮೆಂಥಾಲ್, ಕರ್ಪೂರ, ಕೇಸರಿ

(5) ಬಾಲ್–ಪಾಯಿಂಟ್ ಪೆನ್ನುಗಳ ರೀಫಿಲ್‌ಗಳು

(6) ಲೈಟರ್‌ಗಳ ಇಂಧನ, ರೀಫಿಲ್ಲಿಂಗ್‌ನ ಸೌಲಭ್ಯವಿಲ್ಲ ಅನಿಲಯುಕ್ತ ಲೈಟರ್‌ಗಳನ್ನೊಳಗೊಂಡಂತೆ

(7) ಸೆಲ್‌ಗಳು, ಬ್ಯಾಟರಿಗಳು ಮತ್ತು ಮರುಭಾರ್ಜಾಗಬಲ್ಲ ಬ್ಯಾಟರಿಗಳು

(8) ಪೆಟ್ರೋಲಿಯಂ ಉತ್ಪನ್ನಗಳು

(9) ಅಪಾಯಕಾರಿ ಡ್ರಗ್‌ಗಳು ಮತ್ತು ಸೈಕೋಟ್ರೋಪಿಕ್ ಪದಾರ್ಥಗಳು

(10) ಕಸ್ಟಂ ಟಾರಿಫ್ ಅಧಿನಿಯಮ, 1975 (1975ರ ಕೇಂದ್ರ ಅಧಿನಿಯಮ 51)ದ ಮೊದಲ ಅನುಸೂಚಿಯ ಪ್ರಕರಣ VIರಡಿಯಲ್ಲಿ ಬರುವ ಬಲ್ಕ್ ಡ್ರಗ್‌ಗಳು ಮತ್ತು ರಾಸಾಯನಿಕಗಳು

(11) ಕಸ್ಟಂ ಟಾರಿಫ್ ಅಧಿನಿಯಮ, 1975 (1975ರ ಕೇಂದ್ರ ಅಧಿನಿಯಮ 51)ದ ಮೊದಲ ಅನುಸೂಚಿಯ ಅಧ್ಯಾಯ 30ರಡಿಯಲ್ಲಿ ಬರುವ ಫಾರ್ಮಾಸ್ಯೂಟಿಕಲ್ ಪದಾರ್ಥಗಳು

(12) ಪಟಾಕಿಗಳು

(13) ರಕ್ತಚಂದನ

(14) ಶ್ರೀಗಂಧ

(15) ಕಸ್ಟಂ ಟಾರಿಫ್ ಅಧಿನಿಯಮ, 1975 (1975ರ ಕೇಂದ್ರ ಅಧಿನಿಯಮ 51)ದ ಮೊದಲ ಅನುಸೂಚಿಯ ಅಧ್ಯಾಯ 1 ರಿಂದ 24ರ ಅಡಿಯಲ್ಲಿ ಬರುವ ಎಲ್ಲಾ ತೆರಿಗೆದಾಯಕ ಸರಕುಗಳು

(16) ವೇಗವಾದ ಬದಲಾವಣೆ ಅಥವಾ ಹೊಸ ಮಾಡೆಲ್‌ಗಳು ಇತ್ಯಾದಿಗಳ ಕಾರಣದಿಂದ ಮೌಲ್ಯದಲ್ಲಿ ವೇಗದ ಕುಸಿತವಾಗುವ ಎಲ್ಲಾ ಕ್ಲೇಮುಮಾಡದ/ ಬಿಟ್ಟುಹೋದ ಸರಕುಗಳು

(17) ಸದರಿ ಅಧಿನಿಯಮದ ಪ್ರಕರಣ 67ರ ಅಡಿಯಲ್ಲಿ ಯುಕ್ತ ಅಧಿಕಾರಿಯಿಂದ ವಶಕ್ಕೆ ಪಡೆಯಲಾದ, ಆದರೆ ಸದರಿ ಅಧಿನಿಯಮದ ಪ್ರಕರಣ 67ರ ಉಪಪ್ರಕರಣ (6)ರ ಅಡಿಯಲ್ಲಿ ಪ್ರಾಸ್ತಾವಿಕವಾಗಿ ಬಿಡುಗಡೆ ಮಾಡಬೇಕಾದ, ಆದರೆ ಸಂಬಂಧಿಸಿದ ವ್ಯಕ್ತಿಯಿಂದ, ಪ್ರಾಸ್ತಾವಿಕ ಬಿಡುಗಡೆಗಾಗಿ ಮುಚ್ಚಳಿಕೆಯನ್ನು ಮಾಡಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗಾಗಿ, ಪ್ರಾಸ್ತಾವಿಕ ಬಿಡುಗಡೆಯನ್ನು ತೆಗೆದುಕೊಳ್ಳದ, ಯಾವುದೇ ಸರಕುಗಳು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (13/2018)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:06.08.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 148ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ಪೂರ್ಣವಾದ ನಮೂನೆ ಜಿಎಸ್ಟಿ ಆರ್ಇಜಿ–26ನ್ನು ಡಿಸೆಂಬರ್ 31, 2017ರ ತನಕ ಸಲ್ಲಿಸದ, ಆದರೆ ತಾತ್ಕಾಲಿಕ ಗುರುತಿನ ಸಂಖ್ಯೆ (ಪಿಐಡಿ)ಯನ್ನು ಪಡೆದ ವ್ಯಕ್ತಿಗಳನ್ನು (ಇನ್ನು ಮುಂದೆ "ಅಂಥ ಕರದಾತರು" ಎಂದು ಉಲ್ಲೇಖಿಸಲಾಗಿದೆ) ಈಗ ಸರಕು ಮತ್ತು ಸೇವೆಗಳ ತೆರಿಗೆ ಗುರುತಿನ ಸಂಖ್ಯೆ (ಜಿಎಸ್ಟಿಐಎನ್)ಗಾಗಿ ಅರ್ಜಿಯನ್ನು ಸಲ್ಲಿಸಬಹುದೆಂದು ನಿರ್ದಿಷ್ಟಪಡಿಸಿದೆ.

2. ಅಂಥ ಕರದಾತರ ನೊಂದಣಿಗಾಗಿ ಪಾಲಿಸಬೇಕಾದ ವಿಶೇಷ ಕಾರ್ಯವಿಧಾನವು ಈ ಕೆಳಗಿನಂತೆ ವಿವರಿಸಲಾಗಿದೆ:

(i) ಈ ಕೆಳಗಿನ ಕೋಷ್ಟಕದ ಪ್ರಕಾರ ವಿವರಗಳನ್ನು ಅಂಥ ಕರದಾತರು ಕರ್ನಾಟಕ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಕ್ಷೇತ್ರವ್ಯಾಪ್ತಿಯ ನೋಡಲ್ ಅಧಿಕಾರಿಗೆ 2018ರ ಆಗಸ್ಟ್ 31ರಂದು ಅಥವಾ ಅದಕ್ಕೂ ಮುಂಚಿತವಾಗಿ ಸಲ್ಲಿಸತಕ್ಕದ್ದು.

ಕೋಷ್ಟಕ

1	ತಾತ್ಕಾಲಿಕ ಗುರುತಿನ ಸಂಖ್ಯೆ	
2	ಹಿಂದಿನ ಕಾನೂನಿನ ಅಡಿಯಲ್ಲಿ ನೋಂದಣಿ ಸಂಖ್ಯೆ (ಕರದಾತನ ಗುರುತಿನ ಸಂಖ್ಯೆ (ಟಿಐಎನ್) / ಕೇಂದ್ರ ಅಬಕಾರಿ ಸುಂಕ/ ಸೇವಾ ತೆರಿಗೆ ನೋಂದಣಿ ಸಂಖ್ಯೆ)	
3	ಮೊದಲ ಬಾರಿಗೆ ಟೋಕನ್ ಹಂಚಿಕೆಯಾದ ದಿನಾಂಕ	
4	ಮೇಲೆ ಹೇಳಿದ ನಮೂನೆ ಜಿಎಸ್ಟಿ ಆರ್ಇಜಿ–26ರ ಭಾಗ ಎಯನ್ನು ಸಕ್ರಿಯಗೊಳಿಸಿದೆಯೇ?	ಹೌದು / ಇಲ್ಲ
5	ಕರದಾತನ ಸಂಪರ್ಕದ ವಿವರಗಳು	
5ಎ	ಇಮೇಲ್ ಐಡಿ	
5ಬಿ	ಮೊಬೈಲ್	
6	ವ್ಯವಸ್ಥೆಯಲ್ಲಿ ವಲಸೆಯಾಗದುದಕ್ಕಾಗಿ ಕಾರಣ	
7	ಕೋರಿಕೆಯನ್ನು ಕಳುಹಿಸುತ್ತಿರುವ ಅಧಿಕಾರಿಯ ಕ್ಷೇತ್ರವ್ಯಾಪ್ತಿ	

(ii) ಸರಕು ಮತ್ತು ಸೇವೆಗಳ ನೆಟ್ವರ್ಕ್ (ಜಿಎಸ್ಟಿಎನ್)ನಿಂದ ಇಮೇಲ್ ಸ್ವೀಕರಿಸಿದ ನಂತರ, ಅಂಥ ಕರದಾತರು, (https://www.gst.goc.in/) ಗೆ ಲಾಗ್ ಆನ್ ಆಗಿ "ಸರ್ವಿಸಸ್" ಟ್ಯಾಬ್‌ನಲ್ಲಿ ನೋಂದಣಿಗಾಗಿ ಅರ್ಜಿ ಸಲ್ಲಿಸತಕ್ಕದ್ದು ಮತ್ತು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಮೂನೆ ಜಿಎಸ್ಟಿ ಆರ್ಇಜಿ–01ರಲ್ಲಿನ ಅರ್ಜಿಯನ್ನು ತುಂಬತಕ್ಕದ್ದು.

(iii) ಯುಕ್ತ ಅಧಿಕಾರಿಯ ಪರಿಶೀಲನಾನಂತರದ ಸಮ್ಮತಿಯ ನಂತರ, ಅಂಥ ಕರದಾತರು, ಜಿಎಸ್‌ಟಿಎನ್‌ನಿಂದ, ಅರ್ಜಿ ಉಲ್ಲೇಖ ಸಂಖ್ಯೆ (ಎಆರ್‌ಎನ್), ಒಂದು ಹೊಸ ಜಿಎಸ್‌ಟಿಐಎನ್ ಮತ್ತು ಒಂದು ಹೊಸ ಅವಕಾಶ ಟೋಕನ್‌ನ್ನು ನಮೂದಿಸಿರುವ, ಒಂದು ಇಮೇಲ್‌ಅನ್ನು ಸ್ವೀಕರಿಸುತ್ತಾರೆ.

(iv) ಸ್ವೀಕರಣೆಯ ನಂತರ, ಅಂಥ ಕರದಾತರು ದಿನಾಂಕ 2018ರ ಸೆಪ್ಟಂಬರ್ 30ರಂದು ಅಥವಾ ಅದಕ್ಕಿಂತಲೂ ಮುಂಚೆ, migration@gstn.org.inಗೆ ಇಮೇಲ್ ಮೂಲಕ ಜಿಎಸ್‌ಟಿಎನ್‌ಗೆ ಈ ಕೆಳಕಂಡ ವಿವರಗಳನ್ನು ಸಲ್ಲಿಸುವ ಅವಶ್ಯಕತೆಯಿರುತ್ತದೆ:–

(ಎ) ಹೊಸ ಜಿಎಸ್‌ಟಿಐಎನ್;
(ಬಿ) ಹೊಸ ಜಿಎಸ್‌ಟಿಐಎನ್‌ಗಾಗಿ ಅವಕಾಶ ಟೋಕನ್;
(ಸಿ) ಹೊಸ ಅರ್ಜಿಯ ಎಆರ್‌ಎನ್;
(ಡಿ) ಹಳೆಯ ಜಿಎಸ್‌ಟಿಐಎನ್ (ಪಿಐಡಿ).

(v) ಅಂಥ ಕರದಾತರಿಂದ ಮೇಲಿನ ಮಾಹಿತಿಯು ಸ್ವೀಕಾರವಾದ ನಂತರ, ಜಿಎಸ್‌ಟಿಎನ್, ಹೊಸ ಜಿಎಸ್‌ಟಿಐಎನ್‌ಅನ್ನು ಹಳೆಯ ಜಿಎಸ್‌ಟಿಐಎನ್‌ಗೆ ಹೊಂದಿಸುವ ಪ್ರಕ್ರಿಯೆಯನ್ನು ಪೂರ್ಣಗೊಳಿಸತಕ್ಕದ್ದು ಮತ್ತು ಅಂಥ ಕರದಾತರಿಗೆ ತಿಳಿಸತಕ್ಕದ್ದು.

(vi) ಅಂಥ ಕರದಾತರು ನೋಂದಣಿ ಪ್ರಮಾಣಪತ್ರದ ಸೃಷ್ಟಿಗಾಗಿ ತಮ್ಮ ಹಳೆಯ ಜಿಎಸ್‌ಟಿಐಎನ್ ಅನ್ನು "First Time Login" ಆಗಿ ಬಳಸಿಕೊಂಡು ಸಾಮಾನ್ಯ ಪೋರ್ಟಲ್ www.gstn.gov.in ಗೆ ಲಾಗ್ ಆನ್ ಆಗುವ ಅವಶ್ಯಕವಿರುತ್ತದೆ.

3. ಅಂಥ ಕರದಾತರು ದಿನಾಂಕ 2017ರ ಜುಲೈ 1ರಿಂದ ಜಾರಿಗೆ ಬರುವಂತೆ ನೋಂದಾಯಿತರಾಗಿದ್ದಾರೆ ಎಂದು ಪರಿಭಾವಿಸತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಪವನ್ ಕುಮಾರ್ ಮಾಲಪಾಟಿ
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಬಿ&ಆರ್)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (14/2018)
ಸಂಖ್ಯೆ. ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ:10.08.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ "ಸದರಿ ಅಧಿನಿಯಮ" ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 148ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಹಿಂದಿನ ಹಣಕಾಸು ವರ್ಷದಲ್ಲಿ ಅಥವಾ ಪ್ರಸಕ್ತ ಹಣಕಾಸು ವರ್ಷದಲ್ಲಿ ರೂ.1.5 ಕೋಟಿಯ ವರೆಗಿನ ಸಮಗ್ರ ವಹಿವಾಟನ್ನು ಹೊಂದಿರುವ

ನೋಂದಾಯಿತ ವ್ಯಕ್ತಿಗಳನ್ನು, ಸರಕು ಅಥವಾ ಸೇವೆಗಳು ಅಥವಾ ಅವೆರಡರ ಹೊರಮುಖ ಪೂರೈಕೆಗಳ ವಿವರಗಳನ್ನು ಸಲ್ಲಿಸುವುದಕ್ಕಾಗಿ ಈ ಕೆಳಗೆ ಹೇಳಲಾದ ವಿಶೇಷ ವಿಧಾನವನ್ನು ಪಾಲಿಸತಕ್ಕವರೆಂದು ಈ ಮೂಲಕ ಅಧಿಸೂಚಿಸಿದೆ.

2. ಸದರಿ ವ್ಯಕ್ತಿಗಳು, ಕೆಳಗಿನ ಕೋಷ್ಟಕದ ಅಂಕಣ (2)ರಲ್ಲಿ ನಿರ್ದಿಷ್ಟಪಡಿಸಿದ ತ್ರೈಮಾಸಿಕದಲ್ಲಿ ಮಾಡಿದ ಸರಕು ಅಥವಾ ಸೇವೆಗಳು ಅಥವಾ ಅವೆರಡರ ಹೊರಮುಖ ಪೂರೈಕೆಯ ವಿವರಗಳನ್ನು, ಸಂಬಂಧಿಸಿದ ನಮೂದಗೆ ಸದರಿ ಕೋಷ್ಟಕದ ಅಂಕಣ (3)ರಲ್ಲಿ ನಿರ್ದಿಷ್ಟಪಡಿಸಿದ ಕಾಲಾವಧಿಯ ತನಕ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಮೂನೆ ಜಿಎಸ್‌ಟಿಆರ್–1ನಲ್ಲಿ ಸಲ್ಲಿಸಬಹುದು, ಅಂದರೆ:–

ಕೋಷ್ಟಕ

ಕ್ರಮ ಸಂಖ್ಯೆ	**ಯಾವ ತ್ರೈಮಾಸಿಕಕ್ಕೆ ನಮೂನೆ ಜಿಎಸ್‌ಟಿಆರ್–1ರಲ್ಲಿ ವಿವರಗಳನ್ನು ಸಲ್ಲಿಸಲಾಗಿದೆ**	**ಯಾವ ತ್ರೈಮಾಸಿಕಕ್ಕೆ ನಮೂನೆ ಜಿಎಸ್‌ಟಿಆರ್–1ರಲ್ಲಿ ವಿವರಗಳನ್ನು ಸಲ್ಲಿಸಲು ಕಾಲಾವಧಿ**
(1)	(2)	(3)
1	ಜುಲೈ – ಸೆಪ್ಟಂಬರ್, 2018	ಅಕ್ಟೋಬರ್ 31, 2018
2	ಅಕ್ಟೋಬರ್ – ಡಿಸೆಂಬರ್, 2018	ಜನವರಿ 31, 2019
3	ಜನವರಿ – ಮಾರ್ಚ್, 2019	ಏಪ್ರಿಲ್ 30, 2019

3. ಜುಲೈ 2018ರಿಂದ ಮಾರ್ಚ್ 2019ರವರೆಗಿನ ತಿಂಗಳುಗಳ, ಸದರಿ ಅಧಿನಿಯಮದ ಪ್ರಕರಣ 38ರ ಉಪಪ್ರಕರಣ (2)ರ ಮತ್ತು ಪ್ರಕರಣ 39ರ ಉಪಪ್ರಕರಣ (1)ರ ಅಡಿಯಲ್ಲಿ ವಿವರ ಅಥವಾ ಸಂದರ್ಭಾನುಸಾರವಾಗಿ, ರಿಟರ್ನ್‌ಅನ್ನು ಸಲ್ಲಿಸುವುದಕ್ಕಾಗಿ ಕಾಲಮಿತಿಯನ್ನು ಅಧಿಕೃತ ರಾಜ್ಯಪತ್ರದಲ್ಲಿ ನಂತರದಲ್ಲಿ ಅಧಿಸೂಚಿಸಲಾಗುವುದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಪವನ್ ಕುಮಾರ್ ಮಾಲಪಾಟಿ
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಬಿ&ಆರ್)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (15/2018)
ಸಂಖ್ಯೆ. ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ:25.08.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 128ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ದಿನಾಂಕ 10ನೇ ಆಗಸ್ಟ್, 2018ರ ಕರ್ನಾಟಕದ ವಿಶೇಷ ರಾಜ್ಯಪತ್ರ, ಭಾಗ IVA, ಸಂ.1254ರಲ್ಲಿ ಪ್ರಕಟಿತವಾದ ಕರ್ನಾಟಕ ಸರ್ಕಾರದ ಅಧಿಸೂಚನೆ (14/2018) ಸಂ. ಆಇ 47 ಸಿಎಸ್‌ಎಲ್ 2017 ದಿನಾಂಕ 10ನೇ ಆಗಸ್ಟ್, 2018ರಲ್ಲಿ ಈ ಕೆಳಗಿನ ತಿದ್ದುಪಡಿಗಳನ್ನು ಮಾಡಿದೆ:–

ಸದರಿ ಅಧಿಸೂಚನೆಯ ಎರಡನೇಯ ಖಂಡಿಕೆಯಲ್ಲಿ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:–

"ಪರಂತು, ಕರ್ನಾಟಕ ರಾಜ್ಯದಲ್ಲಿನ ಕೊಡಗು ಜಿಲ್ಲೆಯಲ್ಲಿ ವ್ಯವಹಾರದ ಪ್ರಧಾನ ಸ್ಥಳವಿರುವ ನೋಂದಾಯಿತ ವ್ಯಕ್ತಿಗಳಿಗಾಗಿ ಜುಲೈ 2018ರಿಂದ ಸೆಪ್ಟಂಬರ್ 2018ರ ವರೆಗಿನ ತ್ರೈಮಾಸಿಕಕ್ಕಾಗಿ ನಮೂನೆ ಜಿಎಸ್‌ಟಿಆರ್–1ರಲ್ಲಿ ರಿಟರ್ನ್‌ಅನ್ನು ಸಾಮಾನ್ಯ ಪೋರ್ಟಲ್‌ನ ಮೂಲಕ ವಿದ್ಯುನ್ಮಾನ ರೀತಿಯಲ್ಲಿ 2018ರ ನವೆಂಬರ್ 15ರಂದು ಅಥವಾ ಅದಕ್ಕೂ ಮುಂಚೆ ಸಲ್ಲಿಸತಕ್ಕದ್ದು.".

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ನೇತ್ರಪ್ರಭ ಎಂ. ಧಾಯಪುಲೆ
ಪ್ರಭಾರ ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (16/2018)
ಸಂಖ್ಯೆ. ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ:25.08.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 128ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ಈ ಕೆಳಗಿನ ಕರದಾತರ ಸಮೂಹಗಳಿಂದ, ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿ ಭರಿಸಿದ ವಿಳಂಬ ಶುಲ್ಕವನ್ನು ಈ ಮೂಲಕ ಮನ್ನಾ ಮಾಡಿದೆ:–

(i) ಅಕ್ಟೋಬರ್, 2017ರ ತಿಂಗಳಿಗಾಗಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಮೂನೆ ಜಿಎಸ್‌ಟಿಆರ್–3ಬಿಯಲ್ಲಿ ರಿಟರ್ನ್‌ಅನ್ನು ಸಲ್ಲಿಸಿದ ಆದರೆ ಅರ್ಜಿ ಉಲ್ಲೇಖ ಸಂಖ್ಯೆ ಸೃಷ್ಟಿಯಾದ ಮೇಲೆ, ಸಾಮಾನ್ಯ ಪೋರ್ಟಲ್‌ನ ಮೇಲೆ ದಾಖಲಾಗದ ನೋಂದಾಯಿತ ವ್ಯಕ್ತಿಗಳು;

(ii) ಅಕ್ಟೋಬರ್ ನಿಂದ ಡಿಸೆಂಬರ್, 2017ರ ಅವಧಿಗಾಗಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಮೂನೆ ಜಿಎಸ್‌ಟಿಆರ್–4ಯಲ್ಲಿ ಕಡೆಯ ದಿನಾಂಕದ ಒಳಗೆ ರಿಟರ್ನ್‌ಅನ್ನು ಸಲ್ಲಿಸಿದ ಆದರೆ ಸಾಮಾನ್ಯ ಪೋರ್ಟಲ್‌ನಲ್ಲಿ ವಿಳಂಬ ಶುಲ್ಕವನ್ನು ತಪ್ಪಾಗಿ ವಿಧಿಸಿದ ನೋಂದಾಯಿತ ವ್ಯಕ್ತಿಗಳು;

(iii) 2018ರ ಜನವರಿ 1ನೆ ದಿನ ಮತ್ತು 2018ರ ಜನವರಿ 23ನೆ ದಿನಗಳ ನಡುವೆ ಯಾವುದೇ ತೆರಿಗೆ ಅವಧಿಗಾಗಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಮೂನೆ ಜಿಎಸ್‌ಟಿಆರ್–6ರಲ್ಲಿ ರಿಟರ್ನ್‌ಅನ್ನು ಸಲ್ಲಿಸಿದಕ್ಕಾಗಿ ಅಥವಾ ದಾಖಲಿಸಿದಕ್ಕಾಗಿ ವಿಳಂಬ ಶುಲ್ಕವನ್ನು ಭರಿಸಿದಂತಹ ಹೂಡುವಳಿ ಸೇವೆಗಳ ವಿತರಕರು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ನೇತ್ರಪ್ರಭ ಎಂ. ಧಾಯಪುಲೆ

ಪ್ರಭಾರ ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (17/2018)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:10.09.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ "ಸದರಿ ಅಧಿನಿಯಮ" ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 148ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮತ್ತು ಈ ಕೆಳಗಿನ ಅಧಿಸೂಚನೆಗಳನ್ನು –

(i) ದಿನಾಂಕ ನವೆಂಬರ್ 15, 2017ರ ಕರ್ನಾಟಕ ರಾಜ್ಯಪತ್ರ, ಅಸಾಧಾರಣ, ಭಾಗ IVA, ಸಂ.1043ರಲ್ಲಿ ಪ್ರಕಟವಾದ ದಿನಾಂಕ ನವೆಂಬರ್ 15, 2017ರ ಅಧಿಸೂಚನೆ (19/2017) ಸಂ. ಆಇ 47 ಸಿಎಸ್ಎಲ್ 2017

(ii) ದಿನಾಂಕ ಏಪ್ರಿಲ್ 11, 2018ರ ಕರ್ನಾಟಕ ರಾಜ್ಯಪತ್ರ, ಅಸಾಧಾರಣ, ಭಾಗ IVA, ಸಂ.568ರಲ್ಲಿ ಪ್ರಕಟವಾದ ದಿನಾಂಕ ಏಪ್ರಿಲ್ 11, 2018ರ ಅಧಿಸೂಚನೆ (09/2018) ಸಂ. ಆಇ 47 ಸಿಎಸ್ಎಲ್ 2017

(iii) ದಿನಾಂಕ ಆಗಸ್ಟ್ 10, 2018ರ ಕರ್ನಾಟಕ ರಾಜ್ಯಪತ್ರ, ಅಸಾಧಾರಣ, ಭಾಗ IVA, ಸಂ.1254ರಲ್ಲಿ ಪ್ರಕಟವಾದ ದಿನಾಂಕ ಆಗಸ್ಟ್ 10, 2018ರ ಅಧಿಸೂಚನೆ (14/2018) ಸಂ. ಆಇ 47 ಸಿಎಸ್ಎಲ್ 2017

ರದ್ದುಪಡಿಸಿ, ಅಂಥ ರದ್ದುಪಡಿಸುವಿಕೆಗೆ ಮುನ್ನ ಮಾಡಿರುವ ಅಥವಾ ಮಾಡದೇ ಇರುವ ಕಾರ್ಯಗಳಿಗೆ ಸಂಬಂಧಿಸುವುದನ್ನು ಉಳಿದು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ಹಿಂದಿನ ಹಣಕಾಸು ವರ್ಷದಲ್ಲಿ ಅಥವಾ ಪ್ರಸಕ್ತ ಹಣಕಾಸು ವರ್ಷದಲ್ಲಿ ರೂ.1.5 ಕೋಟಿಯ ವರೆಗಿನ ಸಮಗ್ರ ವಹಿವಾಟನ್ನು ಹೊಂದಿರುವ ನೋಂದಾಯಿತ ವ್ಯಕ್ತಿಗಳನ್ನು, ಸರಕು ಅಥವಾ ಸೇವೆಗಳು ಅಥವಾ ಅವೆರಡರ ಹೊರಮುಖ ಪೂರೈಕೆಗಳ ವಿವರಗಳನ್ನು ಸಲ್ಲಿಸುವುದಕ್ಕಾಗಿ ಈ ಕೆಳಗೆ ಹೇಳಲಾದ ವಿಶೇಷ ವಿಧಾನವನ್ನು ಪಾಲಿಸುವವರೆಂದು ಈ ಮೂಲಕ ಅಧಿಸೂಚಿಸಿದೆ.

2. ಅಂಥ ವ್ಯಕ್ತಿಗಳು, ಕೆಳಗಿನ ಕೋಷ್ಟಕದ ಅಂಕಣ (2)ರಲ್ಲಿ ನಿರ್ದಿಷ್ಟಪಡಿಸಿದ ತ್ರೈಮಾಸಿಕದಲ್ಲಿ ಮಾಡಿದ ಸರಕು ಅಥವಾ ಸೇವೆಗಳು ಅಥವಾ ಅವೆರಡರ ಹೊರಮುಖ ಪೂರೈಕೆಯ ವಿವರಗಳನ್ನು, ಸಂಬಂಧಿಸಿದ ನಮೂದಗೆ ಸದರಿ ಕೋಷ್ಟಕದ ಅಂಕಣ (3)ರಲ್ಲಿ ನಿರ್ದಿಷ್ಟಪಡಿಸಿದ ಕಾಲಾವಧಿಯ ತನಕ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಮೂನೆ ಜಿಎಸ್ಟಿಆರ್–1ನಲ್ಲಿ ಸಲ್ಲಿಸಬಹುದು, ಅಂದರೆ:–

ಕೋಷ್ಟಕ

ಕ್ರಮ ಸಂಖ್ಯೆ	**ಯಾವ ತ್ರೈಮಾಸಿಕಕ್ಕೆ ನಮೂನೆ ಜಿಎಸ್ಟಿಆರ್–1ರಲ್ಲಿ ವಿವರಗಳನ್ನು ಸಲ್ಲಿಸಲಾಗಿದೆ**	**ಯಾವ ತ್ರೈಮಾಸಿಕಕ್ಕೆ ನಮೂನೆ ಜಿಎಸ್ಟಿಆರ್–1ರಲ್ಲಿ ವಿವರಗಳನ್ನು ಸಲ್ಲಿಸಲು ಕಾಲಾವಧಿ**
(1)	(2)	(3)
1	ಜುಲೈ – ಸೆಪ್ಟಂಬರ್, 2017	ಅಕ್ಟೋಬರ್ 31, 2018
2	ಅಕ್ಟೋಬರ್ –ಡಿಸೆಂಬರ್, 2017	ಅಕ್ಟೋಬರ್ 31, 2018
3	ಜನವರಿ – ಮಾರ್ಚ್, 2018	ಅಕ್ಟೋಬರ್ 31, 2018
4	ಏಪ್ರಿಲ್ – ಜೂನ್, 2018	ಅಕ್ಟೋಬರ್ 31, 2018

5	ಜುಲೈ – ಸೆಪ್ಟಂಬರ್, 2018	ಅಕ್ಟೋಬರ್ 31, 2018
6	ಅಕ್ಟೋಬರ್ –ಡಿಸೆಂಬರ್, 2018	ಜನವರಿ 31, 2019
7	ಜನವರಿ – ಮಾರ್ಚ್, 2019	ಏಪ್ರಿಲ್ 30, 2019

ಪರಂತು, ಕರ್ನಾಟಕ ರಾಜ್ಯದಲ್ಲಿನ ಕೊಡಗು ಜಿಲ್ಲೆಯಲ್ಲಿ ವ್ಯವಹಾರದ ಪ್ರಧಾನ ಸ್ಥಳವಿರುವ ನೋಂದಾಯಿತ ವ್ಯಕ್ತಿಗಳಿಗಾಗಿ ಜುಲೈ 2018ರಿಂದ ಸೆಪ್ಟಂಬರ್ 2018ರ ವರೆಗಿನ ತ್ರೈಮಾಸಿಕಕ್ಕಾಗಿ ನಮೂನೆ ಜಿಎಸ್‌ಟಿಆರ್–1ರಲ್ಲಿ ರಿಟರ್ನ್‌ಅನ್ನು ಸಾಮಾನ್ಯ ಪೋರ್ಟಲ್‌ನ ಮೂಲಕ ವಿದ್ಯುನ್ಮಾನ ರೀತಿಯಲ್ಲಿ 2018ರ ನವೆಂಬರ್ 15ರಂದು ಅಥವಾ ಅದಕ್ಕೂ ಮುಂಚೆ ಸಲ್ಲಿಸತಕ್ಕದ್ದು:

ಮತ್ತೂ ಪರಂತು, ದಿನಾಂಕ ಆಗಸ್ಟ್ 6, 2018ರ ಕರ್ನಾಟಕ ರಾಜ್ಯಪತ್ರ, ಅಸಾಧಾರಣ, ಭಾಗ IVA, ಸಂ.1216ರಲ್ಲಿ ಪ್ರಕಟವಾದ ದಿನಾಂಕ ಆಗಸ್ಟ್ 6, 2018ರ ಅಧಿಸೂಚನೆ (13/2018) ಸಂ. ಆಇ 47 ಸಿಎಸ್‌ಎಲ್ 2017ರ ಪ್ರಕಾರ ಸರಕು ಮತ್ತು ಸೇವೆಗಳ ತೆರಿಗೆ ಗುರುತಿನ ಸಂಖ್ಯೆ (ಜಿಎಸ್‌ಟಿಐಎನ್) ಪಡೆದಂತಹ ಕರದಾತರು ಜುಲೈ 2017ರಿಂದ ಸೆಪ್ಟಂಬರ್ 2018ರವರೆಗಿನ ತ್ರೈಮಾಸಿಕಗಳಿಗಾಗಿ ನಮೂನೆ ಜಿಎಸ್‌ಟಿಆರ್–1ರಲ್ಲಿ ಸರಕು ಅಥವಾ ಸೇವೆಗಳು ಅಥವಾ ಅವೆರಡರ ಹೊರಮುಖ ಪೂರೈಕೆಗಳ ವಿವರಗಳನ್ನು ಸಾಮಾನ್ಯ ಪೋರ್ಟಲ್‌ನ ಮುಖಾಂತರ ವಿದ್ಯುನ್ಮಾನ ರೀತಿಯಲ್ಲಿ 2018ರ ಡಿಸೆಂಬರ್ 31ನೇ ದಿನದಂದು ಅಥವಾ ಅದಕ್ಕೂ ಮುಂಚಿತವಾಗಿ ಸಲ್ಲಿಸತಕ್ಕದ್ದು;

3. ಜುಲೈ 2017ರಿಂದ ಮಾರ್ಚ್ 2019ರವರೆಗಿನ ತಿಂಗಳುಗಳ, ಸದರಿ ಅಧಿನಿಯಮದ ಪ್ರಕರಣ 38ರ ಉಪಪ್ರಕರಣ (2)ರ ಮತ್ತು ಪ್ರಕರಣ 39ರ ಉಪಪ್ರಕರಣ (1)ರ ಅಡಿಯಲ್ಲಿ ವಿವರ ಅಥವಾ ಸಂದರ್ಭಾನುಸಾರವಾಗಿ, ರಿಟರ್ನ್‌ಅನ್ನು ಸಲ್ಲಿಸುವುದಕ್ಕಾಗಿ ಕಾಲಮಿತಿಯನ್ನು ಅಧಿಕೃತ ರಾಜ್ಯಪತ್ರದಲ್ಲಿ ನಂತರದಲ್ಲಿ ಅಧಿಸೂಚಿಸಲಾಗುವುದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ನೇತ್ರಪ್ರಭ ಎಂ. ಧಾಯಪುಲೆ
ಪ್ರಭಾರ ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (18/2018)
ಸಂಖ್ಯೆ. ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ:14.09.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನುಮುಂದೆ "ಸದರಿ ಅಧಿನಿಯಮ" ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 1ರ ಉಪಪ್ರಕರಣ (3)ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮತ್ತು ದಿನಾಂಕ 16ನೇ ಸೆಪ್ಟಂಬರ್, 2017ರ ಕರ್ನಾಟಕದ ವಿಶೇಷ ರಾಜ್ಯಪತ್ರ, ಭಾಗ IVA, ಸಂ.888ರಲ್ಲಿ ಪ್ರಕಟಿತವಾದ ಕರ್ನಾಟಕ ಸರ್ಕಾರದ ಅಧಿಸೂಚನೆ (7/2017) ಸಂ. ಆಇ 47 ಸಿಎಸ್‌ಎಲ್ 2017 ದಿನಾಂಕ 16ನೇ ಸೆಪ್ಟಂಬರ್, 2017ರನ್ನು ರದ್ದುಪಡಿಸಿ, ಅಂಥ ರದ್ದುಪಡಿಸುವಿಕೆಗೆ ಮುನ್ನ ಮಾಡಿರುವ ಅಥವಾ ಮಾಡದೇ ಇರುವ ಕಾರ್ಯಗಳಿಗೆ ಸಂಬಂಧಿಸುವುದನ್ನು ಉಳಿದು, ಕರ್ನಾಟಕ ಸರ್ಕಾರವು, 2018ರ ಅಕ್ಟೋಬರ್ 1ನೇ ದಿನವನ್ನು, ಸದರಿ ಅಧಿನಿಯಮದ ಪ್ರಕರಣ 51ರ ಉಪಪ್ರಕರಣ (1)ರ ಖಂಡ (ಎ), (ಬಿ) ಮತ್ತು (ಸಿ) ಮತ್ತು ಸದರಿ ಅಧಿನಿಯಮದ ಪ್ರಕರಣ 51ರ ಉಪಪ್ರಕರಣ (1)ರ ಖಂಡ (ಡಿ)ಯ ಅಡಿಯಲ್ಲಿ ಈ ಕೆಳಗೆ ನಿರ್ದಿಷ್ಟಪಡಿಸಿದ ವ್ಯಕ್ತಿಗಳಿಗೆ, ಅಂದರೆ:–

(ಎ) ಮಾಲೀಕತ್ವ ಅಥವಾ ನಿಯಂತ್ರಣದ ರೂಪದಲ್ಲಿ ಶೇಕಡಾ 51 ಅಥವಾ ಹೆಚ್ಚಿನ ಭಾಗವಹಿಸುವಿಕೆ ಇರುವ ಯಾವುದೇ ಕಾರ್ಯವನ್ನು ಮಾಡುವುದಕ್ಕಾಗಿ –

(i) ಸಂಸತ್ತಿನ ಅಥವಾ ಒಂದು ರಾಜ್ಯದ ಶಾಸಕಾಂಗದ ಅಧಿನಿಯಮದಿಂದ ಸ್ಥಾಪಿತವಾದ; ಅಥವಾ

(ii) ಯಾವುದೇ ಸರ್ಕಾರದಿಂದ ಸ್ಥಾಪಿಸಲಾದ,

ಒಂದು ಪ್ರಾಧಿಕಾರ ಅಥವಾ ಮಂಡಳಿ ಅಥವಾ ಇತರೆ ವರ್ಗ;

(ಬಿ) ಸಂಘಗಳ ನೋಂದಣಿ ಅಧಿನಿಯಮ, 1860 (1860ರ ಅಧಿನಿಯಮ 21)ದ ಅಡಿಯಲ್ಲಿ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಒಂದು ಸ್ಥಳೀಯ ಪ್ರಾಧಿಕಾರದಿಂದ ಸ್ಥಾಪಿಸಲಾದ ಸಂಘ

(ಸಿ) ಸಾರ್ವಜನಿಕ ಕ್ಷೇತ್ರದ ಉದ್ಯಮಗಳು

ಸಂಬಂಧಿಸಿದಂತೆ, ಸದರಿ ಅಧಿನಿಯಮದ ಪ್ರಕರಣ 51ರ ಉಪಬಂಧಗಳು ಜಾರಿಗೆ ಬರುವ ದಿನಾಂಕವೆಂದು ನಿಯುಕ್ತಿಗೊಳಿಸಿದೆ.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ನೇತ್ರಪ್ರಭ ಎಂ. ಧಾಯಪುಲೆ
ಪ್ರಭಾರ ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (19/2018)
ಸಂಖ್ಯೆ. ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ:14.09.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ **"ಸದರಿ ಅಧಿನಿಯಮ"** ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 1ರ ಉಪಪ್ರಕರಣ (3)ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು 2018ರ ಅಕ್ಟೋಬರ್ 1ನೇ ದಿನವನ್ನು, ಸದರಿ ಅಧಿನಿಯಮದ ಪ್ರಕರಣ 52ರ ಉಪಬಂಧಗಳು ಜಾರಿಗೆ ಬರುವ ದಿನಾಂಕವೆಂದು ಈ ಮೂಲಕ ನಿಯುಕ್ತಿಗೊಳಿಸಿದೆ.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ನೇತ್ರಪ್ರಭ ಎಂ. ಧಾಯಪುಲೆ
ಪ್ರಭಾರ ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (20/2018)
ಸಂಖ್ಯೆ. ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ:20.09.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 52ರ ಉಪಪ್ರಕರಣ (1)ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಏಜೆಂಟನಾಗಿಲ್ಲದ, ಪ್ರತಿ ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕನನ್ನು, ತನ್ನ ಮುಖಾಂತರ ಬೇರೆ ಪೂರೈಕೆದಾರರು ಮಾಡಿದ ರಾಜ್ಯದೊಳಗಿನ ತೆರಿಗೆದಾಯಕ ಪೂರೈಕೆಗಳ, ಅಂಥ ಪೂರೈಕೆಗಳಿಗೆ ಸಂಬಂಧಿಸಿದ ಪ್ರತಿಫಲವನ್ನು ಸದರಿ ನಿರ್ವಾಹಕನಿಂದ ಸಂಗ್ರಹಿಸಬೇಕಾಗಿರುವ, ನಿವ್ವಳ ಮೌಲ್ಯದ ಶೇಕಡ ಅರ್ಧದ ದರದಲ್ಲಿ ಲೆಕ್ಕಹಾಕಲಾದ ಒಂದು ಮೊತ್ತವನ್ನು ಸಂಗ್ರಹಿಸತಕ್ಕದ್ದೆಂದು ಅಧಿಸೂಚಿಸಿದೆ.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ನೇತ್ರಪ್ರಭ ಎಂ. ಧಾಯಪುಲೆ
ಪ್ರಭಾರ ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (21/2018)
ಸಂಖ್ಯೆ. ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ:25.10.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನುಮುಂದೆ "ಸದರಿ ಅಧಿನಿಯಮ" ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 23ರ ಉಪಪ್ರಕರಣ (2)ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಮತ್ತು ದಿನಾಂಕ 16ನೇ ಸೆಪ್ಟಂಬರ್, 2017ರ ಕರ್ನಾಟಕದ ವಿಶೇಷ ರಾಜ್ಯಪತ್ರ, ಭಾಗ IVA, ಸಂ.887ರಲ್ಲಿ ಪ್ರಕಟಿತವಾದ ಕರ್ನಾಟಕ ಸರ್ಕಾರದ ಅಧಿಸೂಚನೆ (6/2017) ಸಂ. ಆಇ 47 ಸಿಎಸ್‌ಎಲ್ 2017 ದಿನಾಂಕ 16ನೇ ಸೆಪ್ಟಂಬರ್, 2017ರನ್ನು ರದ್ದುಪಡಿಸಿ, ಅಂಥ ರದ್ದುಪಡಿಸುವಿಕೆಗೆ ಮುನ್ನ ಮಾಡಿರುವ ಅಥವಾ ಮಾಡದೇ ಇರುವ ಕಾರ್ಯಗಳಿಗೆ ಸಂಬಂಧಿಸುವುದನ್ನು ಉಳಿದು, ಕರ್ನಾಟಕ ಸರ್ಕಾರವು, ಸದರಿ ಅಧಿನಿಯಮದ ಅಡಿಯಲ್ಲಿ ನೋಂದಣಿಯನ್ನು ಪಡೆಯುವುದಕ್ಕೆ ವಿನಾಯಿತರಾದ ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿಗಳ ವರ್ಗ (ಇನ್ನು ಮುಂದೆ "ಸದರಿ ವ್ಯಕ್ತಿಗಳು" ಎಂದು ಉಲ್ಲೇಖಿಸಲಾಗಿದೆ) ಗಳನ್ನು ಈ ಮೂಲಕ ನಿರ್ದಿಷ್ಟಪಡಿಸಿದೆ –

(i) ದಿನಾಂಕ 2018ರ ಜುಲೈ 26ರಂದು ಕರ್ನಾಟಕದ ವಿಶೇಷ ರಾಜ್ಯಪತ್ರ, ಭಾಗ IVA, ಸಂ.990ರಲ್ಲಿ ಪ್ರಕಟಿತವಾದ ಕರ್ನಾಟಕ ಸರ್ಕಾರದ ಅಧಿಸೂಚನೆ (21/2018) ಸಂ. ಆಇ 48 ಸಿಎಸ್‌ಎಲ್ 2017 ದಿನಾಂಕ 26ನೇ ಜುಲೈ, 2018ರ "ವಿವರಣೆ"ಯಲ್ಲಿ ಪರಿಭಾಷಿಸಿಲಾದಂತಹ ಮತ್ತು ಸದರಿ ಅಧಿಸೂಚನೆಯಲ್ಲಿ ಒಳಗೊಂಡಿರುವ ಕೋಷ್ಟಕದ ಅಂಕಣ (2)ರಲ್ಲಿ ನಿರ್ದಿಷ್ಟಪಡಿಸಿದ ಅಧ್ಯಾಯ,

ಶಿರೋನಾಮೆ, ಉಪ–ಶಿರೋನಾಮೆ ಅಥವಾ ದರದ ವಸ್ತುಗಳಲ್ಲಿ ಒಳಗೊಂಡಿರುವ ಮತ್ತು ಸದರಿ ಅಧಿಸೂಚನೆಯಲ್ಲಿ ಒಳಗೊಂಡಿರುವ ಕೋಷ್ಟಕದ ಅಂಕಣ (3)ರಲ್ಲಿ ಸಂಬಂಧಿಸಿದ ನಮೂದಿಗೆ ನಿರ್ದಿಷ್ಟಪಡಿಸಿದ ವಿವರಗಳನ್ನು ಹೊಂದಿರುವ ಕರಕುಶಲ ಸರಕುಗಳ ಅಂತರ್–ರಾಜ್ಯ ತೆರಿಗೆದಾಯಕ ಪೂರೈಕೆಗಳನ್ನು ಮಾಡುತ್ತಿರುವ ಅಂಥ ವ್ಯಕ್ತಿಗಳು; ಅಥವಾ

(ii) ಕೆಳಗಿನ ಕೋಷ್ಟಕದ ಅಂಕಣ (2)ರಲ್ಲಿ ನಮೂದಿಸಿದ ಮತ್ತು ಸದರಿ ಕೋಷ್ಟಕದ ಅಂಕಣ (3)ರಲ್ಲಿ ಸಂಬಂಧಿಸಿದ ನಮೂದಿಗೆ ನಿರ್ದಿಷ್ಟಪಡಿಸಿದ ಹಾರ್ಮೊನೈಸ್ಡ್ ಸಿಸ್ಟಂ ಆಫ್ ನಾಮೆನ್‌ಕ್ಲೇಚರ್ (ಹೆಚ್‌ಎಸ್‌ಎನ್) ಕೋಡ್‌ನ ಉತ್ಪನ್ನಗಳ ಅಂತರ್–ರಾಜ್ಯ ತೆರಿಗೆದಾಯಕ ಪೂರೈಕೆಗಳನ್ನು ಮಾಡುತ್ತಿರುವ ಅಂಥ ವ್ಯಕ್ತಿಗಳು, ಬಹುತೇಕ ಕೈಗಳಿಂದ, ಉತ್ಪಾದನೆಯಲ್ಲಿ ಸ್ವಲ್ಪ ಯಂತ್ರಗಳನ್ನು ಬಳಸಲಾಗಿದ್ದರೂ ಸಹ, ಕಸುಬುದಾರರಿಂದ ಮಾಡಲಾಗಿದ್ದರೆ:–

ಕ್ರ. ಸಂ.	ಉತ್ಪನ್ನಗಳು	ಹೆಚ್‌ಎಸ್‌ಎನ್ ಕೋಡ್
1.	ಚರ್ಮದ ವಸ್ತುಗಳು (ಬ್ಯಾಗ್‌ಗಳು, ಪರ್ಸುಗಳು, ಸ್ಯಾಡ್ಲೆರಿ, ಹಾರ್ನೆಸ್, ಗಾರ್ಮೆಂಟುಗಳನ್ನು ಒಳಗೊಂಡಂತೆ)	4201, 4202, 4203
2.	ಕೆತ್ತಲಾದ ಮರದ ಉತ್ಪನ್ನಗಳು (ಬಾಕ್ಸ್‌ಗಳು, ಇನ್ಲೇ ಕೆಲಸ, ಕೇಸುಗಳು, ಕ್ಯಾಸ್ಕುಗಳನ್ನು ಒಳಗೊಂಡಂತೆ)	4415, 4416
3.	ಕೆತ್ತಲಾದ ಮರದ ಉತ್ಪನ್ನಗಳು (ಟೇಬಲ್ ಮತ್ತು ಕಿಚನ್‌ವೇರ್ ಒಳಗೊಂಡಂತೆ)	4419
4.	ಕೆತ್ತಲಾದ ಮರದ ಉತ್ಪನ್ನಗಳು	4420
5.	ವುಡ್ ಟರ್ನಿಂಗ್ ಮತ್ತು ಲ್ಯಾಕರ್‌ವೇರ್	4421
6.	ಬಿದಿರಿನ ಉತ್ಪನ್ನಗಳು (ಆಲಂಕಾರಿಕ ಮತ್ತು ನಿತ್ಯಬಳಕೆಯ ವಸ್ತುಗಳು)	46
7.	ಹುಲ್ಲು, ಎಲೆ ಮತ್ತು ತೊಗಟೆ ಮತ್ತು ನಾರಿನ ಉತ್ಪನ್ನಗಳು, ಚಾಪೆಗಳು, ಪೌಚುಗಳು, ವ್ಯಾಲೆಟ್‌ಗಳು	4601, 4602
8.	ಪೇಪರ್ ಮಾಚೆ ಉತ್ಪನ್ನಗಳು	4823
9.	ಜವಳಿ (ಕೈಮಗ್ಗದ ಉತ್ಪನ್ನಗಳು)	50, 58, 62, 63ನ್ನು ಒಳಗೊಂಡಂತೆ
10.	ಟೆಕ್ಸ್‌ಟೈಲ್ ಹ್ಯಾಂಡ್ ಪ್ರಿಂಟಿಂಗ್	50. 52, 54
11.	ಝರಿ ದಾರ	5605
12.	ಕಾರ್ಪೆಟ್, ರಗ್ಗು ಮತ್ತು ಡರ್ರಿಗಳು	57
13.	ಟೆಕ್ಸ್‌ಟೈಲ್ಸ್ ಹ್ಯಾಂಡ್ ಎಂಬ್ರಾಯ್ಡರಿ	58
14.	ರಂಗ ದಿರಿಸುಗಳು	61, 62, 63
15.	ನಾರಿನ ಉತ್ಪನ್ನಗಳು (ಚಾಪೆಗಳು, ಹಾಸಿಗೆಗಳನ್ನು ಒಳಗೊಂಡಂತೆ)	5705, 9404

16.	ಚರ್ಮದ ಪಾದರಕ್ಷೆಗಳು	6403, 6405
17.	ಕೆತ್ತಲಾದ ಕಲ್ಲಿನ ಉತ್ಪನ್ನಗಳು (ಮೂರ್ತಿಗಳು, ಕಿರುವಿಗ್ರಹಗಳು, ಪ್ರಾಣಿಗಳ ಶಿಲ್ಪಗಳು, ಬರವಣಿಗೆ ಸೆಟ್ಟುಗಳು, ಬೂದಿಪೆಟ್ಟಿಗೆ, ಮೇಣದ ಬತ್ತಿ ಸ್ಟಾಂಡ್ ಒಳಗೊಂಡಂತೆ)	6802
18.	ಕಲ್ಲಿನ ಇನ್ಲೇ ವರ್ಕ್	68
19.	ಕುಂಬಾರಿಕೆ ಮತ್ತು ಜೇಡಿಯ ಉತ್ಪನ್ನಗಳು, ಟೆರ್ರಕೋಟಾ ಒಳಗೊಂಡಂತೆ	6901, 6909, 6911, 6912, 6913, 6914
20.	ಲೋಹದ ಟೇಬಲ್ ಮತ್ತು ಕಿಚನ್‌ವೇರ್ (ತಾಮ್ರ, ಕಂಚಿನ ವೇರ್)	7418
21.	ಲೋಹದ ಮೂರ್ತಿಗಳು, ಇಮೇಜುಗಳು/ ಮೂರ್ತಿಗಳ ವೇಸುಗಳು, ಅಧ್ಯಾಯ 73 ಮತ್ತು 74ರ ಲೋಹಗಳ ಅಲಂಕಾರಕ್ಕಾಗಿ ಉಪಯೋಗಿಸಿದ ರೀತಿಯ ಅರ್ನ್‌ಗಳು ಮತ್ತು ಕ್ರಾಸುಗಳು	8306
22.	ಲೋಹದ ಬಿದ್ರಿವೇರ್	8306
23.	ಸಂಗೀತದ ಸಾಧನಗಳು	92
24.	ಕೊಂಬು ಮತ್ತು ಮೂಳೆಯ ಉತ್ಪನ್ನಗಳು	96
25.	ಶಂಖ ಚಿಪ್ಪಿನ ಕಲಾಕೃತಿಗಳು	96
26.	ಬಿದಿರಿನ ಫರ್ನಿಚರ್, ಕೇನ್/ ರತ್ತನ್ ಫರ್ನಿಚರ್	94
27.	ಗೊಂಬೆಗಳು ಮತ್ತು ಆಟಿಕೆಗಳು	9503
28.	ಜಾನಪದ ಪೇಂಟಿಂಗ್‌ಗಳು, ಮಧುಬನಿ, ಪಟಚಿತ್ರ, ರಾಜಾಸ್ಥಾನಿ ಮಿನಿಯೇಚರ್	97

ಪರಂತು, ಅಂಥ ವ್ಯಕ್ತಿಗಳು ಭಾರತದ ವಿಶೇಷ ರಾಜ್ಯಪತ್ರ, ಭಾಗ–II, ಪ್ರಕರಣ 3, ಉಪಪ್ರಕರಣ (i) ಸಂ. ಜಿ.ಎಸ್.ಆರ್.1052(ಇ) ದಿನಾಂಕ ಅಕ್ಟೋಬರ್ 22, 2018ರಲ್ಲಿ ಪ್ರಕಟವಾದ ಅಧಿಸೂಚನೆ ಸಂ.03/2018– ಏಕೀಕೃತ ತೆರಿಗೆ, ದಿನಾಂಕ ಅಕ್ಟೋಬರ್ 22, 2018ರ ಪ್ರಯೋಜನವನ್ನು ಉಪಯೋಗಿಸುತ್ತಿರಬೇಕು:

ಮತ್ತೂ ಪರಂತು, ಅಖಿಲ ಭಾರತದ ಆಧಾರದ ಮೇಲೆ ಲೆಕ್ಕಹಾಕಲಾದ, ಅಂಥ ಪೂರೈಕೆಗಳ ಸಮಗ್ರ ಮೌಲ್ಯವು, ಸದರಿ ಅಧಿನಿಯಮದ ಪ್ರಕರಣ 22ರ ಉಪಪ್ರಕರಣ (1)ರ, ಆ ಪ್ರಕರಣದ ವಿವರಣೆಯ ಖಂಡ (iii)ದೊಡನೆ ಓದಲಾದ, ಪ್ರಕಾರ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿ ಪೂರೈಕೆದಾರನಿಗೆ ಯಾವ ಸಮಗ್ರ ವಹಿವಾಟನ್ನು ಮೀರಿದರೆ ನೋಂದಣಿಗೆ ಬಾಧ್ಯತೆಯು ಉಂಟಾಗುತ್ತದೋ ಆ ಮೊತ್ತವನ್ನು ಮೀರಿರಬಾರದು.

2. ಹಿಂದಿನ ಖಂಡಿಕೆಯಲ್ಲಿ ಹೇಳಲಾದ ಅಂಥ ವ್ಯಕ್ತಿಗಳು, ಶಾಶ್ವತ ಖಾತೆಯ ಸಂಖ್ಯೆಯನ್ನು ಪಡೆಯತಕ್ಕದ್ದು ಮತ್ತು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಿಯಮ 138ರ ಉಪಬಂಧಗಳಿಗೆ ಅನುಸಾರವಾಗಿ ಒಂದು ಇ–ವೇಬಿಲ್ಲನ್ನು ಸೃಷ್ಟಿಸತಕ್ಕದ್ದು.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 128ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ಈ ಕೆಳಗಿನ ಕರದಾತರ ಸಮೂಹಗಳಿಂದ, ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿ ಭರಿಸಿದ ವಿಳಂಬ ಶುಲ್ಕವನ್ನು ಈ ಮೂಲಕ ಮನ್ನಾ ಮಾಡಿದೆ:–

(iv) ಅಕ್ಟೋಬರ್, 2017ರ ತಿಂಗಳಿಗಾಗಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಮೂನೆ ಜಿಎಸ್‌ಟಿಆರ್–3ಬಿಯಲ್ಲಿ ರಿಟರ್ನ್‌ಅನ್ನು ಸಲ್ಲಿಸಿದ ಆದರೆ ಅರ್ಜಿ ಉಲ್ಲೇಖ ಸಂಖ್ಯೆ ಸೃಷ್ಟಿಯಾದ ಮೇಲೆ, ಸಾಮಾನ್ಯ ಪೋರ್ಟಲ್‌ನ ಮೇಲೆ ದಾಖಲಾಗದ ನೋಂದಾಯಿತ ವ್ಯಕ್ತಿಗಳು;

(v) ಅಕ್ಟೋಬರ್ ನಿಂದ ಡಿಸೆಂಬರ್, 2017ರ ಅವಧಿಗಾಗಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಮೂನೆ ಜಿಎಸ್‌ಟಿಆರ್–4ಯಲ್ಲಿ ಕಡೆಯ ದಿನಾಂಕದ ಒಳಗೆ ರಿಟರ್ನ್‌ಅನ್ನು ಸಲ್ಲಿಸಿದ ಆದರೆ ಸಾಮಾನ್ಯ ಪೋರ್ಟಲ್‌ನಲ್ಲಿ ವಿಳಂಬ ಶುಲ್ಕವನ್ನು ತಪ್ಪಾಗಿ ವಿಧಿಸಿದ ನೋಂದಾಯಿತ ವ್ಯಕ್ತಿಗಳು;

(vi) 2018ರ ಜನವರಿ 1ನೆ ದಿನ ಮತ್ತು 2018ರ ಜನವರಿ 23ನೆ ದಿನಗಳ ನಡುವೆ ಯಾವುದೇ ತೆರಿಗೆ ಅವಧಿಗಾಗಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಮೂನೆ ಜಿಎಸ್‌ಟಿಆರ್–6ರಲ್ಲಿ ರಿಟರ್ನ್‌ಅನ್ನು ಸಲ್ಲಿಸಿದಕ್ಕಾಗಿ ಅಥವಾ ದಾಖಲಿಸಿದಕ್ಕಾಗಿ ವಿಳಂಬ ಶುಲ್ಕವನ್ನು ಭರಿಸಿದಂತಹ ಹೂಡುವಳಿ ಸೇವೆಗಳ ವಿತರಕರು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ತಿದ್ದೋಲೆ
ಸಂಖ್ಯೆ. ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ:19.11.2018.

ದಿನಾಂಕ 2018ರ ಅಕ್ಟೋಬರ್ 25ರ ಕರ್ನಾಟಕದ ವಿಶೇಷ ರಾಜ್ಯಪತ್ರ, ಭಾಗ IVA, ಸಂ.1419ರಲ್ಲಿ ಪ್ರಕಟಿತವಾದ ಕರ್ನಾಟಕ ಸರ್ಕಾರದ ಅಧಿಸೂಚನೆ (21/2018) ಸಂ. ಆಇ 47 ಸಿಎಸ್‌ಎಲ್ 2017 ದಿನಾಂಕ 25ನೇ ಅಕ್ಟೋಬರ್, 2018ರಲ್ಲಿ, ಪುಟ 2ರಲ್ಲಿ, ಖಂಡಿಕೆ 2ರಲ್ಲಿ, **"ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ"** ಪದಗಳಿಂದ ಆರಂಭವಾಗುವ ಮತ್ತು **"ವಿಳಂಬ ಶುಲ್ಕವನ್ನು ಭರಿಸಿದಂತಹ ಹೂಡುವಳಿ ಸೇವೆಗಳ ವಿತರಕರು."** ಪದಗಳಿಂದ ಅಂತ್ಯವಾಗುವ ಖಂಡಿಕೆಗಳನ್ನು ಬಿಟ್ಟುಬಿಡತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (22/2018)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:25.10.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನುಮುಂದೆ ಈ ಅಧಿಸೂಚನೆಯಲ್ಲಿ "ಸದರಿ ಅಧಿನಿಯಮ" ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 1ರ ಉಪಪ್ರಕರಣ (3)ರಲ್ಲಿ, ಸದರಿ ಅಧಿನಿಯಮದ ಪ್ರಕರಣ 51ರೊಡನೆ ಓದಲಾದ, ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ದಿನಾಂಕ 14ನೇ ಸೆಪ್ಟಂಬರ್, 2018ರ ಕರ್ನಾಟಕದ ವಿಶೇಷ ರಾಜ್ಯಪತ್ರ, ಭಾಗ IVA, ಸಂ.1334ರಲ್ಲಿ ಪ್ರಕಟಿತವಾದ ಕರ್ನಾಟಕ ಸರ್ಕಾರದ ಅಧಿಸೂಚನೆ (18/2018) ಸಂ. ಆಇ 47 ಸಿಎಸ್ಎಲ್ 2017 ದಿನಾಂಕ 14ನೇ ಸೆಪ್ಟಂಬರ್, 2018ನಲ್ಲಿ ಈ ಕೆಳಕಂಡ ಮುಂದುವರೆದ ತಿದ್ದುಪಡಿಗಳನ್ನು ಈ ಮೂಲಕ ಮಾಡುತ್ತದೆ, ಅಂದರೆ:–

ಅಧಿಸೂಚನೆಯ ಖಂಡಿಕೆಯಲ್ಲಿ, ಈ ಕೆಳಕಂಡ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:–

"ಪರಂತು, ಅಧಿನಿಯಮದ ಪ್ರಕರಣ 51ರ ಉಪಪ್ರಕರಣ (1)ರ ಖಂಡಿಕೆ (ಎ)ದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ವ್ಯಕ್ತಿಗಳಿಗೆ ಸಂಬಂಧಿಸಿದಂತೆ, 2018ರ ಅಕ್ಟೋಬರ್ 1ನೇ ದಿನದಿಂದ ಜಾರಿಗೆ ಬರುವಂತೆ, ರಕ್ಷಣಾ ಸಚಿವಾಲಯದ ಅಡಿಯಲ್ಲಿನ ಪ್ರಾಧಿಕಾರಗಳಿಗೆ, ಅನುಬಂಧ–ಎನಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರಗಳು ಮತ್ತು ಅವುಗಳ ಕಛೇರಿಗಳನ್ನು ಹೊರತುಪಡಿಸಿದಂತೆ, ಈ ಅಧಿಸೂಚನೆಯ ಯಾವುದೂ ಅನ್ವಯವಾಗತಕ್ಕದ್ದಲ್ಲ."

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಅನುಸೂಚಿ 'ಎ'

ರಕ್ಷಣಾ ಅಕೌಂಟುಗಳ ಪ್ರಿನ್ಸಿಪಲ್ ಕಂಟ್ರೋಲರ್‌ಗಳು / ಕಂಟ್ರೋಲರ್‌ಗಳಿಗೆ ನೀಡಲಾದ ಕೋಡ್ ಸಂಖ್ಯೆಗಳು

ಕ್ರ.ಸಂ.	ಕಂಟ್ರೋಲರ್/ ಕಛೇರಿಯ ಪದನಾಮ	ಕೋಡ್ ಸಂ.
1.	ರಕ್ಷಣಾ ಅಕೌಂಟುಗಳ ಕಂಟ್ರೋಲರ್, ಪಟ್ನಾ	00
2.	ರಕ್ಷಣಾ ಅಕೌಂಟುಗಳ ಪ್ರಿನ್ಸಿಪಲ್ ಕಂಟ್ರೋಲರ್ (ಪೆನ್ಶನ್ಸ್), ಅಲಾಹಾಬಾದ್	01
3.	ರಕ್ಷಣಾ ಅಕೌಂಟುಗಳ ಪ್ರಿನ್ಸಿಪಲ್ ಕಂಟ್ರೋಲರ್ (ಅಧಿಕಾರಿಗಳು), ಪುಣೆ	02
4.	ರಕ್ಷಣಾ ಅಕೌಂಟುಗಳ ಕಂಟ್ರೋಲರ್ (ಆರ್ಮಿ), ಮೀರಠ್	03
5.	ರಕ್ಷಣಾ ಅಕೌಂಟುಗಳ ಪ್ರಿನ್ಸಿಪಲ್ ಕಂಟ್ರೋಲರ್, ದಕ್ಷಿಣ ಕಮಾಂಡ್, ಪುಣೆ	04
6.	ರಕ್ಷಣಾ ಅಕೌಂಟುಗಳ ಪ್ರಿನ್ಸಿಪಲ್ ಕಂಟ್ರೋಲರ್, ಬೆಂಗಳೂರು	05
7.	ರಕ್ಷಣಾ ಅಕೌಂಟುಗಳ ಪ್ರಿನ್ಸಿಪಲ್ ಕಂಟ್ರೋಲರ್, ಪಶ್ಚಿಮ ಕಮಾಂಡ್, ಚಂಡೀಗಢ	06
8.	ಅಕೌಂಟುಗಳ ಪ್ರಿನ್ಸಿಪಲ್ ಕಂಟ್ರೋಲರ್ (ಫ್ಯಾಕ್ಟರೀಸ್), ಕೋಲ್ಕತಾ	07
9.	ರಕ್ಷಣಾ ಅಕೌಂಟುಗಳ ಪ್ರಿನ್ಸಿಪಲ್ ಕಂಟ್ರೋಲರ್ (ಏರ್‌ಫೋರ್ಸ್), ದೆಹ್ರಾಡೂನ್	08

10.	ರಕ್ಷಣಾ ಅಕೌಂಟುಗಳ ಪ್ರಿನ್ಸಿಪಲ್ ಕಂಟ್ರೋಲರ್ (ನೇವಿ), ಮುಂಬಯಿ	09
11.	ರಕ್ಷಣಾ ಅಕೌಂಟುಗಳ ಕಂಟ್ರೋಲರ್ (ಫಂಡ್ಸ್), ಮೀರಠ್	10
12.	ರಕ್ಷಣಾ ಅಕೌಂಟುಗಳ ಪ್ರಿನ್ಸಿಪಲ್ ಕಂಟ್ರೋಲರ್, ಉತ್ತರ ಕಮಾಂಡ್, ಜಮ್ಮು	12
13.	ಝೋನಲ್ ಕಛೇರಿ (ಪೆನ್ಶನ್ ಡಿಸ್‌ಬರ್ಸ್‌ಮೆಂಟ್), ಚೆನ್ನೈ	13
14.	ಏಓ, ಡಿಎಡಿ, ರಕ್ಷಣಾ ಸಚಿವಾಲಯ (ಸಿವಿಲ್), ನವದೆಹಲಿ	14
15.	ರಕ್ಷಣಾ ಅಕೌಂಟುಗಳ ಕಂಟ್ರೋಲರ್, ಕ್ಯಾಂಟೀನ್ ಸ್ಟೋರ್ಸ್ ಡಿಪಾರ್ಟ್‌ಮೆಂಟ್, ಮುಂಬಯಿ	15
16.	ರಕ್ಷಣಾ ಅಕೌಂಟುಗಳ ಪ್ರಿನ್ಸಿಪಲ್ ಕಂಟ್ರೋಲರ್, ನವದೆಹಲಿ	16
17.	ರಕ್ಷಣಾ ಅಕೌಂಟುಗಳ ಕಂಟ್ರೋಲರ್, ಚೆನ್ನೈ	18
18.	ರಕ್ಷಣಾ ಅಕೌಂಟುಗಳ ಪ್ರಿನ್ಸಿಪಲ್ ಕಂಟ್ರೋಲರ್ (ಆರ್&ಡಿ), ನವ ದೆಹಲಿ	19
19.	ರಕ್ಷಣಾ ಅಕೌಂಟುಗಳ ಕಂಟ್ರೋಲರ್ (ಪೆನ್ಶನ್ ಡಿಸ್‌ಬರ್ಸ್‌ಮೆಂಟ್), ಮೀರಠ್	20
20.	ರಕ್ಷಣಾ ಅಕೌಂಟುಗಳ ಕಂಟ್ರೋಲರ್, ಗೌಹಾಟಿ	21
21.	ರಕ್ಷಣಾ ಅಕೌಂಟುಗಳ ಪ್ರಿನ್ಸಿಪಲ್ ಕಂಟ್ರೋಲರ್, (ಸಿಸಿ), ಲಕ್ನೌ	22
22.	ರಕ್ಷಣಾ ಅಕೌಂಟುಗಳ ಪ್ರಿನ್ಸಿಪಲ್ ಕಂಟ್ರೋಲರ್ (ಬಾರ್ಡರ್ ರೋಡ್ಸ್), ನವ ದೆಹಲಿ	23
23.	ರಕ್ಷಣಾ ಅಕೌಂಟುಗಳ ಕಂಟ್ರೋಲರ್ (ಆರ್&ಡಿ), ಬೆಂಗಳೂರು	24
24.	ರಕ್ಷಣಾ ಅಕೌಂಟುಗಳ ಕಂಟ್ರೋಲರ್, ಸಿಕಂದರಾಬಾದ್	25
25.	ರಕ್ಷಣಾ ಅಕೌಂಟುಗಳ ಕಂಟ್ರೋಲರ್, ಜಬಲ್‌ಪುರ	26
26.	ರಕ್ಷಣಾ ಅಕೌಂಟುಗಳ ಪ್ರಿನ್ಸಿಪಲ್ ಕಂಟ್ರೋಲರ್ (ಏರ್‌ಫೋರ್ಸ್), ನವದೆಹಲಿ	27
27.	ರಕ್ಷಣಾ ಅಕೌಂಟುಗಳ ಪ್ರಿನ್ಸಿಪಲ್ ಕಂಟ್ರೋಲರ್ (ಆರ್&ಡಿ), ಹೈದರಾಬಾದ್	28
28.	ರಕ್ಷಣಾ ಅಕೌಂಟುಗಳ ಕಂಟ್ರೋಲರ್, ನವ ದೆಹಲಿ	29
29.	ರಕ್ಷಣಾ ಅಕೌಂಟುಗಳ ಕಂಟ್ರೋಲರ್ (ಐಡಿಎಸ್), ನವದೆಹಲಿ	30
30.	ರಕ್ಷಣಾ ಅಕೌಂಟುಗಳ ಪ್ರಿನ್ಸಿಪಲ್ ಕಂಟ್ರೋಲರ್ (ಎಸ್‌ಡಬ್ಲ್ಯೂಸಿ)	31

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (23/2018)
ಸಂಖ್ಯೆ. ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ:26.10.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನುಮುಂದೆ ಈ ಅಧಿಸೂಚನೆಯಲ್ಲಿ "ಸದರಿ ಅಧಿನಿಯಮ" ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 148ರಲ್ಲಿ ಮತ್ತು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ (ಇನ್ನುಮುಂದೆ ಈ ಅಧಿಸೂಚನೆಯಲ್ಲಿ "ಸದರಿ ನಿಯಮಗಳು" ಎಂದು ಉಲ್ಲೇಖಿಸಲಾಗಿದೆ) ನಿಯಮ 81ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, 2018ರ ಸೆಪ್ಟಂಬರ್ 30ರಂದು ಅಥವಾ ಅದಕ್ಕೂ ಮುಂಚೆ ಯುಕ್ತ ಅಧಿಕಾರಿಯಿಂದ ಯಾರ ನೋಂದಣಿಯು ರದ್ದುಮಾಡಲಾಗಿದೆಯೋ ಅಂತಹ ವ್ಯಕ್ತಿಗಳನ್ನು 2018ರ ಡಿಸೆಂಬರ್ 31ರ ತನಕ ಸದರಿ ನಿಯಮಗಳ ನಮೂನೆ ಜಿಎಸ್‌ಟಿಆರ್–10ರಲ್ಲಿ ಅಂತಿಮ ರಿಟರ್ನ್‌ಅನ್ನು ಸಲ್ಲಿಸತಕ್ಕ ವ್ಯಕ್ತಿಗಳ ಸಮೂಹವೆಂದು ಈ ಮೂಲಕ ಅಧಿಸೂಚಿಸಲಾಗಿದೆ.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (24/2018)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:05.11.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನುಮುಂದೆ ಈ ಅಧಿಸೂಚನೆಯಲ್ಲಿ "ಸದರಿ ಅಧಿನಿಯಮ" ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 1ರ ಉಪಪ್ರಕರಣ (3)ರಲ್ಲಿ, ಸದರಿ ಅಧಿನಿಯಮದ ಪ್ರಕರಣ 51ರೊಡನೆ ಓದಲಾದ, ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ದಿನಾಂಕ 14ನೇ ಸೆಪ್ಟಂಬರ್, 2018ರ ಕರ್ನಾಟಕದ ವಿಶೇಷ ರಾಜ್ಯಪತ್ರ, ಭಾಗ IVA, ಸಂ.1334ರಲ್ಲಿ ಪ್ರಕಟಿತವಾದ ಕರ್ನಾಟಕ ಸರ್ಕಾರದ ಅಧಿಸೂಚನೆ (18/2018) ಸಂ. ಆಇ 47 ಸಿಎಸ್ಎಲ್ 2017 ದಿನಾಂಕ 14ನೇ ಸೆಪ್ಟಂಬರ್, 2018ನಲ್ಲಿ ಈ ಕೆಳಕಂಡ ಮುಂದುವರೆದ ತಿದ್ದುಪಡಿಗಳನ್ನು ಈ ಮೂಲಕ ಮಾಡುತ್ತದೆ, ಅಂದರೆ:–

ಅಧಿಸೂಚನೆಯ ಖಂಡಿಕೆಯಲ್ಲಿ, ಪರಂತುಕದ ನಂತರ, ಈ ಕೆಳಕಂಡ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:–

"ಮತ್ತೂ ಪರಂತು, ಒಂದು ಸಾರ್ವಜನಿಕ ಕ್ಷೇತ್ರದ ಉದ್ದಿಮೆಯಿಂದ ಮತ್ತೊಂದು ಸಾರ್ವಜನಿಕ ಕ್ಷೇತ್ರದ ಉದ್ದಿಮೆಗೆ ಸರಕು ಅಥವಾ ಸೇವೆಗಳು ಅಥವಾ ಅವೆರಡರ ಪೂರೈಕೆಗಳಿಗೆ, ಪ್ರತ್ಯೇಕ ವ್ಯಕ್ತಿಯಾಗಿಯಾಗಲೀ ಅಥವಾ ಅಲ್ಲದೆಯಾಗಲೀ, 2018ರ ಅಕ್ಟೋಬರ್ 1ನೇ ದಿನದಿಂದ ಜಾರಿಗೆ ಬರುವಂತೆ, ಈ ಅಧಿಸೂಚನೆಯ ಯಾವುದೂ ಅನ್ವಯವಾಗತಕ್ಕದ್ದಲ್ಲ."

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (25/2018)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:31.12.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 148ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ದಿನಾಂಕ 6ನೇ ಆಗಸ್ಟ್, 2018ರ ಕರ್ನಾಟಕದ ವಿಶೇಷ ರಾಜ್ಯಪತ್ರ, ಭಾಗ IVA, ಸಂ.1216ರಲ್ಲಿ ಪ್ರಕಟಿತವಾದ ಕರ್ನಾಟಕ ಸರ್ಕಾರದ ಅಧಿಸೂಚನೆ (13/2018) ಸಂ. ಆಇ 47 ಸಿಎಸ್ಎಲ್ 2017 ದಿನಾಂಕ 6ನೇ ಆಗಸ್ಟ್, 2018ನಲ್ಲಿ ಈ ಕೆಳಕಂಡ ಮುಂದುವರೆದ ತಿದ್ದುಪಡಿಗಳನ್ನು ಈ ಮೂಲಕ ಮಾಡುತ್ತದೆ, ಅಂದರೆ:–

ಸದರಿ ಅಧಿಸೂಚನೆಯಲ್ಲಿ, ಖಂಡಿಕೆ 2ರಲ್ಲಿ, –

(i) ಖಂಡ (i)ನಲ್ಲಿ, "2018ರ ಆಗಸ್ಟ್ 31ರಂದು" ಸಂಖ್ಯೆಗಳು, ಅಕ್ಷರಗಳು, ಮತ್ತು ಪದಕ್ಕಾಗಿ, "2019ರ ಜನವರಿ 31ರಂದು" ಸಂಖ್ಯೆಗಳು, ಅಕ್ಷರಗಳು, ಮತ್ತು ಪದವನ್ನು ಪ್ರತಿಯೋಜಿಸತಕ್ಕದ್ದು;

(ii) ಖಂಡ (iv)ನಲ್ಲಿ, "2018ರ ಸೆಪ್ಟಂಬರ್ 30ರಂದು" ಸಂಖ್ಯೆಗಳು, ಅಕ್ಷರಗಳು, ಮತ್ತು ಪದಕ್ಕಾಗಿ, "2019ರ ಫೆಬ್ರವರಿ 28ರಂದು" ಸಂಖ್ಯೆಗಳು, ಅಕ್ಷರಗಳು, ಮತ್ತು ಪದವನ್ನು ಪ್ರತಿಯೋಜಿಸತಕ್ಕದ್ದು;

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (26/2018)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:31.12.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 148ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ದಿನಾಂಕ 11ನೇ ಸೆಪ್ಟಂಬರ್, 2018ರ ಕರ್ನಾಟಕದ ವಿಶೇಷ ರಾಜ್ಯಪತ್ರ, ಭಾಗ IVA, ಸಂ.1329ರಲ್ಲಿ ಪ್ರಕಟಿತವಾದ ಕರ್ನಾಟಕ ಸರ್ಕಾರದ ಅಧಿಸೂಚನೆ (17/2018) ಸಂ. ಆಇ 47 ಸಿಎಸ್ಎಲ್ 2017 ದಿನಾಂಕ 11ನೇ ಸೆಪ್ಟಂಬರ್, 2018ನಲ್ಲಿ ಈ ಕೆಳಕಂಡ ಮುಂದುವರೆದ ತಿದ್ದುಪಡಿಗಳನ್ನು ಈ ಮೂಲಕ ಮಾಡುತ್ತದೆ, ಅಂದರೆ:–

ಸದರಿ ಅಧಿಸೂಚನೆಯಲ್ಲಿ, ಖಂಡಿಕೆ 2ರಲ್ಲಿ, ಎರಡನೇಯ ಪರಂತುಕದಲ್ಲಿ, "ಜುಲೈ 2017ರಿಂದ ಸೆಪ್ಟಂಬರ್ 2018ರವರೆಗಿನ" ಮತ್ತು "2018ರ ಡಿಸೆಂಬರ್ 31ನೇ ದಿನದಂದು" ಪದಗಳು, ಸಂಖ್ಯೆಗಳು ಮತ್ತು ಅಕ್ಷರಗಳಿಗಾಗಿ "ಜುಲೈ 2017ರಿಂದ ಡಿಸೆಂಬರ್ 2018ರವರೆಗಿನ" ಮತ್ತು "2019ರ ಮಾರ್ಚ್ 31ನೇ ದಿನದಂದು" ಪದಗಳು, ಸಂಖ್ಯೆಗಳು ಮತ್ತು ಅಕ್ಷರಗಳನ್ನು ಕ್ರಮಾನುಸಾರವಾಗಿ ಪ್ರತಿಯೋಜಿಸತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (27/2018)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:31.12.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ "ಸದರಿ ಅಧಿನಿಯಮ" ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 1ರ ಉಪಪ್ರಕರಣ (3)ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ದಿನಾಂಕ 14ನೇ ಸೆಪ್ಟಂಬರ್, 2018ರ ಕರ್ನಾಟಕದ ವಿಶೇಷ ರಾಜ್ಯಪತ್ರ, ಭಾಗ IVA, ಸಂ.1334ರಲ್ಲಿ ಪ್ರಕಟಿತವಾದ ಕರ್ನಾಟಕ ಸರ್ಕಾರದ ಅಧಿಸೂಚನೆ (18/2018) ಸಂ. ಆಇ 47 ಸಿಎಸ್ಎಲ್ 2017 ದಿನಾಂಕ 14ನೇ ಸೆಪ್ಟಂಬರ್, 2018ನಲ್ಲಿ ಈ ಕೆಳಕಂಡ ಮುಂದುವರೆದ ತಿದ್ದುಪಡಿಗಳನ್ನು ಈ ಮೂಲಕ ಮಾಡುತ್ತದೆ, ಅಂದರೆ:–

ಸದರಿ ಅಧಿಸೂಚನೆಯಲ್ಲಿ, ಎರಡನೇಯ ಪರಂತುಕದ ನಂತರ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:–

"ಅಲ್ಲದೆ ಪರಂತು, ಸದರಿ ಅಧಿನಿಯಮದ ಪ್ರಕರಣ 51ರ ಉಪಪ್ರಕರಣ (1)ರ ಖಂಡ (ಎ), (ಬಿ), (ಸಿ) ಮತ್ತು (ಡಿ)ಗಳ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಒಬ್ಬ ವ್ಯಕ್ತಿ ಮತ್ತು ಮತ್ತೊಬ್ಬ ವ್ಯಕ್ತಿಗಳ ನಡುವೆ ಮಾಡಲಾಗುವ ಸರಕು ಅಥವಾ ಸೇವೆಗಳು ಅಥವಾ ಅವೆರಡರ ಪೂರೈಕೆಗಳಿಗೆ ಈ ಅಧಿಸೂಚನೆಯ ಯಾವುದೂ ಅನ್ವಯವಾಗತಕ್ಕದ್ದಲ್ಲ.".

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (28/2018)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:31.12.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 128ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ದಿನಾಂಕ 23ನೇ ಜನವರಿ, 2018ರ ಕರ್ನಾಟಕ ರಾಜ್ಯಪತ್ರ, ಅಸಾಧಾರಣ, ಭಾಗ IVA, ಸಂ.177ರಲ್ಲಿ ಪ್ರಕಟಿತವಾದ ಕರ್ನಾಟಕ ಸರ್ಕಾರದ ಅಧಿಸೂಚನೆ (02/2018) ಸಂ. ಆಇ 47 ಸಿಎಸ್ಎಲ್ 2017 ದಿನಾಂಕ 23ನೇ ಜನವರಿ, 2018ನಲ್ಲಿ ಈ ಕೆಳಕಂಡ ತಿದ್ದುಪಡಿಗಳನ್ನು ಈ ಮೂಲಕ ಮಾಡುತ್ತದೆ, ಅಂದರೆ:–

ಸದರಿ ಅಧಿಸೂಚನೆಯಲ್ಲಿ, ಪರಂತುಕದ ನಂತರ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:–

"ಮತ್ತೂ ಪರಂತು, ಕಡೆಯ ದಿನಾಂಕದ ಒಳಗೆ ಜುಲೈ 2017ರಿಂದ ಸೆಪ್ಟಂಬರ್ 2018ರವರೆಗಿನ ತಿಂಗಳುಗಳಿಗಾಗಿ/ ತ್ರೈಮಾಸಿಕಗಳಿಗಾಗಿ ನಮೂನೆ ಜಿಎಸ್ಟಿಆರ್–1ರಲ್ಲಿ ಹೊರಮುಖ ಪೂರೈಕೆಗಳ ವಿವರಗಳನ್ನು ಸಲ್ಲಿಸಲು ವಿಫಲರಾದ, ಆದರೆ ಸದರಿ ವಿವರಗಳನ್ನು ನಮೂನೆ ಜಿಎಸ್ಟಿಆರ್–1ರಲ್ಲಿ ಡಿಸೆಂಬರ್ 22, 2018ರಿಂದ ಮಾರ್ಚ್ 31, 2019ರ ನಡುವಿನ ಅವಧಿಯಲ್ಲಿ ಸಲ್ಲಿಸಿದ, ನೋಂದಾಯಿತ ವ್ಯಕ್ತಿಗಳಿಗಾಗಿ ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿ ಪಾವತಿಸಬೇಕಾದ ವಿಳಂಬ ಶುಲ್ಕದ ಮೊತ್ತವು ಮನ್ನಾ ಆಗತಕ್ಕದ್ದು.".

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ
ಕೆ.ಎಸ್.ಪದ್ಮಾವತಿ

ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (29/2018)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:31.12.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನುಮುಂದೆ "ಸದರಿ ಅಧಿನಿಯಮ" ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 128ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಮತ್ತು ದಿನಾಂಕ 6ನೇ ಸೆಪ್ಟಂಬರ್, 2017ರ ಕರ್ನಾಟಕದ ವಿಶೇಷ ರಾಜ್ಯಪತ್ರ, ಭಾಗ IVA, ಸಂ.871ರಲ್ಲಿ ಪ್ರಕಟಿತವಾದ ಕರ್ನಾಟಕ ಸರ್ಕಾರದ ಅಧಿಸೂಚನೆ (23ಎ/2018) ಸಂ. ಆಇ 47 ಸಿಎಸ್ಎಲ್ 2017 ದಿನಾಂಕ 6ನೇ ಸೆಪ್ಟಂಬರ್, 2017ರನ್ನು, ದಿನಾಂಕ 24ನೇ ಅಕ್ಟೋಬರ್, 2017ರ ಕರ್ನಾಟಕದ ವಿಶೇಷ ರಾಜ್ಯಪತ್ರ, ಭಾಗ IVA, ಸಂ.976ರಲ್ಲಿ ಪ್ರಕಟಿತವಾದ ಕರ್ನಾಟಕ ಸರ್ಕಾರದ ಅಧಿಸೂಚನೆ (23ಬಿ/2018) ಸಂ. ಆಇ 47 ಸಿಎಸ್ಎಲ್ 2017 ದಿನಾಂಕ 24ನೇ ಅಕ್ಟೋಬರ್, 2017ರನ್ನು, ಮತ್ತು ದಿನಾಂಕ 15ನೇ ನವೆಂಬರ್, 2017ರ ಕರ್ನಾಟಕದ ವಿಶೇಷ ರಾಜ್ಯಪತ್ರ, ಭಾಗ IVA, ಸಂ.1044ರಲ್ಲಿ ಪ್ರಕಟಿತವಾದ ಕರ್ನಾಟಕ ಸರ್ಕಾರದ ಅಧಿಸೂಚನೆ (20/2018) ಸಂ. ಆಇ 47 ಸಿಎಸ್ಎಲ್ 2017 ದಿನಾಂಕ 15ನೇ ನವೆಂಬರ್, 2017ರನ್ನು, ರದ್ದುಪಡಿಸಿ, ಅಂಥ ರದ್ದುಪಡಿಸುವಿಕೆಗೆ ಮುನ್ನ ಮಾಡಿರುವ ಅಥವಾ ಮಾಡದೇ ಇರುವ ಕಾರ್ಯಗಳಿಗೆ ಸಂಬಂಧಿಸುವುದನ್ನು ಉಳಿದು, ಕರ್ನಾಟಕ ಸರ್ಕಾರವು, ನಿಗದಿತ ದಿನಾಂಕದೊಳಗೆ ನಮೂನೆ ಜಿಎಸ್ಟಿಆರ್–3ಬಿಯಲ್ಲಿ ಜುಲೈ 2017ರ ತಿಂಗಳ ಮತ್ತು ನಂತರದ ಯಾವುದೇ ತಿಂಗಳಿನ ರಿಟರ್ನ್ಗಳನ್ನು ಸಲ್ಲಿಸಲು ವಿಫಲರಾದದ್ದಕ್ಕಾಗಿ ಯಾವುದೇ ನೋಂದಾಯಿತ ವ್ಯಕ್ತಿಯಿಂದ ಪಾವತಿಸಬೇಕಾದ, ಅಂಥ ವಿಫಲತೆ ಮುಂದುವರೆದಂತಹ ಪ್ರತಿ ದಿನಕ್ಕಾಗಿ ಇಪ್ಪತ್ತೈದು ರೂಪಾಯಿಗಳ ಮೊತ್ತವನ್ನು ಮೀರಿದ, ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿನ ವಿಳಂಬ ಶುಲ್ಕದ ಮೊತ್ತವನ್ನು ಮನ್ನಾ ಮಾಡುತ್ತದೆ:

ಪರಂತು, ಸದರಿ ರಿಟರ್ನ್ನಲ್ಲಿ ಪಾವತಿಸಬೇಕಾದ ರಾಜ್ಯ ತೆರಿಗೆಯ ಒಟ್ಟು ಮೊತ್ತವು ಶೂನ್ಯವಾಗಿದಲ್ಲಿ, ನಿಗದಿತ ದಿನಾಂಕದೊಳಗೆ, ಸದರಿ ರಿಟರ್ನ್ಅನ್ನು ಸಲ್ಲಿಸಲು ವಿಫಲರಾದದ್ದಕ್ಕಾಗಿ ಅಂಥ ನೋಂದಾಯಿತ ವ್ಯಕ್ತಿಯಿಂದ ಪಾವತಿಸಬೇಕಾದ, ಅಂಥ ವಿಫಲತೆ ಮುಂದುವರೆದಂತಹ ಪ್ರತಿ ದಿನಕ್ಕಾಗಿ ಹತ್ತು ರೂಪಾಯಿಗಳ ಮೊತ್ತವನ್ನು ಮೀರಿದ, ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿನ ವಿಳಂಬ ಶುಲ್ಕದ ಮೊತ್ತವು ಮನ್ನಾ ಆಗತಕ್ಕದ್ದು.

ಮತ್ತೂ ಪರಂತು, ಜುಲೈ 2017ರಿಂದ ಸೆಪ್ಟಂಬರ್ 2018ರವರೆಗಿನ ತಿಂಗಳುಗಳಿಗಾಗಿ ನಮೂನೆ ಜಿಎಸ್ಟಿಆರ್–3ಬಿಯಲ್ಲಿ ರಿಟರ್ನ್ಅನ್ನು ನಿಗದಿತ ಸಮಯದೊಳಗೆ ಸಲ್ಲಿಸಲು ವಿಫಲರಾದ, ಆದರೆ ಸದರಿ ರಿಟರ್ನ್ಅನ್ನು 2018ರ ಡಿಸೆಂಬರ್ 22ರಿಂದ 2019ರ ಮಾರ್ಚ್ 31ರ ನಡುವಿನ ಅವಧಿಯಲ್ಲಿ ಸಲ್ಲಿಸಿದ, ನೋಂದಾಯಿತ ವ್ಯಕ್ತಿಯಿಂದ ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿ ಪಾವತಿಸಬೇಕಾದ ವಿಳಂಬ ಶುಲ್ಕದ ಮೊತ್ತವನ್ನು ಮನ್ನಾ ಮಾಡುತ್ತದೆ.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (30/2018)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:31.12.2018.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 128ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ದಿನಾಂಕ 29ನೇ ಡಿಸೆಂಬರ್, 2017ರ ಕರ್ನಾಟಕದ ವಿಶೇಷ ರಾಜ್ಯಪತ್ರ, ಭಾಗ IVA, ಸಂ.1312ರಲ್ಲಿ ಪ್ರಕಟಿತವಾದ ಕರ್ನಾಟಕ ಸರ್ಕಾರದ ಅಧಿಸೂಚನೆ (24/2017) ಸಂ. ಆಇ 47 ಸಿಎಸ್ಎಲ್ 2017 ದಿನಾಂಕ 29ನೇ ಡಿಸೆಂಬರ್, 2017ರಲ್ಲಿ ಈ ಕೆಳಕಂಡ ತಿದ್ದುಪಡಿಗಳನ್ನು ಈ ಮೂಲಕ ಮಾಡುತ್ತದೆ, ಅಂದರೆ:–

ಸದರಿ ಅಧಿಸೂಚನೆಯಲ್ಲಿ, ಮೊದಲನೇಯ ಪರಂತುಕದ ನಂತರ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:–

"ಮತ್ತೂ ಪರಂತು, ಜುಲೈ 2017ರಿಂದ ಸೆಪ್ಟಂಬರ್ 2018ರವರೆಗಿನ ತ್ರೈಮಾಸಿಕಗಳಿಗಾಗಿ ನಮೂನೆ ಜಿಎಸ್ಟಿಆರ್–4ರಲ್ಲಿ ರಿಟರ್ನ್ಅನ್ನು ನಿಗದಿತ ಸಮಯದೊಳಗೆ ಸಲ್ಲಿಸಲು ವಿಫಲರಾದ, ಆದರೆ ಸದರಿ ರಿಟರ್ನ್ಅನ್ನು 2018ರ ಡಿಸೆಂಬರ್ 22ರಿಂದ 2019ರ ಮಾರ್ಚ್ 31ರ ನಡುವಿನ ಅವಧಿಯಲ್ಲಿ ಸಲ್ಲಿಸಿದ, ನೋಂದಾಯಿತ ವ್ಯಕ್ತಿಯಿಂದ ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿ ಪಾವತಿಸಬೇಕಾದ ವಿಳಂಬ ಶುಲ್ಕದ ಮೊತ್ತವನ್ನು ಮನ್ನಾ ಮಾಡುತ್ತದೆ.".

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ.ಎಸ್.ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (01/2019)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:16.01.2019.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 147ರಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ಕರ್ನಾಟಕ ವಿಶೇಷ ರಾಜ್ಯಪತ್ರ, ಭಾಗ–IVA, ಸಂ.969, ದಿನಾಂಕ 19ನೇ ಅಕ್ಟೋಬರ್, 2017ರಲ್ಲಿ ಪ್ರಕಟವಾದ ಅಧಿಸೂಚನೆ (21/2017) ಸಂ. ಆಇ 47 ಸಿಎಸ್ಎಲ್ 2017 ದಿನಾಂಕ 19ನೇ ಅಕ್ಟೋಬರ್, 2017ಯಲ್ಲಿ ಈ ಕೆಳಕಂಡ ತಿದ್ದುಪಡಿಗಳನ್ನು ಮಾಡುತ್ತದೆ, ಅಂದರೆ:–

ಸದರಿ ಅಧಿಸೂಚನೆಯಲ್ಲಿ,

(i) ಕೋಷ್ಟಕದಲ್ಲಿ, ಕ್ರಮ ಸಂಖ್ಯೆ 1ಕ್ಕಿರುವ ಅಂಕಣ(2)ರಲ್ಲಿ, ನಮೂದಿನ ನಂತರ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:–

"ಪರಂತು, ರಫ್ತುಗಳ ತಯಾರಿಕೆಗಾಗಿ ಉಪಯೋಗಿಸಿದ ಹೂಡುವಳಿಗಳ ಮೇಲೆ ಹೂಡುವಳಿ ತೆರಿಗೆ ಜಮೆಯನ್ನು ಉಪಯೋಗಿಸಿದ ನಂತರ ರಫ್ತುಗಳನ್ನು ಈಗಾಗಲೇ ಮಾಡಲಾಗಿದ್ದಲ್ಲಿ, ಪೂರೈಕೆಯಾದ ಸರಕುಗಳನ್ನು ತೆರಿಗೆದಾಯಕ ಸರಕುಗಳ (ಶೂನ್ಯ ದರದ ಅಥವಾ ಪೂರ್ಣವಾಗಿ ವಿನಾಯಿತ ಸರಕುಗಳಲ್ಲದ) ತಯಾರಿಕೆ ಮತ್ತು ಪೂರೈಕೆಗಾಗಿ ಉಪಯೋಗಿಸತಕ್ಕದು ಮತ್ತು ಒಬ್ಬ ಸನ್ನದು ಲೆಕ್ಕಿಗನಿಂದ ಆ ನಿಟ್ಟಿನಲ್ಲಿ ಒಂದು ಪ್ರಮಾಣಪತ್ರವನ್ನು ಜಿಎಸ್‌ಟಿಯ ಕ್ಷೇತ್ರವ್ಯಾಪ್ತಿಯ ಆಯುಕ್ತರಿಗೆ ಅಥವಾ ಅವರಿಂದ ಪ್ರಾಧಿಕೃತಗೊಳಿಸಿದ ಬೇರೆ ಅನ್ಯ ಅಧಿಕಾರಿಗೆ ಅಂಥ ಪೂರೈಕೆಯ ಆರು ತಿಂಗಳ ಒಳಗಾಗಿ ಸಲ್ಲಿಸತಕ್ಕದ್ದು;

ಅಲ್ಲದೆ ಪರಂತು, ರಫ್ತು ಸರಕುಗಳ ತಯಾರಿಕೆಯಲ್ಲಿ ಉಪಯೋಗಿಸಿದ ಹೂಡುವಳಿಗಳ ಮೇಲೆ ಹೂಡುವಳಿ ತೆರಿಗೆ ಜಮೆಯನ್ನು ಉಪಯೋಗಿಸದೇ ಇದ್ದಲ್ಲಿ ಅಂಥ ಪ್ರಮಾಣಪತ್ರದ ಅವಶ್ಯಕತೆಯಿರುವುದಿಲ್ಲ.";

(ii) ಕ್ರಮ ಸಂಖ್ಯೆ 1ದ ವಿವರಣೆಯಲ್ಲಿ, "ರಫ್ತು–ಪೂರ್ವ ಆಧಾರದ ಮೇಲೆ" ಪದಗಳನ್ನು ಬಿಟ್ಟುಬಿಡತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ನೇತ್ರಪ್ರಭಾ ಎಂ.ಧಾಯಪುಲೆ
ಪ್ರಭಾರ ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (02/2019)
ಸಂಖ್ಯೆ: ಆಇ 47 ಸಿಎಸ್‌ಎಲ್ 2017, **ಬೆಂಗಳೂರು ದಿನಾಂಕ:** 29.01.2019

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 2018ರ (2018ರ ಕರ್ನಾಟಕ ಅಧಿನಿಯಮ 3) ಪ್ರಕರಣ 1ರ ಉಪ ಪ್ರಕರಣ(2)ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು, ಪ್ರಕರಣ 8ರ ಉಪಪ್ರಕರಣ (2), ಪ್ರಕರಣ 17, ಪ್ರಕರಣ 18, ಪ್ರಕರಣ 20ರ ಉಪಪ್ರಕರಣ (1)ಗಳನ್ನು ಹೊರತುಪಡಿಸಿ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 2018ರ (2018ರ ಕರ್ನಾಟಕ ಅಧಿನಿಯಮ 3) ಉಪಬಂಧಗಳು, 2019ರ ಫೆಬ್ರವರಿ 1ನೇ ದಿನದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ನೇತ್ರಪ್ರಭಾ ಎಂ.ಧಾಯಪುಲೆ
ಪ್ರಭಾರ ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ತಿದ್ದೋಲೆ
ಸಂಖ್ಯೆ: ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ: 30.07.2019

ಕರ್ನಾಟಕ ರಾಜ್ಯಪತ್ರ, ಅಸಾಧಾರಣ, ಭಾಗ–IVಎ ಸಂಖ್ಯೆ: 75 ದಿನಾಂಕ 29ನೇ ಜನವರಿ 2019ರಂದು ಪ್ರಕಟಿಸಲಾದ ಅಧಿಸೂಚನೆ (02/2019) ಸಂಖ್ಯೆ ಆಇ 47 ಸಿಎಸ್‌ಎಲ್ 2017, ದಿನಾಂಕ 29ನೇ ಜನವರಿ, 2019ರ ಮೊದಲನೇ ಮತ್ತು ಐದನೇ ಸಾಲಿನಲ್ಲಿರುವ, **"**(2018ರ ಕರ್ನಾಟಕ ಅಧಿನಿಯಮ 3)**"** ಪದಗಳು ಮತ್ತು ಸಂಖ್ಯೆಗಳನ್ನು **"**(2019ರ ಕರ್ನಾಟಕ ಅಧಿನಿಯಮ 3)**"** ಪದಗಳು ಮತ್ತು ಸಂಖ್ಯೆಗಳಾಗಿ ಓದಿಕೊಳ್ಳತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ನೇತ್ರಪ್ರಭಾ ಎಂ.ಧಾಯಪುಲೆ
ಪ್ರಭಾರ ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (03/2019)
ಸಂಖ್ಯೆ: ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ: 29.01.2019

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕ ಅಧಿನಿಯಮ 27) ಪ್ರಕರಣ 10ರ ಉಪಪ್ರಕರಣ (1)ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳನ್ವಯ, ಕರ್ನಾಟಕ ರಾಜ್ಯಪತ್ರ, ಅಸಾಧಾರಣ, ಭಾಗ–IVಎ ಸಂಖ್ಯೆ: 583 ದಿನಾಂಕ 28ನೇ ಜೂನ್ 2017ರಂದು ಪ್ರಕಟಿಸಲಾದ ಕರ್ನಾಟಕ ಸರ್ಕಾರದ ಅಧಿಸೂಚನೆ (3) ಸಂಖ್ಯೆ: ಆಇ 47 ಸಿಎಸ್‌ಎಲ್ 2017 ದಿನಾಂಕ: 28ನೇ ಜೂನ್ 2017ರಲ್ಲಿ ಈ ಕೆಳಗಿನಂತೆ ಮುಂದುವರೆದ ತಿದ್ದುಪಡಿಗಳನ್ನು ಮಾಡುತ್ತದೆ. ಅಂದರೆ:–

ಸದರಿ ಅಧಿಸೂಚನೆಯಲ್ಲಿ, **"**ಕೆಳಕಂಡ ದರದಲ್ಲಿ ಲೆಕ್ಕಹಾಕಲಾದ ಒಂದು ಮೊತ್ತದಲ್ಲಿ ಸಂದಾಯ ಮಾಡಲು**"** ಪದಗಳಿಂದ ಪ್ರಾರಂಭವಾಗುವ ಮತ್ತು **"**ಇತರ ಪೂರೈಕೆದಾರರುಗಳ ಸಂದರ್ಭದಲ್ಲಿ ರಾಜ್ಯದಲ್ಲಿನ ವಹಿವಾಟಿನ ಶೇಕಡಾ ಅರ್ಧದಷ್ಟು**"** ಪದಗಳಿಂದ ಕೊನೆಗೊಳ್ಳುವ ಭಾಗಕ್ಕಾಗಿ **"**ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ ಪ್ರಕರಣ 7ರಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ಲೆಕ್ಕಹಾಕಲಾದ ತೆರಿಗೆಯ ಮೊತ್ತದಲ್ಲಿ ಸಂದಾಯ ಮಾಡಲು ಆಯ್ಕೆ ಮಾಡಿಕೊಳ್ಳಬಹುದು**"** ಎಂದು ಪ್ರತಿಯೋಜಿಸತಕ್ಕದ್ದು.

2. ಈ ಅಧಿಸೂಚನೆಯು 2019ರ ಫೆಬ್ರವರಿ 1 ನೇ ದಿನದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ನೇತ್ರಪ್ರಭಾ ಎಂ.ಧಾಯಪುಲೆ

ಪ್ರಭಾರ ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (04/2019)
ಸಂಖ್ಯೆ: ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ: 29.01.2019

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕ ಅಧಿನಿಯಮ 27) ಪ್ರಕರಣ 23ರ ಉಪಪ್ರಕರಣ(2)ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳನ್ವಯ, ಕರ್ನಾಟಕ ರಾಜ್ಯಪತ್ರ, ಅಸಾಧಾರಣ, ಭಾಗ– IVಎ ಸಂಖ್ಯೆ: 1045 ದಿನಾಂಕ 15ನೇ ನವೆಂಬರ್ 2017ರಂದು ಪ್ರಕಟಿಸಲಾದ ಅಧಿಸೂಚನೆ (21/2017) ಸಂಖ್ಯೆ: ಆಇ 47 ಸಿಎಸ್‌ಎಲ್ 2017 ದಿನಾಂಕ: ನವೆಂಬರ್ 2017ರಲ್ಲಿ ಈ ಕೆಳಗಿನಂತೆ ತಿದ್ದುಪಡಿ ಮಾಡುತ್ತದೆ. ಅಂದರೆ:–

ಸದರಿ ಅಧಿಸೂಚನೆಯಲ್ಲಿ, ಪರಂತುಕದಲ್ಲಿ "ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿದ, ಸಂವಿಧಾನದ ಅನುಚ್ಛೇದ 279ಎದ ಖಂಡ (4)ರ ಉಪಖಂಡ (ಜಿ)ನಲ್ಲಿ" ಪದಗಳು, ಆವರಣಗಳು, ಅಕ್ಷರಗಳು ಮತ್ತು ಸಂಖ್ಯೆಗಳಿಗಾಗಿ "ಸದರಿ ಅಧಿನಿಯಮದ ಪ್ರಕರಣ 22ರ ಉಪಪ್ರಕರಣ (1)ಕ್ಕಿರುವ ಮೊದಲನೇ ಪರಂತುಕದಲ್ಲಿ, ಸದರಿ ಪ್ರಕರಣಕ್ಕಿರುವ ವಿವರಣೆಯ ಖಂಡ (iii)ರೊಡನೆ ಓದಿದಂತೆ," ಪದಗಳು, ಆವರಣಗಳು, ಸಂಖ್ಯೆಗಳನ್ನು ಪ್ರತಿಯೋಜಿಸಲಾಗಿದೆ.

2. ಸದರಿ ಅಧಿಸೂಚನೆಯು ದಿನಾಂಕ 1ನೇ ಫೆಬ್ರವರಿ 2019ರಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ನೇತ್ರಪ್ರಭಾ ಎಂ.ಧಾಯಪುಲೆ
ಪ್ರಭಾರ ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (05/2019)
ಸಂಖ್ಯೆ: ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ: 07.03.2019

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕ ಅಧಿನಿಯಮ 27) ಪ್ರಕರಣ 23ರ ಉಪಪ್ರಕರಣ (2)ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ "ಸದರಿ ಅಧಿನಿಯಮ"ವೆಂದು ಉಲ್ಲೇಖಿಸಲಾಗಿದೆ), ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಸದರಿ ಅಧಿನಿಯಮದ ಅಡಿಯಲ್ಲಿ ನೋಂದಣಿ ಪಡೆಯುವುದರಿಂದ ವಿನಾಯಿತಿಗೊಳಿಸಿದ ವ್ಯಕ್ತಿಗಳ ವರ್ಗವಾಗಿ ಈ ಕೆಳಕಂಡ ವ್ಯಕ್ತಿಗಳ ವರ್ಗವನ್ನು ನಿರ್ದಿಷ್ಟಪಡಿಸುತ್ತದೆ, ಅಂದರೆ:–

ಸರಕು ಪೂರೈಕೆಯ ವ್ಯವಹಾರದಲ್ಲಿ ಮಾತ್ರ ತೊಡಗಿಕೊಂಡಿರುವ ಮತ್ತು ಹಣಕಾಸು ವರ್ಷದಲ್ಲಿ ಆತನ ಸಮಗ್ರ ವಹಿವಾಟು ನಲವತ್ತು ಲಕ್ಷ ರೂಪಾಯಿಗಳನ್ನು ಮೀರಿರದ, ಈ ಕೆಳಕಂಡವರ ಹೊರತಾದ ಯಾವುದೇ ವ್ಯಕ್ತಿ:–

(ಎ) ಸದರಿ ಅಧಿನಿಯಮದ ಪ್ರಕರಣ 24ರ ಅಡಿಯಲ್ಲಿ ಕಡ್ಡಾಯವಾಗಿ ನೋಂದಾಣಿ ಪಡೆಯುವ ಅವಶ್ಯಕತೆಯಿರುವ ವ್ಯಕ್ತಿಗಳು;

(ಬಿ) ಈ ಕೆಳಕಂಡ ಕೋಷ್ಟಕದಲ್ಲಿನ ಅಂಕಣ(3)ರಲ್ಲಿ ನಿರ್ದಿಷ್ಟಪಡಿಸಿರುವ ವಿವರಣೆಯ ಮತ್ತು ಸಂವಾದಿ ನಮೂದಿಗಾಗಿ ಸದರಿ ಕೋಷ್ಟಕದ ಅಂಕಣ(2)ರಲ್ಲಿ ನಿರ್ದಿಷ್ಟಪಡಿರುವ ದರದ ವಸ್ತು, ಉಪಶಿರೋನಾಮೆ, ಶಿರೋನಾಮೆ ಅಥವಾ ಸಂದರ್ಭಾನುಸಾರ ಅಧ್ಯಾಯದ ಅಡಿಯಲ್ಲಿ ಬರುವ, ಸರಕುಗಳ ಪೂರೈಕೆಯ ವ್ಯವಹಾರದಲ್ಲಿ ತೊಡಗಿರುವ ವ್ಯಕ್ತಿಗಳು;

(ಸಿ) ಅರುಣಾಚಲ ಪ್ರದೇಶ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಲ್ಯಾಂಡ್, ಪುದುಚೇರಿ, ಸಿಕ್ಕಿಂ, ತೆಲಂಗಾಣ, ತ್ರಿಪುರ, ಉತ್ತರಾಖಂಡ ರಾಜ್ಯಗಳಲ್ಲಿ, ರಾಜ್ಯದೊಳಗಿನ ಪೂರೈಕೆಯಲ್ಲಿ ತೊಡಗಿರುವ ವ್ಯಕ್ತಿಗಳು; ಮತ್ತು

(ಡಿ) ಪ್ರಕರಣ 25ರ ಉಪಪ್ರಕರಣ (3)ರ ಉಪಬಂಧಗಳ ಅಡಿಯಲ್ಲಿ ಆಯ್ಕೆಯನ್ನು ಮಾಡುವ ವ್ಯಕಿಗಳು, ಅಥವಾ ಸದರಿ ಅಧಿನಿಯಮದ ಅಡಿಯಲ್ಲಿ ತಮ್ಮ ನೋಂದಣಿಯನ್ನು ಮುಂದುವರಿಸಲು ಉದ್ದೇಶಿಸಿರುವ ಅಂಥ ನೋಂದಾಯಿತ ವ್ಯಕ್ತಿಗಳು.

ಕೋಷ್ಠಕ

ಕ್ರಮ ಸಂಖ್ಯೆ	ದರದ ವಸ್ತು / ಶಿರೋನಾಮೆ / ಉಪ ಶಿರೋನಾಮೆ / ಅಧ್ಯಾಯ	ವಿವರಣೆ
(1)	(2)	(3)
1	2105 00 00	ಐಸ್ ಕ್ರೀಂ ಮತ್ತು ಇತರೆ ಖಾದ್ಯ ಮಂಜುಗಡ್ಡೆ, ಕೋಕೋವನ್ನು ಒಳಗೊಂಡಿರಲಿ ಅಥವಾ ಇಲ್ಲದಿರಲಿ
2	2106 90 20	ಪಾನ್ ಮಸಾಲ
3	24	ಎಲ್ಲಾ ಸರಕುಗಳು, ಅಂದರೆ ತಂಬಾಕು ಮತ್ತು ತಯಾರಿಸಿದ ತಂಬಾಕಿನ ಪರ್ಯಾಯಗಳು

2. ಈ ಅಧಿಸೂಚನೆಯು 2019ರ ಏಪ್ರೀಲ್ 1ನೇ ದಿನದಂದು ಜಾರಿಗೆ ಬರತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ನೇತ್ರಪ್ರಭಾ ಎಂ.ಧಾಯಪುಲೆ
ಪ್ರಭಾರ ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (06/2019)
ಸಂಖ್ಯೆ: ಆಇ 47 ಸಿಎಸ್ಎಲ್ 2017**, ಬೆಂಗಳೂರು ದಿನಾಂಕ: 14.03.2019**.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕ ಅಧಿನಿಯಮ 27) ಪ್ರಕರಣ 148ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ), ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಹಿಂದಿನ ಹಣಕಾಸು ವರ್ಷದಲ್ಲಿ ಅಥವಾ ಪ್ರಸ್ತುತ ಹಣಕಾಸು ವರ್ಷದಲ್ಲಿ 1.5 ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಮೊತ್ತದ ವಹಿವಾಟು ಹೊಂದಿರುವ ವಿಶೇಷ ವಿಧಾನವನ್ನು ಅನುಸರಿಸಿ ಈ ಕೆಳಕಂಡಂತೆ ಸರಕು ಅಥವಾ ಸೇವೆಗಳ ಹೊರಮುಖ ಪೂರೈಕೆ ಅಥವಾ ಎರಡೂ, ವಿವರಗಳನ್ನು ಒದಗಿಸುವಂತಹ ಅಧಿಸೂಚಿತ ನೋಂದಾಯಿತ ವ್ಯಕ್ತಿಗಳು.

2. ಸದರಿ ನೋಂದಾಯಿತ ವ್ಯಕ್ತಿಗಳು ಕರ್ನಾಟಕ ಸರಕು ಮತ್ತು ಸೇವೆಳ ತೆರಿಗೆ ನಿಯಮ, 2017ರ ಅನ್ವಯ ನಮೂನೆ ಜಿಎಸ್ಟಿಆರ್–01 ರಲ್ಲಿ ಸರಕು ಅಥವಾ ಸೇವೆಗಳ ಹೊರಮುಖ ಪೂರೈಕೆ ಅಥವಾ ಎರಡೂ, ವಿವರಗಳನ್ನು ಕೆಳಕಂಡ ತ್ರೈಮಾಸಿಕಕ್ಕೆ ಈ ಕೆಳಗಿನ ಕೋಷ್ಟಕದ ಕಲಂ (2)ರಲ್ಲಿ ನಿರ್ದಿಷ್ಟಪಡಿಸಿದಂತೆ, ಕೋಷ್ಟಕದ ಕಲಂ (3)ರಲ್ಲಿ ನಿದಿಷ್ಟಪಡಿಸಿದ ಕಾಲಮಿತಿಯೊಳಗೆ ಒದಗಿಸುವುದು. ಅಂದರೆ:–

ಕೋಷ್ಟಕ

ಕ್ರಮಸಂಖ್ಯೆ	**ನಮೂನೆ ಜಿಎಸ್ಟಿಆರ್–1ಅನ್ನು ಒದಗಿಸಬೇಕಾಗಿರುವ ತ್ರೈಮಾಸಿಕಗಳ ವಿವರಗಳು**	**ನಮೂನೆ ಜಿಎಸ್ಟಿಆರ್–1ರಲ್ಲಿ ವಿವರಗಳನ್ನು ಒದಗಿಸುವ ಕಾಲಮಿತಿ**
(1)	(2)	(3)
1	ಏಪ್ರಿಲ್ – ಜೂನ್ 2019	31ನೇ ಜುಲೈ 2019

3. ಜುಲೈ, 2017 ರಿಂದ ಜೂನ್, 2019 ರವರೆಗೆ ಸಂದರ್ಭಾನುಸಾರವಾಗಿ, ಪ್ರಕರಣ 38ರ ಉಪ ಪ್ರಕರಣ (2) ಮತ್ತು ಪ್ರಕರಣ 39ರ ಉಪ ಪ್ರಕರಣ (1)ರ ಸದರಿ ಅಧಿನಿಯಮದ ಅಡಿಯಲ್ಲಿ. ರಿಟರ್ನ್ಗಳನ್ನು ಸಲ್ಲಿಸುವ ಸಮಯದ ಮಿತಿಯ ವಿಸ್ತರಣೆಯನ್ನು ನಂತರ ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚಿಸಲಾಗುವುದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ನೇತ್ರಪ್ರಭಾ ಎಂ.ಧಾಯಪುಲೆ
ಪ್ರಭಾರ ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (07/2019)
ಸಂಖ್ಯೆ: ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ: 14.03.2019.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) ಪ್ರಕರಣ 10ರ ಉಪಪ್ರಕರಣ (1)ರ ಪರಂತುಕದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮತ್ತು ಕರ್ನಾಟಕ ರಾಜ್ಯಪತ್ರ, ಅಸಾಧಾರಣ, ಭಾಗ–IVA, ಸಂಖ್ಯೆ. 583, ದಿನಾಂಕ 28ನೇ ಜೂನ್ 2017ರಲ್ಲಿ ಪ್ರಕಟಿಸಲಾದ ಅಧಿಸೂಚನೆ (3) ಸಂಖ್ಯೆ ಆಇ 47 ಸಿಎಸ್ಎಲ್ 2017 ದಿನಾಂಕ: 28ನೇ ಜೂನ್ 2017ಅನ್ನು ರದ್ದುಪಡಿಸಿ, ಅಂತಹ ರದ್ದುಪಡಿಸುವಿಕೆಗೆ ಮುಂಚಿತವಾಗಿ ಮಾಡಿದ ಅಥವಾ ಮಾಡದೇ ಇದ್ದ ವಿಷಯಗಳನ್ನು ಹೊರತುಪಡಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಹಿಂದಿನ ಹಣಕಾಸು ವರ್ಷದಲ್ಲಿ ತನ್ನ ಸಮಗ್ರ ವಹಿವಾಟು ಒಂದು ಕೋಟಿ ಐವತ್ತು ಲಕ್ಷ ರೂಪಾಯಿಗಳನ್ನು ಮೀರಿರದ ಅರ್ಹ ನೋಂದಾಯಿತ ವ್ಯಕ್ತಿಯನ್ನು, ಸದರಿ ಅಧಿನಿಯಮದ ಪ್ರಕರಣ 9ರ ಉಪಪ್ರಕರಣ (1)ದ ಅಡಿಯಲ್ಲಿ ಪಾವತಿಸಬೇಕಾದ ತೆರಿಗೆಗೆ ಬದಲಾಗಿ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಿಯಮ 7ರ ಪ್ರಕಾರ ನಿಗದಿಪಡಿಸಿದ ತೆರಿಗೆ ಮೊತ್ತವನ್ನು ಪಾವತಿಸಲು ಆಯ್ಕೆ ಮಾಡಬಹುದು:

ಪರಂತು, ಅಂತಹ ನೋಂದಾಯಿತ ವ್ಯಕ್ತಿಯು, ಈ ಕೆಳಗಿನ ಕೋಷ್ಟಕದಲ್ಲಿನ ಅಂಕಣ (3)ರಲ್ಲಿ ನಿರ್ದಿಷ್ಟಪಡಿಸಿರುವ ವಿವರಣೆಯ ಮತ್ತು ಸದರಿ ಕೋಷ್ಟಕದ ಅಂಕಣ(2)ರ ಸಂವಾದಿ ನಮೂದಿಯಲ್ಲಿ ನಿರ್ದಿಷ್ಟಪಡಿಸಿರುವ ದರದ ವಸ್ತು, ಉಪ ಶಿರೋನಾಮೆ, ಶಿರೋನಾಮೆ ಅಥವಾ ಸಂದರ್ಭಾನುಸಾರ ಅಧ್ಯಾಯದ ಅಡಿಯಲ್ಲಿನ ಸರಕುಗಳ ತಯಾರಕರಾಗಿದ್ದರೆ, ಸದರಿ ಅಧಿನಿಯಮದ ಪ್ರಕರಣ 10ರ ಉಪಪ್ರಕರಣ (1)ರ ಅಡಿಯಲ್ಲಿ ರಾಜಿ ವಿಧಿಸುವಿಕೆಗಾಗಿ ಆಯ್ಕೆ ಮಾಡಲು ಅರ್ಹನಾಗಿರುವುದಿಲ್ಲ, ಅಂದರೆ:–

ಕೋಷ್ಟಕ

ಕ್ರಮ ಸಂಖ್ಯೆ	**ದರದ ವಸ್ತು / ಶಿರೋನಾಮೆ / ಉಪ ಶಿರೋನಾಮೆ / ಅಧ್ಯಾಯ**	**ವಿವರಣೆ**
(1)	(2)	(3)
1	2105 00 00	ಐಸ್‌ಕ್ರೀಂ ಮತ್ತು ಇತರೆ ಖಾದ್ಯ ಮಂಜುಗಡ್ಡೆ, ಕೋಕೋವನ್ನು ಒಳಗೊಂಡಿರಲಿ ಅಥವಾ ಇಲ್ಲದಿರಲಿ
2	2106 90 20	ಪಾನ್‌ಮಸಾಲ
3	24	ಎಲ್ಲಾ ಸರಕುಗಳು, ಅಂದರೆ ತಂಬಾಕು ಮತ್ತು ತಯಾರಿಸಿದ ತಂಬಾಕಿನ ಪರ್ಯಾಯಗಳು

ವಿವರಣೆ:–

(i) ಈ ಕೋಷ್ಟಕದಲ್ಲಿ "ದರದ ವಸ್ತು", "ಶಿರೋನಾಮೆ", ಮತ್ತು "ಅಧ್ಯಾಯ" ಎನ್ನತಕ್ಕದ್ದು, ಸೀಮಾಸುಂಕ ಟ್ಯಾರಿಫ್ ಅಧಿನಿಯಮ, 1975ರ (1957ರ ಕೇಂದ್ರ ಅಧಿನಿಯಮ 51)ರ ಮೊದಲನೇ ಅನುಸೂಚಿಯಲ್ಲಿ

ನಿರ್ದಿಷ್ಟಪಡಿಸಿದಂತೆ, ಅನುಕ್ರಮವಾಗಿ, ದರದ ವಸ್ತು, ಶಿರೋನಾಮೆ, ಉಪ–ಶಿರೋನಾಮೆ. ಅಧ್ಯಾಯವಾಗಿರತಕ್ಕದ್ದು.

(ii) ಸೀಮಾಸುಂಕ ಟ್ಯಾರಿಫ್ ಅಧಿನಿಯಮ, 1975ರ (1975ರ ಕೇಂದ್ರ ಅಧಿನಿಯಮ 51)ರ ಮೊದಲನೇ ಅನುಸೂಚಿಯ ಅರ್ಥವಿವರಣೆಯ ನಿಯಮಗಳು, ಪ್ರಕರಣ ಮತ್ತು ಅಧ್ಯಾಯದ ಟಿಪ್ಪಣಿಗಳು ಹಾಗೂ ಮೊದಲನೇ ಅನುಸೂಚಿಯ ಅರ್ಥವಿವರಣೆಗೆ ಅನ್ವಯವಾಗತಕ್ಕದ್ದು.

2. ಈ ಅಧಿಸೂಚನೆಯು 2019ರ ಏಪ್ರೀಲ್ 1ನೇ ದಿನದಂದು ಜಾರಿಗೆ ಬರತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ನೇತ್ರಪ್ರಭಾ ಎಂ.ಧಾಯಪುಲೆ
ಪ್ರಭಾರ ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (08/2019)
ಸಂಖ್ಯೆ: ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ: 14.03.2019.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) ಪ್ರಕರಣ 148ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಸದರಿ ಅಧಿನಿಯಮದ ಪ್ರಕರಣ 10ರ ಉಪಬಂಧಗಳ ಅಡಿಯಲ್ಲಿ ತೆರಿಗೆಯನ್ನು ತುಂಬುವ ಅಥವಾ ಕರ್ನಾಟಕ ರಾಜ್ಯಪತ್ರ, ಅಸಾಧಾರಣ, ಭಾಗ–IVA, ಸಂ.222 ದಿನಾಂಕ ಮಾರ್ಚ್ 7, 2019ರಂದು ಪ್ರಕಟಿಸಲಾದ ಕರ್ನಾಟಕ ಸರ್ಕಾರದ ಅಧಿಸೂಚನೆ (02/2019) ಸಂ. ಆಇ 48 ಸಿಎಸ್‌ಎಲ್ 2017, ದಿನಾಂಕ ಮಾರ್ಚ್ 7, 2019ರ (ಇನ್ನು ಮುಂದೆ **"ಸದರಿ ಅಧಿಸೂಚನೆ"** ಎಂದು ಉಲ್ಲೇಖಿಸಿದೆ) ಪ್ರಯೋಜನವನ್ನು ಉಪಯೋಗಿಸುವ ನೋಂದಾಯಿತ ವ್ಯಕ್ತಿಗಳನ್ನು ರಿಟರ್ನ್‌ಅನ್ನು ಸಲ್ಲಿಸುವುದಕ್ಕಾಗಿ ಮತ್ತು ತೆರಿಗೆಯನ್ನು ಪಾವತಿಸುವುದಕ್ಕಾಗಿ ಈ ಕೆಳಗೆ ಹೆಸರಿಸಲಾದ ವಿಶೇಷ ವಿಧಾನವನ್ನು ಪಾಲಿಸತಕ್ಕ ನೋಂದಾಯಿತ ವರ್ತಕರ ಸಮೂಹವೆಂದು ಈ ಮೂಲಕ ಅಧಿಸೂಚಿಸಲಾಗಿದೆ.

2. ಸದರಿ ವ್ಯಕ್ತಿಗಳು ಪ್ರತಿ ತ್ರೈಮಾಸಿಕ ಅಥವಾ ಸಂದರ್ಭಾನುಸಾರವಾಗಿ ಅದರ ಭಾಗಕ್ಕೆ, ಸ್ವಯಂನಿರ್ಧರಿಸಲಾದ ತೆರಿಗೆಯ ಪಾವತಿಯ ವಿವರಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಮೂನೆ ಜಿಎಸ್‌ಟಿ ಸಿಎಂಪಿ–08ರಲ್ಲಿ ವಿವರಪತ್ರವನ್ನು, ಅಂಥ ತ್ರೈಮಾಸಿಕ ಮುಗಿದ ನಂತರದ ತಿಂಗಳ 18ನೇ ದಿನದವರೆಗೆ ಸಲ್ಲಿಸತಕ್ಕದ್ದು.

3. ಸದರಿ ವ್ಯಕ್ತಿಗಳು ಪ್ರತಿ ಹಣಕಾಸು ವರ್ಷಕ್ಕೆ ಅಥವಾ ಸಂದರ್ಭಾನುಸಾರವಾಗಿ ಅದರ ಭಾಗಕ್ಕೆ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಮೂನೆ ಜಿಎಸ್‌ಟಿಆರ್–4ರಲ್ಲಿ ಒಂದು ರಿಟರ್ನ್‌ಅನ್ನು ಅಂಥ ಹಣಕಾಸು ವರ್ಷ ಮುಗಿದ ನಂತರದ ಏಪ್ರಿಲ್ 30ನೇ ದಿನದಂದು ಅಥವಾ ಅದಕ್ಕೂ ಮುಂಚೆ ಸಲ್ಲಿಸತಕ್ಕದ್ದು.

4. ಸದರಿ ಅಧಿಸೂಚನೆಯ ಪ್ರಯೋಜನವನ್ನು ಉಪಯೋಗಿಸುವ ನೋಂದಾಯಿತ ವ್ಯಕ್ತಿಗಳು, ಸದರಿ ಪ್ರಯೋಜನವನ್ನು ಉಪಯೋಗಿಸಿದ ಅವಧಿಗೆ ಸಂಬಂಧಿಸಿದಂತೆ, ಮೇಲಿನ ಖಂಡಿಕೆ 2 ಮತ್ತು ಖಂಡಿಕೆ 3ರಲ್ಲಿ ಉಪಬಂಧಿಸಿದಂತೆ, ನಮೂನೆ ಜಿಎಸ್‌ಟಿ ಸಿಎಂಪಿ–08 ಮತ್ತು ನಮೂನೆ ಜಿಎಸ್‌ಟಿಆರ್–4ನ್ನು ಸಲ್ಲಿಸಿದ್ದರೆ,ಸದರಿ ಅಧಿನಿಯಮದ ಪ್ರಕರಣ 37 ಮತ್ತು ಪ್ರಕರಣ 39ರ ಉಪಬಂಧಗಳನ್ನು ಪಾಲಿಸಿದ್ದಾರೆ ಎಂದು ಪರಿಭಾವಿಸತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ನೇತ್ರಪ್ರಭಾ ಎಂ.ಧಾಯಪುಲೆ
ಪ್ರಭಾರ ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (09/2019)
ಸಂಖ್ಯೆ: ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ: 23.04.2019.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕ ಅಧಿನಿಯಮ 27) ಪ್ರಕರಣ 148ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 2019ರ ಜೂನ್ 21ನೇ ದಿನವನ್ನು, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ಕರ್ನಾಟಕ ರಾಜ್ಯಪತ್ರ, ಅಸಾಧಾರಣ, ಭಾಗ IVA, ಸಂ.122, ದಿನಾಂಕ 18ನೇ ಫೆಬ್ರವರಿ, 2019ರಲ್ಲಿ ಪ್ರಕಟಿಸಲಾದ ಅಧಿಸೂಚನೆ (4–ಡಬ್ಲ್ಯೂ) ಸಂ. ಆಇ 47 ಸಿಎಸ್‌ಎಲ್ 2017, ದಿನಾಂಕ 18ನೇ ಫೆಬ್ರವರಿ, 2019ರ ನಿಯಮ 12ವು ಜಾರಿಗೆ ಬಂದ ದಿನಾಂಕವೆಂದು ಪರಿಭಾವಿಸತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ನೇತ್ರಪ್ರಭಾ ಎಂ.ಧಾಯಪುಲೆ
ಪ್ರಭಾರ ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (10/2019)
ಸಂಖ್ಯೆ: ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ: 28.06.2019.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕ ಅಧಿನಿಯಮ 27) ಪ್ರಕರಣ 164ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೆ ಮಾಡುವುದು ಅವಶ್ಯವೆಂದು ಮನವರಿಕೆಯಾದ್ದರಿಂದ,, ಕರ್ನಾಟಕ ಸರ್ಕಾರವು, ಕರ್ನಾಟಕ ರಾಜ್ಯಪತ್ರ, ಅಸಾಧಾರಣ, ಭಾಗ IVA, ಸಂ.323, ದಿನಾಂಕ 23ನೇ ಏಪ್ರಿಲ್, 2019ರಲ್ಲಿ ಪ್ರಕಟಿಸಲಾದ

ಅಧಿಸೂಚನೆ (09/2019) ಸಂ. ಆಇ 47 ಸಿಎಸ್‌ಎಲ್ 2017, ದಿನಾಂಕ 23ನೇ ಏಪ್ರಿಲ್, 2019ಕ್ಕೆ ಈ ಕೆಳಕಂಡ ತಿದ್ದುಪಡಿಗಳನ್ನು ಮಾಡುತ್ತದೆ, ಅಂದರೆ:–

ಸದರಿ ಅಧಿಸೂಚನೆಯಲ್ಲಿ, "2019ರ ಜೂನ್ 21ನೇ ದಿನವನ್ನು" ಸಂಖ್ಯೆಗಳು ಮತ್ತು ಪದಗಳಿಗಾಗಿ "2019ರ ಆಗಸ್ಟ್ 21ನೇ ದಿನವನ್ನು" ಸಂಖ್ಯೆಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ. ಸಾವಿತ್ರಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (11/2019)
ಸಂಖ್ಯೆ. ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ:29.06.2019

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ "ಸದರಿ ಅಧಿನಿಯಮ" ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 148ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಹಿಂದಿನ ಹಣಕಾಸು ವರ್ಷದಲ್ಲಿ ಅಥವಾ ಪ್ರಸಕ್ತ ಹಣಕಾಸು ವರ್ಷದಲ್ಲಿ ರೂ.1.5 ಕೋಟಿಯವರೆಗಿನ ಸಮಗ್ರ ವಹಿವಾಟನ್ನು ಹೊಂದಿರುವ ನೋಂದಾಯಿತ ವ್ಯಕ್ತಿಗಳನ್ನು, ಸರಕು ಅಥವಾ ಸೇವೆಗಳು ಅಥವಾ ಅವೆರಡರ ಹೊರಮುಖ ಪೂರೈಕೆಗಳ ವಿವರಗಳನ್ನು ಸಲ್ಲಿಸುವುದಕ್ಕಾಗಿ ಈ ಕೆಳಗೆ ಹೇಳಲಾದ ವಿಶೇಷ ವಿಧಾನವನ್ನು ಪಾಲಿಸುವವರೆಂದು ಈ ಮೂಲಕ ಅಧಿಸೂಚಿಸಿದೆ.

2. ಅಂಥ ವ್ಯಕ್ತಿಗಳು, ಕೆಳಗಿನ ಕೋಷ್ಟಕದ ಅಂಕಣ (2)ರಲ್ಲಿ ನಿರ್ದಿಷ್ಟಪಡಿಸಿದ ತ್ರೈಮಾಸಿಕದಲ್ಲಿ ಮಾಡಿದ ಸರಕು ಅಥವಾ ಸೇವೆಗಳು ಅಥವಾ ಅವೆರಡರ ಹೊರಮುಖ ಪೂರೈಕೆಯ ವಿವರಗಳನ್ನು, ಸಂಬಂಧಿಸಿದ ನಮೂದಗೆ ಸದರಿ ಕೋಷ್ಟಕದ ಅಂಕಣ (3)ರಲ್ಲಿ ನಿರ್ದಿಷ್ಟಪಡಿಸಿದ ಕಾಲಾವಧಿಯ ತನಕ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಮೂನೆ ಜಿಎಸ್‌ಟಿಆರ್–1ನಲ್ಲಿ ಸಲ್ಲಿಸಬಹುದು, ಅಂದರೆ:–

ಕೋಷ್ಟಕ

ಕ್ರಮ ಸಂಖ್ಯೆ	**ಯಾವ ತ್ರೈಮಾಸಿಕಕ್ಕೆ ನಮೂನೆ ಜಿಎಸ್‌ಟಿಆರ್–1ರಲ್ಲಿ ವಿವರಗಳನ್ನು ಸಲ್ಲಿಸಲಾಗಿದೆ**	**ಯಾವ ತ್ರೈಮಾಸಿಕಕ್ಕೆ ನಮೂನೆ ಜಿಎಸ್‌ಟಿಆರ್–1ರಲ್ಲಿ ವಿವರಗಳನ್ನು ಸಲ್ಲಿಸಲು ಕಾಲಾವಧಿ**
(1)	(2)	(3)
1	ಜುಲೈ – ಸೆಪ್ಟಂಬರ್, 2019	ಅಕ್ಟೋಬರ್ 31, 2019

3. ಜುಲೈ 2019ರಿಂದ ಸೆಪ್ಟಂಬರ್ 2019ರವರೆಗಿನ ತಿಂಗಳುಗಳ, ಸದರಿ ಅಧಿನಿಯಮದ ಪ್ರಕರಣ 38ರ ಉಪಪ್ರಕರಣ (2)ರ ಮತ್ತು ಪ್ರಕರಣ 39ರ ಉಪಪ್ರಕರಣ (1)ರ ಅಡಿಯಲ್ಲಿ ವಿವರಗಳನ್ನು ಅಥವಾ ಸಂದರ್ಭಾನುಸಾರವಾಗಿ, ರಿಟರ್ನ್ಅನ್ನು ಸಲ್ಲಿಸುವುದಕ್ಕಾಗಿ ಕಾಲಮಿತಿಯನ್ನು ಅಧಿಕೃತ ರಾಜ್ಯಪತ್ರದಲ್ಲಿ ನಂತರದಲ್ಲಿ ಅಧಿಸೂಚಿಸಲಾಗುವುದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ. ಸಾವಿತ್ರಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (12/2019)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:29.06.2019

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ **"ಸದರಿ ಅಧಿನಿಯಮ"** ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 148ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಒಬ್ಬ ನೋಂದಾಯಿತ ವ್ಯಕ್ತಿಯಲ್ಲದ ಭಾರತದೊಳಗಿನ ವ್ಯಕ್ತಿಗೆ ಭಾರತದ ಹೊರಗಿನ ಒಂದು ಸ್ಥಳದಿಂದ ಆನ್ಲೈನ್ ಮಾಹಿತಿ ಮತ್ತು ಡಾಟಾಬೇಸ್ ಆಕ್ಸೆಸ್ ಅಥವಾ ರಿಟ್ರೀವಲ್ ಸೇವೆಗಳ ಪೂರೈಕೆಯನ್ನು ಮಾಡುತ್ತಿರುವ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ **"ಸದರಿ ನಿಯಮಗಳು"** ಎಂದು ಉಲ್ಲೇಖಿಸಲಾಗಿದೆ) ನಿಯಮ 14ರೊಂದಿಗೆ ಓದಲಾದ ಸದರಿ ಅಧಿನಿಯಮದ ಪ್ರಕರಣ 24ರ ಅಡಿಯಲ್ಲಿ ನೋಂದಾಯಿತರಾದ ವ್ಯಕ್ತಿಗಳನ್ನು ಈ ಕೆಳಗೆ ಹೇಳಲಾದ ವಿಶೇಷ ವಿಧಾನವನ್ನು ಪಾಲಿಸುವವರೆಂದು ಈ ಮೂಲಕ ಅಧಿಸೂಚಿಸಿದೆ.

2. ಸದರಿ ವ್ಯಕ್ತಿಗಳು ಸದರಿ ನಿಯಮಗಳ ನಿಯಮ 80ರ ಉಪನಿಯಮ (1)ರೊಂದಿಗೆ ಓದಲಾದ ಸದರ ಅಧಿನಿಯಮದ ಪ್ರಕರಣ 44ರ ಉಪಪ್ರಕರಣ (1)ರ ಅಡಿಯಲ್ಲಿ ನಮೂನೆ ಜಿಎಸ್ಟಿಆರ್–9ರಲ್ಲಿ ಒಂದು ವಾರ್ಷಿಕ ರಿಟರ್ನ್ಅನ್ನು ಸಲ್ಲಿಸಲು ಅವಶ್ಯವಿರುವುದಿಲ್ಲ.

3. ಸದರಿ ವ್ಯಕ್ತಿಗಳು ಸದರಿ ನಿಯಮಗಳ ನಿಯಮ 80ರ ಉಪನಿಯಮ (3)ರೊಂದಿಗೆ ಓದಲಾದ ಸದರ ಅಧಿನಿಯಮದ ಪ್ರಕರಣ 44ರ ಉಪಪ್ರಕರಣ (2)ರ ಅಡಿಯಲ್ಲಿ ನಮೂನೆ ಜಿಎಸ್ಟಿಆರ್–9ಸಿಯಲ್ಲಿ ಹೊಂದಾಣಿಕೆ ವಿವರಪತ್ರವನ್ನು ಸಲ್ಲಿಸಲು ಅವಶ್ಯವಿರುವುದಿಲ್ಲ.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ. ಸಾವಿತ್ರಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (13/2019)
ಸಂಖ್ಯೆ: ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ: 18.07.2019.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕ ಅಧಿನಿಯಮ 27) ಪ್ರಕರಣ 148ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ಕರ್ನಾಟಕ ರಾಜ್ಯಪತ್ರ, ಅಸಾಧಾರಣ, ಭಾಗ IVA, ಸಂ.322, ದಿನಾಂಕ 23ನೇ ಏಪ್ರಿಲ್, 2019ರಲ್ಲಿ ಪ್ರಕಟಿಸಲಾದ ಅಧಿಸೂಚನೆ (08/2019) ಸಂ. ಆಇ 47 ಸಿಎಸ್‌ಎಲ್ 2017, ದಿನಾಂಕ 23ನೇ ಏಪ್ರಿಲ್, 2019ಕ್ಕೆ ಈ ಕೆಳಕಂಡ ತಿದ್ದುಪಡಿಗಳನ್ನು ಮಾಡುತ್ತದೆ, ಅಂದರೆ:–

ಸದರಿ ಅಧಿಸೂಚನೆಯಲ್ಲಿ, ಖಂಡಿಕೆ 2ರಲ್ಲಿ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:–

"ಪರಂತು, ಏಪ್ರಿಲ್ 2019ರಿಂದ ಜೂನ್ 2019ರ ತ್ರೈಮಾಸಿಕಕ್ಕಾಗಿ, ಅಥವಾ ಅದರ ಭಾಗಕ್ಕಾಗಿ, ಸದರಿ ನಮೂನೆ ಜಿಎಸ್‌ಟಿ ಸಿಎಂಪಿ–08ರಲ್ಲಿ ಸ್ವಯಂನಿರ್ಧರಿಸಲಾದ ತೆರಿಗೆಯ ಪಾವತಿಯ ವಿವರಗಳನ್ನು ಒಳಗೊಂಡ ವಿವರಪತ್ರವನ್ನು ಸಲ್ಲಿಸುವುದಕ್ಕಾಗಿ ಕಡೆಯ ದಿನಾಂಕವು 2019ರ ಜುಲೈ 31ನೇ ದಿನವಾಗಿರತಕ್ಕದ್ದು.".

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ. ಸಾವಿತ್ರಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (14/2019)
ಸಂಖ್ಯೆ: ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ: 02.08.2019.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕ ಅಧಿನಿಯಮ 27) ಪ್ರಕರಣ 148ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ಕರ್ನಾಟಕ ರಾಜ್ಯಪತ್ರ, ಅಸಾಧಾರಣ, ಭಾಗ IVA, ಸಂ.322, ದಿನಾಂಕ 23ನೇ ಏಪ್ರಿಲ್, 2019ರಲ್ಲಿ ಪ್ರಕಟಿಸಲಾದ ಅಧಿಸೂಚನೆ (08/2019) ಸಂ. ಆಇ 47 ಸಿಎಸ್‌ಎಲ್ 2017, ದಿನಾಂಕ 23ನೇ ಏಪ್ರಿಲ್, 2019ಕ್ಕೆ ಈ ಕೆಳಕಂಡ ತಿದ್ದುಪಡಿಗಳನ್ನು ಮಾಡುತ್ತದೆ, ಅಂದರೆ:–

ಸದರಿ ಅಧಿಸೂಚನೆಯಲ್ಲಿ, ಖಂಡಿಕೆ 2ರಲ್ಲಿ, ಪರಂತುಕದಲ್ಲಿ "2019ರ ಜುಲೈ 31ನೇ ದಿನವಾಗಿರತಕ್ಕದ್ದು" ಸಂಖ್ಯೆಗಳು, ಅಕ್ಷರ ಮತ್ತು ಪದಗಳಿಗಾಗಿ "2019ರ ಆಗಸ್ಟ್ 31ನೇ ದಿನವಾಗಿರತಕ್ಕದ್ದು" ಸಂಖ್ಯೆಗಳು, ಅಕ್ಷರ ಮತ್ತು ಪದಗಳನ್ನು ಪ್ರತಿಯೋಜಿತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ. ಸಾವಿತ್ರಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (15/2019)
ಸಂಖ್ಯೆ: ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ: 20.08.2019.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕ ಅಧಿನಿಯಮ 27) ಪ್ರಕರಣ 164ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೆ ಮಾಡುವುದು ಅವಶ್ಯವೆಂದು ಮನವರಿಕೆಯಾದ್ದರಿಂದ, ಕರ್ನಾಟಕ ಸರ್ಕಾರವು, ಕರ್ನಾಟಕ ರಾಜ್ಯಪತ್ರ, ಅಸಾಧಾರಣ, ಭಾಗ IVA, ಸಂ.323, ದಿನಾಂಕ 23ನೇ ಏಪ್ರಿಲ್, 2019ರಲ್ಲಿ ಪ್ರಕಟಿಸಲಾದ ಅಧಿಸೂಚನೆ (09/2019) ಸಂ. ಆಇ 47 ಸಿಎಸ್‌ಎಲ್ 2017, ದಿನಾಂಕ 23ನೇ ಏಪ್ರಿಲ್, 2019ಕ್ಕೆ ಈ ಕೆಳಕಂಡ ಮುಂದುವರೆದ ತಿದ್ದುಪಡಿಗಳನ್ನು ಮಾಡುತ್ತದೆ, ಅಂದರೆ:–

ಸದರಿ ಅಧಿಸೂಚನೆಯಲ್ಲಿ, **"**2019ರ ಆಗಸ್ಟ್ 21ನೇ ದಿನವನ್ನು**"** ಸಂಖ್ಯೆಗಳು, ಅಕ್ಷರ ಮತ್ತು ಪದಗಳಿಗಾಗಿ **"**2019ರ ನವೆಂಬರ್ 21ನೇ ದಿನವನ್ನು**"** ಸಂಖ್ಯೆಗಳು, ಅಕ್ಷರ ಮತ್ತು ಪದಗಳನ್ನು ಪ್ರತಿಯೋಜಿತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ. ಸಾವಿತ್ರಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (16/2019)
ಸಂಖ್ಯೆ. ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ:07.09.2019

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ **"**ಸದರಿ ಅಧಿನಿಯಮ**"** ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 148ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಸದರಿ ಅಧಿನಿಯಮದ ಪ್ರಕರಣ 143ರೊಂದಿಗೆ ಓದಲಾದ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ **"**ಸದರಿ ನಿಯಮಗಳು**"** ಎಂದು ಉಲ್ಲೇಖಿಸಲಾಗಿದೆ) ನಿಯಮ 45ರ ಉಪನಿಯಮ (3)ರ ಅಡಿಯಲ್ಲಿ ನಮೂನೆ ಐಟಿಸಿ–04ರಲ್ಲಿ ಚಲನ್‌ಗಳ ವಿವರಗಳನ್ನು ಸಲ್ಲಿಸುವ ಅವಶ್ಯಕತೆಯಿರುವ ನೋಂದಾಯಿತ ವ್ಯಕ್ತಿಗಳನ್ನು ವಿಶೇಷ ವಿಧಾನವನ್ನು ಪಾಲಿಸುವವರೆಂದು ಈ ಮೂಲಕ ಅಧಿಸೂಚಿಸಿದೆ, ಅಂದರೆ ಸದರಿ ವ್ಯಕ್ತಿಗಳು ಜುಲೈ 2017ರಿಂದ ಮಾರ್ಚ್ 2019ರವರೆಗಿನ ಅವಧಿಗಾಗಿ ಸದರಿ ನಿಯಮಗಳ ನಿಯಮ 45ರ ಉಪನಿಯಮ (3)ರಡಿಯಲ್ಲಿ ನಮೂನೆ ಐಟಿಸಿ–04ನ್ನು ಸಲ್ಲಿಸಲು ಅವಶ್ಯವಿರುವುದಿಲ್ಲ.

ಪರಂತು, ಸದರಿ ವ್ಯಕ್ತಿಗಳು ಜುಲೈ 2017ರಿಂದ ಮಾರ್ಚ್ 2019ರವರೆಗಿನ ಅವಧಿಯಲ್ಲಿ ಮಜೂರಿ ಕೆಲಸಗಾರನಿಗೆ ರವಾನಿಸಲಾದ, ಆದರೆ 2019ರ ಮಾರ್ಚ್ 31ರಂತೆ ಮಜೂರಿ ಕೆಲಸಗಾರನಿಂದ ಸ್ವೀಕರಿಸಿಲ್ಲದ ಅಥವಾ ಮಜೂರಿ ಕೆಲಸಗಾರನ ವ್ಯವಹಾರದ ಸ್ಥಳದಿಂದ ಪೂರೈಕೆಯಾಗದ, ಸರಕುಗಳಿಗೆ ಸಂಬಂಧಿಸಿದಂತೆ ಎಲ್ಲಾ ಚಲನ್‌ಗಳ ವಿವರಗಳನ್ನು ಏಪ್ರಿಲ್–ಜೂನ್, 2019ರ ತ್ರೈಮಾಸಿಕಕ್ಕಾಗಿನ ನಮೂನೆ ಐಟಿಸಿ–04ನ ಕ್ರಮ ಸಂಖ್ಯೆ 4ರಲ್ಲಿ ಸಲ್ಲಿಸತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ. ಸಾವಿತ್ರಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (17/2019)
ಸಂಖ್ಯೆ. ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ:07.09.2019

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ **"ಸದರಿ ಅಧಿನಿಯಮ"** ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 128ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಈ ಕೆಳಗಿನ ಕರದಾತರ ಸಮೂಹಗಳಿಂದ ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿ ಪಾವತಿಸಬೇಕಾದ ವಿಳಂಬ ಶುಲ್ಕವನ್ನು ಈ ಮೂಲಕ ಮನ್ನಾ ಮಾಡುತ್ತದೆ:–

(i) ಈ ಕೆಳಗಿನ ಕೋಷ್ಟಕದ ಅಂಕಣ (2)ರಲ್ಲಿ ನಮೂದಿಸಲಾದ ರಾಜ್ಯದ, ಅಂಕಣ (3)ರಲ್ಲಿ ನಮೂದಿಸಿರುವ ಜಿಲ್ಲೆಯಲ್ಲಿ ಪ್ರಧಾನ ವ್ಯವಹಾರ ಸ್ಥಳವನ್ನು ಹೊಂದಿರುವ, ಹಿಂದಿನ ಹಣಕಾಸು ವರ್ಷದಲ್ಲಿ ಅಥವಾ ಪ್ರಸಕ್ತ ಹಣಕಾಸು ವರ್ಷದಲ್ಲಿ 1.5 ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಸಮಗ್ರ ವಹಿವಾಟನ್ನು ಹೊಂದಿರುವ, ಜುಲೈ 2019ರ ತಿಂಗಳಿಗಾಗಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಮೂನೆ ಜಿಎಸ್‌ಟಿಆರ್–1ರಲ್ಲಿ ಹೊರಮುಖ ಪೂರೈಕೆಗಳ ವಿವರಗಳನ್ನು ಸಾಮಾನ್ಯ ಪೋರ್ಟಲ್ ಮುಖಾಂತರ ವಿದ್ಯುನ್ಮಾನ ರೀತಿಯಲ್ಲಿ 2019ರ ಸೆಪ್ಟಂಬರ್ 20ರಂದು ಅಥವಾ ಅದಕ್ಕಿಂತ ಮೊದಲು ಸಲ್ಲಿಸಿರುವ ನೋಂದಾಯಿತ ವ್ಯಕ್ತಿಗಳು;

(ii) ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಪ್ರಧಾನ ವ್ಯವಹಾರ ಸ್ಥಳವನ್ನು ಹೊಂದಿರುವ, ಹಿಂದಿನ ಹಣಕಾಸು ವರ್ಷದಲ್ಲಿ ಅಥವಾ ಪ್ರಸಕ್ತ ಹಣಕಾಸು ವರ್ಷದಲ್ಲಿ 1.5 ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಸಮಗ್ರ ವಹಿವಾಟನ್ನು ಹೊಂದಿರುವ, ಜುಲೈ 2019ರ ತಿಂಗಳಿಗಾಗಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಮೂನೆ ಜಿಎಸ್‌ಟಿಆರ್–1ರಲ್ಲಿ ಹೊರಮುಖ ಪೂರೈಕೆಗಳ ವಿವರಗಳನ್ನು ಸಾಮಾನ್ಯ ಪೋರ್ಟಲ್ ಮುಖಾಂತರ ವಿದ್ಯುನ್ಮಾನ ರೀತಿಯಲ್ಲಿ 2019ರ ಸೆಪ್ಟಂಬರ್ 20ರಂದು ಅಥವಾ ಅದಕ್ಕಿಂತ ಮೊದಲು ಸಲ್ಲಿಸಿರುವ ನೋಂದಾಯಿತ ವ್ಯಕ್ತಿಗಳು;

(iii) ಈ ಕೆಳಗಿನ ಕೋಷ್ಟಕದ ಅಂಕಣ (2)ರಲ್ಲಿ ನಮೂದಿಸಲಾದ ರಾಜ್ಯದ, ಅಂಕಣ (3)ರಲ್ಲಿ ನಮೂದಿಸಿರುವ ಜಿಲ್ಲೆಯಲ್ಲಿ ಪ್ರಧಾನ ವ್ಯವಹಾರ ಸ್ಥಳವನ್ನು ಹೊಂದಿರುವ, ಜುಲೈ 2019ರ ತಿಂಗಳಿಗಾಗಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಮೂನೆ ಜಿಎಸ್‌ಟಿಆರ್–6ರಲ್ಲಿ ರಿಟರ್ನ್‌ಅನ್ನು, ಸಾಮಾನ್ಯ ಪೋರ್ಟಲ್ ಮುಖಾಂತರ ವಿದ್ಯುನ್ಮಾನ ರೀತಿಯಲ್ಲಿ 2019ರ ಸೆಪ್ಟಂಬರ್ 20ರಂದು ಅಥವಾ ಅದಕ್ಕಿಂತ ಮೊದಲು ಸಲ್ಲಿಸಿರುವ ಹೂಡುವಳಿ ಸೇವೆಗಳ ಹಂಚಿಕೆದಾರರು;

(iv) ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಪ್ರಧಾನ ವ್ಯವಹಾರ ಸ್ಥಳವನ್ನು ಹೊಂದಿರುವ, ಜುಲೈ 2019ರ ತಿಂಗಳಿಗಾಗಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಮೂನೆ ಜಿಎಸ್‌ಟಿಆರ್–6ರಲ್ಲಿ ರಿಟರ್ನ್‌ಅನ್ನು, ಸಾಮಾನ್ಯ ಪೋರ್ಟಲ್ ಮುಖಾಂತರ ವಿದ್ಯುನ್ಮಾನ ರೀತಿಯಲ್ಲಿ 2019ರ ಸೆಪ್ಟಂಬರ್ 20ರಂದು ಅಥವಾ ಅದಕ್ಕಿಂತ ಮೊದಲು ಸಲ್ಲಿಸಿರುವ ಹೂಡುವಳಿ ಸೇವೆಗಳ ಹಂಚಿಕೆದಾರರು;

ಕ್ರ.ಸಂ	ರಾಜ್ಯ	ಜಿಲ್ಲೆಗಳ ಹೆಸರು
1.	ಬಿಹಾರ	ಅರಾರಿಯಾ, ಕಿಶನ್‌ಗಂಜ್, ಮಧುಬನಿ, ಪೂರ್ವ ಚಂಪಾರನ್, ಸೀತಾಮರ್ಹಿ, ಶಿವಹಾರ್, ಸುಪೌಲ್, ದರ್ಭಂಗ, ಮುಝಫರ್‌ಪುರ್, ಸಹಾರ್ಸ, ಕಟಿಹಾರ್, ಪುರ್ನಿಯಾ, ಪಶ್ಚಿಮ ಚಂಪಾರನ್
2.	ಗುಜರಾತ್	ವಡೋದರಾ
3.	ಕರ್ನಾಟಕ	ಬಾಗಲಕೋಟೆ, ಬಳ್ಳಾರಿ, ಬೆಳಗಾವಿ, ಚಾಮರಾಜನಗರ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ದಾವಣಗೆರೆ, ಧಾರವಾಡ, ಗದಗ, ಹಾಸನ, ಹಾವೇರಿ, ಕಲಬುರಗಿ, ಕೊಡಗು, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು, ಶಿವಮೊಗ್ಗ, ಉಡುಪಿ, ಉತ್ತರ ಕನ್ನಡ, ವಿಜಯಪುರ, ಯಾದ್ಗೀರ್
4.	ಕೇರಳ	ಇಡುಕ್ಕಿ, ಮಲಪ್ಪುರಂ, ವಯನಾಡ್, ಕೋಳಿಕ್ಕೋಡ್
5.	ಮಹಾರಾಷ್ಟ್ರ	ಕೊಲ್ಹಾಪುರ, ಸಾಂಗ್ಲಿ, ಸಾತಾರ, ರತ್ನಗಿರಿ, ಸಿಂಧುದುರ್ಗ, ಪಾಲ್ಘರ್, ನಾಸಿಕ್, ಅಹಮದ್‌ನಗರ್
6.	ಒಡಿಸಾ	ಬಲಂಗೀರ್, ಸೋನೆಪುರ್, ಕಾಲಾಹಂಡಿ, ನುವಾಪಡ, ಕೋರಾಪುಟ್, ಮಲ್ಕಾನ್‌ಗಿರಿ, ರಾಯಗಡ, ನವರಂಗಪುರ್
7.	ಉತ್ತರಖಂಡ	ಉತ್ತರಕಾಶಿ ಮತ್ತು ಛಮೋಲಿ

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ. ಸಾವಿತ್ರಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (18/2019)
ಸಂಖ್ಯೆ. ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ:30.09.2019.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ "ಸದರಿ ಅಧಿನಿಯಮ" ಎಂದು ಉಲ್ಲೇಖಿಸಿದೆ) ಪ್ರಕರಣ 10ರ ಉಪಪ್ರಕರಣ (1)ರ ಪರಂತುಕದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ಕರ್ನಾಟಕ ರಾಜ್ಯಪತ್ರ, ಅಸಾಧಾರಣ, ಭಾಗ–IVA, ಸಂ.244, ದಿನಾಂಕ 14ನೇ ಮಾರ್ಚ್, 2019ರಲ್ಲಿ ಪ್ರಕಟವಾದ ಅಧಿಸೂಚನೆ (07/2019) ಸಂ. ಆಇ 47 ಸಿಎಸ್‌ಎಲ್ 2017 ದಿನಾಂಕ 14ನೇ ಮಾರ್ಚ್, 2019ರಲ್ಲಿ ಈ ಕೆಳಕಂಡ ಮುಂದುವರೆದ ತಿದ್ದುಪಡಿಗಳನ್ನು ಮಾಡುತ್ತದೆ, ಅಂದರೆ:–

(I) ಕೋಷ್ಟಕದಲ್ಲಿ,–

(i) ಕ್ರಮ ಸಂಖ್ಯೆ 2 ಮತ್ತು ಅದಕ್ಕಿರುವ ನಮೂದುಗಳ ನಂತರ, ಈ ಕೆಳಗಿನ ಕ್ರಮ ಸಂಖ್ಯೆ ಮತ್ತು ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–

"2ಎ.	2202 10 10	ಏರೇಟೆಡ್ ನೀರು";

ಈ ಅಧಿಸೂಚನೆಯು 2019ರ ಅಕ್ಟೋಬರ್ 1ರಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ. ಸಾವಿತ್ರಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (19/2019)
ಸಂಖ್ಯೆ. ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ:16.10.2019

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ **"ಸದರಿ ಅಧಿನಿಯಮ"** ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 148ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಹಿಂದಿನ ಹಣಕಾಸು ವರ್ಷದಲ್ಲಿ ಅಥವಾ ಪ್ರಸಕ್ತ ಹಣಕಾಸು ವರ್ಷದಲ್ಲಿ ರೂ.1.5 ಕೋಟಿಯವರೆಗಿನ ಸಮಗ್ರ ವಹಿವಾಟನ್ನು ಹೊಂದಿರುವ ನೋಂದಾಯಿತ ವ್ಯಕ್ತಿಗಳನ್ನು, ಸರಕು ಅಥವಾ ಸೇವೆಗಳು ಅಥವಾ ಅವೆರಡರ ಹೊರಮುಖ ಪೂರೈಕೆಗಳ ವಿವರಗಳನ್ನು ಸಲ್ಲಿಸುವುದಕ್ಕಾಗಿ ಈ ಕೆಳಗೆ ಹೇಳಲಾದ ವಿಶೇಷ ವಿಧಾನವನ್ನು ಪಾಲಿಸತಕ್ಕವರೆಂದು ಈ ಮೂಲಕ ಅಧಿಸೂಚಿಸಿದೆ.

2. ಅಂಥ ವ್ಯಕ್ತಿಗಳು, ಕೆಳಗಿನ ಕೋಷ್ಟಕದ ಅಂಕಣ (2)ರಲ್ಲಿ ನಿರ್ದಿಷ್ಟಪಡಿಸಿದ ತ್ರೈಮಾಸಿಕದಲ್ಲಿ ಮಾಡಿದ ಸರಕು ಅಥವಾ ಸೇವೆಗಳು ಅಥವಾ ಅವೆರಡರ ಹೊರಮುಖ ಪೂರೈಕೆಯ ವಿವರಗಳನ್ನು, ಸಂಬಂಧಿಸಿದ ನಮೂದಿಗೆ ಸದರಿ ಕೋಷ್ಟಕದ ಅಂಕಣ (3)ರಲ್ಲಿ ನಿರ್ದಿಷ್ಟಪಡಿಸಿದ ಕಾಲಾವಧಿಯ ತನಕ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಮೂನೆ ಜಿಎಸ್‌ಟಿಆರ್–1ನಲ್ಲಿ ಸಲ್ಲಿಸಬಹುದು, ಅಂದರೆ:–

ಕೋಷ್ಟಕ

ಕ್ರಮ ಸಂಖ್ಯೆ	**ಯಾವ ತ್ರೈಮಾಸಿಕಕ್ಕೆ ನಮೂನೆ ಜಿಎಸ್‌ಟಿಆರ್–1ರಲ್ಲಿ ವಿವರಗಳನ್ನು ಸಲ್ಲಿಸಲಾಗಿದೆ**	**ಯಾವ ತ್ರೈಮಾಸಿಕಕ್ಕೆ ನಮೂನೆ ಜಿಎಸ್‌ಟಿಆರ್–1ರಲ್ಲಿ ವಿವರಗಳನ್ನು ಸಲ್ಲಿಸಲು ಕಾಲಾವಧಿ**
(1)	(2)	(3)
1	ಅಕ್ಟೋಬರ್, 2019ರಿಂದ ಡಿಸೆಂಬರ್, 2019	ಜನವರಿ 31, 2020
2	ಜನವರಿ, 2020ರಿಂದ ಮಾರ್ಚ್, 2020	ಏಪ್ರಿಲ್ 30, 2020

3. ಅಕ್ಟೋಬರ್ 2019ರಿಂದ ಮಾರ್ಚ್ 2020ರವರೆಗಿನ ತಿಂಗಳುಗಳ, ಸದರಿ ಅಧಿನಿಯಮದ ಪ್ರಕರಣ 38ರ ಉಪಪ್ರಕರಣ (2)ರ ಅಡಿಯಲ್ಲಿ ವಿವರಗಳನ್ನು ಅಥವಾ ಸಂದರ್ಭಾನುಸಾರವಾಗಿ, ರಿಟರ್ನ್‌ಅನ್ನು ಸಲ್ಲಿಸುವುದಕ್ಕಾಗಿ ಕಾಲಮಿತಿಯನ್ನು ಅಧಿಕೃತ ರಾಜ್ಯಪತ್ರದಲ್ಲಿ ನಂತರದಲ್ಲಿ ಅಧಿಸೂಚಿಸಲಾಗುವುದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ. ಸಾವಿತ್ರಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (20/2019)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:16.10.2019

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ "ಸದರಿ ಅಧಿನಿಯಮ" ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 148ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಒಂದು ಹಣಕಾಸು ವರ್ಷದಲ್ಲಿ ಎರಡು ಕೋಟಿ ರೂಪಾತಿಗಳನ್ನು ಮೀರದ ಸಮಗ್ರ ವಹಿವಾಟನ್ನು ಹೊಂದಿರುವ ಮತ್ತು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ "ಸದರಿ ನಿಯಮಗಳು" ಎಂದು ಉಲ್ಲೇಖಿಸಲಾಗಿದೆ) ನಿಯಮ 80ರೊಂದಿಗೆ ಓದಲಾದ ಸದರಿ ಅಧಿನಿಯಮದ ಪ್ರಕರಣ 44ರ ಉಪಪ್ರಕರಣ (1)ರ ಅಡಿಯಲ್ಲಿ ವಾರ್ಷಿಕ ರಿಟರ್ನ್ಅನ್ನು ಕಡೆಯ ದಿನಾಂಕದೊಳಗಾಗಿ ಸಲ್ಲಿಸದ ನೋಂದಾಯಿತ ವ್ಯಕ್ತಿಗಳನ್ನು, 2017–18 ಮತ್ತು 2018–19ರ ಹಣಕಾಸು ವರ್ಷಗಳಿಗೆ ಸಂಬಂಧಿಸಿದಂತೆ, ವಿಶೇಷ ವಿಧಾನವನ್ನು ಪಾಲಿಸುವ ಅಂದರೆ, ಸದರಿ ವ್ಯಕ್ತಿಗಳು ಸದರಿ ನಿಯಮಗಳ ನಿಯಮ 80ರೊಂದಿಗೆ ಓದಲಾದ ಸದರಿ ಅಧಿನಿಯಮದ ಪ್ರಕರಣ 44ರ ಉಪಪ್ರಕರಣ (1)ರ ಅಡಿಯಲ್ಲಿ ವಾರ್ಷಿಕ ರಿಟರ್ನ್ಅನ್ನು ಸಲ್ಲಿಸುವ ಆಯ್ಕೆಯಿರತಕ್ಕ ನೋಂದಾಯಿತ ವ್ಯಕ್ತಿಗಳ ಸಮೂಹವೆಂದು ಈ ಮೂಲಕ ಅಧಿಸೂಚಿಸಿದೆ.

ಪರಂತು, ಸದರಿ ರಿಟರ್ನ್ಅನ್ನು ಕಡೆಯ ದಿನಾಂಕಕ್ಕೆ ಮುನ್ನ ಸಲ್ಲಿಸಲಾಗಿಲ್ಲದಿದ್ದರೆ, ಅದು ಕಡೆಯ ದಿನಾಂಕದಂದು ಸಲ್ಲಿಕೆಯಾಗಿದೆ ಎಂದು ಪರಿಭಾವಿಸತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ. ಸಾವಿತ್ರಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (21/2019)
ಸಂಖ್ಯೆ. ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ:16.10.2019.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 128ರಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ಕರ್ನಾಟಕ ರಾಜ್ಯಪತ್ರ, ಅಸಾಧಾರಣ, ಭಾಗ–IVA, ಸಂ.760, ದಿನಾಂಕ 7ನೇ ಅಕ್ಟೋಬರ್, 2019ರಲ್ಲಿ ಪ್ರಕಟವಾದ ಅಧಿಸೂಚನೆ (17/2019) ಸಂ. ಆಇ 47 ಸಿಎಸ್ಎಲ್ 2017 ದಿನಾಂಕ 19ನೇ ಅಕ್ಟೋಬರ್, 2017ಯಲ್ಲಿ ಈ ಕೆಳಕಂಡ ತಿದ್ದುಪಡಿಗಳನ್ನು ಮಾಡುತ್ತದೆ, ಅಂದರೆ:–

ಸದರಿ ಅಧಿಸೂಚನೆಯಲ್ಲಿ, ಪ್ರಾರಂಭಿಕ ಖಂಡಿಕೆಯಲ್ಲಿ –

(ಎ) ಖಂಡ (ii)ರಲ್ಲಿ, "ಸೆಪ್ಟಂಬರ್ 20ರಂದು" ಪದ, ಸಂಖ್ಯೆಗಳು ಮತ್ತು ಅಕ್ಷರಗಳಿಗಾಗಿ, "ಅಕ್ಟೋಬರ್ 11ರಂದು" ಪದ, ಸಂಖ್ಯೆಗಳು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) ಖಂಡ (iv) ರ ನಂತರ, ಈ ಕೆಳಕಿನ ಖಂಡಗಳನ್ನು ಸೇರಿಸತಕ್ಕದ್ದು, ಅಂದರೆ :–

(v) ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಪ್ರಧಾನ ವ್ಯವಹಾರ ಸ್ಥಳವನ್ನು ಹೊಂದಿರುವ, ಹಿಂದಿನ ಹಣಕಾಸು ವರ್ಷದಲ್ಲಿ ಅಥವಾ ಪ್ರಸಕ್ತ ಹಣಕಾಸು ವರ್ಷದಲ್ಲಿ 1.5 ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಸಮಗ್ರ ವಹಿವಾಟನ್ನು ಹೊಂದಿರುವ, ಆಗಸ್ಟ್ 2019ರ ತಿಂಗಳಿಗಾಗಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಮೂನೆ ಜಿಎಸ್‌ಟಿಆರ್–1ರಲ್ಲಿ ಹೊರಮುಖ ಪೂರೈಕೆಗಳ ವಿವರಗಳನ್ನು ಸಾಮಾನ್ಯ ಪೋರ್ಟಲ್ ಮುಖಾಂತರ ವಿದ್ಯುನ್ಮಾನ ರೀತಿಯಲ್ಲಿ 2019ರ ಅಕ್ಟೋಬರ್ 11ರಂದು ಅಥವಾ ಅದಕ್ಕಿಂತ ಮೊದಲು ಸಲ್ಲಿಸಿರುವ, ಸದರಿ ನಮೂನೆ ಜಿಎಸ್‌ಟಿಆರ್–1ನ್ನು ಕಡೆಯ ದಿನಾಂಕದೊಳಗೆ ಸಲ್ಲಿಸಲು ವಿಫಲಾರಾದಕ್ಕಾಗಿ, ನೋಂದಾಯಿತ ವ್ಯಕ್ತಿಗಳು;

(vi) ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಪ್ರಧಾನ ವ್ಯವಹಾರ ಸ್ಥಳವನ್ನು ಹೊಂದಿರುವ, ಸದರಿ ಅಧಿನಿಯಮದ ಪ್ರಕರಣ 51ರ ಉಪಬಂಧಗಳ ಅಡಿಯಲ್ಲಿ ಮೂಲದಲ್ಲಿ ತೆರಿಗೆ ಕಟಾಯಿಸಲು ಅವಶ್ಯವಿರುವ, ಜುಲೈ 2019ರ ತಿಂಗಳಿಗಾಗಿ ಸದರಿ ನಿಯಮಗಳ ನಿಯಮ 66ರೊಡನೆ ಓದಲಾದ ಸದರಿ ಅಧಿನಿಯಮದ ಪ್ರಕರಣ 39ರ ಉಪಪ್ರಕರಣ (3)ರ ಅಡಿಯಲ್ಲಿ ಸದರಿ ನಿಯಮಗಳ ನಮೂನೆ ಜಿಎಸ್‌ಟಿಆರ್–7ನ್ನು ಸಾಮಾನ್ಯ ಪೋರ್ಟಲ್ ಮುಖಾಂತರ ವಿದ್ಯುನ್ಮಾನ ರೀತಿಯಲ್ಲಿ 2019ರ ಅಕ್ಟೋಬರ್ 10ರಂದು ಅಥವಾ ಅದಕ್ಕಿಂತ ಮೊದಲು ಸಲ್ಲಿಸಿರುವ, ಸದರಿ ನಮೂನೆ ಜಿಎಸ್‌ಟಿಆರ್–7ನ್ನು ಕಡೆಯ ದಿನಾಂಕದೊಳಗೆ ಸಲ್ಲಿಸಲು ವಿಫಲಾರಾದಕ್ಕಾಗಿ, ನೋಂದಾಯಿತ ವ್ಯಕ್ತಿಗಳು;

(vii) ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಪ್ರಧಾನ ವ್ಯವಹಾರ ಸ್ಥಳವನ್ನು ಹೊಂದಿರುವ, ಸದರಿ ಅಧಿನಿಯಮದ ಪ್ರಕರಣ 51ರ ಉಪಬಂಧಗಳ ಅಡಿಯಲ್ಲಿ ಮೂಲದಲ್ಲಿ ತೆರಿಗೆ ಕಟಾಯಿಸಲು ಅವಶ್ಯವಿರುವ, ಆಗಸ್ಟ್ 2019ರ ತಿಂಗಳಿಗಾಗಿ ಸದರಿ ನಿಯಮಗಳ ನಿಯಮ 66ರೊಡನೆ ಓದಲಾದ ಸದರಿ ಅಧಿನಿಯಮದ ಪ್ರಕರಣ 39ರ ಉಪಪ್ರಕರಣ (3)ರ ಅಡಿಯಲ್ಲಿ ಸದರಿ ನಿಯಮಗಳ ನಮೂನೆ ಜಿಎಸ್‌ಟಿಆರ್–7ನ್ನು ಸಾಮಾನ್ಯ ಪೋರ್ಟಲ್ ಮುಖಾಂತರ ವಿದ್ಯುನ್ಮಾನ ರೀತಿಯಲ್ಲಿ 2019ರ ಅಕ್ಟೋಬರ್ 10ರಂದು ಅಥವಾ ಅದಕ್ಕಿಂತ ಮೊದಲು ಸಲ್ಲಿಸಿರುವ, ಸದರಿ ನಮೂನೆ ಜಿಎಸ್‌ಟಿಆರ್–7ನ್ನು ಕಡೆಯ ದಿನಾಂಕದೊಳಗೆ ಸಲ್ಲಿಸಲು ವಿಫಲಾರಾದಕ್ಕಾಗಿ, ನೋಂದಾಯಿತ ವ್ಯಕ್ತಿಗಳು;

(viii) ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಪ್ರಧಾನ ವ್ಯವಹಾರ ಸ್ಥಳವನ್ನು ಹೊಂದಿರುವ, ಜುಲೈ 2019ರ ತಿಂಗಳಿಗಾಗಿ, ಸದರಿ ನಿಯಮಗಳ ನಮೂನೆ ಜಿಎಸ್‌ಟಿಆರ್–3ಬಿಯಲ್ಲಿ ರಿಟರ್ನ್‌ಅನ್ನು ಸಾಮಾನ್ಯ ಪೋರ್ಟಲ್ ಮುಖಾಂತರ ವಿದ್ಯುನ್ಮಾನ ರೀತಿಯಲ್ಲಿ 2019ರ ಅಕ್ಟೋಬರ್ 20ರಂದು ಅಥವಾ ಅದಕ್ಕಿಂತ ಮೊದಲು ಸಲ್ಲಿಸಿರುವ, ಸದರಿ ನಮೂನೆ ಜಿಎಸ್‌ಟಿಆರ್–3ಬಿಯನ್ನು ಕಡೆಯ ದಿನಾಂಕದೊಳಗೆ ಸಲ್ಲಿಸಲು ವಿಫಲಾರಾದಕ್ಕಾಗಿ, ನೋಂದಾಯಿತ ವ್ಯಕ್ತಿಗಳು;

(ix) ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಪ್ರಧಾನ ವ್ಯವಹಾರ ಸ್ಥಳವನ್ನು ಹೊಂದಿರುವ, ಆಗಸ್ಟ್ 2019ರ ತಿಂಗಳಿಗಾಗಿ, ಸದರಿ ನಿಯಮಗಳ ನಮೂನೆ ಜಿಎಸ್‌ಟಿಆರ್–3ಬಿಯಲ್ಲಿ ರಿಟರ್ನ್‌ಅನ್ನು ಸಾಮಾನ್ಯ ಪೋರ್ಟಲ್ ಮುಖಾಂತರ ವಿದ್ಯುನ್ಮಾನ ರೀತಿಯಲ್ಲಿ 2019ರ ಅಕ್ಟೋಬರ್ 20ರಂದು ಅಥವಾ ಅದಕ್ಕಿಂತ ಮೊದಲು ಸಲ್ಲಿಸಿರುವ, ಸದರಿ ನಮೂನೆ ಜಿಎಸ್‌ಟಿಆರ್–3ಬಿಯನ್ನು ಕಡೆಯ ದಿನಾಂಕದೊಳಗೆ ಸಲ್ಲಿಸಲು ವಿಫಲಾರಾದಕ್ಕಾಗಿ, ನೋಂದಾಯಿತ ವ್ಯಕ್ತಿಗಳು;

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ. ಸಾವಿತ್ರಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (22/2019)
ಸಂಖ್ಯೆ: ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ: 31.10.2019.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕ ಅಧಿನಿಯಮ 27) ಪ್ರಕರಣ 148ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ಕರ್ನಾಟಕ ರಾಜ್ಯಪತ್ರ, ಅಸಾಧಾರಣ, ಭಾಗ IVA, ಸಂ.322, ದಿನಾಂಕ 23ನೇ ಏಪ್ರಿಲ್, 2019ರಲ್ಲಿ ಪ್ರಕಟಿಸಲಾದ ಅಧಿಸೂಚನೆ (08/2019) ಸಂ. ಆಇ 47 ಸಿಎಸ್ಎಲ್ 2017, ದಿನಾಂಕ 23ನೇ ಏಪ್ರಿಲ್, 2019ಕ್ಕೆ ಈ ಕೆಳಕಂಡ ಮುಂದುವರೆದ ತಿದ್ದುಪಡಿಗಳನ್ನು ಮಾಡುತ್ತದೆ, ಅಂದರೆ:–

ಸದರಿ ಅಧಿಸೂಚನೆಯಲ್ಲಿ, ಖಂಡಿಕೆ 2ರಲ್ಲಿ, ಮೊದಲನೇಯ ಪರಂತುಕದ ನಂತರ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:–

"ಮತ್ತೂ ಪರಂತು, ಜುಲೈ 2019ರಿಂದ ಸೆಪ್ಟಂಬರ್ 2019ರವರೆಗಿನ ತ್ರೈಮಾಸಿಕಕ್ಕಾಗಿ, ಸದರಿ ನಮೂನೆ ಜಿಎಸ್ಟಿ ಸಿಎಂಪಿ–08ರಲ್ಲಿ ಸ್ವಯಂನಿರ್ಧರಿಸಿದ ತೆರಿಗೆಯ ಪಾವತಿಯ ವಿವರಗಳನ್ನು ಒಳಗೊಂಡ ವಿವರಪತ್ರವನ್ನು ಸಲ್ಲಿಸುವುದಕ್ಕಾಗಿ ಕಡೆಯ ದಿನಾಂಕವು 2019ರ ಅಕ್ಟೋಬರ್ 22ನೇ ದಿನವಾಗಿರತಕ್ಕದ್ದು.".

2. ಈ ಅಧಿಸೂಚನೆಯು 2019ರ ಅಕ್ಟೋಬರ್ 18ನೇ ದಿನದಿಂದ ಜಾರಿಗೆ ಬಂದಿದೆ ಎಂದು ಪರಿಭಾವಿಸತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ. ಸಾವಿತ್ರಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (23/2019)
ಸಂಖ್ಯೆ: ಆಇ 47 ಸಿಎಸ್ಎಲ್ 2017, ಬೆಂಗಳೂರು ದಿನಾಂಕ: 21.12.2019.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಿಯಮ 48ರ ಉಪನಿಯಮ (4)ರೊಂದಿಗೆ ಓದಿಕೊಂಡ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕ ಅಧಿನಿಯಮ 27) ಪ್ರಕರಣ 146ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಮೇಲೆ ಹೇಳಿರುವ ನಿಯಮಗಳ ನಿಯಮ 48ರ ಉಪನಿಯಮ (4)ರ ಉಪಬಂಧಗಳ ಅನುಸಾರ

ಬೆಲೆಪಟ್ಟಿಯನ್ನು ತಯಾರಿಸುವ ಉದ್ದೇಶಕ್ಕಾಗಿ ಸಾಮಾನ್ಯ ಸರಕು ಮತ್ತು ಸೇವೆಗಳ ತೆರಿಗೆ ವಿದ್ಯುನ್ಮಾನ ಪೋರ್ಟಲ್ ಎಂದು ಈ ಕೆಳಕಂಡವುಗಳನ್ನು ಅಧಿಸೂಚಿಸುತ್ತದೆ, ಅಂದರೆ:–

(i) www.einvoice1.gst.gov.in;
(ii) www.einvoice2.gst.gov.in;
(iii) www.einvoice3.gst.gov.in;
(iv) www.einvoice4.gst.gov.in;
(v) www.einvoice5.gst.gov.in;
(vi) www.einvoice6.gst.gov.in;
(vii) www.einvoice7.gst.gov.in;
(viii) www.einvoice8.gst.gov.in;
(ix) www.einvoice9.gst.gov.in;
(x) www.einvoice10.gst.gov.in;

ವಿವರಣೆ.– ಈ ಅಧಿಸೂಚನೆಯ ಉದ್ದೇಶಗಳಿಗಾಗಿ, ಮೇಲೆ ಹೇಳಲಾದ ಜಾಲತಾಣಗಳು ಅಂದರೆ ಕಂಪನಿಗಳ ಅಧಿನಿಯಮ, 2013 (2013ರ ಕೇಂದ್ರ ಅಧಿನಿಯಮ 18)ರ ಪ್ರಕರಣ 8ರ ಉಪಬಂಧಗಳ ಅಡಿಯಲ್ಲಿ ಸ್ಥಾಪಿತವಾದ ಒಂದು ಕಂಪನಿಯಾದ ಸರಕು ಮತ್ತು ಸೇವೆಗಳ ತೆರಿಗೆ ನೆಟ್‌ವರ್ಕ್‌ನಿಂದ ನಿರ್ವಹಿಸಲ್ಪಡುವ ಜಾಲತಾಣಗಳು ಎಂದರ್ಥ.

2. ಈ ಅಧಿಸೂಚನೆಯು 2020ರ ಜನವರಿ 1ನೇ ದಿನದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ. ಸಾವಿತ್ರಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (24/2019)
ಸಂಖ್ಯೆ: ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ: 21.12.2019.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ (ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಿದೆ) ನಿಯಮ 46ರ ಆರನೇಯ ಪರಂತುಕದ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಒಬ್ಬ ಅನೋಂದಾಯಿತ ವ್ಯಕ್ತಿಗೆ ಒಂದು ಹಣಕಾಸು ವರ್ಷದಲ್ಲಿ ಐದು ನೂರು ಕೋಟಿ ರೂಪಾಯಿಗಳನ್ನು ಮೀರಿದ ಸಮಗ್ರ ವಹಿವಾಟು ಇರುವ ಒಬ್ಬ ನೋಂದಾಯಿತ ವ್ಯಕ್ತಿಯು ನೀಡುವ ಬೆಲೆಪಟ್ಟಿಯು (ಇನ್ನು ಮುಂದೆ ಬಿ2ಸಿ ಬೆಲೆಪಟ್ಟಿ ಎಂದು ಉಲ್ಲೇಖಿಸಿದೆ) ಕ್ವಿಕ್ ರೆಸ್ಪಾನ್ಸ್ (QR) ಕೋಡ್ ಹೊಂದಿರತಕ್ಕದ್ದು.

ಪರಂತು ಡಿಜಿಟಲ್ ಡಿಸ್‌ಪ್ಲೇ ಮೂಲಕವಾಗಿ ಸ್ವೀಕೃತಿದಾರನಿಗೆ ಡೈನಾಮಿಕ್ ಕ್ವಿಕ್ ರೆಸ್ಪಾನ್ಸ್ (QR) ಕೋಡ್‌ಅನ್ನು ಅಂಥ ನೋಂದಾಯಿತ ವ್ಯಕ್ತಿಯು ಲಭ್ಯ ಮಾಡಿದ್ದರೆ, ಅಂಥ ನೋಂದಾಯಿತ ವ್ಯಕ್ತಿಯಿಂದ ನೀಡಲಾದ ಡೈನಾಮಿಕ್ ಕ್ವಿಕ್

ರೆಸ್ಪಾನ್ಸ್ (QR) ಕೋಡ್‌ಅನ್ನು ಬಳಸಿಕೊಂಡು ಪಾವತಿಯ ಅಡ್ಡ–ಉಲ್ಲೇಖವನ್ನು ಹೊಂದಿರುವ ಅಂಥ ಬಿ2ಸಿ ಬೆಲೆಪಟ್ಟಿಯು, ಕ್ವಿಕ್ ರೆಸ್ಪಾನ್ಸ್ (QR) ಕೋಡ್ ಹೊಂದಿದೆ ಎಂದು ಪರಿಭಾವಿಸತಕ್ಕದ್ದು.

2. ಈ ಅಧಿಸೂಚನೆಯು 2020ರ ಏಪ್ರಿಲ್ 1ನೇ ದಿನದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು ಅವರ ಆದೇಶಾನುಸಾರ

ಕೆ. ಸಾವಿತ್ರಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಸಂಖ್ಯೆ: ಆಇ 47 ಸಿಎಸ್‌ಎಲ್ 2017, ಬೆಂಗಳೂರು, ದಿನಾಂಕ 13.10.2017
ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತೊಂದರೆಗಳ ನಿವಾರಣೆ) ಆದೇಶ 2017
ಆದೇಶ ಸಂ. 01/2017–ರಾಜ್ಯ ತೆರಿಗೆ

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆಅಧಿನಿಯಮ 2017ರ (ಇನ್ನು ಮುಂದೆ ಸದರಿ ಅಧಿನಿಯಮ ಎಂದು ಈ ಆದೇಶದಲ್ಲಿ ಉಲ್ಲೇಖಿಸಲಾಗಿದೆ) ಪ್ರಕರಣ 10ರ ಉಪಬಂಧಗಳಿಗೆ ಸಂಬಂಧಿಸಿರುವಷ್ಟರ ಮಟ್ಟಿಗೆ, ಸದರಿ ಅಧಿನಿಯಮದ ಉಪಬಂಧಗಳಿಗೆ ಜಾರಿ ನೀಡಲು ಕೆಲವು ತೊಂದರೆಗಳು ಉಂಟಾಗಿವೆ, ಆದ ಕಾರಣ;

ಈಗ, ಆದ್ದರಿಂದ, ಸದರಿ ಅಧಿನಿಯಮದ ಪ್ರಕರಣ 172ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಈ ಕೆಳಕಂಡ ಆದೇಶವನ್ನು ಮಾಡುತ್ತದೆ, ಅಂದರೆ:–

1. ಈ ಆದೇಶವನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತೊಂದರೆಗಳ ನಿವಾರಣೆ) ಆದೇಶ, 2017 ಎಂದು ಕರೆಯಬಹುದು.

2. ತೊಂದರೆಗಳ ನಿವಾರಣೆಗಾಗಿ,–

(1) ಈ ಮೂಲಕ ಸ್ಪಷ್ಟೀಕರಿಸುವುದೇನೆಂದರೆ, ಒಬ್ಬ ವ್ಯಕ್ತಿಯು ಸದರಿ ಅಧಿನಿಯಮದ ಅನುಸೂಚಿ IIರ ಖಂಡಿಕೆ 6ರ ಖಂಡ (ಬಿ)ಯಲ್ಲಿ ಉಲ್ಲೇಖಿಸಿದ ಸರಕು ಮತ್ತು/ಅಥವಾ ಸೇವೆಗಳನ್ನು ಪೂರೈಸಿದ್ದರೆ ಮತ್ತು ಠೇವಣಿಗಳನ್ನು, ಸಾಲಗಳನ್ನು ಅಥವಾ ಮುಂಗಡಗಳನ್ನು ನೀಡುವುದರ ಮೂಲಕ ಬಡ್ಡಿ ಅಥವಾ ಸೋಡಿಯ ಮೂಲಕ ಪ್ರತಿಫಲವು ಪ್ರತಿನಿಧಿಸಿರುವ ಮಟ್ಟಿಗಿನ ಸೇವೆಯೂ ಸೇರಿದಂತೆ ಯಾವುದೇ ವಿನಾಯಿತಿ ಸೇವೆಗಳನ್ನು ಪೂರೈಸಿದ್ದರೆ, ಸದರಿ ವ್ಯಕ್ತಿಯು, ಪ್ರಕರಣ 10ರ ಅಡಿಯಲ್ಲಿ ನಿರ್ದಿಷ್ಟ ಪಡಿಸಲಾಗಿರುವ ಇತರ ಎಲ್ಲಾ ಷರತ್ತುಗಳ ಈಡೇರಿಸುವಿಕೆಗೆ ಒಳಪಟ್ಟು, ಸದರಿ ಪ್ರಕರಣದ ಅಡಿ ರಾಜಿ ಪದ್ಧತಿಗೆ ಅನರ್ಹನಾಗತಕ್ಕದ್ದಲ್ಲ.

(2) ಮುಂದುವರೆದು ಸ್ಪಷ್ಟೀಕರಿಸುವುದೇನೆಂದರೆ, ರಾಜಿ ಪದ್ಧತಿಗಾಗಿ ಅವನ ಅರ್ಹತೆಯನ್ನು ನಿರ್ಧರಿಸುವ ಕ್ರಮದಲ್ಲಿ ಅವನ ಸಮಗ್ರ ವಹಿವಾಟನ್ನು ಲೆಕ್ಕ ಹಾಕುವಾಗ ಠೇವಣಿಗಳನ್ನು, ಸಾಲಗಳನ್ನು ಅಥವಾ ಮುಂಗಡಗಳನ್ನು ನೀಡುವುದರ ಮೂಲಕ ಬಡ್ಡಿ ಅಥವಾ ಸೋಡಿಯ ಮೂಲಕ ಪ್ರತಿಫಲವು ಪ್ರತಿನಿಧಿಸಿರುವ ಮಟ್ಟಿಗಿನ ಸೇವೆಯ ಮೌಲ್ಯವನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

ಕೆ. ಎಸ್. ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ [ವಾ.ತೆ–1]

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಆದೇಶ ಸಂ. 01/2018
ಸಂಖ್ಯೆ: ಆಇ 47 ಸಿಎಸ್‌ಎಲ್ 2017, ಬೆಂಗಳೂರು, ದಿನಾಂಕ 31.12.2018

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆಅಧಿನಿಯಮ 2017ರ (ಇನ್ನು ಮುಂದೆ ಸದರಿ ಅಧಿನಿಯಮ ಎಂದು ಈ ಆದೇಶದಲ್ಲಿ ಉಲ್ಲೇಖಿಸಲಾಗಿದೆ) ಪ್ರಕರಣ 44 ಉಪಬಂಧಿಸುವುದೇನೆಂದರೆ, ಹೂಡುವಳಿ ಸೇವೆ ಹಂಚಿಕೆದಾರ, ಪ್ರಕರಣ 51 ಅಥವಾ ಪ್ರಕರಣ 52 ಅಡಿಯಲ್ಲಿ ತೆರಿಗೆ ಸಂದಾಯಿಸುತ್ತಿರುವ ಒಬ್ಬ ವ್ಯಕ್ತಿ, ಒಬ್ಬ ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿ ಮತ್ತು ಒಬ್ಬ ಅನಿವಾಸಿ ತೆರಿಗೆದಾಯಕ ವ್ಯಕ್ತಿಯನ್ನು ಹೊರತು ಪಡಿಸಿದಂತೆ, ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು ಪ್ರತಿಯೊಂದು ಹಣಕಾಸು ವರ್ಷಕ್ಕಾಗಿ ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ, ವಿದ್ಯುನ್ಮಾನ ರೀತಿಯಲ್ಲಿ ಅಂಥ ಹಣಕಾಸು ವರ್ಷವು ಮುಗಿದ ನಂತರ ಬರುವ ಡಿಸೆಂಬರ್ ಮೂವತ್ತೊಂದನೆಯ ದಿನದಂದು ಅಥವಾ ಅದರ ಒಳಗಾಗಿ ವಾರ್ಷಿಕ ರಿಟರ್ನ್ ಅನ್ನು ಒದಗಿಸತಕ್ಕದ್ದು, ಆದ ಕಾರಣ;

ಮತ್ತು, ಸದರಿ ಅಧಿನಿಯಮದ ಪ್ರಕರಣ 44ರ ಉಪ–ಪ್ರಕರಣ (1)ರಲ್ಲಿ ಉಲ್ಲೇಖಿಸಲಾದಂತೆ ಪ್ರತಿಯೊಂದು ಹಣಕಾಸು ವರ್ಷಕ್ಕಾಗಿ ವಿದ್ಯುನ್ಮಾನ ರೀತಿಯಲ್ಲಿ ವಾರ್ಷಿಕ ರಿಟರ್ನ್ ಅನ್ನು ಒದಗಿಸುವ ಉದ್ದೇಶಕ್ಕಾಗಿ ನಿರ್ಮಿಸಬೇಕಾದ ವಿದ್ಯುನ್ಮಾನ ವ್ಯವಸ್ಥೆಯು ಮುಂದುವರೆದ ಹಂತದಲ್ಲಿ ಇರುತ್ತದೆ ಮತ್ತು 2019ರ ಜನೆವರಿ 31ರಿಂದ ಕಾರ್ಯನಿರ್ವಹಿಸುವಂತೆ ಮಾಡುವ ಸಂಭವನೀಯತೆ ಇರುತ್ತದೆ ಇದರ ಪರಿಣಾಮವಾಗಿ ಸದರಿ ಉಪ–ಪ್ರಕರಣ (1)ರಲ್ಲಿ ಉಲ್ಲೇಖಿಸಲಾದಂತೆ ನೋಂದಾಯಿತ ವ್ಯಕ್ತಿಗಳಿಂದ 2017ರ ಜುಲೈ 1ರಿಂದ 2018ರ ಮಾರ್ಚ್ 31ರ ವರೆಗಿನ ಅವಧಿಗೆ ಸದರಿ ವಾರ್ಷಿಕ ರಿಟರ್ನ್ ಅನ್ನು ಒದಗಿಸಲು ಸಾಧ್ಯವಾಗಿಲ್ಲ ಮತ್ತು ಆ ಕಾರಣವಾಗಿ, ಸದರಿ ಪ್ರಕರಣದ ಉಪಬಂಧಗಳಿಗೆ ಜಾರಿ ನೀಡಲು ಕೆಲವು ತೊಂದರೆಗಳು ಉಂಟಾಗಿವೆ, ಆದ ಕಾರಣ;

ಈಗ, ಆದ್ದರಿಂದ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ ಪ್ರಕರಣ 172ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಈ ಕೆಳಕಂಡ ಆದೇಶವನ್ನು ಮಾಡುತ್ತದೆ, ಅಂದರೆ:–

1. **ಕಿರು ಶೀರ್ಷಿಕೆ.**– ಈ ಆದೇಶವನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತೊಂದರೆಗಳ ನಿವಾರಣೆ) ಆದೇಶ, 2018 ಎಂದು ಕರೆಯಬಹುದು.

2. ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ ಪ್ರಕರಣ 44ರಲ್ಲಿ, ಉಪ–ಪ್ರಕರಣ (2)ರ ನಂತರ, ಈ ಕೆಳಗಿನ ವಿವರಣೆಯನ್ನು ಸೇರಿಸತಕ್ಕದ್ದು, ಅಂದರೆ:–

"ವಿವರಣೆ.– ಈ ಪ್ರಕರಣದ ಉದ್ದೇಶಗಳಿಗಾಗಿ, ಈ ಮೂಲಕ ಘೋಷಿಸುವುದೇನೆಂದರೆ, 2017ರ ಜುಲೈ 1ರಿಂದ 2018ರ ಮಾರ್ಚ್ 31ರ ವರೆಗಿನ ಅವಧಿಗೆ ಸದರಿ ವಾರ್ಷಿಕ ರಿಟರ್ನ್ ಅನ್ನು 2019ರ ಮಾರ್ಚ್ 31ರಂದು ಅಥವಾ ಅದರ ಒಳಗಾಗಿ ವಾರ್ಷಿಕ ರಿಟರ್ನ್ ಅನ್ನು ಒದಗಿಸತಕ್ಕದ್ದು."

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

ಕೆ. ಎಸ್. ಪದ್ಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ [ವಾ.ತೆ–1]

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಆದೇಶ ಸಂ. 02/2018
ಸಂಖ್ಯೆ: ಆಇ 47 ಸಿಎಸ್‌ಎಲ್ 2017, ಬೆಂಗಳೂರು, ದಿನಾಂಕ 31.12.2018

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆಅಧಿನಿಯಮ 2017ರ (ಇನ್ನು ಮುಂದೆ ಸದರಿ ಅಧಿನಿಯಮ ಎಂದು ಈ ಆದೇಶದಲ್ಲಿ ಉಲ್ಲೇಖಿಸಲಾಗಿದೆ) ಪ್ರಕರಣ 16ರ ಉಪ–ಪ್ರಕರಣ (4) ಉಪಬಂಧಿಸುವುದೇನೆಂದರೆ, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಯಾವುದೇ ಬೆಲೆಪಟ್ಟಿ ಅಥವಾ ಖರ್ಚು ಪಟ್ಟಿಗೆ ಸಂಬಂಧಿಸಿದಂತೆ, ಅಂಥ ಬೆಲೆಪಟ್ಟಿ ಅಥವಾ ಬೆಲೆಪಟ್ಟಿಗೆ ಸಂಬಂಧಿಸಿದ ಅಂಥ ಖರ್ಚು ಚೀಟಿಯನ್ನು ಒಳಗೊಳ್ಳುವ ಹಣಕಾಸಿನ ವರ್ಷ ಕೊನೆಗೊಂಡ ತರುವಾಯದ ಸೆಪ್ಟಂಬರ್ ತಿಂಗಳಿಗೆ, ಪ್ರಕರಣ 39ರ ಅಡಿಯಲ್ಲಿ ರಿಟರ್ನ್ ಸಲ್ಲಿಸಲು ಇರುವ ಕೊನೆಯ ದಿನಾಂಕ ಅಥವಾ ಸಂಬಂಧಿಸಿದ ವಾರ್ಷಿಕ ರಿಟರ್ನ್ ಸಲ್ಲಿಕೆಯ ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ ಅದರ ನಂತರ, ಹೂಡುವಳಿ ತೆರಿಗೆ ಜಮೆಯನ್ನು ತೆಗೆದುಕೊಳ್ಳಲು ಒಬ್ಬ ನೊಂದಾಯಿತ ವ್ಯಕ್ತಿಯು ಹಕ್ಕುಳ್ಳವನಾಗಿರತಕ್ಕದ್ದಲ್ಲ;

ಮತ್ತು, ಪ್ರಕರಣ 37ರ ಉಪ–ಪ್ರಕರಣ (3) ಉಪಬಂಧಿಸುವುದೇನೆಂದರೆ–

ಯಾವುದೇ ನೋಂದಾಯಿತ ವ್ಯಕ್ತಿಯು, ಯಾವುದೇ ತೆರಿಗೆ ಅವಧಿಗೆ ಉಪಪ್ರಕರಣ (1)ರ ಅಡಿಯಲ್ಲಿ ವಿವರಗಳನ್ನು ಒದಗಿಸಿ ಮತ್ತು ಪ್ರಕರಣ 42ರ ಅಥವಾ ಪ್ರಕರಣ 43ರ ಅಡಿಯಲ್ಲಿ ಅವು ಹೊಂದಾಣಿಕೆಯಾಗದೆ ಉಳಿದುಕೊಂಡಿರುವಾಗ, ಅವುಗಳಲ್ಲಿ ಯಾವುದೇ ತಪ್ಪು ಅಥವಾ ಲೋಪ ಪತ್ತೆಯಾದಲ್ಲಿ, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಅಂಥ ತಪ್ಪು ಅಥವಾ ಲೋಪವನ್ನು ಸರಿಪಡಿಸಿಕೊಳ್ಳುವುದು ಮತ್ತು ಅಂಥ ತಪ್ಪು ಅಥವಾ ಲೋಪದ ಕಾರಣದಿಂದಾಗಿ ತೆರಿಗೆಯು ಕಡಿಮೆ ಸಂದಾಯವಾದ ಸಂದರ್ಭದಲ್ಲಿ, ತೆರಿಗೆ ಮತ್ತು ಬಡ್ಡಿ, ಯಾವುದಾದರೂ ಇದ್ದರೆ, ಅಂಥ ತೆರಿಗೆ ಅವಧಿಗೆ ಒದಗಿಸಬೇಕಾಗಿರುವ ರಿಟರ್ನ್‌ನಲ್ಲಿ ಅದನ್ನು ಸಂದಾಯ ಮಾಡತಕ್ಕದ್ದು:

ಪರಂತು, ಉಪಪ್ರಕರಣ (1)ರ ಅಡಿಯಲ್ಲಿ ಸಲ್ಲಿಸಲಾದ ವಿವರಗಳಿಗೆ ಸಂಬಂಧಿಸಿದ ತಪ್ಪು ಅಥವಾ ಲೋಪದ ಸರಿಪಡಿಸುವಿಕೆಗೆ, ಅಂಥ ವಿವರಗಳು ಸಂಬಂಧಿಸಿರುವ ಹಣಕಾಸು ವರ್ಷ ಕೊನೆಗೊಂಡ ತರುವಾಯದ ಸೆಪ್ಟೆಂಬರ್ ತಿಂಗಳಿಗೆ ಪ್ರಕರಣ 39ರ ಅಡಿಯಲ್ಲಿ ರಿಟರ್ನ್ ಒದಗಿಸುವಿಕೆ ಅಥವಾ ಸಂಬಂಧಿಸಿದ ವಾರ್ಷಿಕ ರಿಟರ್ನ್ ಸಲ್ಲಿಸುವಿಕೆ, ಇವುಗಳಲ್ಲಿ ಯಾವುದು ಮೊದಲೋ ಅದರ ನಂತರ, ಅವಕಾಶ ನೀಡತಕ್ಕದ್ದಲ್ಲ; ಆದ ಕಾರಣ;

ಮತ್ತು, 2017–18ರ ಹಣಕಾಸು ವರ್ಷವು ಭಾರತದಲ್ಲಿ ಸರಕು ಮತ್ತು ಸೇವೆಗಳ ತೆರಿಗೆಯ ಜಾರಿಗೊಳಿಸುವಿಕೆಯ ಮೊದಲ ವರ್ಷವಾಗಿತ್ತು ಮತ್ತು ತೆರಿಗೆದಾತರು ಹೊಸ ತೆರಿಗೆ ವ್ಯವಸ್ಥೆಯೊಂದಿಗೆ ತಮ್ಮನ್ನು ರೂಢಿಗೊಳಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಇನ್ನೂ ಇದ್ದರು ಮತ್ತು ಅಂತಹ ರೂಢಿಗೊಳಿಸಿಕೊಳ್ಳುವಿಕೆಯ ಕೊರತೆಯಿಂದಾಗಿ–

(i) ಹೂಡುವಳಿ ತೆರಿಗೆ ಜಮೆಯನ್ನು ಹೊಂದಲು ಅರ್ಹತೆಯುಳ್ಳ ನೋಂದಾಯಿತ ವ್ಯಕ್ತಿಗಳು ಅದನ್ನು ಪ್ರಕರಣ 16ರ ಉಪಬಂಧಗಳ ನಿಬಂಧನೆಗಳ ಅನುಸಾರವಾಗಿ ಕಾಣೆಯಾಗಿರುವ ಬೆಲೆಪಟ್ಟಿಗಳು ಅಥವಾ ಖರ್ಚು ಚೀಟಿಗಳ ಕಾರಣವಾಗಿ ಉಪಪ್ರಕರಣ (4)ರಲ್ಲಿ ಉಲ್ಲೇಖಿತವಾಗಿರುವಂತೆ ನಿರ್ದಿಷ್ಟಪಡಿಸಿದ ಸಮಯದೊಳಗೆ ಕ್ಲೇಮು ಮಾಡಲು ಸಾಧ್ಯವಾಗಲಿಲ್ಲ;

(ii) ನೋಂದಾಯಿತ ವ್ಯಕ್ತಿಗಳು ಪ್ರಕರಣ 37ರ ಉಪಪ್ರಕರಣ (3)ರ ಉಪಬಂಧಗಳ ನಿಬಂಧನೆಗಳ ಅನುಸಾರವಾಗಿ ತಪ್ಪು ಅಥವಾ ಲೋಪವನ್ನು ನಿರ್ದಿಷ್ಟಪಡಿಸಿದ ಸಮಯದೊಳಗೆ ಸರಿ ಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ,

ಮತ್ತು ಅವುಗಳ ಪರಿಣಾಮವಾಗಿ ಪ್ರಕರಣ 16ರ ಉಪಪ್ರಕರಣ (4) ಮತ್ತು ಪ್ರಕರಣ 37ರ ಉಪಪ್ರಕರಣ (3)ರ ಉಪಬಂಧಗಳಿಗೆ ಜಾರಿ ನೀಡಲು ಕೆಲವು ತೊಂದರೆಗಳು ಉಂಟಾಗಿವೆ;

